# “ವಿಶ್ವನಾಥನ ಸಾಹಿತ್ಯದರ್ಪಣ ಒಂದು ವಿಮರ್ಶಾತ್ಮಕ ಅಧ್ಯಯನ”

**ಡಾ. ರೇಖಾದೇವಿ ಎಸ್. ಎಚ್.**
ಸಹಾಯಕ ಪ್ರಾಧ್ಯಾಪಕರು, ಭಾಷಾ ಮತ್ತು
ಸಾಹಿತ್ಯ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

**Vishwanatana Sahithya Darpana** A Book by
written Smt. Rekhadevi H.S.

First print : 2021

Copies : 500

Pages : 348

Price :  300

Paper used : 70 GMS Maplitho

Size : 1/8 Demmy

Copy Right : Author

ISBN No. 978-93-5566-484-6

Publisher :Smt . Rekhadevi H.S
# Rama Nilaya, S.R. Road, 2nd Cross
Gandhinagar, K.C.P.C near, Challakere,
Chitradurga- 577522

Printers :
Digital Print
Chamarajapet, Bangalore

# ಕೃತಜ್ಞತೆ

"ವಿಶ್ವನಾಥನ ಸಾಹಿತ್ಯದರ್ಪಣ" ಒಂದು ವಿಮರ್ಶಾತ್ಮಕ ಅಧ್ಯಯನ ಎಂಬ ಶೀರ್ಷಿಕೆಯುಳ್ಳ ಈ ಮಹಾಪ್ರಬಂಧವನ್ನು ಕುವೆಂಪು ವಿಶ್ವವಿದ್ಯಾನಿಲಯದ ಪಿ. ಎಚ್. ಡಿ. ಪದವಿಗಾಗಿ ಒಪ್ಪಿಸುತ್ತಿದ್ದೇನೆ.

ಸಂಸ್ಕೃತ ವಿಭಾಗದ ಮುಖ್ಯಸ್ಥರು ಹಾಗೂ ನನಗೆ ಮಾರ್ಗದರ್ಶಕರೂ ಆದ ಡಾ. ಬಿ.ಎಸ್. ಮಹಾದೇವಯ್ಯನವರಿಗೆ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು. ಸಂಶೋಧನ ವಿಷಯವನ್ನು ಸೂಚಿಸಿ, ಈ ಮಹಾಪ್ರಬಂಧವು ಸಿದ್ಧವಾಗಿ ಬರುವವರೆಗೂ ತಮ್ಮ ಅಮೂಲ್ಯವಾದ ಮಾರ್ಗದರ್ಶನದ ಜೊತೆಯಲ್ಲಿ ಒಳ್ಳೆಯ ಮಾತುಗಳಿಂದ ಸಾಕಷ್ಟು ಆಸಕ್ತಿ ತೋರಿರುವುದರಿಂದ ಇವರಿಗೆ ಚಿರಋಣಿಯಾಗಿರುತ್ತೇನೆ. ಅದರಂತೆ ಸಂಸ್ಕೃತ ವಿಭಾಗದ ಇತರ ಅಧ್ಯಾಪಕ ವೃಂದಕ್ಕೂ ನನ್ನ ಕೃತಜ್ಞತೆಗಳು.

ನನ್ನ ಸಂಶೋಧನ ಅಧ್ಯಯನಕ್ಕೆ ಅವಶ್ಯಕವಾದ ಗ್ರಂಥಗಳನ್ನು ಒದಗಿಸಿಕೊಟ್ಟು ಉಪಕರಿಸಿರುವ ಕುವೆಂಪು ವಿಶ್ವವಿದ್ಯಾನಿಲಯದ ಗ್ರಂಥಾಲಯ ಹಾಗೂ ಸಹ್ಯಾದ್ರಿ ಮಹಾವಿದ್ಯಾನಿಲಯದ ಗ್ರಂಥಾಲಯಗಳ ಗ್ರಂಥಪಾಲಕರಿಗೆ, ಸಿಬ್ಬಂದಿವರ್ಗಕ್ಕೆ ನನ್ನ ಅನಂತ ಕೃತಜ್ಞತೆಗಳು.

ಈ ಮಹಾಪ್ರಬಂಧದ ರಚನೆಯಲ್ಲಿ ಅನೇಕ ಗ್ರಂಥಗಳ ಸಹಾಯವನ್ನು ಪಡೆದಿದ್ದು ಈ ಎಲ್ಲಾ ಗ್ರಂಥಕರ್ತೃಗಳಿಗೆ ಚಿರಋಣಿಯಾಗಿದ್ದೇನೆ. ಅದರಂತೆ ನನ್ನ ಕುಟುಂಬವರ್ಗದವರು ಪ್ರಬಂಧ ರಚನೆಗೆ ಎಲ್ಲಾ ರೀತಿಯಿಂದಲೂ ಸಹಾಯ ಸಹಕಾರ ನೀಡಿರುವುದಕ್ಕಾಗಿ ಅವರಿಗೂ ಆಭಾರಿಯಾಗಿದ್ದೇನೆ. ಅನೇಕ ಸಹೃದಯರು ತಮ್ಮಲ್ಲಿರುವ ಅನೇಕ ಉಪಯುಕ್ತ ಕೃತಿಗಳನ್ನು ನೀಡಿ, ನನ್ನ ಅಧ್ಯಯನ ಸರಾಗವಾಗಿ ಮುಂದುವರೆಯಲು ಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿವಂದನೆಗಳು. ಈ ಸಂಶೋಧನೆಗೆ ಸಂಬಂಧಿಸಿದಂತೆ ನನ್ನ ಅಧ್ಯಯನದ ಬಗ್ಗೆ ಆಸಕ್ತಿ ತಳೆದು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಕಾರ್ಯದಲ್ಲಿ ಉಪನ್ಯಾಸಕರ ಸಲಹೆ ಸೂಚನೆಗಳನ್ನು ನೀಡಿದ ಎಲ್ಲರನ್ನೂ ಈ ಸಮಯದಲ್ಲಿ ಸ್ಮರಿಸಿಕೊಳ್ಳಲಿಚ್ಛಿಸುತ್ತೇನೆ.

**ಶ್ರೀಮತಿ ರೇಖಾದೇವಿ ಎಸ್. ಎಚ್.**

ಸಂಶೋಧಕಿ

ದಿನಾಂಕ : 25–07–2006

ಸ್ಥಳ : ಶಂಕರಘಟ್ಟ

## ಅಧ್ಯಾಯ – ೧

# ಸಾಹಿತ್ಯ ದರ್ಪಣ

# ಪೀಠಿಕೆ

ಕೃತಿಕಾರ ವಿಶ್ವನಾಥನ ಜೀವನ, ಕಾಲ, ದೇಶ ಮತ್ತು ಬರಹಗಳ ಬಗ್ಗೆ ಇಲ್ಲಿ ವಿವೇಚಿಸಲಾಗಿದೆ. ಮಹಾಕವಿ, ಕವಿರಾಜ ಸಾಹಿತ್ಯಾರ್ಣವಕರ್ಣಧಾರ, ಧ್ವನಿ ಪ್ರಸ್ಥಾಪನಾಚಾರ್ಯ ಕವಿಸೂಕ್ತಿರತ್ನಾಕರ, ಅಷ್ಟಾದಶಭಾಷಾವಾರವಿಲಾಸಿನೀಭುಜಂಗ, ಸಾಂದಿವಿಗ್ರಹಿಕ ಮಹಾಪಾತ್ರ ಎಂಬ ಬಿರುದುಗಳಿಂದ ನಾಮಾಕಿಂತಗೊಂಡ ವಿಶ್ವನಾಥನ ಜಾತಿ, ಕಾಲಗಳನ್ನು ತಿಳಿಯಲು ಸಾಕಷ್ಟು ಸ್ಪಷ್ಟವಾದ  ಪ್ರಮಾಣಗಳು ಸಿಕ್ಕಿಲ್ಲವಾದರೂ ವಿಶ್ವನಾಥನ ಬಗ್ಗೆ ತಿಳಿಯಲು ಹೆಚ್ಚು ಕಷ್ಟಸಾಧ್ಯವೇನಲ್ಲ. ಏಕೆಂದರೆ ತಾನು ರಚಿಸಿದ ಸಾಹಿತ್ಯದರ್ಪಣದ ಹಸ್ತಲಿಖಿತ ಪ್ರತಿಒಂದರಲ್ಲಿ ಮೊದಲನೆ ಮತ್ತು ಹತ್ತನೆಯ ಪರಿಚ್ಛೇದಗಳ ಕೊನೆಯಲ್ಲಿ ಅನೇಕ ಬಿರುದುಗಳಿಂದ ಪ್ರಸಿದ್ಧಿ ಪಡೆದ ವಿಶ್ವನಾಥನು ಒರ್ವರಾಜನ ಆಸ್ಥಾನದಲ್ಲಿ ಮಂತ್ರಿಸ್ಥಾನವನ್ನು ಅಲಂಕರಿಸಿದ್ದನೆಂದು ತಿಳಿದು ಬರುತ್ತದೆ. ಆಚಾರ್ಯನೆಂಬ ವಿಶೇಷಣ ಹೊಂದಿದ್ದರಿಂದ ಇವನು ಬ್ರಾಹ್ಮಣವಂಶಕ್ಕೆ ಸೇರಿದ್ದನೆಂದು ಕಂಡು ಬರುತ್ತದೆ. ಸಂಧಿವಿಗ್ರಹಗಳನ್ನು ನಿರ್ಣಯಿಸುವ ಅಧಿಕಾರದಲ್ಲಿ ಬ್ರಾಹ್ಮಣನನ್ನೇ ರಾಜನು ನೇಮಿಸುವನೆಂದು ದೇವಲ, ಮನು, ನಾರದ, ಸ್ಮೃತಿಗಳು ತಿಳಿಸಿವೆ.

ಸಾಹಿತ್ಯದರ್ಪಣದ ಪ್ರಥಮ ಪರಿಚ್ಛೇಧದಲ್ಲಿ 'ಅತ್ರ ಹಿ ವಿಭಾವನಾವಿಶೇಷೊಕ್ತಿ ಮೂಲಸ್ಯ ಸಂದೇಹ ಸಂಕರಾಲಂಕಾರಸ್ಯ ಸ್ಪುಟತ್ವಂ' ಎಂಬ ಪಂಕ್ತಿಯ ಮುಂದೆ 'ಅತ್ರ ಜಯಂತ ಭಟ್ಟೇ ನೋಕ್ತಂ' ಎಂಬ ಹೆಚ್ಚಿನ ಪಾಠವು ಕಂಡು ಬಂದಿದೆ. ಜಯಂತ ಭಟ್ಟನು ಕ್ರಿ.ಶ. ೧೨೫೦ರಲ್ಲಿ ಕಾವ್ಯಪ್ರಕಾಶನಕ್ಕೆ ದೀಪಿಕೆ ಎಂಬ ಟೀಕೆಯೊಂದನ್ನು ಬರೆದು ಮುಗಿಸಿದನೆಂದು ತಿಳಿದು ಬಂದಿದೆ. ಜಯಂತಭಟ್ಟನ ವಿಚಾರದಲ್ಲಿ ಹೇಳಿರುವಂತೆಯೇ ವಿಶ್ವನಾಥನು ಅಲ್ಲಾಉದ್ದೀನನ ವಿಚಾರದಲ್ಲೂ ಹೇಳಿಕೊಂಡಿದ್ದಾನೆ.

**ಸಂಧೌ ಸರ್ವಸ್ವಹರಣಂ ವಿಗ್ರಹೇ ಪ್ರಾಣನಿಗ್ರಹಃ ।**
**ಅಲ್ಲಾಉದ್ದೀನನೃಪತೌ ನ  ಸಂಧಿರ್ನಚ ನಿಗ್ರಹಃ ॥**

ಈ ಅಲ್ಲಾಉದ್ದೀನನು ಪ್ರಖ್ಯಾತವಾದ ಖಿಲ್ಜಿವಂಶಕ್ಕೆ ಸೇರಿದವನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಇವನು ಕ್ರಿ.ಶ ೧೩೧೬ರಲ್ಲಿ ಮರಣ ಹೊಂದಿದನು. ಇದಲ್ಲದೆ ಗೋವಿಂದ ಠಾಕೂರ ಎಂಬುವನು ಕ್ರಿ.ಶ. ೧೫ನೆಶತಮಾನದ ಪೂರ್ವಾದದಲ್ಲಿ ಬರೆದಿರುವ ಕಾವ್ಯ ಪ್ರದೀಪವೆಂಬ ಗ್ರಂಥದಲ್ಲಿ ಇವನ ವಿಚಾರವಾಗಿ ಬರೆದಿರುವವನು

‘ತದದೋಷೌ ಶಬ್ದಾರ್ಥೌ’ ಎಂಬ ಕಾರಿಕೆಯನ್ನು ವ್ಯಾಖ್ಯಾನ ಮಾಡುವಾಗ ಅವನು ‘ಅರ್ವಾಚೀನಾಸ್ತು’ ಎಂಬಲ್ಲಿ ದರ್ಪಣಕಾರನ ಮತವನ್ನು ಉದ್ಧರಿಸಿರುವನು. ಇದ–ರಿಂದಲೂ ಸಾಹಿತ್ಯ ದರ್ಪಣದಲ್ಲಿ ಅಲ್ಲಾಉದ್ದೀನರಾಜನ ಬಗ್ಗೆ ಸ್ಪಷ್ಟವಾದ ಹೇಳಿಕೆ ಬಂದಿರುವುದರಿಂದ ವಿಶ್ವನಾಥನ ಕಾಲವು ಕ್ರಿ.ಶ ೧೩ನೆಶತಮಾನದ ಕೊನೆ ಇರಬೇಕೆಂದು ತಿಳಿದುಬರುತ್ತದೆ.

ವಿಶ್ವನಾಥನು ಧ್ವನಿಪ್ರಸ್ಥಾನವನ್ನು ಎತ್ತಿ ಹಿಡಿದು ಧ್ವನಿಕಾರನ ಮತವನ್ನು ಪೂರ್ಣವಾಗಿ ಗೌರವಿಸಿ ಪ್ರಶಂಸಿರುರಿಂದ ಇವನಿಗೆ ಧ್ವನಿಪ್ರಸ್ಥಾಪನಾಚಾರ್ಯ ಎಂಬ ಹೆಸರು ಅನ್ವಥ–ರ್ವಾಗಿದೆ. ಅಲ್ಲದೆ ಹದಿನೆಂಟು ಭಾಷೆಗಳಲ್ಲಿ ವಿಶ್ವನಾಥನು ಚೆನ್ನಾಗಿ ಪಳಗಿದ್ದು ಅವುಗಳ ಸೌಂದರ್ಯವನ್ನು ಸೂಕ್ಷ್ಮದೃಷ್ಟಿಯಿಂದ ಅರಿತು ಅವೆಲ್ಲದರಲ್ಲೂ ತನ್ನ ಅಭಿಪ್ರಾಯ ವನ್ನು ವ್ಯಕ್ತಪಡಿಸಲು ಸಮರ್ಥನಾದರಿಂದ ವಿಶ್ವನಾಥನಿಗೆ ‘ಅಷ್ಟಾದಶ ಭಾಷಾವಾರ ವಿಲಾಸಿನೀಭುಜಂಗ’ ಎಂಬ ವಿಶೇಷಣವು ಅನ್ವರ್ಥವಾಗಿದೆ. ವಿಶ್ವನಾಥನು ಸಾಹಿತ್ಯ ಸಾಗರದಲ್ಲಿ ಓಡಾಡಲು ವಿಮರ್ಶಕರಿಗೆ ಹಡಗಿನಂತೆ ಸಹಾಯಕನಾಗಿದ್ದಾನೆಂಬ ಅಂಶವು ಸಾಹಿತ್ಯ ದರ್ಪಣದಿಂದಲೇ ಸ್ಪಷ್ಟವಾಗುತ್ತದೆ. ‘ಶ್ರೀಮನ್ನಾರಾಯಣಚರಣಾರವಿಂದಮಧುವ್ರತ’ ಎಂಬ ವಿಶೇಷಣದಿಂದ ನಾರಾಯಣನೆಂಬ ಗುರುವಿನ ಶಿಷ್ಯನಾಗಿದ್ದನೆಂದು ತಿಳಿಯುತ್ತದೆ.

ಸಾಹಿತ್ಯದರ್ಪಣದ ಹತ್ತನೆಯ ಪರಿಚ್ಛೇದದ ಕೊನೆಯಲ್ಲಿ ತನ್ನ ಬಗ್ಗೆ ಈ ರೀತಿ ಹೇಳಿಕೊಂಡಿದ್ದಾನೆ.

**ಶ್ರೀಚಂದ್ರಶೇಖರ ಮಹಾಕವಿಚಂದ್ರ ಸೂನು**
**ಶ್ರೀವಿಶ್ವನಾಥಕವಿರಾಜಕೃತ ಪ್ರಬಂಧಮ್ ।**
**ಸಾಹಿತ್ಯದರ್ಪಣಮಮುಂ ಸುಧಿಯೊ ವಿಲೋಕ್ಯ**
**ಸಾಹಿತ್ಯತತ್ವಮಖಿಲಂ ಸುಖಮೇವ ವತ್ತ ॥**

[ಸಾಹಿತ್ಯದರ್ಪಣ ಪು. ೬೩೯]

“ಎಲೈ ಪಂಡಿತರೇ ನೀವು ಚಂದ್ರಶೇಖರನೆಂಬ ಮಹಾಕವಿ ಶ್ರೇಷ್ಠನ ಮಗನಾದ ವಿಶ್ವನಾಥನೆಂಬ ಕವಿರಾಜನು ರಚಿಸಿರುವ ಸಾಹಿತ್ಯದರ್ಪಣವೆಂಬ ಪ್ರಬಂಧವನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಇದರಿಂದ ಕಾವ್ಯದ ಸಮಗ್ರ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದು ಸುಖಿಸಿ” ಎಂದು ದರ್ಪಣಕಾರನೇ ಹೇಳಿಕೊಂಡಿದ್ದಾನೆ. ಇದರಿಂದ ಕಾವ್ಯದಲ್ಲಿ ತಿಳಿಯಬೇಕಾದ ಸಮಸ್ತ ವಿಷಯಗಳೆಲ್ಲವೂ ಸಾಹಿತ್ಯದರ್ಪಣದಲ್ಲಿ ಅಡಕವಾಗಿದೆ. ಈ ಎಲ್ಲಾ ವಿಷಯಗಳನ್ನೂಳಗೊಂಡಿರುವುದರಿಂದ ಬೇರೆ ಎಲ್ಲಾ ಆಲಂಕಾರಿಕ ಗ್ರಂಥಗಳಿಗಿಂತಲೂ ಸಾಹಿತ್ಯದರ್ಪಣವು ಶ್ರೇಷ್ಠವಾಗಿದೆ.

ವಿಶ್ವನಾಥನು ತನ್ನ ಕೃತಿಯ ಪೂರ್ಣತೆಯನ್ನು ಈ ರೀತಿ ಪ್ರಶಂಸಿದ್ದಾನೆ.

**ಯಾವತ್ಪ್ರಸನ್ನೇಂದುನಿಭಾನನಶ್ರೀರ್ನಾರಾಯಣಸ್ಯಾಂಗಮಲಂಕರೋತಿ**
**ತಾವನ್ಮನಃ ಸಂದುದಯನ್ ಕವೀನಾಮೇಷ ಪ್ರಬಂಧಃ ಪ್ರಥಿತೋಽಸ್ತುಲೋಕೇ**

ತನ್ನ ಗ್ರಂಥವು ಚಿರಸ್ಥಾಯಿಯಾಗಿರಲೆಂದು ಕವಿರಾಜನು ಪ್ರಾರ್ಥಿಸಿದ್ದಾನೆ. "ನಿರ್ಮಲಚಂದ್ರನಂತೆ ಮುಖವುಳ್ಳ ಲಕ್ಷ್ಮಿಯು ನಾರಾಯಣಲ್ಲಿ ನೆಲೆಸಿ ಎಲ್ಲಿಯವರೆಗೂ ಶೋಭಿಸುತ್ತಿರುವಳೋ ಅಲ್ಲಿಯವರೆಗೆ ಸಾಹಿತ್ಯದರ್ಪಣವು ಕವಿಗಳಿಗೆ ತಿಳಿಸಬೇಕಾದ ವಿಷಯವನ್ನು ತಿಳಿಸುತ್ತಲೇ ಲೋಕದಲ್ಲಿ ಶೋಭಿಸಲಿ" ನಾರಾಯಣನಿಗೆ ಲಕ್ಷ್ಮಿಯನ್ನು ಕಂಡರೆ ಎಷ್ಟು ಸಂತೋಷವಾಗುವುದೊ ಅಷ್ಟೇ ಸಂತೋಷವನ್ನು ಕವಿಗಳು ಸಾಹಿತ್ಯದರ್ಪಣದಿಂದ ಅನುಭವಿಸಲೆಂದು ಈ ಶ್ಲೋಕದಿಂದ ವಿಶ್ವನಾಥನು ತಿಳಿಸುತ್ತಾನೆ.

ವಿಶ್ವನಾಥನು ೧. ಸಾಹಿತ್ಯದರ್ಪಣ, ೨. ರಾಘವವಿಲಾಸ[೧], ೩. ಚಂದ್ರಕಲಾನಾಟಿ–ಕೆ, ೪. ಕುವಲಾಯಶ್ವಚರಿತೆ, ೫. ಪ್ರಶಸ್ತಿರತ್ನಾವಳೀ ೬. ನೃಸಿಂಹವಿಜಯ, ಇವಿಷ್ಟು ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಸಾಹಿತ್ಯದರ್ಪಣವು ಸರ್ವಾಲಂಕಾರಗ್ರಂಥ–ಗಳಗಿಂತಲೂ ಉತ್ತಮವಾದ ಪ್ರಮಾಣಗ್ರಂಥವೆನಿಸಿದ್ದು ಸಾಹಿತ್ಯ ಜಿಜ್ಞಾಸುಗಳಿಗೆ ಅತ್ಯಂತ ಉಪಯುಕ್ತ ಗ್ರಂಥವಾಗಿದೆ. ಕವಿಗಳ ಅಮೃತವಾಕ್ಯಗಳಿಗೆ ಸಾಹಿತ್ಯದರ್ಪಣವು ಸಮುದ್ರದಂತೆ ಘನ ಗಂಭೀರವಾದ ಆದರ್ಶವೆನಿಸಿದೆ. ಈ ಗ್ರಂಥದಲ್ಲಿ ಕಾವ್ಯರಚನೆ ಕಾವ್ಯದ ಆಸ್ವಾದನೆಗೆ ಅವಶ್ಯಕವಾದ ಅಂಶಗಳೆಲ್ಲವೂ ಅಡಕವಾಗಿದೆ. ಕಾವ್ಯದ ಸ್ವರೂಪವನ್ನು ನಿರೂಪಿಸುವುದ ರಿಂದ ಆರಂಭವಾಗಿ ಗ್ರಂಥವು ಶಬ್ದಾರ್ಥಲಂಕಾರಗಳ ವಿವೇಚನೆಯಿಂದ ಕೊನೆಯಾಗುತ್ತದೆ. ಸಾಹಿತ್ಯದರ್ಪಣಕ್ಕೆ, ಶ್ರೀರಾಮಚರಣ–ತರ್ಕವಾಗೀಶಭಟ್ಟಚಾರ್ಯಕೃತ 'ವಿವೃತಿ'ಯು ರಾಘವವಿಲಾಸವು ಹೆಸರಿಗೆ ತಕ್ಕಂತೆ ರಾಮಚರಿತೆಯನ್ನು ಹೇಳುವುದು, 'ಕುವಲಾಯಶ್ವ ಚರಿತ' ಎಂಬುದು ಪ್ರಾಕೃತದಲ್ಲಿ ಬರೆಯಲ್ಪಟ್ಟಿದೆ. ಪ್ರಶಸ್ತಿ ರತ್ನಾವಳಿಯಲ್ಲಿ ೧೬ ಪ್ರಶಸ್ತಿಗಳಿದ್ದು ಬೇರೆ ಬೇರೆ ಭಾಷೆಯಲ್ಲಿ ಬರೆಯಲ್ಪಟ್ಟಿರುವುದು, ನೃಸಿಂಹ ವಿಜಯದಲ್ಲಿ ಹಿರಣ್ಯಕಶಿಪುವಿನ ವಧೆಯು ವರ್ಣಿತವಾಗಿರುವುದು ಶೈಲಿಯು ಸರಳವಾಗಿಯೂ, ಕೇಳುವುದಕ್ಕೆ ಇಂಪಾಗಿಯೂ ಇರುವುದು.

ರಾಘವವಿಲಾಸದಲ್ಲಿನ ಕರುಣರಸೋದಾರಣೆಗಾಗಿ ಹೇಳಲ್ಪಟ್ಟಿರುವ ಅನೇಕ ಶ್ಲೋಕಗಳಲ್ಲಿ ಒಂದನ್ನು ಇಲ್ಲಿ ಕೊಡಲಾಗಿದೆ.

**ವಿಪಿನೇ ಕ್ವ ಜಟಾನಿಬಂಧನಂ ತವಚೇದಂ ಕ್ವ ಮನೋಹಂ ವರ್ಷಃ ।**
**ಅನಯೋರ್ಘಟನಾವಿಧೇ ಸ್ಪುಟಂ ನನು ಖಡ್ಗೇನ ಶಿರೀಷಕರ್ತನಂ ॥**

ಚಂದ್ರಕಲಾನಾಟಕದಲ್ಲಿನ ಸ್ತ್ರೀವಿಚಾರದ ಹೇಳಿಕೆಯು ಹೀಗಿರುವುದು.

**ತಾರುಣ್ಯಸ್ಯ ವಿಲಾಸ ಸ್ವಮಧಿಕ ಲಾವಣ್ಯಸಂಪದೋ ಹಾಸಃ ।**
**ಧರಣೀತಲಸ್ಯಾಭರಣಂ ಯುವಜನಮನಸೋ ವಶೀಕರಣಂ ॥**

ಗ್ರಂಥಾಂತ್ಯದಲ್ಲಿ ಕಂಡು ಬರುವ "ಇತ್ಯಾಲಂಕಾರಿಕ ಚಕ್ರವರ್ತಿಸಾಂಧಿವಿಗ್ರಹಿಕ ಮಹಾಪಾತ್ರ ಶ್ರೀವಿಶ್ವನಾಥ ಕವಿರಾಜ ಕೃತೇ ಸಾಹಿತ್ಯದರ್ಪಣೇ" ಎಂದು ಹೇಳಿಕೊಂಡಿರುವುದರಿಂದ ಇವನಿಗೆ ಅಲಂಕಾರಿಕ ಚಕ್ರವರ್ತಿ, ಸಾಂದಿವಿಗ್ರಹಿಕಮಾಹಾಪಾತ್ರ ಎಂಬ ಹೆಸರಿನ ಬಿರುದುಗಳು ಇರುವುದಾಗಿ ಭೋಧೆಯಾಗುತ್ತದೆ. ಆದ-ರಿಂದ ವಿಶ್ವನಾಥನ ಕಾಲವು ಹದಿಮೂರನೆ ಶತಮಾನವೆಂದು ಕೆಲವು ಲಾಕ್ಷಣಿಕರ ಅಭಿಪ್ರಾಯದಿಂದ ತಿಳಿಯಬಹುದಾಗಿದೆ. ಮತ್ತು ಸಾಹಿತ್ಯ ದರ್ಪಣಕಾರ ತನ್ನ ಸ್ವಯಂಕೃತ ಗ್ರಂಥವಾದ ಸಾಹಿತ್ಯದರ್ಪಣದಲ್ಲಿ ಚಂದ್ರಶೇಖರನ ಪುತ್ರನು ಮತ್ತು ಚತುರ್ದಶಭಾಷಾವಿಲಾಸಿನಿಭುಜಂಗ, ಮಹಾಕವೀಶ್ವರ, ಎಂಬ ಬಿರುದನ್ನು ಪಡೆದು ಸಂಧಿವಿಗ್ರಹಾಧಿಕಾರಿಯೂ, ಪ್ರಧಾನಾಮಾತ್ಯರು ಎನಿಸಿದ ತನ್ನ ಪೂಜ್ಯತಾತಂದಿರು ಬರೆದಿರುವ ಗ್ರಂಥದಿಂದ ವ್ಯಂಜನೆಯನ್ನು ವಿಶ್ವನಾಥನು ಎರಡನೇ ಪರಿಚ್ಛೇದದಲ್ಲಿ ಉದಾಹರಿಸಿದ್ದಾನೆ. ಒಟ್ಟಿನಲ್ಲಿ ವಿಶ್ವನಾಥನ ಸಾಹಿತ್ಯದರ್ಪಣವು ಸಾಹಿತ್ಯ ಜಿಜ್ಞಾಸುಗಳಿಗೆ ಒಂದು ದರ್ಪಣದಂತಿದೆ.

## ಕಾವ್ಯ ಪ್ರಯೋಜನ

ಕಾವ್ಯವನ್ನು ಒಬ್ಬನು ರಚಿಸುವುದಾಗಲಿ ಅಥವಾ ಓದುವುದಾಗಲಿ ಯಾವ ಪ್ರಯೋಜನಗಳನ್ನು ಪಡೆಯಲು ಈ ಕಾರ್ಯಗಳಲ್ಲಿ ತೊಡಗುತ್ತಾರೆ ಎಂಬ ಪ್ರಶ್ನೆಗೆ ಲಾಕ್ಷಣಿಕರು ಅನೇಕ ರೀತಿಯ ಉತ್ತರವನ್ನು ಕೊಟ್ಟು ವಿಮರ್ಶಿಸಿದ್ದಾರೆ. ಈ ವಿಷಯದಲ್ಲಿ ಮಮ್ಮಟನ ವಾಕ್ಯವು ಅತಿಶಯ ಪ್ರಸಿದ್ಧಿಯನ್ನು ಪಡೆದದ್ದರಿಂದ ನಮ್ಮ ವಿಚಾರಕ್ಕೆ ಇದನ್ನೇ ತಳಹದಿಯಾಗಿಟ್ಟುಕೊಳ್ಳಲಾಗಿದೆ.

**ಕಾವ್ಯಂ ಯಶಸೇ?ರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ।**
**ಸದ್ಯಃ ಪರವೃರ್ತಯೇ ಕಾಂತಸಂಮಿತತಯೋಪದೇಶಯುಜೇ ॥**

"ಕಾವ್ಯವು ಕೀರ್ತಿಗಾಗಿ, ಧನಾರ್ಜನೆಗಾಗಿ, ವ್ಯವಹಾರಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ ತಕ್ಕಾಲದಲ್ಲೇ ಪರಮಾನಂದವನ್ನು ಹೊಂದುವುದಕ್ಕಾಗಿ ಕಾಂತೆಯಂತೆ ಉಪದೇಶಿಸುವುದಕ್ಕಾಗಿ" ಕಾವ್ಯದಿಂದ ಪಡೆಯಬಹುದಾದ ಫಲಗಳನ್ನೆಲ್ಲಾ ಮಮ್ಮಟನು ತನ್ನದೇ ಆದ ವಾಕ್ಯದಲ್ಲಿ ಹೇಳಿದ್ದಾನೆ. "ಎಲ್ಲಾ ಪ್ರಯೋಜನಗಳಿಗೂ ಶಿಖರದಂತಿರ ತಕ್ಕದ್ದೆಂದರೆ ರಸಾಸ್ವಾದದಿಂದ ಅದೇ ಸಮಯದಲ್ಲಿ ಒದಗಿ ಬೇರೊಂದರ ಅರಿವನ್ನೇ ಉಳಿಸದ ಆನಂದ"[೨] ಎಂದು ವಿವರಿಸಿ ಈ ಫಲಪ್ರಯೋಜನಗಳಲ್ಲಿ ಯಾವುದು ನಿಯತ ಯಾವುದು ಅನಿಯತ ಯಾವುದು ಕವಿಗೆ ಯಾವುದು ಸಹೃದಯನಿಗೆ ಎಂಬ ವಿಚಾರವನ್ನು ನಮಗೆ ಬಿಟ್ಟಿದ್ದಾನೆ. ಮಮ್ಮಟನ ಈ ಉಕ್ತಿ ಕ್ರಮವನ್ನು ಹಿಂದಿನ

ಅಲಂಕಾರಿಕರು ಟೀಕಿಸಿದ್ದಾರೆ. ಅದರಲ್ಲಿ ಹೇಮಚಂದ್ರನು "ಕಾವ್ಯಮಾನಂದಾಯ ಯಶಸೇ ಕಾಂತತುಲ್ಯತಯಾ ಉಪದೇಶಾಯ" ಎಂಬ ಮೂರು ಉಪಯೋಗಗಳನ್ನು ತಿಳಿಸಿದ್ದಾನೆ. ಈ ಎಲ್ಲಾ ಪ್ರಯೋಜನಗಳಿಗೂ ಮುಖ್ಯವಾದದ್ದು ಆನಂದ ಇದನ್ನು ಕವಿ ಸಹೃದಯರಿಬ್ಬರು ಅನುಭವಿಸುವರು ಕೀರ್ತಿ ಬರುವುದು ಕವಿಗೆ ಉಪದೇಶ, ಸಹೃದಯರಿಗೆ ಇನ್ನು ಧನಸಂಪಾದನೆಯ ವಿಷಯದಲ್ಲಿ ನಿಶ್ಚಯವಿಲ್ಲ. ವ್ಯವಹಾರ ಜ್ಞಾನವನ್ನು ಶಾಸ್ತ್ರಗಳ ಮೂಲಕ; ಅನರ್ಥ ನಿವಾರಣೆ ಮಂತ್ರಾನುಷ್ಠಾನ ಅಥವಾ ಬೇರೆ ಪ್ರಕಾರಗಳಲ್ಲಿ ಆಗಬಹುದೆಂದು ಮಮ್ಮಟನ ವ್ಯಾಕವನ್ನ ಹೇಮಚಂದ್ರನು ಟೀಕಿಸಿದ್ದಾನೆ.[೩]

ಕವಿಯ ವಿಷಯಕ್ಕೆ ಸಂಬಂಧಿಸಿದಂತೆ ಕಾವ್ಯದಿಂದ ಪಡೆಯುವ ನಿಶ್ಚಿತ ಪ್ರಯೋಜನವೇಂದರೆ ಸೃಷ್ಟಿಕಾರ್ಯದ ಆನಂದವೊಂದೆ ತನ್ನಲ್ಲಿ ಅಡಗಿದ್ದ ಕಾವ್ಯ ಪ್ರತಿಭೆಯನ್ನು ಮಾತಿನಲ್ಲಿ ರೂಪುಕೊಟ್ಟು ಅಭಿವ್ಯಕ್ತ ಪಡಿಸುವುದಲ್ಲದೆ ತೃಪ್ತಿಯಿಲ್ಲ ರಸವು ತನ್ನ ಹೃದಯದಲ್ಲಿ ತುಂಬಿದಹೂರೆತು ಹಾಗೆ ತುಂಬಿ ಹೊರಸೂಸುವ ತನಕ ವಿಶ್ರಾಂತಿ ಇಲ್ಲ[೪] ಕೃತಕೃತ್ಯೆಯ ಅನಂದವೊಂದೇ ಕವಿಗೆ ಬರುವ ನಿಶ್ಚಿತ ಪ್ರಯೋಜನವಾಗಿದೆ ನಂತರ ಬರುವುದು ಪ್ರಾಸಂಗಿತವಾಗಿದೆ.

ಕವಿಗೂ ತನ್ನ ಕೃತಿಗಳಿಂದ ಫಲಗಳನ್ನು ಸಾಧಿಸುವ ಆಸೆ ಅಪೇಕ್ಷೆ ಇದ್ದೇ ಇರುತ್ತದೆ. ಉದಾಹರಣೆಗೆ ಕಾಳಿದಾಸನಂಥ ಮಹಾಕವಿಯೇ "ಕವಿಯಶಃ ಪ್ರಾರ್ಥಿ" ಕಾವ್ಯರಚನೆಗೆ ತೂಡಗಿದ್ದನಂದರೆ ಅತಿಶಯೋಕ್ತಿ ಆಗಲಾರದು. ಆದ್ದರಿಂದಲೇ ಫಲಲಾಭವೂ ಕೈಬಿಟ್ಟ ಹೇಮಚಂದ್ರನು ಯಶಸ್ಸಿನ ಫಲದ ಚಿಕ್ಕಗುಂಪಿನಲ್ಲಿ ಸೇರಿದ್ದಾನೆ. ಆದರೆ, ಅನೇಕ ಕವಿಗಳ ವಿಷಯದಲ್ಲಿ ಕಾವ್ಯ ಪ್ರಯೋಜನವು ನಿಶ್ಚಿತವಾಗಿದೆ. ಉದಾಹರಣೆಗೆ ಪಂಪ ಮತ್ತು ಬಾಣಕವಿಗಳು ರಾಜಾಶ್ರಯವನ್ನು ಪಡೆದು ರಾಜರನ್ನು ತಮ್ಮ ಕೃತಿಗಳಿಂದ ಪ್ರಸಿದ್ಧಿ ಪಡೆದಿದ್ದಾರೆ. ಹಿಂದಿನ ಕಾಲದಲ್ಲಿ ಕವಿಗಳು ರಾಜಾಶ್ರಯವನ್ನು ಪಡೆಯುತ್ತಿದ್ದರು. ರಾಜರು ಕವಿಗಳ ಪ್ರತಿಫಲಪೇಕ್ಷೆಯಿಲ್ಲದೇ ಯಾವುದೇ ಸೌಕರ್ಯವನ್ನು ಕಲ್ಪಿಸಿಕೊಡುತ್ತಿರಲಿಲ್ಲ. ಆದ್ದರಿಂದಲೇ ಕವಿಗಳು ತನ್ನ ಪ್ರಭುವಿನ ಕೀರ್ತಿಯನ್ನು ತಾವು ರಚಿಸಿದ ಕಾವ್ಯದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉದ್ಘೋಷಿಸುತ್ತಿದ್ದರು. ತನ್ನ ಹೆಸರಿನ ಜೊತೆಗೆ ಪ್ರಭುವಿನ ಹೆಸರನ್ನ ಚಿರಸ್ಥಾಯಿ ಆಗುವಂತೆ ತಮ್ಮ ಕಾವ್ಯದಲ್ಲಿ ನೆಲೆಗೊಳಿಸುತ್ತಿದ್ದರು.

**ಖ್ಯಾತಾ ನರಾಧಿಪತಯಃ ಕವಿಸಂಶ್ರಯೇಣ**
**ರಾಜಾಶ್ರಯೇಣ ಚ ಗತಾಃ ಕವಯಃ ಪ್ರಸಿದ್ಧಿಮ್ ।**
**ರಾಜ್ಞಾಸಮೋऽಸ್ತಿನ ಕವೇಃ ಪರಮೋಪಕಾರೀ**
**ರಾಜ್ಞೋ ನ ಚಾಸ್ತಿ ಕವಿನಾ ಸದೃಶಃ ಸಹಾಯಃ ॥**[೫]

"ಕವಿಗಳನ್ನಾಶ್ರಯಿಸಿ ರಾಜರು ಪ್ರಸಿದ್ಧಿ ಪಡೆದರು ರಾಜರನ್ನಾಶ್ರಯಿಸಿ ಕವಿಗಳು ಖ್ಯಾತಿ ಹೊಂದಿದರು. ರಾಜನಂಥ ಪರೋಪಕಾರಿ ಕವಿಗೆ ಬೇರೆ ಇಲ್ಲ ರಾಜರಿಗೂ ಕವಿಯಂಥ ಸಹಾಯಕ ಬೇರೊಬ್ಬರಿಲ್ಲ"

ಸಹೃದಯನಿಗೆ ಸಂಬಂಧಿಸಿದಂತೆ ಕಾವ್ಯ ಪ್ರಯೋಜನವು ಕಾವ್ಯವನ್ನು ಓದುವಾಗ, ನಾಟಕವನ್ನು ನೋಡುವಾಗ ಉಂಟಾಗುವ ಆಸ್ವಾದವು ಎದುರಿಗೆ ಹೊಳೆದಾಡಿದಂತೆ ಹೃದಯವನ್ನು ಹೊಕ್ಕಂತೆ ಮೈಯನ್ನೆಲ್ಲಾ ಮುತ್ತಿದಂತೆ ಮಿಕ್ಕದ್ದನ್ನೆಲ್ಲಾ ಮರತಂತೆ ಬ್ರಹ್ಮಾನಂದವೇ ಒದಗಿ ವಿಶೇಷಾನುಭವವು ಉಂಟಾಗುತ್ತದೆ. ಇದೇ ರಸಾನುಭವ ಪ್ರೀತಿ, ಆನಂದ, ಆಹ್ಲಾದ, ಚಿತ್ತವಿಶ್ರಾಂತಿ, ಇವೆಲ್ಲವೂ ರಸಾನುಭವವನ್ನು ನಿರ್ದೇಶಿಸುವ ಬೇರೆ ಬೇರೆ ಹೆಸರುಗಳು. ರಸಾನುಭವವು ಸಹೃದಯನಿಗೆ ದೊರೆತರೇನೆ ಕಾವ್ಯವು ಕಾವ್ಯವಾಗುತ್ತದೆ. ಇತರ ಫಲಗಳು ಬರಲಿ ಬಾರದಿರಲಿ ಕಾವ್ಯತ್ವಕ್ಕೆ ಚ್ಯುತಿ ಬರುವುದಿಲ್ಲ. ಹೀಗೆ ಸಹೃದಯನ ಮನಸ್ಸು ಸಂಸ್ಕಾರಹೊಂದಿ ಧರ್ಮಾಧರ್ಮಗಳ ಪರಿಜ್ಞಾನ ತನ್ನಷ್ಟಕ್ಕೆ ತಾನೇ ಒದಗಿ ಸನ್ಮಾರ್ಗದಲ್ಲಿ ನಡೆಯಬೇಕೆಂಬ ಪ್ರವೃತಿ ಉಂಟಾಗುತ್ತದೆ.

ಕಾವ್ಯ ಪ್ರಯೋಜನಗಳಿಗೆ ಸಂಬಂಧಿಸಿದಂತೆ ವಿಶ್ವನಾಥನು ಸಾಹಿತ್ಯದರ್ಪಣದ ಪ್ರಥಮ ಪರಿಚ್ಛೇದದಲ್ಲೇ ಕಾವ್ಯಫಲಗಳ ಬಗ್ಗೆ ನಿರೂಪಿಸಿದ್ದಾನೆ. ಮನುಷ್ಯನಾಗಿ ಹುಟ್ಟಿದವನು ಸಾದಿಸಬೇಕಾದ ನಾಲ್ಕು ಫಲಗಳನ್ನ ಕಾವ್ಯದಿಂದಲೇ ಅನಾಯಾಸವಾಗಿ ಜನಸಾಮಾನ್ಯರೆಲ್ಲರಿಗೂ ದೊರೆಯುತ್ತದೆ ಎಂಬುದು ವಿಶ್ವನಾಥನ ಮತ. ಆದ್ದ-ರಿಂದಲೇ ಕಾವ್ಯದ ಸ್ವರೂಪವನ್ನು ತಿಳಿಸಿದ್ದಾನೆ. ಕಾವ್ಯದಿಂದ ನಾಲ್ಕು ಪುರುಷಾರ್ಥಗಳು ದೂರೆಯಬೇಕಾದರೆ ರಾಮ ಮೊದಲಾದ ಸಜ್ಜನರಂತೆ ವರ್ತಿಸಬೇಕೆ ಹೊರತು ರಾವಣ ಮೊದಲಾದ ದುರ್ಜನರಂತೆ ವರ್ತಿಸಬಾರದು. ಆದ್ದರಿಂದಲೇ ಒಳ್ಳೆಯ ಕಾವ್ಯದ ಆಸ್ವಾದನವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಅರವತ್ತನಾಲ್ಕು ಕಲೆಗಳಲ್ಲೂ ಪೂರ್ಣ ಪರಿಚಯವನ್ನು ಉಂಟು ಮಡುವುದಲ್ಲದೇ ಯಶಸ್ಸನ್ನು ಸಂತೋಷವನ್ನು ಉಂಟುಮಾಡುತ್ತದೆ. ಭಗವಂತನ ಸ್ತುತಿಯಿಂದಲೂ ಕಾವ್ಯದಿಂದ ಧರ್ಮವು ದೊರೆಯುತ್ತದೆ. ಹಾಗೆಯೇ ಒಂದು ಶಬ್ದವನ್ನು ಸ್ಪಷ್ಟವಾಗಿ ಪ್ರಯೋಗಿಸಿ ಇದರ ಅರ್ಥವನ್ನು ಚೆನ್ನಾಗಿ ತಿಳಿದರೆ ಇದು ಸ್ವರ್ಗದಲ್ಲೂ ಇಲ್ಲಿಯೂ ನಮ್ಮ ಇಷ್ಟಾಥ-ರ್ಗಗಳನ್ನು ಕಲ್ಪಿಸುತ್ತದೆ ಎಂಬುದನ್ನು ವೇದವಾಕ್ಯಗಳ ಆಧಾರದಿಂದ ಸ್ಪಷ್ಟವಾಗುತ್ತದೆ. ವೇದಶಾಸ್ತ್ರಗಳು ನೀರಸವಾದರಿಂದ ಪಕ್ವವಾದ ಬುದ್ದಿಯುಳ್ಳವರಿಗೆ ನಾಲ್ಕು ಪುರುಷಾರ್ಥಗಳು ಕ್ಲೇಶದಿಂದ ದೊರಕುತ್ತದೆ. ಕಾವ್ಯವು ಸಹೃದಯರಿಗೆ ಆನಂದವನ್ನು ಒದಗಿಸುವುದರಿಂದ ಕೋಮಲವಾದ ಬುದ್ಧಿಯುಳ್ಳವರೂ ಸಹ ಅನಾಯಾಸವಾಗಿ ನಾಲ್ಕು ಪುರುಷಾರ್ಥಗಳನ್ನು ಪಡೆಯುತ್ತಾರೆ.

ಕಾವ್ಯದಿಂದ ಅನಾಯಾಸವಾಗಿ ಪುರುಷಾರ್ಥಗಳು ದೊರಕುವುದಾದರೆ ಪಕ್ವವಾದ ಬುದ್ದಿಯುಳ್ಳವರು ವೇದಶಾಸ್ತ್ರಗಳನ್ನು ತೊರೆದು ಕಾವ್ಯವನ್ನೇಕೆ ಓದಬಾರದು. ಕಹಿಯಾದ ಔಷದಕ್ಕಿಂದ ಕಲ್ಲು ಸಕ್ಕರೆಯಿಂದಲೇ ರೋಗವನ್ನು ವಾಸಿಮಾಡಕೊಳ್ಳಬಾರದು ಅಂ-ದರೆ ವೇದಾದ್ಯಯನಕ್ಕಿಂತ ಕಾವ್ಯವನ್ನು ಓದುವುದೇ ಉತ್ತಮವಾದ ಮಾರ್ಗವಾಗಿದೆ

ಎಂದು ಅಗ್ನಿಪುರಾಣದಿಂದ ತಿಳಿಯಬಹುದು. "ಲೋಕದಲ್ಲಿ ಮನುಷ್ಯ ಜನ್ಮವನ್ನು ಪಡೆಯುವುದೇ ಕಷ್ಟ ಅದರಲ್ಲೂ ವಿದ್ಯೆಯನ್ನು ತಿಳಿಸುವುದು ಇನ್ನೂ ಕಷ್ಟ. ಅದರಲ್ಲೂ ಕವನವನ್ನು ಸ್ವಾರಸ್ಯವಾಗಿ ಮಾಡುವುದು ತುಂಬ ಕಷ್ಟವೇ ಸರಿ[೭]" ಹೀಗೆ ತಿಳಿಸಿ ಧರ್ಮ, ಆರ್ಥ, ಕಾಮ, ಮೋಕ್ಷಗಳಿಂದಲೂ ಕಾವ್ಯ ಪ್ರಯೋಜನ ಪಡೆಯಬಹುದು ಎಂದು ವಿಶ್ವನಾಥನ ಮತವಾಗಿದೆ.

ವಿಶ್ವನಾಥನ ಪ್ರಕಾರ ಒಳ್ಳೆಯ ಕಾವ್ಯದ ಆಸ್ವಾದವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಆರವತ್ತನಾಲ್ಕು ಕಲೆಗಳಲ್ಲಿ ಪೂರ್ಣ ಪರಿಚಯವನ್ನು ಮಾಡಿ ಯಶಸ್ಸನ್ನೂ ಸಂತೋಷವನ್ನು ಕೊಡುತ್ತದೆ ಎಂಬುದನ್ನು ಸಾಹಿತ್ಯದರ್ಪಣದ ಪ್ರಥಮ ಪರಿಚ್ಛೇದದಲ್ಲಿಯೇ ವ್ಯಾಖ್ಯಾನಿಸಿ ಕಾವ್ಯ ಪ್ರಯೋಜನವನ್ನ ಹೇಳಿದ್ದಾನೆ. ಕಾವ್ಯಫಲಕ್ಕೆ ಸಂಭಂದಿಸಿದಂತೆ ಮಮ್ಮಟ ಇತರ ಅಲಂಕಾರಿಕರಂತೆ ಸಮಗ್ರವಾಗಿ ವಿಷಯವನ್ನ ಹೇಳದೇ ತನಗೆ ಬೇಕಾದ ಮುಖ್ಯ ಅಂಶಗಳನ್ನ ಮಾತ್ರ ವಿವೇಚಿಸಿದ್ದಾನೆ. ಭಟ್ಟ ನಾಯಕನು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಕವಿಗಳಿಗಿಂತ ರಸಿಕರಿಗೆ ಕಾವ್ಯಪ್ರಯೋಜನವು ಹೆಚ್ಚೆಂದು ತಿಳಿಸಿದ್ದಾನೆ.

**ವಾಗ್ದೇನುರ್ದುಗ್ಧ ಏಕಂ ಹಿ ರಸಂ ಯದ್ಭಾಲತೃಷ್ಣಯಾ ।**
**ತೇನ ನಾಸ್ಯ ಸಮಃ ಸ ಸ್ಯಾತ್ ದುಹ್ಯತೇ ಯೋಗಿಭರ್ಹಿ ಯಃ[೮] ॥**

"ವಾಣಿಯೆಂಬಾ ಹಸು ಕರುವಿನ ಮೇಲಿನ ಮಮತೆಯಿಂದ ಯಾವ ಅಪೂರ್ವ ರಸವನ್ನು ತಾನಾಗಿಯೇ ಕರೆಯುತ್ತದೆಯೋ, ಅದಕ್ಕೆ ಯೋಗಿಗಳು ಕರೆದುಕೊಳ್ಳುವ ರಸವು ಸಮಾನವಾಗದು" ಕವಿವಾಣಿಯೇ ಹಸು ಸಹೃದಯನೇ ಕರು, ಕೆಚ್ಚಲಿಗೆ ಕರು ಬಾಯಿಟ್ಟ ಕೂಡಲೇ ಹಸು ಪ್ರೇಮದಿಂದ ಸೊರು ಬಿಟ್ಟು ಸಾರತರವಾದ ಅಮೃತವನ್ನು ಸೊಸುವಂತೆ ಕವಿವಾಣಿಯು ರಸಾಸ್ವಾದವನ್ನು ಸಹೃದಯರಿಗೆ ತಾನಾಗಿಯೇ ಉಂಟು ಮಾಡುತ್ತದೆ. ಇದಕೊಸ್ಕರ ಸಹೃದಯನು ಯಾವ ಪ್ರಯತ್ನವನ್ನು ಮಾಡಬೇಕಿಲ್ಲ ಭಟ್ಟನಾಯಕನ ಈ ಭಾವನೆಯನ್ನು ಕುಂತಕನು ಸಮ್ಮತಿಸಿದ್ದಾನೆ. ಧರ್ಮಾರ್ಥ ಕಾಮ ಮೋಕ್ಷಗಳ ಚತುವರ್ಗದಿಂದ ಪಡೆಯುವ ಸವಿಯನ್ನು ಮೀ–ರಿಸುವ ಅಂತಃಸುಖವು ಕಾವ್ಯಾಮೃತ ರಸದಿಂದ ಕಾವ್ಯಜ್ಞರಿಗೆ ಒದಗುತ್ತದೆ[೯] ಎಂದು ವಕ್ರೋಕ್ತಿಕಾರ ಕುಂತಕನೇ ಹೇಳಿದ್ದಾನೆ. ಧರ್ಮ, ಆರ್ಥ, ಕಾಮ,ವೆಂಬ ತ್ರಿವರ್ಗದ ಮಾತಿರಲಿ "ಕಾವ್ಯಸುಖವು ಮೋಕ್ಷಸುಖಕ್ಕೂ ಮಿಗಿಲಾಗಿದೆ. ಇಲ್ಲಿಗೆ ಕಾವ್ಯಾನುಭವದ ಪ್ರಯೋಜನ ಮಾಧುರ್ಯವನ್ನು ವಿಶ್ವನಾಥ, ಮಮ್ಮಟ ಇತರ ಆಲಂಕಾರಿಕರು ಹೇಳಿರುವ ವಿಚಾರವನ್ನು ಇಲ್ಲಿ ಪರಾಮರ್ಶಿಸಲಾಗಿದೆ.

### ಕಾವ್ಯಲಕ್ಷಣ

ಸಾಹಿತ್ಯದರ್ಪಣಕಾರ ವಿಶ್ವನಾಥನು ಕೊಟ್ಟಿರುವ ಕಾವ್ಯ ಲಕ್ಷಣವನ್ನು ತಿಳಿಯುವ ಮೊದಲು ಹಿಂದಿನ ಅಲಂಕಾರಿಕಾರರು ಕೊಟ್ಟಿರುವ ಕಾವ್ಯ ಲಕ್ಷಣವನ್ನ ವಿವೇಚಿಸಲಾಗಿದೆ. ಭರತನನ್ನು ಬಿಟ್ಟರೆ ಭಾಮಹನೇ ಆದಿಅಲಂಕಾರಿಕನಾಗಿದ್ದಾನೆ. ಭಾಮಹನು (ಕಾವ್ಯಾಲಂಕಾರ ೧, ೧೭) "ಶಬ್ದಾರ್ಥೌ ಸಹಿತೌ ಕಾವ್ಯಂ" "ಶಬ್ದಾಥ- ರ್ಗಗಳು ಒಂದುಗೂಡಿ ಕಾವ್ಯ" ಎಂದು ಕಾವ್ಯ ಲಕ್ಷಣವನ್ನು ಕೊಟ್ಟು ಅಲಂಕಾರಗಳ ಅಗತ್ಯವನ್ನು ಹೇಳಿ ಅವು ಕಾವ್ಯದ ಸಾರಸರ್ವಸ್ವವೆಂದೂ ಅಲಂಕಾರವಿಲ್ಲದೆ ಕಾವ್ಯತ್ವವೇ ಸಿದ್ಧಿಸುವುದಿಲ್ಲವೆಂದು ಹೇಳಿದ್ದಾನೆ. ನಂತರ ಬಂದ ದಂಡಿಯು "ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ" "ಶರೀರವೆಂದರೆ ಇಷ್ಟವಾದ [10] ಅರ್ಥವನ್ನುಳ್ಳ ಪದಸಮೂಹ" ['ಕಾವ್ಯದರ್ಶ' ೧.೧೦] ಎಂದು ಗುಣಗಳ ಮಹತ್ವವನ್ನು ದಂಡಿಯು ಎತ್ತಿಹಿಡಿದಿದ್ದಾನೆ. ವಾಮನನು "ಕಾವ್ಯಶಬ್ದೋ?ಯಂ ಗುಣಾಲಂಕಾರ ಸಂಸ್ಕೃತಯೋಃ ಶಬ್ದಾರ್ಥಯೋರ್ವರ್ತತೇ" "ಕಾವ್ಯ ಎಂಬ ಶಬ್ದವು ಗುಣಾಲಂಕಾರಗಳಿಂದ ಪರಿಷ್ಕಾರ ಹೊಂದಿದ ಶಬ್ದಾರ್ಥಗಳಿಗೆ ಅನ್ವಯಿಸುತ್ತದೆ" ಎಂದು ಒಂದು ಕಡೆ ಹೇಳಿ "ರೀತಿ ರಾತ್ಮಾ ಕಾವ್ಯಸ್ಯ" "ರೀತಿಯೇ ಕಾವ್ಯದ ಆತ್ಮ" [ಕಾವ್ಯಾಲಂಕಾರ ಸೂತ್ರ ವೃತ್ತಿ ೧,೧,೧, ವೃತ್ತಿ] ಎಂದು ಕಾವ್ಯಲಕ್ಷಣ ಕೊಟ್ಟು ಗುಣಸ್ವರೂಪದಿಂದ ಕೂಡಿದ ವಿಶಿಷ್ಟವಾದ ಪದರಚನೆಯೇ ರೀತಿ, ಅತಂಹ ರೀತಿಯೇ ಕಾವ್ಯದ ಆತ್ಮ, ಇಲ್ಲಿ ರೀತಿ ಮತ್ತು ಗುಣಗಳಿಗೆ ಅವಿನಾಭಾವ ಸಂಬಂಧವಿದೆ. ಗುಣಗಳ ಅಸ್ತಿತ್ವದಿಂದಲೇ ರೀತಿಯ ಸ್ವರೂಪ ಸಿದ್ಧವಾಗುತ್ತದೆ. ದಂಡಿಯು ಗುಣಗಳಿಗೆ ಸ್ಪಷ್ಟವಾದ ಲಕ್ಷಣಗಳನ್ನು ಹೇಳಿದ್ದನು. ವಾಮನನು ರೀತಿಯನ್ನು ಸ್ವತಂತ್ರವಾಗಿ ಪ್ರತಿಪಾದಿಸಿದ್ದಾನು.

ಆನಂದವರ್ಧನನು "ಕಾವ್ಯಸ್ಯಾತ್ಮಧ್ವನಿಃ" [ಧ್ವನ್ಯಾಲೋಕ, ೧.೧] ಎಂದು ಕಾವ್ಯಲಕ್ಷಣವನ್ನು ಕೊಟ್ಟು 'ಧ್ವನಿಯೇ ಕಾವ್ಯದ ಆತ್ಮ' ಎಂದಿದ್ದಾನೆ. ಕಾವ್ಯದ ಸ್ವರೂಪವನ್ನು ಮೊದಲು ಹೇಳದೆಯೇ ಆನಂದವರ್ಧನನು ವಿಷಯ ನಿರೂಪಣೆಗೆ ಮುಂದುವರೆದಿದ್ದಾನೆಂದು ಮಹಿಮಭಟ್ಟನು ಆಕ್ಷೇಪಿಸಿದ್ದಾನೆ.[11] ಕಾವ್ಯಲಕ್ಷಣವನ್ನು ಶ್ರದ್ಧಾಪೂರ್ವಕವಾಗಿ ರಚಿಸಿ ಅದರ ಒಂದೊಂದು ಮಾತಿನ ಆರ್ಥವನ್ನು ಪ್ರಯೋಜನವನ್ನು ವಿವರಿಸಿ ಸಮರ್ಥವಾದ ಕಾವ್ಯಲಕ್ಷಣ ಕೊಟ್ಟವರಲ್ಲಿ ಕುಂತಕನು ಮೊದಲಿಗನಾಗಿದ್ದಾನೆ.

**ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರ ಶಾಲಿನಿ ।**
**ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣೆ ॥**

[ವಕ್ರೋಕ್ತಿಜೀವಿತ, ೧, ೭]

"ವಕ್ರಕವಿ ವ್ಯಾಪಾರದಿಂದ ಕೂಡಿದ್ದೂ ಬಲ್ಲವರಿಗೆ ಆಹ್ಲಾದವನ್ನುಂಟು

ಮಾಡತಕ್ಕದ್ದು. ಆದ ಬಂಧದಲ್ಲಿ ವ್ಯವಸ್ಥೆಗೊಂಡ ಶಬ್ದಾರ್ಥಗಳು ಒಟ್ಟಿಗೆ ಕಾವ್ಯ" ಕುಂತಕನು ಈ ಲಕ್ಷಣವನ್ನು ಕೊಟ್ಟು ದೀರ್ಘವಾಗಿ ಪ್ರತಿಪಾದಿಸಿದ್ದಾನೆ. ಇನ್ನು ಧ್ವನಿ ಮಾರ್ಗದವರಲ್ಲಿ ಮಮ್ಮಟನು ಕೊಟ್ಟಿರುವ ಕಾವ್ಯ ಲಕ್ಷಣವು ಅತ್ಯಂತ ಪ್ರಸಿದ್ಧವಾಗಿದೆ. "ತದದೋಷೌ ಶಬ್ದಾರ್ಥೌ ಸಗುಣಾವಲಂಕೃತೀ ಪುನಃ ಕ್ವಾಪಿ" (ಕಾವ್ಯಪ್ರಕಾಶ, ೧.೪) "ಕಾವ್ಯವು ದೋಷವಿಲ್ಲದ, ಗುಣ ಸಹಿತವಾದ ಶಬ್ಧಾರ್ಥಗಳಾಗಿರುತ್ತವೆ. ಇವುಗಳಲ್ಲಿ ಕ್ವಚಿತ್ತಾಗಿ ಅಲಂಕಾರವಿಲ್ಲದಿರುವುದು ಉಂಟು" ಮಮ್ಮಟನು ತನ್ನ ಕಾವ್ಯಲಕ್ಷಣದಲ್ಲಿ ಅಲಂಕಾರಕ್ಕೆ ನಿಯತವಾದ ಸ್ಥಾನವಿರಬೇಕಾಗಿಲ್ಲ, ಎಂಬುದನ್ನು ತಿಳಿಸಿ, ಸಾಮಾನ್ಯವಾಗಿ ಅಲಂಕಾರವಿರ ಬೇಕೆಂದೇ ಇವನ ಅಭಿಪ್ರಾಯವಾಗಿದೆ. ನಂತರ ಬಂದ ಹೇಮಚಂದ್ರ[೨] ಮೊದಲಾದ ಅಲಂಕಾರಿಕರು ಈ ಕಾವ್ಯಲಕ್ಷಣವನ್ನು ಸಾಮಾನ್ಯವಾಗಿ ಅಂಗೀಕರಿಸಿದರು.

ಆದರೆ ಕಾವ್ಯಲಕ್ಷಣ ನಿಷ್ಕರ್ಷೆಗೆ ವಿಶೇಷ ಗಮನಕೊಟ್ಟು ಹಿಂದಿನ ಲಾಕ್ಷಣಿಕರ ಉಕ್ತಿಗಳನ್ನು ವಿಮರ್ಶಿಸಿ ಖಂಡಿಸಿ ತಮ್ಮದೇ ಆದ ಹೊಸಲಕ್ಷಣವನ್ನು ಕೊಟ್ಟವರಲ್ಲಿ ವಿಶ್ವನಾಥನು ಒಬ್ಬನಾಗಿದ್ದಾನೆ.

ವಿಶ್ವನಾಥನು ಕೊಟ್ಟಿರುವ ಕಾವ್ಯಲಕ್ಷಣವು

**ವಾಕ್ಯಂ ರಸಾತ್ಮಕಂ ಕಾವ್ಯಂ ದೋಷಾಸ್ತತ್ತಪಕರ್ಷಕಾಃ ।**
**ಉತ್ಕರ್ಷಹೇತವಃ ಪ್ರೋಕ್ತಾ ಗುಣಾಲಂಕಾರರೀತಯಃ ॥**

['ಸಾಹಿತ್ಯದರ್ಪಣ' ೧.೩]

"ರಸಾತ್ಮಕ ವಾಕ್ಯವು ಕಾವ್ಯ, ದೋಷಗಳು ಅದಕ್ಕೆ ಕುಂದುಂಟುಮಾಡತಕ್ಕದ್ದು. ಅದಕ್ಕೆ ಉತ್ಕರ್ಷ ಕೊಡತಕ್ಕವು ಗುಣಾಲಂಕಾರ ರೀತಿಗಳು" ಎಂಬ ಕಾವ್ಯಲಕ್ಷಣವನ್ನು ಕೊಟ್ಟಿರುವ ವಿಶ್ವನಾಥನು ರಸಕ್ಕೆ ಆತ್ಮಸ್ಥಾನವನ್ನು, ಕಾವ್ಯಲಕ್ಷಣದಲ್ಲಿ ರಸಕ್ಕೆ ಪ್ರಮುಖ ಸ್ಥಾನವನ್ನು ಕೊಟ್ಟಿದ್ದಾನೆ. ರಸವಿಲ್ಲದ ವಾಕ್ಯವು ಕಾವ್ಯವೇ ಅಲ್ಲ ಎಂದಿದ್ದಾನೆ. ರಸವು ಅನುಭವಿಸಲಿಕ್ಕೆ ಯೋಗ್ಯವಾದದು, ಅನುಭವಾರ್ಹವಾದು ಎಂದು ವಿಶ್ವನಾಥನು ರಸದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದು ಗುಣಗಳು ಮತ್ತು ಅಲಂಕಾರಗಳು ಕಾವ್ಯಸ್ವರೂಪಕ್ಕೆ ಆಧಾರವಾಗಿಲ್ಲ ಅವು ಕೇವಲ ಉತ್ಕರ್ಷವನ್ನು ಮಾತ್ರ ಕೊಡುತ್ತದೆ ಎಂಬುದೇ ಸಾಹಿತ್ಯದರ್ಪಣಕಾರನ ಮತವಾಗಿದೆ. ರಸಕ್ಕೆ ಉದಾಹರಣೆಯಾಗಿ,

**ಶೂನ್ಯಂ ವಾಸಗೃಹಂ ವಿಲೋಕ್ಯ ಶಯನಾದುತ್ಥಾಯ ಕಿಂಚಿಚ್ಛನೈಃ**
**ನಿದ್ರಾವ್ಯಾಜಮುಪಾಗತಸ್ಯ ಸುಚಿರಂ ನಿರ್ವರ್ಣ್ಯ ಪತ್ಯುರ್ಮುಖಮ್ ।**
**ವಿಶ್ರಬ್ಧಂ ಪರಿಚುಂಬ್ಯ ಜಾತಪುಲಕಾಮಲೋಕ್ಯ ಗಂಡಸ್ಥಲೀಂ**
**ಲಜ್ಜಾನಮ್ರಮುಖೀ ಪ್ರೀಯೇಣ ಹಸತಾ ಬಾಲಾಚಿರಂ ಚುಂಬಿತಾ ॥**

[ಸಾಹಿತ್ಯ ದರ್ಪಣ, ೧, ೧೩]

"ವಾಸದ ಮನೆಯನ್ನು ಶೂನ್ಯವೆಂದು ತಿಳಿದು ಹಾಸಿಗೆಯಿಂದ ಕೊಂಚವೇ ಮೆಲ್ಲಗೆ ಎದ್ದು, ನಿದ್ರಿಸುವಂತೆ ನಟಿಸುತ್ತಿದ್ದ ಪತಿಯ ಮುಖವನ್ನು ಬಹಳ ಹೊತ್ತು ದಿಟ್ಟಿಸಿ ನೋಡಿ ಮುತ್ತಿಟ್ಟು ರೋಮಾಂಚನಗೊಂಡ ಕಪೋಲಸ್ಥಲವನ್ನು ನೋಡಿ ನಾಚಿಕೆಯಿಂದ ತಲೆಯನ್ನು ಬಗ್ಗಿಸಿಕೊಂಡಿದ್ದ ಬಾಲಿಕೆಯನ್ನು ಪ್ರಿಯನು ನಗುತ್ತಲೇ ಬಹಳ ಹೊತ್ತು ಚುಂಬಿಸಿದನು." ಇಲ್ಲಿ ಸಂಭೋಗಶೃಂಗಾರರಸವು ಅಭಿವ್ಯಕ್ತವಾಗುತ್ತದೆ. ನಾಯಕ ನಾಯಿಕೆಯರಿಬ್ಬರೂ ಅನ್ಯೋನ್ಯವಾಗಿ ಅವಲಂಬರೆನಿಸಿದ್ದಾರೆ. ಶೂನ್ಯಪದವು ರತಿಭಾವವನು ಉದ್ದೀಪಿಸುತ್ತದೆ. ಉತ್ಸಾಹ ಮೊದಲಾದವುಗಳು ಉತ್ಥಾನ ಮೊದಲಾದ ಕ್ರಿಯೆಗಳು ಅನುಭಾವಗಳು. ರಸಾತ್ಮಕವಾದ ವ್ಯಾಕವೇ ಕಾವ್ಯವೆಂದು ಲಕ್ಷಣವನ್ನು ಹೇಳಿದ್ದಾನೆ. ಕಾವ್ಯದ ಆತ್ಮವೆನಿಸಿದ ರಸದ ಸ್ವರೂಪವನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಿಲಾಗಿದೆ.

ಇನ್ನು ವಿಶ್ವನಾಥನು ಮಮ್ಮಟ, ವಾಮನ, ಕುಂತಕನತಂಹ ಪ್ರಾಚೀನ ಅಲಂಕಾರಿಕರ ಕಾವ್ಯಲಕ್ಷಣವನ್ನು ಖಂಡಿಸಿರುವುದನ್ನು ಇಲ್ಲಿ ಪರಮರ್ಶಿಸಲಾಗಿದೆ. ಮೊದಲಿಗೆ ಪ್ರಖ್ಯಾತ ಆಲಂಕಾರಿಕನಾದ ಮಮ್ಮಟನ ಕಾವ್ಯಲಕ್ಷಣವನ್ನು ಖಂಡನೆಯನ್ನು ತಿಳಿಯೋಣ. ವಿಶ್ವನಾಥನ ಪ್ರಕಾರ ಮಮ್ಮಟನು ಭಾಮಹ, ವಾಮನಾದಿ ಪ್ರಾಚೀನ ಅಲಂಕಾರಿಕರ ಉಕ್ತಿಗೆ ಯಾವುದೇ ವ್ಯತ್ಯಾಸವಿಲ್ಲದಂತೆ ಇವನೂ ಸಹ ಗುಣ, ದೋಷ, ಅಲಂಕಾರ ಇವುಗಳ ಹೆಸರುಗಳನ್ನ ಮಾತ್ರ ಜಪಿಸಿದ್ದಾನೆ. ಕಾವ್ಯಜೀವಿತವಾದ ರಸಧ್ವನಿಯ ವಿಚಾರವನ್ನೇ ಎತ್ತಿಲ್ಲ. ಆದರೆ, ಕಾವ್ಯಲಕ್ಷಣ ಪರಿಷ್ಕಾರಕ್ಕೆ ಮಮ್ಮಟನಿಂದ ಉಪಕಾರವೇ ಆಗಿದೆ. ಅಲಂಕಾರಕ್ಕೆ ಕಾವ್ಯದಲ್ಲಿ ನಿಯತಸ್ಥಾನವಿರಬೇಕಿಲ್ಲ ಎಂಬುದನ್ನು ಕ್ರೋಢೀಕ-ರಿಸಿದ್ದಾನೆ. ಅಂದರೆ ಸಾಮಾನ್ಯವಾಗಿ ಅಲಂಕಾರ ಇರಬೇಕೆಂಬುದೇ ಮಮ್ಮಟನ ಅಭಿಪ್ರಾಯವು ಆಗಿದೆ. ಮಮ್ಮಟನ ಕಾವ್ಯಲಕ್ಷಣದಲ್ಲಿ ದೋಷಗಳನ್ನು ತೋರಿಸಿ ಹಿಂದಿನಲಾಕ್ಷಣಿಕರ ಉಕ್ತಿಗಳನ್ನು ವಿಮರ್ಶಿಸಿ ತನ್ನದೇ ಆದ ಹೊಸ ಲಕ್ಷಣವನ್ನು ಸ್ಥಾಪಿಸಲು ಹೊರಟ ಪ್ರಮುಖ ಆಲಂಕಾರಿಕನೆಂದರೆ ವಿಶ್ವನಾಥ. ಮಮ್ಮಟನ ಕಾವ್ಯಲಕ್ಷಣ "ತದದೋಷೌ ಶಬ್ದಾರ್ಥೌ ಸಗುಣವಲಂಕೃತೀ ಪುನಃ ಕ್ವಾಪಿ" ಈ ಕಾವ್ಯಲಕ್ಷಣದ ಪದಪದವನ್ನು ವಿಮರ್ಶಿಸಿದ್ದಾನೆ.

'ಅದೋಷೌ' ದೋಷವಿಲ್ಲದ್ದು ಎಂದು ಕಾವ್ಯಲಕ್ಷಣ ಹೇಳುವುದಾದರೆ ದೋಷವಿರುವ ಕಾವ್ಯವು ಕಾವ್ಯವೇ ಅಲ್ಲ, ಎನ್ನುವುದಾದರೆ ಕಾವ್ಯಶಬ್ದಕ್ಕೆ ವಿಷಯವಾಗುವ ಕೃತಿಗಳು ಅತಿ ವಿರಳವಾಗುತ್ತದೆ. ಅಥವಾ ಯಾವುದಕ್ಕೂ ಅನ್ವಯಿಸದೆ ಹೋಗಬಹುದು. ಕಾವ್ಯದಲ್ಲಿ ಒಂದು ದೋಷವೂ ಇಲ್ಲದಂತೆ ಗ್ರಂಥರಚನೆ ಮಾಡುವವರು ಯಾರಿದ್ದಾರೆ? ಕಾವ್ಯದಲ್ಲಿ ಅಲ್ಲೊಂದು ಇಲ್ಲೊಂದು ದೋಷವಿದ್ದು ಅದು ಧ್ವನಿಪೂರ್ಣವಾಗಿದ್ದರೆ ಅದನ್ನ ಉತ್ತಮ ಕಾವ್ಯವೇಂದೆ ಕರೆಯಲಾಗಿದೆ ಎಂದು ಧ್ವನಿಕಾರನೇ ಸಮ್ಮತಿಸಿದ್ದಾನೆ. ಶೃತಿಕಟುತ್ವ ಮೊದಲಾದ ದೋಷವು ರಸಕ್ಕೆ ಕುಂದುಂಟು ಮಾಡದಿದ್ದರೆ ಅದನ್ನು ದೋಷವೆಂದು

ಪರಿಗಣಿಸಲಾಗಿಲ್ಲ ಏಕೆಂದರೆ ಕರ್ಕಶವರ್ಣಗಳ ಜೋಡಣೆ ಶೃಂಗಾರರಸದಲ್ಲಿ ದೋಷವೆ ಹೊರತು ವೀರರೌದ್ರರಸಗಳಲ್ಲಿ ಇವು ಉಪಾದೇಯವೇ ಆಗಿದೆ. ಇನ್ನು ವಿಶ್ವನಾಥನು ವಾದಕ್ಕಾಗಿ 'ಈಷದ್ದೋಷೌ' "ಸ್ವಲ್ಪ ದೋಷವನ್ನುಳ್ಳವು" ಎಂದು ಅರ್ಥ ಹೇಳಿದರೆ ನಿರ್ದೋಷಕಾವ್ಯಕ್ಕೆ ಕಾವ್ಯತ್ವ ತಪ್ಪುತ್ತದೆ. ತನ್ನ ವಾದಕ್ಕೆ ಪೂರ್ವಕವಾಗಿ ವಿಶ್ವನಾಥನು ಈ ಶ್ಲೋಕವನ್ನು ಉದಾಹರಿಸಿದ್ದಾನೆ.

**ಕೀಟಾನುವಿದ್ಧರತ್ನಾದಿ ಸಾಧಾರಣ್ಯೇನ ಕಾವ್ಯತಾ ।**
**ದುಷ್ಟೇಷ್ವಪಿ ಮತಾ ಯತ್ರ ರಸಾದ್ಯನುಗಮಃ ಸ್ಫುಟಃ**[೧೩] ॥

"ರತ್ನದ ಲಕ್ಷಣವನ್ನು ತಿಳಿಸುವಾಗ ಅದನ್ನು ಒಂದು ಕಡೆ ಹುಳವು ಕೊರೆದಿದ್ದರೂ ಅಷ್ಟರಿಂದಲೇ ನಾವು ರತ್ನವೆಂದು ಭಾವಿಸದೇ ಬಿಡುವುದಿಲ್ಲ. ಈ ಬಗೆಯ ದೋಷವಿದ್ದ ಮಾತ್ರದಿಂದಲೇ ರತ್ನವನ್ನು ರತ್ನವೆಂದು ಯಾರು ಅಲ್ಲಗಳೆಯಲಾರರು" ರತ್ನವನ್ನು ರತ್ನವೆಂದು ಭಾವಿಸುವಾಗ ಹುಳುಕೊರೆದದ್ದೇಂಬುದನ್ನು ಯಾರು ಗಮನಿಸುವುದಿಲ್ಲ ಏಕೆಂದರೆ ಈ ಬಗೆಯ ದೋಷವು ರತ್ನದಲ್ಲಿರುವ ವ್ಯಕ್ತಿತ್ವವನ್ನು ಕಡೆಗಣಿಸಲಾರವು. ರತ್ನದಲ್ಲಿ ದೋಷವಿದ್ದರೂ ರತ್ನದ ರತ್ನತ್ವ ಕಡಿಮೆಯಾಗಲಾರದು. ಬೇರೆ ರತ್ನಕ್ಕೆ ಹೋಲಿಸಿದರೆ ಕನಿಷ್ಠವೆಂಬ ಭಾವನೆಗೆ ಮಾತ್ರ ಅವಕಾಶವಿರುತ್ತದೆ. ಆದರಿಂದ ಇದು ಉತ್ತಮ ಇದು ಮಧ್ಯಮ ಇದು ಕನಿಷ್ಠವೆಂಬ ತಾರತಮ್ಯವನ್ನು ಮಾತ್ರ ಈ ದೋಷವು ತಿಳಿಸುತ್ತದೆ. ಹೀಗೆ ರತ್ನದ ಲಕ್ಷಣವನ್ನು ಹೇಳುವಾಗ ಅದರ ಹುಳುಕಿನ ಮಾತನ್ನು ಯಾರು ಎತ್ತುವುದಿಲ್ಲ ರತ್ನದಲ್ಲಿ ಗಿರುಪಾರುಗಳು ಹೇಗೆ ಇರುವುವೂ ಕಾವ್ಯದಲ್ಲಿ ದೋಷಗಳು ಹಾಗೆ, ಇವು ಇದ್ದ ಮಾತ್ರಕ್ಕೆ ರತ್ನದ ರತ್ನತ್ವವಾಗಲಿ ಕಾವ್ಯದ ಕಾವ್ಯತ್ವವಾಗಲಿ ಕುಂದುವುದಿಲ್ಲ, ಬದಲಾಗಿ ಇದರ ಉಪದೇಯತೆ ಮಾತ್ರ ಕುಗ್ಗುತ್ತದೆ. ಇಲ್ಲಿಗೆ 'ಅದೋಷೌ' ಎಂಬ ಪದದ ವಿಮರ್ಶೆ ಮುಗಿಯಿತು.

ಇನ್ನು 'ಸಗುಣೌ' ಎಂಬ ವಿಶೇಷಣದ ವಿಮರ್ಶೆ ಹೇಗೆ 'ಅದೋಷೌ' ಎಂಬ ಪದವು ಕಾವ್ಯಲಕ್ಷಣದಲ್ಲಿ ಹೊಂದಿಕೆಯಾಗದಿರುವಂತೆಯೇ 'ಸಗುಣೌ' ಎಂಬ ವಿಶೇಷಣ ಕೊಟ್ಟಿದ್ದೂ ಸಹ ಹೊಂದುವುದಿಲ್ಲ, ಗುಣಗಳು ರಸದಲ್ಲಿ ಮಾತ್ರವೇ ಅನ್ವಯಿಸುತ್ತದೆ. "ಆತ್ಮನಲ್ಲಿ ಶೌರ್ಯ ಮೊದಲಾದ ಧರ್ಮಗಳಿರುವಂತೆ ಕಾವ್ಯದಲ್ಲಿ ಪ್ರಧಾನವೆನಿಸಿದ ರಸಕ್ಕೆ ಗುಣಗಳು ಧರ್ಮವೆನಿಸಿದೆ". ಗುಣಗಳು ರಸವನ್ನು ಪ್ರಕಾಶಗೊಳಿಸುವುದ–ರಿಂದ ಶಬ್ದಾರ್ಥಗಳಲ್ಲೂ ಅವು ಗೌಣವಾಗಿ ಅಂದರೆ ಅಪ್ರಧಾನವಾಗಿ ಸೇ–ರಿಕೊಂಡಿರುತ್ತವೆ ಎಂದು ಹೇಳುವುದಾದರೆ ಇದು ಸಹ ಹೊಂದುವುದಿಲ್ಲ ಏಕೆಂದರೆ ಕಾವ್ಯದ ಸ್ವರೂಪವಾದ ಶಬ್ದಾರ್ಥಗಳಲ್ಲಿ ರಸವುಂಟೇ ಇಲ್ಲವೇ ಎಂಬ ಅಂಗವು ಇಲ್ಲಿ ವಿಚಾರಾರ್ಹವೆನಿಸಿದೆ. ಇವುಗಳಲ್ಲಿ ರಸವಿಲ್ಲವೆಂದು ಹೇಳುವುದಾದರೆ ಗುಣಗಳು ಇಲ್ಲವೆಂದೇ ಹೇಳಬೇಕಾಗುತ್ತದೆ. ಶಬ್ದಾರ್ಥಗಳಲ್ಲಿ ರಸವಿರುವುದೆಂದು ಹೇಳಿದರೆ,

ರಸವುಳ್ಳ ಶಬ್ದಾರ್ಥಗಳೇ ಕಾವ್ಯವೆಂದು ಹೇಳಿದರೆ 'ಸಗುಣೌ' ಎಂಬುದರ ಬದಲು 'ಸರಸೌ' ಎಂಬ ವಿಶೇಷಣವನ್ನೇ ಕೊಡಬಹುದಾಗಿತ್ತೆಂದು ವಿಶ್ವನಾಥನ ಮತವಾಗಿದೆ. ಆದ್ದರಿಂದ ಮಮಟನು ನೇರವಾಗಿ ಧರ್ಮಿಯನ್ನು ಹೇಳದೆ ಗೌಣವಾದ ಧರ್ಮವನ್ನು ಊಹಿಸಿಕೊಳ್ಳಿ ಎನ್ನುವುದು ಯಾವ ನ್ಯಾಯ? 'ಪ್ರಾಣಿಗಳುಳ್ಳ ದೇಶ' ಎಂದು ಮುಖ್ಯವಾಗಿ ಹೇಳಬೇಕಾಗಿರುವಾಗ "ಶೌರ್ಯಾದಿಗಳನ್ನುಳ್ಳ ದೇಶ" ಎಂದು ಯಾರು ಸಹ ಹೇಳುವುದಿಲ್ಲ. ವ್ಯವಹಾರ ಕಾಲದಲ್ಲಿ ಮಾತ್ರವೇ ಜನರು ಈ ಹೆಸ–ರಿನಿಂದ ತಿಳಿಸುವರೇ ಹೊರತು ಯಾರು ಸಹ ಕೇವಲ ಗುಣವುಳ್ಳ ಅಂಶದಿಂದ ತಿಳಿಸುವುದಿಲ್ಲ. ಆದ್ದರಿಂದಲೇ ಗುಣಗಳು ಕಾವ್ಯದ ಸ್ವರೂಪಕ್ಕೆ ಆದಾರವಲ್ಲ ಅವು ಕೇವಲ ಉತ್ಕರ್ಷವನ್ನು ಮಾತ್ರ ಕೊಡತಕ್ಕದ್ದು, ಅಲಂಕಾರಗಳ ಕಾರ್ಯವೂ ಸಹ ಇಷ್ಟೇ, "ಕಾವ್ಯಸ್ಯ ಶಬ್ದಾರ್ಥ ಶರೀರಂ, ರಸಾದಿಶ್ಚ ಆತ್ಮಾ, ಗುಣಃ ಶೌರ್ಯಾದಿವತ್, ದೋಷಃ ಕಾಣತ್ವಾದಿವತತ್ ರೀತಯೋ?ವಯ ಸಂಸ್ಥಾನ ವಿಶೇಷವತ್, ಅಲಂಕಾರಃ ಕಟಕಕುಂಡಲಾದಿವತ್"[೧೪] ಕಾವ್ಯಕ್ಕೆ ಶಬ್ದಾರ್ಥಗಳೇ ಶರೀರವೊ, ರಸಭಾವಾದಿ ಗಳೇ ಆತ್ಮವೂ ಆಗಿದೆ. ಗುಣಗಳು ಶೌರ್ಯ ಮೊದಲಾದ ಧರ್ಮಗಳಂತೆ ಇರುವುವು ದೋಷವು ಕುರುಡುತನ ಮೊದಲಾದವುಗಳಂತೆ ರೀತಿಗಳು ಪದಗಳ ಜೋಡಣೆಯಲ್ಲಿ ಕಾಣಬರುವ ವಿಶೇಷಗಳೆನಿಸಿದೆ. ಅಲಂಕಾರಗಳು ಕೈಕಡಗ, ಓಲೆಗಳಂತೆ ಇರುವುವು. ಹೀಗೆ ಪ್ರಾಚೀನರು ಹೇಳಿರುವುದನ್ನ ಗಮನಿಸಬಹುದು. ಹೀಗೆ ಅಲಂಕಾರಗಳು ಕಾವ್ಯಶರೀರದ ಒಡವೆಗಳೆನಿಸಿ ಕಾವ್ಯಕ್ಕೆ ಶೋಭೆಯನ್ನುಂಟು ಮಾಡುವುದರಿಂದ "ಅನಲಂಕೃತೀ ಪುನಃ ಕ್ವಾಪಿ" ಎಂದು ಕಾವ್ಯಲಕ್ಷಣದಲ್ಲಿ ಹೇಳಿದ್ದು ಸಹ ನಿರಾಕೃತವಾಗಿದೆ. ಹೀಗೆ ದೋಷ, ಗುಣ, ಅಲಂಕಾರ ಇವು ಕಾವ್ಯಕ್ಕೆ ಉತ್ಕರ್ಷವನ್ನು ಕೊಡುತ್ತದೆಯೇ ಹೊರೆತು ಕಾವ್ಯದ ಸ್ವರೂಪವನ್ನು ನಿರ್ಧರಿಸಲಾರವು ಎಂದು ವಿಶ್ವನಾಥನು ಮಮ್ಮಟನ ಕಾವ್ಯಲಕ್ಷಣದ ಪದಪದವನ್ನು ವಿಮರ್ಶಿಸಿ ಖಂಡಿಸಿದ್ದಾನೆ.

ವಿಶ್ವನಾಥನು ಮಮ್ಮಟನ ಕಾವ್ಯಲಕ್ಷಣ ಖಂಡಿಸಿರುವುದು ಎಷ್ಟು ಮೌಲಿಕವಾಗಿದೆ ಎಂಬುದನ್ನು ವಿವೇಚಿಸಲಾಗಿದೆ. "ಅದೋಷೌ", "ಸಗುಣೌ", "ಅನಲಂಕೃತೀ ಪುನಃ ಕ್ವಾಪಿ" ಎಂದು ಮಮ್ಮಟನು ಕೊಟ್ಟಿರುವ ಕಾವ್ಯಲಕ್ಷಣ ಪದಗಳನ್ನು ವಿಮರ್ಶಿಸಿರುವುದು ಸರಿಯಲ್ಲ. ಕಾರಣ ಮಮ್ಮಟನು 'ಅದೋಷೌ' ಎಂದು ಹೇಳಿರುವುದು 'ಸ್ಪುಟದೋಷರಹಿತ ವಾದವು' ಎಂಬುದೇ ಮಮ್ಮಟನಿಗಿದ್ದ ತಾತ್ಪರ್ಯವಾಗಿದೆ. ಸ್ಪೋಟವೆಂದರೆ ರಸಪ್ರತೀತಿಗೆ ತಡೆಯಾಗತಕ್ಕದ್ದು. ನಾವು ಸಾಮಾನ್ಯವಾಗಿ ದೋಷವೆಂದು ಕರೆಯುವುದು ಸಂದರ್ಭವಶದಿಂದ ಗುಣವಾಗಬಹುದೆಂಬ ಅಂಶವು ಮಮ್ಮಟನಿಗೂ ಸಹ ತಿಳಿದಿದೆ. ಇನ್ನು 'ಸಗುಣೌ' ಎಂಬುದಕ್ಕೆ ಮಮ್ಮಟನು ವಾಮನನು ನಿರೂಪಿಸಿರುವ ಇಪ್ಪತ್ತು ಶಬ್ದಗುಣ, ಅರ್ಥಗುಣಗಳನ್ನು ಮೂರೇ ಗುಣಗಳಿಗೆ ಇಳಿಸಿ, ಅವೆಲ್ಲವೂ ಮುಖ್ಯವಾಗಿ ರಸಧರ್ಮಗಳೆಂದೂ ಶಬ್ದಾರ್ಥಗಳಲ್ಲಿ ಇದೆಯೆಂದು ಔಪಚಾರಿಕವಾಗಿ ಮಮ್ಮಟನೇ

ನಿರ್ಣಯಿಸಿದ್ದಾನೆ.[೧೫] ಮಮ್ಮಟನು ತನ್ನ ಕಾವ್ಯಲಕ್ಷಣ ವಿವೇಚನೆಯಲ್ಲಿ ಶಬ್ದ, ಅರ್ಥ, ರಸ, ಧ್ವನಿ, ದೋಷ ಈ ವಿಚಾರಪ್ರಣಾಲಿಗಳಲ್ಲಿ ಯಾವುದೇ ಒಂದು ಸಿದ್ಧಾಂತಕ್ಕೆ ಸೀಮಿತವಾಗದೆ ವಿಬಿನ್ನ ಮತಗಳಲ್ಲಿಯ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ಅವುಗಳಲ್ಲಿ ಪರಸ್ಪರ ಹೊಂದಾಣಿಕೆಯನ್ನು ಸಾಧಿಸಿರುವಂತೆ ತನ್ನ ಕಾವ್ಯಲಕ್ಷಣವನ್ನು ಕೊಟ್ಟಿದ್ದಾನೆ. ಆ ಅರ್ಥದಲ್ಲಿಯೇ ಮಮ್ಮಟವನನ್ನು 'ಸಮನ್ವಯಕಾರ' ಎಂದಿದ್ದಾರೆ.

ಮಮ್ಮಟನ ಕಾವ್ಯಲಕ್ಷಣ 'ತದದೋಷೌಸಗುಣೌ' ಎಂಬುದು ಅಲಂಕಾರ, ರೀತಿ, ವಕ್ರೋಕ್ತಿಗಳ ಕುರಿತು ಮಮ್ಮಟನಿಗಿರುವ ಆಸಕ್ತಿಯನ್ನು ತೋರಿಸುತ್ತದೆ. ಕಾವ್ಯವನ್ನು ಮೂರು ಬಗೆಯಾಗಿ ವಿಭಾಗಿಸಿ ಉತ್ತಮ ಕಾವ್ಯವನ್ನು ಧ್ವನಿಕಾವ್ಯವೆಂದು ಕರೆದಿದ್ದಾನೆ. ಇಲ್ಲಿ ಮಮ್ಮಟನಿಗಿರುವ ಧ್ವನಿ ಪ್ರಸ್ಥಾನದ ಮೆಚ್ಚುಗೆಯು ವ್ಯಕ್ತವಾಗುತ್ತದೆ. ವಿಶ್ವನಾಥನು ಮಮ್ಮಟನ ಕಾವ್ಯಲಕ್ಷಣದಲ್ಲಿ ಕಾವ್ಯ ಜೀವಿತವಾದ ರಸಧ್ವನಿಯ ವಿಚಾರವನ್ನೇ ಎತ್ತಿಲ್ಲ ಎನ್ನುವುದು ಸಮ್ಮತವಾಗಿಲ್ಲ, ಏಕೆಂದರೆ ಧ್ವನಿ ಪ್ರಸ್ಥಾನವನ್ನು ಒಪ್ಪಿದ ಮಮ್ಮಟನು ರಸಸಿಧ್ಧಾಂತವನ್ನು ಒಪ್ಪಿಲ್ಲ ಎನ್ನುವುದು ಯಾವ ನ್ಯಾಯ? ಹಿಂದೆ ತಿಳಿಸಿರುವ ವಾಮನನು ನಿರೂಪಿಸಿದ ಇಪ್ಪತ್ತು ಶಬ್ಧ ಗುಣ ಅರ್ಥಗುಣಗಳನ್ನು ಮೂರೇ ಗುಣಗಳಿಗೆ ಇಳಿಸಿ ಅವೆಲ್ಲವೂ ಮುಖ್ಯವಾಗಿ ರಸಧರ್ಮಗಳೆಂದೂ ಶಬ್ಧಾರ್ಥಗಳಲ್ಲಿ ಇವೂ ಔಪಚಾ–ರಿಕವಾಗಿದೆ ಎಂದು ಮಮ್ಮಟನೇ ನಿರ್ಣಯಿಸಿದ್ದಾನೆ. [ಕಾವ್ಯಪ್ರಕಾಶ ೮ನೆ ಉಲ್ಲಾಸ] ಇದರಿಂದ ಮಮ್ಮಟನಿಗಿದ್ದ ರಸದ ಪರಿಕಲ್ಪನೆ ವ್ಯಕ್ತವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅಲಂಕಾರಕ್ಕೆ ಕಾವ್ಯದಲ್ಲಿ ನಿಯತಸ್ಥಾನವಿರಬೇಕಿಲ್ಲ ಎಂಬುದನ್ನು ಕ್ರೋಢೀಕರಿಸಿದ್ದಾನೆ. ಸಾಮಾನ್ಯವಾಗಿ ಅಲಂಕಾರವಿರಬೇಕೆಂಬುದೆ ತನ್ನ ಸೂತ್ರದ ಮಾತಿನ ಬಗೆಯಲ್ಲೇ ವ್ಯಕ್ತಪಡಿಸಿದ್ದಾನೆ. ಇದರ ಮೇಲಿನ ವೃತ್ತಿಯಲ್ಲಿ 'ಸರ್ವತ್ರಸಾಲಂಕೌರೌ' "ಎಲ್ಲಾ ಕಡೆಯಲ್ಲೂ ಶಬ್ಧಾರ್ಥಗಳು ಅಲಂಕಾರ ಸಹಿತವಾಗಿಯೇ ಇರುತ್ತವೆ" ಮತ್ತು "ಕ್ವಚಿತ್ತು ಸ್ಫುಟಾಲಂಕಾರ ವಿರಹೇ। ಪಿ ನ ಕಾವ್ಯತ್ವ ಹಾನಿಃ" "ಒಂದೊಂದು ಕಡೆ ಸ್ಫುಟವಾದ ಅಲಂಕಾರವಿಲ್ಲದಿದ್ದರೂ ಕಾವ್ಯತ್ವಕ್ಕೆ ಹಾನಿಯಿಲ್ಲ" ಎಂಬುದನ್ನು ಉದಾಹರಣೆ ಸಹಿತವಾಗಿ ವಿವರಿಸಿದ್ದಾನೆ.

**ಯಃ ಕೌಮಾರಹರಃ ಸ ಏವ ಹಿ ವರಸ್ತಾ ಏವ ಚೈತ್ರಕ್ಷಪಾಃ**
**ತೇ ಚೋನ್ಮೀಲಿತ ಮಾಲತೀ ಸುರಭಯಃ ಪ್ರೌಢಾಃ ಕದಂಬಾನಿಲಾಃ ।**
**ಸಾ ಚೈವಾಸ್ಮಿ ತಥಾಪಿ ತತ್ರ ಸುರತವ್ಯಾಪಾರಲೀಲಾವಿಧೌ**
**ರೇವಾರೋಧಸಿ ವೇತಸೀತರುತಲೇ ಚೇತಃ ಸಮುತ್ಕಂಠತೇ** [೧೬] ॥

"ನನ್ನ ಕೌಮಾರವನ್ನು ಹರಣಮಾಡಿದ ಅವನೇ ಈ ವರನು ಅವೇ ವಸಂತ ಮಾಸದ ರಾತ್ರಿಗಳು. ಅರಳಿದ ಮಾಲತೀ ಕುಸುಮಗಳ ಗಂಧವುಳ್ಳ ಪ್ರೌಢವಾದ ಕದಂಬ ವೃಕ್ಷದ ಮೇಲೆ ಬೀಸುತ್ತಿರುವ ಗಾಳಿಗಳು ಅವೇ. ಅವಳೇ ನಾನಿರುವೆನು. ಆದರೂ

ನನ್ನ ಮನಸ್ಸು ಆ ನರ್ಮದೆಯ ದಡದಲ್ಲಿ ಬಿದಿರು ಮೆಳೆಯ ಕೆಳಗೆ ಸುರತ ಕ್ರೀಡೆಯ ಲೀಲೆಗಾಗಿ ಹಾತೊರೆಯುತ್ತಿದೆ". ಇಲ್ಲಿ ಸ್ಫುಟವಾದ ಅಲಂಕಾರಯಾವುದೋ ಇಲ್ಲ. ರಸಕ್ಕೆ ಪ್ರಧಾನ್ಯವಿರುವ ಕಾರಣ ಇದನ್ನು ಅಲಂಕಾರವೆನ್ನಲಾಗದು.

ಮಮ್ಮಟನು ಹಿಂದಿನ ಲಾಕ್ಷಣಿಕರಾದ ಭಾಮಹ ದಂಡಿ, ವಾಮನ ಆನಂದವರ್ಧನ ಮುಂತಾದ ಅಲಂಕಾರಿಕರ ನಾನಾ ಮುಖಗಳಲ್ಲಿ ಬೆಳೆದುಬಂದ ವಿಚಾರಧಾರೆಗಳನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಕಾವ್ಯಪ್ರಕಾಶದಂತಹ ಅಲಂಕಾರ ಗ್ರಂಥವನ್ನು ರಚಿಸಿದ್ದಾನೆ. ಮಮ್ಮಟನು ಅಲಂಕಾರ, ಗುಣ, ರೀತಿ, ಧ್ವನಿ, ರಸ ಈ ಯಾವುದೇ ಒಂದು ಅಂಶಕ್ಕೆ ತನ್ನ ಕಾವ್ಯಲಕ್ಷಣವನ್ನು ಸೀಮಿತಗೊಳಿಸದೇ, ಈ ಎಲ್ಲಾ ಅಂಶಗಳನ್ನು ಸಮನ್ವಯವಾಗಿ ಒಪ್ಪಿಕೊಂಡು ಎಲ್ಲಾ ಪ್ರಸ್ಥಾನದವರೂ ಒಪ್ಪಬಹುದಾದ ಕಾವ್ಯಲಕ್ಷಣವನ್ನು ಸಂಶಯ ಕ್ಕೆಡೆಯಿಲ್ಲದಂತೆ ನಿಷ್ಕರ್ಷಿಸಿ ಕಾವ್ಯಲಕ್ಷಣವನ್ನು ನಿರೂಪಿಸುವುದೇ ಮಮ್ಮಟನ ಮುಖ್ಯ ಉದ್ದೇಶವಾಗಿದೆ.[೧೭] ಇಂಥ ಸಮನ್ವಯಕಾರ ಮಮ್ಮಟನ 'ಕಾವ್ಯಪ್ರಕಾಶ'ವು ಅತ್ಯಂತ ಲೋಕಪ್ರಿಯ ಗ್ರಂಥವಾಗಿದ್ದು ಲಬ್ಧ ವ್ಯಾಖ್ಯಾನಗಳೆಲ್ಲೆಲ್ಲ ಅತಿ ಪ್ರಾಚೀನವಾದ 'ಸಂಕೇತ'ವನ್ನು ಬರೆದ ಮಾಣಿಕ್ಯಚಂದ್ರನು 'ಸರ್ವಾಲಂಕೃತಿಪಾಲಭೂಷಣಮಣೌ ಕಾವ್ಯಪ್ರಕಾಶೇ" ಅಲಂಕಾರ ಗ್ರಂಥಗಳಿಗೆಲ್ಲ ಶಿರೋಭೂಷಣ ರತ್ನವೇ ಇದೆಂದು ಬಣ್ಣಿಸಿದ್ದಾನೆ. ನಂತರ ಬಂದ ವ್ಯಾಖ್ಯಾನಗಳು ಮಮ್ಮಟನನ್ನೇ ವಾಗ್ದೇವತಾರವೆಂದು ಕರೆದಿದ್ದಾರೆ. ಸಂಸ್ಕೃತಸಾಹಿತ್ಯದಲ್ಲಿ ಭಗವದ್ಗೀತೆಯನ್ನು ಬಿಟ್ಟರೆ ಮತ್ತ್ಯಾವ ಗ್ರಂಥಕ್ಕೂ ಕಾವ್ಯಪ್ರಕಾಶಕ್ಕಿರುವಷ್ಟು ಟೀಕೆ ಟಿಪ್ಪಣಿಗಳಿಲ್ಲ, ಇದರಿಂದಲೇ ಮಮ್ಮಟನ ಕಾವ್ಯಪ್ರಕಾಶನದ ಹಿರಿಮೆ ಗೊತ್ತಾಗುತ್ತದೆ. ಇತಂಹ ಪ್ರಖ್ಯಾತ ಅಲಂಕಾರಿಕನ ಲಕ್ಷಣವನ್ನು ವಿಶ್ವನಾಥನು ವಿಮರ್ಶಿಸಿ ಖಂಡಿಸಿರುವುದು ಎಷ್ಟು ಮೌಲಿಕವಾಗಿದೆ ಎಂದು ಮೇಲೆ ತಿಳಿಸಿರುವ ಅಂಶಗಳಿಂದ ನಿರೂಪಿಸಲಾಗಿದೆ.

"ಕಾವ್ಯಶಬ್ದೋऽಯಂ ಗುಣಾಲಂಕಾರ ಸಂಸ್ಕೃತಯೋ ಶಬ್ದಾರ್ಥಯೋರ್ವರ್ತತೆ" ಕಾವ್ಯ ಎಂಬ ಶಬ್ದವು ಗುಣಾಲಂಕಾರಗಳಿಂದ ಪರಿಷ್ಕಾರ ಹೊಂದಿದ ಶಬ್ದಾರ್ಥಗಳಿಗೆ ಅನ್ವಹಿಸುತ್ತದೆಂದು ಹೇಳಿ[೧೮], "ರೀತಿ ರಾತ್ಮ ಕಾವ್ಯಸ್ಯ" "ರೀತಿಯೇ ಕಾವ್ಯದ ಆತ್ಮ"[೧೯] ವಾಮನ ಈ ಕಾವ್ಯಲಕ್ಷಣವನ್ನು ವಿಶ್ವನಾಥನು ಟೀಕಿಸಿದ್ದಾನೆ. ರೀತಿ ಎಂಬುದು ಪದಗಳ ಜೋಡಣೆ ಆದ್ದರಿಂದ ಆತ್ಮವು ಇದಕ್ಕಿಂತ ಬೇರೆಯೇ ಆಗಿದೆ ಎಂಬುದೇ ವಿಶ್ವನಾಥನ ವಾದ, ಆದರೆ ವಾಮನನ ಪ್ರಕಾರ ಭಾಷೆಯ ವಿಶಿಷ್ಟ ಪದರಚನಾ ವಿನ್ಯಾಸವೇ ಕಾವ್ಯದ ಸರ್ವಸ್ವ ಆದ್ದರಿಂದಲೇ ಗುಣ ಸ್ವರೂಪದಿಂದ ಕೂಡಿದ ವಿಶಿಷ್ಟ ಪದ ರಚನೆಯೇ ರೀತಿ ಎಂದು ಹೇಳಿ ರೀತಿ ಮತ್ತು ಗುಣಗಳಿಗೆ ಅವಿನಾಭಾವ ಸಂಬಂಧವನ್ನು ಏರ್ಪಡಿಸಿದ್ದಾನೆ. ಮತ್ತು ಗುಣ, ಅಲಂಕಾರಗಳಲ್ಲಿ ನಿರ್ಧಿಷ್ಟವಾದ ವ್ಯತ್ಯಾಸಗಳನ್ನು ಗಮನಿಸಿ ಸ್ವಚ್ಚವಾಗಿ ಉಲ್ಲೇಖಿಸಿದ್ದಾನೆ. ಎಲ್ಲಕ್ಕಿಂತ ಮುಖ್ಯವಾಗಿ ತನ್ನ ಕಾವ್ಯ ಸಿದ್ಧಾಂತದಲ್ಲಿ "ರೀತಿಯೇ ಕಾವ್ಯದ ಆತ್ಮ" ಎಂದು ಹೇಳಿ ಕಾವ್ಯಕ್ಕೆ "ಆತ್ಮ"ವೊಂದಿದೆ ಎಂದು ಹೇಳಿದ ವಾಮನನ

ಮಾತು ಕಾವ್ಯಮಿಮಾಂಸಕರಲ್ಲಿ ಹೊಸ ಆಲೋಚನೆಗೆ ಕಾರಣವಾಯಿತು. ಇವನಿಗಿಂತ ಮುಂಚಿತವಾಗಿ ಬಂದ ಭಾಮಹನು ಕಾವ್ಯಕ್ಕೆ ಅಲಂಕಾರಗಳ ಅಗತ್ಯವನ್ನು, ದಂಡಿಯು ಗುಣ ಸಿದ್ಧಾಂತವನ್ನು ಪ್ರತಿಪಾದಿಸಿ ಸುಮ್ಮನಾದರು ಆದರೆ, ವಾಮನನು "ಆತ್ಮ" ಎಂಬ ಮಾತನು ತನ್ನ ಕಾವ್ಯ ಲಕ್ಷಣದಲ್ಲಿ ಮೊಟ್ಟಮೊದಲಿಗೆ ಪ್ರತಿಪಾದಿಸಿದನು. ಇವನ ಈ ಮಾತನ್ನು ಧ್ವನಿಕಾರನಾದ ಆನಂದವರ್ಧನ "ಕಾವ್ಯದ ಆತ್ಮ ಧ್ವನಿ" ಎಂದೂ ಸಾಹಿತ್ಯ ದರ್ಪಣಕಾರನಾದ ವಿಶ್ವನಾಥನು "ರಸಾತ್ಮಕವಾದ ವಾಕ್ಯವು ಕಾವ್ಯ" ಎಂದು ತಮ್ಮ ಕಾವ್ಯ ಸಿದ್ಧಾಂತದಲ್ಲಿ ಆತ್ಮ ಎಂಬ ಪದವನ್ನು ಬಳಸಿದ್ದಾರೆ. ಇತಂಹ ವಾಮನನ "ರೀತಿಯೇ ಕಾವ್ಯದ ಆತ್ಮ" ಎಂಬ ಕಾವ್ಯಲಕ್ಷಣವನ್ನು ವಿಶ್ವನಾಥನು ನಿರಾಕರಿಸುವುದು ಸಮ್ಮತವಲ್ಲ.

**ಶಬ್ದಾರ್ಥೌ ಸಹಿತೌಂ ಸಹಿತೌ ವಕ್ರಕವಿ ವ್ಯಾಪಾರಶಾಲಿನಿ**
**ಬಂದೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣೆ** ೨೦

"ವಕ್ರ ಕವಿ ವ್ಯಾಪಾರದಿಂದ ಕೂಡಿದ್ದು, ಬಲ್ಲವರಿಗೆ ಆಹ್ಲಾದವನ್ನುಂಟು ಮಾಡತಕ್ಕದ್ದೂ ಆದ ಬಂಧದಲ್ಲಿ ವ್ಯವಸ್ಥೆಗೊಂಡ ಶಬ್ದಾರ್ಥಗಳು ಒಟ್ಟಿಗೆ ಕಾವ್ಯ" ಎಂದು ಕುಂತಕನು ಕೊಟ್ಟಿರುವ ಕಾವ್ಯಲಕ್ಷಣವನ್ನು ವಿಶ್ವನಾಥನು ನಿರಾಕರಿಸಿದ್ದಾನೆ. ಏಕೆಂದರೆ ವಿಶ್ವನಾಥನ ಪ್ರಕಾರ ಅಲಂಕಾರವುಳ್ಳ ಶಬ್ದಾರ್ಥಗಳು ಕಾವ್ಯದಲ್ಲಿ ಉತ್ಕರ್ಷವನ್ನು ದೊರಕಿಸುತ್ತವೇಯೇ ಹೊರತು ಅದರ ಸ್ವರೂಪವನ್ನು ತಿಳಿಸಲಾರವು. ಆದ್ದರಿಂದ ವಕ್ರೋಕ್ತಿಯು ಒಂದು ಬಗೆಯ ಅಲಂಕಾರವೇ ಹೊರತು ಆತ್ಮವೆನಿಸಲಾರದೆಂದು ವಿಶ್ವನಾಥನು ಕುಂತಕನ ಕಾವ್ಯ ಲಕ್ಷಣವನ್ನು ಖಂಡಿಸಿದ್ದಾನೆ. ಕುಂತಕನು ಆನಂದವರ್ಧನ, ಅಭಿನವಗುಪ್ತರ ಧ್ವನಿ, ರಸ ತತ್ವಗಳನ್ನು ಆರಗಿಸಿಕೊಂಡು ಇವುಗಳಿಗಿಂತ ಭಿನ್ನವಾದ ರೀತಿಯಲ್ಲಿ ಮತ್ತು ವ್ಯಾಪಕವಾದ ಹಿನ್ನೆಲೆಯಲ್ಲಿ ಅಲಂಕಾರ ರೀತಿಗಳೆರಡನ್ನೂ ಒಳಗೊಳ್ಳುವಂತಹ ವಕ್ರೋಕ್ತಿ ತತ್ವವನ್ನು ಮಂಡಿಸಿದ್ದಾನೆ. ಕಾವ್ಯವನ್ನು ಕುರಿತ ಈತನ ಪ್ರಸಿದ್ಧ ಮಾತುಗಳು 'ಕವೇಃ ಕರ್ಮಕಾವ್ಯಂ', 'ಸಾಲಂಕರಸ್ಯ ಕಾವ್ಯತಾ' ಮತ್ತು 'ಶಬಾರ್ಥೌಸಹಿತೌ ವಕ್ರಕವಿವ್ಯಾಪಾರ ಶಾಲಿನೀ' ವಕ್ರೋಕ್ತಿಜೀವಿತ ಪ್ರಾರಂಭದಲ್ಲಿಯೇ ಹೇಳಿದ್ದಾನೆ. ಇದರಿಂದ ಕಾವ್ಯಕ್ಕೆ ಅಲಂಕಾರಗಳು ಅಗತ್ಯ ಅವು ಕವಿಮನೋಧರ್ಮ ಮತ್ತು ಕವಿಶಕ್ತಿಯಿಂದ ರೂಪು ಗೊಳ್ಳುತ್ತವೆ. ಅದಕ್ಕನುಗುಣವಾಗಿ ಭಾಷೆಯೂ ವಿಶಿಷ್ಟವಾಗುತ್ತದೆ. ಹೀಗೆ ಮೊದಲಾದ ಅಂಶಗಳನ್ನು ಸ್ಪಷ್ಟಪಡಿಸಿ ಕಾವ್ಯ ಸಾಮಾನ್ಯ ಭಾಷೆಯಿಂದ ಭಿನ್ನವಾಗಿದೆ. ಇದನ್ನು ಕವಿಕರ್ಮದಿಂದ ಮತ್ತು ಕವಿ ಮನೋಧರ್ಮದಿಂದ ಮೂಡಿದ ವಕ್ರೋಕ್ತಿ.

ವಾಮನನಂತೆ ರೀತಿಯನ್ನೇ ಕಾವ್ಯದ ಆತ್ಮವೆಂದು ಕುಂತಕನು ಹೇಳುವುದಿಲ್ಲ. ಮಾರ್ಗ ಮುಖ್ಯವಾದರೂ ಅದೇ ಸರ್ವಸ್ವವಲ್ಲ ಅದನ್ನು ನಿಯಂತ್ರಿಸಿದ ಕವಿ ಮನೋಧರ್ಮ ಮತ್ತು ಕವಿ ವ್ಯಾಪಾರ ವಕ್ರತೆ ಇವುಗಳ ಮಹತ್ವವನ್ನು ಎತ್ತಿ ಹಿಡಿದಿದ್ದಾನೆ. ಇವುಗಳಿಂದ ಮಾರ್ಗ ನಿರ್ಣಯವಾಗುವುದರಿಂದ ಅವುಗಳನ್ನು

ಭೌಗೋಳಿಕವಾಗಿ ವೈದರ್ಭಿ, ಗೌಡಿ ಇತ್ಯಾದಿಯಾಗಿ ಹೆಸರಿಸುವುದನ್ನ ಕುಂತಕನು ಒಪ್ಪಲಿಲ್ಲ. ಮೊಟ್ಟಮೊದಲ ಬಾರಿಗೆ ದೇಶವಾಚಕವನ್ನು ಕಾವ್ಯಮಾರ್ಗಕ್ಕೆ ನಿರಾಕರಿಸಿ, ಅದನ್ನು ಕವಿಮನೋಧರ್ಮ ದೊಡನೆ ಸಂಗತಗೊಳಿಸಿದ ಹಿರಿಮೆ ಕುಂತಕನದು. ಇತಂಹ ಕಾವ್ಯಲಕ್ಷಣವನ್ನು ಶ್ರದ್ಧಾಪೂರ್ವಕವಾಗಿ ರಚಿಸಿ, ಅದರ ಒಂದೊಂದು ಮಾತಿನ ಅರ್ಥವನ್ನು ಪ್ರಯೋಜನವನ್ನು ವಿವರಿಸಿ ಸಮರ್ಥಿಸಿದ ಮೊದಲ ಲಕ್ಷಣಕಾರನೆಂದರೆ ಕುಂತಕನೇ ಆಗಿದ್ದಾನೆ. ಇವನ ಕಾವ್ಯಲಕ್ಷಣ ಖಂಡನೆಯನ್ನು ಖಂಡಿಸಿರುವುದು ವಿಶ್ವನಾಥನ ಮಟ್ಟಿಗೆ ಸಮ್ಮತವಾಗಿಲ್ಲ.

ಧ್ವನಿಕಾರ ಆನಂದವರ್ಧನನು “ಕಾವ್ಯಸ್ಯಾತ್ಮಾಧ್ವನಿಃ” “ಕಾವ್ಯಕ್ಕೆ ಧ್ವನಿಯೇ ಆತ್ಮ” ಎಂದು ಕಾವ್ಯ ಲಕ್ಷಣವನ್ನು ಕೊಟ್ಟಿರುವುದನ್ನು ವಿಶ್ವನಾಥನು ವಿಮರ್ಶಿಸಿದ್ದಾನೆ. ಇಲ್ಲಿ ವಸ್ತು, ಅಲಂಕಾರ, ರಸ, ಈ ಮೂರು ಧ್ವನಿಗಳನ್ನು ಕಾವ್ಯದ ಆತ್ಮವೆಂದೂ ಅಂಗೀಕ–ರಿಸಬೇಕೇ ಅಥವಾ ರಸಧ್ವನಿಯೊಂದೆ ಆತ್ಮವೆನ್ನುವುದನ್ನು ಅಭಿನವಗುಪ್ತನು ಹಿಂದೆಯೇ ಇದಕ್ಕೆ ಉತ್ತರ ಕೊಟ್ಟಿದ್ದಾನೆ. ವಿಶ್ವನಾಥನು ಇದೇ ದಾರಿಯಲ್ಲಿ ನಡೆದು ಧ್ವನ್ಯಾಲೋಕದಲ್ಲಿ ರಸಪಕ್ಷಪಾತವನ್ನು ಸೂಚಿಸಿರುವ ವಾಕ್ಯಗಳಿರುವುದನ್ನು ನಿರ್ದೇಶಿಸಿ ರಸವೊಂದೇ ಕಾವ್ಯದ ಅತ್ಮವೆಂದು ಸೂತ್ರಿಸಿದ್ದಾನೆ. ಇದರ ಮೇಲೆ ಬರುವ ಆಕ್ಷೇಪಣೆಗಳಿಗೆ ವಿಶ್ವನಾಥನೆ ಉತ್ತರವನ್ನು ಕೊಟ್ಟಿದ್ದಾನೆ. ರಸವುಳ್ಳದ್ದೇ ಕಾವ್ಯವಾದರೆ, ಒಂದು ಪ್ರಬಂಧದಲ್ಲಿ ನಡುವೆ ಬರುವ ನೀರಸ ಪದ್ಯಗಳ ಗತಿಯೇನು ಎಂದರೆ ರಸವತ್ತಾದ ಪದ್ಯದಲ್ಲಿರುವ ಕೆಲವು ನೀರಸ ಪದಗಳಿಗೆ ಒಟ್ಟು ಪದದಿಂದ ಹೇಗೆ ಪುಷ್ಟಿ ಬರುತ್ತದೆಯೋ ಹಾಗೆಯೇ ಒಟ್ಟು ಪ್ರಬಂಧದ ರಸದಿಂದ ಇವಕ್ಕೂ ಕಾವ್ಯತ್ವ ಬರುತ್ತದೆ. ಕೆಲವು ಪದ್ಯಗಳು ನೀರಸವಾದರೂ ಗುಣವ್ಯಂಜಕವಾದ ವರ್ಣರಚನೆ, ಅಲಂಕಾರಗಳು ಇದ್ದು ದೋಷವಿಲ್ಲದಿದ್ದರೆ ಇದನ್ನು ಔಪಚಾರಿಕವಾಗಿಯೇ ‘ಕಾವ್ಯ’ ಎನ್ನಬಹುದು ಎಂಬುದು ವಿಶ್ವನಾಥನು ಧ್ವನಿಕಾರನ ಕಾವ್ಯಲಕ್ಷಣವನ್ನು ಸಂಪೂರ್ಣವಾಗಿ ಗೌರವಿಸಿದ್ದಾನೆ.

ವಿಶ್ವನಾಥನು ‘ವಾಕ್ಯಂ ರಸಾತ್ಮಕಂ ಕಾವ್ಯಂ’ ಎಂದು ಕಾವ್ಯಲಕ್ಷಣವನ್ನು ಹೇಳಿದರೂ “ತಯೋಃ ಕಾವ್ಯ ಸ್ವರೂಪತ್ವೇನ ಅಭಿಮತಯೋಃ ಶಬ್ದಾರ್ಥಯೋಃ”ಎಂದು ಅವನೇ ಒಂದು ಕಡೆ ಹೇಳಿರುವುದರಿಂದ ಅವನ ಮತದಲಿಯೂ ಶಬ್ದಾಥ–ರ್ಯಯುಗಳಕ್ಕೆ ಕಾವ್ಯಸಂಜ್ಞೆ ಎಂಬುದು ತಿಳಿಯುತ್ತದೆ. ಇಲ್ಲಿಗೆ ವಿಶ್ವನಾಥನು ಮಮ್ಮಟ, ಕುಂತಕ, ವಾಮನನ ಕಾವ್ಯಲಕ್ಷಣವನ್ನು ವಿಮರ್ಶಿಸಿ, ಧ್ವನಿಕಾರ ಆನಂದವರ್ಧನನ ಧ್ವನಿ ಸಿದ್ಧಾಂತವನ್ನು ಗೌರವಿಸಿರುವುದನ್ನು ಹಿಂದಿನ ಕಾವ್ಯಲಂಕಾರಿಕರು ಕೊಟ್ಟಿರುವ ಕಾವ್ಯಲಕ್ಷಣವನ್ನ ಹಿನ್ನೆಲೆಯಾಗಿಟ್ಟುಕೊಂಡಿರುವುದನ್ನ ವಿಮರ್ಶಿಸಲಾಗಿದೆ.

### ವ್ಯಾಕ ಸ್ವರೂಪ

“ವಾಕ್ಯಂಸ್ಯಾತ್ ಯೋಗ್ಯತಾಕಾಂಕ್ಷಾಸತ್ತಿಯುಕ್ತಃ ಪದೋಚ್ಚಯಃ”

[‘ಸಾಹಿತ್ಯ ದರ್ಪಣ, ೨.೧]

"ಯೋಗ್ಯತೆ, ಆಕಾಂಕ್ಷೆ, ಆಸಕ್ತಿಗಳಿಂದ ಕೂಡಿರುವ ಪದಗಳ ಸಮೂಹವೇ "ವಾಕ್ಯ" ಇಲ್ಲಿ ವಾಕ್ಯದ ಸ್ವರೂಪವನ್ನು ತಿಳಿಯುವ ಮೊದಲು ವಾಕ್ಯದಲ್ಲಿ ಬರುವ ಪದಗಳ ಸ್ವರೂಪವನ್ನು ತಿಳಿಯುವುದು ಸಮಜಂಸವಾಗಿದೆ. ಆದರೆ, ಭಾಷಾವ್ಯವಹಾರದಲ್ಲಿ ನಾವು ಉಪಯೋಗಿಸುವುದು ವಾಕ್ಯಗಳನ್ನು ಹೊರತು ಬಿಡಿಬಿಡಿಯಾದ ಪದಗಳನ್ನಲ್ಲ "ನಕ್ಷತ್ರ ಮಿನುಗುತ್ತದೆ", "ಅವಳು ಮನೆಗೆ ಹೋದಳು", "ನನ್ನ ಜೊತೆಯಲ್ಲಿ ನೀನೂ ಬಂದರೆ ಎಷ್ಟು ಚೆನ್ನಾಗಿರುತ್ತದ". ಈ ಮೊದಲಾದ ವಾಕ್ಯಗಳನ್ನು ಕೇಳಿದಾಗ ಅರ್ಥವನ್ನು ಹೇಗೆ ಗ್ರಹಿಸುತ್ತೇವೆ. ಪದಗಳ ಅರ್ಥವನ್ನು ಬೇರೆ ಬೇರೆಯಾಗಿ ಮೊದಲು ತಿಳಿದುಕೊಂಡು ನಂತರ ವಾಕ್ಯದಲ್ಲಿ ಅವುಗಳಿಗಿರುವ ಸಂಬಂಧವನ್ನು ಅರಿತುಕೊಳ್ಳುತ್ತೇವೆಯೋ, ಅಥವಾ ಒಟ್ಟು ವಾಕ್ಯದ ಅರ್ಥವನ್ನೇ ಅಖಂಡವಾಗಿ ಗ್ರಹಿಸುತ್ತೇವೆಯೋ ಈ ವಿಷಯದಲ್ಲಿ ಹಿಂದಿನಿಂದಲೂ ಚರ್ಚೆ ನಡೆದಿದೆ.

ವಾಕ್ಯದಲ್ಲಿ ಸೇರಿರುವ ಪದಗಳು  ಬಿಡಿ ಬಿಡಿಯಾಗಿ ತಮ್ಮ ಅರ್ಥವನ್ನು ಸೂಚಿಸಿದಷ್ಟಕ್ಕೆ ಅವುಗಳ ಅಭಿಧಾವೃತ್ತಿ ಮುಗಿಯುತ್ತದೆ. "ನಕ್ಷತ್ರ ಮಿನುಗುತ್ತದೆ" ಎಂಬ ವಾಕ್ಯವನ್ನೇ ನೋಡಿದರೆ, ಇಲ್ಲಿ "ಮಿನುಗುತ್ತದೆ" ಎಂಬ ಪದವು ಕ್ರಿಯೆಯನ್ನು "ನಕ್ಷತ್ರ" ಎಂಬುದು ಕರ್ತೃವಾದ ಒಂದು ವಸ್ತುವನ್ನೂ ತಮ್ಮ ತಮ್ಮ ಅಭಿಧಾವೃತ್ತಿಯಿಂದ ತಿಳಿಸುತ್ತದೆ. ಮಿನುಗುವ ಕ್ರಿಯೆ ನಡೆಯುತ್ತದೆ.  ನಕ್ಷತ್ರ ಯಾವುದೋ ಒಂದು ಕ್ರಿಯೆಗೆ ಕರ್ತೃ ಎಂದಿಷ್ಟು ಮಾತ್ರ ನಮಗೆ ತಿಳಿಯಿತು. ಈ ಕ್ರಿಯೆಗೂ ಮತ್ತು ಕರ್ತೃವಿಗೂ ವಿಶಿಷ್ಟ ಸಂಬಂಧವಿದೆ. ಮಿನುಗುವ ಕ್ರಿಯೆಗೆ ನಕ್ಷತ್ರವೇ ಕರ್ತೃ ಎಂಬುದು ಇಲ್ಲಿ ಇನ್ನೂ ಗೊತ್ತಾಗಲಿಲ್ಲ. ಆದರೆ ಇದನ್ನು ತಿಳಿಸುವುದೇ ವಾಕ್ಯದಲ್ಲಿ ಸೇರಿರುವ ಪದಗಳ ಈ ವಿಶಿಷ್ಟ ಸಂಬಂಧಕ್ಕೆ "ಸಂಸರ್ಗ"ವೆಂದು ಹೆಸರು ಈ ಸಂಸರ್ಗವನ್ನು ತಿಳಿಸುವ ಶಕ್ತಿ 'ಅಭಿಧಾವೃತ್ತಿಗಿಲ್ಲ' ಅದಕ್ಕಾಗಿ ತಾತ್ಪರ್ಯವೃತ್ತಿಯೆಂಬ ಬೇರೊಂದು ಶಬ್ದ ವ್ಯಾಪಾರವೇ ಉಂಟು, ಆ ಮೂಲಕ ಹೊರಡುವ ಅರ್ಥಕ್ಕೆ ತಾತ್ಪಾರ್ಯಾರ್ಥವೆಂದು ಹೆಸರು. ವಾಕ್ಯದ ಪದಗಳಿಂದ ಮೊದಲು ಒಂದೊಂದು ವಾಚ್ಯಾರ್ಥ ಹೊರಡುತ್ತದೆ. ನಂತರ ಇವುಗಳ ಅನ್ವಯರೂಪವಾದ ತಾತ್ಪರ್ಯಾರ್ಥವನ್ನು ಗ್ರಹಿಸುತ್ತೇವೆ. ಹೀಗೆನ್ನುವುದು ಈ ಸಂಪ್ರದಾಯದವರ ಮತ, ಇವರಿಗೆ ಅಭಿಹಿತಾನ್ವಯವಾದಿಗಳೆಂದು ಹೆಸರು.[೨] ಅನಂದವರ್ಧನ ಅಭಿನವಗುಪ್ತ, ಮಮ್ಮಟ, ಮೊದಲಾದ ಅಲಂಕಾರಿಕರು ಈ ಮತವನ್ನೇ ಮುಖ್ಯವಾಗಿ ಅನುಸರಿಸಿದ್ದಾರೆ.

ವಾಚ್ಯಾರ್ಥ, ತಾತ್ಪರ್ಯಾರ್ಥ ಇವೆರಡರನ್ನೂ ಬೇರೆ ಬೇರೆಯಾಗಿ ತಿಳಿಸಿ. ಅಭಿಧಾವೃತ್ತಿಯ ಜೊತೆಗೆ ತಾತ್ಪರ್ಯಾವೃತ್ತಿಯೆಂಬುದು ಉಂಟೆಂದು ಭಾವಿಸುವುದು. ಅನಾವಶ್ಯಕ. ಏಕೆಂದರೆ ಸಾಮಾನ್ಯ ವ್ಯವಹಾರದಲ್ಲಿ ಬಿಡಿ ಪದದ ಕಡೆಗೆ ಮೊದಲು ಗಮನ ಕೊಡುವ ಪರಿಸ್ಥಿತಿಯೇ ಇಲ್ಲ. ವ್ಯವಹಾರದಲ್ಲಿ ಮಾತ್ರವಲ್ಲ. ಅಲೋಚನೆಯಲ್ಲಿ ಕೂಡ ಮೂಲಾಂಶವು ವಾಕ್ಯವೇ ಹೊರತು ಪದವಲ್ಲ. ಇದು ಆಧುನಿಕ ಭಾಷಾಶಾಸ್ತ್ರಕ್ಕೆ

ಸಮ್ಮತವಾದ ವಿಷಯ. ಆದ್ದರಿಂದ ಪದವನ್ನು ಪ್ರತ್ಯೇಕವಾಗಿ ಗ್ರಹಿಸದೆ ವಾಕ್ಯವನ್ನೇ ಸಮಗ್ರವಾಗಿ ಅರ್ಥೈಸಿಕೊಳ್ಳುವುದರಿಂದ ಅಭಿಹಿತಾನ್ವಯ ವಾದಿಗಳು ಹೇಳಿರುವ ತಾತ್ಪರ್ಯವೃತ್ತಿ ಅನಾವಶ್ಯಕ ಎಂಬುದು ಇವರ ವಾದ. ಇನ್ನು ಅನ್ವಯ ವಿಶಿಷ್ಟವಾಗಿಯೇ ವಾಕ್ಯದ ಪದಗಳ ಅರ್ಥವನ್ನು ಗ್ರಹಿಸುತ್ತೇವೆ. ಆದ ಕಾರಣ ಪದಗಳ ಅರ್ಥವೇ ವಾಕ್ಯದ ಅರ್ಥ[೨೨], ಇವೆರಡೂ ಬೇರೆ ಬೇರೆಯಲ್ಲ ಎಂಬುದು ಅನ್ವಿತಾಭಿಧಾನ ವಾದಿಗಳ[೨೩] ಮತ. ವೈಯಾಕರಣರು ಇವರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ವಾಕ್ಯದ ಆರ್ಥವು ಅಖಂಡವಾಗಿ ತಿಳಿಯುವುದೆಂದೇ ಇವರ ಪರಮ ಸಿದ್ಧಾಂತ, "ಮಿನುಗುತ್ತದೆ" ಎಂಬ ಪದ ಕಿವಿಗೆ ಬಿದ್ದಾಗ ಅವುಗಳಲ್ಲಿ ಪ್ರಕೃತಿಭಾಗ ಪ್ರತ್ಯಯ ಭಾಗಗಳನ್ನು ವಿಂಗಡಿಸಿ ನೋಡದೆ ಹೇಗೆ ಪದದ ಒಟ್ಟು ಅರ್ಥವನ್ನು ಒಮ್ಮೆಗೇ ಗ್ರಹಿಸುತ್ತೇವೆ. ಪದ ಪದದ ಅರ್ಥವೇನೆಂದು ಬಿಡಿಸಿ ನೋಡುವುದಿಲ್ಲ. ವಾಕ್ಯದಲ್ಲಿ ಪದವನ್ನು ವಿಂಗಡಿಸುವುದೂ ಪದದಲ್ಲಿ ಪ್ರಕೃತಿ ಪ್ರತ್ಯಯಾದಿಗಳನ್ನು ವಿಂಗಡಿಸುವುದು, ಸಂಧ್ಯಕ್ಷರಗಳಲ್ಲಿ ವರ್ಣಗಳನ್ನು ವಿಂಗಡಿಸುವುದು ಒಂದೇ ಇವೆಲ್ಲ ಕಲ್ಪಿತ ಅಜ್ಞರಿಗೆ ವಿಷಯವನ್ನು ತಿಳಿಸುವುದಕ್ಕಾಗಿ ಈ ರೀತಿ ವಿಭಾಗಿಸಲಾಗಿದೆ.[೨೪] ಹೀಗೆ ವಾಕ್ಯದಲ್ಲಿ ಪದ ವಿಭಾಗವೇ ಕೃತಕವಾದ ಮೇಲೆ ಅರ್ಥವಿಭಾಗಕ್ಕೆ ಜಾಗವೆಲ್ಲಿ? ವಾಕ್ಯದಲ್ಲಿ ಪದಗಳು ಅನ್ವಯ ಹೊಂದಿಯೇ ಅರ್ಥ ಕೊಡುವುದರಿಂದ ವಾಚಾರ್ಥದಲ್ಲೇ ಪದ, ವಾಕ್ಯ ಎರಡರ ಅರ್ಥವನ್ನೂ ಸೇರಿಸಬಹುದು. ತಾತ್ಪರ್ಯಾರ್ಥವೆಂಬುದನ್ನು ಬೇರೆ ಗಣನೆಯೇ ಮಾಡಬೇಕಾಗಿಲ್ಲ. ಅಭಿಧಾವೃತ್ತಿಯೇ ವಾಕ್ಯದ ಅರ್ಥವನ್ನು ತಿಳಿಸುತ್ತದೆ. ಆದರಿಂದ ಭಾಷೆಯಲ್ಲಿ ವಾಕ್ಯವೇ ಮುಖ್ಯ ಪದಗಳು. ಇದರ ಅವಯವಗಳು. ಇಲ್ಲಿಗೆ ಅಭಿಹಿತಾನ್ವಯವಾದಿ, ಅನ್ವಿತಾಭಿಧಾನವಾದಿ ಮತ್ತು ಆಧುನಿಕ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದಂತೆ ಪದ ವಾಕ್ಯಗಳಿಗಿರುವ ಅಭಿಪ್ರಾಯವನ್ನು ವಿವೇಚಿಸಲಾಯಿತು.

ವಿಶ್ವನಾಥನ ಪ್ರಕಾರ ವಾಕ್ಯವೆಂದರೆ "ಯೋಗ್ಯತೆ, ಆಕಾಂಕ್ಷೆ, ಆಸಕ್ತಿ ಇವುಗಳಿಂದ ಕೂಡಿರುವ ಪದಗಳ ಸಮೂಹವೇ ವಾಕ್ಯ" ಎಂದು ವ್ಯಾಖ್ಯಾನಿಸಿದ್ದಾನೆ. ಯೋಗ್ಯತೆ ಎಂದರೆ ಪದಗಳ ಅರ್ಥಗಳು ಒಂದಕ್ಕೊಂದು ಸಂಬಂಧಿಸಲ್ಲಿಕ್ಕೆ ಯಾವ ಅಡಚಣೆ ಆಗದಿರುವುದೇ ಯೋಗ್ಯತೆ, ಉದಾಹರಣೆಗೆ 'ಅವನು ನೀರನ್ನು ತಿಂದನು' ಈ ಪದ ಸಮುದಾಯ ಗಮನಿಸಿದರೆ ಇಲ್ಲಿ ವ್ಯಾಕರಣದೋಷ ಯಾವುದೋ ಇಲ್ಲ. ಕರ್ತೃ, ಕರ್ಮ, ಕ್ರಿಯೆ ಎಲ್ಲವೂ ಸರಿಯಾಗಿದೆ. ಆದರೆ, ಹೀಗೆ ಯಾರಾದರೂ ಹೇಳಿದರೆ, ಅಸಂಬದ್ಧವಾಗುತ್ತದೆ. ದ್ರವ ಪದಾರ್ಥವಾದ ನೀರನ್ನು "ತಿನ್ನು"ವುದು ಹೇಗೆ? ಇಲ್ಲಿ ಕರ್ಮವಾದ ವಸ್ತುವಿಗೂ ಅದಕ್ಕೆ ಅನ್ವಯಿಸಬೇಕಾದ ಕ್ರಿಯೆಗೂ ವಿರೋಧವಿರುವುದ–ರಿಂದ ಅರ್ಥವು ಸಮಂಜಸವಾಗುವುದಿಲ್ಲ. ವಾಕ್ಯ ಸಿದ್ಧಿಸುವುದಿಲ್ಲ. ವಾಕ್ಯಕ್ಕೆ ಅವಶ್ಯಕವಾದ "ಯೋಗ್ಯತೆ"ಗೆ ಇಲ್ಲಿ ಭಂಗ ಬಂದಿದೆ. ಆದ್ದರಿಂದ ಯೋಗ್ಯತೆ ಎಂದರೆ ವಾಕ್ಯದಲ್ಲಿ ಸೇರುವ ಪದಗಳ ಅರ್ಥಗಳು ಒಂದರೊಡನೊಂದು ವಿರೋಧವಿಲ್ಲದೇ

ಹೊಂದಿ ಕೊಂಡಿರುವುದು. ಆಕಾಂಕ್ಷೆ, ವಾಕ್ಯದ ಪದಗಳು ಅರ್ಥದ ಹೊಂದಿಕೆಗಾಗಿ ಒಂದನ್ನೊಂದು ಕೋರುವುದೇ ಆಕಾಂಕ್ಷೆ. ಉದಾಹರಣೆಗೆ "ಮಗುವನ್ನು ಎತ್ತಿಕೋ" ಎಂಬ ವಾಕ್ಯದಲ್ಲಿ "ಎತ್ತಿಕೋ" ಎಂಬ ಕ್ರಿಯೆಯ ಅರ್ಥವು ಹೊಂದಿಕೆಯಾಗಲು ಮಗುವನ್ನು ಎಂಬ ಕರ್ಮಪದಬೇಕು. "ಮಗುವಿಗೆ" ಅಥವಾ "ಮಗುವಿನ" ಎಂಬ ಬೇರೆ ವಿಭಕ್ತಿಯ ಪದವನ್ನು ಉಪಯೋಗಿಸಿದರೆ ಆಕಾಂಕ್ಷೆ ಕೆಡುತ್ತಿತ್ತು. ಆದರಿಂದಲೇ ಆಕಾಂಕ್ಷೆ ಎಂದರೆ ಒಂದು ಕಡೆ ಉಪಯೋಗಿಸುವ ಪದಗಳ ಅರ್ಥಗಳು ಕೇಳುವವನ ಸ್ಥಿತಿಗೆ ಗೋಚರವಾಗುವ ಸ್ಥಿತಿಯೇ ಆಕಾಂಕ್ಷೆ. ಅಂದರೆ ಇದು ಕೇಳುವವನ ಇಚ್ಛೆಯನ್ನು ಅವಲಂಬಿಸಿರುವುದು. ಒಂದೇ ಕೆಲಸವು ಯಾರಿಂದ ಏತಕ್ಕಾಗಿ ಆಯಿತೆಂಬ ಜಿಜ್ಞಾಸೆಯೇ ಆಕಾಂಕ್ಷೆ, ಇದಿಲ್ಲದ ಪದಸಮೂಹವು ಅಂದರೆ, ಗೋವು, ಕುದುರೆ, ಗಂಡಸು, ಆನೆ, ಇಥಂಹ ಪದಗಳು ಒಟ್ಟಿಗೆ ಸೇರಿದರೆ ವಾಕ್ಯವಾಗುವುದಿಲ್ಲ. ಆಸಕ್ತಿ ಕೇಳುವವರಿಗೆ ಪದಾರ್ಥಗಳ ಜ್ಞಾನವು ಯಾವ ಆಡಚಣೆಯಿಲ್ಲದೇ ಆಗುವುದೇ ಆಸಕ್ತಿ, ಉದಾಹರಣೆಗೆ "ಮಗುವನ್ನು" ಎಂದು ಈಗ ಹೇಳಿ ಇನ್ನೊಂದು ಘಂಟೆಯಾದ ಬಳಿಕ "ಎತ್ತಿಕೋ" ಎಂದು ಹೇಳಿದರೆ ಇವೆರಡೂ ಕೂಡಿ ವಾಕ್ಯವಾಗಲಾರದು. ಆದರಿಂದಲೇ ವಾಕ್ಯದ ಪದಗಳು ಒಂದಕ್ಕೂ ಮತ್ತೊಂದಕ್ಕೂ ನಡುವೆ ಅವಲಂಬಿತವಾಗದಂತೆ ಉಚ್ಚರಿತವಾಗಿ ಕಿವಿಗೆ ಬೀಳಬೇಕು. ಇದನ್ನೇ ಆಸಕ್ತಿ ಎನ್ನಲಾಗಿದೆ.

ಪದಗಳನ್ನು ಒಂದಾದ ಮೇಲೊಂದನ್ನು ಉಚ್ಚರಿಸಿದರೆ ಮಾತ್ರವೇ ಅವುಗಳ ಜ್ಞಾನವು ಬುದ್ಧಿಯಲ್ಲಿ ತೋರುತ್ತದೆ. ಪದಗಳಿಗೆ ಇವು ಇದ್ದೇ ಇರಬೇಕು. ಆಕಾಂಕ್ಷೆ ಎಂಬುದು ಕೇಳುವವನ ಮತ್ತು ಹೇಳುವವನ ಆತ್ಮದಲ್ಲಿರುವ ಧರ್ಮವಾದರೆ ಯೋಗ್ಯತೆ ಎಂಬುದು ವಸ್ತುವಿನಲ್ಲಿರುವ ಧರ್ಮ, ಆದರೂ ಇವು ಪದಗಳ ರಾಶಿಗೆ ಸಂಬಂಧಿಸಿದೆ ಎಂದು ಹೇಳಿದ್ದು ಗೌಣವಾಗಿದೆ. (ಅಪ್ರಧಾನವಾಗಿದೆ.) ಎಂದು ಹೇಳಿ ಇವೆರಡೂ ಸಹ ಪದಗಳ ಸಮೂಹಕ್ಕೆ ಸೇರಿದ್ದರಿಂದ ಈ ರೀತಿ ಹೇಳಲಾಗಿದೆ. ವಾಕ್ಯಗಳ ರಾಶಿಯೇ ಮಹಾಕಾವ್ಯ ಇಲ್ಲಿಯೂ ಸಹ ಪದಗಳಿಗಿರುವಂತೆ ಯೋಗ್ಯತೆ, ಆಕಾಂಕ್ಷೆ, ಆಸಕ್ತಿಗಳು, ಇರಬೇಕು. ಹೀಗೆ ವಾಕ್ಯವು ಸಾಮಾನ್ಯ ವಾಕ್ಯ, ಮಹಾವಾಕ್ಯವೆಂದು ಎರಡು ಬಗೆಯಾಗಿರುತ್ತದೆ. ವಾಕ್ಯಗಳು ತಮ್ಮ ಅರ್ಥವನ್ನು ತಿಳಿಸಿಯಾದ ಮೇಲೆ ಒಂದು ಪ್ರಧಾನವಾಗಿಯೂ ಮತ್ತೊಂದು ಅಪ್ರಧಾನವಾಗಿದ್ದರೆ ಆಸ್ಥಿತಿಯನ್ನವಲಂಬಿಸಿ ಒಟ್ಟುಗೂಡಿ ಒಂದು ವಾಕ್ಯವಾಗಿ ತೋರುವುದೇ ಮಹಾಕಾವ್ಯವಾಗಿದೆ. "ಶೂನ್ಯಂ ವಾಸಗೃಹಂ" ಇತ್ಯಾದಿ ಪದವು ವಾಕ್ಯವೆನಿಸಿದೆ. ಇತಂಹ ಪದ್ಯಗಳನ್ನೊಳಗೊಂಡ ರಾಮಾಯಣ, ಮಹಾಭಾರತ, ರಘುವಂಶ ಮೊದಲಾದವು ಮಹಾವಾಕ್ಯವಾಗಿದೆ.

ಇನ್ನು ಪದಗಳ ಸಮೂಹವೇ ವಾಕ್ಯವೆಂದು ಹೇಳಿದ್ದರಿಂದ ಪದದ ಸ್ವರೂಪವನ್ನು ವಿಶ್ವನಾಥನು ಇಲ್ಲಿ ತಿಳಿಸಿದ್ದಾನೆ. ವಾಕ್ಯದಲ್ಲಿ ಪ್ರಯೋಗಿಸಲರ್ಹವಾಗಿದ್ದು, ಒಂದಕ್ಕೊಂದು

ಸಂಬಂಧಿಸಲಿರುವ ಒಂದೇ ಬಗೆಯ ಅರ್ಥವನ್ನು ತಿಳಿಸುವ ವರ್ಣಗಳೇ ಪದವೆನಿಸುತ್ತವೆ. ಘಟ ಎಂಬುದು ಘ, ಟ ಎಂಬ ಎರಡು ವರ್ಣಗಳಿಂದ ಕೂಡಿ ಪದವೆನಿಸಿದೆ. ಹಿಗೆ ಹೇಳಿದ್ದರಿಂದ ವಾಕ್ಯದಲ್ಲಿ ಪ್ರಯೋಗಿಸಲಿಕ್ಕಾಗದಿರುವ ಪ್ರಾತಿಪದಕವು (ಶಬ್ದದ ಮೂಲರೂಪ) ಪದವೆನಿಸುವುದಿಲ್ಲ. ವಾಕ್ಯ ಮಹಾವಾಕ್ಯಗಳು ಒಂದಕ್ಕೊಂದು ಹೊಂದಿಕೊಂಡಿರುವ ಅರ್ಥವನ್ನೇ ತಿಳಿಸುವುದರಿಂದ ಪದವೆನಿಸುವುದಿಲ್ಲ ಒಂದೇ ಅರ್ಥವನ್ನು ಬೋಧಿಸಬೇಕೆಂದು ಹೇಳಿದ್ದರಿಂದ ಕಚಟತಪ ಎಂಬವು ಯಾವ ಆರ್ಥವನ್ನು ಬೋಧಿಸದಿರುವ ಪ್ರಯುಕ್ತ ಪದವೆನಿಸುವುದಿಲ್ಲ. ಮೂಲದಲ್ಲಿ ವರ್ಣಾಃ ಎಂದು ಬಹುವಚನ ಹೇಳಿದ್ದರೂ ಅನೇಕ ಪದ ವಾಕ್ಯಗಳು ಇರಬೇಕೆಂಬ ನಿರ್ಬಂಧವೇನೂ ಇಲ್ಲ. ಒಂದೇ ವರ್ಣವೂಸಹ ಪದವೆನಿಸಬಹುದು. ಇಲ್ಲಿಗೆ ವಾಕ್ಯ, ವಾಕ್ಯದ ಸ್ವರೂಪ, ಪದ, ಪದದ ಸ್ವರೂಪವನ್ನು ಉದಾಹರಣೆ ಸಹಿತವಾಗಿ ಲಾಕ್ಷಣಿಕರ ಅಭಿಪ್ರಾಯದೊಂದಿಗೆ ವಿವರಿಸಲಾಗಿದೆ.

## ಶಬ್ದಾರ್ಥದ ಚಿಂತನೆ

**ಊಚ್ಯೋಽರ್ಥೋಽಭಿಧಯಾ ಬೋಧ್ಯೋಲಕ್ಷ್ಯೋ ಲಕ್ಷಣಯಾ ಮತಃ ।**
**ವ್ಯಂಗ್ಯೋ ವ್ಯಂಜನಯಾ ತಾಃ ಸ್ಯುಸ್ತಿಸ್ರಃ ಶಬ್ದಸ್ಯ ಶಕ್ತಯಃ ॥**

[ಸಾಹಿತ್ಯದರ್ಪಣ ೩ ವೃತ್ತಿ]

ಅರ್ಥವು ವಾಚ್ಯ, ಲಕ್ಷ್ಯ, ವ್ಯಂಗ್ಯ, ಎಂದು ಮೂರು ಬಗೆಯಾಗಿದ್ದು. ಇವುಗಳಲ್ಲಿ ವಾಚ್ಯಾರ್ಥವು ಶಬ್ದದ ಮುಖ್ಯವೃತ್ತಿ ಎನಿಸಿದ ಅಭಿದೆಯಿಂದಲೂ, ಲಕ್ಷ್ಯಾರ್ಥವು ಲಕ್ಷಣಾವೃತ್ತಿಯಿಂದಲೂ, ವ್ಯಂಗ್ಯಾಂರ್ಥವು ವ್ಯಂಜನಾವೃತ್ತಿಯಿಂದಲೂ ತಿಳಿದುಬರುತ್ತದೆ. ಈ ಮೂರುವೃತ್ತಿಗಳು ಶಬ್ದದ ಶಕ್ತಿಗಳಾಗಿದೆ. ಇವುಗಳಲ್ಲಿ ಅಭಿದಾವೃತ್ತಿಯು ಯಾವ ಆರ್ಥದಲ್ಲಿ ಸಂಕೇತವಿದೆಯೋ ಅಂತ ಅರ್ಥವನ್ನೇ ತಿಳಿಸಿಕೊಡುತ್ತದೆ. ಉದಾಹರಣೆಗೆ ಮನೆಯಲ್ಲಿ ಹಿರಿಯನೊಬ್ಬನು ಕಿರಿಯನೊಬ್ಬನಿಗೆ "ಗಾಂ ಅನಯ" ಎಂದು ಹೇಳಿದಾಗ ಆ ಮಾತನು ಕೇಳಿದೊಡನೆಯೇ ಅವನು ಗೋವನ್ನು ಕರೆತರಲು ಪ್ರವರ್ತಿಸುವನು. ಕೆಲವು ಸಲ ಈ ಅಭಿಧಾವೃತ್ತಿಯು ಒಂದು ಪದದೊಂದಿಗೆ ಮಾತ್ತೊಂದು ಪ್ರಸಿದ್ಧವಾದ ಪದವನ್ನು ಪ್ರಯೋಗಿಸುವುದರಿಂದಲೂ ತಿಳಿದು ಬರುತ್ತದೆ. ಉದಾಹರಣೆಗೆ "ವಿಕಸಿತವಾದ ಕಮಲದೊಳಗೆ ಮಧುವನ್ನು ಮಧುಕರವು ಕುಡಿಯುತ್ತಲಿದೆ" ಇಲ್ಲಿ ಮಧು ಎಂಬುದು ಲೋಕದಲ್ಲಿ ಪುಷ್ಪರಸವೆಂದು ಪ್ರಸಿದ್ಧವಾದರಿಂದ ಅದರ ಜೊತೆಯಲ್ಲಿ ಮಧುಕರ ಎಂಬ ಪದಕ್ಕೆ ದುಂಬಿಯಲ್ಲಿ ಸಂಕೇತವಿದೆ ಎಂದು ತಿಳಿದು ಬರುವುದು. ಇದರಿಂದ ಮಧುಕರ ವೆಂದರೆ ಜೇನುನೋಣವೇ ದುಂಬಿಯೇ, ಎಂಬ ಸಂಶಯವು ತೊಲಗುತ್ತದೆ. ಕೆಲವು ಕಡೆ ಯಥಾರ್ಥವನ್ನು ತಿಳಿಸುವ ಜನರ ಉಪದೇಶದಿಂದಲೂ ಸಹ ಸಂಕೇತವನ್ನು ಗ್ರಹಿಸಬಹುದು. ಹೀಗೆ ಇಂತಹ ಪದವು ಇಂತಹ ಅರ್ಥವನ್ನೇ ಬೋಧಿಸಲು ಇಚ್ಛೆಗೆ

ವಿಷಯವಾಗಿರುವ ಅರ್ಥವನ್ನು ಬೇರೆ ಯಾವ ಶಕ್ತಿಯಿಂದಲೂ ತಿಳಿಸಲಿಕ್ಕಾಗದ–ರಿಂದ ಇದನ್ನು ತಿಳಿಸಿಕೊಡುವ ಶಕ್ತಿಗೆ 'ಅಭಿಧೆ' ಅಥವಾ 'ಅಭಿಧಾವೃತ್ತಿ' ಎನ್ನಲಾಗಿದೆ. ಮತ್ತು ಇಂತಹ ಪದಕ್ಕೆ ಇಂತಹ ಅರ್ಥದಲ್ಲಿಯೇ ಸಂಕೇತವೆಂಬುದು ಜಾತಿ, ಗುಣ, ದ್ರವ್ಯ, ಮತ್ತು ಕ್ರಿಯೆಗಳಿಗೂ ಅನ್ವಯಿಸುತ್ತದೆ. ಒಟ್ಟಿನಲ್ಲಿ ಅಭಿಧಾವೃತ್ತಿಯು ಯಾವ ಅರ್ಥದಲ್ಲಿ ಸಂಕೇತವಿದೆಯೋ[೨೫] ಅಂತಹ ಅರ್ಥವನ್ನು ವ್ಯಕ್ತಪಡಿಸುವುದು. ಈ ರೀತಿ ಸಂಕೇತ ಎಂದು ನಂಬಲಿಷ್ಟವಿಲ್ಲದವರು ಇದನ್ನು ಈಶ್ವರ ಸಂಕೇತವೆಂದು ಹೇಳಿ ಸುಮ್ಮನಾಗುತ್ತಾರೆ.[೨೬]

ವಾಚ್ಯಾರ್ಥಕ್ಕೆ ಬಾಧೆ, ಬಂದು, ಅದಕ್ಕೆ ಸಂಬಂಧಪಟ್ಟ ಬೇರೋಂದು ಅಥ–ರ್ವು ತೋರಿ ಸಮಂಜಸವಾಗುವ ಕಡೆ ಹೊರಡುವ ಅರ್ಥಕ್ಕೆ ಲಕ್ಷ್ಯಾರ್ಥವೆಂದೂ ಅದನ್ನು ತಿಳಿಸುವ ಶಬ್ಧವ್ಯಾಪಾರಕ್ಕೆ [೨೭] ಲಕ್ಷಣಾವೃತ್ತಿ ಎನ್ನಲಾಗಿದೆ. ಉದಾಹರಣೆಗೆ ಯುದ್ಧವನ್ನು ವರ್ಣಿಸಬೇಕಾದರೆ "ಅಲ್ಲಿಗೆ ಭರ್ಜಿಗಳು ನುಗ್ಗಿದವು" ಎಂದು ಹೇಳಿದರೆ ಇಲ್ಲಿ ಆಚೇತನವಾದ ಭರ್ಜಿಗಳು ತಮ್ಮಷ್ಟಕ್ಕೆ ತಾವೇ ನುಗ್ಗಿದವು ಎಂದರೆ ಈ ಆರ್ಥವು ಸಿದ್ಧಿಸುವುದಿಲ್ಲ. ಅದಕ್ಕಾಗಿ "ಭರ್ಜಿಗಳನ್ನು ಹಿಡಿದ ಭಟರು ನುಗ್ಗಿದರು" ಎಂದು ಇಲ್ಲಿ ಅರ್ಥ ಮಾಡಬೇಕಾಗುತ್ತದೆ. ಇಲ್ಲಿ ವಾಚ್ಯಾರ್ಥವು ತನ್ನಷ್ಟಕ್ಕೆ ತಾನೇ ಸಮಗ್ರವಾಗಿರದೇ ಅದರ ಪೂರಕವಾಗಿ ಲಕ್ಷಣಾವೃತ್ತಿಯನ್ನು ಆಶ್ರಯಿಸಿ ಭರ್ಜಿಗಳು ಎಂದರೆ ಭರ್ಜಿಗಳನ್ನು ಹಿಡಿದವರು ಎಂದು ಅರ್ಥ ಮಾಡಬೇಕಾಗುತ್ತದೆ. ಹೀಗೆ ಯಾವುದಾದರೂ ಒಂದು ರೀತಿಯಲ್ಲಿ ವಾಚ್ಯಾರ್ಥಕ್ಕೆ ಬಾಧೆತಟ್ಟಿದಾಗ, ಅಂದರೆ ಅದು ಹೊಂದದೆ ಇದ್ದಾಗ [ಅನುಪಪನ್ನವಾದಾಗ] ಮಾತ್ರ, ಲಕ್ಷಣಾವ್ಯಾಪಾರವು ಪ್ರವರ್ತಿಸುತ್ತದೆ ಮತ್ತು ವಾಕ್ಯದ ಅರ್ಥ ಉಪಪನ್ನವಾಗುವುದಕ್ಕೆ ಎಷ್ಟು ಬೇಕೋ ಅಷ್ಟೇ ಕೆಲಸ ಮಾಡಿ ವಿರಮಿಸುತ್ತದೆ. ಇಷ್ಟೇ ಕೆಲಸ ಮಾಡುತ್ತೇನೆಂದು ಕರಾರು ಮಾಡಿಕೊಂಡು ಅದು ಮುಗಿದ ಕೊಡಲೇ ಜಾರಿಬಿಡುವ ಕೆಲಸಗಾರನಿಗೆ ಈ ವೃತ್ತಿಯನ್ನು ಹೋಲಿಸಬಹುದು. ಆದರಿಂದಲೇ ಇದು ಅಭಿಧಾವೃತ್ತಿಯ ಬೆನ್ನ ಹಿಂದೆ ಬಂದು, ಅದು ಅಸಮರ್ಥವಾದಾಗ ಮಾತ್ರ, ನಿಯತವಾದಷ್ಟೇ ದೂರ ಪ್ರವರ್ತಿಸುವುದರಿಂದ ಇದನ್ನು ಅಭಿಧಾ ವೃತ್ತಿಯ ಬಾಲವೆಂದು ಕರೆಯುತ್ತಾರೆ.[೨೮]

ಸಾಮಾನ್ಯವಾಗಿ ನಾವು ಆಡುವ ಮಾತನ್ನು ಪರೀಕ್ಷಿಸಿ ನೋಡಿದರೆ, ಅದರಲ್ಲಿ ಲಕ್ಷಣಾ ವ್ಯಾಪಾರ ಪ್ರಚುರವಾಗಿದೆಯೆಂಬುದು ಮನವರಿಕೆಯಾಗದಿರದು. ಹೀಗೆ ಮಾತನ್ನು ಉಪಯೋಗಿಸುವುದು ಎಷ್ಟು ರೂಢಿಯಾಗಿದೆಯೆಂದರೆ, ಇದನ್ನು ಕೇಳಿದ ಕೊಡಲೇ ಅರ್ಥಮಾಡಿಕೊಳ್ಳುವುದು ನಮಗೆ ಎಷ್ಟು ಅಭ್ಯಾಸವಾಗಿದೆಯೆಂದರೆ, ಗಮನವಿಟ್ಟು ವಿಭಜನೆ ಮಾಡಿದ ಹೊರತು, ಇಲ್ಲೆಲ್ಲಾ ವಾಚ್ಯಾರ್ಥ ಹೊಂದುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಹಾಗೆ ಬೇರೋಂದು ಅರ್ಥವನ್ನು ಕಲ್ಪಿಸಿಕೊಂಡು

ಲಕ್ಷಣಾ

ಸಂಬಂಧ ಮೂಲಾ — ಸಾದೃಶ್ಯ ಮೂಲಾ(ಗಣೀ)

ಅಜಹಲ್ಲಕ್ಷಣಾ — ಜಹಲ್ಲಕ್ಷಣಾ

ಸರಿಪಡಿಸಿಕೊಳ್ಳುತ್ತೇವೆ ಎಂಬುದು ನಮಗೆ ಅರಿವಾಗುವುದಿಲ್ಲ ಅಭಿವನಗುಪ್ತನು ಹೇಳುವಂತೆ "ಅನಯಾ ಲಕ್ಷಣಯಾ ...ವಿಶ್ವಮೇವ ವ್ಯಾಪ್ತಂ"[೨೯] "ಈ ಲಕ್ಷಣ ವ್ಯಾಪಾರ ವಿಶ್ವವನ್ನೇ ವ್ಯಾಪಿಸಿದೆ" ಲಕ್ಷಣೆಯು ವಾಗ್ವ್ಯವಹಾರದ ನಿತ್ಯಧರ್ಮ, ಕವಿಗಳ ಕಾಮಧೇನು, ಅನೇಕ ಅಲಂಕಾರಗಳ ಜೀವದ್ರವ್ಯ ಇದಕ್ಕೆ ಈ ಕೀರ್ತಿ ಬರಲು ಇದರಿಂದ ಸ್ಮರಿಸುವ ಪ್ರಯೋಜನಾಂಶವೇ ಮುಖ್ಯ ಕಾರಣವಾಗಿದೆ.

ಲಕ್ಷಣಾವೃತ್ತಿಯನ್ನು ಸ್ಥೂಲವಾಗಿ ಈ ರೀತಿ ವಿಭಾಗಿಸಲಾಗಿದೆ.

ಇದರಲ್ಲಿ ಇನ್ನೂ ಒಳಭೇದಗಳನ್ನು ತಾರ್ಕಿಕರು ಅಲಂಕಾರಿಕರೂ ತಮ್ಮ ತಮ್ಮ ಅವಶ್ಯಕತೆಗೂ ಬುದ್ಧಿ ಚಾತುರ್ಯಕ್ಕೂ ತಕ್ಕಂತೆ ಕಲ್ಪಿಸುತ್ತಾ ಹೋಗಿದ್ದಾರೆ. ಇನ್ನು ಉಪದಾನಲಕ್ಷಣೆಯನ್ನು ವಿವರಿಸೋಣ, ಒಂದು ಶಬ್ದದ ಮುಖ್ಯಾರ್ಥವು ವಾಚ್ಯಾರ್ಥದಲ್ಲಿ ಅನ್ವಯಿಸಲಿಕ್ಕಾಗಿ ಬೇರೊಂದು ಅರ್ಥವನ್ನು ಆಕ್ಷೇಪಿಸಿ ಅದರೊಡನೆ ತಾನು ಸೇರಿಕೊಂಡಿರುವುದಾಗಿ ಯಾವುದರಿಂದ ತಿಳಿದುಬರುವುದು ಅಂತಹ ವೃತ್ತಿಯೇ ಉಪಾದಾನಲಕ್ಷಣೆ ಎನಿಸಿದೆ. ಉದಾಹರಣೆಗೆ 'ಶ್ವೇತೋ ಧಾವತಿ' ಇಲ್ಲಿ ಶ್ವೇತವರ್ಣವು ಧಾವನ ಕರ್ತೃವೆನಿಸಲಾಗದ್ದರಿಂದ ಅಲ್ಲಿ ಅನ್ವಯಿಸಲಿಕ್ಕೆ ಕುದುರೆ ಎಂಬ ಅರ್ಥವನ್ನು ಆಕ್ಷೇಪಿಸಿ ಅದರೊಡನೆ ತಾನು ಸೇರಿಕೊಂಡಿದೆ. "ಕುಂತಾಃಪ್ರವಿಶಂತಿ" ಪ್ರಯೋಜನ ಮೂಲವಾದ ಉಪದಾನ ಲಕ್ಷಣೆಗೆ ಉದಾಹರಣೆಯಾಗಿದೆ. ಮೊದಲನೆಯದರಲ್ಲಿ ಪ್ರಯೋಜನವಿಲ್ಲದರಿಂದ ಆರೋಪ್ಯರ್ಥವೇ ಲಕ್ಷಣೆಯ ಬೀಜವೆನಿಸಿದೆ. ಈ ಎರಡೂ ಕಡೆಯಲ್ಲೂ ಆಕ್ಷಿಪ್ತವಾದ ಅರ್ಥದೊಡನೆ ಮುಖ್ಯಾರ್ಥವನ್ನು ತೊರೆಯದೇ ಇರುವುದರಿಂದ ಈ ಲಕ್ಷಣೆಯು ಅಜಹತ್ಸ್ವಾರ್ಥ ಲಕ್ಷಣ ಎನಿಸಿದೆ. ವಾಕ್ಯದಲ್ಲಿ ಬೇರೊಂದು ಆಕ್ಷಿಪ್ತವಾದ ಅರ್ಥಕ್ಕೆ ಅನ್ವಯವಾಗಲೆಂದು ಮುಖ್ಯಾರ್ಥವನ್ನು ತೊರೆಯುವ ಮೂಲಕ ಎಲ್ಲಿ ಲಕ್ಷಣೆಯನ್ನು ಹೇಳಲಾಗಿದೆಯೊ ಅದು ಲಕ್ಷಣಲಕ್ಷಣೆ ಎನಿಸಿದೆ. ಇಲ್ಲಿ ರೂಢಿ

ಮೂಲವಾದ ಲಕ್ಷಣಲಕ್ಷಣೆಗೆ 'ಗಂಗಾಯಾಂ ಘೋಷಃ' ಉದಾಹರಣೆಗಳಾಗಿವೆ. ಮುಖ್ಯಾರ್ಥ ತೊರೆಯುವುದರಿಂದಲೇ ಜಹತ್ಸ್ವಾರ್ಥ ಎನಿಸಿದೆ.

ಒಂದು ಶಬ್ದವನ್ನು ಲಕ್ಷಣಾ ಮಾರ್ಗದಲ್ಲಿ ಮತ್ತೆ ಮತ್ತೆ ಉಪಯೋಗಿಸಿದ ಹಾಗೆಲ್ಲಾ ಅದರ ಪ್ರಯೋಜನದ ಹೊಳಪು ಗುಂದುತ್ತದೆ. ಅದರ ಮೊನೆ ಮೊಂಡಾಗುತ್ತದೆ. ಅನೇಕ ತಲೆಮಾರುಗಳಲ್ಲಿ ಹೀಗೆ ಬಳಸುತ್ತಾ ಬಂದ ಮೇಲೆ, ಮೊದಲು ಲಕ್ಷ್ಯಾರ್ಥವಾಗಿದ್ದುದ್ದು ವಾಚ್ಯತ್ವಕ್ಕೆ ಹೆಚ್ಚು ಹೆಚ್ಚು ಹತ್ತಿರ ಬಂದು ಕಡೆಗೆ ತಾನೂ ವಾಚ್ಯಾರ್ಥವೇ ಆಗಿ ಬಿಡುತ್ತದೆ. ಹೀಗಾದರೆ ಲಕ್ಷಣಾವೃತ್ತಿಯಿಂದ ಹೊರಡುವ ಪ್ರಯೋಜನವೂ ಹ್ರಾಸವಾಗುತ್ತಾ ಬಂದು ಕಡೆಗೆ ಶೂನ್ಯವಾಗುತ್ತದೆ. ಪ್ರಯೋಜನ ವಿರಹಿತವಾಗಿ ಪರಿಣಮಿಸಿದ ಇಂಥ ವ್ಯಾಪಾರವನ್ನು 'ರೂಢಿಲಕ್ಷಣ' ಎಂದು ಕರೆಯುತ್ತಾರೆ.[೩೦] ಈ ರೂಢಿ ಮೂಲವಾದ ಲಕ್ಷಣೆಯನ್ನು ವಿಶ್ವನಾಥನು ಈ ರೀತಿ ವಿಭಾಗಿಸಿದ್ದಾನೆ. ರೂಢಿ ಮೂಲವಾದ ಉಪದಾನಲಕ್ಷಣೆ ಮತ್ತು ಲಕ್ಷಣ ಲಕ್ಷಣೆ, ಪ್ರಯೋಜನ ಮೂಲವಾದ ಉಪದಾನಲಕ್ಷಣೆ ಮತ್ತು ಲಕ್ಷಣೆ ಇವೂ ಸಹ ಆರೋಪ ಅಧ್ಯವಸಾನ ಇವುಗಳ ಮೂಲಕ ಮತ್ತೆ ಎರೆಡೆರಡು ಬಗೆಗಳಾಗುತ್ತದೆ. ಮುಖ್ಯಾರ್ಥವು ಶಬ್ದದಿಂದ ಬೋಧಿತವಾಗಿದ್ದು ಲಕ್ಷ್ಯಾರ್ಥದೊಡನೆ ತಾದಾತ್ಮ್ಯ ಜ್ಞಾನವನ್ನು ಹುಟ್ಟುವುದಾದರೆ ಅಂತಹ ಶಬ್ದವೃತ್ತಿಯು ಸಾರೋಪ ಲಕ್ಷಣೆ ಎನಿಸಿದೆ. ಮುಖ್ಯಾರ್ಥವು ಶಬ್ದದಿಂದ ಬೋಧಿತವಾಗದೇ ಅದರಲ್ಲಿ ಲಕ್ಷಾರ್ಥದ ಅಭೇದಜ್ಞಾನ ಉಂಟಾಗುವುದಾದರೆ ಆ ಬಗೆಯ ಶಬ್ದವೃತ್ತಿಯು ಸಾಧ್ಯವಸಾನಲಕ್ಷಣೆಯನ್ನು ತಿಳಿಸುವ ಪ್ರಕರಣವಾದ್ದರಿಂದ ವಿಷಯ, ವಿಷಯ ಪದಗಳು ಶಕ್ಯಾರ್ಥ, ಲಕ್ಷ್ಯಾರ್ಥಗಳನ್ನು ಬೋಧಿಸುತ್ತದೆ. ಎಲ್ಲಿ ಇವೆರಡಕ್ಕೂ ಅಭೇದವು ತೋರುವುದೋ ಅಲ್ಲಿ ಸಾರೋಪಲಕ್ಷಣೆ ಇರುತ್ತದೆ. ಇದು ರೂಪಕಾಲಂಕಾರದ ಬೀಜವೆನಿಸಿದೆ. ರೂಢಿಮೂಲವಾದ ಸಾರೋಪೋಪಾದಾನ ಲಕ್ಷಣೆಗೆ 'ಅಶ್ವಃ ಶ್ವೇತೋಧಾವತಿ' ಎಂಬುದು ಉದಾಹರಣೆಯಾಗಿದೆ. ಇಲ್ಲಿ 'ಅಶ್ವ' ಎಂಬುದು ವಿಷಯವೆನಿಸಿದ[೩೧] ಪದ 'ಶ್ವೇತ' ಎಂಬುದು ವಿಷಯ ವಾಚಕಪದ. ಇಲ್ಲಿ ಇವೆರಡೂ ಪದಗಳು ಇದ್ದು ಶ್ವೇತವರ್ಣದ ಕುದುರೆಯ ಸ್ವರೂಪವು ಶಬ್ದದಿಂದಲೇ ಬೋಧಿತವಾಗಿದೆ. ತನ್ನಲ್ಲಿ ಸಮವಾಯ ಸಂಬಂಧದಿಂದ ಕೂಡಿಕೊಂಡಿರುವ ಶ್ವೇತಗುಣದೊಡನೆ ತಾದಾತ್ಮ್ಯ ವನ್ನು ಹೊಂದಿದೆ. ಇನ್ನು ಪ್ರಯೋಜನವನ್ನು ಅವಲಂಬಿಸಿದ ಸಾರೋಪೋಪಾದಾನ ಲಕ್ಷಣೆಗೆ 'ಏತೇ ಕುಂತಾಃ ಪ್ರವಿಶಂತಿ' ಎಂಬುದು ಉದಾಹರಣೆಯಾಗಿದೆ. ಇಲ್ಲಿ ಏತೇ ಎಂಬುದು ಕುಂತಧಾರಿಗಳನ್ನು ಸೂಚಿಸುತ್ತದೆ. ಇಲ್ಲಿ "ಏತೇ' ಎಂಬುದು ಮುಖ್ಯಾರ್ಥವನ್ನು ತಿಳಿಸುವ ಪದ. 'ಕುಂತಾಃ' ಎಂಬುದು ಲಕ್ಷ್ಯಾರ್ಥವನ್ನು ತಿಳಿಸುವ ಪದ. ಪ್ರವೇಶನ ಕ್ರಿಯೆಯಲ್ಲಿ ಅನ್ವಯವನ್ನು ಪಡೆಯಲಿಕ್ಕಾಗಿ 'ಏತೇ' ಎಂಬ ಪದದ ಅರ್ಥದಲ್ಲಿ ಅಭೇದದಿಂದ ಅನ್ವಯವಾಗುತ್ತದೆ. ಇನ್ನು ರೂಢಿ ಮೂಲವಾದ ಸಾರೋಪ ಲಕ್ಷಣೆಗೆ 'ಕಳಿಂಗಃ ಪುರುಷೋ

ಯುರ್ಧತೇ" ಎಂಬುದು ಉದಾಹರಣೆಯಾಗಿದೆ. ಇಲ್ಲಿ ಪುರುಷನಿಗೂ ಕಳಿಂಗ ದೇಶಕ್ಕೂ ಆಧಾರಾಧೇಯಭಾವ ಸಂಬಂಧವಿರುವುದರಿಂದ ಕಳಿಂಗ ದೇಶದಲ್ಲಿರುವ ಪುರುಷನು ಯುದ್ಧ ಮಾಡುತ್ತಾನೆ ಎಂಬುದು ಇದರ ಅರ್ಥ ಇಲ್ಲಿ ಕಳಿಂಗ, ಪುರುಷ ಇವೆರಡೂ ಆಯಾಯ ಶಬ್ದಗಳಿಂದಲೇ ಬೋಧಿತವಾಗಿದ್ದು ಇಲ್ಲಿ ತಾದಾತ್ಮ್ಯವನ್ನು ತಿಳಿಸಿರುವುದರಿಂದ ಇದು ಸಾರೋಪಲಕ್ಷ್ಮಣ ಎನಿಸಿದೆ. ಹಾಗೆ ಕಳಿಂಗ ಶಬ್ದವು ಆಧಾರಾಧೇಯಭಾವ ಸಂಬಂಧದಿಂದ ಕೂಡಿಕೊಂಡಿರುವ ಪುರುಷನೆಂಬ ಅರ್ಥಕ್ಕೆ ಯುದ್ಧದಲ್ಲಿ ಅನ್ವಯವನ್ನು ದೊರಕಿಸಲು ಮುಖ್ಯಾರ್ಥವನ್ನು ತೊರೆಯುವುದರಿಂದ ಇದು ಲಕ್ಷಣ ಲಕ್ಷಣೆಯೂ ಆಗಿದೆ. ಇನ್ನು ಪ್ರಯೋಜನ ಮೂಲವಾದ ಸಾರೋಪ ಲಕ್ಷಣ ಲಕ್ಷಣೆಗೆ 'ಆಯುಃ ಘೃತಮ್' ಎಂಬುದು ಉದಾಹರಣೆಯಾಗಿದೆ. ಇಲ್ಲಿ ತುಪ್ಪವು ಆಯಸ್ಸನ್ನು ಹೆಚ್ಚಿಸುವುದಾದ್ದರಿಂದ ಕಾರ್ಯಕಾರಣಭಾವ ಸಂಬಂಧದ ಮೂಲಕ ತುಪ್ಪದಲ್ಲಿ ಆಯುಸ್ಸಿನ ತಾದಾತ್ಮ್ಯವು ತೋರುತ್ತದೆ. ಆದ್ದರಿಂದ ಇಲ್ಲಿ ತುಪ್ಪವನ್ನು ಬಿಟ್ಟು ಬೇರೆ ಯಾವ ಪದಾರ್ಥದ ಸೇವನೆಯಿಂದಲೂ ಆಯಸ್ಸು ಹೆಚ್ಚದೆ ಇರುವ ಪ್ರಯುಕ್ತ ತುಪ್ಪದಿಂದಲೇ ಆಯಸ್ಸು ಹೆಚ್ಚುವುದೆಂದು ತಿಳಿಸುವುದೇ ಪ್ರಯೋಜನವೆನಿಸಿದೆ.

ಇನ್ನು ಮುಖ್ಯಾರ್ಥವನ್ನು ತಿಳಿಸುವ ಪದವು ಶಬ್ದದಿಂದ ಬೋಧಿತವಾಗದೆ ಇದ್ದರೂ ಆ ಅರ್ಥವು ಲಕ್ಷ್ಯಾರ್ಥದೊಡನೆ ತಾದಾತ್ಮ್ಯವನ್ನು ಹೊಂದುವುದಾದರೆ ಆ ಬಗೆಯ ಲಕ್ಷಣೆಯು ಸಾಧ್ಯವಸಾನಲಕ್ಷಣೆ ಎನಿಸಿದೆ. ಇದರಲ್ಲಿ ರೂಢಿ ಮೂಲವಾದ ಸಾರ್ಧ್ಯವ ಸಾನೋಪಾದಾನಲಕ್ಷಣೆ ಮತ್ತು ಸಾಧ್ಯವಸಾನ ಲಕ್ಷ್ಮಣ ಲಕ್ಷಣೆ, ಪ್ರಯೋಜನ ಮೂಲವಾದ ಸಾಧ್ಯವಸಾನೋಪಾದಾನಲಕ್ಷಣೆ ಮತ್ತು ಸಾಧ್ಯವಸಾನಲಕ್ಷಣಲಕ್ಷಣೆ ಎಂದು ನಾಲ್ಕು ಬಗೆಗಳಾಗಿದೆ.

**ಸಾದೃಶ್ಯೇತರ ಸಂಬಂಧಾಃ ಶುದ್ಧಾಸ್ತಾಃ ಸಕಲಾ ಅಪಿ ।**
**ಸಾದೃಶ್ಯಾತ್ತು ಮತಾ ಗೌಣ್ಯಸ್ತೇನ ಷೋಢಷ ಭೇದಿತಾಃ ॥**

[ಸಾಹಿತ್ಯದರ್ಪಣ – ೨. ೯]

ಒಟ್ಟು ಲಕ್ಷಣೆಗಳು ಎಂಟು ಬಗೆಯಾಗಿದ್ದು ಸಾದೃಶ್ಯವನ್ನು ಬಿಟ್ಟು ಕಾರ್ಯಕಾರಣ ಭಾವವೇ ಮೊದಲಾದ ಬೇರೆ ಬೇರೆ ಸಂಬಂದಗಳಲ್ಲಿ ಪ್ರವರ್ತಿಸಿದರೆ ಶುದ್ಧ ಎನಿಸುತ್ತದೆ. ಸಾದೃಶ್ಯವೆನಿಸಿ ಲಕ್ಷಣೆಗಳು ಗೌಣಿ ಎನಿಸುತ್ತದೆ. ಆದ್ದರಿಂದ ಲಕ್ಷಣೆಗಳು ಒಟ್ಟು ಹದಿನಾರು ಬಗೆಯಾಗಿವೆ. ಶುದ್ಧಲಕ್ಷಣೆಗಳಿಗೆ ಹಿಂದನವೇ ಉದಾಹರಣೆಗಳಾಗಿವೆ. ಮಮ್ಮಟನ ಪ್ರಕಾರ ಶುದ್ದ ಲಕ್ಷಣೆಯು[೨೨] ಎರಡು ಬಗೆಯಾಗಿದೆ. ಶುದ್ದ ಲಕ್ಷಣೆಗೆ ಹಿಂದಿನವೇ ರೂಢಿಮೂಲವಾದ ಸಾರೋಪೋಪಾದಾನ ಲಕ್ಷಣೆಯು ಗೌಣಿಯಾಗಿದ್ದರೆ ಅದಕ್ಕೆ 'ಏತಾನಿ ತೈಲಾನಿ ಹೇಮಂತೇ ಸುಖಾನಿ' ಈ ತೈಲಗಳು (ಹೇಮಂತ ಕಾಲದಲ್ಲಿ ಹಿತವಾಗಿರುತ್ತವೆ). ಇಲ್ಲಿ ತೈಲಶಬ್ದವು ಎಳ್ಳಿನಿಂದಾದ ಎಂಬ ಮುಖ್ಯಾರ್ಥವನ್ನೊಳಗೊಂಡೇ ಸಾಸಿವೆ

ಮೊದಲಾದ ಧಾನ್ಯಗಳಿಂದ ತೆಗೆದ ಎಣ್ಣೆಗಳಿಗೂ ಅನ್ವಯಿಸುತ್ತದೆ. ಎಳ್ಳಿನಲ್ಲಿರುವ ಎಣ್ಣೆನಲ್ಲಿರುವ ಎಣ್ಣೆಜಿಡ್ಡು ಸಾಸಿವೆ ಎಣ್ಣೆಯಲ್ಲೂ ಇರುವುದರಿಂದ ಅದರಲ್ಲೂ ತೈಲ ಶಬ್ದವನ್ನು ಪ್ರಯೋಗಿಸಲಾಗಿದೆ. ಇಲ್ಲಿ ಎಳ್ಳಿನ ಎಣ್ಣೆ ಎಂಬುದೇ ಮುಖ್ಯಾರ್ಥ. ಸಾಸಿವೆ ಎಣ್ಣೆ ಇತ್ಯಾದಿಗಳು ಲಕ್ಷ್ಯಾರ್ಥ. ಇಲ್ಲಿ ಎರಡೂಪದವನ್ನು ಪ್ರಯೋಗಿಸಿ ತಾದಾತ್ಮ್ಯವನ್ನು ಹೇಳಲಾಗಿದೆ. ಇನ್ನು ಪ್ರಯೋಜನ ಮೂಲವಾದ ಸಾರೋಪೋಪಾದಾನಲಕ್ಷಣೆಯು ಗೌಣಿಯಾಗಿದ್ದರೆ "ಏತೇ ರಾಜಕುಮಾರಃ ಗಚ್ಛಂತಿ" [ಈ ರಾಜಕುಮಾರರು ಹೋಗುತ್ತಾರೆ] ಬೀದಿಯಲ್ಲಿ ರಾಜಕುಮಾರರ ಹಾಗೆಯೇ ಅವರಿಗೆ ಸದೃಶರಾದ ಇತರರು ಹೋಗುತಿರಲು 'ಈ ರಾಜಕುಮಾರರು ಹೋಗುತ್ತಾರೆ' ಎಂಬುದನ್ನು ಇಲ್ಲಿ ಪ್ರಯೋಗಿಸಲಾಗಿದೆ. ರಾಜಕುಮಾರರಲ್ಲದವರು ಹೋಗುತ್ತಿರುವಾಗಲೂ ರಾಜ-ಕುಮಾರರೇ ಹೋಗುತ್ತಾರೆಂದರೆ ಇಲ್ಲಿ ರಾಜಕುಮಾರರಲ್ಲದೇ ಇತರರೇ ಮುಖ್ಯಾಥ-ರ್ಥ. ರಾಜಕುಮಾರರೇ ಲಕ್ಷ್ಯಾರ್ಥ. ಅದರಿಂದ ಇಲ್ಲಿ ಇವರನ್ನೂ ಇತರರು ಎಂಬ ಶಬ್ದದಿಂದಲೇ ಹೇಳಿದ್ದರಿಂದ ಅವರಿಗೆಲ್ಲರಿಗೂ ಸಾದೃಶ್ಯ ಮೂಲಕವಾಗಿ ತಾದಾತ್ಮ್ಯವನ್ನು ಹೇಳಲಾಗಿದೆ. ಇನ್ನು ರೂಢಿಮೂಲದ ಸಾಧ್ಯವಸಾನೋಪಾದಾನಲಕ್ಷಣೆಯು ಗೌಣಿಯಾದ್ದರೆ 'ತೈಲಾನಿ ಹೇಮಂತೇ ಸುಖಾನಿ' ಎಂಬುದು ಉದಾಹರಣೆಯಾಗಿದೆ. ಇಲ್ಲಿ ತೈಲಾನಿ ಎಂಬ ಪದವನ್ನು ಉದಾಹರಣೆಯಾಗಿದೆ. ಇಲ್ಲಿ ತೈಲಾನಿ ಎಂಬ ಪದವನ್ನು ಸಾಸಿವೆ ಮೊದಲಾದ ಧಾನ್ಯಗಳಿಂದ ತೆಗೆದ ಎಣ್ಣೆಗಳಲ್ಲಿ ಪ್ರಯೋಗಿಸಲಾಗಿದೆ. ಮುಖ್ಯಾರ್ಥವಾದ ಎಳ್ಳಿನಿಂದಾದ ಎಣ್ಣೆಯನ್ನು ಬೋಧಿತವಾಗಿಲ್ಲ. ಆದರೂ ಎಳ್ಳಿನ ಎಣ್ಣೆಯ ಜಿಡ್ಡು ಅಲ್ಲಿಯೂ ಇರುವುದರಿಂದ ತಾದಾತ್ಮ್ಯವನ್ನು ಹೇಳಲಾಗಿದೆ. ಇನ್ನು ಪ್ರಯೋಜನಮೂಲವಾದ ಸಾಧ್ಯವಸಾನೋಪಾದಾನ ಲಕ್ಷಣೆಯು ಗೌಣಿಯಾಗಿದ್ದರೆ ಇದಕ್ಕೆ "ರಾಜಕುಮಾರಾಃ ಗಚ್ಛಂತಿ" ಎಂಬುದು ಉದಾಹರಣವಾಗಿದೆ. ಇಲ್ಲಿ ಇತರರನ್ನು ಶಬ್ದದಿಂದ ತಿಳಿಸದೇ ಅವರಿಗೂ ರಾಜಕುಮಾರರಿಗೂ ಸಾದೃಶ್ಯವನ್ನು ತಿಳಿಸಿದ್ದರಿಂದ ಸಾಧ್ಯವಸಾನೋಪಾದ ಲಕ್ಷಣೆ ಎನಿಸಿದೆ. ರೂಢಿಯನ್ನವಲಂಬಿಸಿದ ಸರೋಪಲಕ್ಷಣ ಲಕ್ಷಣೆಯು ಗೌಣಿಯಾಗಿದ್ದರೆ "ರಾಜ ಗೌಡೇಂದ್ರ ಕಂಟಕಂ ಶೋಧಯತಿ" ಎಂಬುದು, ಅದೇ ಲಕ್ಷಣೆಯ ಪ್ರಯೋಜನವನ್ನವಲಂಬಿಸಿದಾಗ 'ಗೌರ್ಜಲ್ಪತಿ' ಎಂಬುದು ಉದಾಹರಣೆ ಆಗಿದೆ.

ಸಹೃದಯರಿಗೆ ವ್ಯಂಗ್ಯಾರ್ಥವು ಕ್ಲೇಶದಿಂದ ಅರ್ಥವಾಗುವಂತೆ ಪಂಡಿತ ಪಾಮರ-ರಿಗೆ ಸರಳವಾಗಿ ಅರ್ಥವಾಗುವುದರಿಂದ ಪ್ರಯೋಜನ ಮೊದಲಾದ ಲಕ್ಷಣೆ ಎರಡು ಬಗೆಯಾಗಿದ್ದು ಪ್ರಯೋಜನವಲಂಬಿಸಿದ ಎಂಟು ಬಗೆಯ ಲಕ್ಷಣಗಳಲ್ಲಿ ವ್ಯಂಗ್ಯವೆನಿಸಿದ ಪ್ರಯೋಜನವು ಗೂಢವೂ ಸ್ಪಷ್ಟವೂ ಆಗಿರುವುದರಿಂದ ಲಕ್ಷಣೆಯು ಒಟ್ಟು ಹದಿನಾರು ಬಗೆಯಾಗಿದ್ದು. ಅವುಗಳಲ್ಲಿ ಗೂಢಾವ್ಯಂಗ್ಯವೂ[೩೩] ಕಾವ್ಯದಿಂದ ತೋರುವ ಅರ್ಥವನ್ನು

ಯಾವಾಗಲೂ ಅನುಸಂಧಾನ ಮಾಡುತ್ತಲೇ ಬುದ್ಧಿಯನ್ನು ವಿಕಾಸಗೊಳಿಸಿ ಕೊಂಡ ಸಹೃದಯರಿಗೆ ಮಾತ್ರವೇ ತಿಳಿದುಬರುವುದು. 'ಉಪಕೃತಂ ಬಹು ಯತ್ರ' ಎಂಬಲ್ಲಿ ಗೂಢವ್ಯಂಗ್ಯವು ತಿಳಿಯುವುದು. ಆಗೂಢ ವ್ಯಂಗಕ್ಕೆ ಉದಾಹರಣೆ,

**ಶ್ರೀಪರಿಚಯಾಜ್ಜಡಾ ಅಪಿ ಭವಂತ್ಯಭಿಜ್ಞಾ ವಿದಗ್ಧಚರಿತಾನಾಮ್ ।**
**ಉಪದಿಶತಿ ಕಾಮಿನಿನಾಂ ಯೌವನಮದ ಏವ ಲಲಿತಾನಿ ॥**

[ಕಾವ್ಯಪ್ರಕಾಶ ೨,೫]

ಲಕ್ಷ್ಮಿಯ ಮಹಿಮೆಯಿಂದ ಜಡರೂ ಕೂಡ ಪರಿಣತಮತಿಗಳಂತೆ ಜಾಣ-ರೆನಿಸುತ್ತಾರೆ. ಯೌವನಮದವೇ ಲಲನೆಯರಿಗೆ ಲೀಲೆಗಳನ್ನು ಕಲಿಸುತ್ತಿದೆ. ಇಲ್ಲಿ 'ಕಲಿಸುತ್ತದೆ' ಎಂಬ ಶಬ್ದದಿಂದ 'ಅನಾಯಾಸವಾಗಿ ಪಾಠ ಕಲಿಸಿದೆ' ಎಂಬ ವ್ಯಂಗ್ಯವು ವಾಚ್ಯರ್ಥದಷ್ಟೇ ಸ್ಫುಟವಾಗಿ ತಿಳಿಯುತ್ತದೆ.

ವ್ಯಂಜನೆಯಿಂದ ತಿಳಿದುಬರುವ ಫಲವು ಧರ್ಮಿ ಅಂದರೆ ವ್ಯಕ್ತಿಯಲ್ಲೂ ಮತ್ತು ಅವನಲ್ಲಿರುವ ಗುಣ ಅಂದರೆ ಧರ್ಮದಲ್ಲೂ ಇರುವುದರಿಂದ ಹಿಂದೆ ಹೇಳಿದ ಹದಿನಾರು ಬಗೆ ಲಕ್ಷಣೆಗಳು ಮತ್ತು ಎರಡೆರಡು ಬಗೆಗಳಾಗಿ ಮೂವತ್ತೆರಡು ಬಗೆಗಳಾಗುತ್ತವೆ. ಇದರಲ್ಲಿ ಸ್ಥೂಲವಾಗಿ ತೋರಿಸಲು ಈ ಶ್ಲೋಕವನ್ನು ಉದಾಹ-ರಿಸಲಾಗಿದೆ.

**ಸ್ನಿಗ್ಧಶ್ಯಾಮಲಕಾಂತಲಿಪ್ತವಿಯತೋ ವೇಲ್ಲದ್ಬಲಾಕಾ ಘನಾಃ**
**ವಾತಾಃ ಶೀಕರಿಣಃ ಪಯೋದಸುಹೃದಾಮಾನಂದಕೇಕಾಃ ಕಲಾಃ ।**
**ಕಾಮಂ ಸಂತು ದೃಢಂ ಕಠೋರ ಹೃದಯೋ ರಾಮೋಽಸ್ಮಿಸರ್ವಂ ಸಹೇ**
**ವೈದೇಹೀ ತು ಕಥಂ ಭವಿಷ್ಯತಿ ಹ ಹಾ ಹಾ ದೇವಿ ಧೀರಾ ಭವ;[೩೪] ॥**

"ಆಕಾಶವು ನುಣುಪಾಗಿಯೂ ಕಪ್ಪು ಬಣ್ಣದಿಂದ ತುಂಬಿಯೂ ಇದೆ. ಅದರ ಅಂತರದಲ್ಲಿ ಬಕಪಕ್ಷಿಗಳು ಸಾಲು ಸಾಲಾಗಿ ಓಡಾಡುತ್ತಿವೆ. ಇಂತಹ ಆಕಾಶದಲ್ಲಿ ಮೇಘಗಳು ಸಂಚರಿಸುತ್ತಿರಲಿ. ಶೀತವಾದ ಗಾಳಿಯೂ ಇರಲಿ. ಮೇಘವೆಂಬ ಸ್ನೇಹಿತರಿಗೆ ಆನಂದವನ್ನು ಕೊಡುತ್ತಾ ಮನೋಹರವಾದ ನವಿಲುಗಳ ಧ್ವನಿಯು ಇರಲಿ, ಇವೆಲ್ಲವೂ ಯಥೇಚ್ಛವಾಗಿರಲಿ. ನಾನೇನೋ ಕಠಿಣ ಹೃದಯನಾದ ರಾಮನಿರುವೆನು. ನಾನೇ ಎಲ್ಲವನ್ನೂ ಸಹಿಸುವೆನು ಆದರೆ ಸೀತೆ ಇವೆಲ್ಲವನ್ನು ಸಹಿಸಿಕೊಂಡು ಹೇಗೆ ಇದ್ದಾಳು! ಆಹಾ, ದೇವಿ! ಧೈರ್ಯದಿಂದ ಇದ್ದು ನಿನ್ನನ್ನು ಸಂತೈಸಿಕೋ" ಇಲ್ಲಿ ದುಃಖವನ್ನು ಸಹಿಸುವ ರಾಮನೆಂಬ ವ್ಯಕ್ತಿಯೇ ಧರ್ಮಿ, ಸಹನವೆಂಬ ಧರ್ಮವುಳ್ಳವನು. ಇವನೇ ಇಲ್ಲಿ ಲಕ್ಷಣೆಯಿಂದ ತಿಳಿದು ಬರುವಾಗ ಅದೇ ರಾಮನಿಗೆ ಹೆಚ್ಚು ದುಃಖವನ್ನು ಸಹಿಸುವಷ್ಟು ಅದ್ಭುತದಶಕ್ತಿ ಇತ್ತೆಂಬುದನ್ನು ಸೂಚಿಸುವುದೇ ಪ್ರಯೋಜನವೆನಿಸಿದೆ.

**ವಿರತಾಸ್ವಭಿಧಾದ್ಯಾಸು ಯಯಾರ್ಥೋ ಬೋಧ್ಯತೇ ಪರಃ ।**
**ಸಾವೃತ್ತಿ ರ್ವ್ಯಂಜನಾ ನಾಮ ಶಬ್ದ ಸ್ಯಾರ್ಥದಿ ಕಸ್ಯ ಚಿ ॥**

ಅಭಿದೇ ಮೊದಲಾದ ವ್ಯಾಪಾರಗಳು ತಮ್ಮ ಕೆಲಸವನ್ನು ಮಾಡಿ ಮುಗಿಸಿದ ಮೇಲೆ ಬೇರೆ ಯಾವ ವೃತ್ತಿಯಿಂದ ಮತ್ತೊಂದು ಅರ್ಥವೂ ತಿಳಿದು ಬರುವುದೋ ಆ ವೃತ್ತಿಯನ್ನೇ ವ್ಯಂಜನಾವೃತ್ತಿ ಎನ್ನಲಾಗಿದೆ. ಅಭಿದೆ ಲಕ್ಷಣೆ, ತಾತ್ಪರ್ಯ ಎಂಬ ಮೂರು ವೃತ್ತಿಗಳು ಒಂದು ಶಬ್ದದಿಂದ ತಿಳಿಸಿಯಾದ ಮೇಲೆ ಬೇರೊಂದು ಅರ್ಥವನ್ನು ಆ ಶಬ್ದದಿಂದ ತಿಳಿಸಿಕೊಡುವ ವೃತ್ತಿಯೇ ವ್ಯಂಜನೆ ಎಂದು ಕರೆಯಲಾಗಿದೆ. ಇವು ಶಬ್ದದಲ್ಲೂ, ಅರ್ಥದಲ್ಲೂ ಪ್ರಕೃತಿಯಲ್ಲೂ, ಪ್ರತ್ಯಯದಲ್ಲೂ ಇರುವುದರಿಂದ ಇದನ್ನು ವ್ಯಂಜನ, ದ್ವನನ, ಪ್ರತ್ಯಾಯನ, ಗಮನ, ದ್ಯೋತನ ಎಂಬ ಪರ್ಯಾಯ ಶಬ್ದಗಳಿಂದ ಕರೆಯಲಾಗಿದೆ. ಈ ವ್ಯಂಜನೆಯು ಅಭಿಧೆಯನ್ನು ಲಕ್ಷಣೆಯನ್ನು ಅವಲಂಬಿಸಿರುವುದ–ರಿಂದ ಎರಡು ಬಗೆಯಾಗಿದೆ. ಇವುಗಳಲ್ಲಿ ಅಭಿದಾಮೂಲವ್ಯಂಜನ.

**ಅನೇಕಾರ್ಥಸ್ಯ ಶಬ್ದಸ್ಯ ಸಂಯೋಗದ್ಯೈರ್ನಿಯಂತ್ರಿತೇ ।**
**ಏಕತರ್ತಾರ್ಥನ್ಯಥಿ ಹೇತುರ್ವ್ಯಂಜನಾ ಸಾಽಭಿಧಾಶ್ರಯಾ ॥**

ಅನೇಕಾರ್ಥಗಳನ್ನು ತಿಳಿಸಬಹುದಾದ ಒಂದು ಶಬ್ದದ ವೃತ್ತಿಯನ್ನು ಒಂದು ಅಥ–ರ್ದಲ್ಲಿ ವ್ಯವಸ್ಥೆಗೊಳಿಸಲು ಸಂಯೋಗ ಮೊದಲಾದ ಸಾಧನಗಳಿವೆ. ಅವುಗಳ ಮೂಲಕ ಅಭಿಧಾವೃತ್ತಿಯಿಂದ ಒಂದು ಶಬ್ದದ ಅರ್ಥವು ಇಂತಹದೆಂದು ನಿಷ್ಕರ್ಷವಾದ ಮೇಲೆ ಅದೇ ಶಬ್ದದಿಂದ ಬೇರೊಂದು ಅರ್ಥವು ತೋರುತ್ತದೆ. ಇದಕ್ಕೆ ಸಾಧನವೆನಿಸಿದ ವೃತ್ತಿಯೇ ವ್ಯಂಜನ ಎನಿಸಿದೆ. ಇಲ್ಲಿ ಆದ್ಯಪದದಿಂದ ವಿಪ್ರಯೋಗ ಮೊದಲಾದ ಇತರ ಸಾಧನೆಗಳನ್ನು ಇಲ್ಲಿ ತಿಳಿಸಲಾಗಿದೆ.

**ಸಂಯೋಗೋ ವಿಪ್ರಯೋಗಶ್ಚ ಸಾಹಚರ್ಯಂ ವಿರೋಧಿತಾ।**
**ಅರ್ಥಃ ಪ್ರಕರಣಂ ಲಿಂಗಂ ಶಬ್ದಸ್ಯಾನ್ಯಸ್ಯ ಸನ್ನಿದಿಃ ॥**
**ಸಾಮರ್ಥ್ಯ ಮೌಚಿತೀ ದೇಶಃ ಕಾಲೋ ವ್ಯಕ್ತಿಃ ಸ್ವರಾದಯಃ ।**
**ಶಬ್ಧಾರ್ಥಸ್ಯಾನವಚ್ಛೇದೇ ವಿಶೇಷಸ್ಮೃ ಹೇತವಃ**[೩೫]**॥**

ಸಂಯೋಗ, ವಿಯೋಗ, ಸಹಚರ್ಯ, ವಿರೋಧ, ಅರ್ಥ, ಪ್ರಕರಣ, ಲಿಂಗ, ಅನ್ಯಶಬ್ದದಸನ್ನಿದಿ, ಸಾಮರ್ಥ್ಯ, ಔಚಿತ್ಯ, ದೇಶ, ಕಾಲ, ವ್ಯಕ್ತಿ, ಸ್ವರ ಇವೇ ಮೊದಲಾದವು ಶಬ್ದ ಅರ್ಥ ಸಂದಿಗ್ಧವಾದ ಸೃಷ್ಟಿಕರಣಕ್ಕಾಗಿ ಸಹಾಯಕವಾಗುವವು ಎಂದು ಹೇಳಿದ ಪ್ರಕಾರ.

'ಶಂಖ ಚಕ್ರಗಳುಳ್ಳ ಹರಿ' ಎಂಬಲ್ಲಿ ಸಂಯೋಗವನ್ನು 'ಶಂಖ ಚಕ್ರಗಳಿಲ್ಲದ ಹರಿ' ಎಂಬಲ್ಲಿ ಹರಿಯೆಂದರೆ ಶ್ರೀವಿಷ್ಣುವೇ, ಎಂಬಲ್ಲಿ ವಿಯೋಗವನ್ನು, 'ರಾಮಲಕ್ಷ್ಮಣ–

ರು' ಎಂಬಲ್ಲಿ ದಶರಥನ ಮಕ್ಕಳೇ ಎಂಬಲ್ಲಿ ಸಾಹಚರ್ಯೆಯನ್ನು 'ಅವರಿಬ್ಬರಿಗೊ ರಾಮಾರ್ಜುನರ ಗತಿಯಾಯಿತು' ಎಂಬಲ್ಲಿ ವಿರೋಧವನ್ನು ಪರಶುರಾಮ ಮತ್ತು ಕಾರ್ತಿವೀರ್ಯಾರ್ಜುನರೇ 'ಭವನಾಶಕನಾದ ಸ್ಥಾಣುವನ್ನು ಭಜಿಸು' ಎಂಬಲ್ಲಿ ಅಥ-ರ್ವನ್ನು ಶಿವನೆ 'ದೇವನಿಗೆ ಎಲ್ಲವೂ ಗೊತ್ತಿದೆ' ಎಂಬಲ್ಲಿ ಪ್ರಕರಣೆಯನ್ನು ದೇವನೆಂದರೆ ನೀನು 'ಮಕರಧ್ವಜನು ಕುಪಿತನಾಗಿರುವನು' ಎಂಬಲ್ಲಿ ಕಾಮ ಇಲ್ಲಿ ಲಿಂಗವನ್ನು ಪುರವೈ-ರಿಯಾದ ದೇವನೆಂದರೆ ಶಂಭು ಇಲ್ಲಿ ಅನ್ಯಶಬ್ದ ಸನ್ನಿದಿ, 'ಮಧುವಿನಿಂದ ಕೋಗಿಲೆ ಮತ್ತವಾಗಿದೆ' ಎಂದರೆ ವಸಂತದಲ್ಲಿ ಇಲ್ಲಿ ಸಾಮರ್ಥ್ಯವನ್ನು, 'ಕಾಂತಮುಖರಕ್ಷಿಸಲಿ' ಎಂದರೆ ಸಮ್ಮೂಖವಾಗಲಿ ಎಂಬಲ್ಲಿ ಔಚಿತ್ಯವನ್ನು, 'ರಾಜಧಾನಿಯಲ್ಲಿ ಪರಮೇಶ್ವರು ಶೋಭಿಸುತ್ತಾನೆ'. ಇಲ್ಲಿ ದೇಶವನ್ನು ಎಂದರೆ ರಾಜನು 'ಚಿತ್ರಬಾನು ಬೆಳಗುತ್ತಾನೆ' ಎಂದು ಹಗಲಿನಲ್ಲಿ ಅಂದರೆ ಸೂರ್ಯ ಅದನ್ನೇ ರಾತ್ರಿಯಲ್ಲಿ ಹೇಳಿದರೆ ಬೆಂಕಿಂ-ಮು ಇಲ್ಲಿ ಕಾಲವನ್ನು, 'ಮಿತ್ರ ಬೆಳಗುತ್ತಾನೆ'. ಮಿತ್ರನೆಂಬುದು ನಪುಂಸಕ ಲಿಂಗದಲ್ಲಿ ಪ್ರಯೋಗಿಸಲ್ಪಟ್ಟರೆ ಸ್ನೇಹಿತ, ಅದೇ ಪುಲ್ಲಿಂಗಲ್ಲಿದ್ದಾಗ ಸೂರ್ಯ ಇಲ್ಲಿ ವ್ಯಕ್ತಿಯನ್ನು, ಸ್ವರವು 'ಇಂದ್ರ ಶತ್ರು ಮೊದಲಾದ ವೇದಪ್ರಯೋಗಗಳಲ್ಲಿ ಮಾತ್ರ ವಿಶೇಷಾರ್ಥವನ್ನು ಕೊಡುತ್ತದೆ'. ಆದರಿಂದ ವೇದದಲ್ಲಿ ಮಾತ್ರವೇ ಉದಾತ್ತ ಮೊದಲಾದ ರೊಪದಿಂದ ನೆಲಸಿ ಅರ್ಥ ವಿಶೇಷವನ್ನು ನಿರ್ಣಯಿಸಲು ಸಾಧನವೆನಿಸಿದೆ. ಕಾವ್ಯದಲ್ಲಿ ಇದರ ಉಪಯೋಗವಿಲ್ಲದ್ದರಿಂದ ಇದರ ಬಗ್ಗೆ ಉದಾಹರಣೆಯನ್ನು ಕೊಟ್ಟಿಲ್ಲ. ಆದರೆ, ಕೆಲವು ಲಾಕ್ಷಣಿಕರು ಈ ಅಂಶವನ್ನು ಒಪ್ಪುವುದಿಲ್ಲ. ಏಕೆಂದರೆ ಸ್ವರವು ಸಹ ಕಾಕು ಮೊದಲಾದ ರೂಪದಿಂದ ಕಾವ್ಯದಲ್ಲಿ ನೆಲಸಿ ವಿಶೇಷವಾದ ಅರ್ಥವನ್ನು ನಿರ್ಣಯಿಸಲು ಸಾಧಕವಾಗಿದೆ ಎಂಬುದು ಇವರ ಮತವಾಗಿದೆ. [ಇಲ್ಲಿ ಕಾಕು ಎಂದರೆ ಧ್ವನಿಯ ವಿಕಾರ, ವಿಕೃತವಾದ ಧ್ವನಿ ಎಂದರ್ಥ] ಉದಾತ್ತ ಮೊದಲಾದ ಸ್ವರಗಳಂತೋ ಒಂದೊಂದು ರಸದ ಅಭಿವ್ಯಕ್ತಿಗೆ ಸಾಧಕವೆನಿಸಿದೆ.[೩೬] ಅವು ಶೃಂಗಾರ ಮೊದಲಾದ ರಸಗಳ ಪರಿಚಯವನ್ನು ಮಾಡಿಸುವುದರಿಂದ ಸ್ವರಗಳ ಬಗ್ಗೆ ಉದಾಹರಣೆಗಳನ್ನು ಕೊಡುವುದು ಯುಕ್ತವೇ ಆಗಿದೆ ಎಂಬುದು ಈ ಲಾಕ್ಷಣಿಕರ ಮತವಾಗಿದೆ. ಆದರೆ ಇದು ಸಮಂಜಸವಾಗಿಲ್ಲ ವೆನ್ನುತ್ತಾರೆ. ಏಕೆಂದರೆ ಸ್ವರಗಳು ಕಾಕು ಮೊದಲಾದವೇ ಆಗಲಿ ಉದಾತ್ತ ಮೊದಲಾದವೇ ಆಗಲಿ ವ್ಯಂಗ್ಯವೆನಿಸಿದ ವಿಶೇಷರ್ಥವನ್ನು ಸೂಚಿಸಬಲ್ಲವೇ ಹೊರತು ಅನೇಕಾರ್ಥಕ ಶಬ್ದದಿಂದ ಒಂದು ಅರ್ಥವನ್ನು ನಿರ್ಣಯಿಸಲು ಸಾಧಕವಾಗಲಾರವು. ಶ್ಲೇಷಾಲಂಕಾರ ವನ್ನು ನಿರೂಪಿಸುವಾಗ ಕಾವ್ಯದಲ್ಲಿ ಅನೇಕಾಥ-ರ್ಗಳನ್ನು ತಿಳಿಸುವ ಪದಗಳಿದ್ದು ಅಲ್ಲಿ ಅರ್ಥ ನಿರ್ಣಯವು ಸಂದೇಹ ಬಂದಾಗ ಸ್ವರದ ಬಲದಿಂದ ಅರ್ಥವನ್ನು ನಿರ್ಣಾಯಿಸಲಿಕ್ಕಾಗುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಸ್ವರದ ವಿಚಾರವು ಇಲ್ಲಿ ಅಪ್ರಸ್ತುತವಾದರಿಂದ  ಈ ವಿಚಾರವನ್ನು ಇಲ್ಲಿಯೇ ನಿಲ್ಲಿಸಲಾಗಿದೆ.

**ಲಕ್ಷಣೋಪಾಸ್ಯತೇ ಯಸ್ಯ ಕೃತೇ ತತ್ತು ಪ್ರಯೋಜನಮ್**
**ಯಯಾ ಪ್ರತ್ಯಾಯ್ಯತೇ ಸಾ ಸ್ಯಾತ್ ವ್ಯಂಜನಾ ಲಕ್ಷಣಾಶ್ರಯಾ**

[ಸಾಹಿತ್ಯದರ್ಪಣ, ೧೫]

ಯಾವುದಾದರ ಜ್ಞಾನವನ್ನು ಮಾಡಿಕೊಡಲು ಲಕ್ಷಣಾ ವ್ಯಾಪಾರವನ್ನು ಆಶ್ರಯಿಸುತ್ತೇವೆಯೋ ಅದೇ ಅದರ ಪ್ರಯೋಜನವೆನಿಸಿದೆ. ಈ ಪ್ರಯೋಜನವು ಯಾವುದರಿಂದ ತಿಳಿದು ಬರುತ್ತದೆಯೋ ಅಂತಹ ವೃತ್ತಿಯೇ ಲಕ್ಷಣಮೂಲವಾದ ವ್ಯಂಜನೆ ಎಂದು ಕರೆಯಲಾಗಿದೆ. ಆದರಿಂದ ಇದು ಲಕ್ಷಣೆಯನ್ನು ಅವಲಂಬಿಸಿ ಅದರ ಮೂಲಕ ತನ್ನ ಕಾರ್ಯವನ್ನು ಸಾಧಿಸುತ್ತದೆ. ಉದಾಹರಣೆಗೆ "ಗಂಗೆಯಲ್ಲಿ ಹಳ್ಳಿ ಇದೆ" ಎಂಬಲ್ಲಿ ಗಂಗಾ ಪದದಿಂದ ಪ್ರವಾಹವೆಂಬ ಅರ್ಥವನ್ನು ಬೋಧಿಸಿದ ಮೇಲೆ ಅಭಿಧಾವೃತ್ತಿಯೂ, ತೀರ ಎಂಬ ಅರ್ಥವನ್ನು ತಿಳಿಸಿದ ಮೇಲೆ ಲಕ್ಷಣಾ ವೃತ್ತಿಯು ಕೊನೆಗಾಣಲು ಯಾವ ವೃತ್ತಿಯು ತೀರದಲ್ಲಿ ಹೆಚ್ಚು ಶೈತ್ಯ ಪಾವನತ್ವ ಮೊದಲಾದ ಧರ್ಮ ನೆಲಸಿದ್ದವೆಂಬುದನ್ನು ಗಂಗಾ ಪದದಿಂದ ಬೋಧಿಸಬಲ್ಲದೋ ಅದೇ ಲಕ್ಷಣಾ ಮೂಲಾವ್ಯಂಜನ ಎನಿಸಿದೆ.

ಪದಾರ್ಥಗಳಲ್ಲಿ ಒಂದರಿಂದೊದಕ್ಕೆ ಅನ್ವಯವನ್ನು ತಿಳಿಸಲು ತಾತ್ಪರ್ಯವೆಂಬ ಇನ್ನೊಂದು ವೃತಿಯನ್ನು ಸಂಪ್ರದಾಯವಾದಿಗಳು ತಿಳಿಸಿದ್ದಾರೆ. ಹೀಗೆ ಪ್ರತಿಯೊಂದು ಪದದಿಂದಲೂ ತೋರುವ ಅರ್ಥಗಳಿಗೆ ಇರುವ ಸಂಬಂಧವನ್ನು ಕಲ್ಪಿಸಲು ಅನುಕೂಲವಾದ ವೃತ್ತಿಯೇ ತಾತ್ಪರ್ಯವೃತ್ತಿಯೆಂದು ಪ್ರಾಚೀನ ನೈಯಾಯಿಕರು ತಿಳಿಸಿದ್ದಾರೆ. ಅಭಿಧೆಯು ಒಂದೊಂದು ಪದದ ಅರ್ಥವನ್ನು ತಿಳಿಸಿ ವಿಶ್ರಾಂತಿ ಹೊಂದಿದ ಮೇಲೆ ಆ ಪದಾರ್ಥಗಳಿಗೆ ಅನ್ವಯವಾಗುವ ವಾಕ್ಯಾರ್ಥವನ್ನು ತಿಳಿಸುವುದಕ್ಕಾಗಿ ತಾತ್ಪರ್ಯವೆಂಬ ವೃತ್ತಿಯು ಪ್ರವರ್ತಿಸುತ್ತದೆ. ಅದರಿಂದ ತಿಳಿದು ಬರುವ ಅರ್ಥವೇ ತಾತ್ಪರ್ಯಾರ್ಥವೆನಿಸುತ್ತದೆ. ಅದನ್ನು ತಿಳಿಸುವುದೇ ವಾಕ್ಯವೆನಿಸುತ್ತದೆ. ಅದರಿಂದ ತಾತ್ಪರ್ಯಾರ್ಥವನ್ನು ತಿಳಿಸುವುದು ವಾಕ್ಯವೇ ಹೊರತು ಪದವಲ್ಲ ತಾತ್ಪರ್ಯವೆಂಬ ವೃತ್ತಿಯೇ ಹೊರತು ಅಭಿಧಾವೃತ್ತಿ ಅಲ್ಲವೆಂಬುದನ್ನು ಸ್ಪಷ್ಟಿಕರಿಸಿದ್ದಾರೆ. ಈ ತಾತ್ಪರ್ಯ ವೃತ್ತಿಯನ್ನು ತಿಳಿಸುವರೇ ಅಭಿಹಿತ್ವಾನಯವಾದಿಗಳು. ಅಭಿಹಿತವೆಂದರೆ ಶಬ್ದದಿಂದ ತಿಳಿದು ಬರುವ ಅರ್ಥಗಳು ಇವುಗಳಿಗೆ ಅನ್ವಯವೆಂದರೆ ಪರಸ್ಪರ ಸಂಬಂಧ ಇದು ತಾತ್ಪರ್ಯವೆಂಬ ವೃತ್ತಿಯಿಂದ ತಿಳಿದು ಬರುವುದೇ ಅಭಿಹಿತಾನ್ವಯವಾದ.

"ಅರ್ಥಾನಾಂ ಅಭಿಹಿತಾನಾಂ ಉತ್ತರಕಾಲಂ ಪರಸ್ಪರನ್ವಯಾತ್ ಅಭಿಹಿತಾನ್ವಯಃ [ಮುಕುಲ "ಅಭಿಧಾವೃತ್ತಿಮಾತೃಕಾ"] ಈ ಅಭಿಹಿತನ್ವಯವಾದವನ್ನು ಮೀಮಾಂಸಕರಲ್ಲಿ ಕುಮಾರಿಲಭಟ್ಟನು, ಮತ್ತು ಅಲಂಕಾರಿಕರಲ್ಲಿ ಅನಂದವರ್ಧನ, ಅಭಿನವಗುಪ್ತ, ಮಮ್ಮಟ ಮೊದಲಾದ ಅಲಂಕಾರಿಕರು ಈ ಪಕ್ಷವನ್ನೇ ಮುಖ್ಯವಾಗಿ ಅನುಸರಿಸಿದ್ದಾರೆ. ಇವರಿಗೆ ವಿರುದ್ಧವಾಗಿ ಅನ್ವಿತಾಬಿಧಾನವಾದಿಗಳು ಇವರ ಪ್ರಕಾರ ಶಬ್ದಗಳು ಅರ್ಥಗಳೊಡನೆ

ಅನ್ವಿಹಿತವಾಗಿಯೇ ತೋರುತ್ತದೆಂಬುದೇ ಇವರ ವಾದ. ಶಬ್ದಶಕ್ತಿಯಿಂದ ತೋರುವ ಪದಾರ್ಥಗಳು ವಾಕ್ಯದಲ್ಲಿ ಒಂದೊಂದು ಪರಸ್ಪರವಾಗಿ ಸಾಮಾನ್ಯ ರೂಪದಲ್ಲಿ ಹೊಂದಿಕೊಂಡೇ ತೋರುತ್ತದೆ ಎಂದು ವಾದಿಸುವರೇ ಅನ್ವಿತಾಭಿಧಾನ ವಾದಿಗಳು ಈ ವಾದವನ್ನು ಪ್ರಭಾಕರನೂ[೩೭] ಕೆಲವು ವೇದಾಂತಿಗಳು ಒಪ್ಪಿದ್ದಾರೆ. ಇಲ್ಲಿಗೆ ತಾತ್ಪರ್ಯ ವೃತ್ತಿಯ ಬಗ್ಗೆ ವಿವೇಚಿಸಲಾಯಿತು.

**ವಕ್ತೃಬೋಧ್ದವ್ಯವಾಕ್ಯಾನಾಂ ಅನ್ಯಸನ್ನಿದಿವಾಚ್ಯಯೊಃ ।**
**ಪ್ರಸ್ತಾವದೇಶಕಾಲಾನಾಂ ಕಾಕೋಶ್ಚೆಷ್ಟಾಧಿಕಸ್ಯ ಚ ॥**

[ಸಾಹಿತ್ಯದರ್ಪಣ, ೨, ೧೭]

ಶಬ್ದಕ್ಕೆ ಸಂಬಂಧಿಸಿದ ವ್ಯಂಜನಾ ವೃತ್ತಿಯನ್ನು ತಿಳಿಸಿ ಈಗ ಅರ್ಥಕ್ಕೆ ತಿಳಿಸಿದ ವ್ಯಂಜನೆಯ ಸ್ವರೂಪವನ್ನು ತಿಳಿಸಲಾಗಿದೆ. ಯಾವುದಾದರೊಂದು ಅಂಶವನ್ನು ತಿಳಿಸುವವನು ಅದನ್ನು ಕೇಳುವವನು, ಹೇಳುವವನು ಮಾತು, ಮತ್ತೊಬ್ಬನ ಸಾನ್ನಿಧ್ಯ, ಇಷ್ಟಾರ್ಥ, ಸಂದರ್ಭ, ದೇಶ, ಕಾಲ, ಕಾಕು, ಅಂಗಚೇಷ್ಟೆ, ಇತ್ಯಾದಿಗಳಿಂದ ತೋರುವ ವೈಶಿಷ್ಟ್ಯದಿಂದ ಒಂದು ಅರ್ಥವು ಬೇರೊಂದು ಅರ್ಥವನ್ನು ತಿಳಿಸಲು ಸಾಧಕವಾದ ವೃತ್ತಿಯೇ ಆರ್ಥೀವ್ಯಂಜನೆ, ಎನ್ನಲಾಗಿದೆ. ಹೇಳುವವನ ವೈಶಿಷ್ಟದಿಂದ ತೋರುವ ವ್ಯಂಗ್ಯಾರ್ಥಕ್ಕೆ 'ಕಾಲೋ ಮಧುಃ' ಎಂಬ ಶ್ಲೋಕವನ್ನು ಉದಾಹರಿಸಲಾಗಿದೆ. ಕೇಳುವವನ ವ್ಯಂಗ್ಯಾಂರ್ಥಕ್ಕೆ 'ನಿಶ್ಯೇಷ ಚ್ಯುತ್ ಚಂದನಂ[೩೮]' ಎಂಬ ಶ್ಲೋಕವನ್ನು ಉದಾಹರಿಸಲಾಗಿದೆ. ಇನ್ನು ಅನ್ಯಸನ್ನಿದಿ ವೈಶಿಷ್ಟ್ಯಕ್ಕೆ 'ಪಶ್ಯ ನಿಶ್ಚಲ' [ಗಾಥಾಸಪ್ತಶತಿಯ ನಾಲ್ಕನೆಯ ಶ್ಲೋಕ] ಎಂಬುದನ್ನು ಉದಾಹರಿಸಲಾಗಿದೆ. ಇನ್ನು ಅಂಗಚೇಷ್ಟೆಯ ವೈಶಿಷ್ಟ್ಯದಿಂದ ತೋರುವ ವ್ಯಂಗಾರ್ಥ್ಯಕ್ಕೆ 'ಗುರುಪರತಂತ್ರಯಾ' ಎಂಬ ಶ್ಲೋಕವನ್ನು ಉದಾಹರಿಸಲಾಗಿದೆ. ಹೀಗೆ ವ್ಯಂಗಾರ್ಥವನ್ನು ಸೂಚಿಸಲು ಹಿಂದೆ ಹೇಳಿದವುಗಳ ವೈಶಿಷ್ಟದಲ್ಲಿ ಅವೆಲ್ಲವನ್ನು ಸಹ ಒಟ್ಟಿಗೆ ಸೇರಿಸಬಹುದು. ಅಥವಾ ಒಂದೊಂದೆ ಆದರೂ, ಎರಡು ಮೂರಾದರೂ ಸೇರಿಸಬಹುದು.

ಅರ್ಥಗಳು ಮೂರು ಬಗೆಯಾಗಿರುವುದರಿಂದ ಅರ್ಥಕ್ಕೆ ಸಂಬಂಧಿಸಿದ ವ್ಯಂಜನೆಗಳು ಸಹ ಮೂರು ಬಗೆಯಾಗಿದೆ. ವಾಚ್ಯದಿಂದ ಬರುವ ಅರ್ಥಕ್ಕೆ ವಾಚ್ಯಾರ್ಥವೆಂದೂ ಲಕ್ಷ್ಯದಿಂದ ಬರುವ ವ್ಯಂಜನೆಗೆ ಲಕ್ಷ್ಯಾರ್ಥವೆಂದು, ವ್ಯಂಗ್ಯದಿಂದ ಬರುವ ಅರ್ಥಕ್ಕೆ ವ್ಯಂಗ್ಯಾರ್ಥವೆಂದೂ ಹಿಂದೆ ಉದಾಹರಿಸಿದ ಶ್ಲೋಕಗಳೇ ಇವಕ್ಕೂ ಉದಾಹರಣೆಯಾಗಿದೆ. ಆದ್ದದರಿಂದ ಶಬ್ದವೂ ವ್ಯಂಜಕವಾದರೆ ಅರ್ಥವನ್ನು ಅಪೇಕ್ಷಿಸುತ್ತದೆ. ಹೀಗೆ ಪ್ರಕೃತಿ ಪ್ರತ್ಯಯಗಳಿಂದ ವ್ಯಂಗ್ಯಾರ್ಥವು ತೋರುವುದನ್ನು ಮುಂದೆ ಉದಾಹರಿಸಲಾಗಿದೆ.

ವಿಶ್ವನಾಥನು ಮಾಡಿರುವ ಶಬ್ದಾರ್ಥದ ಚಿಂತನೆಯನ್ನು ಅವನು ಮಾಡಿರುವ ರೂಢಿ ಮೂಲವಾದ ಮತ್ತು ಪ್ರಯೋಜನ ಮೂಲವಾದ ಎಂಬತ್ತು ಬಗೆಯ ಭೇದ ಪ್ರಭೇದಗಳನ್ನು ಉದಾಹರಿಸಿರುವುದು ವಿಶ್ವನಾಥನ ಬುದ್ಧಿಚಾತುರ್ಯಕ್ಕೆ ಸಾಕ್ಷಿಯಾಗಿದೆ. ಮಮ್ಮಟಾದಿ ಅಲಂಕಾರಿಕರು ಶಬ್ದಾರ್ಥದ ಚಿಂತನೆಯನ್ನು ಮುಖ್ಯವಾದ ವಿಚಾರಗಳನ್ನು ಮಾತ್ರ ನಿರೂಪಿಸಿದ್ದಾರೆ. ಆದರೆ, ವಿಶ್ವನಾಥನು ಶಬ್ದಾರ್ಥದ ಚಿಂತನೆಯ ಆಳವನ್ನು ಹೊಕ್ಕಿದ್ದಾನೆ. ಇತ್ಯಾದಿ ವಿಚಾರಗಳನ್ನು ಉದಾಹರಣೆ ಸಹಿತವಾಗಿ ನಿರೂಪಿಸಲಾಗಿದೆ.

* * * *

## ಅಡಿಟಿಪ್ಪಣಿಗಳು

1. ಸಂಸ್ಕೃತಕವಿಚರಿತೆ, ಎಂ. ಎಸ್. ಶ್ರೀನಿವಾಸ್ ಅಯ್ಯಂಗಾರ್
2. "ಸಕಲ ಪ್ರಯೋಜನ ಮೌಲಿಭೂತಂ ಸಮನಂತರಮೇವ ರಸಾಸ್ವಾದನ ಸಮದ್ಭೂತಂ ವಿಗಲಿತ ವೇದ್ಯಾಂತರಂ ಆನಂದಮ್" (ವೃತ್ತಿ)
3. ಮಮ್ಮಟನ ಅಭಿಪ್ರಾಯದಲ್ಲಿ, ಧನಾರ್ಜನೆ ಕವಿಗೆ, ವ್ಯವಹಾರಜ್ಞಾನ ಸಹೃದಯನಿಗೆ ಎಂಬುದು ಸ್ಪಷ್ಟ, ಅನರ್ಥ ನಿವಾರಣೆಯನ್ನು ಕಾವ್ಯಫಲವಾಗಿ ಹೇಳಿರುವುದು ಆಧುನಿಕರಿಗೆ ವಿಚಿತ್ರವಾದರೂ ಬಾಣನ ಸಮಕಾಲೀನವಾದ

   ಮಯೂರ ಕವಿ ತನಗೆ ಒದಗಿದ್ದತೂನ್ನನ್ನು 'ಸೂರ್ಯಶತಕ'ದ ರಚನೆಯಿಂದ ಕಳೆದುಕೊಂಡನಂತೆ ಮಮ್ಮಟನ ಈ ಹೇಳಿಕೆಗೆ ಈ ಐತಿಹ್ಯ ಆಧಾರವಾಗಿದೆ.
4. "ಯಾವತ್ ಪೂರ್ಣೋ ನ ಚೈತೇ ನ್ ತಾವನ್ನೈವ ಮಮತ್ಯಮ್" [ಭಟ್ಟನಾಯಕ]
5. ಸುಭಾಷಿತಾವಲಿ "ಭಟ್ಟ ಗೋವಿಂದ ಸ್ವಾಮಿನಃ" 190.
6. ಪುರ ಇವ ಪ್ರಿಸ್ಫುರನ್ ಹೃದಯಮಿವ ಪ್ರವಿಶನ್ ಸರ್ವಾಂಗೀಣಮಿವ ಆಲಿಂಗನ್, ಅನ್ಯತ್ ಸರ್ವಮಿವ ತಿರೋದತ್, ಬ್ರಹ್ಮಸ್ವಾದಮಿವ ಅನುಭಾವಯನ್ [ಕಾವ್ಯಪ್ರಕಾಶ, 4, 5]
7. ನರತ್ವಂ ದುರ್ಲಭಂ ಲೋಕೇ ವಿದ್ಯಾತತ್ರ ಸುದುರ್ಲಭಾ ।  
   ಕವಿತ್ಯಂ ದುರ್ಲಭಂ ತತ್ವ ಶಕ್ತಿ ಸುತ ದುರ್ಲಭಾ ॥  
   [ವಿಷ್ಣು ಪುರಾಣ]
8. 'ಧ್ವನ್ಯಾ ಲೋಕ', ಮದರಾಸು ಸಂಸ್ಕರಣ, ಪು. 168.
9. ಚತುರ್ವರ್ಗಫಲಾಸ್ವಾದಮಪ್ಯತಿಕ್ರಮ್ಯ ತದ್ವಿದಾಮ್।  
   ದಿವ್ಯಾಮೃತರಸೇನಾಂತಶ್ಯಮತ್ಯಾರೋ ವಿತನ್ಯತೇ ॥  
   [ವಕ್ರೋಜೀವಿತ, 1. 5]
10. ಇಲ್ಲಿ 'ಇಷ್ಟ'ವೆಂದರೆ ಪ್ರಿಯ, ರಮ್ಯ ಎಂದು ಅಪಾತತಃ ತೋರುತ್ತದೆ. ಆದರೆ ಕಾವ್ಯಾದರ್ಶದ ಪ್ರಾಚೀನ ವ್ಯಾಖ್ಯಾನಕಾರರಿಬ್ಬರೂ "ಇಷ್ಟ=ವಿವಕ್ಷಿತ" ಎಂದು ಅಥ–ರ್ೈಸಿದ್ದಾರೆ. [ಎಂ. ರಂಗಾಚಾರ್ಯ ಸಂಸ್ಕರಣ ನೋಡಿ]
11. ವ್ಯಕ್ತಿವಿವೇಕ ಪು. 139
12. ಅದೋಷೌ ಸಗುಣೌ ಸಾಲಂಕಾರೌ ಚ ಶಬ್ದಾರ್ಥೌ ಕಾವ್ಯಮ್ [ಕಾವ್ಯಾನುಶಾಸನ, ಪು 19]
13. ಈ ಶ್ಲೋಕವು ಭಟ್ಟನಾಯಕನ 'ಹೃದಯ ದರ್ಪಣ'ವೆಂದು ಪ್ರಭಾಕರಭಟ್ಟನ ರಸಪ್ರದೀಪದಲ್ಲಿ ಉಕ್ತವಾಗಿದೆ. [ಪು. 3]
14. ಸಾಹಿತ್ಯದರ್ಪಣ (ಪುಟ 7)

15. ಮಮ್ಮಟ, ಕಾವ್ಯಪ್ರಕಾಶ, 8ನೆ ಉಲ್ಲಾಸ
16. ಕಾವ್ಯ ಪ್ರಕಾಶ, ಉದಾಹರಿತ ಶ್ಲೋಕ 1. 2
17. ಡಾ. ಕೆ. ಕೃಷ್ಣಮೂರ್ತಿ, ಕನ್ನಡ ಕಾವ್ಯಪ್ರಕಾಶ, ಪು. 3
18. ವಾಮನನ ಕಾವ್ಯಾಲಂಕಾರಸೂತ್ರವೃತ್ತಿ, 1,1,1 ವೃತ್ತಿ "ಗುಣವದಲಂಕೃತಂ ಚ ವಾಕ್ಯ ಮೇವ ಕಾವ್ಯಂ" ಎಂಬ ರಾಜಶೇಖರನ ಉಕ್ತಿಯನ್ನು ಇದರೊಂದಿಗೆ ಹೋಲಿಸಿ [ಕಾವ್ಯಮಿಮಾಂಸಾ, ಪು.24]
19. ವಾಮನನ ಕಾವ್ಯಾಲಂಕಾರ ಸೂತ್ರವೃತ್ತಿ 12.6
20. ವಕ್ರೋಕ್ತಿ ಜೀವಿತ 1, 2
21. "ರ್ಥಾನಾಂ ಅಭಿಹಿತಾನಾಂ ಉತ್ತರ ಕಾಲಂ ಪರಸ್ಪರಾನ್ವಯಾತ್ ಅಭಿಹಿತಾನ್ವಯಃ"[ಮುಕುಲಃ ಅಭಿಧಾವೃತ್ತಿ ಮಾತೃಕ ಪು 15]
22. "ವಾಚ್ಯ ಏವ ವಾಕ್ಯರ್ಥಃ ಪದನೇವ ವಾಕ್ಯಂ, ಪದಾರ್ಥ ಏವ ತದರ್ಥಃ, ತು ಪದಾಥ–ರ್ೀಭ್ಯೋ ವಾಕ್ಯಾರ್ಥಃ [ಕಾವ್ಯಪ್ರಕಾಶ ಸಂಕೇತ ವ್ಯಾಖ್ಯಾ, ಪು 18].
23. ಮೀಮಾಂಸಕರಲ್ಲಿ ಕುಮಾರಿಲಭಟ್ಟನ್ನು ಅಭಿಹಿತಾನ್ವಯವಾದಿ, ಪ್ರಭಾಕರನು ಅನ್ವಿತಾಭಿಧಾನವಾದಿ [ವಾಚಾಸ್ಪತಿ ಮಿಶ್ರನ 'ತತ್ವಬಿಂದು V.A Ramaswami satri's Introduction PP 38–39 ನೋಡಿ]
24 'ವಾಕ್ಯದೀಯ' 9, 8–13 ನೋಡಿ.
25 ಶಕ್ತಿ ಗ್ರಹಂ ವ್ಯಾಕರಣೋಪಮಾನ ।
ಕೋಶಾಪ್ತ ವಾಕ್ಯವ್ಯವಹಾರತಶ್ವ ॥
ವಾಕ್ಯಸ್ಯ ಶೇಷಾದ್ವಿವೃತೇರ್ವದಂತಿ ।
ಸಾನ್ನಿಧ್ಯತಃ ಸಿದ್ಧಪದಸ್ಯ ವೃದ್ಧಾಃ ॥
['ಶಬ್ದಶಕ್ತಿಪ್ರಕಾಶಿಕಾ', ಪು. 103. ವ್ಯಾಖ್ಯಾ]
26. ಆಸ್ಮಾತ್ ಪದಾತ್ ಅಯಮರ್ಥೋ ಬೋದ್ಧವ್ಯ ಇತಿ ಈಶ್ವರೇಚ್ಛಾಃ [ಸಂಕೇತಃ] ಶಕ್ತಿಃ – ಕಾರಿಕಾವಲೀ
27. ಶಬ್ದದಿಂದ ಮೊದಲು ವಾಚ್ಯಾರ್ಥವು ಹೊರಟು ಬಳಿಕ ಲಕ್ಷಾರ್ಥ್ಯವು ತೋರುವುದ–ರಿಂದ, ಶಬ್ದಕ್ಕೂ ಲಕ್ಷ್ಯಾರ್ಥಕ್ಕೂ ನೇರವಾದ ಸಂಬಂಧವಿಲ್ಲ. ಆದರೂ ನಿರೂಪಣೆಯ ಸೌಕರ್ಯಕ್ಕಾಗಿ ಲಕ್ಷಣಾವೃತ್ತಿಯನ್ನು ಶಬ್ದಕ್ಕೆ ಆರೋಪಿಸಿ ಅದನ್ನು ಶಬ್ದವ್ಯಾಪಾರವೆಂದು ಕರೆಯಲಾಗಿದೆ.

**ಮುಖ್ಯಾರ್ಥಬಾಧೇ ತದ್ಯೋಗೇ ರೊಢಿ ತೋsಥ ಪ್ರಯೋಜನಾತ್ ।**
**ಅನ್ಯೋsರ್ಥೋ ಲಕ್ಷತೆ ಯತ್ ಸಾ ಲಕ್ಷಣಾರೋಪಿತಾಕ್ರಿಯಾ ॥**

[ಕಾವ್ಯ ಪ್ರಕಾಶ, 2.4]

28. "ಅಭಿಧಾ ಪುಚ್ಚಭೋತ್ಯೈಬ ಲಕ್ಷಣಾ"

[ಧ್ವನ್ಯಾಲೋಚನ, ಪು 55]

29. "ಧ್ವೆ ನ್ಯಾಲೋಕ ಲೋಚನ" ಪು. 57.

30. ಇಂಗ್ಲೀಷಿನಲ್ಲಿ ಮೃತರೂಪಕ [dead metaphor] ಎನ್ನುವುದು ರೂಢಿಲಕ್ಷಣೆಯ ಒಂದು ಪ್ರಭೇದ ಎನ್ನುವುದೇ ಅದಕ್ಕೆ ಲಕ್ಷ್ಯವೂ ಆಗಬಹುದು.

31. ಸಾರೋಪನ್ಯ ತು ಯಾತ್ರೌಕ್ತಪೌ ವಿಷಯ ವಿಷಯಸ್ತತಾ ತಾ

[ಮಮ್ಮಟ, ಕಾವ್ಯಪ್ರಕಾಶ]

32. ಸ್ವಸಿದ್ದಯೇ ಪರಾಕ್ಷೇಪಃ ಪರಾರ್ಥ ಸ್ವಸಮರ್ಪಣಮ್ ।

ಉಪದಾನಂ ಲಕ್ಷಣಂ ಜೇತ್ಯುಕ್ತಾ ಶುದ್ದೈವ ಸಾದ್ವಿದಾ ॥

[ಕಾವ್ಯಪ್ರಕಾಶ – 5]

33. ಮಮ್ಮಟನು ಕಾವ್ಯಪ್ರಕಾಶ ಎರಡನೆ ಉಲ್ಲಾಸದಲ್ಲಿ ಅವ್ಯಂಗ್ಯ, ಗೂಢವ್ಯಂಗ್ಯ, ಅಗೂಢ ವ್ಯಂಗ್ಯ ಎಂದು ಮೂರು ಪ್ರಭೇದಗಳನ್ನು ತಿಳಿಸಿದ್ದಾನೆ.

34. ಭವಭೂತಿಯ ಉತ್ತರ ರಾಮಚರಿತದಿಂದ ಆಯ್ದಶ್ಲೋಕ.

35. ಮಮ್ಮಟನ ಕಾವ್ಯಪ್ರಕಾಶದು ಉದಾಹರಿತ ಶ್ಲೋಕ

36. ಭರತ ಮುನಿಯು ಉದಾತ್ತ ಮೊದಲಾದ ಸ್ವರಗಳಂತೂ ಒಂದೊಂದು ರಸದ ಅಭಿವ್ಯಕ್ತಿಗೆ ಸಾಧಕವೆನಿಸಿದೆ ಎಂಬ ವಿಚಾರವನ್ನ ನಾಟ್ಯಶಾಸ್ತ್ರದಲ್ಲಿ ಹೇಳಿದ್ದಾನೆ.

37. ವಾಚಸ್ಪತಿಮಿಶ್ರನ 'ತತ್ತ್ವಬಿಂದು' V.A Ramaswami, Sastri's Introduction, PP 38–39 ನೋಡಿ.

38. ಅಮರುಶತಕದಿಂದ ಆಯ್ದ ಉದಾಹರಿತ ಶ್ಲೋಕ.

# ಅಧ್ಯಾಯ – ೨

# ರಸ ಸ್ವರೂಪ

# ರಸ

ವಿಶ್ವನಾಥನು ನಿರೂಪಿಸಿರುವ ರಸದ ಸ್ವರೂಪವನ್ನು ತಿಳಿಯಿಯುವುದಕ್ಕೆ ಮುಂಚಿತವಾಗಿ ರಸದ ವಿಕಾಸವನ್ನು ತಿಳಿಯುವುದು ಪ್ರಮುಖವಾಗಿದೆ. 'ರಸ' ಎನ್ನುವ ಮಾತು ಬಹಳ ಪ್ರಾಚೀನವಾದುದು. ಋಗ್ವೇದಸಂಹಿತೆಯಲ್ಲಿ ರಸದ ಅನೇಕ ಪ್ರಯೋಗಗಳನ್ನು ಕಾಣಬಹುದು. ಅಲ್ಲಿ ಸನ್ನಿವೇಶಕ್ಕನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು ಆ ಮಾತು ಕೊಡುತ್ತದೆ. 'ರಸ' ಎಂಬ ಪದವು ಎರಡು ವಿಭಿನ್ನಾರ್ಥ-ರ್ಕ ಧಾತುಗಳಿಂದ ಸಿದ್ಧವಾಗಿದೆ ಎಂದು ಹೇಳಲಾಗಿದೆ. 'ರಸ' ಎನ್ನುವ ಮಾತಿಗೆ 'ರುಚಿ ನೋಡುವಿಕೆ' ಎಂಬ ಅರ್ಥ ಉಂಟಾಗಿದೆ. ನಾಲಗೆಗೆ 'ರಸನೆ' ಎಂಬ ಮಾತು ಬಂದಿರುವುದೂ ಇದರಿಂದಲೇ 'ಅರ್ಷ್' ಎಂಬ ಇನ್ನೊಂದು ಧಾತುವಿನಿಂದಲೂ 'ರಸ' ಎಂಬ ರೂಪ ಸಿದ್ಧವಾಗಿದೆ. ಅರ್ಷ್ ಎಂದರೆ ಹರಿಯುವಿಕೆ ವನಸ್ಪತಿ ಮೊದಲಾದವುಗಳಲ್ಲಿ ಹರಿಯುವ ದ್ರವರೂಪವಾದ ತಿರಳು ಅಥವಾ ಸಾರವೆ ರಸ. ಒಟ್ಟಿನಲ್ಲಿ ರಸ ಎನ್ನುವುದಕ್ಕೆ 'ರುಚಿ' ಮತ್ತು 'ಸಾರ' ಈ ಎರಡೂ ಅರ್ಥಗಳು ಉಳಿದು ಅದರ ಉಳಿದ ಛಾಯೆಗಳು ಬೆಳೆದು ಬಂದವು.

'ರಸೇನ ತೃಪ್ತೋ ನ ಕುತಶ್ಚನೋನಃ'[೧] ಎಂಬ ಮಾತು ಅಥರ್ವವೇದದಲ್ಲಿ ಬರುತ್ತದೆ. ಅಲ್ಲಿ ಇದಕ್ಕೆ 'ಮಾಧುರ್ಯ'[೨] ಎಂಬ ಅರ್ಥವಿದೆ. ನಂತರ ಅಥರ್ವ ವೇದದ ಆಧ್ಯಾತ್ಮಿಕ ವಿಚಾರಗಳು ಉಪನಿಷುತ್ತುಗಳಲ್ಲಿ ವಿಕಾಸಗೊಂಡು 'ರಸ' ಶಬ್ದವು ಅತ್ಯಂತ ವ್ಯಾಪಕವಾದ ಅರ್ಥವನ್ನು ಪಡೆಯಿತು. ಉಳಿದ ಅರ್ಥಗಳ ಜೊತೆಗೆ 'ಬ್ರಹ್ಮ' 'ಬ್ರಹ್ಮಾನಂದ' ಎಂಬ ಅರ್ಥವು ಬಂದಿತು. 'ಸಾರ ರೂಪವಾದ ತತ್ವ' ಎಂಬ ಅರ್ಥ, ಕೇವಲ ವನಸ್ಪತಿಗಳಿಗಿರುವ 'ಸಾರ' ಎನ್ನುವಷ್ಟಕ್ಕೆ ಮಾತ್ರ ಸೀಮಿತವಾಗದೆ ಈ ಸೃಷ್ಟಿಯ ಅಂತರ್ಯದಲ್ಲಿರುವ ಸಾರ ರೂಪವಾದ ಶಕ್ತಿಯನ್ನು ಒಳಗೊಳ್ಳುವಷ್ಟು ವ್ಯಾಪಾಕವಾಗಿ ಬೆಳೆಯಿತು.

> "ಏಷಾಭೂತಾನಾಂ ಪೃಥಿವೀ ರಸಃ ಪೃಥಿವ್ಯಾ ಅಪೋ ರಸಃ
> ಅಪಾಮೋಷಧಯೋ ರಸಃ ಔಷಾಧೀನಂ ಪುರುಷೋ ರಸಃ
> ಪುರುಷಸ್ಯವಾಗ್ ರಸಃ, ವಾಚಃ ಋಗ್ ರಸ"

ಹೀಗೆ ಒಂದರಿಂದ ಒಂದಕ್ಕೆ ರಸ ಬೆಳೆಯುತ್ತಾ ಹೋಗುತ್ತದೆ. ತೈತ್ತ-ರೀಯೋಪ ನಿಷತ್ತಿನಲ್ಲಿ ಬರುವ ಮಾತು ಇನ್ನೂ ಅರ್ಥಪೂರ್ಣವಾಗಿದೆ. 'ರಸೋ ವೈಸಃ, ರಸಂ ಹ್ಯೇವಾಯಂ ಲಬ್ಧ್ವಾನಂದಿ ಭವತಿ' ಅಂದರೆ 'ಇದೆಲ್ಲವು ರಸವೇ, ರಸವನ್ನು ಸಂಪಾದಿಸಿದವನು ಆನಂದವನ್ನು ಪಡೆಯುತ್ತಾನೆ' ಎನ್ನುವಲ್ಲಿ ಸೃಷ್ಟಿಯ ಸಮಸ್ತ ಸ್ವರೂಪವನ್ನು ಈ ಮಾತು ಒಳಗೊಂಡಿದೆ. ಆದ್ದರಿಂದ ಉಪನಿಷತ್ತಿನಲ್ಲಿ ಈ ಮಾತು ಇಷ್ಟೊಂದು ವ್ಯಾಪಕ ಅರ್ಥವನ್ನು ಪಡೆದು ಉಪನಿಷತ್ತುಗಳ ಸಾರದಲ್ಲಿ ನಾವು ಪ್ರಧಾನವಾಗಿ ಕಾಣುವ ಅರ್ಥವು 'ವಿಷಯ ಸುಖದ ಬಯಕೆ' ಎಂಬ ಅರ್ಥವನ್ನು ಪರಿಗಣಿಸುತ್ತದೆ.

**ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।**
**ರಸವರ್ಜ್ಯಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥**[೨]

ನಿರಾಹಾರಿಯಾದವನು ಭೋಗಶಕ್ತಿವಿಹೀನಾದುದರಿಂದ ವಿಷಯುಗಳು ಅವನಿಂದ ದೂರ ಹೋಗುತ್ತವೆ. ಆದರೆ ಪರಮಾತ್ಮನ ದರ್ಶನವಾಯಿತೆಂದರೆ ವಿಷಯಸುಖಗಳಲ್ಲಿರುವ ರುಚಿಯೇ ಮಾಯವಾಗಿ ಬಿಡುತ್ತದೆ ಎನ್ನುವ ಮಾತಿನಲ್ಲಿ 'ರಸ' ಎನ್ನುವುದಕ್ಕೆ ವಿಷಯ ಸುಖದ ರುಚಿ, ಆಸಕ್ತಿ, ಬಯಕೆ ಎನ್ನುವ ಅರ್ಥಗಳು ಕಾಣುತ್ತವೆ. ಆದ್ದರಿಂದ ಇಲ್ಲಿ 'ರಸ' ಎನ್ನುವುದು ಇಂದ್ರಿಯಗಳನ್ನು ಆಕರ್ಷಿಸುವ ಶಕ್ತಿಯಾಗಿ ಪರಿಣಮಿಸಿದೆ ತರ್ಕ, ಮೀಮಾಂಸೆ, ಇತ್ಯಾದಿ ದರ್ಶನ ಗ್ರಂಥಗಳಲ್ಲಿ ಈ ಅರ್ಥವೇ ಹೆಚ್ಚು ಪ್ರಧಾನವಾಗಿ ತೋರಿದೆ. ಇಲ್ಲಿ ರಸವು ರುಚಿಯ ಸಂಬಂಧವನ್ನು ಪಡೆದಿದೆ. ಉಪ್ಪು, ಹುಳಿ, ಖಾರ, ಇತ್ಯಾದಿ ಷಟ್‌ರಸಗಳು ನಾಲಿಗೆಯ ರುಚಿಯನ್ನು ಕುರಿತವು. ಇವು ಇನ್ನೂ ಮುಂದುವರೆದು ವಿಷಯ ಭೋಗಗಳ ರುಚಿಗೆ ಅನ್ವಯಿಸುತ್ತದೆ. ಕಾವ್ಯಾನುಭವವು ಸಹ ಒಂದು ರೀತಿಯಲ್ಲಿ ರುಚಿಯ ಆಸ್ವಾದನೆಯೇ ಎಂಬ ಕಲ್ಪನೆ ಇದೆ. ಆದರೆ ಅನೇಕ ಧರ್ಮಗ್ರಂಥಗಳಲ್ಲಿ ಕಾವ್ಯಾನುಭವಕ್ಕೆ ವಿಷಯ ಸುಖಕ್ಕಿಂತ ಹೆಚ್ಚಿನ ಸ್ಥಾನವಿಲ್ಲ.

'ರಸ' ಎನ್ನುವ ಶಬ್ದವನ್ನು ಕಾವ್ಯಾನುಭವಕ್ಕೆ ಅನ್ವಯಿಸಿ ಹೇಳಿದ ಮೊಟ್ಟಮೊದಲನೆಯ ಅಲಂಕಾರಿಕನೆಂದರೆ ಭರತ. ಭರತನಿಗಿಂತ ಹಿಂದಿನವರೆಂದು ಹೇಳಲಾದ ವಾಸುಕಿ, ಕೋಹಿಲ, ಮೊದಲಾದವರು ರಸ ವಿವೇಚನೆಯನ್ನು ಮಾಡಿದರೂ ಅದನ್ನು ಖಚಿತವಾಗಿ ಸಮರ್ಥಿಸಿಕೊಳ್ಳಲು ಯಾವ ಕೃತಿಗಳ ಆಧಾರವಿಲ್ಲ. ಆದ್ದರಿಂದ ನಮಗೆ ತಿಳಿದಿರುವ ಮಟ್ಟಿಗೆ ರಸ ಪ್ರತಿಪಾದನೆಯಲ್ಲಿ ಭರತನೇ ಮೊಟ್ಟಮೊದಲಿಗನಾಗಿದ್ದು, ರಸಮೀಮಾಂಸೆಯ ಆಧಾರ ಸ್ತಂಭವಾಗಿ ಉಳಿದಿದ್ದಾನೆ. ವಾಲ್ಮೀಕಿಯ ರಾಮಾಯಣದಲ್ಲೂ ರಸದ ಉಲ್ಲೇಖವಿದೆ ಎಂಬುದು ಈ ಶ್ಲೋಕದಿಂದ ತಿಳಿಯುತ್ತದೆ.

ರಸ್ವಃ ಶೃಂಗಾರ, ಕರುಣ ಹಾಸ್ಯ ರೌದ್ರ ಭಯಾನಕೈಃ ।
ವೀರಾದಿಭಿಕಿರಸ್ಯೈರ್ಯುಕ್ತಂ ಕಾವ್ಯಮೇತದಗಾಯತಾಮ್ ॥[೪]

ಈ ಶ್ಲೋಕವೇ ಇದಕ್ಕೆ ಆಧಾರವಾಗಿದೆ. 'ರಸ' ಎನ್ನುವುದು ಕಾವ್ಯದಿಂದ ನಾವು ಪಡೆಯುವ ಆನಂದಾನುಭವ ಎಂಬ ವ್ಯಾಪಕವಾದ ಅರ್ಥವನ್ನು ಮುಂದೆ ಪಡೆದರೂ ಭರತನಲ್ಲಿ ಕಾಣುವುದು ನಾಟ್ಯರಸದ ವಿವೇಚನೆ ಆತನ ಕೃತಿ ನಾಟಕಕ್ಕೆ ಸೀಮಿತವಾದ ನಾಟ್ಯಶಾಸ್ತ್ರವಾದರಿಂದ ಅದಕ್ಕೆ ಅನುಗುಣವಾಗಿ ರಸ ನಿರೂಪಣೆಯೂ ಅಲ್ಲಿ ಬರುತ್ತದೆ. ಅಲ್ಲದೆ ಭರತನು ಮುಖ್ಯವಾಗಿ 'ರಸವು ಒಂದು ಚಿತ್ತವೃತ್ತಿವಿಶೇಷ' ಎಂದು ಪ್ರತಿಪಾದಿಸಿದ ಕ್ರಮವು ಅಂತರ್ ನಿರೀಕ್ಷಣೆಯ ಸೂಕ್ಷ್ಮಅನುಭವಗಳಿಗೆ ಮುನ್ನುಡಿಯಾಯಿತು. ನಾಟ್ಯಶಾಸ್ತ್ರದ ಮೂಲಕ ನಾಟ್ಯರಸಗಳಾಗಿ ಸ್ಥಾಯಿಭಾವಗಳ ಆಸ್ವಾದನಗಷ್ಟೆ ಸೀಮಿತವಾಗಿದ ರಸವನ್ನು ಪ್ರಾಚೀನ ಅಲಂಕಾರಿಕರಿಗೆ 'ರಸವೇ ಕಾವ್ಯದ ಆತ್ಮ'ವೆಂದೂ ಹೇಳಲು ಸಾಧ್ಯವಾಗಲಿಲ್ಲ. ಅಲಂಕಾರಕ್ಕೆ ಸಾರ್ವಭೌಮ ಸ್ಥಾನವನ್ನು ಕೊಟ್ಟ ಭಾಮಹ ಕಾವ್ಯಲಕ್ಷಣವನ್ನು ಹೇಳುವಾಗ 'ಯುಕ್ತಂ ಲೋಕಸ್ವಭಾವೇನ ರಸ್ಯೈಶ್ಚ ಸಕಲ್ಯೈಃ ಪೃಥಕ್'[೫] ಮಹಾಕಾವ್ಯವು ಲೋಕಸ್ವಭಾವವನ್ನು ಚಿತ್ರಿಸುವುದಲ್ಲದೆ ಬೇರೆ ಬೇರೆ ರಸಗಳಲ್ಲವನ್ನೂ ಒಳಗೊಂಡಿದೆ ಎಂದು ಸ್ಪಷ್ಟಪಡಿಸಿದ್ದಾನೆ. ಭಾಮಹನೆ ಮುಂದೆ ಬಂದು 'ರಸವದ್ ದರ್ಶಿತಸ್ಪಷ್ಟ ಶೃಂಗರಾದಿ ರಸಂ ಯಥಾ'[೬] ಅಂದರೆ ಶೃಂಗಾರಾದಿ ರಸಗಳು ಎಲ್ಲಿ ಕಂಗೊಳಿಸುವುವೋ ಅಲ್ಲಿ ರಸವದಲಂಕಾರ ಎಂದು ಹೇಳಿದ್ದಾನೆ. ರಸವನ್ನು ಕುರಿತು ಹೇಳುವಾಗ ದಂಡಿಯು 'ಅಲಂಕೃತಮಸಂಕ್ಷಿಪ್ತಂ ರಸಭಾವನಿರಂತರಂ' ಅಲಂಕೃತವಾಗಿ, 'ಸಂಕ್ಷೇಪ ರಸಭಾವಗಳಿಂದ ನಿಬಿಡವಾಗಿರುತ್ತಾ'[೭] ಅಂದರೆ ರಸವು ಕಾವ್ಯದ ಸರ್ವಸ್ವವೆಲ್ಲ ಗುಣಗಳಲ್ಲಿ ಒಂದು ಎಂದಿದ್ದಾನೆ. ರಸವು ವಾಚ್ಯವಲ್ಲ ವ್ಯಂಗ್ಯ ಎಂದು ಹೊಸ ಮಾರ್ಗವನ್ನು ಸೃಷ್ಟಿಸಿದ ಆನಂದವರ್ಧನನು 'ಧ್ವನಿಯೇ ಕಾವ್ಯದ ಆತ್ಮ'[೮] ಎಂದು ಹೇಳಿದರೂ ಆ ಧ್ವನಿಯೆಲ್ಲಾ ರಸಪರ್ಯವಸಾಯಿಯೇ ಆಗಬೇಕೆಂದು ಒತ್ತಿ ಹೇಳಿದ್ದಾನೆ. ರಸವನ್ನು ಈ 'ರಸಾದಿ' ಎಂಬುದಾಗಿ ನಿರ್ದೇಶಿಸಿದ್ದಾನೆ. ರಸಾದಿ ಎನ್ನುವುದು ಕೇವಲ ಸ್ಥಾಯಿಭಾವಗಳ ಆಸ್ವಾದಕ್ಕಷ್ಟೇಸೀಮಿತವಾಗಿಲ್ಲ ಪ್ರಕೃತಿ ಸೌಂದರ್ಯವನ್ನು ಕಂಡು ತನ್ಮಯವಾಗುವ ರಮಣೀಯತೆಯ ಅನುಭವವನ್ನು ಒಳಗೊಂಡಿದೆ ಎಂಬುದನ್ನು ಅಭಿನವಗುಪ್ತನು ಸ್ಪಷ್ಟಪಡಿಸಿದ್ದಾನೆ. ರಸಾನುಭವವೇ ಕಾವ್ಯದ ಜೀವಾಳ ಅದಿಲ್ಲದೆ ಕಾವ್ಯವೇ ಇಲ್ಲ ಎನ್ನುವವರೆಗೂ ಆನಂದವರ್ಧನ ರಸದ ವ್ಯಾಪಕತೆಯನ್ನು ಬೆಳೆಸಿದ್ದಾನೆ. ಈ ವಿಚಾರದಲ್ಲಿ ಅಭಿವವಗುಪ್ತನ ದೃಷ್ಟಿ ಇನ್ನೂ ಹೆಚ್ಚು ಖಚಿತವಾಗಿದ್ದು ದಾರ್ಶನಿಕ ನಿಲವನ್ನು ಪಡೆದಿದೆ. 'ರಸ' ಎನ್ನುವುದು ಅಭಿನವಗುಪ್ತ ಸಹೃದಯದ 'ಅಖಂಡಾನಂದ'ವೆಂದು ಪರಿಗಣಿಸಿ ಅದು ಆತನಲ್ಲಿಯೇ ಸಹಜವಾಗಿರುವ ಆತ್ಮಾನಂದದ ವ್ಯಕ್ತರೂಪ ಎನ್ನುವವರೆಗೂ ಆತನ ವಿವೇಚನೆ ಬೆಳೆಯಿತು. ನಂತರ ಬಂದ ವಿಶ್ವನಾಥನು 'ವಾಕ್ಯಂ ರಸಾತ್ಮಂ ಕಾವ್ಯಂ'[೯] ಎಂದು

ರಸಕ್ಕೆ ಆತ್ಮಸ್ಥಾನವನ್ನು ಕೊಟ್ಟಿದ್ದಾನೆ. ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಹೀಗೆ ರಸವು ಭರತನಿಂದ ವಿಶ್ವನಾಥ ಜಗನ್ನಾಥನವರೆಗೂ ಸಾಹಿತ್ಯ ಪ್ರಪಂಚದಲ್ಲಿ ಹಲವು ಪ್ರಕಾರಗಳನ್ನಷ್ಟೆ ಅಲ್ಲದೆ ಇಡೀ ಕಲಾ ಪ್ರಪಂಚವನ್ನೇ ವ್ಯಾಪಿಸಿ ತ್ರಿವಿಕ್ರಮನಂತೆ ಬೆಳೆದಿದೆ.

## ರಸದ ಸ್ವರೂಪ

ಸತ್ವಗುಣದ ಉದ್ರೇಕದಿಂದ ವಿಭಾವ, ಅನುಭಾವ, ವ್ಯಭಿಚಾರಿಭಾವಗಳು ಒಟ್ಟಿಗೆ ಸೇರಿ ತಾನಾಗಿಯೇ ಪ್ರಕಾಶಗೊಂಡು ಸಂತೋಷ ರೂಪದಿಂದಲೂ, ಜ್ಞಾನರೂಪದಿಂದಲೂ ಸಹೃದಯನ ಮನಸ್ಸಿನಲಿ ನೆಲಸಿ, ಬೇರೆ ಯಾವ ಬಗೆಯ ಅರಿವನ್ನೂ ಹುಟ್ಟಿಸದೇ ಬ್ರಹ್ಮಜ್ಞಾನಕ್ಕೆ ಸದೃಶವೆನಿಸಿ ಅಸಾಧಾರಣಿಯವಾದ  ಚಮತ್ಕಾರವೇ ಪ್ರಧಾನವೆನಿಸಿರುವ ದಿವ್ಯವಾದ ಆನಂದವೇ 'ರಸ'ವೆನಿಸಿದೆ.

**ವಾಕ್ಯಂ ರಸಾತ್ಮಕಂ ಕಾವ್ಯಂ ದೋಷಾಸ್ತದಪಕರ್ಷಕಾಃ ।**
**ಉತ್ಕರ್ಷ ಹೇತವಃ ಪ್ರೋಕ್ತಾ ಗುಣಾಲಂಕಾರರೀತಯಃ ॥**

[ಸಾಹಿತ್ಯದರ್ಪಣ ೧, ೩]

'ರಸಾತ್ಮಕವಾದ ವಾಕ್ಯವೇ ಕಾವ್ಯ'ವೆಂದು ಕಾವ್ಯದಲ್ಲಿ ರಸಕ್ಕೆ ಆತ್ಮಸ್ಥಾನವನ್ನು ಕೊಟ್ಟು ಕಾವ್ಯಲಕ್ಷಣವನ್ನು ಹೇಳಿದ ವಿಶ್ವನಾಥನು ರಸದ ಸ್ವರೂಪವನ್ನು ಈ ರೀತಿ ಹೇಳಿದ್ದಾನೆ. ಮಾನವರ ಹೃದಯದಲ್ಲಿ ಗೋಪ್ಯವಾಗಿ ನೆಲೆಸಿರುವ ರತಿ ಮೊದಲಾದ ಭಾವಗಳು ಕಾವ್ಯ ನಾಟಕಗಳಲ್ಲಿರುವ ನಾಯಕ ನಾಯಕಿಯರ ಆಶ್ರಯದಿಂದಲೂ, ಚಂದ್ರಿಕೆ ಶ್ರೀಗಂಧರಸ ಮೊದಲಾದ ಉದ್ದೀಪಕ ಸಾಮಾಗ್ರಿಗಳಿಂದಲೂ ಭಾವಗಳನ್ನು ಪ್ರಕಾಶ ಗೊಳಿಸುವ ಅನುಭವಗಳಿಂದಲೂ ನಿರ್ವೇದ ಮೊದಲಾದ ವ್ಯಭಿಚಾ–ರಿಭಾವಗಳಿಂದಲೂ ಹೊರಹೊಮ್ಮಿ ಸಹೃದಯರ ಹೃದಯದಲ್ಲಿ ರಸವಾಗಿ ಪರಿಣಮಿಸುತ್ತದೆ. ರತಿ ಮೊದಲಾದ ಭಾವಗಳು ಹೃದಯದಲ್ಲಿ ಸಂಸ್ಕಾರರೂಪದಿಂದ ಸ್ಥಿರವಾಗಿ ನೆಲೆಸಿರುವುದರಿಂದ ಸ್ಥಾಯಿ ಎನಿಸಿದೆ. ಇದನ್ನೇ 'ರಸ'ವೆನ್ನಲಾಗಿದೆ. ನೆಲದ ಮೇಲೆ ಇರುವ ಗಡಿಗೆಯು ದೀಪದ ಸಹಾಯದಿಂದ ನಮಗೆ ಕಂಡು ಬರುವಂತೆ ಹಿಂದೆ ಇದ್ದದ್ದು ಸಹೃದಯರಿಗೆ ಗೋಚರವಾಗುವುದೆಂಬುದು ರಸಕ್ಕೆ ಅನ್ವಯಿಸುವುದಿಲ್ಲ ರತಿ ಜನರ ಹೃದಯದಲ್ಲಿ ಸಹಜವಾಗಿ ಇದ್ದರೂ ಅದೇ ರಸವಾಗಿ ಪರಿಣಮಿಸಿ ಬೇರೆ ಸ್ಥಿತಿಯಲ್ಲಿ ಪ್ರಕಾಶಗೊಳ್ಳುವ ಸ್ಥಿತಿಯೇ ರಸಾವಸ್ಥೆ ಈ ಅವಸ್ಥೆ ಹಿಂದೆ ಇರಲಿಲ್ಲ ಆದರೆ ಇಂತಹ ರಸವು ತೋರುತ್ತದೆ ಎಂಬುದಕ್ಕೆ ಈ ರೀತಿ ಉದಾಹರಿಸಲಾಗಿದೆ. 'ಓದನಂ ಪಚತಿ' ಅನ್ನವನ್ನು ಬೇಯಿಸುತ್ತಾನೆ ಎಂದು ವ್ಯವಹರಿಸಿದರೆ ಅನ್ನವನ್ನು ಬೇಯಿಸಬೇಕಾಗಿಯೇ ಇಲ್ಲ, ಆದರೆ ಅಕ್ಕಿಯನ್ನಷ್ಟೇ ಬೇಯಿಸಬೇಕಾದ್ದದ್ದು, ಅನ್ನವು ಮೊದಲು ಸಿದ್ಧವಾಗಿರಲಿಲ್ಲ ಅಕ್ಕಿಯೇ ಅನ್ನವಾಗಿ ಪರಿಣಮಿಸಿದೆ. ಮೊದಲು ಅನ್ನವಿರದಿದ್ದರೂ 'ಅನ್ನವನ್ನು ಬೇಯಿಸುತ್ತೇನೆ'. ಎಂಬ ಪ್ರಯೋಗವಿರುವಂತೆ  ರಸವು

ಪುಣ್ಯಶಾಲಿಗಳಾದ ಕೆಲವರು ಮಾತ್ರವೇ ರಸವನ್ನು ಅನುಭವಿಸುವರು. ದೇಹ ಆತ್ಮ ಇವೆರಡೂ ವಸ್ತುತಃ ಬೇರೆಯಾಗಿದ್ದರೂ 'ನಾನು ಹೋಗುತ್ತೇನೆ' ಎಂಬಲ್ಲಿ ಅವೆರಡೂ ಒಂದೇ ಎಂದು ಹೇಗೆ ತೋರುತ್ತದೆಯೂ ಹಾಗೆ ನಾಯಕ ನಾಯಿಕೆಯಲ್ಲಿರುವ ರತಿ, ಹಾಸ, ಕ್ರೋದ, ಮೊದಲಾದ ಬೇರೆ ಬೇರೆ ಆಗಿದ್ದರೂ ಅವರು ಆಡುವ ಮಾತುಗಳಿಂದ ಮಾಡುವ ಕ್ರಿಯೆಗಳಿಂದ ಸಾಮಾಜಿಕನಿಗೆ ತಮ್ಮ ಹೃದಯದಲ್ಲಿ ನೆಲೆಸಿರುವ ಅದೇ ಭಾವಗಳೊಡನೆ ಒಂದೇ ಎಂದು ತೋರುತ್ತದೆ. ಆದ್ದರಿಂದ ರಸವು ಅನುಭವಿಸುವುದಕ್ಕೆ ಮೊದಲು ಇರುವುದಿಲ್ಲ. ಮೊದಲು ಇದ್ದದ್ದು ರತಿಯೇ ಹೊರೆತು ರಸವಲ್ಲ. ಆದ–'ರೂ ರಸವು ಅಭಿವ್ಯಕ್ತವಾಗುತ್ತದೆ ಎಂದು ಪ್ರಯೋಗಿಸಲಾಗಿದೆ. "ರಸವೆಸಿಕೊಳ್ಳಲು ಯೋಗ್ಯವಾದ ಅವಸ್ಥೆಯನ್ನು ಹೊಂದಿರುವ ಭಾವವೇ ಸ್ಥಾಯಿಭಾವ" ಸ್ಥಾಯಿಯೆಂಬ ಪದವು ಒಂದೊಂದು ರಸಕ್ಕೆ ನಿಯತವಾದ ಆಶ್ರಯವಾಗಿದ್ದು ಬೇರೆ ರಸಕ್ಕೆ ಆಶ್ರಯವಾಗಲಾರದೆಂದು ಸ್ಥಾಯಿ[೧೦] ಎಂಬ ಪದವು ತಿಳಿಸುತ್ತದೆ. ಲೊಲ್ಲಟನು[೧೧] ಸ್ಥಾಯಿಭಾವವನ್ನು ಈ ರೀತಿ ಸೂತ್ರಿಸಿದ್ದಾನೆ. "ವಿಭಾವಾನು ಭಾವ ವ್ಯಬಿಚಾರಿ ಸಂಯೋಗಾದ್ರಸ ನಿಷ್ಪತ್ತಿಃ" ಸ್ಥಾಯಿ ಎಂಬ ಪದವು ಈ ಸೂತ್ರದಲ್ಲಿ ಇಲ್ಲದಿದ್ದರೂ ವಿಭಾವ ಅನುಭಾವ ಸಂಚಾರಿಭಾವಗಳೊಡನೆ ಸ್ಥಾಯಿಭಾವಕ್ಕೆ ಸಂಯೋಗವಾಗಿ ರಸವು ನಿಷ್ಪನ್ನವಾಗುತ್ತದೆ ಎಂಬುದನ್ನು ಉದಾಹರಿಸಿ ತೋರಿಸಿದ್ದಾನೆ. ಈ ರೀತಿಯಾಗಿ ವಿಭಾವಾನುಭಾವ ಸಂಚಾರಿ ಭಾವಗಳಿಂದ ಉಪಚಿತವಾದ ಸ್ಥಾಯಿಭಾವವೇ ಪ್ರಕರ್ಷ ಸ್ಥಿತಿಯಲ್ಲಿ 'ರಸ'[೧೨]ವಾಗುತ್ತದೆಂಬುದು ಲೊಲ್ಲಟನ ಅಭಿಪ್ರಾಯ ಲ್ಲೊಲಟನ ಈ ಅಭಿಪ್ರಾಯವು ಹಿಂದಿನಿಂದಲೂ ಇತ್ತೆಂದು 'ಚಿರಂತನಾಂ ಚ ಲಿಯಮೇವ ಪಕ್ಷಃ' ಎಂದು ಅಭಿನವಗುಪ್ತನು ಹೇಳಿ ದಂಡಿಯ ಈ ವಾಕ್ಯಗಳನ್ನು ಉದಾಹರಿಸಿದ್ದಾನೆ. "ರತಿಃ ಶೃಂಗಾರತಾಂ ಗತಾ ರೂಪ ಬಾಹುಲ್ಯ ಯೋಗೇನ", "ಅಧಿರುಹ್ಯ ಪರಾಂ ಕೋಟಿಂ ಕೋಪೋ ರೌದ್ರಾತ್ಮ ತಾಂ ಗತಃ", "ಇತ್ಯುತ್ಸಾಹಃ ಪ್ರಕೃಷ್ಟಾತ್ಮಾತಿಷ್ಠನ್ ವೀರರಸಾತ್ಮನಾ"[೧೩] ಮತ್ತು ಕನ್ನಡ ಪ್ರಾಚೀನ ಕವಿಗಳಿಗೂ ಸಹ ಇದೇ ಅಭಿಪ್ರಾಯ ವಿದ್ದಿತ್ತೆಂದು, ಇಲ್ಲಿ ಉದಾಹರಿಸಲಾಗಿದೆ. ಸಂಜಯನು ದುರ್ಯೋಧನನಿಗೆ "ನವರಸಮನಭಿನವ ರಸಂ ಮಾಡಿ" ತೋರಿಸಿದ್ದವರ ವರ್ಣನೆಯನ್ನು ಗಮನಿಸಬಹುದು.[೧೪] ಸ್ಥಾಯಿಭಾವವೇ ಹೆಚ್ಚಾಗಿ ಉಕ್ಕಿ ಪುಷ್ಟಿ ಹೊಂದಿ ಉಜ್ವಲವಾಗಿ ರಸವಾಗುವುದೆಂಬುದೇ ಮುಖ್ಯ ವಿಷಯವಾಗಿದೆ ಎಂಬುದನ್ನ ಪ್ರತಿಪಾದಿಸಿದ್ದಾರೆ.

ರಜಸ್ತಮೋ ಗುಣಗಳನ್ನು ತಿರಸ್ಕರಿಸಿ ತಾನೇ ಪ್ರಧಾನವಾಗಿ ತೋರುವುದೇ ಸತ್ವಗುಣವಾಗಿದೆ. ಅಂದರೆ ರಜಸ್ತಮೋಗುಣಗಳಿಗೆ ಸೇರದಿರುವ ಮನಸ್ಸೇ ಸತ್ವಗುಣವಾಗಿದೆ.[೧೫] ಸಾಮಾಜಿಕನಿಗೆ ಸತ್ವಗುಣ ಉದ್ರೇಕವಾಗಲು ಕಾವ್ಯನಾಟಕಗಳನ್ನು ಏಕಾಗ್ರಚಿತ್ತತೆಯಿಂದ ಓದುವುದು, ಕೇಳುವುದರಿಂದ ರಸದ ಆಸ್ವಾದನೆ ಉಂಟಾಗುತ್ತದೆ. ಭಾವ ರತ್ಯಾದಿ ಭಾವಗಳಿಂದ ತೋರುವ ಚಮತ್ಕಾರವೇ ರಸವೆನಿಸಿದೆ. ಈ

ಚಮತ್ಕಾರವನ್ನು ಅಖಂಡ ರಸವೆಂದು ಭಾವಿಸಿರುವುದನ್ನು ಮುಂದೆ ನಿರೂಪಿಸಲಾಗಿದೆ. ರಸವನ್ನು ಸವಿಯುವ ಕಾಲದಲ್ಲಿ ಸಾಮಾಜಿಕನ ಮನಸ್ಸು ಮಿಕ್ಕೆಲ್ಲವನ್ನೂ ತನ್ನನ್ನೂ ಮರೆತು ತನ್ನ ಸ್ವಭಾವವಾದ ಚಾಂಚಲ್ಯವನ್ನು ಕಳೆದುಕೊಂಡು ರಸದಲ್ಲೇ ಏಕಾಗ್ರಹವಾಗಿ ನೆಲೆಗೊಂಡಿರುತ್ತದೆ. ಈ ಅನುಭವವನ್ನು ಚರ್ವಣ, ಚಮತ್ಕಾರ, ಆಸ್ವಾದ, ಆನಂದ, ವಿಶ್ರಾಂತಿ ಎಂಬ ಬೇರೆ ಬೇರೆ ಹೆಸರುಗಳಿಂದ[೧೬] ಕರೆಯಲಾಗಿದೆ. ಚಿನ್ಮಯ ಎಂಬಲ್ಲಿ 'ಚಿತ್' ಪದದ ಮೇಲೆ ಸ್ವರೂಪ ಎಂಬ ಅರ್ಥದಲ್ಲಿ 'ಮಯಟ್' ಪ್ರತ್ಯಯವು ಬಂದಿದ್ದರಿಂದ ರಸವು ಜ್ಞಾನ ಸ್ವರೂಪದ್ದಾಗಿದೆ. ಮನಸ್ಸನ್ನು ವಿಸ್ತಾರಗೊಳಿಸುವ ಧರ್ಮವೇ ಚಮತ್ಕಾರವಾಗಿದೆ. ಈ ಚಮತ್ಕಾರವೇ ರಸದ ಪ್ರಾಣವೆಂದು ಹಿರಿಯರಾದ ನಾರಾಯಣಪಾದರು ತಿಳಿಸಿದ್ದಾರೆ.

> **ರಸೇ ಸಾರಶ್ಚಮತ್ಕಾರಃ ಸರ್ವತ್ರಾಪ್ಯನುಭೂಯತೇ ।**
> **ತಚ್ಚಮತ್ಕಾರ ಸಾರತ್ವೇ ಸರ್ವತ್ರಾಪ್ಯದ್ಭುತೋ ರಸಃ ॥**
> **ತಸ್ಮಾದದ್ಭುತಮೇವಾಹ ಕೃತೀ ನಾರಾಯಣೋ ರಸಂ[೧೭] ॥**

ಪ್ರತಿಯೊಂದು ರಸದಲ್ಲೂ ಚಮತ್ಕಾರವೇ ಸಾರವೆಂದು ಸಹೃದಯರಿಗೆ ತೋರುವುದರಿಂದ ಎಲ್ಲಾ ರಸಗಳು ಅದ್ಭುತದಲ್ಲಿಯೇ ಕೊನೆಗಾಣುತ್ತವೆ. ಆದ್ದರಿಂದ ಅದ್ಭುತ ಒಂದೇ ರಸವೆಂದು ನಾರಾಯಣಪಂಡಿತರು ಹೇಳಿದ್ದಾರೆ. [೧೮] "ರಸಾಸ್ವಾದವಾದ ಎಂಬುದು ಬಾಲ್ಯದಲ್ಲಿ ತಿಳಿಸಿರುವ ವಿಷಯಗಳು ಅನುಭವದಿಂದ ಸಾಮಾಜಿಕರಿಗೆ ಉಂಟಾಗುವ ಆನಂದವಲ್ಲದೇ ಬೇರೆಯಲ್ಲ ಎಂಬುದರಿಂದ ರಸಕ್ಕೂ ಆಸ್ವಾದಕ್ಕೂ ಭೇದವಿಲ್ಲದಿದ್ದರೂ ರಸವನ್ನು ಆಸ್ವಾದಿಸುವುದಾಗಿ. ಲೋಕದಲ್ಲಿ ಜನರು ತಿಳಿಸುವುದು ಕೇವಲ ಉಪಚಾರಕ್ಕಾಗಿ ಹೇಳುವ ಮಾತೇ ಹೊರತು ಪ್ರಧಾನವಲ್ಲ.

ರಸವು ಆನಂದಮಯವೆಂದೂ ಅಂಗೀಕರಿಸಿದರೇ, ಕರುಣ ಇತ್ಯಾದಿ ರಸಗಳು ದುಖಃ ಮಯವಾಗಿದ್ದರಿಂದ ಹೇಗೆ ಆನಂದವುಂಟಾಗುತ್ತದೆಂದರೆ, ಕರುಣ ಮೊದಲಾದ ರಸಗಳಲ್ಲಿ ಯಾವ ಹೆಚ್ಚಿನ ಸುಖವುಂಟಾಗುವುದೋ ಆ ಬಗ್ಗೆ ಸಹೃದಯವಷ್ಟೇ ಪ್ರಮಾಣವೆನಿಸಿದೆ. ರಸವು ಯಾವುದೇ ಆಗಿರಲಿ ಅದರ ಅನುಭವ ಕಾಲದಲ್ಲಿ ಚಿತ್ತವು ತಾನು ತನ್ನದ್ದು ಅನ್ಯರದು, ಎಂಬುದೆಲ್ಲವನ್ನೂ ಪೂರ್ಣವಾಗಿ ಮರೆತು ಭಾವನಾಕಾರ್ಯ ದಲ್ಲಿ ಏಕಾಗ್ರವಾಗಿ ಮಗ್ನವಾಗಿರುತ್ತದೆ. ಈ ಏಕಾಗ್ರತೆಯಲ್ಲಿ ದುಖಃವುಂಟೆಂದು ಹೇಳುವುದು ಹೇಗೆ?[೧೯] ಎಂದರೆ ಕರುಣಾದಿ ಎಂಬಲ್ಲಿ ಆದಿಶಬ್ದದಿಂದ ಭೀಭತ್ಸ ಭಯಾನಕ ಮೊದಲಾದ ರಸವನ್ನು ಗ್ರಹಿಸಬೇಕಾಗುತ್ತದೆ. ಕರುಣ ಮೊದಲಾದ ರಸಗಳಲ್ಲಿ ದುಃಖವುಂಟಾಗುವುದಾದರೆ ಆಗ ಯಾರೊಬ್ಬರು ಅಂತಹ ರಸಗಳಿಂದ ತುಂಬಿರುವ ಕಾವ್ಯನಾಟ್ಯಗಳನ್ನು ಓದಲಿಕ್ಕೂ ಕೇಳಲಿಕ್ಕೂ ಪ್ರವರ್ತಿಸುತ್ತಲೇ ಇರಲಿಲ್ಲ. ರಾಮಾಯಾಣ ಉತ್ತರರಾಮಚರಿತಾ ಮೊದಲಾದ

ಕಾವ್ಯಗಳು ದುಃಖಮಯವಾಗಿದ್ದರೂ ಇವುಗಳಲ್ಲಿ ಕರುಣವೇ ಪ್ರಧಾನವಾದ್ದ-ರಿಂದ ಇವೆಲ್ಲವು ದುಃಖವನ್ನೇ ಕೊಡತಕ್ಕವೆಂದು ಹೇಳಬೇಕಾಗುತ್ತದೆ. ಕಾವ್ಯ ನಾಟಕಗಳನ್ನು ಸಹೃದಯವನು ಅನುಶೀಲನ ಮಾಡುವ ಕಾಲದಲ್ಲಿ ಸಮುಚಿತವಾದ ವಿಭಾವಾನುಭಗಳಿಂದ ಅವನ ಚಿತ್ತವೃತ್ತಿ ರಸ ರೂಪದಲ್ಲಿ ಎಚ್ಚರಗೊಂಡಾಗ ಚಿತ್ತವೃತ್ತಿಗೆ ಅನುಗುಣವಾದ ಅದರ ಉತ್ಕಟ ಸಿದ್ದಿಯಲ್ಲಿ ಅನಿವಾರ್ಯವಾದ ಕಂಬನಿ ತಮಷ್ಟಕ್ಕೆ ತಾವೇ ಉಂಟಾಗುತ್ತದೆ. ಆದರೆ, ಈ ಕಂಬನಿ ಲೌಕಿಕ ದುಃಖದಿಂದ ಉದಿಸಿತೆಂದಾಗಲಿ ರೋಮಾಂಚ ತಾತ್ವಿಕ ಅನುಭವದಿಂದ ಎದ್ದಿತೆಂಗಾಗಲಿ ಹೇಳಿದರೆ ರಸದ ಅವ್ಯಾವಹಾ-ರಿಕ ಸ್ವರೂಪವನ್ನೇ ನಾವು ಮರೆತಂತಾಗುತ್ತದೆ. ವಿಭಾವಾನುಭಾವಾದಿಗಳ ಅರಿವು ರಸಾನುಭವಕಾಲದಲ್ಲಿ ಉದ್ದಕ್ಕೂ ಇರುವುದರಿಂದ ಅವುಗಳ ಸ್ವರೂಪಕ್ಕೆ ಅನುಗುಣವಾಗಿ ಸ್ಥಾಯಿ ಭಾವದಲ್ಲಿರುವಂತೆಯೇ ರಸದಲ್ಲಿಯೂ ವೈಚಿತ್ರ್ಯವು ಒದಗುತ್ತದೆ. ಆದ-ದ್ದರಿಂದಲೇ ಕರುಣ ವಿಪ್ರಲಂಬ ಶೃಂಗಾರ ಮೊದಲಾದ ರಸಗಳಲ್ಲಿ ಚಿತ್ತವು ಕರಗಿ ಹೋದಂತೆ ಅನುಭವವಾಗುತ್ತದೆ. ವೀರ ರೌದ್ರಾದಿಗಳಲ್ಲಿ ಇದಕ್ಕೆ ಪ್ರತಿಯಾಗಿ ಚಿತ್ತವೂ ದೀಪ್ತವಾಗುತ್ತದೆ. ರತಿ ಹಾಗು ಮೊದಲಾದ ಭಾವಗಳ ವಾಸನೆಯೇ ಇಲ್ಲದವರಿಗೆ ರಸಸ್ವಾದವೇ ಆಗುವುದಿಲ್ಲ. ಈ ವಾಸನೆಯಲ್ಲಿಯೂ ಸಹ ಇಂದಿನದೂ, ಹಿಂದಿನದೂ ಎಂದು ಎರಡು ಬಗೆಯಾಗಿದೆ. ಎಂದು ವಿಶ್ವನಾಥನು ತಿಳಿಸಿರುವನು. ಇಂದಿನ ವಾಸನೆಯಲ್ಲದಿದ್ದರೆ ಆಗ ಕರ್ಮಠರು ವೃದ್ಧ ಮೀಮಾಂಸಕರು ಇವರಿಗೂ ಸಹ ರಸಸ್ವಾದವಾಗಬೇಕಾದಿತು. ಇಂದಿನ ವಾಸನೆ ಇಲ್ಲದಿದ್ದರೆ ಆಗ ಅನುರಾಗಿಗಳಾದ ಕೆಲವರಿಗೂ ರಸಸ್ವಾದವಾಗುವುದಿಲ್ಲವೆಂದು ನಮಗೆ ಕಂಡು ಬಂದಿದೆ. ವಿಶ್ವನಾಥನು ಈ ರೀತಿ ಹೇಳಿದ್ದಾನೆ. “ವಾಸನೆಯುಳ್ಳ ಸಭ್ಯರು ಮಾತ್ರವೇ ರಸವನ್ನು ಆಸ್ವಾದಿಸಬಲ್ಲರು. ವಾಸನೆಯಿಲ್ಲದವರು ರಂಗ ಸ್ಥಳದೊಳಗೆ ನಿಲ್ಲಿಸಿರುವ ಕಟ್ಟಿಗೆ, ಕಲ್ಲು, ಮರ ಇದಕ್ಕೆ ಸದೃಶವೆನಿಸಿದ್ದಾರೆ”.[೨೦] ಆದ್ದರಿಂದಲೇ ಕರುಣರಸವು ಹೃದಯವನ್ನು ತಟ್ಟುವಷ್ಟು ಶೃಂಗಾರ ವೀರಾಧಿರಸಗಳು ತಟ್ಟಲಾರವು[೨೧] ಕರುಣರಸದಲ್ಲಿ ಅಷ್ಟೊಂದು ಕ್ಲೇಶವಿದ್ದರೆ ಜನರೇಕೆ ಹರಿಶ್ಚಂದ್ರ ನಾಟಕವನ್ನು ನೋಡಲು ಮತ್ತೆ ಮತ್ತೆ ಹೋಗುತ್ತಿದ್ದರು. ಸೀತಾವನವಾಸದ ಕಥೆಯನ್ನು ಮತ್ತೆ ಮತ್ತೆ ಪುರಾಣ ಹೇಳಿಸುತ್ತಿದ್ದರು. ಆದ್ದರಿಂದಲೇ ರಸಗಳು ಸಾಮಾಜಿಕನಿಗೆ ಕರುಣಾದಿ ರಸದಲ್ಲೂ ಆನಂದಮಯ ವಾಗಿರುತ್ತದೆ. ಸಾಮಾಜಿಕನು ನಾಟಕವನ್ನು ನೋಡಿ ರಸಪರವಶನಾಗುವಂತೆ, ಕವಿ ಲೋಕವೃತ್ತವನ್ನು ನೋಡಿ ಪರವಶನಾಗುತ್ತಾನೆ. ಸರಿಯಾದ ಕಣ್ಣಿನಿಂದ ಪರಿಭಾವಿಸುವವರಿಗೆ ಲೋಕವೆ ಒಂದು ಸುಂದರವಾದ ನಾಟಕ, ಸುಂದರ ಕಾವ್ಯ ಇಲ್ಲಿ ತಾನು ಅನುಭವಿಸಿದ ರಸವನ್ನು ಅಭಿವ್ಯಕ್ತಿಗೊಳಿಸುವ ರೀತಿಯಲ್ಲಿ ಕವಿ ವಿಭಾವಾನುಭಾವಾದಿಗಳನ್ನು ಆರಿಸಿ ಜೋಡಿಸಿ ಕಾವ್ಯ ನಾಟಕಗಳನ್ನು ರಚಿಸುತ್ತಾನೆ. ಆದ ಕಾರಣ ಈ ಎಲ್ಲಾ ರಸನುಭಾವಕ್ಕೂ ಅವನೆ ಉದ್ಗಮ ಸ್ಥಾನ. ಕವಿರಸಮಗ್ನ ದೃಷ್ಟಿಯಿಂದ ಜಗತ್ತನ್ನು ಪರಿಭಾವಿಸಿದಲ್ಲದೆ

ಕಾವ್ಯನಾಟಕಗಳೆ ಉದಿಸಲಾರವು. ಆದ್ದರಿಂದಲೆ ಆನಂದವರ್ಧನನು ಕವಿ ರಸಿಕನಾದರೆ ಕಾವ್ಯದಲ್ಲಿ ವಿಶ್ವವೇ ರಸಮಯವಾಗುತ್ತದೆ. ಅವನು ವಿರಕ್ತನಾದರೆ ಅದೆಲ್ಲವು ನೀರಸವಾಗುತ್ತದೆ. [೨೨] ಆದಕಾರಣ ಕಾವ್ಯವು ವೃಕ್ಷದಂತೆ, ನಟರ ಅಭಿನಯ ಮೊದಲಾದ ವ್ಯಾಪಾರವು ಅದರ ಹೂವಿನಂತೆ, ಸಾಮಾಜಿಕರ ರಸಾಸ್ವಾದ ಹಣ್ಣಿನಂತೆ ಆದ್ದರಿಂದ ವಿಶ್ವವೇ ರಸಮಯ ಎಂಬುದು ಅಭಿನವಗುಪ್ತನ ತಾತ್ಪರ್ಯವಾಗಿದೆ.

ಹೀಗೆ ವಿಲಕ್ಷಣವೆನಿಸಿದ ರಸವು ಇರುವುದೆಂಬಲ್ಲಿ ಪ್ರಮಾಣವೇನೆಂದರೆ ತನಗಿಂತ ಬೇರೆಯೇ ಆಗದಿರುವ ಈ ರಸವು ಇರುವ ಬಗ್ಗೆ ಸಹೃದಯರು ಅನುಭವಿಸುವ ಆಸ್ವಾದನವೇ ಪ್ರಮಾಣವೆಂದು ಅನುಭಾವಿಗಳು ಹೇಳಿದ್ದಾರೆ. ಕಾವ್ಯರ್ಥಗಳನ್ನು ತಿಳಿದಾಗ ಉಂಟಾಗುವ ರಸಾಸ್ವಾದವೆ ರಸವಿರುವ ಬಗ್ಗೆ ಪ್ರಮಾಣವೆನಿಸಿದೆ. "ವಿಭಾವ ಅನುಭಾವ ವ್ಯಭಿಚಾರಿಭಾವಗಳ ಸಂಯೋಗದಿಂದ ರಸವು ಹುಟ್ಟುತ್ತದೆ" ಎಂದು ಆಕ್ಷೇಪಿಸಿದರೆ ಕಾವ್ಯವನ್ನು ಓದಿದಾಗ, ಕೇಳಿದಾಗ ಮತ್ತು ನಾಟ್ಯವನ್ನು ನೋಡಿದಾಗಲೇ ರಸದ ಅನುಭವವಾಗುತ್ತದೆ. ಆದ್ದರಿಂದ ರಸನಿಷ್ಪತ್ತಿಯನ್ನು ಉಪಚಾರಕ್ಕಾಗಿ ಹೇಳಿದೆ. ರಸಕ್ಕೂ ಅದರ ಆಸ್ವಾದಕ್ಕೂ ಅಭೇದವನ್ನು ಆರೋಪಿಸುವುದರಿಂದ ರಸದ ನಿಷ್ಪತ್ತಿಯನ್ನು ಭರತ ಹೇಳಿದ್ದರಲ್ಲಿ ಯಾವ ಆಕ್ಷೇಪವಿಲ್ಲ ಎಂಬುದೇ ವಿಶ್ವನಾಥನ ಮತ. ರಸಕ್ಕೂ ಅದರ ಆಸ್ವಾದಕ್ಕೂ ಅಭೇದವನ್ನು ಒಪ್ಪಿದ್ದರಿಂದ ರಸವು ಕಾರ್ಯವೆನಿಸಿಲ್ಲವಾದರೂ ಅದರ ಆಸ್ವಾದವು ಕಾರ್ಯವೆನಿಸಿದ್ದರಿಂದ ಸಾಮಾಜಿಕನು ತನಗೆ ರಸಾಸ್ವಾದವಾಯಿತೆಂದು ಹೇಳುವುದಾದರೂ ಹೇಗೆ? ಅಂದರೆ ರಸದಂತೆಯೇ ರಸಸ್ವಾದವೂ ಕಾರ್ಯವೆನಿಸುವುದಿಲ್ಲ ವಾದರೂ ಅದು ಯಾವಾಗಲೂ ಇಲ್ಲದೆ ಒಂದು ವೇಳೆ ಮಾತ್ರವೇ ಅಭಿವ್ಯಕ್ತವಾಗುವುದ ರಿಂದ ಅದನ್ನು ಕಾರ್ಯವೆಂದು ಉಪಚಾರಕ್ಕಾಗಿ ಹೇಳಿದೆ. ಕಾವ್ಯವು ರಸವನ್ನು ಪ್ರಕಾಶಪಡಿಸುತ್ತದೆ ಎಂಬುದು ಸಹಜವಾಗಿ ಸಂಭವಿಸಿದರೂ ಸಹ ಅದನ್ನು ಶಬ್ದ ಗೋಚರವಲ್ಲವೆಂದು ತಿಳಿಸಿದ್ದು ಹೇಗೆ ಹೊಂದುತ್ತದೆ? ಎಂದರೆ ರಸವು ಎಂದೆಂದಿಗೂ ಅಭಿಧಾವೃತ್ತಿಯಿಂದ ವಾಚ್ಯವಾಗುವಂತೆಯೇ ಇಲ್ಲವೆಂಬ ಅಂಶವನ್ನು ಮುಂದೆ ವ್ಯಂಜನೆಯನ್ನು ನಿರೂಪಿಸುವಾಗಿ ತಿಳಿಸಲಾಗಿದೆ. ಹಾಗೆಯೇ ಲಕ್ಷಣಾ ವೃತ್ತಿಯಿಂದಲೂ ತಿಳಿದು ಬರುವಂತಿಲ್ಲವೆಂದು ಭಾವಿಸಬೇಕು. ರತ್ಯಾದಿ ಭಾವಗಳು ವಿಭಾವ ಅನುಭಾವ ವ್ಯಭಿಚಾರಿಭಾವಗಳೊಡನೆ ಒಟ್ಟಿಗೆ ಸೇರಿಕೊಂಡು ರಸವಾಗಿ ಪರಿಣಮಿಸುವುದಾದರೆ ರಸವನ್ನು ಸ್ವಪ್ರಕಾಶವೆಂದೂ, ಅಖಂಡವೆಂದೂ ಹೇಳಿದ್ದೂ ಹೇಗೆ ಹೊಂದುತ್ತದೆ. ಅಂದರೆ, ಕಾವ್ಯವನ್ನು ಕೇಳುವಾಗಲೂ ನಾಟ್ಯವನ್ನು ನೋಡುವಾಗಲೂ ಹುಟ್ಟುವ ಜ್ಞಾನದಿಂದ ರಸವು ತಾನಾಗಿಯೇ ಪ್ರಕಾಶವಾಗುವ ಪ್ರಯುಕ್ತ ಇವನ್ನು ಅಖಂಡವೆಂದು ಹೇಳಿದ್ದು ಹೇಗೆ ಅಂದರೆ ಕಾವ್ಯವನ್ನು ಓದಿದಾಗ ಮತ್ತು ಕೇಳಿದಾಗ ಆಯಾಯ ವಿಷಯಗಳ ಜ್ಞಾನರೂಪವನ್ನು ಪುರಸ್ಕರಿಸಿಕೊಂಡೇ ಇರುವ ರತ್ಯಾದಿಭಾವಗಳು ವಿಭಾವ ಮೊದಲಾದವುಗಳೊಡನೆ ಸೇರಿಕೊಂಡೇ ರಸವಾಗಿ ಪರಿಣಮಿಸುವ ಪ್ರಯುಕ್ತ

ರಸವು ಅಖಂಡ ಮತ್ತು ಸ್ವಪ್ರಕಾಶವೆಂದು ಸಿದ್ದಿಸುತ್ತದೆ. ರತಿಯೇ ರಸವಾಗುವಾಗ ಹಿಂದಿನದು ಮುಂದಿನದು ಎಲ್ಲವನ್ನು ಸೇರಿಸಿಕೊಂಡೇ ಇರುವ ಪ್ರಯುಕ್ತ ಅದಕ್ಕೆ ರಸಾವಸ್ಥೆಯಲ್ಲಿ ಅಖಂಡತ್ವ ಇದ್ದೇ ಇರುತ್ತದೆ. ಕಾವ್ಯಾರ್ಥಗಳ ಮತ್ತು ವಿಭಾವಾದಿಗಳ ಸಂಪರ್ಕವಿದ್ದರೂ ರತ್ಯಾದಿಭಾವಗಳ ಪರಿಣಾಮಕ್ಕೆ ಬೇರೆ ಯಾವ ಸಾಧನದ ಅವಶ್ಯಕತೆ ಇಲ್ಲದೆ ಪರಿಣಾಮವು ತಾನಾಗಿಯೇ ಆಗುವ ಪ್ರಯುಕ್ತ ರಸವು ಸ್ವಪ್ರಕಾಶವೆಂಬುದು ತಿಳಿಯುತ್ತದೆ. ರತ್ಯಾದಿಭಾವ ಪ್ರಕಾಶವೆನಿಸಿದ ಜ್ಞಾನ ಸ್ವರೂಪದಿಂದ ಬೇರೆಯೇ ಆಗಿ ಇರುವುದಾದರೆ ಆಗ ರಸವನ್ನು ಸ್ವಪ್ರಕಾಶವೆಂದು ಹೇಳಲಿಕ್ಕಾಗುವುದಿಲ್ಲ. ಆದರೆ, ರತ್ಯಾದಿಭಾವಕ್ಕೂ ಅವುಗಳ ಜ್ಞಾನಕ್ಕೂ ಅಭೇದವರುವಿರುವುದರಿಂದ ಆಭಾವಗಳು ಪ್ರಕಾಶ ರೂಪವಾದ ಜ್ಞಾನಕ್ಕಿಂತಲೂ ಬೇರೆಯಾಗಿಯೇ ಇರುವುದಿಲ್ಲ. ಆದ್ದರಿಂದಲೇ ರಸವು ಸ್ವಪ್ರಕಾಶವೆನಿಸುವಲ್ಲಿ ಯಾವ ಅಡ್ಡಿಯೂ ಇಲ್ಲ.

'ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್ ರಸನಿಷ್ಪತ್ತಿಃ'[೨೩] ವಿಭಾವ ಅನುಭಾವ ವ್ಯಭಿಚಾರಿ ಅಥವಾ ಸಂಚಾರಿಭಾವಗಳ ಸಂಯೋಗದಿಂದ ರಸನಿಷ್ಪತ್ತಿಯಾಗುತ್ತದೆ ಎಂಬ ಪ್ರಖ್ಯಾತ ಭರತನ ರಸನಿಷ್ಪತ್ತಿಯು ನಮ್ಮ ಎಲ್ಲ ರಸವಿವೇಚನೆಗೂ ರಸದ ಸ್ವರೊಪಕ್ಕೂ ಕಾರಣವಾದ ಮೂಲ ಸೂತ್ರವಾಗಿದೆ. ರಸವು ಹೇಗೆ ಆಸ್ವಾದ್ಯವಾಗುತ್ತದೆನ್ನುವುದನ್ನು ಊಟದ ಸಾದೃಶ್ಯವನ್ನು ಕೊಟ್ಟು ಸಾಮಾಜಿಕನಿಗೆ ಸುಲಭವಾಗಿ ಅರ್ಥವಾಗುವಂತೆ ಈ ರೀತಿ ತಿಳಿಸಿದ್ದಾನೆ.

**ಯಥಾ ಬಹುದ್ರವ್ಯಯುತ್ಯೈಃ ವ್ಯಂಜನೈಬಹುಭಿರ್ಯುತೈಃ ।**
**ಆಸ್ವಾದಯಂತಿ ಭುಂಜಾನಾಃ ಭಕ್ತಂ ಭಕ್ತ ವಿದೋ ಜನಾಃ ॥**
**ಭಾವಾಭಿನಯ ಸಂಬದ್ಧಾನ್ ಸ್ಥಾಯಿಭಾವಾಂಸ್ತಧಾ ಬುಧಾಃ ।**
**ಅಸ್ವಾಯಂತಿ ಮನಸಾ ತಸ್ಮನ್ನಾಟ್ಯರಸಾಃ ಸ್ಮೃತಾಃ ॥**

[ನಾಟ್ಯಶಾಸ್ತ್ರ, ೩೧, ೩೨]

ಹಲವು ದ್ರವ್ಯಗಳಿಂದ ಕೂಡಿದ ಅನೇಕ ವ್ಯಂಜನಗಳನ್ನು ಅನ್ನಕ್ಕೆ ಕಲಿಸಿಕೊಂಡು ಊಟದ ರುಚಿಯನ್ನು ಬಲ್ಲವರು, ಹೇಗೆ ಊಟ ಮಾಡುತ್ತಾ ಆಸ್ವಾಧಿಸುತ್ತಾರೋ, ಹಾಗೆಯೇ ಭಾವಾಭಿನಯಗಳಿಂದ ಕೂಡಿದ ಸ್ಥಾಯಿಭಾವಗಳನ್ನು ವಿದ್ವಾಂಸರು ಮನಸ್ಸಿನಲ್ಲಿ ಆಸ್ವಾದಿಸುತ್ತಾರೆ. ಆದ ಕಾರಣ ಇವುಗಳನ್ನು ನಾಟ್ಯರಸಗಳೆಂದು ತಿಳಿಯುತ್ತಾರೆ. ಕುವೆಂಪು ಹೇಳಿರುವಂತೆ ರಂಗದ ಮೇಲೆ ಬರುವ ಭಾವಗಳು ಲೌಕಿಕ ಭಾವಗಳಲ್ಲ, ಅವುಗಳ ಪರಿವರ್ತಿತ ರೂಪವಾದ ವಿಭಾವಗಳು, ಕೋಪ ಲೌಕಿಕ ಭಾವವಾದಾಗ ಅದರ ಲೌಕಿಕ ಪ್ರತಿಕ್ರಿಯೆ ಜಗಳ, ಹೊಡೆದಾಟ, ಆದರೆ ಅದು ನಾಟಕದಲ್ಲಿ ಬಂದಾಗ ಅದು ಕೋಪಭಾವಲ್ಲ. ಕೋಪದ ವಿಭಾವ, ಕೋಪ ಭಾವದ ಕಲಾರೂಪ, ಕರ್ಣ, ಅರ್ಜುನ, ಭೀಮ, ದುರ್ಯೋಧನ, ನರಸಿಂಹ, ಹಿರಣ್ಯಕಶಿಪು, ಇವರೆಲ್ಲಾ

ರಂಗದ ಮೇಲೆ ಬಂದಾಗ ಲೌಕಿಕತೆಯನ್ನು ಕಳೆದುಕೊಂಡು ಅಲೌಕಿಕರಾಗುತ್ತಾರೆ. ಇಲ್ಲಿ ಅಲೌಕಿಕ ಎನ್ನುವುದು ಲೋಕ ಪ್ರತಿಕ್ರಿಯೆಯನ್ನು ಮೀರಿದುದು ಎಂಬ ಅರ್ಥದಲ್ಲಿ ಇಲ್ಲಿ ಬರುವ ಕೋಪವಾಗಲಿ, ಭಯವಾಗಲಿ, ಶೋಕವಾಗಲಿ, ರತಿಯಾಗಲಿ, ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ ಲೋಕೋಪಯೋಗಿಯಲ್ಲ ಭಾವೋಪಯೋಗಿ.[೨೪] ಅಂದರೆ ಇಲ್ಲಿನ ಪ್ರತಿಕ್ರಿಯೆ ಲೌಕಿಕ ಕ್ರಿಯಾರೂಪದ್ದಾಗಿರುವುದಿಲ್ಲ. ಲೋಕ ದೂರವಾಗಿ ಆಸ್ವಾದನಾ ಸ್ವರೂಪದ್ದಾಗಿರುತ್ತದೆ. ಕುವೆಂಪುರವರ ಈ ರಸಾಆಸ್ವಾದವು ಭರತನ ರಸ ಸೂತ್ರವನ್ನು ಸೂಚಿಸುತ್ತದೆ.

ಅಭಿನವಗುಪ್ತನ 'ಅಭಿನವಭಾರತಿ'ಯ ಮೇಲೆ ವ್ಯಾಖ್ಯಾನವನ್ನು ಬರೆದ ಲೊಲ್ಲಟನು ಕಥಾಪುರುಷರಲ್ಲಿ ಸ್ಥಾಯಿಭಾವ ಹೇಗೆ ಹುಟ್ಟಿ ಬೆಳೆದು ಪುಷ್ಟಿಗೊಳ್ಳುವುದೆಂಬ ವಿಷಯವನ್ನು ಪ್ರಸ್ತಾಪಿಸುತ್ತದೆ. ಅದನ್ನೇ ಅವನು ರಸ ನಿಷ್ಪತ್ತಿಯೆಂದು ಭ್ರಮಿಸಿದನು. ಸ್ಥಾಯಿಭಾವದ ಪುಷ್ಟಿಯ ವಿಚಾರ ಅಭಿನವಗುಪ್ತನಿಗೂ ಸಮ್ಮತವೇ ಆಗಿದೆ. ನಂತರ ಬಂದ ಶಂಕುಕನು ವಿಭಾವಾನುಭಾವಾದಿಗಳಿಂದ ರಸವು ಅನುಮಿತವಾಗುವುದೆಂದು ಹೇಳಿದನು. ಹೀಗೆ ಅನುಮಿತವಾಗತಕ್ಕದ್ದು ರಸವಲ್ಲ, ಅದು ಕಥಾಪುರುಷನ ಸ್ಥಾಯಿಭಾವ ಎಂದು ಅಭಿನವಗುಪ್ತನು ವ್ಯವಸ್ಥೆ ಮಾಡಿದನು.[೨೫]

ರಂಗಭೂಮಿಯ ನಡವಳಿಕೆ ನೋಡಿದಾಗ ಸಾಮಾಜಿಕನು ಮೊಟ್ಟಮೊದಲು ಮಾಡಬೇಕಾದ ಕಾರ್ಯವೇ ಈ ಊಹೆ. ಲೋಕದಲ್ಲಿ ಕಾರ್ಯಕಾರಾಣಾಧಿಗಳನ್ನು ನೋಡಿ ಸ್ಥಾಯಿಯನ್ನು ಊಹಿಸುವಂತೆಯೇ ಇಲ್ಲ ವಿಭಾವಾದಿಗಳನ್ನು ನೋಡಿ ಕಥ–ಾಪುರುಷರ ಸ್ಥಾಯಿ ಇಂಥದೆಂದು ಅರಿತುಕೊಳ್ಳುತ್ತಾನೆ. ಅದರೊಂದಿಗೆ ತಾನು ಹೃದಯ ಸಂವಾದವನ್ನು ಪಡೆಯುತ್ತಾನೆ. ಇನ್ನು ಭಟ್ಟ ನಾಯಕನ "ಸಾಧಾರಣೀಕರಣ" ತತ್ತ್ವವನ್ನು ಅಭಿನವಗುಪ್ತನು ಸಮ್ಮತಿಸಿದ್ದಾನೆ. "ತಸ್ಮಾತ್ ಸತಾಮತ್ರ ನದೂಷಿತಾನಿಮತಾನಿ ತಾನ್ಯೇವ ತು ಶೋಧಿತಾನಿ" ಅಭಿನವಗುಪ್ತ ತನಗಿಂತ ಹಿಂದಿನವರ ಮತಗಳ ನ್ಯೂನತೆಗಳನ್ನು ನಿವಾರಿಸಿ, ಅಲ್ಲಿ ಗಟ್ಟಿಯಾದ ಅಂಶಗಳನ್ನು ಶೋಧಿಸಿ ಸಮನ್ವಯಗೊಳಿಸಿ ಸಮರ್ಪಕವಾದ ರಸತತ್ತ್ವವನ್ನು ರೂಪಿಸುವ ಶ್ರೇಯಸ್ಸು ಅಭಿನವಗುಪ್ತನದಾಗಿದೆ. ನಂತರ ಆನಂದವರ್ಧನನ್ನು ರಸವನ್ನು 'ರಸಾದಿ' ಎಂದು ಧ್ವನಿ ಎಂಬ ಹೊಸ ಹೆಸರನ್ನು ಕೊಟ್ಟನು ನಂತರ ಬಂದ ವಿಶ್ವನಾಥನು "ರಸಾತ್ಮಕವಾದ ವಾಕ್ಯವೇ ಕಾವ್ಯ" ಎಂದು ಹೇಳಿ. ಕಾವ್ಯದಲ್ಲಿ ರಸಕ್ಕೆ ಆತ್ಮಸ್ಥಾನವನ್ನು ಕೊಟ್ಟಿದ್ದಾನೆ. ಸಾಹಿತ್ಯದರ್ಪಣಕಾರನು ಅಭಿನವಗುಪ್ತ, ಭರತ ಮೊದಲಾದವರ ರಸತತ್ತ್ವವನ್ನು ಸಮ್ಮತಿಸಿ ರಸ ಸ್ವರೂಪದಲ್ಲಿ ವಿವೇಚಿಸುರುವುದು ತಿಳಿಯುತ್ತದೆ. ಇಲ್ಲಿ ವಿಶ್ವನಾಥನ ರಸಸ್ವರೂಪವನ್ನು ಹಿಂದಿನ ರಸತತ್ವಜ್ಞರ ಉದಾಹರಣೆ ಮತ್ತು ಅಭಿಪ್ರಾಯಗಳೊಂದಿಗೆ ವಿವೇಚಿಸಲಾಗಿದೆ.

## ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಸ್ವರೂಪ

ರಸದ ಸ್ವರೂಪವನ್ನು ತಿಳಿಸಿದ ಮೇಲೆ ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳ ಸ್ವರೂಪವನ್ನು ತಿಳಿಸಲಾಗಿದೆ. "ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಸಂಯೋಗವೇ ರಸ ನಿಷ್ಪತ್ತಿ" ಎಂಬ ಪ್ರಖ್ಯಾತ ರಸಸೂತ್ರವನ್ನು ಕೊಟ್ಟ ಭರತನ ರಸ ಸೂತ್ರವನ್ನೇ ಅನುಸರಿಸಿಕೊಂಡು ಬಂದ ಅಲಂಕಾರರಿಕಲ್ಲಿ ವಿಶ್ವನಾಥನು ಸಹ ಸೇ-ರಿದ್ದಾನೆ. ಈ ರಸ ನಿಷ್ಪತ್ತಿಯ ಬಗ್ಗೆ ಅನೇಕ ಚರ್ಚೆಗಳು ವ್ಯಾಖ್ಯಾನಗಳು ಬಂದಿವೆ, ವಿಶ್ವನಾಥನು ರಸಸೂತ್ರವನ್ನ ರಸದ ವಿವೇಚನೆಯನ್ನು ಅದರ ಸ್ವರೂಪವನ್ನು ವಿಭಾವ, ಅನುಭಾವ, ವ್ಯಭಿಚಾರಿಭಾವಗಳಲ್ಲಿ ಬರುವ ನಾಯಕ, ನಾಯಿಕೆ, ಪ್ರತಿನಾಯಕರ ಸ್ವರೂಪ ಭೇದ, ಪ್ರಬೇದಗಳನ್ನು ತಿಳಿಸಿರುವುದನ್ನು ಇಲ್ಲಿ ಚರ್ಚಿಸಲಾಗಿದೆ.

ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಸ್ವರೂಪವನ್ನು ತಿಳಿಯುವ ಮೊದಲು ಭಾವಗಳ ಸ್ವರೂಪವೇನು ಎಂಬುದನ್ನು ವಿವೇಚಿಸಲಾಗಿದೆ. 'ಭಾವ' ಎಂದರೆ 'ಇರುವಿಕೆ' ಇದರ ನಿಷ್ಪತ್ತಿಗೆ ಅನುಗುಣವಾಗಿ ಸಂಸ್ಕೃತದಲ್ಲಿ ಈ ಪದಕ್ಕೆ ಅನೇಕ ಅರ್ಥಗಳಿವೆ. ಆಪ್ಟೆಯವರು ತಮ್ಮ ನಿಘಂಟಿನಲ್ಲಿ ೩೧ ಅರ್ಥಗಳನ್ನು ಸಂಗ್ರಹಿಸಿದ್ದಾರೆ. ಸ್ಥಿತಿ, ಆಶಯ, ಇಂಗಿತ, ತಾತ್ಪರ್ಯ, ಭಾವ, ಚಿತ್ತ, ವೃತ್ತಿ, ಇತ್ಯಾದಿ ಪದಗಳನ್ನು ನಮ್ಮ ರೂಢಿ ಮಾತಿನಲ್ಲಿ ಬಳಸುತ್ತೇವೆ. ಸಂಸ್ಕೃತದಲ್ಲಿ ಪ್ರೀತಿ, ಪದಾರ್ಥ, ಸಂಭಾವಿತನಾದ ಮನುಷ್ಯ ಮೊದಲಾದ ಅರ್ಥಗಳಿವೆ.  ಮತ್ತು ಕನ್ನಡದಲ್ಲಿ ಇವು ಬಂಧುವಾಚಕವೂ ಆಗಿದೆ. ಈ ಅರ್ಥಗಳಲ್ಲಿ ನಮಗೆ ಪ್ರಕೃತವಾದದ್ದು, "ಚಿತ್ತವೃತ್ತಿ", ಪ್ರೀತಿ, ಕ್ರೋಧ, ಭಯ, ಆಶ್ಚರ್ಯ, ಚಿಂತೆ, ಔಚಿತ್ಯ, ನಾಚಿಕೆ, ಹರ್ಷ ಇಂಥವು ಚಿತ್ತವೃತ್ತಿಗಳು, "ಭಾವ" ಶಬ್ದವನ್ನು ಚಿತ್ತವೃತ್ತಿ ಸಾಮಾನ್ಯ ಅಥವಾ ಚಿತ್ತವೃತ್ತಿ ವಿಶೇಷ ಎಂಬುದಿಷ್ಟಕ್ಕೆ ಸಂಜ್ಞೆಯಾಗಿ ನಿಯಮನ ಮಾಡಿಕೊಳ್ಳಲಾಗಿದೆ. ಭಾವವು ಮನಸ್ಸಿನ ವ್ಯಾಪಾರವಾಗುವುದರಿಂದ ಅವುಗಳನ್ನು ಅರಿತರೆ, ಇಂಥ ಒಂದು ಭಾವ ಈ ವ್ಯಕ್ತಿಯಲ್ಲಿ ಉದಿಸಿದೆಯೆಂದು ಊಹೆ ಮಾಡಬಹುದು. ಲೋಕವ್ಯವಹಾರದಲ್ಲಿ ಪ್ರೀತಿ, ಶೋಕ, ಮೊದಲಾದವನ್ನೆಲ್ಲಾ ನಾವು ಅರಿತುಕೊಳ್ಳುವುದು ಹೀಗೆಯೇ.

ಮನುಷ್ಯನು ಪ್ರಪಂಚದ ನಡುವೆ ಬಾಳುವಾಗ ಅವನ ಚಿತ್ತವನ್ನು ಹೊರಗಿನ ವಸ್ತುಗಳು ಘಟನೆಗಳು ಕಲಕದಿರುವ ಕ್ಷಣವಿಲ್ಲ. ಇದರ ಪರಿಣಾಮವಾಗಿ ಅನೇಕ ಕಾರ್ಯಗಳನ್ನು ಅವನು ಅರಿತೊ ಅರಿಯದೆಯೊ ಮಾಡುತ್ತಿರುತ್ತಾನೆ. ಆದ್ದ-ರಿಂದ ಮನುಷ್ಯನ ಚಿತ್ತವೃತ್ತಿಗಳು ಅನೇಕವಾದರೂ ಎಲ್ಲಕ್ಕೂ ಒಂದೇ ಸಮನಾದ ಪ್ರಾಧಾನ್ಯವಿಲ್ಲ ಹುಟ್ಟಿನಿಂದಲೂ ಅವನಲ್ಲಿ ಕೆಲವು ಭಾವಗಳು ವಾಸನಾತ್ಮಕವಾಗಿ ನೆಲೆಗೊಂಡಿರುತ್ತವೆ. ಮನ್ಯುಷ್ಯನಾದವನಿಗೆ ಮಾತ್ರ ದುಃಖಬೇಡ, ಸುಖ ಬೇಕು. ಇದಕ್ಕನುಗುಣವಾಗಿ ಮೊದಲಿನಿಂದಲೂ ಇವನಲ್ಲಿ ಕೆಲವು ಚಿತ್ತವೃತ್ತಿಗಳು ಇದ್ದೇ

ಇರುತ್ತವೆ. "ದುಃಖ ದ್ವೇಷಿ ಸುಖಸ್ವಾದನಲಂಪಟನಾಗಿರ್ಪುದು ರತಿ, ಆಂ ಭೋಗಿ ತಾಂ ದುಃಖಿಯೆಂದು ನಗುವಂದಮಂ ಮಾಪ್ಪಿದು ಹಾಸಂ, ತನ್ನ ಸುಖೋತ್ಕರ್ಷೆಗೆ ವಿಪತ್ತು ಬರ್ಪುದೆಂದು ಶೋಕಿಪುದೆ ಶೋಕಂ, ಅಪಾಯಮಂ ಕುಪಿತು ಕೋಪಿಪುದೆ ಕ್ರೋಧಂ ಅಪಾಯಹೇತುವಂ ಪರಿಪರಿಪೆಡೆಯೊಳುತ್ಸಾಹಂ ಮಾಪಿದುತ್ಸಾಹಂ, ಅಪಾಯದತ್ತಣಿಂ ಬೆದಪಿವುದು ಭಯಂ, ತಾಂ ಗೆಯ್ವ ಕಜ್ಜಮೊಳ್ಳಿತತ್ತಿಂದು ಪೇಸುವುದು ಜುಗುಪ್ಸೆ, ತನ್ನಿಂ ಪೆಪಿರಿಂದಾದ ಕಾರ್ಯವೈಚಿತ್ರ್ಯದಿದರ್ಶನಾದಿಯಂ ವಿಸ್ಮಯಿಪುದು ವಿಸ್ಮಯಂ ತಾಂ ಬಿಡುವುದಪೋಳ್ ವೈರಾಗ್ಯಪರನಾಗಿ ಶಾಂತತ್ವಮಂ ಭಜಿಪುದು ಶಮಂ. ಈ ಪೇಬ್ದಿಚಿತ್ರವೃತ್ತಿಗಳಿಂ ಶ್ಯೂನಮಾದ ಜೀವನಿಲ್ಲ"[೨೬] ಒಬ್ಬರಲ್ಲಿ ಒಂದು ಚಿತ್ತವೃತ್ತಿ ಅಧಿಕವಾಗಿರುತ್ತದೆ. ಇನ್ನೊಬ್ಬರಲ್ಲಿ ಅಲ್ಪವಾಗಿರುತ್ತದೆ. ಒಬ್ಬರು ತಮ್ಮ ಚಿತ್ತವೃತ್ತಿನ್ನು ಉಚಿತ ವಿಷಯದಲ್ಲೆ ಪ್ರವರ್ತಿಸುವಂತೆ ನಿಯೋಜಿಸುತ್ತಾರೆ. ಇನ್ನೊಬ್ಬರು ಹಾಗೆ ಮಾಡಿರುವುದಿಲ್ಲ ಇಷ್ಟೇ ಹೊರತು ಈ ಬಗೆ ಸಂವೇದನೆ ಇಲ್ಲದವರು ಯಾರೂಬ್ಬರೂ ಇಲ್ಲ, ಒಂದು ಭಾವದ ಗುರಿ ಸಾಧಿಸಿದ ಬಳಿಕ ಅದು ಲಯವಾಯಿತೆಂದು ತೋರುತ್ತಿದ್ದಂತೆಯೇ ಅದರ ಸಂಸ್ಕಾರ ಸೂಕ್ಷ್ಮವಾಗಿ ಒಳಗೆ ಇದ್ದೇ ಇರುತ್ತದೆ. ಅದಕ್ಕೆ ಕಾರಣ ಗೋಚ-ರಿಸುತ್ತಿದ್ದಂತೆಯೇ ಮೇಲಕ್ಕೇಳುತ್ತದೆ. ಹೀಗೆ ಮಾನವನ ಜೀವಿತಕ್ಕೆ ಅಂಟಿಕೊಂಡು ನೆಲೆಯಾಗಿ ನಿಲ್ಲತಕ್ಕ ಬಾವಗಳಿಗೆ ಸ್ಥಾಯಿಬಾವಗಳೆಂದು ಹೆಸರು.

## ಸ್ಥಾಯಿಭಾವದ ಸ್ವರೂಪ:

ಅನುಕೂಲವೊ ಅಥವಾ ಪ್ರತಿಕೂಲವೂ, ಆಗಿರುವ ವಿಭಾವವಾದಿ ಭಾವಗಳು ಯಾವ ಭಾವವನ್ನು ಮನಸ್ಸಿಗೆ ಗೋಚರವಾಗುವಂತೆ ಮಾಡಲು ಅಸಮಥ-ರ್ವೆನಿಸಿದೆಯೋ ಅಂತಹ ಭಾವವು ರಸೋತ್ಪತ್ತಿಗೆ ಸೂಕ್ಷ್ಮ ರೂಪದಿಂದ ಕಾರಣವಾಗಿದ್ದು, ಸ್ಥಾಯಿ ಎನಿಸುತ್ತದೆ. ವಿಭಾವ, ಅನುಭಾವ, ವ್ಯಭಿಚಾರಿಭಾವಗಳು ಅನುಕೂಲವೆ ಆಗಿರಲಿ ಪ್ರತಿಕೂಲವೆ ಆಗಿರಲಿ, ಯಾವ ಭಾವವೂ ಸ್ಥಿರವಾಗಿ ನಿಂತು ಮನಸ್ಸಿಗೆ ಗೋಚರ ಆಗಬಲ್ಲದ್ದೂ ಅದೇ ಸ್ಥಾಯಿಭಾವ ಎನಿಸಿದೆ. ಇವು ಮನಸ್ಸಿನಲ್ಲಿ ಸೂಪ್ತವಾಗಿದ್ದು, ತಲೆದೂರಿದೊಡನೆ ವ್ಯಕ್ತವಾಗುವ ಚಿತ್ತವೃತ್ತಿ ಗಳು, ಭರತನು ಇಂತಹ ಮನಸ್ಸಿನಲ್ಲಿ ಹುಟ್ಟುವ ಭಾವಗಳನ್ನು ಲೆಕ್ಕಹಾಕಿ ಹೇಳುವುದು ಕಷ್ಟವಾದರೂ ಮಾನವನ ಮನಸ್ಸಿನಲ್ಲಿ ಸಹಜವಾಗಿ ಸಂಯುಕ್ತವಾಗಿರುವ ಪ್ರಧಾನವಾದ ಎಂಟು ಸ್ಥಾಯಿಭಾವವನ್ನು ಅಲಂಕಾರಿಕನಾದ ಭರತನು ಮೊಟ್ಟ ಮೊದಲಿಗೆ ನಿರೂಪಿಸಿದ್ದಾನೆ. ನಂತರ ಬಂದ ಅಲಂಕಾರಿಕರು ಹೆಚ್ಚು ಕಡಿಮೆಯಿಲ್ಲದೆ ಎಂಟು ಸ್ಥಾಯಿ ಭಾವಗಳನ್ನು ಅನುಸರಿಸಿದ್ದಾರೆ. ಈ ಸ್ಥಾಯಿಭಾವಗಳು ರತಿ, ಹಾಸ, ಕ್ರೋಧ, ಉತ್ಸಾಹ, ಭಯ, ಜಿಗುಪ್ಸೆ, ವಿಸ್ಮಯ, ಎಂದು ತಿಳಿಸಿದ್ದಾರೆ. ವಿಶ್ವನಾಥನು 'ಶಮ' ಎಂಬ ಒಂಬತ್ತನೆ ಸ್ಥಾಯಿಭಾವವಿದೆ ಎಂದು ಹೇಳಿದರೂ ಮೊದಲು ಎಂಟು ಸ್ಥಾಯಿ ಭಾವಗಳನ್ನು

ತಿಳಿಸಿ ನಂತರ ಶಮವೂ ಒಂದು ಉಂಟು ಎಂದು ಬೇರೆಯಾಗಿ ತಿಳಿಸಿರುವುದರಿಂದ ಇದರ ಬಗ್ಗೆ ಭಿನ್ನಭಿಪ್ರಾಯವಿದೆ ಎಂಬುದು ವ್ಯಕ್ತವಾಗುತ್ತದೆ. ಮನಸ್ಸಿಗೆ ಅನುಕೂಲವಾದ ವಸ್ತುವಿನಲ್ಲಿ ಅಂಟಿಕೊಂಡಂತೆ ಇರುವುದೇ 'ರತಿ', ಮಾತಿನ ವಿಕಾರದಿಂದ ಮನಸ್ಸಿನ ವಿಕಾಸವೇ ಹಾಸ, ಇಷ್ಟನಾಶವೇ ಮೊದಲಾದ ಹೇತುಗಳಿಂದ ಮನಸ್ಸಿಗೆ ಆಗುವ ದುಃಖವೇ ವಿರೋಧಿಗಳಲ್ಲಿ ಉಗ್ರಪ್ರಕೃತಿಯನ್ನು ತಾಳಿ ಅವರಿಗೆ ಕೆಡುಕನ್ನು ಮಾಡುವ ಇಚ್ಛೆಯಿಂದ ಮನಸ್ಸು ಉರಿಯುವಂತೆ ಕಾಣುವುದೆ 'ಕ್ರೋಧ', ಕಾರ್ಯಗಳನ್ನು ಆರಂಭಿಸುವಾಗ ಸ್ಥಿರವಾಗಿ ನಡೆಸುವ ಉದ್ಯಮವೆ 'ಉತ್ಸಾಹ', ಭಯಂಕರವಾದ ಶಕ್ತಿಯಿಂದ ಹುಟ್ಟಿದ ಮನೋವೈಕ್ಯಲವೆ 'ಭಯ', ತಿಳಿಯಬೇಕಾದ ವಸ್ತುಗಳಲ್ಲಿ ದೋಷವನ್ನು ಗಮನಿಸುವುದರಿಂದ ಹುಟ್ಟುವ ದಯೆಯೆ 'ಜಿಗುಪ್ಸೆ' ಲೋಕದ ಎಲ್ಲೆಯನ್ನು ಮೀರಿದಂತಹ ಇಂದ್ರಜಾಲವೇ ಮೊದಲಾದ ಅಲೌಕಿಕ ವ್ಯಾಪಾರಗಳನ್ನು ತಿಳಿದಾಗ ಮನಸ್ಸಿಗೆ ಆಗುವ ಪ್ರಸಾರವೆ 'ವಿಸ್ಮಯ'ವೆಂದು ತಿಳಿಸಿ ವೈರಾಗ್ಯದ ದೆಸೆಯಿಂದ ಪರಮಾತ್ಮನಲ್ಲಿ ಮನಸ್ಸು ಬೆರೆಯುವುದರಿಂದ ಉಂಟಾಗುವ ಸುಖವೇ 'ಶಮ'ವೆಂದೂ ಒಂಬತ್ತನೆ ಸ್ಥಾಯಿಭಾವವನ್ನು ಸಹ ತಿಳಿಸಲಾಗಿದೆ. ಮಾಲತಿಮಾಧವರಲ್ಲಿ 'ರತಿ'ಯೂ ನಟಮೇಲಕದಲ್ಲಿ 'ಹಾಸ'ವು ರಾಮಾಯಣದಲ್ಲಿ 'ಶೋಕ'ವು ಮಹಾಭಾರತದಲ್ಲಿ 'ಶಮ'ವು ಶಿಶುಪಾಲವಧದಲ್ಲಿ 'ಶೋಕ'ವು ವೇಣಿಸಂಹಾರದಲ್ಲಿ 'ಉತ್ಸಾಹ'ವು ಮಾಲತಿಮಾಧವದ ಐದನೆಅಂಕದಲ್ಲಿ 'ಜಿಗುಪ್ಸೆ'ಯೂ ಸ್ಥಾಯಿಭಾವಗಳೆನಿಸಿದ ರತಿ ಮೊದಲಾದ ಸ್ಥಾಯಿಭಾವಗಳು ತಮಗೆ ಸಂಬಂಧಿಸಿದ ರಸಗಳನ್ನು ಹೇಗೆ ಪ್ರಕಾಶಗೊಳಿಸುತ್ತವೆ ಎಂಬುದನ್ನು ಮುಂದೆ ಚರ್ಚಿಸಲಾಗಿದ್ದು ಇಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದನ್ನು ಮಾತ್ರ ವಿವೇಚಿಸಲಾಗಿದೆ. ಹೀಗೆ ದೃಶ್ಯಕಾವ್ಯಗಳಲ್ಲಿ ಅಭಿನಯದ ಮೂಲಕವು ಶ್ರವ್ಯಕಾವ್ಯಗಳಲ್ಲಿ ಓದಿ ಕೇಳುವುದರಿಂದ ಅನೇಕ ಬಗೆಯ ರತಿಗಳನ್ನು ಪ್ರಕಾಶಗೊಳಿಸುವುದರಿಂದ ಸ್ಥಾಯಿಭಾವಗಳು, ಸಂಚಾರಿಭಾವಗಳು, ವ್ಯಭಿಚಾ–ರಿಭಾವಗಳು ಭಾವವೆನಿಸಿದೆ. ಇಲ್ಲಿ ಸ್ವಾತಿಕವೆಂಬ ಪದವು ಅನುಭಾವಗಳಿಗೆ ಮಾತ್ರ ಅನ್ವಯಿಸಿದರೂ ಬಹುವಚನದಲ್ಲಿರುವದರಿಂದ ವಿಭಾವಗಳಿಗೂ ಅನ್ವಯಿಸುವುದು ಆದರಿಂದ ರಸವೂ ಸ್ಥಾಯಿಭಾವಗಳ ಆಸ್ವಾದನೆಯಿಂದ ಲಭಿಸುವ ಒಂದು ಮಾನಸಿಕ ಸ್ಥಿತಿಯಾಗಿದೆ. ಪುಷ್ಪ ಮಾಲೆಗಳಲ್ಲಿರುವ ಸೂತ್ರದಂತೆ ಭಾವಗಳೆಲ್ಲದರಲ್ಲು ಅನುಸ–ರಿಸಿಕೊಂಡು ಬಂದು ಬೇರೊಂದು ಭಾವದಿಂದ ಕಣ್ಮರೆಯಾಗದಂತೆ ಸ್ಥಿರವಾಗಿ ನಿಂತು ರಸವನ್ನು ಪುಷ್ಟಿಗೊಳಿಸುವ ಭಾವಾವೇ ಸ್ಥಾಯಿಭಾವವೆನಿಸುತ್ತದೆ.

'ಸ್ಥಾಯಿಭಾವ'ವನ್ನು ಒಂದು ಸೂತ್ರಕ್ಕೂ ಸಂಚಾರಿ ಭಾವಗಳನ್ನು ಅದರಲ್ಲಿ ಪೋಣಿಸುವ ಬಣ್ಣ ಬಣ್ಣದ ಮಣಿಗಳಿಗೂ ಅಭಿನವಗುಪ್ತನು ಹೋಲಿಸುತ್ತಾನೆ.[೨೭] ಈ ಮಣಿಗಳು ನಿಲ್ಲುವುದಕ್ಕೆ ಸೂತ್ರವೇ ಆಧಾರ. ಇವುಗಳ ಬಣ್ಣದಿಂದ ಸೂತ್ರಕ್ಕೂ ವರ್ಣವೈಚಿತ್ರ್ಯ ಒದಗುತ್ತದೆ. ಸ್ಥಾಯಿಯನ್ನು ಸಮುದ್ರಕ್ಕೂ ಸಂಚಾರಿಭಾವಗಳನ್ನು

ಅದರಲ್ಲಿ ಏಳುತ್ತಾ ಬೀಳುತ್ತಾ ಇರುವ ತರಂಗಗಳಿಗೂ ಹೋಲಿಸುವುದುವುಂಟು ಇದಕ್ಕೆ ಒಂದು ಉದಾಹರಣೆ ಕೊಡಲಾಗಿದೆ. ಹೆಣ್ಣಿನ ಹೃದಯದಲ್ಲೂ ಗಂಡಿನ ಹೃದಯದಲ್ಲೂ ರತಿಸ್ಥಾಯಿಭಾವವು ವಾಸನಾರೋಪದಲ್ಲಿ ಮೊದಲಿನಿಂದಲೂ ಇರುತ್ತದೆ. ಇದನ್ನು ಉದ್ಬೋಧನಗೊಳಿಸಬಲ್ಲ ಪುರುಷನೋ ರಮಣಿಯೋ ಗೋಚರವಾದಾಗ ಈ ರತಿ ಪ್ರಕಟವಾಗಿ ಬಹುಕಾಲ ಬಹುದೂರ ಮುಂದುವರಿಯುತ್ತದೆ. ಈ ಸ್ಥಾಯಿಭಾವ ಹೆಚ್ಚುತಿರುವ ಕಾಲದಲ್ಲಿ ನಡುನಡುವೆ ಉದಿಸಿ ಲಯಿಸುವ ಸಂಚಾರಿಭಾವಗಳಷ್ಟೋ! ಪ್ರಿಯನನ್ನೋ ಪ್ರೇಯಸಿಯನ್ನೋ ಕುರಿತು ಒಮ್ಮೆ ಚಿಂತೆ, ಒಮ್ಮೆ ಔತ್ಸುಕ್ಯ, ಒಮ್ಮೆ ಹರ್ಷ, ಒಮ್ಮೆ ವಿಷಾದ ಹೀಗೆ ಕೊನೆಯಿಲ್ಲ ಮೊದಲಿಲ್ಲ. ಇವುಗಳಿಗೆಲ್ಲಾ ರತಿಸ್ಥಾಯಿಭಾವವೇ ಆಧಾರ ಮತ್ತು ಜನ್ಮಭೂಮಿ, ಆದ್ದರಿಂದ ಇವುಗಳಿಂದಲೆ ಅದಕ್ಕೆ ಪುಷ್ಟಿ ವೈಚಿತ್ರ್ಯಗಳು ಬರುವುದು. ಒಟ್ಟು ಮೂವತ್ತಮೂರು ಸಂಚಾರಿ ಭಾವಗಳನ್ನು ಭರತನು ತನ್ನ ನಾಟ್ಯ ಶಾಸ್ತ್ರದಲ್ಲಿ ತಿಳಿಸಿದ್ದಾನೆ. ಮುಂದಿನ ಭಾಗದಲ್ಲಿ ವಿಭಾವದ ಸ್ವರೂಪವನ್ನ ಚರ್ಚಿಸಲಾಗಿದೆ.

## ವಿಭಾವ

ರಸನಿಷ್ಪತ್ತಿಯಲ್ಲಿ ಒಂದಾದ ವಿಭಾವ ವಿಚಾರವೇನೆಂಬುದನ್ನು ನೋಡೋಣ. ಈ ಕಲಾಪ್ರಪಂಚದಲ್ಲಿ ಭಾವದ ಕಾರಣಗಳನ್ನು 'ವಿಭಾವ' ಎಂದು ಕರೆಯುವುದು. ಇದಕ್ಕೆ, ಕೂಡುವ ಪಾರಿಭಾಷಿಕವಾದ ವಿವರಣೆಯಾಗಿದೆ. ಲೋಕದಲ್ಲಿ ಭಾವವಾದದ್ದು ಕಲಾವಲಯದಲ್ಲಿ ಬಂದಾಗ ವಿಭಾವವಾಗುತ್ತದೆ. ಲೋಕಸಂಗತಿಗಳು, ಘಟನೆಗಳು, ಕಾವ್ಯ ನಾಟಕಗಳ ಮೂಲ ಸಾಮಾಗ್ರಿಯಾಗುತ್ತದೆ. ಅವುಗಳನ್ನು ಕವಿ ಪ್ರತಿಭೆ ಪರಿವರ್ತಿಸಿ ಕಲಾಸಾಮಾಗ್ರಿಗಳಾನ್ನಾಗಿಸುತ್ತದೆ. ಲೋಕಭಾವ ಪರಿವರ್ತಿತವಾಗಿ 'ವಿಭಾವ' ಅಂ-ದರೆ ವಿಶಿಷ್ಟ ಭಾವವಾಗುತ್ತದೆ. ಇಲ್ಲಿ ವಿಶಿಷ್ಟ, ಎನ್ನುವುದರ ಮುಖ್ಯ ಅರ್ಥವೆಂದರೆ ಲೋಕಭಾವಗಳ ಲೌಕಿಕ ಸ್ಥಿತಿಯನ್ನು ಈ ಕಲಾಭಾವ ಕಳೆದುಕೊಂಡು ಅದಕ್ಕೆ ಒಡ್ಡಿದ ಕಲಾತ್ಮಕ ಪ್ರತಿಮೆಯಾಗುತ್ತದೆ. ಅಂದರೆ ನಾಟಕ ಕಾವ್ಯಗಳಲ್ಲಿ ಬರುವುದು ಲೋಕಭಾವಗಳ ಉದ್ರಿಕ್ತ ಸ್ಥಿತಿಯಲ್ಲ, ಅದರ ಲೌಕಿಕ ಪ್ರತಿಕ್ರಿಯೆಯನ್ನು ಕಳೆದುಕೊಂಡ ಕಲಾರೂಪ ಈ ಅಭಿಪ್ರಾಯವನ್ನು ಆಧುನಿಕ ವಿಮರ್ಶಕ ಟಿ. ಎಸ್. ಎಲಿಯಟ್, "Poetry is not turning loose of emotion, it is escape from emotion" ಎಂದು ಹೇಳಿರುವುದು ಇದನ್ನು ಸ್ಪಷ್ಟ ಪಡಿಸಲು ಆತ ಕಷ್ಟ ಪಡುತ್ತಾನೆ. ಆದರೆ ಭಾರತಿಯ ವಿಭಾವ ಹಿನ್ನೆಲೆಯಲ್ಲಿ ನೋಡಿದಾಗ ಅದು ಥಟ್ಟನೆ ಸ್ಪಷ್ಟವಾಗುತ್ತದೆ. ಆತ objective correlative [೨೯] ಎಂದು ಹೇಳಿದವನು ಈ ತತ್ವದ ಹಿನ್ನೆಲೆಯಲ್ಲಿ ವಿವರಿಸಬಹುದು. ಒಟ್ಟಿನಲ್ಲಿ 'ವಿಭಾವ'ವೆಂದರೆ ಲೋಕದಲ್ಲಿ ಹರಡಿರುವ ರತಿ, ಹಾಸ, ಕ್ರೋಧ, ಉತ್ಸಾಹ, ಭಯ, ಜಿಗುಪ್ಸೆ, ವಿಸ್ಮಯ, ಶ್ರಮ, ಎಂಬ ಸ್ಥಾಯಿಭಾವಗಳನ್ನು ಹೊರಹೊಮ್ಮಿಸುವ ಕಾರಣ ಸಾಮಾಗ್ರಿಗಳನ್ನು ಕಾವ್ಯ ನಾಟ್ಯಗಳಲ್ಲಿ ಪ್ರಯೋಗಿಸಿದರೆ

ಅವೇ ವಿಭಾವವೆನಿಸುತ್ತದೆ. ಆದ್ದರಿಂದಲೇ ರಂಗದ ಮೇಲೆ ಬರುವ ಭಾವಗಳು ಲೌಕಿಕ ಭಾವಗಳಲ್ಲ ಅವುಗಳ ಪರವರ್ತಿತ ರೂಪವಾದ ವಿಭಾವಗಳು.

ವಿಭಾವಗಳನ್ನು ಆಲಂಬನವಿಭಾವ, ಉದ್ದೀಪನವಿಭಾವ ಎಂದು ಅವುಗಳ ಪ್ರಭಾವದ ತಾರತ್ಯಮವನ್ನು ಅನುಸರಿಸಿ ಎರಡು ಬಗೆಯಾಗಿ ವಿಂಗಡಿಸಿದ್ದಾರೆ. ಭಾವವು ಆವಿರ್ಭವಿಸುವುದಕ್ಕೆ ಮೂಲಾಶ್ರಯಾವಾದ ಕಾರಣವೇ ಆಲಂಬನವಿಭಾವ ಹೀಗೆ ಉದಿಸಿದ ಭಾವವನ್ನು ಪ್ರಬಲ ಪಡಿಸುವ ಸಾಮಾಗ್ರಿಯೇ ಉದ್ದೀಪನವಿಭಾವ. ಉದಾಹರಣೆಗೆ 'ಶಾಂಕುತಲ ನಾಟಕದಲ್ಲಿ ದೃಷ್ಯಂತನನ್ನು ಕಂಡು ಶಾಂಕುತಲ ತಪೋವನ  ವಿರೋಧಿಯಾದ ವಿಚಾರಕ್ಕೆ ಒಳಗಾದಳು ಅವಳಲ್ಲಿ ಹೀಗೆ ಮೇಲಕ್ಕೆದ ರತಿ ಭಾವಕ್ಕೆ ದೃಷ್ಯಂತನು ಆಲಂಬನವಿಭಾವ ಅವನಿಲ್ಲದಿದ್ದರೇ ಈ ಭಾವ ಉಕ್ಕುತ್ತಲೇ ಇರಲಿಲ್ಲ. ಇದರಂತೆ ದುಷ್ಯಂತನಿಗೂ ಶಕುಂತಲೆ ಆಲಂಬನವಿಭಾವ ಇವರಿಬ್ಬರ ಹೃದಯದಲ್ಲಿ ಪ್ರೇಮ ಸಂಚಾರವಾಗುತ್ತಲೂ ಇದನ್ನು ಆಶ್ರಮದ ನಿರಾತಂಕವಾದ ಪರಿಸರ ಸಖಿಯರು ಪ್ರೋತ್ಸಾಹ ನಡು ನಡುವೆ ಒದಗುವ ಅಗಲಿಕೆ ಈ ಮೊದಲಾದ ಅನೇಕ ಅಂಶಗಳು ಇನ್ನಷ್ಟು ಕೆರಳಿಸುತ್ತದೆ. ಇವೆಲ್ಲಾ ಉದ್ದೀಪನವಿಭಾವಗಳಾಗಿವೆ. [೩೦]

**ನಾಯಕ**

ಆಲಂಬನವಿಭಾವದಲ್ಲಿ ಬರುವ ನಾಯಕ ನಾಯಕಿ, ಪ್ರತಿನಾಯಕರ ವಿವರಣೆಯನ್ನು ಇವರಲ್ಲಿ ಬರುವ ಬೇಧ ಪ್ರಭೇದಗಳನ್ನು ವಿಶ್ವನಾಥನು ಈ ರೀತಿ ವಿವೇಚಿಸಿದ್ದಾನೆ. ಇದರಲ್ಲಿ ನಾಯಕನ ಲಕ್ಷಣವೇನೆಂಬುದನ್ನು ವಿವೇಚಿಸಲಾಗಿದೆ. ನಾಯಕನು ಧಾನಶೀಲನ್ನು, ಕರ್ಮಕುಶಲನು, ಸತ್ಕುಲಪ್ರಶಾಂತನು, ಬುದ್ಧಿವಂತನೂ, ಸೌಂದರ್ಯ ಯೌವ್ವನ ಉತ್ಸಾಹಗಳುಳ್ಳವನೂ, ಬೇಗನೆ ಕೆಲಸ ಮಾಡುವವನೂ, ಪ್ರಜಾನುರಾಗಿಯೂ, ಬೇರೆಯವರ ನಿಂದೆಯನ್ನು ಸಹಿಸದೆಯೂ, ಉತ್ತಮ ಸ್ವಭಾವದವನೂ ಆಗಿರುವಂತಹ ಗುಣವುಳ್ಳವನೇ ನಾಯಕನಾಗಿದ್ದಾನೆ.

**ಧೀರೋ ದಾತ್ತೋ ಧೀರೋದ್ಧತಸ್ತಥಾ ಧೀರಾಲಲಿತಶ್ಚ ।**
**ಧೀರಪ್ರಶಾಂತ ಇತ್ಯಯಮುಕ್ತಃ ಪ್ರಥಮಶ್ಚತುರ್ಭೇದಃ ॥**[೩೧]

[ಸಾಹಿತ್ಯದರ್ಪಣ, ೩, ೩೭]

ನಾಯಕನು ಧೀರೋದಾತ್ತ, ಧೀರೋದ್ಧತ, ಧೀರಲಲಿತ, ಧೀರಪ್ರಶಾಂತ ಎಂದು ನಾಲ್ಕು ಬಗೆಯಾಗಿರುವನು. ಧೀರೋದಾತ್ತನು ತನ್ನನ್ನು ಪ್ರಶಂಸೆ ಮಾಡಿಕೊಳ್ಳುವುದಿಲ್ಲ, ಪ್ರಾಣಿಗಳ ಬಗ್ಗೆ ದಯಾಮಾಯಾಯೂ, ಗಂಭೀರನು, ಗರ್ವವಿದ್ದರೂ, ತೋರಿಸದೇ ವಿನಯವಂತವನಾಗಿರುವನು. ಹರ್ಷಶೋಕ ಮೊದಲಾದ ಮನಸ್ಸಿನ ಚಾಪಲ್ಯಕ್ಕೆ ಸಿಲುಕದೆ ಕರ್ತವ್ಯಪಾಲಕನು ಹಿಡಿದ ಕಾರ್ಯವನ್ನು ಬಿಡದೆ ನಡೆಸುವನು ಇದಿಷ್ಟು ದೀರೋದಾತ್ತ ನಾಯಕನ ಲಕ್ಷಣವೆನಿಸಿದೆ. ಉದಾಹರಣೆಗಾಗಿ ರಾಮ ಯುದಿಷ್ಠಿರ ನಾಯಕರು

ಧೀರೋದಾತ್ತ ನಾಯಕರಾಗಿದ್ದಾರೆ. ಇನ್ನು ಧೀರೋದತ್ತನು ಬೇರೆಯವರನ್ನು ವಂಚಿಸುವುದರಲ್ಲಿ ಆಸ್ತಕನು ಉಗ್ರಸ್ವಭಾವ ಚಂಚಲ ಪ್ರವೃತಿವುಳ್ಳವನು, ಅಹಂಕಾರ ವರ್ಗಗಳಿಂದ ತುಂಬಿದವನು. ತನ್ನನ್ನು ಪ್ರಶಂಸಿಸುವುದರಲ್ಲಿ ಆಸಕ್ತನು ಆಗಿರುವನು. ಉದಾಹರಣೆಗೆ ಭೀಮಸೇನ ಮೊದಲಾದವರು ಧೀರೋದ್ಧತನಾಯಕರೆನಿಸಿದ್ದಾರೆ. ನಂತರ ಧೀರಲಲಿತ ನಾಯಕನು ಮಂತ್ರಿ ಮೊದಲಾದವರಲ್ಲಿ ರಾಜ್ಯದ ಹೊರೆಯನ್ನು ಇರಿಸಿ ನಿಶ್ಚಿಂತರಾಗಿರುವವನು. ಕೋಮಲ ಸ್ವಭಾವ ಯಾವಾಗಲೂ ನೃತ್ಯಗಾನ ಮೊದಲಾದ ವಿನೋದಗಳಲ್ಲಿಯೇ ನಿರತನಾಗಿರುವವನು. ರತ್ನಾವಳಿಯಲ್ಲಿ ಬರುವ ನಾಯಕ ವತ್ಸರಾಜನು ಧೀರಲಲಿತನಾಯಕನಿಗೆ ಉದಾಹರಣೆ ಆಗಿದ್ದಾನೆ. ನಾಯಕರಲ್ಲಿನ ಸಾಮಾನ್ಯ ಗುಣಗಳಿಂದ ಕೂಡಿರುವನು ಧೀರಪ್ರಶಾಂತನಾಯಕನ ಲಕ್ಷಣವಾಗಿದೆ. ಉದಾಹರಣೆಯಾಗಿ ಮಾಲತಿಮಾಧವದಲ್ಲಿ ಬರುವ ಮಾಧವ.

**ಏಷಾಂ ಚ ಶೃಂಗಾರಿ ರೂಪತ್ವೇ ಭೇದಾನಾಹ ।**
**ಏಭಿರ್ದಕ್ಷಿಣಧೃಷ್ಟಾನುಕೂಲಶಠರೂಪಿಭಿಸ್ತು ಷೋಡಶಧಾ ॥**

ಈ ನಾಲ್ಕು ಬಗೆಯ ನಾಯಕರಲ್ಲಿ ದಕ್ಷಿಣ, ಧೃಷ್ಟ, ಅನುಕೂಲ, ಶಠ ಎಂದು ಒಬ್ಬೊಬ್ಬರೂ ಮತ್ತೆ ನಾಲ್ಕು ಬಗೆಯಾಗುವುದರಿಂದ ನಾಯಕರಲ್ಲಿ ಒಟ್ಟು ಹದಿನಾರು ಬಗೆಗಳಾಗುವರು. ಇದರಲ್ಲಿ ದಕ್ಷಿಣ ನಾಯಕನು ಸ್ತ್ರೀಯರಲ್ಲಿ ಅನುರಕ್ತನಾಗಿರುವನು. ರಾಜನ ದಕ್ಷಿಣ ಸ್ವಭಾವವು ಹೇಗಿದೆ ಎಂಬುದನ್ನು ಉದಾಹರಿಸಲಾಗಿದೆ. ದ್ವಾರಪಾಲಿಕೆ ಯೊಬ್ಬಳು ಸಖಿಯೊಬ್ಬಳಿಗೆ ದಕ್ಷಿಣ ನಾಯಕನ ಬಗ್ಗೆ ಈ ರೀತಿ ತಿಳಿಸುವಳು. "ಕುಂತಲರಾಜನ ಮಗಳು ಸ್ನಾನಮಾಡಿ ಸಮಾಗಮಕ್ಕಾಗಿ ಕಾದಿರುವಳು. ಇದು ಅಂಗರಾಜನ ಮಗಳೊಡನೆ ಸೇರುವ ಸಮಯ. ಆದ್ದರಿಂದ ಅಲ್ಲಿಗೆ ಹೋಗುವುದು ಯುಕ್ತವೇ ಆದರೂ ಕಮಲಾದೇವಿಯೊಡನೆ ದ್ಯೂತವಾಡಿ ಕಾಂತಿ ಎಲ್ಲವನ್ನೂ ಕಳೆದಿರುವೆ. ಪಟ್ಟದ ರಾಣಿಯನ್ನು ಹೇಗಾದರೂ ಸಮಾಧಾನ ಮಾಡಲೇಬೇಕಾಗಿದೆ. ಹೀಗೆ ಅಂತಃಪುರದ ಸ್ತ್ರೀಯರ ಬಗ್ಗೆ ತಿಳಿದು ನಾನು ರಾಜನಿಗೆ ವಿಜ್ಞಾಪನೆ ಮಾಡಲು ಅವನಿಗೆ ಎಲ್ಲಿಗೆ ಹೋಗಬೇಕೆಂಬುದನ್ನು ನಿರ್ಣಹಿಸಲಿಕ್ಕಾಗದ್ದರಿಂದ ಅವನು ಎರಡು ಮೂರು ಗಳಿಗೆಗಳವರೆಗೂ ಸುಮ್ಮನಿದ್ದನು". ಇಂತಹ ನಾಯಕನು ದಕ್ಷಿಣ ನೆನೆಸಿದ್ದಾನೆ.

ಧೃಷ್ಟನಾಯಕನು ಯಾವುದೋ ಕಾರ್ಯಕ್ಕಾಗಿ ಹೋಗಿದ್ದ ಪ್ರೇಯಸಿಯು ಹತ್ತಿರದಲ್ಲಿಲ್ಲದೆ ಇದ್ದಾಗ ಆಕೆಗೆ ಅಪರಾಧವನ್ನು ಮಾಡದಿದ್ದರೂ ನಿರ್ಭಯನಾಗಿರುವುದು. ಪ್ರೇಯಸಿಯಿಂದ ಅವಮಾನವನ್ನು ಹೊಂದಿದ್ದರೂ ನಾಚಿಕೆ ಇಲ್ಲದಿರುವುದು ಇವನು ಬೇರೆ ಕಡೆಯಲ್ಲಿ ಆಸಕ್ತನಾಗಿರುವುದನ್ನು ಪ್ರೇಯಸಿಯು ಕಂಡಿದ್ದರೂ ತಾನು ಹೇಗೆ ಆಸಕ್ತನಾಗಿಲ್ಲವೆಂದು ಸುಳ್ಳನ್ನು ಹೇಳುವುದು ಧೃಷ್ಟನಾಯಕನ ಸ್ವಭಾವವೆನಿಸಿದೆ. ಒಬ್ಬ ನಾಯಿಕೆಯಲ್ಲೇ ಅನುರಾಗವಿರುವವನು ಅನುಕೂಲನಾಯಕವೆನಿಸಿದ್ದಾನೆ.

**ಅಸ್ಮಾಕಂ ಸಖಿ ವಾಸಸೀ ನ ರುಚಿರೇ ಗ್ರೈವೇಯಕಂ ।**
**ನೋಜ್ವಂ ನೋ ವಕ್ರಾ ಗತಿರುದ್ದತಂ ನಹಸಿತಂ ನೈವಾಸ್ತಿ ಕಶ್ಚಿನ್ಮದಃ ॥**
**ಕಿಂ ತ್ವನ್ಯೇ?ಪಿ ಜನಾ ವದಂತಿ ಸುಭಗೋ?ಪ್ಯಸ್ಯಾಃಪ್ರಿಯೋ ನಾನ್ಯತಃ ॥**
**ದೃಷ್ಟಿಂ ನಿಕ್ಷಿಪತೀತಿ ವಿಶ್ವ ವಿಯತಾ ಮನ್ಯಾಮಹೇ ದುಃಖಿತಮ್॥**
**ಶಠೋ?ಯಮೇಕತ್ರದ್ಧಭಾವೋ ಯಃ ।**
**ದರ್ಶಿತಬಹಿರನುರಾಗೋ ವಿಪ್ರಿಯಮನ್ಯತ್ರ ಗೂಢಮಾಚರತಿ॥**[೨೦]

ಅನುಕೂಲನಾಯಕನ ಲಕ್ಷಣವು ತನಗೆ ಪತಿಯು ಪ್ರಿಯನಾಗಿರುವುದನ್ನು ಪ್ರಕಟಿಸಲು ಒಬ್ಬ ಸ್ತ್ರೀಯು ಸಖಿಗೆ ಹೇಳುತ್ತಾಳೆ. "ಎಲೈ ಸಖಿಯೇ, ನನ್ನ ಬಟ್ಟೆಗಳು ಚೆನ್ನಾಗಿಲ್ಲ. ಅಡ್ಡಿಕೆ ಎಂಬ ಕಂಠಾಭಾರಣಾವೂ ಸುಂದರವಾಗಿಲ್ಲ. ನನ್ನ ಗತಿಯೂ ಮನೋಹರವಾಗಿಲ್ಲ. ನಾನು ಗಟ್ಟಿಯಾಗಿ ನಗುತ್ತಲೂ ಇಲ್ಲ. ಬೇರೆ ಯಾವ ಯೌವ್ವನ ಮದವೂ ನನ್ನಲ್ಲಿ ಇಲ್ಲ. ಇಷ್ಟಾದರೂ ಪ್ರಿಯನು ಇಲ್ಲಿಂದ ಬಿಟ್ಟು ಬೇರೆ ಎಲ್ಲೂ ದೃಷ್ಟಿಯನ್ನಿಡುವುದಿಲ್ಲವೆಂದು ಜನರು ಹೇಳುತ್ತಾರೆ. ಇದರಿಂದ ವಿಶ್ವವನ್ನೇ ದುಃಖಗೊಳಿಸಿರುವೆನೆಂದು ನಾನು ಭಾವಿಸುತ್ತೇನೆ". ಇದು ಅನುನಾಯಕನ ವರ್ತನೆ ಎನಿಸಿದೆ.

ಒಬ್ಬ ನಾಯಿಕೆಯಲ್ಲಿಯೇ ಆಸೆಯನ್ನಿಟ್ಟು ಹೊರಗಿನ ನಾಯಿಕೆಯರಲ್ಲೂ ಅನುರಾಗವನ್ನು ತೋರಿಸುತ್ತಾ ಬೇರೊಬ್ಬ ನಾಯಿಕೆಯಲ್ಲಿ ಗುಪ್ತವಾಗಿ ಅಪ್ರಿಯವನ್ನಾಚ–ರಿಸುವವನು ಶಠನಾಯಕನೆಸಿದ್ದಾನೆ. ಉದಾಹರಣೆಗಾಗಿ

**ಶಠಾಽನ್ಯಾಸ್ಯಾಃ ಕಾಂಚೀಮಣಿರಣಿತಮಾಕರ್ಣ್ಯ ಸಹಸಾ**
**ಯದಾಶ್ಲಿಷ್ಯನ್ನೇವ ಪ್ರಶಿಥಿಲಭುಜಗ್ರಂಥಿರಭವಃ ।**
**ತದೇತತ್ ಕ್ವಾಚಕ್ಷೇ ಘೃತಮಧುಮಯತ್ವದ್ಬಹುವಚೋ**
**ವಿಷೇಣಾಘೂರ್ಣಂತೀ ಕಿಮಪಿ ನ ಸಖೀ ಮೇ ಗಣತಿ ॥**[೨೧]

ನಾಯಕನಿಗೆ ದೂತಿಯು ಹೇಳುವ ಮಾತಿದು "ಎಲೈ ಧೂರ್ತನೇ, ನೀನು ನನ್ನ ಸಖಿಯನ್ನು ಆಲಿಂಗಿಸಿಕೊಂಡಿರುತ್ತಲೇ ಬೇರೊಬ್ಬಳು ಧರಿಸಿಕೊಂಡಿರುವ ಡಾಬಿನ ಗೆಜ್ಜೆಯ ಶಬ್ದವನ್ನು ಕೇಳಿ ಹಠಾತ್ತಾಗಿ ನಿನ್ನ ತೋಳುಗಳನ್ನು ಸಡಿಲಗೊಳಿಸಿಕೊಂಡೆ. ಹೀಗೆ ಇರುವ ನಿನ್ನ ವರ್ತನೆಯನ್ನು ಏನೆಂದು ಯಾರಲ್ಲಿ ಹೇಳಲಿ? ತುಪ್ಪ ಮತ್ತು ಜೇನಿನೊಡನೆ ಕೂಡಿರುವ ನಿನ್ನ ಮಾತು ಹೊರಗೆ ಮಧುರವೂ, ಒಳಗೆ ಕ್ರೂರವೂ ಆಗಿರುವುದರಿಂದ ಇಂತಹ ಮಾತಿನಿಂದ ಮೋಹಗೊಂಡಿರುವ ನನ್ನ ಸಖಿಗೆ ನಿನ್ನ ಸ್ವಭಾವವನ್ನು ತಿಳಿದುಕೊಳ್ಳಲಾಗಲಿಲ್ಲ". ಇಲ್ಲಿ ತನಗೆ ಬಂದ ನಾಯಿಕೆಯಲ್ಲಿ ಹೊರಗೆ ಅನುರಾಗವನ್ನು ತೋರಿಸುತ್ತಾ ಬೇರೊಬ್ಬಳಲ್ಲಿ ಗುಪ್ತವಾಗಿ ರಮಿಸುವುದನ್ನು ತಿಳಿಸಿರುವುದರಿಂದ ಈ ಬಗೆಯ ನಾಯಕನು ಶಠನೆನಿಸಿದ್ದಾನೆ.

**ಏಷಾಂ ಚ ತ್ರೈವಿಧ್ಯಾತ್ಸರ್ವೇಷಾಮುತ್ತ ಮಾಧವಮಧ್ಯಮತ್ವೇನ ।**
**ಉಕ್ತ ನಾಯಕಭೇಧಾಶ್ಚತ್ವಾರಿಂಶತ್ತಥಾಷ್ಟ್ ಚ ॥** [೩೪]

ಹಿಂದೆ ಹೇಳಿದ ಹದಿನಾರು ಬಗೆಯ ನಾಯಕರಲ್ಲಿ ಒಬ್ಬೊಬ್ಬರೂ ಉತ್ತಮ, ಮಧ್ಯಮ, ಅಧಮ ಎಂದು ಮೂರು ಬಗೆಯಾಗಿರುವುದರಿಂದ ಒಟ್ಟು ನಾಯಕರಲ್ಲಿ ನಲ್ವತ್ತೆಂಟು ಬಗೆಯಾಗುವರು.

ನಾಯಕನಿಗೆ ಸಹಾಯಕರಾದವರ ಲಕ್ಷಣವನ್ನು ತಿಳಿಸಿ ಇವರನ್ನು ಉತ್ತಮ, ಮಧ್ಯಮ, ಅಧಮವೆಂಬ ಮೂರು ವರ್ಗಗಳಿಂದ ವಿಭಾಗಿಸಲಾಗಿದೆ. ಇದರಲ್ಲಿ ಪೀಠಮರ್ಧ ನೆನಿಸುವನು ಇವನು ನಾಯಕನ ಸಾಮಾನ್ಯಗುಣಗಳಿಂದ ಕೂಡಿದ ಕೆಲವು ಅಂಶಗಳಲ್ಲಿ ಮಾತ್ರ ನ್ಯೂನತೆಯಿರುವ ಅವನ ಸಹಾಯಕನ ವಿಚಾರವು ಕೆಲವು ಕಡೆ ಮಾತ್ರವೇ ಬರುವುದರಿಂದ ಈ ಸಹಾಯಕನನ್ನು ಪೀಠಮರ್ಧನೆನಿಸಿದ್ದಾನೆ.[೩೫] ಇನ್ನು ರಾಜನ ಶೃಂಗಾರಕ್ಕೆ ವಿಟ, ಚೇಟ, ವಿದೂಷಕರು, ಸಹಾಯಕರಾಗಿದ್ದಾರೆ. ಅಥ–ರ್ಚಿಂತನೆಗೆ ಮಂತ್ರಿ, ವಾಮನ, ಷಂಡ, ಕಿರಾತ, ಮ್ಲೇಚ್ಛ, ಗೋಪಾಲ, ಶಕಾರ, ಕುಬ್ಜ ಇವರೆಲ್ಲರೂ ರಾಜನಿಗೆ ಅಂತಃಪುರದ ಸಹಾಯಕರಾಗಿದ್ದಾರೆ. ಇನ್ನು ಲೋಕವನ್ನು ದಂಡಿಸಲು ಸ್ನೇಹಿತರು, ಸಾಮಂತರಾಜರು, ಮಕ್ಕಳು ದುಷ್ಟಗ್ರಹವೆನಿಸಿದ ದಂಡಕ್ಕೆ ಸಹಾಯಕರಾಗಿದ್ದಾರೆ. ಯಾಜ್ಞಿಕರು, ಪುರೋಹಿತರು ತಪಸ್ವಿಗಳು, ಬ್ರಹ್ಮಜ್ಞಾನಿಗಳು ರಾಜನ ಧರ್ಮಕಾರ್ಯದಲ್ಲಿ ಸಹಾಯಕರಾಗಿರುವರು. ಆದ್ದರಿಂದಲೇ ಇವರೆಲ್ಲರೂ ಪೀಠಮರ್ದ, ಮಂತ್ರಿ, ಪುರೋಹಿತ ಮೊದಲಾದವರನ್ನು ಉತ್ತಮವೆಂದು, ವಿಟ ಮತ್ತು ವಿದೂಷಕನನ್ನು ಮಧ್ಯಮ, ಶಕಾರ, ಚೇಟ, ತಾಂಬುಲಿಕ, ಗಾಂಧಿಕ ಇವರೆಲ್ಲರೂ ಅಧಮರೆನಿಸಿದ್ದಾರೆ.

ಇನ್ನು ನಾಯಕನ ಸತ್ವಗುಣಗಳನ್ನು ತಿಳಿಸಲಾಗಿದೆ.

**ಶೋಭಾ ವಿಲಾಸೋ ಮಾಧುರ್ಯಂ ಗಾಂಭೀರ್ಯಂ ಧೈರ್ಯತೇಜಸೀ ।**
**ಲಲಿತೌದಾರ್ಯಮಿತ್ಯಷ್ಟೌ ಸತ್ತ್ವಜಾಃ ಪೌರುಷಾ ಗುಣಾಃ ॥** [೩೬]

ಕಾಂತಿ, ವಿಲಾಸ, ಮಾಧುರ್ಯ, ಗಾಂಭೀರ್ಯ, ಪ್ರಕಾಶ, ಮನೋಹರತ್ವ, ಔದಾರ್ಯ, ಇವು ನಾಯಕನಲ್ಲಿ ಉದ್ಭವಿಸುವ ಸತ್ವಗುಣಗಳೆನಿಸಿವೆ. ಅವುಗಳಲ್ಲಿ ಶೌರ್ಯ, ಸಾಮರ್ಥ್ಯ, ಸತ್ಯ, ಹೆಚ್ಚಿನ ಉತ್ಸಾಹ, ಪ್ರೇಮದೃಷ್ಟಿ, ಸಣ್ಣವರಲ್ಲಿ ದಯೆ, ದೊಡ್ಡವರಲ್ಲಿ ಸ್ಪರ್ಧೆ ಇವಿಷ್ಟೂ ಯಾವುದರಿಂದ ಸಂಭವಿಸುತ್ತದೆಯೋ ಅವು ಶೋಭಾಗುಣವೆನಿಸಿದೆ. ಇವುಗಳಲ್ಲಿ ವಿಲಾಸಗುಣವನ್ನು ಉದಾಹರಿಸಲಾಗಿದೆ.

**ದೃಷ್ಟಿಸ್ತೃಣೀಕೃತಜಗತ್ತ್ರಯ ಸತ್ತ್ವಸಾರಾ**
**ಧೀರೋದ್ಧತಾ ನಮಯತೀವ ಗಶಿರ್ಧರಿತ್ರೀಮ್।**

**ಕೌಮಾರಕೇऽಪಿ ಗಿರಿವದ್ಗುರುತಾಂ ದಧಾನೋ**
**ವೀರೋ ರಸಃ ಕಿಮಯಮಿತ್ಯುತ ದರ್ಪ ಏಷಃ ॥** [೩೭]

"ಈ ಕುಮಾರನ ದೃಷ್ಟಿಯು ಮೂರು ಲೋಕಗಳ ಹೆಚ್ಚಿನ ಸಾಮರ್ಥ್ಯವನ್ನು ಹುಲ್ಲಿನಂತೆ ತಿರಸ್ಕರಿಸಿದೆ. ಅವನ ನಿಶ್ಚಲವೂ ಉದ್ಧತವೂ ಆದ ಗಮನವು ಭೂಮಿಯನ್ನು ಬಗ್ಗಿಸುವಂತಿದೆ. ಬಾಲ್ಯದಲಿಯೂ ಬೆಟ್ಟದಂತೆ ಗೌರವವನ್ನು ಹೊಂದಿರುವ ಇವನು ವೀರರಸವೊ ಎಂಬತಿರುವನು ಅಥವಾ ಗರ್ವವೇ ಹೀಗೆ ಶರೀರರವನ್ನು ಧರಿಸಿದೆಯೋ ಎಂಬಂತಿದೆ". ವಿಲಾಸಗುಣವು ಶೋಭಿಸುತ್ತಿರುವಾಗ ನಾಯಕನ ದೃಷ್ಟಿಯು ನಿಶ್ಚಲವೂ, ಗಮನವೂ, ಮಾತು ಮುಗುಳುನಗೆಯಾಡಗೂಡಿಯೂ ಇರುವುದರಿಂದ ಈ ಶ್ಲೋಕದಲ್ಲಿ ವಿಲಾಸ ಪ್ರಕೃತಿಯನ್ನು ತಿಳಿಸಿದೆ. ಮಾಧುರ್ಯ ಗುಣವು ಮನಸ್ಸಿಗೆ ಉದ್ವೇಗ ಉಂಟಾಗಲು ಸಾಕಷ್ಟು ಕಾರಣಗಳಿದ್ದರೂ, ಉದ್ವೇಗ ಹುಟ್ಟದಿರುವುದೇ ಮಾಧುರ್ಯ ಗುಣವೆನಿಸಿದೆ, ಭಯ, ಶೋಕ, ಕ್ರೋಧ, ಹರ್ಷ, ಮೊದಲಾದ, ಭಾವಗಳಿಂದ ಮನಸ್ಸಿಗೆ ವಿಕಾರವಿಲ್ಲದಿರುವ ಸ್ಥಿತಿಯೇ ಗಾಂಭೀರ್ಯವೆನಿಸಿದೆ. ಉದಾಹರಣೆಗೆ "ರಾಮನನ್ನು ಅಭಿಷೇಕಕ್ಕಾಗಿ ಕರೆದಾಗಲೂ, ವನವಾಸಕ್ಕೆ ಕಳುಹಿಸಿದಾಗಲೂ ರಾಮನ ಶರೀರದಲ್ಲಿ ಸ್ವಲ್ಪವಾದರೂ ವಿಕಾರವಾಯಿತೆಂಬುದನ್ನೇ ನಾವು ಗಮನಿಸಲಿಲ್ಲ" ಇಲ್ಲಿ ರಾಮನನ್ನು ಪಟ್ಟಾಭಿಷೇಕಕ್ಕೆ ಕರೆದಾಗಲೂ, ಅದು ತಪ್ಪಿ ಕಾಡಿಗೆ ಹೋಗಬೇಕಾದರೂ ರಾಮನು ನಿರ್ವಿಕಾರನಾಗಿದ್ದುದೇ ಗಾಂಭೀರ್ಯವೆನಿಸಿದೆ. ಹಾಗೇಯೇ ವಿಶೇಷವಾದ ಅಡಚಣೆಯಿದ್ದರೂ, ಹಿಡಿದ ಪ್ರಯತ್ನದಿಂದ ವಿಮುಖನಾಗದಿರುವುದೇ ಧೈರ್ಯ ಗುಣವೆನಿಸಿದೆ. ಇಲ್ಲಿಗೆ ಆಲಂಬನ ವಿಭಾವದಲ್ಲಿ ಬರುವ ನಾಯಕನ ಗುಣಲಕ್ಷಣಗಳು, ನಾಯಕನ ಭೇದ, ಪ್ರಭೇದಗಳನ್ನು ಮತ್ತು ಅವನಿಗೆ ಸಹಾಯಕರಾಗಿರುವರು ಇತ್ಯಾದಿ ವಿಷಯಗಳನ್ನು ಉದಾಹರಣೆ ಸಹಿತವಾಗಿ ವಿವರಿಸಲಾಯಿತು. ಇನ್ನು ನಾಯಿಕೆಯ ಗುಣಲಕ್ಷಣವೇನೆಂಬುದನ್ನು ಮುಂದೆ ತಿಳಿಸಲಾಗಿದೆ.

**ನಾಯಿಕೆ**

**ಅಥನಾಯಿಕಾ ತ್ರಿವಿಧಾ ಸ್ವಾ?ನ್ಯಾ ಸಾಧಾರಣೀ ಸ್ತ್ರೀತಿ ।**
**ನಾಯಕಸಾಮಾನ್ಯಗುಣೈರ್ಭವತಿ ಯಥಾಸಂಭಮೈರ್ಯುಕ್ತಾ ॥** [೩೮]

ನಾಯಿಕೆಯು ಸ್ವಸ್ತ್ರಿ, ಅನ್ಯಸ್ತ್ರಿ, ಸಾಧಾರಣಸ್ತ್ರಿ ಎಂದು ಮೂರು ಬಗೆ ಎನಿಸಿರುವಳು, ತ್ಯಾಗ, ಸಾಮರ್ಥ್ಯ, ಔದಾರ್ಯ, ಮೊದಲಾದ ನಾಯಕನಲ್ಲಿರುವ ಸದ್ಗುಣಗಳು ನಾಯಿಕೆಯಲ್ಲಿಯೂ ಇರುವುದು. ಸ್ವಸ್ತ್ರಿ ನಾಯಿಕೆಯು ನಮ್ರತೆವುಳ್ಳವಳು, ಋಪ್ರಕೃತಿ ಮೊದಲಾದ ಗುಣದಿಂದ ಕೂಡಿ ಮನೆಗೆಲಸಗಳನ್ನು ಶ್ರದ್ದೆಯಿಂದ ನಡೆಸುತ್ತಾ ಪತಿಯಲ್ಲಿ ಭಕ್ತಿಯಿಂದ ನಡೆದುಕೊಳ್ಳುವಳು. "ಲಜ್ಜಾ ಪರ್ಯಾಪ್ತಪ್ರಸಾದಾನಾನಿ ಪರಭರ್ತೃ ನಿಷ್ಪಿಪಾಸಾನಿ ಅವಿನಯದುರ್ಮೇಧಾನಿ ಧನ್ಯಾನಾಂ ಗೃಹೇ ಕಲತ್ರಾಣಿ" ನಾಚಿಕೆಯೇ

ವಿಶೇಷವಾದ ಆಭರಣವೆನಿಸಿ ಪರಪುರುಷರಲ್ಲಿ ಆಸೆಪಡದೆ, ದುರ್ವ್ಯಸನಗಳನ್ನರಿಯದೆ ಇರುವ ಸ್ತ್ರೀಯರು ಪುಣ್ಯಾತ್ಮರ ಮನೆಯಲ್ಲಿ ಮಾತ್ರವೇ ಇರುವರು". ಇಂತಹ ಸ್ತ್ರೀಯರು ಸ್ವಸ್ತ್ರೀ ಎನಿಸುವರು. ಇಂತಹ ನಾಯಿಕೆಯರು ಮುಗ್ಧ, ಮಧ್ಯೆ, ಪ್ರಗಲ್ಭೆ, ಎಂದು ಮೂರು ಬಗೆಯಾಗಿರುವರು.

ಮುಗ್ಧೆಯ ಸ್ವಭಾವವು ಈ ರೀತಿಯಾಗಿದೆ. "ಪ್ರಥಮಾವತೀರ್ಣಾ ಯೌವ್ವನ ಮದನವಿಕಾರಾರತೌ ವಾಮಾ ಕಥಿತಾ ಮೃದುಶ್ಚಮಾನೇ ಸಮಧಿಕಲಜ್ಜಾವತೀ ಮುಗ್ಧಾ" ಯೌವ್ವನವು ಕಾಮವಿಕಾರವೂ ಮೊದಲ ಬಾರಿಗೆ ಹೊಸದಾಗಿ ಬಂದಿದ್ದು, ರತಿಯಲ್ಲಿ ವಕ್ರಳೂ, ಮಾನದಲ್ಲಿ ಮೃದುವೂ ಹೆಚ್ಚು ನಾಯಿಕೆಯಿಂದ ಕೂಡಿಯೂ ಇರುವಳು ಮುಗ್ಧೆ ಎನಿಸುವಳು. ಈ ಐದು ಗುಣಗಳು ಮುಗ್ದನಾಯಿಕೆಯಲ್ಲಿದೆ.

"ಮಧ್ಯಾವಿಚಿತ್ರಸುರತಾ ಪ್ರರೋಢಸ್ಮರಯೌವನಾ ಈ ಷತ್ಪ್ರಗಲ್ಭವಚನಾ ಮಧ್ಯಮವ್ರೀಡಿಕಾ ಮತಾ" ಈ ನಾಯಿಕೆಗೆ ಸುರತದಲ್ಲಿ ಹೆಚ್ಚು ಇಚ್ಛೆ ಇರುವುದು. ಕಾಮವಿಕಾರವು ಯೌವನಾವಸ್ಥೆಯು ಈಕೆಗೆ ಹೆಚ್ಚಾಗಿರುತ್ತದೆ ಹೆಚ್ಚು ಪ್ರೌಢಿಮೆಯಿಂದ ಮಾತನಾಡುವಳು. ಹೆಚ್ಚು ಲಜ್ಜೆಯನ್ನು ಹೊಂದಿರುವಳು ಇವಳಲ್ಲಿ ಮುಗ್ಧೆ ನಾಯಿಕೆಗಿಂತಲೂ ಹೆಚ್ಚು ಕಾಮವಿಕಾರವಿರುತ್ತದೆ. ಈ ಐದುಗುಣದ ನಾಯಿಕೆಯು 'ಮಧ್ಯೆ' ಎನಿಸಿರುವಳು.

ಸ್ವಸ್ತ್ರೀ ನಾಯಿಕೆಯಲ್ಲಿ ಮೂರನೆಯವಳಾದ ಪ್ರಗಲ್ಭ ನಾಯಿಕೆಯಲ್ಲಿ ಕಾಮಾಸಕ್ತಿ ಹೆಚ್ಚಾಗಿರುವುದು. ಯೌವನವೂಗಾಢವಾಗಿ ಬೆಳೆದಿರುವುದು. ಕೊಂಚ ಲಜ್ಜೆಯುಳ್ಳವಳು, ಎಲ್ಲಾ ಬಗೆಯ ರತಿ ಕ್ರೀಡೆಗಳಲ್ಲೂ ನುರುಗಿರುವಳು ಇವರಲ್ಲಿ ರತಿಯು ವಿಶೇಷವಾಗಿ ವ್ಯಾಪಿಸಿರುವುದು ಮತ್ತು ನಾಯಕನು ಯಾವಾಗಲೂ ಇವಳೊಡನೆ ಇರುವನು ಈ ಆರು ಬಗೆಯ ಗುಣಗಳು ಪ್ರಗಲ್ಭನಾಯಿಕೆ ಸ್ವಭಾವವಾಗಿದೆ. ಈ ಆರು ಗುಣವುಳ್ಳ ಪ್ರಗಲ್ಭ ನಾಯಿಕೆಯಲ್ಲಿ ಗುಣವೊಂದನ್ನು ಉದಾಹರಿಸಲಾಗಿದೆ. ಯೌವನವು ಗಾಢವಾಗಿ ಬೆಳೆದಿರುವ ನಾಯಿಕೆಯನ್ನು ಇಲ್ಲಿ ಈ ರೀತಿ ವಿವರಿಸಲಾಗಿದೆ. "ಹೆಚ್ಚು ಯೌವನವುಳ್ಳ ಈ ತರುಣಿಯ ವಕ್ಷಸ್ಥಳದಲ್ಲಿ ಎತ್ತರವಾದ ಸ್ತನಗಳಿವೆ. ಕಣ್ಣುಗಳು ವಿಶಾಲವಾಗಿವೆ, ಹುಬ್ಬುಗಳು ಬಗ್ಗಿಕೊಂಡಿವೆ. ಹಾಗೆಯೇ ಮಾತು ಬಹಳ ಸುಂದರವಾಗಿದೆ. ಕಟಿಪ್ರದೇಶವು ಹೆಚ್ಚು ಕೃಶವಾಗಿದೆ". ಹೀಗೆ ಅವಯವಗಳು ವಿಶಾಲವಾಗಿ ಬೆಳೆದಿರುವುದರಿಂದ ಈಕೆಯ ಯೌವನವು ಗಾಢವಾಗಿ ವ್ಯಾಪಿಸೆತ್ತೆಂಬುದು ಸ್ಪಷ್ಟವಾಗಿ ತಿಳಿಸಲಾಗಿದೆ. ಹೀಗೆ ಸ್ವಸ್ತ್ರೀನಾಯಿಕೆಯಲ್ಲಿ ಬರುವ ಮೂರು ವಿಧದ ನಾಯಿಕೆಯರನ್ನು ಅವರಲ್ಲಿ ಕೆಲವು ಗುಣಗಳನ್ನು ಉದಾಹರಿಸಿ ವಿವರಿಸಲಾಗಿದೆ.

ಈಗ ಸ್ವಸ್ತ್ರೀ ನಾಯಿಕೆಯಲ್ಲಿ ಬರುವ ಮಧ್ಯೆ ಪುಗಲ್ಭೆ ನಾಯಿಕೆಯಲ್ಲಿ ಒಬ್ಬೊಬ್ಬರು

ಧೀರೆ, ಅಧೀರೆ ಮತ್ತು ಧೀರಾಧೀರೆ ಎಂದು ಒಟ್ಟು ಆರು ಬಗೆಯ ನಾಯಿಕೆಯರನ್ನ ಭೇದಿಸಲಾಗಿದೆ. ಕೆಲವರು ಧೀರಸ್ವಭಾದವರು, ಮತ್ತೆ ಕೆಲವರು ಹೆದರುವ ಸ್ವಭಾವದವರು, ಮತ್ತು ಕೆಲವರಿಗೆ ಧೈರ್ಯ ಹೆದರಿಕೆ ಎರಡೂ ಸ್ವಭಾವವೂ ಇರುತ್ತದೆ. ಇಲ್ಲಿ ಧೀರ ಮಧ್ಯೆ ಪ್ರಕೃತಿಯ ಸ್ವಭಾವವೇನೆಂದು ತಿಳಿಸಲಾಗಿದೆ. ಪರಸ್ತ್ರೀಯೊಡನೆ ಭೋಗಿಸಿ ಆಕೆಯ ಬಟ್ಟೆಯನ್ನು ಉಟ್ಟುಕೊಂಡು ಬಂದಿರುವ ನಾಯಕನಿಗೆ ನಾಯಿಕೆ ಹೇಳುವ ಮಾತಿದು. "ನೀನು ನನ್ನನ್ನು ಪ್ರಿಯೆ ಎಂದು ಹೇಳಿದ್ದು ಸುಳ್ಳು, ನಿನಗೆ ಪ್ರಿಯರಾದ ಜನರು ಉಟ್ಟ ಬಟ್ಟೆಯನ್ನು ನೀನು ಧರಿಸಿ ನನ್ನ ವಾಸಗೃಹಕ್ಕೆ ಬಂದಿರುವೆ, ಕಾಮುಕರಿಗೆ ಒಡವೆಯಿಂದ ಉಂಟಾಗುವ ಕಾಂತಿಯು ಪ್ರಿಯೆಯನ್ನು ನೋಡಿದ್ದರಿಂದ ಸಫಲಗೊಳ್ಳುತ್ತದೆ". ಇಲ್ಲಿ ಮುಗುಳುನಗೆಯಿಂದ ಕೂಡಿದ ವಕ್ರೋಕ್ತಿಯಿಂದ ನಾಯಕನಿಗೆ ಸಂತಾಪಗೊಳಿಸಿದ್ದರಿಂದ ಇವಳು ಧೀರಸ್ವಭಾವದ ಮಧ್ಯೆ ನಾಯಿಕೆ ಎನಿಸಿದ್ದಾಳೆ.

ಈಗ ಧೀರಾ ಧೀರ ಪ್ರಕೃತಿಯ ಮಧ್ಯನಾಯಿಕೆಯು ಈ ನಾಯಿಕೆಯು ಅನ್ಯಾಸಕ್ತನಾದ ನಾಯಕನ ಸಮಾಚಾರವನ್ನು ಕೇಳಿ ಆಡುವ ಉಕ್ತಿಪ್ರತ್ಯುಕ್ತಿಗಳನ್ನು ಈ ನಾಯಿಕೆಯಲ್ಲಿ ಕಾಣಬಹುದು. ನಂತರ ಅಧೀರ ಪ್ರಕೃತಿಯ ನಾಯಿಕೆಯು ಕಠಿಣವಾದ ಮಾತಿನಿಂದ ಸಂತಾಪವನ್ನುಂಟು ಮಾಡುವಳು, ಅಧೀರ ಪ್ರಕೃತಿಯ ಮಧ್ಯೆ ನಾಯಿಕೆಯಾಗಿದ್ದಾಳೆ.

ಇನ್ನು ಪ್ರಗಲ್ಭೆನಾಯಿಕೆಯಲ್ಲಿ ಬರುವ ಧೀರ ನಾಯಿಕೆಯು ತೋರಿಕೆಯ ಹಾಸ್ಯದಿಂದ ಕೋಪವನ್ನು ಮುಚ್ಚಿದಂತೆ ನಟಿಸುತ್ತಾ ನಾಯಕನಲ್ಲಿ ಹೊರಗೆ ಪ್ರೇಮವನ್ನು ತೋರಿಸುತ್ತ ಕೋಪದಿಂದ ರತಿಕ್ರೀಡೆಯಲ್ಲಿ ಉದಾಸೀನಳಾಗಿರುವಳು. ಉದಾಹರಣೆಯಾಗಿ "ಚತುರೆಯಾದ ನಾಯಿಕೆಯು ಪರಸ್ತ್ರೀಯಲ್ಲಾಸಕ್ತನಾದ ಪತಿಯನ್ನು ನೋಡಿ ದೂರದಿಂದಲೇ ಹಾಸಿಗೆಯಿಂದ ಎದ್ದುದರಿಂದ ಒಂದೇಕಡೆ ಆಸನದಲ್ಲಿ ಕುಳಿತು ಕೂಳ್ಳುವುದನ್ನು ತೊರೆದಂತಾಯಿತು. ತಾಂಬೂಲವನ್ನು ತರುವ ನೆಪದಿಂದ ಬೇರೆ ಕಡೆಗೆ ಹೋಗುತ್ತ ಆತುರದಿಂದ ಆಲಂಗಿಸಿಕೊಳ್ಳುವುದನ್ನೂ ತಡೆದದ್ದಾಯಿತು. ಪತಿಯ ಸಮೀಪದಲ್ಲಿ ಸೇವಕನನ್ನು ಸೇವೆಗಾಗಿ ನೇಮಿಸುತ್ತಾ ಆಕೆಗೆ ಅವನೊಡನೆ ಮಾತನಾಡುವುದನ್ನೂ ತೋರೆದದ್ದಾಯಿತು, ಹೀಗೆ ಹೊಸದಾಗಿ ಬಂದ ಪತಿಗೆ ಉಪಚಾರದ ಮಾತಿನಿಂದಲೇ ಕೋಪವನ್ನು ಶಮನಗೊಳಿಸಲಾಯಿತು". ಇಲ್ಲಿ ನಾಯಿಕೆಯು ಸುರತದಲ್ಲಿ ಉದಾಸೀನಳಾಗಿದ್ದಳೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ನಾಯಿಕೆಯು ಧೀರಪ್ರಗಲ್ಭನಾಯಿಕೆ ಎನಿಸಿದ್ದಾಳೆ.

ಧೀರಾಧೀರ ಪ್ರಗಲ್ಭೆನಾಯಿಕೆಯು ಮೇಲೆ ಪ್ರಿಯವಾಗಿ ತೋರಿದರೂ ವಾಸ್ತವವಾಗಿ ಅಪ್ರಿಯವಾದ ಮಾತುಗಳಿಂದ ಪತಿಯನ್ನು ಸಂತಾಪಗೊಳಿಸುವಳು. ಕೇವಲ ತೋ–ರಿಕೆಗಾಗಿ ಅಪ್ರಿಯವಾಗಿ ಮಾತನಾಡುವುದೇ ಧೀರಾಧೀರ ಪ್ರಗಲ್ಭೆ ನಾಯಿಕೆಯ

ಗುಣವಾಗಿದೆ., ಇನ್ನು ಅಧೀರ ಪ್ರಗಲ್ಭೆ ನಾಯಿಕೆಯು ಕೋಪದಿಂದ ನಾಯಕನನ್ನು ಗದರಿಸುವಳು ಮತ್ತು ಹೊಡೆಯುವಳು. ಇವಳ ಮುಖ್ಯ ಗುಣವಾಗಿದೆ. 'ಶೋ–ಣಂ ವೀಕ್ಷ್ಯ ಮುಖಂ' ಎಂಬಲ್ಲಿ ಈ ನಾಯಕಿಯ ವರ್ಣನೆಯು ಬಂದಿದೆ. ಅಲ್ಲಿ ನಾಯಿಕೆಯು ನಾಯಕನಿಗೆ ಕಾಲಿನಿಂದ ಒದೆಯುವುದಾಗಿ ಹೇಳುವುದೇ ಅಧೀರಪ್ರಗಲ್ಭೆ ನಾಯಕಿ ಎನಿಸಿದ್ದಾಳೆ. ಮಧ್ಯೆ, ಪ್ರಗಲ್ಭೆ ನಾಯಿಕಿಯರಲ್ಲಿ ಜ್ಯೇಷ್ಠ, ಕನಿಷ್ಠ ಎಂಬ ಮತ್ತೆ ಎರಡು ಬಗೆಯಾಗುವುದರಿಂದ ಒಟ್ಟು ಹನ್ನೆರಡು ಬಗೆಯ ನಾಯಿಕಿಯಾಗಿದ್ದಾರೆ. ಇಲ್ಲಿಗೆ ಪ್ರಧಾನ ನಾಯಿಕೆ ಎನಿಸಿದ ಸ್ವಸ್ತ್ರೀನಾಯಿಕೆ ಗುಣಲಕ್ಷಣ ಮತ್ತು ಈ ನಾಯಿಕೆಯಲ್ಲಿ ಬರುವ ಮುಗ್ಧೆ, ಮಧ್ಯೆ, ಪ್ರಗಲ್ಭೆ ಮತ್ತು ಮಧ್ಯೆ ಪ್ರಗಲ್ಭೆಯಲ್ಲಿ ಬರುವ ಧೀರೆ, ಅಧೀರೆ, ಧೀರಾಧೀರ ಮತ್ತೆ ಇವರಲ್ಲಿ ಬರುವರು ಜ್ಯೇಷ್ಠ, ಕನಿಷ್ಠ ಎಂಬ ಭೇದ, ಪ್ರಭೇದಗಳನ್ನು ಮುಖ್ಯವಾಗಿ ವಿವೇಚಿಸಲಾಗಿದೆ.

ಪ್ರಧಾನ ನಾಯಿಕೆಯಲ್ಲಿ ಒಬ್ಬಳಾದ ಸಾಧಾರಣ ಸ್ತ್ರೀಯ ಗುಣಲಕ್ಷಣವೇನೆಂದು ತಿಳಿಸಲಾಗಿದೆ. ಇವಳಿಗೆ ಸುಶಿಕ್ಷಿತವಾದ ಬುದ್ಧಿ ಇರುತ್ತದೆ. ನೃತ್ಯಗೀತಾದಿ ಕಲೆಗಳಲ್ಲಿ ಪಳಗಿ ಎಲ್ಲರಿಗೂ ಸಂತೋಷವನ್ನುಂಟುಮಾಡುವ ಸ್ವಭಾವವಿರುತ್ತದೆ. ಗುಣವಿಲ್ಲದವರನ್ನು ದ್ವೇಷಿಸದೇ ಗುಣಶಾಲಿಗಳಲ್ಲಿ ಅಂಟಿಕೊಳ್ಳದೇ ಹಣವನಷ್ಟೇ ಗಮನಿಸುತ್ತಾ ಎಲ್ಲರನ್ನೂ ಹೊರಗೆ ಪ್ರೇಮವನ್ನು ತೋರಿಸುವಳು ಇವಳಲ್ಲಿ ಕಳ್ಳರು ಭಂಡರು, ಗೋಪ್ಯವಾಗಿ ರಮಿಸಲಿಚ್ಛಿಸುವವರು. ವಾತರೋಗದಿಂದ ಬಳಲುವರು, ಅನಾಯಾಸವಾಗಿ ಹಣವನ್ನು ಕೊಡಿಟ್ಟವರು. ಇಂತವರು ಈ ನಾಯಕಿಯ ಬಳಿಗೆ ಬರುವಲಿಚ್ಛಿಸುವರು. ಇವಳು ಕಾಮಭಾಷೆಗೆ ಸಿಲುಕಿ ಯಾರಾದರೊಬ್ಬರಲ್ಲಿ ಪ್ರೇಮವನ್ನಿಡಬಹುದು.[೩೯] ಈಕೆಗೆ ಅನುರಾಗವಿರಲಿ ಇಲ್ಲದಿರಲಿ ಅವಳಲ್ಲಿ ಯಾರೊಬ್ಬರಿಗೊ ರಮಿಸುವುದಂತೂ ಕಷ್ಟವೇ ಆಗುತ್ತದೆ. ಯಾರಲ್ಲೂ ಅನುರಾಗವಿಲ್ಲದ ಇಂತಹ ಸ್ತ್ರೀಯಳ[೪೦] ಗುಣ ಸಾಧಾರಣ ಸ್ತ್ರೀ ನಾಯಕಿಯಲ್ಲಿ ಕಾಣಬಹುದು.

ಸ್ವಸ್ತ್ರಿನಾಯಿಕಿಯರಲ್ಲಿ ಹದಿಮೂರು ಬಗೆಯಾಗಿದ್ದು ಪರೋಢೇ [ಮದುವೆ ಆಗಿರುವವಳು], ಕನ್ಯೆ [೪೧] [ಮದುವೆ ಆಗದೇ ಇರುವಳು] ಮತ್ತು ಸಾಧಾರಣ ಸ್ತ್ರೀ ಒಬ್ಬಳು ಒಟ್ಟು ಹದಿನಾರು ಬಗೆ ನಾಯಿಕೆಯರಲ್ಲಿ ಎಂಟು ಬಗೆಯ ಅವಸ್ಥೆಗಳನ್ನು ನೋಡಬಹುದು.

ಇವರಲ್ಲಿ ಸ್ವಾಧೀನ ಭರ್ತೃಕೆ ನಾಯಿಕೆಯು ಅನುರಾಗದಿಂದ ಆಕರ್ಷಿತಳಾಗಿ ಪತಿಯನ್ನು ಒಂದು ಗಳಿಗೆಯು ಬಿಡದಂತೆ ಆಶ್ರಯಿಸಿದ್ದು ಅನೇಕ ಬಗೆಯ ವಿಲಾಸಗಳಲ್ಲಿ ನಿರತಳಾಗಿರುವ ಸ್ತ್ರೀಯು ಪತಿಯನ್ನು ತನಗೆ ವಶಪಡಿಸಿಕೊಂಡವಳು. 'ಸ್ವಾಧೀನ ಭರ್ತೃಕೆ' ಎನಿಸಿದ್ದಾಳೆ. ಅಸ್ಮಕಂಸಖಿವಾಸಸೀ' ಎಂಬ ಪದ್ಯದಲ್ಲಿ ಇಂತಹ ಸ್ತ್ರೀಯಳಲ್ಲಿ ಸಂಭೋಗ ಮಾಡಿದ ಗುರುತುಗಳಿಂದ ತನ್ನ ಹತ್ತಿರಕ್ಕೆ ಬಂದಾಗ ಅವನ ಬಗ್ಗೆ

ಅಸೂಯೆಯಿಂದ ಮನಸ್ಸನ್ನು ಕೆಡಿಸಿಕೊಂಡಿರುವ ಸ್ತ್ರೀಯಳು 'ಖಂಡಿತೆ' ಎನಿಸಿದ್ದಾಳೆ. "ತದವಿತಥಮ ವಾಧೀಃ" ಎಂಬ ಪದ್ಯದಲ್ಲಿ ಈಕೆಯ ಗುಣವನ್ನು ಕಾಣಬಹುದು. ನಂತರ ಕಾಮಪೀಡಿತ ಳಾಗಿದ್ದು ತನ್ನ ಪ್ರೀತಿಗೆ ಪಾತ್ರನಾದವನನ್ನು ಸಖಿಯರ ಕಡೆಯಿಂದ ಕರೆಸಿಕೊಳ್ಳುತ್ತಲೋ ಅಥವಾ ತಾನಾಗಿಯೇ ಅವನ ಬಳಿಗೆ ಹೋಗುತ್ತಲೋ ಅವನನ್ನು ಪ್ರೀತಿಸುವಳು 'ಅಭಿಸಾರಿಕೆ' ಎನಿಸಿದ್ದಾಳೆ. ಪ್ರಿಯವಾಗಿ ಮಾತನಾಡುವ ರಮಣನನ್ನೂ ಸಹ ಸಿಟ್ಟಿನಿಂದ ತೊರೆದು ನಂತರ ಸಂತಾಪ ಪಡುವವಳು 'ಕಲಹಾಂತರಿಕೆ' ಆಗಿದ್ದಾಳೆ. ಪ್ರಿಯನು ಸಂಕೇತಸ್ಥಳವನ್ನು ಏರ್ಪಡಿಸಿದ್ದರೂ ಸಹ ಅಲ್ಲಿಗೆ ಬರದೆ ಯಾವಳನ್ನು ಹೆಚ್ಚು ಅವಮಾನಗೊಳಿಸುವನೋ ಅಂತಹ ಸ್ತ್ರೀಯು 'ವಿಪ್ರಲಬ್ಧೆ ಎಂದಿದ್ದಾರೆ. ಅನೇಕ ಬಗೆಯ ಕಾರ್ಯವನ್ನು ನಡೆಸಲು ಪತಿಯು ದೂರದೇಶಕ್ಕೆ ಹೋಗಿರುವಾಗ ಅವನ ವಿಯೋಗಕ್ಕಾಗಿ ವ್ಯಥಪಡುವ ಸ್ತ್ರೀಯಳು 'ಪ್ರೋಷಿತ ಭರ್ತೃಕೆ' ಎನ್ನಲಾಗಿದೆ. ಇನ್ನು ಪುಷ್ಪಗಳಿಂದಲೂ, ಶ್ರೀಗಂಧದಿಂದಲೂ ಶೋಭಿಸುತ್ತಿರುವ ವಾಸದ ಮನೆಯಲ್ಲಿ ಪ್ರಿಯನ ಸಮಾಗಮ ವಾಗುವುದೆಂದು ತಿಳಿದು ಅಲಂಕಾರವನ್ನು ಸಖಿಯರಿಂದ ಮಾಡಿಸಿಕೊಳ್ಳುವ ಸ್ತ್ರೀಯಳು 'ವಾಸಕಸಜ್ಜೆ' ಎನಿಸುವಳು., ಕೊನೆಯದಾಗಿ ಪ್ರೇಯಸಿಯ ಬಳಿಗೆ ಹೋಗಲು ಪ್ರೀಯನಿಗೆ ಮನಸ್ಸಿದ್ದರೂ ಸಹ ಅವನು ಆಕಸ್ಮಿಕವಾಗಿ ಬರದೆ ಇರಲು ಅವನು ಬಾರದೇ ಇದ್ದುದಕ್ಕಾಗಿ ದುಃಖಗೊಂಡವಳು 'ವಿರಹೋತ್ಕಂಠಿತೆ' ಎನಿಸಿರುವಳು. ಒಟ್ಟು ಮೂನ್ನೂರ ಎಂಬತ್ತನಾಲ್ಕು ಬಗೆ ನಾಯಿಕೆಯರನ್ನು ವಿಶ್ವನಾಥನು ವಿಭಾಗಿಸಿದ್ದಾನೆ. ಅದರಲ್ಲಿ ಕೆಲವು ನಾಯಿಕೆಯರನ್ನು ಉದಾಹರಸಿ ವಿವೇಚಿಸಲಾಗಿದೆ.

ನಾಯಿಕೆಯರಿಗೆ ಯೌವನಕಾಲದಲ್ಲಿ ಶೃಂಗಾರವನ್ನು ಸೂಚಿಸುವ ಸಾತ್ವಿಕಗುಣದಿಂದ ಹುಟ್ಟುವ ಇಪ್ಪತ್ತೆಂಟು ಬಗೆಯ ಅಲಂಕಾರವನ್ನು ಇಲ್ಲಿ ವಿವರಿಸಲಾಗಿದೆ.

**ಯೌವನೇ ಸತ್ವಜಾಸ್ತಾಸಾಮಷ್ಟಾವಿಂಶತಿ ಸಂಖ್ಯಕಾಃ ।**
**ಅಲಂಕಾರಾಸ್ತತ್ರ ಭಾವಹವಹೇಲಾಸ್ತ್ರಯೋಂಗಜಾಃ ॥**
**ಶೋಭಾಕಾಂತಿಶ್ಚದೀಪ್ತಶ್ಚ ಮಾಧುರ್ಯಂ ಚ ಪ್ರಗಲ್ಭತಾ ।**
**ಔದಾರ್ಯಂ ಧೈರ್ಯಮಿತ್ಯೇತೇ ಸಪ್ತೈವ ಸ್ಯುರಯತ್ನಜಾಃ ॥**
**ಲೀಲಾ ವಿಲಾಸೋ ವಿಚ್ಛಿತ್ತಿರ್ವಿಬ್ಬೋಕಃ ಕಿಲಕಿಂಚಿತಮ್ ।**
**ಮೇಟ್ಟಾಯಿತಂ ಕುಟ್ಟಮಿತಂ ವಿಭ್ರಮೋ ಲಲಿತಂ ಮದಃ ॥**
**ವಿಕೃತಂ ತಪನಂ ಮೌಗ್ಧ್ಯಂ ವಿಕೇಪಶ್ಚ ಕುತೂಹಲಮ್ ।**
**ಹಸಿತಂ ಚಕಿತಂ ಕೇಲಿರಿತ್ಯಷ್ಟಾದಶಸಂಖ್ಯಕಾಃ ॥**
**ಸ್ವಭಾವಜಾಶ್ಚ ಭಾವಾದ್ಯ ದಶ ಪುಂಸಾಂಭವಂತ್ಯಪಿ ।** [೪೨]

ಇವುಗಳಲ್ಲಿ ಭಾವ, ಹಾವ, ಹೇಲ ಇವು ಮೂರು ಅಲಂಕಾರಗಳು ದೇಹದಿಂದ ಹುಟ್ಟುತ್ತವೆ. ಶೋಭಾ, ಕಾಂತಿ, ದೀಪ್ತಿ, ಮಾಧುರ್ಯ, ಪ್ರಗಲ್ಭತೆ, ಔದಾರ್ಯ,

ಧೈರ್ಯ ಇವು ಶರೀರದಲ್ಲೂ ಮನಸ್ಸಿನಲ್ಲೂ ಅನಾಯಾಸವಾಗಿ ಆವಿರ್ಭವಿಸುವ ಅಲಂಕಾರ ಗಳಾಗಿವೆ. ಲೀಲೆ, ವಿಲಾಸ, ವಿಚ್ಛಿತ್ತಿ, ವಿಬ್ಬೋಕ, ಕಿಲಕಿಂಚಿತ, ತಪನ, ಮೌಗ್ಧ್ಯ, ವಿಕ್ಷೇಪ, ಕುತೂಹಲ, ಹಸಿತ, ಚಕಿತ, ಕೇಲಿ ಇವು ಹದಿನೆಂಟು ಸ್ವಾಭಾವಿಕ ಅಲಂಕಾರಗಳು, ಭಾವ ಮೊದಲಾಗಿ ಧೈರ್ಯದವರೆಗೂ ಹತ್ತು ಅಲಂಕಾರಗಳು ನಾಯಕರಿಗೂ ಅನ್ವಯಿಸುತ್ತದೆ. ಆದರೆ, ನಾಯಕರಿಗಿಂತ ನಾಯಿಕೆಯರಿಗೆ ಹೆಚ್ಚಿನ ಸೌಂದರ್ಯವನ್ನುಂಟು ಮಾಡುವುದರಿಂದ ಅಲಂಕಾರಗಳೆಲ್ಲವನ್ನು ನಾಯಿಕೆಯರಿಗೆ ಅನ್ವಹಿಸಿ ಹೇಳಲಾಗಿದೆ.

ಹುಟ್ಟಿದಾಗಿನಿಂದಲೂ ವಿಕಾರವೇ ಇಲ್ಲದಿರುವ ಮನಸ್ಸಿನಲ್ಲಿ ಮೊಳಕೆಯ ರೂಪದಲ್ಲಿ ಉದ್ಭವಿಸುವ ಮೊದಲನೆಯ ವಿಕಾರವನ್ನು 'ಭಾವ' ಎನ್ನಲಾಗಿದೆ. ಇದಕ್ಕೆ ಉದಾಹರಣೆಯಾಗಿ "ಅದೇ ವಸಂತಕಾಲವಿದೆ. ಅದೇ ಮಂದಮಾರುತವಿದೆ. ಅದೇ ಕಾಂತಿ ಇರುವಳು. ಆದರೆ ಮನಸ್ಸು ಮಾತ್ರ ಬೇರೆ ರೀತಿಯಾಗಿದೆ". ಹಿಂದೆ ಇದ್ದ ಸನ್ನಿವೇಶವೇ ಈಗಲೂ ಇದೆ. ಇಲ್ಲಿ ಮನಸ್ಸಿನಲ್ಲಾಗುವ ಬದಲಾವಣೆಗಳನ್ನು ಹೇಳಿರುವುದರಿಂದ ಇಲ್ಲಿ ತೋರುವ ವಿಕಾರವೇ 'ಭಾವ'ವೆನಿಸಿದೆ.

ಹುಬ್ಬುಗಳನ್ನು ಗಂಟುಹಾಕುವುದು, ಕಣ್ಣುಗಳಿಂದ ಓರೆಯಾಗಿ ನೋಡುವುದು ಇತ್ಯಾದಿ ವಿಕಾರಗಳಿಂದ ಸಂಭೋಗದ ಇಚ್ಛೆಯನ್ನು ಪ್ರಕಾಶಪಡಿಸುವ ಭಾವವು ಮನಸ್ಸಿನ ವಿಕಾರವನ್ನು ಕೊಂಚ ಹೊರಪಡಿಸುವಾಗ 'ಹಾವ'ವೆನಿಸುತ್ತದೆ. ಉದಾಹರಣೆಯಾಗಿ "ಪಾರ್ವತಿಯೂ ವಿಕಸಿತವಾದ ಕದಂಬ ಪುಷ್ಪಗಳಿಗೆ ಸಮಾನವೆನಿಸಿದ ಅವಯವಗಳಿಂದ ಭಾವವನ್ನು ಹೊರಪಡಿಸುತ್ತಾ ದೃಷ್ಟಿಯನ್ನು ಹಿಂದಕ್ಕೆ ತಿರುಗಿಸಿ ಸುಂದರವಾದ ಮುಖವನ್ನು ವಕ್ರವಾಗಿ ಮಾಡಿಕೊಂಡು ನಿಂತಳು". ಮೈಯಲ್ಲಿ ರೋಮಾಂಚವು ಹೊರಪಡುವುದರಿಂದ 'ಹಾವ'ವೆನಿಸಿದೆ. ಮನಸ್ಸಿನೊಳಗಿನ ವಿಕಾರವು ಹೊರಗಡೆ ಹೆಚ್ಚು ಕಂಡು ಬರುವುದಾದರೆ ಅಂತಹ ಭಾವವು 'ಹೇಲಾ' ಎಂದು ಕರೆಯಲಾಗಿದೆ. "ಹೊಸದಾಗಿ ಮದುವೆಯಾದ ಆ ತರುಣಿಗೆ ಓರೆನೋಟವೆ ಮೊದಲಾದ ವಿಲಾಸಗಳು ಬೇಗನೆ ಪ್ರಕಟವಾದವು ಇದ-ರಿಂದ ಸಖಿಯರಿಗೂ ಸಹ ಈಕೆಯ ಬಾಲ್ಯಭಾವದ ಬಗ್ಗೆ ಬಹಳ ಕಾಲದವರೆಗೂ ಸಂಶಯವೇ ಉಂಟಾಯಿತು". ವಧುವಿಗೆ ಎಲ್ಲಾ ಅವಯವಗಳಲ್ಲೂ ವಿಲಾಸಗಳು ಕಂಡು ಬಂದದ್ದರಿಂದ ಮನೋವಿಕಾರವು ಪೂರ್ತಿಯಾಗಿ ಹೊರಹೊಮ್ಮಿತೆಂದು ತಿಳಿಸಿದ್ದರಿಂದ ಇದು 'ಹೇಲಾ' ಎನಿಸಿದೆ, ಸೌಂದರ್ಯ, ಯೌವನ, ಕೋಮಲ ಪ್ರಕೃತಿ, ಪುಷ್ಪ ಶ್ರೀಗಂಧ ಮೊದಲಾದವುಗಳ ಉಪಯೋಗದಿಂದ ದೊರೆತ ಸೌಖ್ಯ ಇವುಗಳಿಂದ ಶರೀರಕ್ಕೆ ಉಂಟಾಗುವ ಅಲಂಕಾರವೇ 'ಶೋಭೆ' ಎನಿಸಿದೆ. ಕಾಮವಿಕಾರದಿಂದ ಬೆಳೆದು ವ್ಯಾಪಿಸಿದ ಪ್ರಕಾಶವೇ 'ಕಾಂತಿ' ಎನಿಸಿದೆ. "ನೇತ್ರೇ ಖಂಜನಗಂಜನೇ" ಎಂಬ

ಪದ್ಯದಲ್ಲಿ ಕಾಂತಿಯ ಸ್ವರೂಪವನ್ನು ತಿಳಿಸಿದೆ, ಶರೀರದಲ್ಲೆಲ್ಲಾ ಹೆಚ್ಚು ವ್ಯಾಪಿಸಿದ ಕಾಂತಿಯೇ 'ದೀಪ್ತಿ' ಎನಿಸಿದೆ. ಎಲ್ಲಾ ಬಗೆಯ ಅಲಂಕಾರಗಳು ಇರಲಿ ಅಥವಾ ಇಲ್ಲದಿರಲಿ ಶರೀರದಲ್ಲಿ ಕಂಡುಬರುವ ಸೌಂದರ್ಯವೇ 'ಮಾಧುರ್ಯ'ವಾಗಿದೆ. ಶಕುಂತಲೆಯು ನಾರುಮಡಿಯನ್ನು ಉಟ್ಟಿದ್ದರೂ ಸುಂದರಿಯಾಗಿದ್ದುದರಿಂದ ಇವಳಲ್ಲಿ ಮಾಧುರ್ಯ ಅಲಂಕಾರವಿದೆ, ಪತಿಯ ಬಗ್ಗೆ ಧಾರ್ಷ್ಟ್ಯವನ್ನಾಚರಿಸುವಾಗ ನಿರ್ಭಯನಾಗಿರುವುದೇ 'ಪ್ರಾಗಲ್ಭ್ಯ' ಅಲಂಕಾರವೆನಿಸಿದೆ. ಎಲ್ಲಾ ಕಾಲಗಳಲ್ಲೂ ನಮ್ರತೆಯಿಂದ ನಡೆದುಕೊಳ್ಳುವುದೇ 'ಔದಾರ್ಯ'ವೆನಿಸಿದೆ. ಆತ್ಮಪ್ರಶಂಸೆಯನ್ನು ತೊರೆದು ಚಂಚಲಗೊಳ್ಳದ ಮನೋವೃತ್ತಿಯೇ 'ಧೈರ್ಯ' ಅಲಂಕಾರವಾಗಿದೆ. ಪ್ರೀತಿಯನ್ನು ವ್ಯಕ್ತಪಡಿಸುವ ಅಂಗಚೇಷ್ಟೆಗಳಿಂದಲೂ, ಅಲಂಕಾರಗಳಿಂದಲೂ, ಪ್ರಣಯ ಸೂಚಕವಾದ ಮಾತುಗಳಿಂದಲೂ ಕಾಂತನನ್ನು ಅನುಕರಿಸುವುದು 'ಲೀಲೆ'. ಪ್ರಿಯನ ಸಂದರ್ಶನದಿಂದಲೂ, ಅವನು ಬಂದದ್ದರಿಂದಲೂ, ಅವನ ವಾರ್ತೆಯನ್ನು ಕೇಳಿದ್ದರಿಂದಲೂ ಅವನೊಡನೆ ಹೋಗುವುದು, ಸೇರುವುದು, ಕುಳಿತುಕೊಳ್ಳುವುದು, ಮಲಗುವುದು ಹೀಗೆ ಕಣ್ಣು ಮೊದಲಾದ ಅವಯವಗಳಿಂದಾಗುವ ಕರ್ಮಗಳಲ್ಲಿ ತೋರಿ ಬರುವ ವೈಚಿತ್ರ್ಯವೇ 'ವಿಲಾಸ' ಅಲಂಕಾರವಾಗಿದೆ. ಸ್ವಲ್ಪವೇ ಅಲಂಕಾರವಿದ್ದರೂ ಅಷ್ಟರಿಂದಲೇ ಶೋಭೆಯನ್ನು ಹೆಚ್ಚಿಸುವುದೆ 'ವಿಚ್ಛಿತ್ತಿ' ಎನಿಸಿದೆ. ಇಷ್ಟವಾದ ವಸ್ತುವನ್ನೂ ಸಹ ಹೆಚ್ಚು ಗರ್ವದಿಂದ ತಿರಸ್ಕರಿಸುವುದೇ 'ಬಿಬ್ಬೋಕ' ಅಲಂಕಾರವೆನಿಸಿದೆ. ಅತ್ಯಂತ ಪ್ರಿಯನಾದವನೊಡನೆ ಸೇರುವುದು, ಅವನನ್ನು ನೋಡುವುದು, ಅವನು ಬರುವನೆಂದು ಕೇಳುವುದು, ಇವುಗಳಿಂದ ಹುಟ್ಟಿದ ಸಂತೋಷದಿಂದ ಮುಗುಳುನಗೆ, ವ್ಯರ್ಥವಾಗಿ ಅಳುವುದು, ಹಾಸ್ಯ ಮಾಡುವುದು, ಹೆದರುವುದು, ಸಿಟ್ಟಿಗೇಳುವುದು ಆಯಾಸ ಪಡುವುದು ಇವೇ ಮೊದಲಾದ ಭಾವಗಳು ಒಂದೆಡೆಗೆ ಸೇರುವುದೇ 'ಕಿಲಕಿಂಚಿತ' ಅಲಂಕಾರವಾಗಿದೆ, ಪ್ರಿಯನು ಸಖಿಯರೊಡನೆ ಮಾತನಾಡುವಾಗಲೂ, ಪ್ರಿಯೆಯ ಚಿತ್ರವನ್ನು ನೋಡುವಾಗಲೂ, ಆಕೆಯನ್ನು ಸ್ಮರಿಸುವಾಗಲೂ ಪ್ರಿಯೆಯ ಮನಸ್ಸು ಪ್ರಿಯನ ಮುಖಭಾವದಲ್ಲಿ ವ್ಯಾಪಿಸಿರಲು ನಾಯಿಕೆಗೆ ಕಿವಿಯನ್ನು ಕೆರೆಯುವುದು, ಆಕಳಿಕೆ ಮೊದಲಾದ ವಿಕಾರಗಳು ತೋರಿದರೆ ಆ ಬಗೆಯ ಗುಣವನ್ನು 'ಮೋಟ್ಟಾಯಿತ' ಅಲಂಕಾರವೆನಿಸಿದೆ. ಪ್ರಿಯೆಯ ಕೂದಲು, ಸ್ತನಗಳು, ಕೆಳತುಟಿ, ಕೈಗಳು ಇದನ್ನು ನಾಯಕನು ಹಿಡಿದುಕೊಂಡು ಆನಂದಪಡುವಾಗ ಆತುರದಿಂದ ತಲೆಕೈಗಳನ್ನು ಅಳ್ಳಾಡಿಸುವುದೇ 'ಕುಟ್ಟಮಿತ' ಅಲಂಕಾರವೆನಿಸಿದೆ. ಪ್ರಿಯನು ಬರುವುದೇ ಮೊದಲಾದ ಮಹೋತ್ಸವ ಸಮಾರಂಭಗಳಲ್ಲಿ ಸಂತೋಷದಿಂದಲೂ ಪ್ರೇಮದಿಂದಲೂ ಸಖಿಯು ಕರೆದಿದ್ದರಿಂದಲೂ ಆತುರದಿಂದ ಶ್ರೀಗಂಧ ಮೊದಲಾದವನ್ನು ಯೋಗ್ಯವಲ್ಲದ ಕಡೆಗಳಲ್ಲಿ ಹಚ್ಚಿಕೊಳ್ಳುವುದು, ಹಾಗೆಯೇ ಆಭರಣವನ್ನು ನಿರ್ದಿಷ್ಟ ಸ್ಥಾನದಿಂದ ತಪ್ಪಿಸಿ ಬೇರೆ ಕಡೆಗಳಲ್ಲಿ ಧರಿಸುವುದು 'ವಿಭ್ರಮ'ವಾಗಿದೆ. ಅವಯವಗಳ ಕೋಮಲ

ಭಾವದಿಂದ ಅತಿಮೃದುವಾಗಿ ಹೆಜ್ಜೆಯನ್ನಿಡುವುದೇ ಮೊದಲಾದ ವ್ಯಾಪಾರಗಳು 'ಲಲಿತ' ಅಲಂಕಾರವಾಗಿದೆ, ಸೌಭಾಗ್ಯ, ಯೌವನ, ಹಾಗೆಯೇ ಒಳ್ಳೆಯ ಬಟ್ಟೆ, ಒಡವೆ ಮೊದಲಾದವುಗಳಿಂದ ಹುಟ್ಟಿದ ಅಹಂಕಾರಕ್ಕೆ ಸಂಬಂಧಿಸಿದ ವಿಕಾರವೇ 'ಮದ' ಅಲಂಕಾರವಾಗಿದೆ, ಹೇಳಬೇಕಾದ ಕಾಲದಲ್ಲೂ ಲಜ್ಜೆಯಿಂದ ಏನನ್ನೂ ಹೇಳದಿರುವುದು 'ವಿಕೃತ' ಅಲಂಕಾರ, ಪ್ರಿಯನ ವಿರಹದಿಂದ ಕಾಮವಿಕಾರವುಂಟಾಗಿ ಅದರಿಂದ ಒಬ್ಬಳು ಅನುಭವಿಸುವ ಸಂತಾಪವು 'ತಪನ'ವಾಗಿದೆ. ಹಿಂದೆ ತಿಳಿದಿರುವ ವಸ್ತುವನ್ನೂ ಸಹ ತಿಳಿಯದವಳಂತೆ ಪ್ರಿಯನ ಎದುರಿಗೆ ಕೇಳುವುದು 'ಮೌಗ್ಧ್ಯ' ಅಲಂಕಾರವಾಗಿದೆ. ಒಡವೆಗಳನ್ನು ಅರ್ಧದಷ್ಟು ಮಾತ್ರವೇ ತೊಟ್ಟುಕೊಂಡು ವ್ಯರ್ಥವಾಗಿ ಎಲ್ಲೆಡೆಯಲ್ಲೂ ನೋಡುವುದು. ಹಾಗೆಯೇ ಪತಿಯ ಎದುರಿಗೆ ಕೊಂಚವೆ ರಹಸ್ಯವಾದ ಅಂಶವನ್ನು ತಿಳಿಸುವುದು ಇದಿಷ್ಟು 'ವಿಕ್ಷೇಪ' ಅಲಂಕಾರವಾಗಿದೆ. ಮನೋಹರವಾದ ವಸ್ತುವನ್ನು ನೋಡುವುದರಲ್ಲಿ ಉಂಟಾಗುವ ಚಿತ್ತ ಚಾಂಚಲ್ಯವೆ 'ಕುತೂಹಲ' ಅಲಂಕಾರವೆನಿಸಿದೆ. ಯೌವನದ ಅವಿರ್ಭಾವದಿಂದ ಹುಟ್ಟಿದ ನಿಷ್ಪ್ರಯೋಜನವಾದ ಹಾಸ್ಯವೇ 'ಹಸಿತ'ವಾಗಿದೆ. ಪ್ರಿಯನ ಎದುರಿಗೆ ಯಾವುದೋ ಸ್ವಲ್ಪ ಕಾರಣದಿಂದ ಬೆದರುವುದೆ 'ಚಕಿತ' ಅಲಂಕಾರವಾಗಿದೆ. ರತಿಪ್ರಸಂಗದಲ್ಲಿ ಪ್ರಿಯನೊಡನೆ ಆಟವಾಡುವುದೆ 'ಕೇಲಿ' ಅಲಂಕಾರವಾಗಿದೆ. ಇಲ್ಲಿಗೆ ವಿಶ್ವನಾಥನು ನಾಯಿಕೆಯರಲ್ಲಿ ಉಂಟಾಗುವ ಇಪ್ಪತ್ತೆಂಟು ಬಗೆಯ ಅಲಂಕಾರಗಳನ್ನು ವಿವರಿಸಿ ವಿವೇಚಿಸಲಾಗಿದೆ.

ಆಲಂಭನಾವಿಭಾವದಲ್ಲಿ ಬರುವ ನಾಯಕ, ನಾಯಿಕೆಯ ಸ್ವರೂಪವನ್ನು ತಿಳಿದ ಮೇಲೆ ಈಗ ಪ್ರತಿನಾಯಕನ ಸ್ವರೂಪವೇನೆಂಬುದನ್ನು ತಿಳಿಸಲಾಗಿದೆ. ನಾಯಕನಲ್ಲಿರುವ ಗುಣಲಕ್ಷಣಕ್ಕೆ ತದ್ ವಿರುದ್ಧವಾದ ಲಕ್ಷಣ ಪ್ರತಿನಾಯಕನದ್ದಾಗಿರುತ್ತದೆ. ಇವನು ಪಾಪವನ್ನಾಚರಿಸುವುದರಲ್ಲಿಯೇ ಇಚ್ಚೆವುಳ್ಳವನಾಗಿದ್ದಾನೆ. ಕಾಠಿಣ್ಯ ಬಗೆಯ ವ್ಯಸನಗಳಿಂದ ಕೂಡಿದವನಾಗಿರುತ್ತಾನೆ. ಆದ್ದರಿಂದ ಈ ಪ್ರತಿನಾಯಕನಿಗೆ ಹದಿನೆಂಟು ಬಗೆಯ ವ್ಯಸನಗಳನ್ನು ಹೇಳಲಾಗಿದೆ. ಅವು, ಬೇಟೆ, ಹಗಲು ನಿದ್ರೆ, ಅಪವಾದ, ಸ್ತ್ರೀಚಿಂತೆ, ವಿವಾದ, ಸಂಗೀತ, ವ್ಯರ್ಥವಾದ ಓಡಾಟ, ಚಾಡಿ ಹೇಳುವುದು ಭಯ, ದ್ರೋಹ, ಅಸೂಯೆ, ದೂಷಣಗಳಾಗಿವೆ. ಈ ಬಗೆಯ ವ್ಯಸನದಿಂದ ಕೂಡಿದವನು ಪ್ರತಿನಾಯಕನೆನಿಸಿದ್ದಾನೆ. [೪೩]

ವಿಭಾವದಲ್ಲಿ ಬರುವ ನಾಯಕ, ನಾಯಿಕೆ, ಪ್ರತಿನಾಯಕರ ಆಲಂಬನವಿಭಾವವನ್ನು ವಿವರಿಸಿದ ಮೇಲೆ ಇದರ ಇನ್ನೊಂದು ವಿಧವಾದ ಉದ್ದೀಪನವಿಭಾವವನ್ನ ವಿವ–ರಿಸಲಾಗಿದೆ. ಉದಿಸಿದ ಭಾವವನ್ನು ಪ್ರಬಲ ಪಡಿಸುವ ಸಾಮಾಗ್ರಿಯೇ ಉದ್ದೀಪನ ವಿಭಾವವಾಗಿದೆ. ಆಲಂಬನವಿಭಾವದಿಂದ ಉದ್ಭವಿಸಿ ರಸವನ್ನು ಪೋಷಿಸುವ ಮತ್ತು ರಸವನ್ನು ಪ್ರಕಾಶಗೊಳಿಸುವ ಸಾಧನಗಳೇ ಉದ್ದೀಪನ ವಿಭಾವವೆನಿಸಿದೆ.

ಆಲಂಬನವೆನಿಸಿದ ನಾಯಕ ನಾಯಿಕೆ ಮೊದಲಾದ ಕಣ್ಣು, ಕೈ ಹುಬ್ಬು, ಮೊದಲಾದ ಅವಯವಗಳ ವ್ಯಾಪಾರಗಳು, ಸೌಂದರ್ಯ, ಅಲಂಕಾರ, ದೇಶ, ಕಾಲ, ಚಂದ್ರ, ಶ್ರೀಗಂಧ, ಕೋಗಿಲೆಗಳ ಗಾನ, ದುಂಬಿ, ಝೇಂಕಾರನಾದ, ಬೆಳದಿಂಗಳು ಇತ್ಯಾದಿಗಳು ಉದ್ದೀಪನ ವಿಭಾವಗಳೆನಿಸಿದೆ. ಯಾವ ರಸಕ್ಕೆ ಯಾವುದು ಉದ್ದೀಪನವಿಭಾವವೆಂಬುದನ್ನು ಮುಂದೆ ರಸ ಪ್ರಕಾರಗಳಲ್ಲಿ ವಿವರವಾಗಿ ತಿಳಿಸಲಾಗಿದೆ.

## ಅನುಭಾವ

ಚಿತ್ತದಲ್ಲಿ ಭಾವವು ಉದ್ರೇಕಗೊಂಡಾಗ ವ್ಯಕ್ತಿಯ ನಡೆನುಡಿಗಳಲ್ಲಿ ಗೋಚರವಾಗುವ ವಿಕ್ರಿಯೆಗಳೇ 'ಅನುಭಾವ'ವಾಗಿದೆ. ಅಯಾಯ ಕಾರಣಗಳಿಂದ ಹುಟ್ಟಿದ ಕಲೆ ಮೊದಲಾದ ಸ್ಥಾಯಿಭಾವವನ್ನು ಹೊರಗೆ ಸಭ್ಯರಲ್ಲಿ ಪ್ರಕಾಶಗೊಳಿಸುವ ಕ್ರಿಯೆಯೇ ಕಾವ್ಯನಾಟ್ಯಗಳಲ್ಲಿ ಅನುಭಾವವೆನಿಸಿದೆ. ಬೇರೆಯವರ ಹೃದಯದಲ್ಲಿ ಸ್ಥಾಯಿಭಾವವನ್ನು ಹುಟ್ಟಿಸುವ ಕಾರ್ಯವೇ ಅನುಭಾವ, ಉದಾಹರಣೆಗಾಗಿ ಸೀತೆ ಎಂಬ ಆಲಂಬನವಿಭಾವದಿಂದಲೂ ಚಂದ್ರ ಮೊದಲಾದ ಉದ್ದೀಪನ ಕಾರಣಗಳಿಂದಲೂ ರಾಮನ ಹೃದಯದಲ್ಲಿ ಹುಟ್ಟುವ ರತಿ ಮೊದಲಾದ ಭಾವಗಳನ್ನು ಹೊರಗೆ ಸಾಮಾಜಿಕರ ಹೃದಯದಲ್ಲಿ ಅನುಭವಿಸುವುದಕ್ಕೆ ಯೋಗ್ಯವಾಗುವಂತೆ ಮಾಡುವ ಕ್ರಿಯೆಯೇ ಲೋಕದಲಿ ಕಾರ್ಯವೆನಿಸಿ ಕಾವ್ಯ ನಾಟ್ಯಗಳಲ್ಲಿ ಅನುಭಾವ ಎನಿಸಿದೆ.

ಸ್ತ್ರೀ ಪುರುಷರ ಅಲಂಕಾರಗಳು ಅವರ ಶರೀರದಲ್ಲಿ ಕಂಡು ಬರುವ ಭಾವ, ಹಾವ, ಹೇಲ ಮೊದಲಾದ ಚೇಷ್ಟೆಗಳು ಸ್ವಾಭಾವಿಕವಾದ ಲೀಲೆ ವಿಲಾಸ ಮೊದಲಾದ ಅಲಂಕಾರಗಳು, ಸ್ತಂಭ ಸ್ವೇದ ಮೊದಲಾದ ಸಾತ್ವಿಕ ಭಾವಗಳು, ಓರೆನೋಟ ಮೊದಲಾದ ಚೇಷ್ಟೆಗಳು ಅನುಭಾವವಾಗಿವೆ. 'ವಿಭಾವಾನುಭವಶ್ಚ ಸಾತ್ತ್ವಿಕಾ ವ್ಯಭಿಚಾರಿಣಃ' ಎಂದು ವಿಶ್ವನಾಥನು ಅನುಭಾವಗಳನ್ನು ಸಾತ್ತ್ವಿಕ ಭಾವಗಳನ್ನೂ ಬೇರೆ ಬೇರೆಯಾಗಿ ತಿಳಿಸಿ ಈಗ ಸಾತ್ತ್ವಿಕಭಾವಗಳನ್ನು ಅನುಭಾವಗಳೆಂದು ಹೇಳಿದ್ದು ಹೇಗೆ ಹೊಂದುತ್ತದೆ ಎಂಬುದನ್ನು ತಿಳಿಸಿದ್ದಾನೆ. ಸಾತ್ವಿಕ ಗುಣವೆಂದರೆ ಸತ್ವಗುಣದಿಂದ ದೇಹದ ಬೇರೆ ಬೇರೆ ಅವಯವಗಳಲ್ಲಿ ಕಂಡುಬರುವ ವಿಕಾರಗಳೇ ಸಾತ್ವಿಕಭಾವಗಳಾಗಿವೆ. ಸಾಮಾಜಿಕನ ಹೃದಯದಲ್ಲಿ ರಸಭಾವಗಳನ್ನು ಪ್ರಕಾಶಗೊಳಿಸುವ ಒಂದು ಅಂತರ ಧರ್ಮವೇ ಸತ್ವಭಾಗಗಳಿಗೆ ಯಾವ ವಿರೋಧವು ಇಲ್ಲವೆಂಬುದನ್ನು ಗೋಬಲೀವರ್ಧನ್ಯಾಯದಿಂದ ಸಮನ್ವಯಗೊಳಿಸಿದ್ದಾನೆ. ವೃಷಭವು [ಎತ್ತು] ಧೇನು [ಆಗತಾನೆ ಕರುವನ್ನು ಹಾಕಿರುವ ಗೋವು]ವಿಗಿಂತ ಬೇರೆಯೇ ಆಗಿದೆ. ಗೋವೆಂದು ಭಾವಿಸಿದರೆ ಎರಡು ಒಂದೇ ಆಗುತ್ತದೆ. ಆದರೆ ಇವೆರಡಕ್ಕೂ ವೈಯುಕ್ತಿಕ ಭೇದವಿದೆ. 'ಗೋ' ಶಬ್ದವು ಹೆಣ್ಣು ಆಕಳು, ಎತ್ತು ಎರಡನ್ನೂ ತಿಳಿಸುತ್ತದೆ. 'ಗೋ' ಎಂಬ ಅರ್ಥದಿಂದ ಎರಡಕ್ಕೂ ಅಭೇದವಿದೆ. ಗೋವುಗಳ ಮಧ್ಯದಲ್ಲಿ ಎತ್ತಿಗೆ ಒಂದು ಶ್ರೇಷ್ಠತೆಯನ್ನು ತೋರಿಸಲು ಗೋಬಲಿವರ್ಧ

ಎಂದು ಕರೆಯಲಾಗಿದೆ. ಆದ್ದರಿಂದ ಇಲ್ಲಿ ಸ್ತಂಭ ಸ್ವೇದ ಎಂಬ ಸಾತ್ವಿಕಭಾವಗಳು ಬಲೀವರ್ಧದ ಸ್ಥಾನದಲ್ಲಿದ್ದು ಅನುಭಾವಗಳಾಗಿವೆ. ಹಾವಭಾವಗಳು ಅನುಭಾವವೇ ಆಗಿವೆ. ಸಾತ್ತ್ವಿಕಭಾವ ಎಂಬುದು ಸ್ತಂಭ ಸ್ವೇದಗಳಲ್ಲಿ ಇರುವಂತೆ ಭಾವ ಹಾವಗಳಲಿಲ್ಲ. ಆದ್ದರಿಂದ ಸಾತ್ತ್ವಿಕಭಾವ ಎಂಬುದು ವ್ಯಾಪಕವಾದ ಧರ್ಮವಾಗಿದೆ. ಸಾತ್ತ್ವಿಕಭಾವವು ಸ್ತಂಬ ಮೊದಲಾದವುಗಳಲ್ಲಿ ಮಾತ್ರವೆ ಇರುವುದರಿಂದ ಸಾತ್ತ್ವಿಕಭಾವಗಳು ಅನುಭಾವಗಳೇ ಆದರೂ ಭಾವ ಹಾವಗಳ ದೃಷ್ಟಿಯಿಂದ ಬೇರೆಯಾಗಿದೆ. ಗೋವು, ಎತ್ತು ಎರಡು ಗೋವೇ ಆದರೂ ಗೋವಿನ ದೃಷ್ಟಿಯಿಂದ ಎತ್ತು ಬೇರೆಯೇ ಆಗಿದೆ. ಹೆಣ್ಣು ಗೋವು ಹೇಗೆ ವೃಷಭವೆನಿಸಲಾರದೋ ಹಾಗೆಯೆ ಹಾವಭಾವಗಳು ಸಾತ್ವಿಕವೆನಿಸದೆ ಅನುಭಾವಗಳೇ ಆಗುತ್ತದೆ. ಈ ರೀತಿಯಾಗಿ ಅನುಭಾವಗಳಿಗೂ ಸಾತ್ತ್ವಿಕಭಾವಗಳಿಗೂ ಭೇದವೂ, ಅಭೇದವೂ ಹೊಂದುತ್ತದೆ ಎಂಬುದನ್ನು ಗೋಬಲೀ ವರ್ಧನ್ಯಾಯಾದಿಂದ ಸಮನ್ವಯಗೊಳಿಸಿದ್ದಾನೆ.

**ಸ್ತಂಭಃ ಸ್ವೇದೋಽಥ ರೋಮಾಂಚಃ ಸ್ವರಭಂಗೋಽಥವೇಪಥಃ ।**
**ವೈವರ್ಣ್ಯ ಮಶ್ರುಪ್ರಲಯಾ ಇತ್ಯಷ್ಟೌಸಾತ್ತ್ವಿಕಾಃ ಸ್ಮೃತಾಃ ॥**

[ಸಾಹಿತ್ಯದರ್ಪಣ, ೩]

ಸ್ತಂಭ, ಸ್ವೇದ, ರೋಮಾಂಚ, ಸ್ವರಭಂಗ, ವೇಪಥ, ಮೈವರ್ಣ್ಯ, ಕಣ್ಣೀರು ಸುರಿಸುವುದು, ಪ್ರಳಯ ಇದಿಷ್ಟು 'ಸ್ವಾತ್ತ್ವಿಕ'ಭಾವಗಳಾಗಿವೆ. ಭಯ, ಸಂತೋಷ, ರೋಗ ಹೆಚ್ಚು ಅನುರಾಗ ಇವುಗಳಿಂದ ದೇಹದ ಚಲನವಲನಗಳು ನಿಲ್ಲುವುದೇ 'ಸ್ತಂಭ'ವೆನಿಸಿದೆ. ಸುರತ, ಬೇಸಿಗೆಯ ಕಾಲ ಶ್ರಮ ಇವುಗಳಿಂದ ದೇಹದಲ್ಲಿ ನೀರಿನಿಂದ ತುಂತುರುಗಳು ಹೊರಹೋಮ್ಮುವುದೇ 'ಸ್ನೇಹ'ವೆನಿಸಿದೆ. ಹರ್ಷ, ಆಶ್ಚರ್ಯ, ಭಯ ಮೊದಲಾದವುಗಳಿಂದ ಸ್ವರವು ಬದಲಾಯಿಸುವುದೇ ಗದ್ಗದವೆನಿಸಿದೆ. ರಾಗ, ದ್ವೇಷಿ, ಶ್ರಮ ಇವುಗಳಿಂದ ದೇಹ ನಡುಗುವುದೇ 'ವೇಪಥು' ಎನಿಸಿದೆ. ರೋಷದಿಂದ ಶರೀರದ ಬಣ್ಣವು ಬದಲಾಯಿಸುವುದೇ 'ವೈವರ್ಣ್ಯ'ವೆನಿಸಿದೆ. ಕ್ರೋಧ, ದುಃಖ, ಸಂತೋಷಗಳಿಂದ ಕಣ್ಣಿನಲ್ಲಿ ಬರುವ ನೀರು 'ಅಶ್ರು'ವೆನಿಸಿದೆ. ಸುಖದಿಂದಾಗಲೀ, ದುಃಖದಿಂದಾಗಲೀ ದೇಹದಲ್ಲಿ ಕ್ರಿಯೆಯನ್ನು ಜ್ಞಾನವನ್ನು ನಿರಾಕರಿಸುದೇ 'ಪ್ರಳಯ'ವೆನಿಸಿದೆ. ಉದಾಹರಣೆಗಾಗಿ ನಾಯಿಕೆಯೊಡನೆ ಭೋಗಿಸಿದ ನಾಯಕನು ತನ್ನ ಅವಸ್ಥೆಯನ್ನು ಈ ರೀತಿ ವರ್ಣಿಸಿದ್ದಾನೆ. "ಈ ಕ್ರಿಯೆಯ ದೇಹಸ್ಪರ್ಶದಿಂದ ಕಣ್ಣುಗಳೆರಡು ಕೊಂಚ ಮುಚ್ಚಿಕೊಂಡಿವೆ. ರೋಮಾಂಚನಗೊಂಡ ಅವಯವಗಳೂ ಸ್ತಬ್ದವಾಗಿವೆ." ಇಲ್ಲಿ ರೋಮಾಂಚನ, ಸ್ತಂಭ ಇವೆರಡನ್ನೂ ತಿಳಿಸಿದೆ. ಕೆನ್ನೆಗಳು ಬಿಸಿಲಿನಿಂದ ಬೆವರಿದೆ. ಇಲ್ಲಿ ಸ್ವೇದವನ್ನು ತಿಳಿಸಿದೆ. "ಬೇರೆ ಎಲ್ಲಾ ವಿಷಯಗಳನ್ನು ತೊರೆದಿರುವ ಮನಸ್ಸು ನಿಶ್ಚಯವಾಗಿಯೂ ಆನಂದಮಯವಾದ ಪರಬ್ರಹ್ಮದಲ್ಲಿ ವಿಲೀನವಾಗಲಿದೆ". ಇಲ್ಲಿ ಪ್ರಳಯವನ್ನು ತಿಳಿಸಲಾಗಿದೆ. ಹೀಗೆ ಎಲ್ಲಾ ಸಾತ್ತ್ವಿಕ ಭಾವಗಳಿಗೂ ಈ ರೀತಿಯಾಗಿ ಉದಾಹರಣೆಯನ್ನು ಕೂಡಬಹುದಾಗಿದೆ.

ಅನುಭಾವ, ಸಾತ್ವಿಕಭಾವವನ್ನು ವಿಧವಿಧವಾಗಿ ಅರ್ಥ ಮಾಡಿಕೊಂಡಿದ್ದಾರೆ. ಅದರಲ್ಲಿ ಭರತ.

> **ಸ್ತಂಭಃ ಸ್ವೇಧೋ?ಥ ರೋಮಾಂಚಃ ಸ್ವರಭೇದೋಽಥ ವೇಪಥುಃ ॥**
> **ವೈವರ್ಣ್ಯ ಮಶ್ರು ಪ್ರಲಯ ಇತ್ಯಷ್ಟೌ ಸಾತ್ವಿಕಾ ಮತಾಃ ॥**
>
> [ನಾಟ್ಯಶಾಸ್ತ್ರ, ೬, ೨೨]

"ಮೈಮರವಾಗುವುದು (ನಿಶ್ಚೇಷ್ಟತೆ) ಬೆವರು, ರೋಮಾಂಚ, ಧ್ವನಿವಿಕಾರ, ನಡುಕ, ಬಣ್ಣ ವ್ಯತ್ಯಾಸವಾಗುವುದು ಕಂಬನಿ, ಮೂರ್ಛೆ" ಭರತನ್ನು ಈ ಎಂಟು ಭಾವಗಳನ್ನು ಪ್ರತ್ಯೇಕಿಸಿ ಸಾತ್ವಿಕಭಾವಗಳೆಂದು ಹೆಸರು ಕೊಟ್ಟಿದ್ದಾರೆ. ಅಂಗಾಂಗಗಳ ಚಲನೆ, ಹೋಗುವುದು, ಬರುವುದು, ನಿಲ್ಲುವುದು, ಮಾತಾಡುವುದು, ಮಾತು ಮರೆಸುವುದು, ಮೈನಡುಕ, ಪುಳಕ, ಕಂಬನಿ, ಇವೆಲ್ಲವೂ ಒಬ್ಬನ ಚಿತ್ತದಲ್ಲಿ ಒಂದು ಭಾವವು ಅಧಿಕವಾಗಿ ಉದ್ರೇಕಗೊಂಡಾಗ, ಅವನ ಉದ್ದೇಶ, ಪ್ರಯತ್ನಗಳೇನೂ ಇಲ್ಲದೆ ಈ ಬಗೆಯ ದೇಹವಿಕಾರಗಳು ತಮ್ಮಷ್ಟಕ್ಕೆ ತಾವು ಸಂಭವಿಸುವುದರಿಂದ, ಭಾವದ ತೀವ್ರಾವಸ್ಥೆಯನ್ನು ನಿಯತವಾಗಿ ಸೂಚಿಸುವ ಈ ಕಾರ್ಯಗಳನ್ನು ಪ್ರತ್ಯೇಕಿಸಿದಂತೆ ತೋರುತ್ತದೆ.[೪೪] ಆದಕಾರಣ ಸಾತ್ವಿಕಭಾವಗಳನ್ನು ಒಂದು ವಿಶೇಷ ರೀತಿಯ ಅನುಭಾವಗಳೆಂದು ಕರೆದಿದ್ದಾರೆ. ಸಾತ್ವಿಕಭಾವಗಳು ಚಿತ್ತವೃತ್ತಿ ವಿಶೇಷಗಳೆ ರತಿ ಮೊದಲಾದ ಭಾವಗಳು ಪ್ರಾಣ ಭೂಮಿಯನ್ನು ಮುಟ್ಟಿ ಕಲುಷಗೊಳಿಸಿದಾಗ ಇವು ಉದ್ಭವಿಸುತ್ತದೆ. ಹೊರಗೆ ಕಾಣಬರುವ ಸ್ತಂಭ, ಪ್ರಲಯ ಮೊದಲಾದವು ಇವುಗಳ ಅನುಭಾವಗಳು ಮಾತ್ರ ಎಂದು ಹೇಮಚಂದ್ರನು ವಿವರಿಸಿದ್ದಾನೆ.[೪೫] ಆದರೆ ಈ ಅಭಿಪ್ರಾಯವನ್ನು ಅಭಿನವಗುಪ್ತನಿಂದಲೇ ಸ್ವೀಕರಿಸಿರ ಬಹುದು. ಆದರೆ, 'ನಾಟ್ಯಶಾಸ್ತ್ರ'ದ ಅಧ್ಯಾಯದ ಏಳನೆಯ ಶ್ಲೋಕದಿಂದ ಮುಂದಕ್ಕೆ 'ಅಭಿನವಭಾರತಿ' ದೊರೆತಿಲ್ಲವಾದ ಕಾರಣ ಅಭಿನವಗುಪ್ತನ ಮತವೇನೆಂಬುದು ಖಚಿತವಾಗಿ ತಿಳಿಯಲು ಸಾಧ್ಯವಾಗಿಲ್ಲ. ಆದ್ದರಿಂದ ವಿಶ್ವನಾಥನು ಅನುಭಾವ, ಸಾತ್ವಿಕಭಾವಗಳಿಗೆ ಗೋಬಲೀವರ್ಧನ್ಯಾಯದಿಂದ ಹೇಳಿರುವ ಸಮನ್ವಯವು ಸಮ್ಮತವಾಗಿದೆ.

### ವ್ಯಭಿಚಾರಿಭಾವ [ಸಂಚಾರಿಭಾವ]

ಪ್ರಧಾನವಾದ ಸ್ಥಾಯಿಭಾವಕ್ಕೆ ಪೋಷಕವಾಗಿ ಅನೇಕಭಾವಗಳು ಬಂದು ಹೋಗುತ್ತಿರುತ್ತವೆ. ಇಂತಹ ಭಾವಗಳನೇ 'ವ್ಯಭಿಚಾರಿಭಾವ' ಆಥವಾ 'ಸಂಚಾ–ರಿಭಾವ' ಎಂದು ಕರೆಯಲಾಗಿದೆ. ವಿಭಾವ ಅನುಭಾವಗಳಿಗಿಂತಲೂ ಹೆಚ್ಚಾಗಿ ರಸವನ್ನು ಪೋಷಿಸಲು ಅನುಕೂಲವಾಗಿ ಪ್ರವರ್ತಿಸುತ್ತಲೂ ನೀರಿನಲ್ಲಿ ಗುಳ್ಳೆಯಂತೆ ಸ್ಥಾಯಿಭಾವದಲ್ಲಿಯೇ ಕೆಲವು ವೇಳೆ ಹುಟ್ಟುತ್ತಲೂ ಕೆಲವು ವೇಳೆ ಮುಳುಗುತ್ತಲೂ ಇರುವ ಭಾವಗಳೇ 'ವ್ಯಭಿಚಾರಿಭಾವ'ಗಳಾಗಿವೆ. ಇವು ಮಾನವನ ಮನಸ್ಸಿನಲ್ಲಿ

ಸಹಜವಾಗಿ ಸಂಯುಕ್ತವಾಗಿರುವ ಪ್ರಧಾನ ಭಾವವಾಗಿದ್ದು ಸ್ಥಿರವಾಗಿ ನಿಲ್ಲದೇ ಸ್ಥಾಯಿಭಾವಕ್ಕೆ ಪೋಷಕವಾಗಿ ಮೈದೂರಿ ಮರೆಯಾಗುತ್ತಿರುತ್ತದೆ. ಆದ್ದರಿಂದಲೇ "ಸ್ಥಾಯಿಭಾವವನ್ನು ಒಂದು ಸೂತ್ರಕ್ಕೂ ಸಂಚಾರಿಭಾವಗಳನ್ನು ಅದರಲ್ಲಿ ಪೋಣಿಸಿರುವ ಮಣಿಗಳಿಗೂ ಹೋಲಿಸಿದ್ದಾರೆ".[೪೬] ಹಾಗೆಯೆ "ಸ್ಥಾಯಿಯನ್ನು ಸಮುದ್ರಕ್ಕೂ ಸಂಚಾರಿಗಳನ್ನು ಅದರಲ್ಲಿರುವ ತರಂಗಗಳಿಗೂ ಹೋಲಿಸಿದ್ದಾರೆ.[೪೭] ಉದಾಹರಣೆಗೆ ಸುಪ್ತವಾಗಿರುವ ರತಿಭಾವ ಪ್ರಿಯನನ್ನೊ, ಪ್ರೇಯಸಿಯನ್ನೊ ಕಂಡು ಜಾಗ್ರತವಾದಾಗ ಜೊತೆಯಲ್ಲಿಯೇ ನಾಚಿಕೆ, ಚಿಂತೆ, ಹರ್ಷ, ಔತ್ಸುಕ್ಯ ಮೊದಲಾದ ಎಷ್ಟೊ ಭಾವಗಳು ಸುಳಿಸುಳಿದು ಮಾಯವಾಗುತ್ತಿರುತ್ತವೆ. ಇವೆ 'ವ್ಯಭಿಚಾರಿಭಾವ'ಗಳಾಗಿವೆ.

ಮನಸ್ಸಿನಲ್ಲಿ ಹುಟ್ಟುವ ಇಂತಹ ಭಾವಗಳನ್ನು ಲೆಕ್ಕ ಹಾಕಿ ಹೇಳುವುದು. ಕಷ್ಟದ ಕೆಲಸವಾದರೂ ಭರತನು ಈ ಪ್ರಯತ್ನವನ್ನು ಮಾಡಿ ಮೂವತ್ತಮೂರು ವ್ಯಭಿಚಾರಿ ಭಾವಗಳನ್ನು [೪೮] ಹೇಳಿದ್ದಾನೆ.

ವಿಶ್ವನಾಥನು ಭರತ, ಅಭಿನವಗುಪ್ತರ ರಸಸೂತ್ರವನ್ನು ಅನುಸರಿಸುವುದರಿಂದ ಮೂವತ್ತಮೂರು ವ್ಯಭಿಚಾರಿಭಾವಗಳನ್ನು ಸಾಹಿತ್ಯದರ್ಪಣದಲ್ಲಿ ವಿವರಿಸಿದ್ದಾನೆ. ಅವು ಯಾವುದೆಂಬುದನ್ನು ಈ ಶ್ಲೋಕವು ತಿಳಿಸುತ್ತದೆ.

**ನಿರ್ವೇದಗ್ಲಾನಿಶಂಕಾಖ್ಯಾಸ್ತಥಾಸೂಯಾ ಮದಃ ಶ್ರಮಃ ॥**
**ಆಲಸ್ಯಂ ಚೈವ ದೈನ್ಯಂ ಚ ಚಿಂತಾ ಮೋಹಃ ಸ್ಮೃತಿರ್ಧೃತಿಃ ॥**
**ವ್ರೀಡಾ ಚಪಲತಾ ಹರ್ಷ ಆವೇಗೋ ಜಡತಾ ತಥಾ ॥**
**ಗರ್ವೋ ವಿಷಾದ ಔತ್ಸುಕಂ ನಿದ್ರಾಪಸ್ಮಾರ ಏವ ಚ ॥**
**ಸುಪ್ತಂ ವಿಬೋಧೋ?ಮರ್ಷಶ್ಚಾಪ್ಯವಹಿತ್ಥಮಥೋಗ್ರತಾ ॥**
**ಮತಿರ್ವ್ಯಾಧಿಸ್ತಥೋನ್ಮಾದಸ್ತಥಾ ಮರಣಮೇವ ಚ ॥**
**ತ್ರಾಸಶ್ಚೈವ ವಿತರ್ಕಶ್ಚ ವಿಜೇಞೇಯಾ ವ್ಯಭಿಚಾರಿಣಾಃ ॥**

[ಸಾಹಿತ್ಯದರ್ಪಣ, ೩ನೆ ಪರಿಚ್ಛೇದ]

"ನಿರ್ವೇದ, ಆವೇಗ, ದೈನ್ಯ, ಶಮ, ಶಮ, ಮದ, ಜಡತೆ, ಉಗ್ರತೆ, ಮೋಹ, ವಿಭೋದ, ಸ್ವಪ್ನ, ಅಪಸ್ಮಾರ, ಗರ್ವ, ಮರಣ, ಅಲಸ್ಯ, ಅಮರ್ಶ, ನಿದ್ರೆ, ಅವಹಿತ್ಥ, ಔತ್ಸುಕ್ಯ, ಉನ್ಮಾದ, ಶಂಕೆ, ಸ್ಮೃತಿಮತಿ, ವ್ಯಾಧಿ, ಸಂತ್ರಾಸ, ಲಜ್ಜೆ, ಹರ್ಷ, ಅಸೂಯೆ, ವಿಷಾದ, ಧೃತಿ, ಚಾಪಲ್ಯ, ಗ್ಲಾನಿ, ಚಿಂತೆ, ವಿತರ್ಕ, ಇವಿಷ್ಟು ವ್ಯಭಿಚಾರಿಭಾವಗಳನ್ನು ಒಂದೊಂದಾಗಿ ವಿವರಿಸಲಾಗಿದೆ.

ತತ್ವಜ್ಞಾನ, ಆಪತ್ತು, ಅಸೂಯೆ, ಇವುಗಳಿಂದ ತನಗೆ ಅವಮಾನ ಉಂಟಾಗುವುದೇ 'ನಿರ್ವೇದ'ವಾಗಿದೆ. ಇದರಿಂದ ದೈನ್ಯ, ಚಿಂತೆ, ಕಣ್ಣೀರು, ನಿಟ್ಟುಸಿರು, ಮೈಯಲ್ಲಿ ಬಣ್ಣದ ಬದಲಾವಣೆ, ನಿರಾಶಭಾವ ಇವು ಹುಟ್ಟುತ್ತವೆ. ತತ್ವಜ್ಞಾನದಿಂದ ನಿರ್ವೇದವು

ಹುಟ್ಟುವುದನ್ನು ಉದಾಹರಿಸಲಾಗಿದೆ. ಸಂಸಾರದಲ್ಲಿ ಹೆಚ್ಚುಕಾಲ ಜೀವನವನ್ನು ನಡೆಸಿದನು. ದೈನ್ಯದಿಂದ ಹೇಳುವ ಮಾತಿದು. "ಮಣ್ಣಿನಿಂದ ನಿರ್ಮಿತವಾಗಿರುವ ಕಲಶದಲ್ಲಿ ಮರಳಿನಂತೆ ಇರುವ ರಂಧ್ರವನ್ನು ಮುಚ್ಚಬೇಕೆಂದು ಹೊರಟ ನಾನು ಈ ದೇಹವೆಂಬ ಬಲಗಡೆ ಸುಳಿ ಇರುವ ಶಂಖವನ್ನು ಚೂರು ಮಾಡಿದನು". ಅತಿ ತುಚ್ಛವಾದ ಮಣ್ಣಿನ ಮಡಕೆಯನ್ನು ಮರಳಿನಷ್ಟು ರಂಧ್ರವಿತ್ತು. ಅದನ್ನು ಮುಚ್ಚಲಿಕ್ಕಾಗಿ ಅಮೂಲ್ಯವಾದ ಶಂಖವನ್ನು ಪುಡಿ ಮಾಡಿದ್ದಾಯಿತು. ಸಂಸಾರದ ನ್ಯೂನತೆಗಳನ್ನು ಪರಿಹರಿಸಲು ದೇಹವನ್ನು ಉಪಯೋಗಿಸಿದ್ದಾಯಿತು. ಆತ್ಮಕ್ಷೇಮ ಲಾಭಕ್ಕೆ ಈ ದೇಹವನ್ನು ಉಪಯೋಗಿಸುವ ಬದಲು ಸಣ್ಣದೊಂದು ನ್ಯೂನತೆಯನ್ನು ತೊಲಗಿಸುವುದಕ್ಕಾಗಿ ಉಪಯೋಗಿಸಿದ್ದರಿಂದ ನಿರಾಶಾಭಾವ ಹುಟ್ಟುವುದು ಇಲ್ಲಿ 'ನಿರ್ವೇದ'ವೆಂಬ ವ್ಯಭಿಚಾರಿಭಾವವಿದೆ.

ರಾಮನ ಸಂಹಾರಕ್ಕಾಗಿ ಬಂದ ಪರಶುರಾಮನು ಇಲ್ಲಿ ತಿಳಿಸುತ್ತಾನೆ. "ಅರ್ಘ್ಯವನ್ನು ಸ್ವೀಕರಿಸು ಎಂದು ದಶರಥನು ಹೇಳುತ್ತಿದ್ದರೂ ಅದನ್ನು ತಿರಸ್ಕರಿಸಿ ಎಲ್ಲಿ ರಾಮನಿರುವನೋ ಆ ಕಡೆ ಕ್ಷತ್ರಿಯರ ಮೇಲಿನ ಕೋಪವೆಂಬ ಬೆಂಕಿಯಂತೆ ಉರಿಯುತ್ತ ಮೇಲಕ್ಕೆ ತಿರುಗಿಸಿದ ಕಣ್ಣುಗಳನ್ನು ಬಾಣಗಳಂತೆ ಪ್ರೇರಿಸಿದನು" [೪೯]ಇಲ್ಲಿ ಪರಶುರಾಮನ ಕೋಪವೇ 'ಆವೇಗ'ವೆಂಬ ವ್ಯಭಿಚಾರಭಾವವಾಗಿದೆ.

ದಾರಿದ್ರ್ಯ ಬೆದರಿಕೆಯಿಂದಲೂ ಹುಟ್ಟಿ ದೇಹದಲ್ಲಿ ಮಾಯೆ ಮಾಲಿನ್ಯಗಳನ್ನು ಹುಟ್ಟಿಸುವ ಭಾವವೇ 'ದೈನ್ಯ' ಭಾವವಾಗಿದೆ. ಸುರತ, ಮಾರ್ಗ ಪ್ರಯಾಣ, ಮರವನ್ನು ಕಡಿಯುವುದು ಮೊದಲಾದವುಗಳಿಂದ ಹುಟ್ಟಿ ದೀರ್ಘ ನಿಶ್ವಾಸ, ನಿದ್ರೆ ಮೊದಲಾದವುಗಳನ್ನು ಹುಟ್ಟಿಸುವ ಅವಸ್ಥೆಯೇ 'ಶ್ರಮ'ವೆನಿಸಿದೆ. ಮದ್ಯವನ್ನು ಕುಡಿಯುವುದರಿಂದ ಹುಟ್ಟಿದ ಮೋಹ ಮತ್ತು ಆನಂದ ಇವೆರಡೂ ಬೆರೆಯುವುದರಿಂದ ಉಂಟಾಗುವ ಅವಸ್ಥೆಯೇ 'ಮದ'ವೆನಿಸಿದೆ. ಇಷ್ಟ ನಿಷ್ಟಗಳನ್ನು ನೋಡಿದಾಗ ಕೇಳಿದಾಗ ಉಂಟಾಗುವ ಪರವಶತೆ 'ಜಡತೆ' ಎನಿಸಿದೆ. ಶೌರ್ಯದಿಂದಲೂ, ಶತ್ರುವಿನ ಅಪರಾಧ ಮತ್ತು ಅಪಕಾರಗಳಿಂದಲೂ ಹೆಚ್ಚು ಕೋಪಗೊಳ್ಳುವುದೇ 'ಉಗ್ರತೆ', 'ಚಿತ್ತಮೂಢತ್ವಂ ಮೋಹಂ', ಭಯ, ದುಃಖ, ಆವೇಗ, ಉತ್ಕಟವಾದ ಚಿಂತೆ ಇವುಗಳಿಂದ ಹುಟ್ಟಿ ಕಣ್ಣು ತಿರುಗಿಸುವಂತೆಯೂ, ನೆಲದ ಮೇಲೆ ಹೊರಳಡುವಂತೆ, ಒಡಾಡುವಂತೆಯೂ, ಕಣ್ಣಿಗೆ ಕಾಣಿಸದಂತೆಯೂ ಮಾಡಿಸುವ ವಿಷಮವಾದ ಅವಸ್ಥೆಯೇ 'ಮೋಹ'ವಾಗಿದೆ. ನಿದ್ರೆಯನ್ನು ತೊಲಗಿಸುವ ಕಾರಣಗಳಿಂದ ಹುಟ್ಟಿ ಆಕಳಿಕೆ, ಅವಯವಗಳನ್ನು ಮುಂದಕ್ಕೆ ಚಾಚುವುದು. ಕಣ್ಣುಗಳನ್ನು ಮುಚ್ಚುವುದು, ಮೊದಲಾದ ಸ್ಥಿತಿಯನ್ನುಂಟುಮಾಡುವ ಎಚ್ಚರಿಕೆಯೆ 'ವಿಬೋಧ'[೫೦] ವಾಗಿದೆ. ನಿದ್ರೆಯಲ್ಲಿರುವವನು ವಿಷಯಗಳನ್ನು ಅನುಭವಿಸುವುದೆ 'ಸ್ವಪ್ನ'[೫೧]ವೆನಿಸಿದೆ. ಇದರಿಂದ ಕೋಪ, ಆವೇಶ, ಭಯ, ಗ್ಲಾನಿ,

ಸುಖ, ದುಃಖ, ಇವುಗಳು ಉಂಟಾಗುತ್ತದೆ. ಗ್ರಹಗಳು ಮತ್ತು ಭೂತಗಳ ಆವೇಶದಿಂದ ಹುಟ್ಟಿ ನೆಲದ ಮೇಲೆ ಬೀಳುವುದು. ನಡುಗುವುದು. ಬೆವರು, ನೊರೆ, ಜೊಲ್ಲು ಇವನ್ನು ಹುಟ್ಟಿಸುವ ಅವಸ್ಥೆಯೇ 'ಅಪಸ್ಮಾರ'ವಾಗಿದೆ. ಪ್ರತಾಪ ಸೌಂದರ್ಯ, ಶಾಸ್ತ್ರಜ್ಞಾನ, ಸದ್ವಂಶದಲ್ಲಿ ಹುಟ್ಟುವಿಕೆ ಇವುಗಳಿಂದ ತೋರಿ ಬೇರೆಯವರನ್ನು ಹಾಸ್ಯ ಮಾಡುವಂತೆಯೂ ಮಾಸದಿಂದ ಅವಯವಗಳನ್ನು ನೋಡಿಕೊಳ್ಳುವಂತೆಯೂ ತನನ್ನು ಪ್ರಶಂಸಿಸುವಂತೆಯೂ ದುರ್ನಡತೆಯನ್ನು ಉಂಟುಮಾಡುವ ಅವಸ್ಥೆಯೆ 'ಗರ್ವ'[೫೨]ವೆನಿಸಿದೆ.

ಜೀವನದ ಕೊನೆಯ ಸ್ಥಿತಿಯೇ 'ಮರಣ'ವೆನಿಸಿದೆ. ಆಯಾಸ, ಗರ್ಭಧಾರಣ, ರಾತ್ರಿಜಾಗರಣ ಇತ್ಯಾದಿ ಕಾರಣಗಳಿಂದ ಹುಟ್ಟಿ, ಆಕಳಿಕೆ, ಕೆಲಸವಿಲ್ಲದೆ ಕುಳಿತಿ-ರುವುದು. ಮಲಗುವುದು. ಹೀಗೆ ಮಾಡುವ ಅವಸ್ಥೆಯೇ 'ಆಲಸ್ಯ', ನಿಂದೆ, ಆಕ್ಷೇಪ, ಉಗ್ರಭಾವದಿಂದ, ಗದರಿಸುವುದು. ಅವಮಾನ ಪಡಿಸುವುದು. ಇವುಗಳಿಂದ ಹುಟ್ಟುವ ಅಭಿನಿವೇಶನವೇ 'ಆಮರ್ಷ' ಆಯಾಸ, ಶ್ರಮ, ಔಷಧ ಸೇವನೆ ಇತ್ಯಾದಿ ಕಾರಣಗಳಿಂದ ಉಂಟಾಗುವ ಅವಸ್ಥೆಯೆ 'ನಿದ್ರೆ' ಎನಿಸುವುದು. ಭಯ, ಗೌರವ, ಲಜ್ಜೆ, ಬಟ್ಟೆಯನ್ನು ಮುಚ್ಚಿಕೊಳ್ಳುವುದು. ಮೊದಲಾದ ಕಾರಣಗಳಿಂದ ಹುಟ್ಟುವ ಅವಸ್ಥೆಯೇ 'ಅವಹಿತ್ಥೆ' ಎನಿಸಿದೆ. ಅಪೇಕ್ಷಿಸಿದ ಫಲವು ದೊರಕದೆ ಇದ್ದು ಅದು ದೊರಕುವವರೆಗೂ ಕಾಲವನ್ನು ಕಳೆಯಲ್ಲು ಸಹನೆ ಇಲ್ಲದಿರುವುದೆ 'ಔತ್ಸುಕ್ಯ'ವಾಗಿದೆ. ಕಾಮ, ಶೋಕ, ಭಯ ಮೊದಲಾದ ಕಾರಣಗಳಿಂದ ಆಯಾಯ ವಸ್ತುಗಳನ್ನು ಯಥಾರ್ಥವಾಗಿ ತಿಳಿಯಲಿಕ್ಕಾಗದಿರುವ ಸ್ಥಿತಿಯೆ 'ಉನ್ಮಾದ'ವಾಗಿದೆ. ಬೇರೆಯವರಿಂದ ಹಿಂಸೆ, ತನ್ನಲ್ಲಿರುವ ದೋಷ, ಅದೃಷ್ಟದಿಂದ ಉಂಟಾದ ಅನಿಷ್ಟ ಇವುಗಳಿಂದ ಹುಟ್ಟುವ ವಿಪತ್ತಿನ ಊಹೆಯೆ 'ಶಂಕೆ' ಎನ್ನಲಾಗಿದೆ. ಸದೃಶವಾದ ವಸ್ತುವನ್ನು ನೋಡುವುದು, ಚಿಂತಿಸುವುದು. ಬೇರೆಯವರು ಮಾಡಿದ ವರ್ಣನೆ ಇವುಗಳಿಂದ ಒಬ್ಬನಿಗೆ ಹಿಂದೆ ಅನುಭವಿಸಿದ್ದ ಬೇರೊಂದು ವಸ್ತುವಿನ ಅರಿವಾಗುವುದೇ 'ಸ್ಮೃತಿ' ಎನಿಸಿದೆ. ನೀತಿಶಾಸ್ತ್ರವನ್ನು ಅನುಸರಿಸುವುದರಿಂದಲೂ, ಅನುಮಾನದಿಂದಲೂ ಇಂತಹ ಪದಾಥ-ರ್ವೆಂದು ನಿಶ್ಚಯಿಸುವುದೇ 'ಮತಿ' ವಾತ ಪಿತ್ತ ಕಷ್ಟಗಳಲ್ಲಿ ವ್ಯತ್ಯಾಸವಾದರೆ ಅದರಿಂದ ಹುಟ್ಟುವ ಅವಸ್ಥೆ ಮೊದಲಾದವು 'ವ್ಯಾಧಿ' ಎನಿಸಿದೆ. ಸಿಡಿಲೂ ಮಿಂಚು ಧೂಮಕೇತು, ಭೂಕಂಪ ಮೊದಲಾದ ಕಾರಣಗಳಿಂದ ಹುಟ್ಟಿ ಮೈಯಲ್ಲಿ ನಡುಕ, ಮೂರ್ಛೆ ಇವನ್ನು ಹುಟ್ಟಿಸುವ ಅವಸ್ಥೆಯೆ 'ತ್ರಾಸ' ಎನಿಸಿದೆ. ಸ್ತನಗಳು, ನಿತಂಬ, ಇವನ್ನು ತೋರಿಸುವ ಮೂಲಕ ಕಂಡು ಬರುವ ಸಂಕುಚಿತಾವಸ್ಥೆ 'ವ್ರೀಡೆ' ಆಗಿದೆ. ಇಷ್ಟಕಾರ್ಯವು ಸಿದ್ಧಿಸಿದ್ದ-ರಿಂದ ಉಂಟಾದ ಮನಸ್ಸಿನ ಪ್ರಸನ್ನತೆಯೇ 'ಹರ್ಷ'ವೆನಿಸಿದೆ. ಬೇರೊಬ್ಬರ ಗುಣವನ್ನೂ ವೃದ್ಧಿಯನ್ನೂ ಕಂಡು ಗರ್ವದಿಂದ ಸಹಿಸದಿರುವುದೇ 'ಅಸೂಯೆ', ಅನರ್ಥವನ್ನು ಪರಿಹರಿಸುವ ಕಾರಣಗಳಿಲ್ಲದೆ ಹುಟ್ಟಿ ಮನುಷ್ಯನ ಉದ್ಯಮವನ್ನೇ ನಾಶಗೊಳಿಸುವ

ಅವಸ್ಥೆಯೆ 'ವಿಷಾದ'ವಾಗಿದೆ. ಜ್ಞಾನ ಮೊದಲಾದವುಗಳಿಂದ ಉಂಟಾಗುವ ಸಂತುಷ್ಟಿಯನ್ನು 'ಧೃತಿ' ಎನಿಸಿದೆ. ಇದರಿಂದ ಉಲ್ಲಾಸ, ಆಹ್ಲಾದ, ಬುದ್ಧಿವಿಕಾಸ, ಶಾಂತಿ ಇತ್ಯಾದಿಗಳು ದೃತಿಯಿಂದ ಉಂಟಾಗುತ್ತದೆ. ಮಾತ್ಸರ್ಯ ದ್ವೇಷ, ರಾಗ, ಹುಚ್ಚುತನದಿಂದ ಮನಸ್ಸು ವ್ಯವಸ್ಥೆಯಾಗಿ ಇಲ್ಲದಿರುವುದನ್ನು 'ಚಾಪಲ್ಯ' ಎನ್ನಲಾಗಿದೆ. 'ಚಿತ್ತಂ ಚಲಿಪುದೇ ಚಾಪಲ್ಯಂ', ಸುರತದಿಂದ ಬೇರೆ ಬಗೆಯ ಆಯಾಸದಿಂದ ಮನಸ್ತಾಪ, ಹಸಿವು ನೀರಡಿಕೆಗಳಿಂದ ಹುಟ್ಟಿದ ದೇಹದ ದೌರ್ಬಲ್ಯವೆ 'ಗ್ಲಾನಿ' ಆಗಿದೆ. ಹಿತವಾದದನ್ನು ಪಡೆಯದೇ ಇದ್ದಾಗ, ಅದರ ಬಗ್ಗೆ ಉಂಟಾಗುವ ಆಲೋಚನೆಯೇ 'ಚಿಂತೆ' ಹೀಗೊ ಹಾಗೊ ಎಂದು ವಿಚಾರ ಮಾಡುವುದೆ 'ವಿತರ್ಕ'ವೆನಿಸಿದೆ. ಹೀಗೆ ಮೂವತ್ತಮೂರು ವ್ಯಭಿಚಾರಿಭಾವಗಳೆಂದು ಅಕ್ಷರದಲ್ಲಿ ಹೇಳಿದ್ದರೂ, ಇಷ್ಟೇ ಎಂಬುದು ನಿರ್ಧಾರವಿಲ್ಲ ರತಿ, ಹಾಸ, ಮೊದಲಾದ ಸ್ಥಾಯಿಭಾವಗಳು ಸಹ ಕೆಲವು ವೇಳೆ ವ್ಯಭಿಚಾರಿಭಾವಗಳಾಗುತ್ತವೆ. ಒಂದು ರಸದಲ್ಲಿ ಅದರ ಸ್ಥಾಯಿಭಾವ ವನ್ನು ಬಿಟ್ಟು ಬೇರೊಂದು ಸ್ಥಾಯಿಭಾವವಿದ್ದಲ್ಲಿ ಅದನ್ನು ವ್ಯಭಿಚಾರಿಭಾವವೆಂದು ತಿಳಿಯಬೇಕು. ಶೃಂಗಾರ ರಸದಲ್ಲಿ ರತಿಯೇ ಪ್ರಧಾನವಾದ ಸ್ಥಾಯಿಭಾವವಾದ್ದರಿಂದ ಅಲ್ಲಿ ಹಾಸವು ತೋರಿದರೆ ವ್ಯಭಿಚಾರಿಭಾವವಾವಗುತ್ತದೆಯೇ ಹೊರತು ಸ್ಥಾಯಿಭಾವವಾಗಲಾರದು. ಆದ್ದರಿಂದ ಶೃಂಗಾರ ಮತ್ತು ವೀರ ರಸಗಳಲ್ಲಿ ಹಾಸವೂ ವ್ಯಭಿಚಾರಿಭಾವವಾಗಿದೆ. ಶಾಂತಿರಸದಲ್ಲಿ ಜುಗುಪ್ಸೆ, ಹಾಸ್ಯರಸದಲ್ಲಿ ವಿಸ್ಮಯ, ಕರುಣದಲ್ಲಿ ಭಯ ರೌದ್ರದಲ್ಲಿ ಹಾಸ, ಭಯಾನಕದಲ್ಲಿ ಶೋಕವು ವ್ಯಭಿಚಾರಿಭಾವಗಳಾಗಿವೆ ಎಂಬುದು ವಿಶ್ವನಾಥನು ಹೇಳಿದ್ದಾನೆ.

ಒಟ್ಟಿನಲ್ಲಿ ಭರತ ಹೇಳಿರುವ ಮೂತ್ತಮೂರು ಸಂಚಾರಿಭವಗಳನ್ನೇ ಅಭಿನವಗುಪ್ತ, ವಿಶ್ವನಾಥ ಮೊದಲಾದ ಅಲಂಕಾರಿಕರು ಅನುಸರಿಸಿದರಿಂದ ಇವು ಇಷ್ಟೇ ಎಂಬ ಅಭಿಪ್ರಾಯವಿಲ್ಲವೆಂದು ವಿಶ್ವನಾಥನೂ ತಿಳಿಸಿದ್ದಾನೆ. ಇವು ಮನಶ್ಯಾಸ್ತ್ರಕ್ಕೆ ಹೆಚ್ಚಾಗಿ ಅನ್ವಯಿಸುವುದರಿಂದ ಇವನ್ನೂ ಪ್ರತ್ಯೇಕ ಅಧ್ಯಯನದ ವಸ್ತುವೂ ಆಗುವುದರಿಂದ ಮನಶಾಸ್ತಜ್ಞರು ಪುನರವಲೋಕಿಸುವ ಅಗತ್ಯವಿದೆ. ಇಲ್ಲಿಗೆ ವ್ಯಭಿಚಾರಿಭಾವದ ಸ್ವರೂಪವನ್ನು ಲಾಕ್ಷಣಿಕರ ಅಭಿಪ್ರಾಯದೊಂದಿಗೆ ವಿವೇಚಿಸಿ ವಿಶ್ವನಾಥನು ಹೇಳಿರುವ ರಸಪ್ರಕಾರಗಳನ್ನು ವಿಮರ್ಶಿಸಲಾಗಿದೆ.

**ರಸ ಪ್ರಕಾರಗಳು:**

ಎಲ್ಲಾ ರಸಗಳ ಸಾರವು ಒಂದೇ ಆದರೂ ಅನುಭವ ಕಾಲದಲ್ಲಿ ವಿಭಾವಾನು ಭಾವಾದಿಗಳು ಸಂವಲಿತವಾಗಿಯೇ ಇರುವುದರಿಂದ ಒಂದೊಂದರ ರುಚಿಯಲ್ಲೂ ಸಹ ನಾವು ವೈಚಿತ್ರ್ಯವನ್ನು ಕಾಣಬಹುದು. ಸಿಹಿ ಒಂದೇ ಆದರೂ ಬೆಲ್ಲ, ಸಕ್ಕರೆ ಜೇನುಗಳಲ್ಲಿ ಮಾವು, ಕಿತ್ತಲೆ, ಸೇಬುಗಳಲ್ಲಿ ಬೇರೆ ಬೇರೆ ಅನುಭವಗಳು ಕಾಣುವಂತೆ

ಅಂತರಿಕ ಪರಿಭಾವನೆಯಿಂದ ಪೂರ್ಣಗೊಂಡ ಆಸ್ವಾದನಾರೂಪವಾದ ಆನಂದ. 'ರಸ' ಎನ್ನುವುದರ ಅರ್ಥವ್ಯಾಪಿಯು ಬೇರೆ ಬೇರೆ ಸ್ಥರಗಳಲ್ಲಿ ಗುರುತಿಸುವ ಪ್ರಯತ್ನ ನಡೆದಿರುವುದನ್ನು ನಾವು ಕಾಣಬಹುದು. ಭರತನು ಎಂಟು ರಸಗಳನ್ನು[೫೩] ಮತ್ತು ಅದಕ್ಕೆ ಸರಿಯಾಗಿ ಎಂಟು ಸ್ಥಾಯಿಭಾವಗಳನ್ನು [೫೪] ಹೇಳಿದ್ದಾನೆ. ದಂಡಿಯು ಎಂಟು ರಸಗಳನ್ನು[೫೫] ಉದ್ಭಟನು ಶಾಂತವನ್ನು ಒಂಬತ್ತನೆಯ ರಸವೆಂದು ಪರಿಗಣಿಸಿದ್ದಾನೆ.[೫೬] ರುದ್ರಟನ್ನು ಪ್ರೇಯಸ್ ಎಂಬುದನ್ನು ಹತ್ತನೆಯ ರಸವೆಂದು ಪರಿಗಣಿಸಿದ್ದಾನೆ.[೫೭] ಮಮ್ಮಟ ಎಂಟು ರಸಗಳೆಂದು,[೫೮] ಗೋಸ್ವಾಮಿಯೂ ಹದಿನಾರು ಬಗೆಯೆಂದು. ಮತ್ತು ನವೀನರೂ ನಾಲ್ಕೇ ರಸಗಳೆಂದು ಹೇಳಿದ್ದಾರೆ. ಅಭಿನವಭಾರತಿಯಲ್ಲಿ[೫೯] ಹೇಳಿದಂತೆ, ಕೆಲವರ ಪ್ರಕಾರ ಸ್ನೇಹ, ಲೌಲ್ಯ ಮತ್ತು ಭಕ್ತಿ, ಎಂಬ ಮೂರನ್ನು ಕೊಡ ರಸಗಳೆಂದು ಪರಿಗಣಿಸಬಹುದು. ಹಾಗಾದರೆ ರಸಗಳ ಸಂಖ್ಯೆ ಹದಿಮೂರಕ್ಕೇರುತ್ತದೆ. ಈ ಮೂರು ರಸಗಳ ಬಗ್ಗೆ ಹೆಚ್ಚು ಅಲಂಕಾರಿಕರೂ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹೆಚ್ಚು ಅಲಂಕಾರಿಕರು ಒಂಬತ್ತು ರಸಗಳ ಅಂಗೀಕಾರದ ಬಗ್ಗೆ ಏಕಾಭಿಪ್ರಾಯವನ್ನು ಹೊಂದಿದ್ದಾರೆ.

ಭರತನು ಎಂಟು ಸ್ಥಾಯಿಭಾವಗಳನ್ನು ಅವುಗಳಿಂದ ಬರುವ ಎಂಟು ರಸಗಳನ್ನು ಹೇಳಿದುದೇ ಈ ಎಲ್ಲಾ ರಸ ವಿವೇಚನೆಗೂ ನಾಂದಿಯಾಯಿತು. ಆತ ಹೇಳುವ ಎಂಟು ಸ್ಥಾಯಿಭಾವಗಳು.

> **ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ ।**
> **ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯಿಭಾವಃ ಪ್ರಕೀರ್ತಿತಾಃ**[೬೦] ॥

ಈ ಎಂಟು ಸ್ಥಾಯಿಭಾವಗಳಿಂದ ಬರುವ ಎಂಟು ರಸಗಳನ್ನು ಮೊದಲು ಕ್ರಮವಾಗಿ ನಿರೂಪಿಸಿದ್ದಾನೆ.

> **ಶೃಂಗರ ಹಾಸ್ಯ ಕರುಣಾ ರೌದ್ರವೀರಭಯಾನಕಾಃ ।**
> **ಭೀಭತ್ಸಾದ್ಭುತ ಸಂಜ್ಞಾ ಚೇತ್ಯಷ್ಟೌ ನಾಟ್ಯೇ ರಸಾಃ ಸ್ಮತಾಃ**[೬೧] ॥

'ರತಿಭಾವದಿಂದ ಶೃಂಗಾರ ರಸ, ಹಾಗೆಯೇ 'ಹಾಸದಿಂದ ಹಾಸ್ಯ 'ಶೋಕ'ದಿಂದ ಕರುಣ, 'ಕ್ರೋಧ'ದಿಂದ ರೌದ್ರ, 'ಭಯ'ದಿಂದ ಭಯಾನಕ, 'ಜುಗುಪ್ಸೆ' ಯಿಂದ ಬೀಭತ್ಸ, 'ವಿಸ್ಮಯ'ದಿಂದ ಅದ್ಭುತ ರಸಗಳು ನಿಷ್ಪನ್ನವಾಗುತ್ತದೆ. ಇವುಗಳಲ್ಲಿ ವಿಭಾವಾನುಭಾವಗಳು, ಸಂಚಾರಿಭಾವಗಳು, ಅಭಿನಯ ಕ್ರಮಗಳನ್ನಲ್ಲದೇ ಒಂದೊಂದು ರಸಕ್ಕೂ ಇರುವ ಬಣ್ಣ ಅಧಿದೈವಗಳನ್ನು ನಿರೂಪಿಸಿತ್ತಾನೆ. ಸಾಳ್ವನು ರಸಗಳ ವರ್ಣ ಮತ್ತು ಅಧಿದೈವಗಳನ್ನು ಹೀಗೆ ಸಂಗ್ರಹಿಸಿದ್ದಾನೆ.

**ಹರಿತಂ ಶೃಂಗಾರವರ್ಣಂ ಸಿತರುಚಿ ಹಸಿತಂ ರೌದ್ರಮಾರಕ್ತಯುಕ್ತಂ**
**ಕರುಣಂ ಶ್ಯಾಮಪ್ರಭಾಂಗಂ ಪ್ರಚುರ ರುಚಿರಗೌರಂ ಸುವೀರಂ, ಭಯಂ ಭಾ**
**ಸುರ ಧೂಮಾಕಾರಮತ್ಯದ್ಭುತಮದು ಕನಕಂ ಕೃಷ್ಣ ಶುಭ್ರಾನ್ವಿತಂವಿ**
**ಸ್ತರದಿಂ ಭೀಭತ್ಸುವೆಂಬೀವರಿಯನಪಿಗೆ ತನ್ಮಾರ್ಗದೊಳ್ ಸತ್ಕವೀಂದ್ರರ್**[೬೨]

ಈ ವರ್ಣವಿನ್ಯಾಸ ಸಾಂಕೇತಿಕವಾಗಿರುವುದನ್ನು ನಾವು ಗಮನಿಸಬಹುದು. ಅಂತೆಯೇ ಒಂದೊಂದು ರಸಕ್ಕೆ ಒಬ್ಬೊಬ್ಬ ಅಧಿದೇವತೆಗಳನ್ನು ಹೇಳಿರುವುದರಲ್ಲಿಯೂ ಇದೇ ದೃಷ್ಟಿ ಕಾಣುತ್ತದೆ.

ಈ ರಸಗಳಲ್ಲಿ ಒಂದೊಂದನ್ನೂ ಲಾಕ್ಷಣಿಕರು ದೀರ್ಘವಾಗಿ ಅದರ ವಿವಿಧ ಉಪ ವಿಭಾಗಗಳ ಸಹಿತವಾಗಿ ಚರ್ಚಿಸಿದ್ದಾರೆ. ಅದರಲ್ಲೂ ಶೃಂಗಾರದ ಪ್ರಕಾರಗಳು, ನಾಯಕ ನಾಯಕಿಯರ ಲಕ್ಷಣಗಳು, ಹಾವಭಾವಗಳು ಮೊದಲಾದವನ್ನು ವಿಶೇಷವಾಗಿ ಪರಾಮರ್ಶಿಸಿದ್ದಾರೆ.

ಇನ್ನು ವಿಶ್ವನಾಥನ ಪ್ರಕಾರ ರಸಗಳು:

**ಶೃಂಗಾರಹಾಸ್ಯ ರೌದ್ರವೀರ ಭಯಾನಕಾಃ ।**
**ಭೀಭತ್ಸೋದ್ಭುತ ಇತ್ಯಷ್ಟೌರಸಾಃ ಶಾಂತಸ್ತಥಾ ಮತಃ ॥**

ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ ಅದ್ಭುತ ಶಾಂತ, 'ಅಷ್ಟ ರಸಾಃ' ಎಂದು ಹೇಳಿ ಬೇರೆ ವಾಕ್ಯದಿಂದ 'ಶಾಂತ ಸ್ತಥಾ ರಸಃ' ಎಂದು ಹೇಳಿದ್ದಾನೆ. ಆದರೂ 'ತಥಾ' ಎಂದು ಹೇಳಿದ್ದರಿಂದ 'ವಾತ್ಸಲ್ಯ' ಎಂಬುದೂ ಹತ್ತನೆಯ ರಸವಾಗಿ ಹೇಳಿ ಇದು 'ಮುನೀದ್ರ ಸಮ್ಮತಿ' ಎಂದಿದ್ದಾನೆ.

### ೧. ಶೃಂಗಾರ ರಸ

**ಶೃಂಗಂ ಹಿ ಮನ್ಮಥೋದ್ಭೇದಸ್ತದಾಗಮನಹೇತುಕಃ ।**
**ಉತ್ತಮ ಪ್ರಕೃತಿ ಪ್ರಾಯೋ ರಸಃ ಶೃಂಗಾರ ಇಷ್ಯತೇ ॥** [೬೩]

ಶೃಂಗಾರರಸಕ್ಕೆ ರತಿಯೇ ಸ್ಥಾಯಿಭಾವವಾಗಿದ್ದು ಶ್ಯಾಮವರ್ಣವಿದ್ದು, ವಿಷ್ಣುದೇವತೆಗೆ ಸಂಬಂಧಿಸಿದೆ. 'ಶೃಂಗ'ವೆಂದರೆ ಕಾಮೋದ್ರೇಕವೆಂಬುದು ಅಲಂಕಾರಿಕರಲ್ಲಿ ರೂಢಿ ಎನಿಸಿದೆ. ಜನರಿಗೆ ಹುಟ್ಟುವ ಭಾವಗಳಲ್ಲಿ ಮೊದಲನೆಯದಾಗಿದೆ. ಅದನ್ನು ಹುಟ್ಟಿಸಲು ಕಾರಣವಾದದೇ ಶೃಂಗಾರರಸ ಉತ್ತಮ ಪ್ರಕೃತಿಯವನಲ್ಲಿ ಹುಟ್ಟುವ ಕಾಮವಿಕಾರವು ಶೃಂಗಾರವೆನಿಸಿದ್ದರಿಂದ ಶೃಂಗಾರ ರಸಕ್ಕೆ ಗಾಂಭೀರ್ಯವೇ ಜೀವಾಳವಾಗಿದೆ. ಇದು ಅನುರಾಗವಿಲ್ಲದ [ವೇಶ್ಯ] ಇವರನ್ನು ಬಿಟ್ಟು ಉಳಿದ ನಾಯಿಕೆಯರು ಹಾಗೆ ದಕ್ಷಿಣ ಮೊದಲಾದ ಎಲ್ಲಾ ಬಗೆಯ ನಾಯಕರು ಆಲಂಬನರೆನಿಸಿದ್ದಾರೆ. ಚಂದ್ರ, ಚಂದನ,

ಭ್ರಮರಸ ಧ್ವನಿ ಇತ್ಯಾದಿಗಳು ಉದ್ದೀಪನ ವಿಭಾವವಾಗಿದೆ. ಹುಬ್ಬನ್ನು ಗಂಟು ಹಾಕುವುದು. ಓರೆನೋಟ ಮೊದಲಾದ ಕ್ರಿಯೆಗಳನ್ನು ಅನುಭಾವವಾಗಿದೆ. ಉಗ್ರತೆ, ಮರಣ, ಆಲಸ್ಯ, ಜಿಗುಪ್ಸೆ, ಇವು ಬಿಟ್ಟು ಉಳಿದವು ವ್ಯಭಿಚಾರಿಭಾವಗಳೆನಿಸಿದೆ. ಇವುಗಳಿಂದ ಪುಷ್ಟಿ ಹೊಂದಿದ ಭಾವವೇ ರಸವಾಗಿ ಪರಿಣಮಿಸುತ್ತದೆ. ಮಾನವರ ಹೃದಯದಲ್ಲಿ ಕೆಲವು ಭಾವಗಳು ಸ್ಥಿರವಾಗಿ ನೆಲಸಿದ್ದು ಅವು ಗೋಪ್ಯವೂ ಗಂಭೀರವೂ ಆಗಿದ್ದು, ಅವು ವಿಭಾವ ಅನುಭಾವ ವ್ಯಭಿಚಾರಿಭಾವಗಳಿಂದ ವಿಕಾಸಗೊಂಡು ರಸವಾಗಿ ಪರಿಣಮಿಸಿ ಸಹೃದಯರಿಗೆ ಆಸ್ವಾದಿಸಲು ಯೋಗ್ಯವಾಗುತ್ತದೆ. ಮಮ್ಮಟನು ಸ್ತ್ರೀ ಪುರುಷರ ಪರಸ್ಪರ ಪ್ರೇಮದ ಅಭಿವ್ಯಕ್ತಿಯನ್ನು ಮಾತ್ರ 'ಶೃಂಗಾರರಸ' ವೆಂದು ಕರೆದು, ಅದರ ಅಭಿವ್ಯಕ್ತಿಗೆ 'ಭಾವ' ಎಂದು ಹೆಸರು ಕೊಡುತ್ತಾನೆ.[೬೪]

ಶೃಂಗಾರರಸದಲ್ಲಿ ವಿಪ್ರಲಂಭ ಮತ್ತು ಸಂಭೋಗ ಎಂಬ ಎರಡು ಭೇದಗಳಿವೆ. ಪ್ರಧಾನವಾಗಿ ಎರಡೇ ವಿಭಾಗವಾದರೂ ಇದರಲ್ಲಿಯೇ ಅನೇಕ ಉಪವಿಭಾಗವನ್ನೂ ವಿಶ್ವನಾಥನು ವಿವರಿಸಿದ್ದಾನೆ.

ವಿಪ್ರಲಂಬಶೃಂಗಾರದಲ್ಲಿ ರತಿಯು ಸಾಕಷ್ಟು ಪುಷ್ಟಿಯನ್ನು ಹೊಂದದೆ ಇಷ್ಟವಾದ ನಾಯಕ ನಾಯಿಕೆಗೆ ಅನ್ವಯಿಸುವುದಿಲ್ಲವೋ ಅಂತಹ ಕಡೆಯಾದಲ್ಲಿ ವಿಪ್ರಲಂಭ ಶೃಂಗಾರವನ್ನು ಹೇಳಬೇಕಾಗುತ್ತದೆ. ಇದು ಪೂರ್ವರಾಗ, ಮಾನ ಪ್ರವಾಸ, ಕರುಣ ಎಂದು ನಾಲ್ಕು ಬಗೆಯಾಗಿದ್ದು ಅದರಲ್ಲಿ ಪೂರ್ವರಾಗವೆಂದರೆ ಪರಸ್ಪರವಾಗಿ ಕೇಳಿದ್ದ-ರಿಂದಲೊ ಅಥವಾ ನೋಡಿದ್ದರಿಂದಲೋ ಅನುರಾಗ ಬೆಳೆದಿದ್ದು ಅದನ್ನು ಅನುಭವಿಸಲಿಕ್ಕೆ ಆಗದೇ ಇರುವ ಅವಸ್ಥಾವಿಶೇಷವೇ ಪೂರ್ವರಾಗವೆನಿಸಿದೆ. ಇಲ್ಲಿ ದೂತ, ಹೊಗಳುಭಟ್ಟ, ಸಖಿ ಇವರ ಕಡೆಯಿಂದ ನಾಯಕ ನಾಯಿಕೆಯರು ಒಬ್ಬರನ್ನೊಬ್ಬರು ಕೇಳಬಹುದು. ಮತ್ತು ಚಿತ್ರದಲ್ಲಿ ನೇರವಾಗಲಿ, ಇಂದ್ರಜಾಲದ ಮೂಲಕವಾಗಲಿ, ಸ್ವಪ್ನದಲ್ಲಾಗಲೀ ಅವರು ಒಬ್ಬನ್ನೋಬ್ಬರು ನೋಡಬಹುದು. ಈ ಪೂರ್ವರಾಗದಲ್ಲಿ ಅಭಿಲಾಷೆ, ಚಿಂತೆ, ಸ್ಮತಿ, ಗುಣಕಥನ, ಉದ್ವೇಗ, ಸಂದ್ರಲಾಪ, ಉನ್ಮಾದ, ವ್ಯಾಧಿ, ಜಡತೆ, ಮರಣ ಎಂಬ ಹತ್ತು ಅವಸ್ಥೆಗಳು ನಾಯಕ ನಾಯಕಿಯೊಂದಿಗೆ ಕಾಮವನ್ನು ಹುಟ್ಟಿಸುವ ರತಿಯಿಂದ ಸಂಭವಿಸುತ್ತದೆ. ಇಲ್ಲಿ ನಾಯಕ ನಾಯಿಕೆಯರಿಗೆ ಪರಸ್ಪರವಾಗಿ ಸೇರಬೇಕೆಂಬ ಇಚ್ಛೆಯೇ 'ಅಭಿಲಾಷೆ'ವೆನಿಸಿದೆ. ಪರಸ್ಪರವಾಗಿ ಸೇರುವ ಉಪಾಯಗಳನ್ನು ಆಲೋಚಿಸುವುದೇ 'ಚಿಂತೆ' ಉದಾಹರಣೆಗಾಗಿ "ಪ್ರೀತಿ ಎಂಬುದು ಸೂಕ್ಷ್ಮ ರೂಪದಲ್ಲಿ ಹುಟ್ಟಿರುವುದರಿಂದ ಸರಸವಾಗಿ ಬೆಳೆಯಲು ಅನುಕೂಲವಾಗಿದ್ದು ಒಬ್ಬರಿಗೊಬ್ಬರಿಗೆ ಅಭಿಪ್ರಾಯವನ್ನು ಹೊಂದಿಕೊಳ್ಳುವುದರಿಂದ ಹೆಚ್ಚು ವ್ಯಾಪಿಸಿದ್ದು ಸಹಜವಾಗಿಯೆ ಮನೋಹರವಾಗಿರುವ ಕಾಮಿನಿಯ ಆಯಾಯ ಓರೆನೋಟ ಮೊದಲಾದ, ಚೇಷ್ಟೆಗಳು ನನ್ನಲ್ಲಿ ಬೀಳಲಿ. ಇಂತಹ ಬಯಕೆಯಿಂದ ಕಲ್ಪಿಸಿದ ಆ ಚೇಷ್ಟೆಗಳಲ್ಲಿ ಒಂದು ಕ್ಷಣಕಾಲವಾದರೂ

ಹೊರಗಿನ ವ್ಯವಹಾರಗಳನ್ನು ತಡೆಗಟ್ಟಲು ಸಮರ್ಥವೆನಿಸಿ ನಿರಂತರವೂ ಆನಂದದಿಂದ ಕೂಡಿದ ಮನಸ್ಸಿನ ತಲ್ಲೀನತೆಯು ಉಂಟಾಗಬಹುದು”[೬೫]

ಇಲ್ಲಿ ಮಾಲತಿಯನ್ನು ನೇರವಾಗಿ ನೋಡಿದ್ದರಿಂದ ಅನುರಾಗವು ಬೆಳೆದು ಮಾಧವನಿಗೆ ಆಕೆಯ ಮೇಲೆ ಇಚ್ಛೆ ಹುಟ್ಟಿರುವುದಾಗಿ ತಿಳಿಸಿದೆ. “ಮನ್ಮಥನ ಹೆಂಡತಿಯೋ ಏನೋ ಎಂಬಂತಿರುವ ಪ್ರೇಯಸಿಯನ್ನು ಎಂದು ನೋಡುವೆನೋ? ಎಂಬ ಚಿಂತೆಯಲ್ಲಿಯೇ ವ್ಯಾಕುಲಗೊಂಡ ಪ್ರಿಯನಿಗೆ ರಾತ್ರಿ ವೇಳೆ ನಿದ್ರೆಯೇ ಬರುವುದಿಲ್ಲ”, ಇಲ್ಲಿ ಒಬ್ಬ ನಾಯಿಕೆಯನ್ನು ಇಂದ್ರಜಾಲ ಪ್ರಯೋಗದಿಂದ ನೋಡಿ ಅನುರಾಗವನ್ನು ಬೆಳೆಸಿಕೊಂಡ ನಾಯಕನಿಗೆ ಇರುವ ‘ಚಿಂತೆ’ಯ ವಿವರವನ್ನು ಇಲ್ಲಿ ತಿಳಿಸಲಾಗಿದೆ.

ದೂರದಲ್ಲಿದ್ದು ಒಬ್ಬರನ್ನೊಬ್ಬರು ಸ್ಮರಿಸಿಕೊಳ್ಳುವುದೇ ‘ಸ್ಮೃತಿ’ ‘ಮಯಿಸಕಪಟಂ’ ಎಂಬ ಪದ್ಯದಲ್ಲಿ ನಾಯಕ ನಾಯಕಿಯರ ಸ್ಮರಣವನ್ನು ತಿಳಿಸಿದೆ. ಒಬ್ಬ ಗುಣಗಳನ್ನು ಬೇರೊಬ್ಬರ ಬಾಯಿಂದ ಹೇಳುವುದೇ ‘ಗುಣಕಥನ’ ‘ನೇತ್ರೇ ಖಂಜನ ಗಂಜನೇ’ ಎಂಬ ಪದ್ಯದಲ್ಲಿ ನಾಯಕ ನಾಯಿಕೆಯ ಗುಣಕಥನವನ್ನು ಕಾಣಬಹುದಾಗಿದೆ. ಚೇತನ ವ್ಯಕ್ತಿಗಳನ್ನು ಜಡ ವಸ್ತುಗಳಿಂದ ಪ್ರತ್ಯೇಕಿಸಲ್ಲಿಕ್ಕಾಗದಿರುವ ಅವಸ್ಥೆಯೇ ‘ಉನ್ಮಾದ’ವಾಗಿದೆ. “ಮೂರನೆಯ ಜಾವವಷ್ಟೇ ಉಳಿದಿರುವ ರಾತ್ರಿಗಳಲ್ಲಿ ಒಂದು ಕ್ಷಣಕಾಲ ಕಣ್ಣುಮುಚ್ಚಿ ಕೂಡಲೆ ಆಕೆ ಎಚ್ಚರಗೊಳ್ಳುತ್ತಿದ್ದಳು. ಎಲ್ಲೈ ನೀಲಕಂಠನೆ ನನ್ನ ಮಾತನ್ನೂ ಗಮನಿಸದೆ ನೀನು ಎಲ್ಲಿಗೆ ಹೋಗುತ್ತಿರುವೆ ಎಂದು ಎದುರಿಗೆ ಇಲ್ಲದೆ ಇರುವ ಶಿವನ ಕುತ್ತಿಗೆಯಲ್ಲಿ ತೋಳುಗಳನ್ನು ನೀಡಿ ಆಲಂಗಿಸಿಕೊಳ್ಳುತಿದ್ದಳು”.[೬೬] ಇಲ್ಲಿ ಶಿವನಿಲ್ಲದಿದ್ದರೂ ಅವನೊಡನೆ ಪಾರ್ವತಿಯು ಮಾತನಾಡುತ್ತಿದ್ದದನ್ನು ತಿಳಿಸಿದೆ. ಒಬ್ಬರನ್ನೊಬ್ಬರು ಗಮನಿಸದೆ ಮಾತನಾಡುವುದು ‘ಪ್ರಲಾಪ’ವೆನಿಸುತ್ತದೆ. ಮನಸ್ಸು ಆಗಾಗ್ಗೆ ಚಲಿಸುವುದರಿಂದ ಈ ಅವಸ್ಥೆಯು ಉಂಟಾಗುತ್ತದೆ. ದೀರ್ಘ ನಿಶ್ವಾಸಿ, ಶರೀರವೆಲ್ಲವೂ ಕೃಶವಾಗುವುದು ಮತ್ತು ಬೆಳ್ಳಗಾಗುವುದು ಇವೇ ಮೊದಲಾದವು ನಾಯಕನಿಗೂ ನಾಯಿಕೆಗೂ ಅನ್ವಯಿಸುತ್ತವೆ. ದೇಹದ ಇಂದ್ರಿಯಗಳು ನೀಚಕೃತ್ಯಗಳಲ್ಲಿ ತೊಡಗುವುದೆ ‘ಜಡತೆ’.

ಮರಣವನ್ನು ಕಾಮ ವಿಕಾರದ ಒಂದು ಅವಸ್ಥೆ ಎಂದು ಭಾವಿಸಿ ವರ್ಣಿಸಿದರೆ ಆ ವೃತ್ತಾಂತವು ಶೃಂಗಾರ ರಸಕ್ಕೂ ಅವಕಾಶವನ್ನು ಕೊಡದೆ ಕರುಣ ರಸದಲ್ಲಿಯೆ ಕೊನೆಗಾಣುವುದರಿಂದ ಅದು ಶೃಂಗಾರರಸವನ್ನು ಹುಟ್ಟಿಸುವ ಹತ್ತು ಅವಸ್ಥೆಗಳಲ್ಲಿ ಒಂದು ಆಗಲಾರದು. ಆದ್ದರಿಂದಲೇ ಕವಿಗಳು ಮರಣವನ್ನು ಮೂರು ರೀತಿಯಲ್ಲಿ ವರ್ಣಿಸಿದ್ದಾರೆ. ಮರಣವನ್ನು ಸಂಭವಿಸಿತೆಂಬುದಕ್ಕೆ ಬದಲು ಇನ್ನೇನು ಸಂಭವಿಸಿದಂತೆ ಆಯಿತು ಎಂದು ವರ್ಣಿಸುವುದೊಂದುರೀತಿ. ಮನಸ್ಸಿನಲ್ಲಿ ಮರಣವನ್ನು

ಬಯಸುವುದೊಂದು ಎರಡನೇರೀತಿ ಒಬ್ಬನು ಸತ್ತರೂ ಸಹ ಆದಷ್ಟು ಬೇಗನೆ ಮತ್ತೆ ಬದುಕಿಕೊಳ್ಳುವನೆಂದು ವರ್ಣಿಸುವುದು ಮೂರನೆಯ ರೀತಿ[೬೭]. ಹೀಗೆ ಕವಿಗಳು ಮೂರು ರೀತಿಯಲ್ಲಿ ಮರಣವನ್ನು ವರ್ಣಿಸುವುದರಿಂದ ಅದು ಶೃಂಗಾರ ರಸಕ್ಕೆ ಪೂಷಕವಾದ ಹತ್ತು ಅವಸ್ಥೆಗಳಲ್ಲಿ ಒಂದಾಗಲಿಕ್ಕೆ ಅರ್ಹವೆನಿಸಿದೆ.

ವಿಶ್ವನಾಥನು ಹೇಳಿರುವ ಈ ಹತ್ತು ಅವಸ್ಥೆಗಳನ್ನು ಕೆಲವು ಲಾಕ್ಷಣಿಕರು ಬೇರೆ ರೀತಿಯಲ್ಲಿ ಹೇಳಿದ್ದಾರೆ. ನಾಯಕ ನಾಯಿಕೆಯರು ಒಬ್ಬರನ್ನೊಬ್ಬರು ಕಣ್ಣಿನಿಂದ ನೋಡಿ ಸಂತೋಷ ಪಡುವುದು, ಮನಸ್ಸನ್ನು ಪರಸ್ಪರವಾಗಿ ಆಸಕ್ತಿಯನ್ನು ವಹಿಸುವುದು, ಒಬ್ಬರಿಗೊಬ್ಬರು ತಮ್ಮ ಇಷ್ಟವನ್ನು ಪಡೆಯುವುದಾಗಿ ಅಲೋಚಿಸುವುದು, ನಿದ್ರೆಯ ಸುಖವನ್ನು ತೊರೆಯುವುದು, ಶರೀರವು ಕೃಶವಾಗುವುದು, ಭೋಗ್ಯ ವಸ್ತುಗಳನ್ನು ತೊರೆಯುವುದು, ಬುದ್ಧಿವ್ಯತ್ಯಾಸ, ಮೂರ್ಛೆ ಮರಣ ಹೀಗೆ ಹತ್ತು ಬಗೆಯ ಅವಸ್ಥೆಗಳನ್ನು ತಿಳಿಸಿದ್ದಾರೆ.

ವಿಪ್ರಲಂಭದ ನಾಲ್ಕು ಬಗೆಗಳಲ್ಲಿ ಒಂದಾದ ಪೂರ್ವರಾಗವು ನೀಲಿರಾಗ, ಕುಸುಂಭರಾಗ, ಮಜ್ಜಿಷ್ಠಾರಾಗ ಎಂದು ಮೂರು ಬಗೆಯಾಗಿದೆ.

ಹೊರಗಿನ ಜನರಿಗೆ ಕಾಣಿಸಿಕೊಳ್ಳದೆ ಗೂಢವಾಗಿರುವ ಗಾಢಾನುರಾಗವು ಯಾರಿಗೆ ಇರುವುದೊ ಮತ್ತು ಒಮ್ಮೆ ಬಂದದ್ದು ಮತ್ತೆ ಹೋಗುವುದಿಲ್ಲವೋ ಅಂತಹ ಪ್ರೇಮವೇ 'ನೀಲಿರಾಗ'[೬೮]ವೆಂದು ಕರೆಯಲಾಗಿದೆ. ನಾಯಕ ನಾಯಿಕೆಯರಿಗೆ ಇರುವ ಪ್ರೇಮವು ಸ್ಪಷ್ಟವಾಗಿ ಮೊಟ್ಟ ಮೊದಲು ಕಂಡು ಬಂದರೂ ಯಾವುದಾದರೊಂದು ಮನಸ್ತಾಪದ ಸಂದರ್ಭದಲ್ಲಿ ಹಿಂದಿನ ಪ್ರೇಮವು ಬೇಗನೆ ತೊಲಗುವುದು. ಹೀಗೆ ಅವಸ್ಥಿತವಾದ ಅನುರಾಗವನ್ನ 'ಕುಸುಂಭರಾಗ' ಎಂದು ಕರೆಯಲಾಗಿದೆ. ಮೂರನೆಯದಾಗಿ ಯಾವ ನಾಯಕ–ನಾಯಕೆಯರ ಪ್ರೇಮಕ್ಕೆ ಎಷ್ಟೆ ಅಡ್ಡಿ ಬಂದರೂ ಅದು ಹೋಗುವುದಿಲ್ಲವೊ ಆದರೆ ಯಾವ ಪ್ರೇಮ ಹೆಚ್ಚಾಗಿರುವುದೆಂದು ತಿಳಿದುಬರುವುದೋ ಅಂತಹ ಪ್ರೇಮವೇ 'ಮಂಜಿಷ್ಠಾರಾಗ'ವೆಂದು ಕರೆಯಲಾಗಿದೆ.

ವಿಪ್ರಲಂಭ ಪ್ರಭೇದಗಳಲ್ಲಿ ಎರಡನೆಯದಾದ ಮಾನವಿಪ್ರಲಂಭವನ್ನು ವಿವ–ರಿಸಲಾಗಿದೆ. ಮಾನವೆಂದರೆ ಕೋಪ ಎಂಬ ಅರ್ಥವಿದ್ದು. ಇದು ಪ್ರಣಯದಿಂದ ಹುಟ್ಟಿದ ಕ್ರೋಧ, ಅಸೂಯೆಯಿಂದ ಹುಟ್ಟಿದ ಕೋಪ ಎಂದು ಎರಡು ಬಗೆಯಾಗಿದೆ. ಪ್ರೀತಿಯು ನಾಯಕನಾಯಕಿಯರಿಗೆ ಪರಸ್ಪರವಾಗಿ ಉಂಟಾಗಿದ್ದರೂ ಅಪರಾಧ ಮೊದಲಾದ ಕಾರಣವಿಲ್ಲದೆಯೇ ಅವರಿಗೆ ಕೋಪ ಉಂಟಾದರೆ ಅದು ಪ್ರಣಯಮಾನ ಕೋಪವೆನಿಸಿದೆ. ಪ್ರೇಮವು ಯಾವಾಗಲೂ ಸ್ಥಿರವಾಗಿರುವುದಲ್ಲದೆ ವಕ್ರವಾಗಿ ಪ್ರವರ್ತಿಸುವುದೇ ಅದರ ಸ್ವಭಾವವಾಗಿದೆ. ಉದಾಹರಣೆಗೆ "ಸುಳ್ಳಾಗಿ ನಿದ್ರೆ ಮಾಡುವೆನೆಂದು ನಟಿಸುತ್ತ ಕಣ್ಣನ್ನು ಮುಚ್ಚಿಕೊಂಡು ಇರುವ ನಾಯಕನೆ, ನಿನ್ನ

ಕಪೋಲದಲ್ಲಿ ನಾನು ಮುತ್ತಿಟ್ಟಾಗ ನಿನಗೆ ಮೈಯೆಲ್ಲಾ ರೋಮಾಂಚವುಂಟಾಯಿತು ಇದರಿಂದ ನೀನು ನೀಜವಾಗಿಯೂ ನಿದ್ರೆ ಮಾಡುತ್ತಿಲ್ಲ. ಆದ್ದರಿಂದ ಹಾಸಿಗೆಯ ಮೇಲೆ ಮಲಗಲಿಕ್ಕೆ ನನಗೂ ಸ್ವಲ್ಪ ಅವಕಾಶವನ್ನು ಕೂಡು ತಡವಾಯಿತೆಂದು ಕೋಪಿಸಬೇಡ. ಇನ್ನು ತಡಮಾಡದೇ ಬೇಗನೆ ಬರುವೆನು". ಇದು ನಾಯಕನಲ್ಲಿ ನಾಯಕಿಯ ಬಗ್ಗೆ ಇದ್ದ 'ಪ್ರಣಯಕೋಪ'ವೆನಿಸಿದೆ.

ನಾಯಕಿಯಲ್ಲಿ ನಾಯಕನ ಬಗ್ಗೆ ಹುಟ್ಟುವ ಕೋಪಕ್ಕೆ ಹಾಗೂ ನಾಯಕನಿಗೆ ನಾಯಕಿಯಲ್ಲೂ ನಾಯಿಕಿಗೆ ನಾಯಕನಲ್ಲೂ ಪ್ರಣಯ ಕೋಪಕ್ಕೆ ಉದಾಹರಣೆಯನ್ನೂ ಕೊಡಬಹುದಾಗಿದೆ. ಅಸೂಯೆಯಿಂದ ಹುಟ್ಟುವ ಪ್ರಣಯ ಮಾನವು ಪ್ರತ್ಯಕ್ಷ ಗೋಚರವಾದ ಅನುಮಿತಿಗೆ ವಿಷಯವಾದರೆ ಮೂರು ಬಗೆಯಾಗುತ್ತದೆ. ಪತಿಯು ಅನ್ಯಾಸಕ್ತನಾಗಿರುವುದು, ನೋಡಿದರೂ ಅಥವಾ ಗುರುತುಗಳಿಂದ ಊಹಿಸಿದರೂ, ಕಿವಿಯಿಂದ ಕೇಳಿದರೂ ಸಹ ಮೂರು ಬಗೆಯಾಗಿದೆ. ಅನುಮಿತಿಯಿಂದ ಹುಟ್ಟುವ ಈರ್ಷ್ಯಾಮಾನವು ಮತ್ತೆ ಮೂರು ಬಗೆಯಾಗಿದೆ. ಕನವರಿಕೆಯಿಂದ ಭೋಗಚಿಹ್ನೆಯಿಂದ, ಪತಿಗಿಂತ ಬೇರೆ ಹೆಸರನ್ನೂ ಹೇಳುವುದರಿಂದಲೂ ಪ್ರಣಯ ಕೋಪವನ್ನು ಊಹಿಸಿಕೊಳ್ಳಬಹುದು.

**ಸಾಮಭೇದೋ?ಥ ದಾನಂ ಚ ನುತ್ಯುಪೇಕ್ಷೇ ರಸಾಂತರಮ್ ।**
**ತದ್ಭಂಗಾಯ ಪತಿಃ ಕುರ್ಯಾತ್ ಷಡು ಪಾಯಾತಿನಿ ಕ್ರಮಾತ್**[೭೦] **॥**

ಈ ರೀತಿ ನಾಯಕ ನಾಯಿಕಿಯರಿಗೆ ಹುಟ್ಟುವ ಪ್ರಣಯಕೋಪವು ಶಮನವಾಗಲು ವಿಶ್ವನಾಥನು ಆರು ಮಾರ್ಗಗಳನ್ನು ಹೇಳಿದ್ದಾನೆ. ಸಾಮ, ಭೇದ, ದಾನ, ನಮಸ್ಕಾರ, ಔದಾಸೀನ್ಯ, ರಸಾಂತರ ಈ ಆರು ಉಪಾಯಗಳಿಂದ ಪತಿಯು ನಾಯಕಿಂ–ಯ ಪ್ರಣಯ ಕೋಪವನ್ನು ತೊಲಗಿಸಲು ಪ್ರಯತ್ನ ಮಾಡುತ್ತಾನೆ.[೭೧] ನಾಯಿಕೆಯ ಮನಸ್ಸಿಗೆ ಹಿಡಿಸುವಂತೆ ಮಾಡುವುದೇ 'ಸಾಮ', ಅವಳ ಸಖಿಯನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದೇ 'ಭೇದ', ಯಾವುದೋ ನೆಪದಿಂದ ಪ್ರಿಯೆಗೆ ಒಡವೆ ವಸ್ತ್ರಗಳನ್ನು ತಂದು ಕೊಡುವುದೇ 'ದಾನ', ಆಕೆಯ ಪಾದಗಳ ಮೇಲೆ ಬೀಳುವುದೇ 'ನಮಸ್ಕಾರ' ಸಾಮ ಮೊದಲಾದ ಉಪಾಯಗಳೆಲ್ಲವೂ ಮುಗಿದ ಮೇಲೆ ಅವುಗಳನ್ನು ತಿರಸ್ಕ–ರಿಸುವುದೆ 'ಔದಾಸೀನ್ಯ', ಹಾಗೆಯೇ ವೇಗ, ಭಯ, ಅಪರಾಧ, ಅನಿಷ್ಟ ಪ್ರದರ್ಶನ ಮೊದಲಾದವುಗಳಿಂದ ಕೋಪವನ್ನು ತೊಲಗಿಸುವುದೇ 'ರಸಾಂತರ'ವೆನಿಸಿದೆ.

**ಪ್ರವಾಸೋ ಭಿನ್ನದೇಶಿತ್ವಂ ಕಾರ್ಯಚ್ಛಾಪಾಚ್ಚ ಸಂಭ್ರಮಾತ್ ।**
**ತತ್ತಾಂಗಚೇಲಮಾಲಿನ್ಯಮೇಕವೇಣಿಧರಂ ಶಿರಃ ॥**

[ಸಾಹಿತ್ಯದರ್ಪಣ, ३ನೆ ಪರಿಚ್ಛೇಧ]

ನಾಯಕ ನಾಯಿಕೆಯರಲ್ಲಿ ಯಾರಾದರೊಬ್ಬರು ಕರ್ತವ್ಯ ಪಾಲನೆಗಾಗಿಯೇ ಅಥ-ವಾ ಶಾಪದಿಂದಲೋ, ಯಾವುದಾದರೂ ಕಾರಣದಿಂದುಂಟಾದ ಸಂಭ್ರಮದಿಂದಲೋ ಪರದೇಶಕ್ಕೆ ಹೋಗಿರುವುದೇ 'ಪ್ರವಾಸ ವಿಪ್ರಲಂಭ' ಎಂಬ ವಿಪ್ರಲಂಭ ಶೃಂಗಾರದ ಮೂರನೇ ಪ್ರಬೇಧವಾಗಿದೆ. ಉದಾಹರಣೆಗಾಗಿ.

**ಅಂಗೇಷ್ವ ಸೌಷ್ಟವಂ ತಾಪಃ ಪಾಂಡುತಾ ಕೃಶತಾ ರುಚಿಃ ।**
**ಅಧೃತಿಃ ಸ್ಯಾಪನಾಲಂಬಸ್ತನ್ಮಯೋನ್ಮಾದ ಮೂರ್ಛನಾಃ[೭೨] ॥**

"ಆ ಕಾಲದಲ್ಲಿ ನಾಯಕ ನಾಯಿಕೆಯರ ಹಸ್ತ ಪಾದ ಮೊದಲಾದ ಅವಯವಗಳು ಬಟ್ಟೆಯೂ ಕೊಳೆಯಾಗಿರುವುದು, ಕೂದಲಿಗೆ ಎಣ್ಣೆಯಿಲ್ಲದೆ ತಲೆ ಒಣಗಿರುತ್ತದೆ. ಅವರು ನಿರಾಶರಾಗಿ ನಿಟ್ಟುಸಿರುಬಿಡುತ್ತಲೂ, ಅಳುತ್ತಲೂ ಇರಬೇಕಾಗುವುದು". ಇದಿಷ್ಟೆ ಅಲ್ಲದೇ ಇನ್ನು ಕೆಲವು ದುರಾವಸ್ಥೆಗಳು ಸಂಭವಿಸುತ್ತವೆ. ಅವಯವಗಳಲ್ಲಿ ಸ್ವಚ್ಛತೆ ಇಲ್ಲದಿರುವುದು, ಸಂತಾಪ, ಕೃಶತೆ, ಆಹಾರದಲ್ಲಿ ರುಚಿ ಇಲ್ಲದಿರುವಿಕೆ, ಧೈರ್ಯವಿಲ್ಲದಸ್ಥಿತಿ, ಮನಶ್ಶೂನ್ಯಸ್ಥಿತಿ, ಒಳಗೆ ಹೊರಗೆ ಎಲ್ಲೆಡೆಯಲ್ಲೂ ತನ್ನ ಇಷ್ಟಾಥ-ರ್ವನ್ನು ಬಯಸುವುದು ಉನ್ಮಾದ, ಮೂರ್ಛೆ ಮರಣ ಇವು ಹತ್ತು ಕಾಮವಿಕಾರಗಳು ಸಂಭವಿಸುತ್ತದೆ. ಇವಿಷ್ಟ ಪ್ರವಾಸ ವಿಪ್ರಲಂಭದ ಸ್ವರೂಪವಾಗಿದ್ದು ಇದು ಯಾವುದೋ ಒಂದು ಕಾರ್ಯ ನಿರ್ವಹಿಸಲಿಕ್ಕಾಗಿ ಸಂಭವಿಸುವ ಪ್ರವಾಸ, ಮುಂದೆ ಆಗುವಂತಹುದು, ಈಗ ಸಂಭವಿಸುವಂತಹುದು ಎಂದು ಮೂರು ಬಗೆಯಾಗಿದೆ.

**ಯೂನೋರೇಕತರಸ್ಮಿನ್ ಗತವತಿ ಲೋಕಾಂತರಂ ಪುನರ್ಲಭ್ಯೇ ।**
**ವಿಮನಾಯತೇ ಯದೈಕಸ್ತಿದಾ ಭವೇತ್ಕೈರುಣವಿಪುಲಂಭಾಖ್ಯಃ [೭೩]॥**

ಯುವಕ ಯುವತಿ ಇವರಲ್ಲಿ ಯಾವುದರೊಬ್ಬರು ಪರದೇಶಕ್ಕೆ ಹೋಗಿ ಮತ್ತೆ ಹಿಂತಿರುಗಿಬಂದು ಸೇರುವ ಸಂಭವವಿದ್ದರೆ ಅವರಲ್ಲಿ ಒಬ್ಬರು ದುಃಖದಿಂದ ವ್ಯಥ-ಪಡುತ್ತಿರುವಾಗ ಶೋಕದಿಂದ ಕೂಡಿದ ರತಿಯೇ ಸ್ಥಾಯಿಎನಿಸಿದ್ದ ಕಾರಣ ವಿಪ್ರಲಂಭ ಶೃಂಗಾರವಾಗಿ ಪರಿಣಮಿಸುತ್ತದೆ. ಸತ್ತಮೇಲೆ ಮತ್ತೆ ಸೇರಬೇಕೆಂಬ ಇಚ್ಛೆಯಿದ್ದರೆ ಅದನ್ನು 'ಕರುಣವಿಪ್ರಲಂಭ' ಎಂದು ವಿಪ್ರಲಂಭ ಶೃಂಗಾರದ ನಾಲ್ಕನೆಯ ಪ್ರಭೇದವಾಗಿದೆ. ಉದಾಹರಣೆಗೆ ಪುಂಡರೀಕ ಮಹಶ್ವೇತಯರ ವೃತ್ತಾಂತದಲ್ಲಿ ಕಾಣಬಹುದಾಗಿದೆ.[೭೪]

**ದರ್ಶನಸ್ಪರ್ಶನಾದೀನಿ ನಿಷೇವೇತೇ ವಿಲಾಸಿಸೌ ।**
**ಯಾತ್ವಾನುರಕ್ತಾವನ್ಯೋನ್ಯಂ ಸಂಭೋಗೋಽಯಮದಾಹೃತಃ[೭೫] ॥**

ಸಂಭೋಗ ಶೃಂಗಾರದಲ್ಲಿ ಪರಸ್ಪರ ದರ್ಶನ, ಸಲ್ಲಾಪ ಸಮಾಗಮ ಮೊದಲಾದ ಅನುಭವವು ಸಂಭೋಗ ಶೃಂಗಾರವಾಗಿದೆ. ಇದು ಶೃಂಗಾರ ರಸದ ಪ್ರಧಾನ ಭೇದವಾದ ಎರಡನೆ ಭೇದವಾಗಿದೆ. ಇಲ್ಲಿ ದರ್ಶನ ಸ್ಪರ್ಶನಗಳಿರುವ ಪ್ರಯುಕ್ತ ವಿಪ್ರಲಂಭಕ್ಕಿಂತ ಬೇರೆ ಎನಿಸಿದೆ. ಪೂರ್ವರಾಗ ಮಾನಗಳಲ್ಲಿ ಕೆಲವು ವೇಳೆ ದರ್ಶನವಿದ್ದರೂ ಅಲ್ಲಿ

ಭೋಗವಿಲ್ಲದ್ದರಿಂದ ಇದು ಅದಕ್ಕಿಂತ ಬೇರೆ ಎನಿಸಿದೆ. 'ಅನುರಕ್ತಾ' ಎಂದು ಹೇಳಿದ್ದ-ರಿಂದ ಉದಾಶೀನರಾಗಿರುವ ಸ್ತ್ರೀ ಪುರುಷರಿಗೆ ಪರಸ್ಪರ ದರ್ಶನವಿದ್ದರೂ ರತಿಯು ವಿಕಾಸವಾಗುವುದಿಲ್ಲವೆಂಬುದು ತಿಳಿದುಬರುತ್ತದೆ. 'ಅನ್ಯೋನ್ಯಂ' ಎಂದು ಹೇಳಿದ್ದರಿಂದ ಇಬ್ಬರಲ್ಲಿ ಒಂದು ಕಡೆ ಅನುರಾಗವಿದ್ದರೂ ಶೃಂಗಾರ ರಸಕ್ಕೆ ಅವಕಾಶವಿಲ್ಲವೆಂಬುದು ತಿಳಿಯುತ್ತದೆ. ಕಾರಿಕೆಯಲ್ಲಿ ಆದಿ ಶಬ್ದದಿಂದ ಅದರಪಾನ, ಚುಂಬನ ಮೊದಲಾದವನ್ನು ಗ್ರಹಿಸಲಾಗಿದೆ. ಸಂಭೋಗ ಶೃಂಗಾರದ ನಿರೂಪಣೆಯಲ್ಲಿ ಅಶ್ಲೀಲತೆಯ ದೋಷ ಸಂಘಟಸಿದಂತೆ ಕವಿಯು ಎಚ್ಚರಿಕೆಯಿಂದ ಇರಬೇಕಾದದ್ದು ಅವಶ್ಯಕವಾಗಿದೆ. ಉದಾಹರಣೆಯಾಗಿ

**ಬರಿಯ ಶಯ್ಯಾಗೃಹದ ಸುತ್ತಲ್ಲೂ ನೋಡಿ**
**ಮೆಲ್ಲನೆ ಶಯನದಿಂದಿನಿಸು ಮೇಲಕ್ಕೆದ್ದು**
**ನಿದ್ದೆಯನ್ನು ನಟಿಸಿ ಮಲಗಿದ್ದ ಹೃದಯೇಶ್ವರನ**
**ವದನದಲ್ಲಿ ನಿಡುಹೊತ್ತು ನೋಟವಿರಿಸಿ**
**ಬಳಿಕ ನಿಶ್ಯಂಕೆಯಲ್ಲಿ ಮನಸಾರ ಮುತ್ತಿಡಲು**
**ಕೆನ್ನೆಯಲ್ಲಿ ಪುಳಕವೆದ್ದುದನು ಕಂಡು**
**ನಾಚಿಮೊಗಬಾಗಿಸಿದ ಬಾಲೆಯನ್ನು ನಗುನಗುತ**
**ಪ್ರಿಯನು ನಿಲುವಿಲ್ಲದೆಯೇ ಚುಂಬಿಸಿದನು.** [೭೬]

ಇಲ್ಲಿ ಚುಂಬನ ವೃತ್ತಾಂತವು ಮುಖ್ಯವಾಗಿ ಬಂದಿದ್ದರೂ ಅಶ್ಲೀಲತೆಯ ಎಲ್ಲೆಯನ್ನು ಕವಿ ಸೋಕಿಲ್ಲ. ಈ ಚಿಕ್ಕ ಪದ್ಯದಲ್ಲಿ ಶಂಕೆ, ಹರ್ಷ, ನಾಚಿಕೆ, ಮೊದಲಾದ ಅನೇಕ ಸಂಚಾರಿ ಭಾವಗಳು ಹೃದ್ಯವಾಗಿ ಬಂದು ರಸಕ್ಕೆ ಪುಷ್ಟಿಕೊಟ್ಟಿದೆ. ಸಂಭೋಗ ಶೃಂಗಾರದಲ್ಲಿ ಆರು ಋತುಗಳು, ಜಲಕ್ರೀಡೆ, ವನವಿಹಾರ, ಪ್ರಾತಃಕಾಲ, ಮಧುಪಾನ, ರಾತ್ರಿ, ಮೊದಲಾದವು ಚಂದನ, ಲೇಪನ, ಬಟ್ಟೆಗಳು, ಒಡವೆಗಳು ಇವುಗಳ ಅಲಂಕರಣ ಇವೆಲ್ಲವೂ ಉದ್ದೀಪಕವೆನಿಸಿದೆ. ಇವುಗಳ ಜೊತೆಯಲ್ಲಿ ವಿಭಾವ ಮೊದಲಾದವೆಲ್ಲವೂ ಶುಚಿಯೂ ಪವಿತ್ರವೂ ಆಗಿರಬೇಕೆಂದು ವಿಶ್ವನಾಥನು ಸಹ ತಿಳಿಸಿದ್ದಾನೆ. "ಯತ್ ಕಿಂಚಿಲ್ಲೋಕೇ ಶುಚಿಮೇಧ್ಯಮುಜ್ವಲಂ ದರ್ಶನೀಯಂ ವಾ ತತ್ಸರ್ವಂ ಶೃಂಗಾರೇ ಉಪಯುಜ್ಯತೇ", "ಲೋಕದಲ್ಲಿ ಯಾವುದು ಶುಚಿಯೂ ಪ್ರಕಾಶಮಾನವೂ ಆಗಿದೆಯೋ ಅದೆಲ್ಲವೂ ಶೃಂಗಾರದಲ್ಲಿ ಉಪಯೋಗವಾಗುತ್ತದೆ" ಎಂದು ಭರತನು ಹೇಳಿದ್ದಾನೆ.[೭೭]

ಸಂಭೋಗ ಶೃಂಗಾರದಲ್ಲಿ ಚುಂಬನ ಆಲಿಂಗನ ಮೊದಲಾದ ಅನೇಕ ಬಗೆಗಳಿರುವುದ ರಿಂದ ಅವನ್ನೆಲ್ಲವನ್ನು ಏಣಿಸಲು ಸಾಧ್ಯವಾಗದರಿಂದ ಅನೇಕ ಲಾಕ್ಷಣಿಕರು ಸಂಭೋಗ ಶೃಂಗಾರ ಒಂದೇ ಬಗೆಯೆಂದು ಹೇಳಿದ್ದಾರೆ. ಆದರೆ,

ವಿಶ್ವನಾಥನು ವಿಪ್ರಲಂಭ ಶೃಂಗಾರಕ್ಕೆ ನಾಲ್ಕುರೀತಿಯ ಭೇದಗಳನ್ನು ಹೇಳಿರುವುದ-ರಿಂದ ಸಂಭೋಗ ಶೃಂಗಾರವು ವಿಪ್ರಲಂಭಶೃಂಗಾರವಿಲ್ಲದೆ ಪುಷ್ಟಿಯನ್ನು ಹೊಂದುವುದಿಲ್ಲವಾದರಿಂದ ಇಲ್ಲಿಯೂ ಸಹ ನಾಲ್ಕು ರೀತಿಯ ಪೂರ್ವರಾಗ[೮೬] ಮಾನ, ಪ್ರವಾಸ, ಕರುಣ ಸಂಭೋಗ ಶೃಂಗಾರವನ್ನು ತಿಳಿಸಲಾಗಿದೆ.

## ೨. ಹಾಸ್ಯರಸ

> **ವಿಕೃತಾಕಾರಗ್ವೇಷಚೇಷ್ಟಾದೇಃ ಕುಹಕಾದ್ಭವೇತ್ ।**
> **ಹಾಸ್ಯೋ ಹಾನ ಸ್ಥಾಯಿಭಾವಃ ಶ್ವೇತಃ ಪ್ರಮಥ ದೈವತಃ[೮೭] ॥**

ಸ್ವಾಭಾವಿಕ ಸ್ಥಿತಿಗಿಂತಲೂ ಬೇರೆಯಾದ ಆಕಾರ ಮಾತು, ವೇಗ, ಚೇಷ್ಟೆ, ಗುರುತು ಇಂತಹವುಗಳಿಂದ ಕುತೂಹಲವನ್ನು ಹುಟ್ಟಿಸುವ ಜನರಿಂದ 'ಹಾಸ್ಯರಸ'ವು ಹೊರ ಹೊಮ್ಮುತ್ತದೆ. ಇದು ಹಾಸವೆಂಬ ಸ್ಥಾಯಿಭಾವದಿಂದ ವಿಕಾಸಗೊಂಡು ಸಾಮಾಜಿಕರಿಗೆ ಅನುಭವ ಗೋಚರವಾಗುತ್ತದೆ. ಇದಕ್ಕೆ ಶ್ವೇತವರ್ಣವಿದ್ದು, ಈಶ್ವರನ ಅಂತರಂಗ ಭಕ್ತರೆನಿಸಿದ ಪ್ರಮಥರೇ ಇದಕ್ಕೆ ಅಧಿದೇವತೆಗಳೆನಿಸಿದ್ದಾರೆ. ವಿಲಕ್ಷಣವಾದ ಆಕಾರವಿದ್ದು ಮಾತು ಮತ್ತು ಚೇಷ್ಟೆ ಇವೂ ಸಹ ಸಹಜಸ್ಥಿತಿಗಿಂತ ಬೇರೆಯಾಗಿದ್ದರೆ ಅಂತವನನ್ನು ನೋಡಿ ಜನರು ನಗುವರು, ಇಂತಹ ವ್ಯಕ್ತಿಯೇ ಹಾಸ್ಯರಸಕ್ಕೆ ಅಲಂಬನ ವಿಭಾವವೂ, ಅವನ ಚೇಷ್ಟೆಯೇ ಉದ್ದೀಪನ ವಿಭಾವ, ಕಣ್ಣು ಮುಚ್ಚುವುದು, ಮುಖದಲ್ಲಿ ಮಂದಹಾಸ, ಮುಖವನ್ನು ಮುಚ್ಚಿಕೊಳ್ಳುವುದು. ಇವು ಅನುಭಾವಗಳು, ನಿದ್ರೆ, ಅಲಸ್ಯ, ತನ್ನ ಆಕಾರವನ್ನು ಮುಚ್ಚಿಕೊಳ್ಳುವುದು ಶ್ರಮ ಇವು ಹಾಸ್ಯರಸದಲ್ಲಿ ವ್ಯಭಿಚಾರಿಭಾವಗಳಾಗಿವೆ.

ಭರತನು ಹಾಸ್ಯರಸವನ್ನು 'ಶೃಂಗಾರದ ಅನುಕರಣವೇ ಹಾಸ್ಯ[೮೮] ಪ್ರಧಾನವಾದ ನಾಟಕಗಳಲ್ಲಿ ಹಾಸ್ಯ ಸಹಜವಾಗಿಯೇ ಬರುವುದರಿಂದ ಮತ್ತು ವಿದೂಷಕಾದಿಗಳು ಇದಕ್ಕೆ ಕಾರಣರಾಗುವುದರಿಂದ ಭರತನು ಈ ಅಭಿಪ್ರಾಯಕ್ಕೆ ಬಂದಿದ್ದಾನೆ. ಆದರೆ ವಾಸ್ತವವಾಗಿ ಹಾಸ್ಯ ಯಾವಾಗಲೂ ಶೃಂಗಾರದ ಅನುಕರಣೆಯಾಗಿಯೇ ಬರಬೇಕಾಗಿಲ್ಲ ಎಂಬುದನ್ನು ಅಭಿನವಗುಪ್ತನು ತನ್ನ ವ್ಯಾಖ್ಯಾನದಿಂದ ಸ್ಪಷ್ಟಪಡಿಸಿದ್ದಾನೆ. ಅನೌಚಿತ್ಯವೇ ಹಾಸ್ಯದ ಮೂಲ. "ಅನೌಚಿತ್ಯ ಪ್ರವೃತ್ತಿಯಿಂದ ಉಟಾಂಗತಕ್ಕದ್ದೇ ಹಾಸ್ಯದ ವಿಭಾವ. ಈ ಅನೌಚಿತ್ಯವು ಎಲ್ಲಾ ರಸಗಳ ವಿಭಾವನುಭಾವಾದಿಗಳಲ್ಲೂ ಒದಗುವುದು ಸಾಧ್ಯ. ಆದ್ದರಿಂದ ಹಾಸ್ಯಕ್ಕೆ ಎಲ್ಲಾ ರಸಗಳು ವಿಷಯವಾಗಬಹುದು[೮೯] ಈ ಅನೌಚಿತ್ಯದ ಮಾತು ಭರತನು ನೇರವಾಗಿ ಹೇಳದಿದ್ದರೂ ಆತ ಹೇಳುವ ವಿಕಾರವಾದ ವೇಷಾಲಂಕಾರಗಳು, ನಾಚಿಕೆಯಿಲ್ಲದ ವರ್ತನೆ, ವಿಷಯಚಾಪಲ್ಯ, ಕೆಟ್ಟ ಮಾತು, ಅಂಗವೈಕಲ್ಯ ಈ ಮೊದಲಾದ ವಿಭಾವಗಳಿಂದ ಹುಟ್ಟುತ್ತವೆಂಬುದು ಇಲ್ಲಿ ಅನುಚಿತವಾದ ವರ್ತನೆಯೇ ಅನೌಚಿತ್ಯವೇ ಇದರ ಜೀವಾಳವೆಂಬುದನ್ನು ಇದು ಸಮರ್ಥಿಸುತ್ತದೆ. [೯೦]

ವಿಶ್ವನಾಥನು ಹಾಸ್ಯದಲ್ಲಿ ಆರು ಭೇದಗಳನ್ನು ತಿಳಿಸಿದ್ದಾನೆ.[೮೩] ಉತ್ತಮ ಪ್ರಕೃತಿಯವರಿಗೆ ಸ್ಮಿತಹಸಿತ ಎರಡೂ ಅನ್ವಹಿಸುತ್ತದೆ. ಮಧ್ಯಮ ವರ್ಗದವರಿಗೆ ವಿಹಸಿತ, ಅವಹಸಿತ ಈ ಎರಡೂ ಬಗೆಯ ಹಾಸ್ಯಗಳು ಅನ್ವಹಿಸುತ್ತದೆ. ನೀಚ–ರಿಗೆ ಅಪಹಸಿತ, ಅತಿಹಸಿತ ಇವು ಹೊಂದುತ್ತದೆ. ಸ್ವಲ್ಪವೇ ನಗುತ್ತಲೇ ಕಣ್ಣುಗಳನ್ನು ವಿಸ್ತಾರಗೊಳಿಸುವುದು ಸ್ಮಿತ, ಹಲ್ಲುಗಳು ಕೊಂಚವೇ ಹೊರಗೆ ಕಾಣುವಂತೆ ನಗುವುದು ಹಸಿತ, ಶುಶ್ರಾವ್ಯವಾದ ಧ್ವನಿಯಿಂದ ನಗುವುದು ವಿಹಸಿತ, ಹಗಲು ತಲೆಗಳನ್ನು ಅಳ್ಳಾಡಿಸುತ್ತಾ ನಗುವುದು ಅವಹಸಿತ, ಕಣ್ಣೀರನ್ನು ಸುರಿಸುತ್ತಾ ಹಾಸ್ಯ ಮಾಡುವುದು ಅವಹಸಿತ, ಅವಯವಗಳನ್ನು ಅಳ್ಳಾಡಿಸುತ್ತಾ ಹಾಸ್ಯ ಮಾಡುವುದು ಅತಿಹಸಿತವಾಗಿದೆ. ಹಾಸ್ಯರಸಕ್ಕೆ ಉದಾಹರಣೆಯಾಗಿ[೮೪]

**ಎಂದಡುಬ್ಬರಿಸಿದನು ತಾ ಕಲಿ**
**ಯೆಂದು ಬಗೆದನು ಮೀಸೆಯನು ಬೆರಳಿಂದ**
**ತಿರುಹುತ ಮುಗುಳುನಗೆ ಹರುಷದಲ್ಲಿ ಮೈಮರೆದ**
**ಸಂದಣಿಸಿ ರೋಮಂಚ ಕೆಲಬಲ**
**ದಿಂದು ಮುಖಿಯರ ನೋಡಿದನು ನೆಲ**
**ವಿಂದ ನುಡಿದನು ತನ್ನ ಪೌರುಷತನದ ಪರಿಣತಿಯ**

ಮುಂದೆ ಆತ ಹೇಳುವ ಆ 'ಪೌರುಷತನದ ಪರಿಣತಿಯ ಒಂದೊಂದು ಮಾತು ಹಾಸ್ಯರಸದ ಚಿಲುಮೆಗಳಾಗಿವೆ.

**೩. ಕರುಣರಸ**

**ಇಷ್ಟನಾಶಾದನಿಷ್ಟಾಪ್ತೇಃ ಕರುಣಾಖ್ಯೋ ರಸೋ ಭವೇತ್ ।**
**ದೀರೈಃ ಕಪೋತ ವರ್ಣೋಽಯಂ ಕಥೀತೋ ಯಮದೈವತಃ ॥**

ಪುತ್ರ, ಧನ ಮೊದಲಾದ ಇಷ್ಟ ವಸ್ತುಗಳ ನಾಶದಿಂದಲೂ ಅನಿಷ್ಟ ವಸ್ತುಗಳು ಆಕ್ರಮಿಸುವುದರಿಂದ ಕರುಣ ರಸವು ನಮಗೆ ಆಸ್ವಾದ್ಯವಾಗುತ್ತದೆ. ಇದಕ್ಕೆ ಕಪೋತದ ಬಣ್ಣ ಅಂದರೆ ಮಲೀನ ವರ್ಣವಿದ್ದು ಯಮನೆ ಅಧಿದೇವತೆ ಎನಿಸಿರುವನು. ಯಮನಿಂದಲೇ ಶೋಕವು. ಹುಟ್ಟುವುದರಿಂದ ಯಮನೆ ಅಧಿದೇವತೆ ಆಗಿದ್ದಾನೆ. ಶೋಕವು ಕರುಣರಸಕ್ಕೆ ಸ್ಥಾಯಿಭಾವವಾಗಿದೆ. ಬಂಧುಗಳು ನಷ್ಟವಾಗಿ ಶೋಚನೀಯ ಸ್ಥಿತಿಯಲ್ಲಿರುವ ವ್ಯಕ್ತಿಯೇ ಇಲ್ಲಿ ಅವಲಂಬನ, ಅವನಿಗೆ ಹೆಂಡತಿ ಮಕ್ಕಳೆಲ್ಲರೂ ತೊಲಗುವುದೇ ಉದ್ದೀಪನ. ಅವನು ಅದೃಷ್ಟವನ್ನು ನಿಂದಿಸುವುದು. ಅಳುವುದು, ನೆಲದ ಮೇಲೆ ಬೀಳುವುದು ಇವೆಲ್ಲವೂ ಅನುಭಾವಗಳಾಗಿವೆ. ಮುಖದಲ್ಲಿ ಬಣ್ಣ ಬದಲಾಯಿಸುವುದು ಸ್ತಂಭ ಉಚ್ಛ್ವಾಸ, ವಿಷಾದ, ಪ್ರಲಾಪ, ನಿರ್ವೇದ, ಮೋಹ, ಅಪಸ್ಮಾರ, ವ್ಯಾದಿ, ಗ್ಲಾನಿ, ಸ್ಮೃತಿ, ಶ್ರಮ, ಜಡತೆ, ಉನ್ಮಾದ, ಚಿಂತೆ ಇವೆಲ್ಲವೂ ವ್ಯಭಿಚಾರಿ ಭಾವವಾಗಿದೆ.

ಇಲ್ಲಿ ಕರುಣವೇ ಬೇರೆ ಕರುಣ ರಸವೇ ಬೇರೆ ಕರುಣೆ ಎಂದರೆ ಇನ್ನೊಬ್ಬ-ರಿಗಾಗಿ ಶೋಕ ಬಂದಾಗ ತೋರಿಸುವ ದಯೆ, ಮರುಕ, ಇದನ್ನು ರಸವೆಂದು ಶಂಕುಕನೇ ಭ್ರಮಿಸಿದ್ದಾನೆ.[೮೫] ವಿಪ್ರಲಂಭವು 'ಸಾಪೇಕ್ಷಭಾವ'ವೆಂದು ಕರುಣವು 'ನಿರಪೇಕ್ಷಭಾವ'ವೆಂದು ಭರತನು ನಿರೂಪಿಸಿದ್ದಾನೆ.[೮೬] ಆದ್ದರಿಂದ ಇಲ್ಲಿ 'ನಿಕ್ಷೇಪ' ಎಂದರೆ ಅವಲಂಬನ ಸಮೇತವಾದದ್ದು ಪುನಃ ಸಮಾಗಮದ ಪ್ರತ್ಯಾಶೆಯುಳ್ಳದ್ದು 'ನಿರಪೇಕ್ಷ' ಎಂದರೆ ಅವಲಂಬನ ರಹಿತವಾದದ್ದು ಇಲ್ಲಿ ವಿಪ್ರಲಂಭಕ್ಕೂ ಕರುಣೆಗೂ ಇರುವ ಗೆರೆಯನ್ನು ಸೂಕ್ಷ್ಮವಾಗಿ ಎಳೆದಿದ್ದಾರೆ. ಈ ವಿಷಯವಾಗಿ ಲಾಕ್ಷಣಿಕರಲ್ಲೇ ಭಿನ್ನಾಭಿಪ್ರಾಯವಿದೆ. 'ರಘುವಂಶದಲ್ಲಿ[೮೭] ಇಂದುಮತಿಯ ಮರಣದಿಂದ ಅಜನಲ್ಲಿ ಕರುಣವೇ ಸರಿ. ಕಾದಂಬರಿಯಲ್ಲಾದರೆ ಮೊದಲು ಕರುಣ, ಆಕಾಶವಾಣಿ ನುಡಿದ ಬಳಿಕ ಪ್ರವಾಸ ಶೃಂಗಾರ', ಎಂಬುದು ಧನಿಕನ ಅಭಿಪ್ರಾಯ.[೮೮] "ಸ್ವಲ್ಪ ಕಾಲದಲ್ಲಿಯೇ ಹಿಂದಿರುಗುವಂತಿದ್ದರೆ ಮರಣದ ಪ್ರವೇಶವು ಶೃಂಗಾರಕ್ಕೆ ಅತ್ಯಂತ ವಿರೋಧಿಯಾಗಲಾರದು. ಧೀರ್ಘ ಕಾಲವೇನಾದರೂ ಹಿಡಿಯುವು ದಾದರೆ ಶೃಂಗಾರದ ಪ್ರವಾಹಕ್ಕೆ ವಿಚ್ಛೇದ ಬರುತ್ತದೆ". ಎಂದು ಅನಂತವರ್ಧನನು ನಿರೂಪಿಸುತ್ತಾನೆ.[೮೯] ಇದನ್ನು ಕುರಿತು ವ್ಯಾಖ್ಯಾನ ಮಾಡುವಾಗ ಅದನ್ನು ದೇಹ ತೊರೆದ ಪದ್ಯವನ್ನೇ ಉದಾಹರಿಸಿ, ಇಲ್ಲಿ ಮರಣವು ಸ್ಫುಟವಾಗಿ ರತಿಗೆ ಅಂಗವಾಗಿ ಬಂದಿದೆ. ಆದಕಾರಣವೇ ಶ್ರೇಷ್ಠ ಕವಿ 'ಮರಣ' ಎಂಬ ಪದವನ್ನು ಉಪಯೋಗಿಸಿಲ್ಲ ['ದೇಹನ್ಯಾಸ' ಎಂದು ಅದನ್ನು ಕರೆದಿದ್ದಾನೆ] ಆ ಪದವೇನಾದರೂ ಬಂದಿದ್ದರೆ ಪುನರ್ಮಿಲನವು ಅತಿಪ-ರಿಮಿತ ಕಾಲದಲ್ಲೇ ಒದಗಿದ್ದರೂ ಶೋಕವೇ ಉದಿಸುತ್ತಿತ್ತು." ಎಂದು ಮೊದಲಾಗಿ ಅಭಿನವಗುಪ್ತನು ಅಭಿಪ್ರಾಯಪಡುತ್ತಾನೆ.[೯೦] ಈ ಬಗೆಯ ವಿಚಾರ ಕ್ಲೇಶವನ್ನು ಪರಿಹರಿಸಲೆಂದೇ ಕೆಲವರು 'ಕರುಣವಿಪ್ರಲಂಭ'ವೆಂಬುದಾಗಿ ಶೃಂಗಾರಸದ ಒಂದು ಪ್ರಕಾರವನ್ನು ಕಲ್ಪಿಸಿದ್ದಾರೆ. 'ಸಾಹಿತ್ಯದರ್ಪಣ'ದಲ್ಲಿ ವಿಶ್ವನಾಥನು ಹೀಗೆ ಹೇಳಿದ್ದಾನೆ.

**ಯೂನೋರೇಕತರಸ್ಮಿನ್ ಗತವತಿ ಲೋಕಾಂತರಂ ಪುನರ್ಲಭ್ಯೇ ।**
**ವಿಮನಾಯತೇಯದೇಕಃ ತದ್‌ಭವೇತ್ ಕರುಣವಿಪ್ರಲಂಭಾಖ್ಯಃ[೯೧] ॥**

"ಯುವಕರಲ್ಲಿ [ಎಂದರೆ ಪ್ರಿಯರಲ್ಲಿ] ಒಬ್ಬನು [ಒಬ್ಬಳು] ಲೋಕಾಂತರಕ್ಕೆ ನಡೆದರೂ ಮತ್ತೆ ದೊರೆಯುವತಿರತಕ್ಕ ಸಂದರ್ಭದಲ್ಲಿ, ಇನ್ನೊಬ್ಬಳು [ಒಬ್ಬನು] ಉಮ್ಮಳಿಸುವಾಗ, ಕರುಣ ವಿಪ್ರಲಂಭವಾಗುವುದು". ಇದು ಹೇಗೆಂದರೆ ಕಾದಂಬ-ರಿಯಲ್ಲಿ ಪುಂಡರೀಕ ಮಹಶ್ವೇತೆಯರ ವೃತ್ತಾಂತದಲ್ಲಿ [ಕಾಣಬರುತ್ತದೆ.] ಮರಳಿ ಲಭ್ಯವಾಗದಿದ್ದರೂ ಬೇರೆ ದೇಹವನ್ನು ಧರಿಸಿ ಲಭ್ಯವಾದರೂ ಅಲ್ಲಿ ಕರುಣವೇ ರಸ..," ಆದ್ದರಿಂದಲೇ ವಿಶ್ವನಾಥನು ಕರುಣ, ವಿಪ್ರಲಂಭದಿಂದ ಬೇರೆ ಎಂಬುದನ್ನು ಹೇಳಿದ್ದಾನೆ. ಕರುಣಕ್ಕೆ ಶೋಕವು ಸ್ಥಾಯಿಭಾವವಾಗಿದೆ. ವಿಪ್ರಲಂಭದಲ್ಲಿ ರತಿ ಸ್ಥಾಯಿಭಾವವಾಗಿದೆ. ವಿಪ್ರಲಂಭದಲ್ಲಿ ರತಿಸ್ಥಾಯಿ ಭಾವ ಇಲ್ಲಿ ಶೋಕವಿದೆ ಎಂದು ಹೇಳಿದರು ಇದು

ಕೇವಲ ಸಂಭೋಗಕ್ಕೆ ಕಾರಣವೆನಿಸಿದೇಯೋ ಹೊರತು ಸ್ಥಾಯಿ ಎನಿಸುವುದಿಲ್ಲ. ವಿಪ್ರಲಂಭದಲ್ಲಿ ರತಿಯೇ ಸ್ಥಾಯಿ ಭಾವವಾಗಿದ್ದು ಶೋಕವು ಅಪ್ರಧಾನವಾದರಿಂದ ಕೇವಲ ಸಹಾಯವಾಗಿರುತ್ತದೆ. ಕರುಣರಸದಲ್ಲಿ ಶೋಕವೇ ಪ್ರಧಾನವಾದ್ದರಿಂದ ಸ್ಥಾಯಿಭಾವವೆನಿಸಿದೆ. ಹೀಗೆ ವಿಶ್ವನಾಥನು ಕರುಣವಿಪ್ರಲಂಭ ಶೃಂಗಾರದಿಂದ ಬೇರೆ ಎಂಬುದನ್ನ ಮೇಲಿನ ಉದಾಹರಣೆಯಿಂದ ವಿಮರ್ಶಿಸಲಾಗಿದೆ. ಕರುಣರಸಕ್ಕೆ ಉದಾಹರಣೆಗಾಗಿ,

**ಸ್ನಿಗ್ಧಶ್ಯಾಮಲಕಾಂತಿಲಿಪ್ತವಿಯತೋವೆಲ್ಲದ್ಬಲಾಕಾ ಘನಾಃ ।**
**ವಾತಾಃ, ಶೀಕರಿಣಃ ಪಯೋದ ಸುಹೃದಾ ಮಾನಂದಕೇಕಾಃ ಕಲಾಃ ॥**
**ಕಾಮಂಸಂತು ದೃಡಂ, ಕಠೋರ ಹೃದಯೋ ರಾಮೋಽಸ್ಮಿ ಸರ್ವಂ ಸಹೇ ।**
**ವೈದೇಹೀ ತು ಕಥಂ ಭವಿಷ್ಯತಿ ಹ ಹಾ ಹಾ ದೇವಿ ಧೀರಾಭವ್**[೨] ॥

ಭವಭೂತಿಯ ಈ ಶ್ಲೋಕದಲ್ಲಿ ರಾಮ ಸೀತೆಯರ ವಿಯೋಗವು ಕರುಣ–ರಸ ಪ್ರಧಾನವಾಗಿರುವುದನ್ನು ಕಾಣಬಹುದು. ಕರುಣರಸದ ವ್ಯಾಪ್ತಿ ಕೇವಲ ಪ್ರಿಯ ಪ್ರೇಯಸಿಯರ ಅಗಲಿಕೆಯಷ್ಟರಲ್ಲೇ ಮಾತ್ರವಲ್ಲದೇ ಎಲ್ಲಾ ರೀತಿಯ ಶೋಕವು, ಅಂ–ದರೆ ಶಾಪ ಕ್ಲೇಶಾದಿಗಳಿಗೆ ಒಳಗಾದ ಆಪ್ತೇಷ್ಟರ ವಿಯೋಗ, ಸಂಪತ್ತಿನನಾಶ, ಕೂಲೆ, ಸೆರೆ ಇತ್ಯಾದಿಗಳು ಕರುಣ ರಸಕ್ಕೆ ವಿಭಾವಗಳಾಗಿವೆ. ಇವುಗಳಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಉದಾಹರಣೆಗಳನ್ನು ನೋಡಬಹುದು. ಹಾಗೆಯೆ ಬಾಣನ ಕಾದಂಬರಿ ಇತ್ಯಾದಿಗಳು ಕರುಣರಸಕ್ಕೆ ಉದಾಹರಣೆಗಳಾಗಿವೆ.

### ೪. ರೌದ್ರರಸ

**ರೌದ್ರಃ ಕ್ರೋಧಸ್ಥಾಯಿಭಾವಃ ರಕ್ತೋರುದ್ರಾಧಿ ದೈವತಃ ।**
**ಆಲಂಬನಮರಿಸ್ತತ್ರ ತಚ್ಚೇಷ್ಟೋದ್ದಿಪನಂ ಮತಮ್**[೩] ॥

ರೌದ್ರರಸಕ್ಕೆ ಕ್ರೋಧವೇ ಸ್ಥಾಯಿಭಾವ, ಕ್ರೋಧವು ರಜೋಗುಣದಿಂದ ಹುಟ್ಟುವುದರಿಂದ, ರಜೋಗುಣವನ್ನು ಕೆಂಪುಬಣ್ಣವೆಂದು ಭಾವಿಸಿರುವುದರಿಂದ ರೌದ್ರರಸವನ್ನು ಕೆಂಪುಬಣ್ಣದೆಂದು ಕರೆಯಲಾಗಿದೆ. ಸಂಹಾರಕ್ಕೆ ಅಧಿಪತಿಯಾದ ರುದ್ರನೇ ಇದಕ್ಕೆ ಅಧಿದೇವತೆ, ಶತ್ರುವೇ ಈ ರಸಕ್ಕೆ ಆವಲಂಬನ, ಮುಷ್ಟಿಯಿಂದ ಹೊಡೆಯುವುದು, ಆಕ್ರಮಿಸುವುದು, ಅವನಿಗೆ ವಿರುದ್ಧವಾದ್ದನ್ನು ಮಾಡುವುದು, ಅವನ ಸೈನ್ಯವನ್ನು ಹಾಳುಮಾಡುವುದು, ಶೂಲದಿಂದ ಇರಿಯುವುದು, ಯುದ್ಧಕ್ಕೆ ಆತುರದಿಂದ ಹೊರಡುವುದು, ಶತ್ರುಗಳ ಶಿಬಿರವನ್ನು ನಾಶಮಾಡುವುದು ಇವುಗಳಿಂದ ರೌದ್ರರಸಕ್ಕೆ ಉದ್ಧೀಪನವುಂಟಾಗುತ್ತದೆ. ಹುಬ್ಬುಗಂಟುಹಾಕುವುದು, ತುಟಿಯನ್ನು ಕಚ್ಚುವುದು, ತೋಳುಗಳನ್ನು ಅಳ್ಳಾಡಿಸುವುದು, ಮಾತಿನಿಂದ ಬೆದರಿಸುವುದು, ಆಯುಧಗಳನ್ನು ಮೇಲಕ್ಕೆ ಎತ್ತುವುದು. ತನ್ನ ಸೈನಿಕರನ್ನು ಉತ್ತೇಜನ ಗೊಳಿಸುವುದು ಎದುರಾಳಿಯನ್ನು

ನಿಂದಿಸುವುದು, ಕ್ರೂರವಾಗಿ ನೋಡುವುದು ಇವೆಲ್ಲವೂ ಅನುಭಾವಗಳಾಗಿವೆ. ಉಗ್ರತೆ, ಆವೇಗ, ರೋಮಾಂಚ, ಸ್ವೇದ, ನಡುಕ, ಮದ, ಮೋಹ, ಆಮರ್ಷ ಇವೆಲ್ಲವೂ ವ್ಯಭಿಚಾರಿಭಾವವಾಗಿದೆ. ಉದಾಹರಣೆಗಾಗಿ,

**ಕೃತಮನುಮತಂ ದೃಷ್ಟಂ ವಾಯೈರಿದಂ ಗುರುಪಾತಕಂ ।**
**ಮನುಜಪಶುಭಿರ್ನಿರ್ಮರ್ಯಾದೈರ್ಬವದ್ಭಿರುದ್ದಾಯಧೈ ॥**
**ನರಕರಿಪುಣ ಸಾರ್ಧಂ ತೇಷಾಂ ನಭೀಮಕೀರೀಟಿನಾಂ ।**
**ಆಯಮಹಮಿಸೃಙ್ಮೇದೋಮಂಸೈಃ ಕರೋಮಿ ದಿಶಾಂ ಬಲಿಮ್ ॥**

"ಯುಕ್ತಾ ಯುಕ್ತಾ ವಿವೇಕವಿಲ್ಲದ್ದರಿಂದ ಪಶುವೆನಿಸಿ ಆತ್ಮಗೌರವವಿಲ್ಲದೆ ಆಯುಧಪಾಣಿಯಾಗಿದ್ದು ನೀವು ಬ್ರಹ್ಮಹತ್ಯೆ ಎನಿಸಿದ ಈ ಮಹಾಪಾಪವನ್ನು ಮಾಡಿಸಿರುವಿರಿ ಧೃಷ್ಟದ್ಯುಮ್ನನು ಮಾಡಿದ್ದನ್ನು ನೀವೆಲ್ಲರೂ ನೋಡಿರುವಿರಿ. ಅದಕ್ಕೆ ಪ್ರತಿಯಾಗಿ ಕೃಷ್ಣ, ಭೀಮ, ಅರ್ಜುನರೊಡನೆ ನಿಮ್ಮೆಲ್ಲರ ರಕ್ತ, ಮಾಂಸ, ಮೇದಸ್ಸು, ಇವುಗಳಿಂದ ನಾನು ಈ ಎಲ್ಲಾ ದಿಕ್ಕುಗಳಲ್ಲೂ ಇರುವ ಪ್ರಾಣಿಗಳಿಗೆ ಬಲಿಯನ್ನು ಕೊಡುವೆನು"? ಇಲ್ಲಿ ದೃಷ್ಟದ್ಯುಮ್ನ ಮೊದಲಾದವರು ಆಲಂಬನವಿಭಾವ, ಅವನು ಮಾಡಿದ ಪಿತೃಹತ್ಯೆ ಮೊದಲಾದವು ಉದ್ದೀಪನ ವಿಭಾವಗಳು, ಇಲ್ಲಿ ಬೆದರಿಸುವುದೇ ಅನುಭಾವ. ಉಗ್ರತೆ ಆವೇಗ ಮೊದಲಾದವು ವ್ಯಭಿಚಾರಿಭಾವಗಳು, ಇವುಗಳಲ್ಲಿ ಅಭಿವ್ಯಕ್ತಿ ವಾಗಿರುವ ರೌದ್ರರಸವು ಸಾಮಾಜಿಕರ ಹೃದಯದಲ್ಲಿ ಅನುಭವ ಗೋಚರವಾಗುವುದು.

ಇಲ್ಲಿ ಯುದ್ಧ ವೀರ ರಸಕ್ಕಿಂತಲೂ ರೌದ್ರರಸವು ಬೇರೆ ಎಂಬುದನ್ನು ವಿಶ್ವನಾಥನು ತಿಳಿಸಿದ್ದಾನೆ. ಯುದ್ಧವೀರದಲ್ಲಿಯೂ ಶತ್ರುವೇ ಆವಲಂಬನ ವಿಭಾವವೆನಿಸಿದ್ದರಿಂದ ಎರಡೂ ಒಂದೆ ಬಗೆಯೆಂದು ತಿಳಿಯುವುದರಿಂದ ಅದಕ್ಕೆ ಭೇದವನ್ನು ತಿಳಿಯಬೇಕು. ರೌದ್ರ ರಸದಲ್ಲಿ ಸ್ಥಾಯಿ ಎನಿಸಿದ ಕ್ರೋಧವು ಶತ್ರುವಿನ ಮುಖವನ್ನು ಕಣ್ಣುಗಳನ್ನು ಕೆಂಪಗೆ ಮಾಡಿಸುತ್ತದೆ. ಯುದ್ಧವೀರ ರಸದಲ್ಲಿ ಕಣ್ಣು ಕೆಂಪೇರುವುದಿಲ್ಲ. ಬದಲಾಗಿ ಉತ್ಸಾಹವಿರುವವರೆಗೆ ಮಾತ್ರ ಯುದ್ಧವೀರ ರಸವು ಅನುಭವಗೋಚರವಾಗುವುದು. ಇದರ ಜೊತೆಯಲ್ಲಿ ಕ್ರೋಧವು ಹುಟ್ಟಿದರೆ ಆಗ ಅದು ರೌದ್ರರಸವೇ ಆಗಿ ಪರಿಣಮಿಸುವುದು.

**೫. ವೀರರಸ**

**ಉತ್ತಮ ಪ್ರಕೃತೀರ್ವೀರಃ ಉತ್ಸಾಹ ಸ್ಥಾಯಿಭಾವಕಃ ।**
**ಮಹೇಂರಿದ್ರದೈವತೋ ಹೇಮವರ್ಣೋ?ಯಂ ಸಮುದಾಹೃತಃ ॥**

[ಸಾಹಿತ್ಯದರ್ಪಣ, ೩]

ಎಲ್ಲಾ ರಸಗಳಿಗಿಂತಲೂ ವೀರರಸದ ಸ್ವಭಾವವೂ ಉತ್ಕೃಷ್ಟವೆನಿಸಿದೆ. ಉತ್ತಮ ಪ್ರಕೃತಿಯಲ್ಲಿರುವ ಜನರ ಉತ್ಸಾಹವೇ ಇದರ ಸ್ಥಾಯಿಭಾವವಾಗಿದೆ. ವೀರರೆಲ್ಲರಿಗೂ ಈಶ್ವರನೆನಿಸಿದ ಮಹೇಂದ್ರನೇ ಇದಕ್ಕೆ ಅಭಿಮಾನದೇವತೆ ಮಹೇಂದ್ರನಿಗೆ ಬಂಗಾರದ ವರ್ಣವಿರುವುದರಿಂದ ವೀರರಸವೂ ಬಂಗಾರವರ್ಣದಾಗಿದೆ. ಯುದ್ಧದಲ್ಲಿ ಜಯಿಸಬೇಕಾಗಿರುವ ಶತ್ರು ದಯೆಗೆ ಅರ್ಹನಾದವನು, ಧಾನಧರ್ಮಗಳಿಗೆ ಪಾತ್ರರೆನಿಸಿದವರು ಇದಕ್ಕೆ ಆಲಂಬನರೆನಿಸಿರುವರು. ಇವರೆಲ್ಲರ ಚೇಷ್ಟೆಗಳೆ ಉದ್ದೀಪನ ಭಾವವೆನಿಸಿದೆ ಸಹಾಯವನ್ನು ಹುಡುಕುವುದು, ಭೇದವನ್ನು ಪ್ರಯೋಗಿಸುವುದು, ತ್ಯಾಗ, ಧನಸಂಗ್ರಹ, ಯಾಗವನ್ನಚಾರಿಸುವುದು, ಮಾತಿನಿಂದ ಸಮಧಾನ ಮಾಡುವುದು ಇವೆಲ್ಲವೂ ಅನುಭಾವಗಳು.

ಭರತನು ಯುದ್ಧವೀರ, ದಾನವೀರ, ದಯಾವೀರಾ, ಎಂದು ಮೂರು ಬಗೆಯ ವೀರರಸಗಳನ್ನು ಹೇಳಿದ್ದಾನೆ.[೬೫] ಆದರೆ, ವಿಶ್ವನಾಥನು ವೀರರಸವನ್ನು ದಾನವೀರ, ಧರ್ಮವೀರ, ಯುದ್ಧವೀರ, ದಯಾವೀರ, ಎಂದು ನಾಲ್ಕುಬಗೆಯ ರಸಗಳನ್ನು ತಿಳಿಸಿದ್ದಾನೆ. ದಾನವೀರರಸಕ್ಕೆ ಉದಾಹರಣೆಯಾಗಿ "ಇವನು ಜಮದಗ್ನಿಯ ಮಗನು ಮಹದೇವನೇ ಇವನಿಗೆ ಆಚಾರ್ಯನು. ಅವನು ವೀರ್ಯವಂತನೆಂಬುದನ್ನು ಮಾತಿನಿಂದ ತಿಳಿಸಲಾಗುವುದಿಲ್ಲ. ಇಪ್ಪತ್ತೊಂದು ಸಾರಿ ಸಂಚಾರ ಮಾಡಿ ಕ್ಷತಿಯರನ್ನು ಸಂಹಾರ ಮಾಡಿದ್ದರಿಂದಲೇ ಇವನ ವೀರ್ಯ ಎಂತಹದೆಂಬುದು ವ್ಯಕ್ತವಾಗುತ್ತದೆ. ಇವನು ಫಲಾಪೇಕ್ಷೆಯಿಲ್ಲದೆ ಮಾಡುವ ದಾನಕ್ಕೆ ಏಳು ಸಮುದ್ರಗಳಿಂದ ವರಿಸಿದ ಭೂಮಿಯೇ ಅವಧಿ ಎನಿಸಿದೆ. ಹೀಗೆ ತಪಸ್ವಿಯೂ ಸತ್ಯನಿಷ್ಟನೂ ಆದ ಪೂಜ್ಯಪರಶುರಾಮನಿಗೆ ಯಾವುದು ತಾನೆ ಆಸಾಧ್ಯವೆನಿಸಿತು; ಅವನಿಗೆ ಎಲ್ಲವೂ ಸಾಧ್ಯವೇ ಆಗಿದೆ". ಇಲ್ಲಿ ಪರಶುರಾಮನ ತ್ಯಾಗಕ್ಕೆ ಉತ್ಸಾಹವೇ ಸ್ಥಾಯಿಭಾವ. ಆ ದಾನವನ್ನು ತೆಗೆದುಕೊಳ್ಳುವ ಬ್ರಾಹ್ಮಣರೇ ಆಲಂಬನರು, ಸತ್ತ್ವಗುಣದಿಂದ ಹುಟ್ಟುವ ದಾನದ ಪ್ರವೃತ್ತಿಯೇ ಉದ್ದೀಪನ ವಿಭಾವವೆನಿಸಿದೆ. ಅವನು ಸರ್ವಸ್ವವನ್ನೂ ದಾನ ಮಾಡಿದ್ದೇ ಈ ರಸವನ್ನು ಸಾಮಾಜಿಕರಿಗೆ ಅನುಭವಿಸಲು ಯೋಗ್ಯವನ್ನಾಗಿ ಮಾಡುವ ಕ್ರಿಯೆ ಎನಿಸಿದೆ. ಹರ್ಷ, ಧೈರ್ಯ ಮೊದಲಾದವು ವ್ಯಭಿಚಾರಿಭಾವಗಳು. ಇವುಗಳಿಂದ ಉತ್ಸಾಹವು ಪುಷ್ಟಿಹೊಂದಿ 'ದಾನವೀರರಸ'ವೆನಿಸಿದೆ.[೬೬] ಇನ್ನು ಧರ್ಮವೀರರಸಕ್ಕೆ ಯುಧಿಷ್ಠರನನ್ನು[೬೭] ಯುದ್ಧವೀರ ರಸಕ್ಕೆ ಭೀಮ, ದುರ್ಯೋಧನರಿಬ್ಬರೂ[೬೮] ಮತ್ತು ದಯಾವೀರರಸಕ್ಕೆ ಜೀಮೂತ ವಾಹನನ್ನೂ[೬೯] ಉದಾಹರಿಸಲಾಗಿದೆ.

**೬. ಭಯಾನಕ ರಸ**

> **ಭಯಾನಕೋ ಭಯಸ್ಥಾಯಿಭಾವಃ ಕಾಲಾಧಿದೈವತಃ ।**
> **ಸ್ತ್ರೀನೀಚ ಪ್ರಕೃತಿ ಕೃಷ್ಣೋ ಮತಸ್ತತ್ತ್ವ ವಿಶಾರಧೈಃ ॥**

[ಸಾಹಿತ್ಯದರ್ಪಣ, ೩]

ಭಯಾನಕ ರಸಕ್ಕೆ ಭಯವೇ ಸ್ಥಾಯಿಭಾವ ಯಮನೇ ಇದಕ್ಕೆ ಅಧಿದೇವತೆ ಯಮನು ಜೀವರಿಗೆ ಮೃತ್ಯುವನ್ನು ದೊರಕಿಸುವವನಾದ್ದರಿಂದ ಅವನಿಂದ ಭೀತಿವುಂಟಾಗುವುದು ಸಹಜವಾದರಿಂದ ಈ ರಸಕ್ಕೆ ಈ ಹೆಸರು ಅನ್ವರ್ಥವೆನಿಸಿದೆ. ಭಯಾನಕ ರಸಕ್ಕೆ ಕೃಷ್ಣ ವರ್ಣವೆಂದು ಹೇಳಲಾಗಿದೆ. ಸ್ತ್ರೀ ಜಾತಿಯ ನೀಚ ಪ್ರಕೃತಿಯ ವ್ಯಕ್ತಿಯೇ ಇದಕ್ಕೆ ಆಲಂಬನ ವಿಭಾವ. ಆಕೆಯಿಂದಲೇ ಜನರಿಗೆ ಭಯವುಂಟಾಗುವ ಪ್ರಯುಕ್ತ ಆ ಬಗೆಯ ಭಯವೇ ಭಯಾನಕ ರಸವಾಗುತ್ತದೆ. ನೀಚವ್ಯಕ್ತಿಯ ಅಥ–ವಾ ವಸ್ತುವಿನ ಭೀಕರವಾದ ಚೇಷ್ಟೆಯೇ ಉದ್ದೀಪನವಿಭಾವ. ಮುಖದಲ್ಲಿ ಬಣ್ಣದ ಬದಲಾವಣೆ ಗದ್ಗದಸ್ವರದಿಂದ ಮಾತನಾಡುವುದು ಇವೆಲ್ಲವೂ ಅನುಭಾವಗಳು ಯಾವ ಪ್ರಯತ್ನವನ್ನು ಮಾಡದಂತಹ ಸ್ಥಿತಿ (ಪ್ರಳಯ) ಬೆವರು ಸುರಿಸುವುದು, ಮೈಯಲ್ಲಿ ರೋಮಾಂಚನ ವಾಗುವುದು. ನಡುಕ, ದಿಕ್ಕುಗಳನ್ನು ನೋಡುವುದು, ಓಡುವುದು ಇವು ಸಹ ಅನುಭಾವಗಳಾಗಿವೆ. ಜಿಗುಪ್ಸೆ, ಅವೇಗ, ಮೋಹ, ಬೆದರಿಕೆ, ದೈನ್ಯ, ಶಂಕೆ, ಅಪಸ್ಮಾರ, ಭ್ರಾಂತಿ, ಮರಣ ಮೊದಲಾದವು ವ್ಯಭಿಚಾರಿಭಾವಗಳೆನಿಸಿವೆ. ಉದಾಹರಣೆಯಾಗಿ ಕಾಳಿದಾಸನ "ಶಾಕುಂತಲಾ" ನಾಟಕದಲ್ಲಿ ಜಿಂಕೆಯ ವರ್ಣನೆಯಲ್ಲಿ ಭಯಾನಕ ರಸವನ್ನು ಅತ್ಯಂತ ಸಮರ್ಥವಾಗಿ ಪ್ರತಿಪಾದಿತವಾಗಿದೆ.

**ಗ್ರೀವಾಭಂಗಾಭಿರಾಮಂ ಮುಹುರುನುಪತತಿ ಸ್ಯಂದನೇ ದತ್ತದೃಷ್ಟಿಃ ।**
**ಪಶ್ಚಾರ್ಧೇನ ಪುವಿಷ್ಟಃ ಶರಪತನಭಯಾದ್ಭೂಯಸಾ ಪೂರ್ವಕಾಯಂ ॥**
**ಶಷ್ಪೈರರ್ಧಾವಲೀಢೈಃ ಶ್ರಮವಿತತಮುಖ ಭ್ರಂಶಿಭಿಃಕೀರ್ಣವರ್ತ್ಮಾ ।**
**ಪಶ್ಯೋದಗ್ರಪ್ಲುತತ್ವಾದ್ವಿತಯತಿ ಬಹುತರಂ ಸ್ತೋಕಮುರ್ವ್ಯಾಂ[೧೦೦] ಪ್ರಯಾತಿ ॥**

ದುಷ್ಯಂತನ ರಥವನ್ನು ಕಂಡು ಭಯಗೊಂಡು ಓಡುವ ಜಿಂಕೆಯ ವರ್ಣನೆಯನ್ನು ರಸಾನುಭವ ಹೇಗೆ ಒದಗುತ್ತದೆ ಎಂಬುದನ್ನು ಅಭಿನವಗುಪ್ತನು ಈ ಪದ್ಯವನ್ನು ಮುಖ್ಯ ನಿದರ್ಶನವಾಗಿಟ್ಟುಕೊಂಡು ವಿವರಿಸಿದ್ದಾನೆ.[೧೧೧] ಭಯಾನಕ ರಸವು ಉದಾತ್ತಾನಾಯಕನಿಗೆ ಮಾತ್ರವಲ್ಲದೇ, ಯುದ್ಧದಲ್ಲಿ ಸೋತು ಓಡುಹೋಗುತ್ತಿರುವ ಸೈನಿಕ ವರ್ಣನೆಯಲ್ಲಿ, ಪಿಶಾಚಿ, ರಾಕ್ಷಸಾದಿಗಳ ಭಯಂಕರ ಚಿತ್ರ ನಿರೂಪಣೆಯಲ್ಲಿ ಕಾಡಿನಲ್ಲಿ ನಡೆಯುವಾಗ ಹಾವು ಮೊದಲಾದ ಕ್ರೂರಪ್ರಾಣಿಗಳ ಭೀಕರ ಸ್ವರೂಪಾನುಭವದಲ್ಲಿ ಹೀಗೆ ಅನೇಕ ಸಂದರ್ಭದಲ್ಲಿ ಭಯಾನಕರಸವು ಗೋಚರವಾಗುತ್ತದೆ.

### ೭. ಬೀಭತ್ಸರಸ

**ಜುಗುಪ್ಸಾ ಸ್ಥಾಯಿಭಾವಸ್ತು ಭೀಭತ್ಸಃ ಕಥ್ಯತೇ ರಸಃ ।**
**ನಿಲವರ್ಣೋ ಮಹಾಕಾಲದೈವತೋಽಯ ಮುದಾಹೃತಃ[೧೦೨] ॥**

ಭೀಭತ್ಸರಸಕ್ಕೆ ಜುಗುಪ್ಸೆಯೇ ಸ್ಥಾಯಿಭಾವ. ಮಹಾಕಾಲನೇ ಅಧಿದೇವತೆ

ಇವನು ಯಾವಾಗಲೂ ಭಯಂಕಾರವಾದ ಸ್ಮಶಾನದಲ್ಲಿ ವಾಸವಾಡುತ್ತಾ ನೀಲವರ್ಣ ದಲ್ಲಿರುವುದರಿಂದ ಭೀಭತ್ಸರಸವನ್ನು ನೀಲವರ್ಣವೆಂದು ತಿಳಿಸಲಾಗಿದೆ. ದುರ್ಗಂಧವೆನಿಸಿದ ಮಾಂಸ, ರಕ್ತ, ಮೇದಸ್ಸು ಇವೇ ಮೊದಲಾದವು ಈ ರಸಕ್ಕೆ ಆಲಂಬನ ವಿಭಾವಗಳು ಆ ಮಾಂಸ ಮೊದಲಾದುವುಗಳಲ್ಲಿಯೇ ಕ್ರಿಮಿಗಳು ಬಂದು ಬೀಳುವುದು ಉದ್ದೀಪನ ವಿಭಾವವೆನಿಸಿದೆ. ಆ ಮಾಂಸ ಮೊದಲಾದವನ್ನು ನೋಡಿ 'ಥೂ' ಎನ್ನುವುದು. ಆ ಕಡೆಯಿಂದ ಮುಖವನ್ನು ಬೇರೆ ಕಡೆಗೆ ತಿರುಗಿಸುವುದು, ಕಣ್ಣುಗಳನ್ನು ಮುಚ್ಚಿಕೊಳ್ಳುವುದು. ಇವೆಲ್ಲವೂ ಅನುಭಾವಗಳು, ಮೋಹ, ಅಪಸ್ಮಾರ, ಆವೇಗ, ವ್ಯಾಧಿ, ಮರಣ ಇವೆಲ್ಲವೂ ವ್ಯಭಿಚಾರಿಭಾವಗಳು ಉದಾಹರಣೆಗಾಗಿ,

"ಶವದೊಳಗೆ[೧೦೩] ದೃಷ್ಟಿಯನ್ನಿಟ್ಟು ಹಲ್ಲುಗಳನ್ನು ಹೊರಗೆ ತೋರಿಸುತ್ತಾ ದೀನದಾದ ಒಂದು ಪಿಶಾಚವು ಮೊದಲು ಶವದ ಚರ್ಮವನ್ನು ಉಗುರುಗಳಿಂದ ಕಿತ್ತು ಆಮೇಲೆ ಭುಜಗಳು, ಕುಂಡಿ, ಬೆನ್ನು ಇವುಗಳಿಗೆ ಸಂಬಂಧಿಸಿದ ಅವಯವಗಳಿಂದ ಕಿತ್ತು ಆಮೇಲೆ ಭುಜಗಳು, ಕುಂಡಿ, ಬೆನ್ನು, ಇವುಗಳಿಂದ ಸಂಬಂಧಿಸಿದ ಅವಯವಗಳಿಂದ ದೊರೆಯುವ ದುರ್ವಾಸನೆಯಿಂದ ಕೂಡಿ ಶೋಭೆರೋಗದಿಂದ ದಪ್ಪನಾಗಿರುವ ಮಾಂಸಗಳನ್ನು ಜಿಗಿದು ತಿಂದು, ತೊಡೆಯ ಮೇಲೆ ಬುರುಡೆಯೊಂದನ್ನು ಇಟ್ಟುಕೊಂಡು ಮೂಳೆಗಳಲ್ಲಿಯೂ ಕೀಲುಗಳಲ್ಲಿಯೂ ಇದ್ದ ಮಾಂಸವನ್ನು ನಿರ್ಭಯವಾಗಿ ತಿನ್ನುತ್ತಿದೆ". ಇಲ್ಲಿ ಮಾಧವನಿಗೆ ಹುಟ್ಟುವ ಜುಗುಪ್ಸೆಯೇ ಸ್ಥಾಯಿಭಾವ. ಸ್ಮಶಾನದಲ್ಲಿ ಕಾಣುವ ಮಾಂಸ ಮೊದಲಾದವೇ ಆಲಂಬನ ವಿಭಾವ 'ಥೂಥೂ' ಎನ್ನುವುದೇ ಅನುಭಾವ. ಇಲ್ಲಿ ಸ್ಥಾಯಿಭಾವ ಮತ್ತು ಅನುಭಾವಗಳು ಸಂದರ್ಭಕ್ಕೆ ಅನುಗುಣವಾಗಿ ಸಿದ್ಧಿಸುವುದರಿಂದ ಅವುಗಳನ್ನು ತಿಳಿಸಿಲ್ಲ ಗ್ಲಾನಿ ಮೊದಲಾದ ವ್ಯಭಿಚಾರಿಭಾವಗಳು ಸೇರಿ ಸಹೃದಯರಿಗೆ ಭೀಭತ್ಸರಸವಾಗಿ ಪರಿಣಮಿಸುತ್ತದೆ.

"ಜುಗುಪ್ಸಿತ ಶರೀರದರ್ಶನ ಶ್ರವಣಾದಿ ಅಲಂಬನ ಅವಿಭಾವಂ, ಪೂತಿಗಂಧಕ್ರಿಮಿ ಕೀಟಾದಿಯುದ್ದೀಪನ ವಿಭಾವಂ"[೧೦೪] ಎಂದು ಸಾಳ್ವನು ಭೀಭತ್ಸರಸಕ್ಕೆ ವಿಭಾವವನ್ನೂ ಮತ್ತು ಅದಕ್ಕನುಗುಣವಾದ ಅನುಭಾವಾದಿಗಳನ್ನು ಹೇಳಿ ಜುಗುಪ್ಸಿತ ಭೀಭತ್ಸ ಮತ್ತು ವಿರಕ್ತಿಭೀಭತ್ಸ ಎಂದು ಮುಖ್ಯವಾಗಿ ಎರಡು ಭೇದಗಳನ್ನು ಹೇಳಿ ಮೊದಲನೆಯ ಜುಗುಪ್ಸೆಭೀಭತ್ಸಕ್ಕೆ ಕುವೆಂಪುರವರ 'ಮಂಥರೆ'ಯ ಚಿತ್ರವನ್ನು[೧೦೫ ೧೦೬]ಉದಾಹರಿಸಿದ್ದಾನೆ. ಮತ್ತು ವಿರಕ್ತಿಭೀಭತ್ಸಕ್ಕೆ ರನ್ನ ಒಂದು ಪದ್ಯವನ್ನು[೧೦೭] ಉದಾಹರಿಸಿದ್ದಾನೆ.[೧೦೮] ಹಾಗೆಯೇ ಒಂದು ವಸ್ತು ಜುಗುಪ್ಸಿತವೇ ಅಲ್ಲವೇ ಎಂಬುದು ನೋಡುವ ಕಣ್ಣಿನ ಮೇಲೆ, ನಿರೂಪಿಸುವ ವಿಧಾನದ ಮೇಲೆ ನಿರ್ಣಯವಾಗುತ್ತದೆ. ಯಾವುದನ್ನ ಶೃಂಗಾರದ ಅಂಗವೆಂದು ಜನರು ಸಾಮಾನ್ಯವಾಗಿ ಭಾವಿಸುತ್ತೇವೆಯೋ ಅದನ್ನು ಸಹ ಕವಿ ಭೀಭತ್ಸದ ರಸವನ್ನಾಗಿ ಪರಿವರ್ತಿಸುತ್ತಾನೆ. ಉದಾಹರಣೆಗಾಗಿ ಭರ್ತೃಹರಿಯ ಈ ಶ್ಲೋಕ.

**ಕಶ್ಚುಂಬತಿ ಕುಲಪುರುಷೋ ವೇಶ್ಯಾಧರ ಪಲ್ಲವಂ ಮನೋಜ್ಞಮಪಿ ।**
**ಚಾರಭಟಚೋರಚೇಟಕ ವಿಟನಟ ನಿಷ್ಠೀ ವನಶರಾವಂ**[೧೦೯] **॥**

ಮನಸು ಸೆಳೆದರೂ ಕುಲಜನದಾವನು ಚುಂಬಿಸುವನು ಬೆಲವಣ್ಣಿನ ಪಲ್ಲವ ಕೋಮಲದಧರವನು ಚಾರ ಚೋರ ಭಟ ವಿಟ ನಟ ಚೇಟಕ ರುಗಳಿನ ಪಡಿಗವನು?[೧೧೦]

## ೮. ಅದ್ಭುತ ರಸ

**ಅದ್ಭುತೋ ವಿಸ್ಮಯಸ್ಥಾಯಿಭಾವೋ ಗಂಧರ್ವ ದೈವತಃ ॥**
**ಪೀತವರ್ಣೋವಸ್ತು ಲೋಕಾತಿಗಮಾಲಂಬನಂ ಮತಮ್**[೧೧೧] **॥**

ಅದ್ಭುತರಸಕ್ಕೆ ವಿಸ್ಮಯವೇ ಸ್ಥಾಯಿಭಾವ. ಗಂಧರ್ವನೇ ಅದಕ್ಕೆ ಅಧಿದೇವತೆ. ಗಂಧರ್ವನು ಗಾನದಿಂದ ಜನರಿಗೆ ವಿಸ್ಮಯವನ್ನುಂಟು ಮಾಡುವುದರಿಂದ ಇವನಿಗೆ ಪೀತವರ್ಣವಿರುವುದರಿಂದ ಅದ್ಭುತರಸವನ್ನು ಪೀತವರ್ಣದೆಂದು ಕರೆಯಲಾಗಿದೆ. ಅಲೌಕಿಕವಾದ ಇಂದ್ರಜಾಲ ಮೊದಲಾದ ವಸ್ತುವು ಆಲಂಬನವಿಭಾವ. ಈ ಬಗೆಯ ವಿಚಿತ್ರ ವಸ್ತುವಿನ ಗುಣಗಳ ಮಹಿಮೆಯೇ ಉದ್ದೀಪನ ವಿಭಾವ. ಸ್ತಂಭ, ಬೆವರು, ರೋಮಾಂಚ, ಗದ್ಗದಸ್ವರ, ಸಂಭ್ರಮ, ನೇತ್ರ ವಿಕಾಸ, ರೆಪ್ಪೆ ಹೊಡೆಯದೆ ನೋಡುವುದು. ಇವೆಲ್ಲವೂ ಅನುಭಾವವಾಗಿವೆ. ಆವೇಗ, ಜಡತೆ, ಹರ್ಷ, ಔತ್ಸುಕ್ಯ, ಇತ್ಯಾದಿಗಳು ವ್ಯಭಿಚಾರಿಭಾವಗಳು ಉದಾಹರಣೆಗಾಗಿ ಈ ಶ್ಲೋಕ.

ರಾಮನು ಶಿವಧಶುಸ್ಸನ್ನು ಮುರಿದಾಗ ಉಂಟಾದ ಶಬ್ದವನ್ನು ಕೇಳಿ ವಿಸ್ಮಯಗೊಂಡ ಲಕ್ಷ್ಮಣನು ಹೇಳುವ ಮಾತಿದು. "ತೋಳುಗಳಿಂದ ಸೆಳೆದು ಶಿವನ ಧನಸ್ಸನ್ನು ಮುರಿದದ್ದರಿಂದ ಹುಟ್ಟಿದ ಪೂಜ್ಯನಾದ ರಾಮನ ಬಾಲಚರಿತಗಳು ಮುಂದೆ ಆರಂಭವಾಗುವುದೆಂದು ಸೂಚಿಸುವ ಈ ಟಂಕಾರನಾದವು ಒಮ್ಮೆಗೆ ಮೇಲಕ್ಕೆ ಎತ್ತಿದ ಕಪಾಲಗಳೆರಡರೂಡನೆ ಸೇರಿದ್ದ ಬ್ರಹ್ಮಾಂಡವೆಂಬ ಪಾತ್ರೆಯ ಒಳಭಾಗದಲ್ಲಿ ಗಟ್ಟಿಯಾಗಿ ನೆಲಸಿದ್ದು, ಈಗಲೂ ಸಹ ಕೂನೆಗಾಣುತ್ತಲೇ ಇಲ್ಲ. ಎಂತಹ ಆಶ್ಚರ್ಯವಿದು[೧೧೨]!". ಇಲ್ಲಿ ಲಕ್ಷ್ಮಣನಿಗೆ ಉಂಟಾದ ವಿಸ್ಮಯವೇ ಸ್ಥಾಯಿಭಾವ, ಟಂಕಾರವು ಹೀಗೆ ವ್ಯಾಪಿಸಿತೆಂದು ಹೇಳುವುದೇ ಅನುಭಾವ, ಹರ್ಷ ಮೊದಲಾದವು ವ್ಯಭಿಚಾರಿಭಾವಗಳು. ಇವೆಲ್ಲವು ಒಟ್ಟುಗೂಡಿ ಸಾಮಾಜಿಕರ ಹೃದಯದಲ್ಲಿ ಒಂದೇ ಬಗೆಯ ಜ್ಞಾನವೆನಿಸಿ ಅದ್ಭುತರಸದ ಅನುಭವ ನೀಡುತ್ತದೆ.

ಇನ್ನು ಭರತನು ಹೇಳಿದ ಎಂಟು ರಸಗಳಲ್ಲಿ ಅದ್ಭುತವೇ ಕೂನೆಯ ರಸವಾಗಿದೆ. "ದಿವ್ಯದರ್ಶನೇಪ್ಸಿತ ಮನೋರಥಾವಾಪ್ತಿ ದೇವಕುಲಾಧಿಗಮನಮುಪವನ ಸಭಾ ಮಾಯಾವಿಮಾನೇಂದ್ರ ಜಾಲಾತಿಶಯ ಚಿತ್ರ ಕರ್ಮಾದಿಯಾಲಂಬನ ವಿಭಾವಂ; ತದ್ವದಭಿನಯಸ್ತೋತ್ರ ವ್ಯಾವರ್ಣನ ಚಿಂತಾದಿಯುದ್ದೀಪನ ವಿಭಾವಂ" ಎಂದು

ಸ್ವಾಳನು ಅದ್ಭುತರಸದ ವಿಭಾವ, ಅನುಭಾವವನ್ನು ಹೇಳಿ, ಇದು ಸರ್ವವ್ಯಾಪಕವಾದ ರಸ ಎಂದಿದ್ದಾನೆ.೧೧೩ ವಿಸ್ಮಯವು ಎಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಅಲೌಕಿಕವಾದ ಔನತ್ಯವನ್ನು ಪಡೆದು ಆಸ್ವಾದನೆಯ ವಿಷಯವಾಗುತ್ತದೆಯೋ ಅಲ್ಲಿ ಮಾತ್ರ ವಿಸ್ಮಯವು ಅದ್ಭುತರಸವಾಗುತ್ತದೆ. ಉದಾಹರಣೆಗೆ ಪಂಪನು ಕೊಡುವ ಜಿನಶಿಶುವಿನ ಜನ್ಮಾಭಿಷೇಕ ಕಲ್ಯಾಣದ ವರ್ಣನೆ, ಅಲ್ಲಿ ಬರುವ ಇಂದ್ರನ ನೃತ್ಯ, ಹರಿಹರನ ಕುಂಬಾರ ಗುಂಡಯ್ಯನ ರಗಳೆಯಲ್ಲಿ ಬರುವ ಶಿವತಾಂಡವದ ವರ್ಣನೆ, ಕುಮಾರವ್ಯಾಸನ ಕಿರಾತಾರ್ಜುನಿಯ, ಭಗದತ್ತನ ಆನೆಯ ಆವೇಶ ಇತ್ಯಾದಿ ಪ್ರಸಂಗಗಳು ಮತ್ತು ಕುವೆಂಪು ಅವರ ಕಾವ್ಯದಲ್ಲಿಯೇ ಅವರು ಹೇಳುವ ಭವ್ಯತೆಯ ಉದಾಹರಣೆಗಳನ್ನು ಕಾಣಬಹುದು.[೧೧೪]
೧೧೫ ೧೧೬

## ೯. ಶಾಂತರಸ

**ಶಾಂತಃ ಶಮಸ್ಥಾಯಿಭಾವಃ ಉತ್ತಮ ಪ್ರಕೃತಿರ್ಮತಃ ।**
**ಕುಂದೇಂದು ಸುಂದರಚ್ಛಾಯಃ ಶ್ರೀನಾರಾಯಣ ದೈವತಃ[೧೧೭] ॥**

ಶಾಂತರಸಕ್ಕೆ ಶಮವೇ ಸ್ಥಾಯಿಭಾವ ಉತ್ಕೃಷ್ಟನಾದ ವ್ಯಕ್ತಿಯಲ್ಲಿರುವ ಶಮವೇ ಶಾಂತರಸವಾಗಿ ಪರಿಣಮಿಸುವುದು. ಶಮವು ಸತ್ವಗುಣದಿಂದ ಹುಟ್ಟುವುದು. ಸತ್ವಗುಣಕ್ಕೆ ನಾರಾಯಣನೇ ಅಧಿಷ್ಠಾತೃವಾದ್ದರಿಂದ ಶಾಂತರಸಕ್ಕೂ ನಾರಾಯಣನೇ ಅಧಿದೇವತೆ ಯಾಗಿದ್ದಾನೆ. ಶ್ವೇತವರ್ಣದಾಗಿದೆ. ಲೋಕದ ವಸ್ತುಗಳೆಲ್ಲವೂ ಅವಶ್ಯವಾಗಿ ನಾಶವಾಗುವು ದೆಂದು ಭಾವಿಸಿ ಎಲ್ಲವನ್ನೂ ತುಚ್ಛವೆಂದೋ ಅಥವಾ ಪರಮಾತ್ಮ ಸ್ವರೂಪದೆಂದೋ ತಿಳಿಯುವುದೇ ಶಾಂತರಸದ ಆಲಂಬನ ಭಾವವೆನಿಸಿದೆ. ಪುಣ್ಯಾಶ್ರಮ, ದಿವ್ಯಕ್ಷೇತ್ರ, ತೀರ್ಥ, ಉಪವನ ಮಹಾತ್ಮರ ಸಂಗ ಇವೆಲ್ಲವು ಶಾಂತರಸಕ್ಕೆ ಉದ್ದೀಪನ ವಿಭಾವಗಳು. ರೋಮಾಂಚ ಮೊದಲಾದವು ಅನುಭಾವಗಳು. ನಿರ್ವೇದ, ಹರ್ಷ, ಸ್ಮರಣ, ಮತಿ, ಭೂತದಯೆ ಇವು ವ್ಯಭಿಚಾರಿಭಾವಗಳು. ಉದಾಹರಣೆಗಾಗಿ ಪ್ರಾಪಂಚಿಕ ವಿಷಯಗಳಲ್ಲಿ ವಿರಕ್ತನಾದ ಭಿಕ್ಷು ಹೇಳುವ ಮಾತಿದು.

"ರಸ್ತೆಯಲ್ಲಿ ಭಿಕ್ಷೆಗಾಗಿ ತಿರುಗಿ ಹಳೆ ಚಿಂದಿ ಬಟ್ಟೆಯನ್ನು ಧರಿಸಿ, ಪಥಿಕರಿಗೆ ಭಯ ದಿಂದಲೂ, ಕುತೂಹಲದಿಂದಲೂ, ನಾಗರೀಕರಿಗೆ ದಯೆಯಿಂದಲೂ ಕಾಣಿಸಿಕೊಂಡು, ಸಹಜವಾಗಿ ಹೊಂದಿಕೊಂಡಿರುವ ಚಿದಾನಂದದ ರಸವನ್ನು ಪಾನಮಾಡಿ ಸಂತೋಷ ದಿಂದ ಮಲಗಿರುವ ನನ್ನ ಕೈಯಲ್ಲಿರುವ ಭಿಕ್ಷಾನ್ನವನ್ನು ಯಾವಾಗ ಕಾಗೆಯೊಂದು ನಿರ್ಭಯವಾಗಿ ಕಸಿದುಕೊಂಡು ಹೋಗುವುದೋ!" ಇಲ್ಲಿ ಭಿಕ್ಷುವಿಗೆ ದೊರೆತಿರುವ ಶಮವೇ ಮುಂದೆ ಸಭ್ಯರಿಗೆ ಅನುಭವಕ್ಕೆ ಯೋಗ್ಯವೆನಿಸುವ ಶಾಂತರಸಕ್ಕೆ ಸ್ಥಾಯಿ ಎನಿಸಿದೆ. ಜಗತ್ತನ್ನು ಪರಮಾತ್ಮ ಸ್ವರೂಪವೆಂದು ತಿಳಿಯುವುದೇ ಆಲಂಬನವಿಭಾವ. ಅವನು ಹಿಂದಿನಿಂದಲೂ ಪುಣ್ಯಾಶ್ರಮಗಳನ್ನುನೋಡುವುದರಿಂದ ಅವುಗಳ ದರ್ಶನವೇ

ಅವನ ಹೃದಯದಲ್ಲಿ ಗೋಪ್ಯವಾಗಿದ್ದ ಶಮದ ವಿಕಾಸಕ್ಕೆ ಉದ್ದೀಪನ ಭಾವವೆನಿಸುತ್ತದೆ. ಅವನು ಹೇಳಿದ್ದಂತೆ ಭಿಕ್ಷೆಯನ್ನುಕಾಗೆ ಬಂದು ಅಪಹರಿಸಿಕೊಂಡು ಹೋಗುವುದೇ ಅನುಭಾವ. ಹರ್ಷ ಮೊದಲಾದವು ವ್ಯಭಿಚಾರಭಾವಗಳು. ಇವೆಲ್ಲವೂ ಸೇರಿ ಸಭ್ಯರ ಹೃದಯದಲ್ಲಿ ಶಾಂತರಸವಾಗಿ ಆಸ್ವಾದವಾಗುತ್ತದೆ.

ವಿಶ್ವನಾಥನು ಅಹಂಕಾರದ ವಾಸನೆಯೇ ಇಲ್ಲದಿರುವ ಶಾಂತರಸವನ್ನು ಅಹಂಕಾರದಿಂದ ತುಂಬಿರುವ ದಯಾಧರ್ಮ ವೀರರಸಗಳಲ್ಲಿ ಸೇರುವುದಿಲ್ಲವೆಂದು ಹೇಳಿ ನಾಗನಂದ[೧೧೮] ನಾಟಕದಲ್ಲಿ ಬರುವ ಶಾಂತರಸವನ್ನು ಪ್ರಧಾನವೆಂಬುದನ್ನು ತಿರಸ್ಕರಿಸಿದ್ದಾನೆ. ಏಕೆಂದರೆ, ಈ ನಾಟಕದಲ್ಲಿ ಬರುವ ನಾಯಕ ಜೀಮೂತವಾಯನನಿಗೆ ಮೊದಲಿಗೆ ವೈರಾಗ್ಯವಿದ್ದರೂ ಮಧ್ಯದಲ್ಲಿ ಅನುರಾಗವು ಹುಟ್ಟಿ ವಿಧ್ಯಾದರ ಚಕ್ರವರ್ತಿಯಾಗುತ್ತಾನೆ. ಇಲ್ಲಿ ಇವನ ಅಹಂಕಾರವು ಪೂರ್ತಿಯಾಗಿ ತೊಲಗುವುದಿಲ್ಲ ತೊಲಗಿದ್ದರೆ ಮಲಯವತಿಯೊಡನೆ ಅನುರಾಗವು ಹುಟ್ಟುತ್ತಿರಲಿಲ್ಲ. ಆದ್ದರಿಂದಲ್ಲಿ ಇಲ್ಲಿ ಜೀಮೂತವಾಹನಿಗೆ ಅಹಂಕಾರವಿತ್ತೆಂದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಅಹಂಕಾರದ ವಾಸನೆಯೇ ಇಲ್ಲದಿರುವ ಶಾಂತರಸವನ್ನು ಅಹಂಕಾರದಿಂದ ತುಂಬಿರುವ ದಯಾಧರ್ಮವೀರ ರಸಗಳಲ್ಲಿ ಸೇರಿಸಲಾಗುವುದಿಲ್ಲವೆಂಬುದನ್ನು ಸಾಹಿತ್ಯದರ್ಪಣ–ಕಾರನು ಈ ನಾಟಕದಲ್ಲಿ ಶಾಂತರಸ ಪ್ರಧಾನವೆಂಬುದನ್ನು ತಿರಸ್ಕರಿಸಿದ್ದಾನೆ.

ಶಾಂತರಸದಲ್ಲಿ ಶಮಕ್ಕೆ ಆಶ್ರಯನಾದವನಿಗೆ ದುಃಖ, ಸುಖ, ಚಿಂತೆ, ದ್ವೇಷ, ರಾಗ ಇವು ಯಾವುವು ಇರುವುದಿಲ್ಲ ಮತ್ತು ಯಾವ ಬಗೆಯ ಇಚ್ಛೆಯೂ ಇರುವುದಿಲ್ಲ. ಆದ್ದರಿಂದ ಎಲ್ಲಾ ಬಗೆಯ ವಿಷಯಗಳ ಇಚ್ಛೆಯು ಇಲ್ಲದಿರುವುದೇ ಶಾಂತರಸಕ್ಕೆ ಪ್ರಧಾನವಾದರಿಂದ ಇಂತಹ ಸ್ಥಿತಿಯೇ ಶಮವೆನಿಸಿ ಶಾಂತರಸವಾಗಿ ಪರಿಣಮಿಸುತ್ತದೆ. ಆದ್ದರಿಂದ ಇದು ಎಲ್ಲಾ ರಸಗಳಿಗೂ ಪ್ರಧಾನವೆನಿಸಿದೆ. ಎಂದರೆ ಈ ಬಗೆಯ ಶಾಂತರಸವು ಮೋಕ್ಷಾವಸ್ಥೆಯಲ್ಲಿ ಆತ್ಮಾಸ್ವರೂಪವನ್ನು ಹೊಂದಿದವನಿಗೆ ಮಾತ್ರವೇ ಸಂಭವಿಸುವುದರಿಂದ ಆ ಕಾಲದಲ್ಲಿ ರಸವನ್ನು ಪೋಷಿಸುವ ಸಂಚಾ–ರಿಭಾವಗಳು ಇಲ್ಲದ್ದರಿಂದ ರಸವು ಹೇಗೆ ಹೊಂದುತ್ತದೆ ಎಂಬುದಕ್ಕೆ ವಿಶ್ವನಾಥನು ಈ ಆಕ್ಷೇಪಕ್ಕೆ ಸಮಾಧಾನವನ್ನು ಈ ರೀತಿಯಾಗಿ ತಿಳಿಸಿದ್ದಾನೆ. ಸಂಸಾರದ ಕರ್ಮಗಳನ್ನು ನಡೆಸುತ್ತಲೇ ಯೋಗವನ್ನು ಅಭ್ಯಾಸ ಮಾಡುವವನು ಯುಕ್ತವಿಮುಕ್ತವೆನಿಸುವನು ಜನಕ ಮಹಾರಾಜನು ಕ್ಷತ್ರಿಯನಾಗಿದ್ದು ರಾಜ್ಯವನ್ನು ನಡೆಸುತ್ತಲೇ ಶಿವಯೋಗದ ಆನಂದವನ್ನು ಅನುಭವಿಸುತ್ತಿದ್ದನು. ಅವನು ಸಂಸಾರಿಯೂ ಮತ್ತು ಯೋಗಿಯೂ ಆಗಿದ್ದು, ವಿಷಯ ಭೋಗವನ್ನು ಅನುಭವಿಸುತ್ತಿರುವುದರಿಂದ ಅವನಿಗೆ ನಿರ್ವೇದ, ಹರ್ಷ ಮೊದಲಾದ ಸಂಚಾರಿಭಾವಗಳು ಸಂಭವಿಸುವುದರಲ್ಲಿ ಯಾವ ವಿರೋಧವೂ ಇಲ್ಲ. ಅವನಲ್ಲಿ ಸುಖವಿರುವುದಿಲ್ಲವೆಂದು ಹೇಳಿದ್ದು ವಿಷಯ ಸುಖಗಳಿಗೆ ಅನ್ವಯಿಸುವುದರಿಂದ ಸಮಂಜಸವಾಗುತ್ತದೆ. ಅವನು ಒಳಗೆ ವಿರಕ್ತನೂ, ಹೊರಗೆ ಆಸಕ್ತನೂ ಆಗಿರುವುದ–

ರಿಂದಲೂ, ಈಶ್ವರ ಪ್ರತ್ಯರ್ಥವಾಗಿ ಎಲ್ಲಾ ವ್ಯವಹಾರಗಳನ್ನೂ ನಡೆಸುವುದರಿಂದಲೂ ಅವನು ವಿಷಯ ಸುಖಗಳಿಗೆ ಅಂಟಿಕೊಳ್ಳದಂತೆ ಅನುಭವಿಸುವುದರಿಂದ ವ್ಯಭಿಚಾ–ರಿಭಾವಗಳಿಂದ ಅವನ ಶಮವು ಪುಷ್ಟಿ ಹೊಂದುತ್ತದೆ. ಹಾಗೆಯೇ ದೇವತೆಗಳ ಬಗ್ಗೆ ಇರುವ ಕಲೆ ಮೊದಲಾದವು ಫಲಾಪೇಕ್ಷೆಯಿಲ್ಲದೇ ಪ್ರವರ್ತಿಸುವುದಾದರೆ ಇವು ಸಹ ಶಾಂತರಸದಲ್ಲಿ ಸೇರುತ್ತದೆ ಎಂದು ಹೇಳಿ ಶಾಂತರಸವನ್ನು ವಿಶ್ವನಾಥನು ಒಪ್ಪಿದ್ದಾನೆ.

ಶಾಂತರಸದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಏಕೆಂದರೆ ನಾಟ್ಯಶಾಸ್ತ್ರದಲ್ಲಿ ಪ್ರತಿಪಾದಿತವಾದುದು ಎಂಟೇ ರಸಗಳು.[೧೧೯೧೨೦] ದೇವೇಂದ್ರನ ಎದುರಿಗೆ ಅಪ್ಸರೆಯರು 'ಅಷ್ಟರಸಾಶ್ರಯ'ವಾದ ನಾಟಕವನ್ನು ಭರತನಿಂದ ನಿಯುಕ್ತರಾಗಿ ಆಡಿದರೆಂಬ ಕಥಾಸಂಗತಿಯನ್ನು ಕಾಳಿದಾಸನ ನಾಟಕದಲ್ಲಿ ಬರುತ್ತದೆ.[೧೨೧] ಶಾಂತವೆಂಬ ನವಮರಸವನ್ನು ಭರತನು ಅಂಗೀಕರಿಸಿದ್ದಲ್ಲಿ ಭರತನ ಗ್ರಂಥವನ್ನು ಬಲ್ಲವನಾಗಿದ್ದ ಕಾಳಿದಾಸನು ತನ್ನ ಗ್ರಂಥದಲ್ಲಿ ನಿರೂಪಿಸುತ್ತಿದ್ದನು. ಶಾಂತರಸದ ಪ್ರತಿಪಾದನೆ ಮೊದಲಿಗೆ ಉದ್ಭಟನ 'ಕಾವ್ಯಾಲಂಕಾರಸಾರಸಂಗ್ರಹ'[೧೨೨] ದಲ್ಲಿ ಬಂದರು ಅದರ ವಿಷಯವಾಗಿ ಏನನ್ನೂ ಚರ್ಚಿಸದೇ ಮುಂದೆ ಹೋಗಿದ್ದಾನೆ. ನಂತರ ಬಂದ ರುದ್ರಟ ಎಂಟು ರಸಗಳ ಜೊತೆಗೆ 'ಶಾಂತ', 'ಪ್ರೇಯಾಸ್' ಎರಡನ್ನ ಉದ್ದೇಶಪೂರ್ವಕವಾಗಿ ಸೇರಿಸಿ ಅವುಗಳೊಂದಿಗೆ ಸಮಾನ ಪದವಿಯನ್ನು ಕೊಡುತ್ತಾನೆ. ಆನಂದವರ್ಧನನು 'ಧ್ವನ್ಯಾಲೋಕ'ದಲ್ಲಿ ಶಾಂತರಸಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು, 'ಮಹಾಭಾರತ'ದಲ್ಲಿ ಇದೇ ಪ್ರಧಾನ ರಸವೆಂದು ಪ್ರತಿಪಾದಿಸಿ ಅದರ ಪ್ರಾಶಸ್ತ್ಯವನ್ನು ಸ್ಥಾಪಿಸಿದ್ದಾನೆ.[೧೨೩] ನಂತರ ಬಂದ ಅಭಿನವಗುಪ್ತನು ಈ ಎಲ್ಲಾ ಆಕ್ಷೇಪಣೆಗಳಿಗೆ ಉತ್ತರಕೊಟ್ಟು ಇದರ ಸ್ವರೂಪವನ್ನು ಪರಿಷ್ಕರಿಸಿ ಎಲ್ಲ ರಸಗಳಿಗಿಂತಲೂ ಹಿರಿಯಸ್ಥಾನವನ್ನು ಇದಕ್ಕೆ ಕೊಟ್ಟನು. ಈ ಕಾರ್ಯವನ್ನು ಅಭಿನವಗುಪ್ತನ ಗುರುವಾದ ಭಟ್ಟತೌತನ ಕಾವ್ಯಕೌತುಕದಲ್ಲಿಯೂ ಅಭಿನವಗುಪ್ತನೇ ಅದರ ಮೇಲೆ ಬರದ 'ವಿವರಣ'ದಲ್ಲಿಯೂ ನಡೆದಿದೆ.[೧೨೪] ಅಭಿನವಗುಪ್ತನು 'ಶಾಂತ'ವೊಂದೇ ಪ್ರಧಾನವಾಗಿ ಕಾವ್ಯನಾಟಕಗಳಲ್ಲಿ ಮೂಡಿ ಬರಬೇಕೆಂದು ಹೇಳುವುದಿಲ್ಲ. ವಾಸ್ತವವಾಗಿ ಅದು ಶೃಂಗಾರ, ವೀರ ರಸಗಳಿಗೆ ಪೂರಕವಾಗಿ ಬರಬೇಕೆಂಬುದೇ ಆತನ ಅಭಿಪ್ರಾಯ ಧನಂಜಯ ಧನಿಕರಿಬ್ಬರೂ ಶಾಂತರಸದ ಪ್ರಮುಖ ವಿರೋಧಿಗಳಾಗಿದ್ದಾರೆ. ಇವರ ಪ್ರಕಾರ ಶಾಂತರಸಕ್ಕೆ ಅಭಿನಯ ಪ್ರಧಾನವಾದ ನಾಟ್ಯದಲ್ಲಿ ಪುಷ್ಟಿಯಿಲ್ಲವೆಂದು ಹೇಳಿ, ಕಾವ್ಯದಲ್ಲೂ ಅದಕ್ಕೆ ಸ್ಥಾನವನ್ನು ನಿರಾಕರಿಸಿದ್ದಾರೆ. ಸುಖದುಃಖ ರಾಗದ್ವೇಷಾದಿಗಳಲ್ಲಿ ಯಾವುದೋ ಇಲ್ಲದಿರುವ ಸಮಸ್ಥಿತಿಯೇ ಶಾಂತರಸದಲ್ಲಿ ಪ್ರಧಾನವಾಗಿದ್ದರೆ ಅದು ಮೋಕ್ಷಾವಸ್ಥೆಯಲ್ಲಿ ಮಾತ್ರ ದೊರೆಯತಕ್ಕದ್ದು. ಅದರ ಸ್ವರೂಪವು ಅನಿರ್ವಚನನೀಯವಾದ ಕಾರಣ, ನಾಟ್ಯಕ್ಕೆ ಹೇಗೋ ಹಾಗೆಯೇ, ಶಬ್ದಮಯವಾದ ಕಾವ್ಯಕ್ಕೂ ಅದು ವಿಷಯವಾಗಲಾರದು ಎಂಬುದು ಇವರ ವಾದ.[೧೨೫]

ಇನ್ನು ಶಾಂತರಸಕ್ಕೆ ಸ್ಥಾಯಿಭಾವ ಯಾವುದು ಎಂಬುದಕ್ಕೆ ಚರ್ಚೆ ನಡೆದಿದೆ. ರುದ್ರಟನು ಶಮವೇ ಸ್ಥಾಯಿಭಾವವೆಂದು ಹೇಳಿದ್ದಾನೆ. 'ತೃಷ್ಣಾಕ್ಷಯ ಸುಖದ ಪರಿಪೋಷವೇ ಶಾಂತರಸದ ಲಕ್ಷಣ' ಎಂದು ಆನಂದವರ್ಧನನ ಅಭಿಪ್ರಾಯವಾಗಿದೆ.[೧೨೬] ಶಮವು ಸ್ಥಾಯಿಯೆಂದೂ ಹಲವರ ಮತ, ನಾಟ್ಯಶಾಸ್ತ್ರದ ಪ್ರಕ್ಷಿಪ್ತಭಾಗವೂ[೧೨೭] ಇದನ್ನೇ ಅನುಮೋಧಿಸುತ್ತದೆ. ತತಜ್ಞಾನವೇ ಮೋಕ್ಷ ಸಾಧನವಾದರಿಂದ ಇದೇ ಶಾಂತರಸದ ಸ್ಥಾಯಿಯೆಂದು ಅಭಿನವಗುಪ್ತನು ನಿರೂಪಿಸುತ್ತಾನೆ.

**ಸ್ವಂ ಸ್ವಂ ನಿಮಿತ್ತಮಾಸಾಧ್ಯ ಶಾಂತಾದ್ಭಾವ ಪ್ರವರ್ತತೇ ।**
**ಪುನರ್ನಿಮಿತ್ತಾ ಪಾಯೇ ಚ ಶಾಂತ ಏವೋಪಲೀಯತೇ**[೧೨೮] ॥

ಶಮ ಮತ್ತು ಅದರಿಂದ ಬರುವ 'ಶಾಂತ'ವೇ ಆತ್ಮನ ಸಹಜ ಸ್ವರೂಪ. ಅದೇ ಪ್ರಕೃತಿ. ಅದರ ಮೇಲೆ ಕಾಣಿಸಿಕೊಳ್ಳುವ ಇತ್ಯಾದಿ ಭಾವಗಳು ವಿಕೃತಿಗಳು. ಅಂ–ದರೆ ಅಲೆಯಂತೆ ತೋರಿ ಮರೆಯಾಗುವಂತಹವುಗಳು. ಇವು ಆಸ್ವಾದನೆಯಿಂದ ಅಲೌಕಿಕತೆಗೇರಿ ದಾಗ ರಸವಾಗಿ ಮೂಲರಸ ಶಾಂತದಲ್ಲಿಯೇ ಲೀನವಾಗುತ್ತವೆ. ಆದ್ದರಿಂದಲೇ ಭರತ 'ಶಾಂತ'ವನ್ನು ಎಲ್ಲ ರಸಗಳ ಶಿಖರ ಪ್ರಾಯವೆಂದು ಪರಿಗಣಿಸಿದರೆಂದು ಅಭಿನವಗುಪ್ತನು ಹೇಳುತ್ತಾನೆ. ಅಂದರೆ 'ಶಮ'ದ ವಿಚಾರವನ್ನು ಭರತನು ಮೊದಲೇ ತಿಳಿದಿದ್ದಾನೆಂದು ಅಭಿನವಗುಪ್ತನ ಮತವಾಗಿದೆ. ಎಲ್ಲಾ ಭಾವಗಳು ಲೌಕಿಕ ಪ್ರಕ್ರಿಯೆಯನ್ನು ಕಳೆದುಕೊಂಡು ಶಮದ ಸ್ಪರ್ಶವನ್ನು ಪಡೆದಾಗ ಮಾತ್ರ ರಸವಾಗುತ್ತದೆ. ಅದರಿಂದ ಈ ಎಲ್ಲಾ ರಸಗಳನ್ನು ಹಿಂದೆ ಹೇಳಿದಂತೆ 'ಶಾಂತಪ್ರಾಯ'ವೆಂದೇ ಹೇಳಬೇಕಾಗುತ್ತದೆ. ಈ ಅರ್ಥದಲ್ಲಿ 'ಶಾಂತ'ವನ್ನು ಒಂದು ರಸವೆಂದು ಒಪ್ಪಿಕೊಳ್ಳವುದಷ್ಟೆ ಅಲ್ಲ, ಶಾಂತವನ್ನು ಒಂದು ರಸವೆಂದು ಅರ್ಥವಾಗುತ್ತದೆ. ಅಭಿನವಗುಪ್ತನ ವಿವೇಚನೆಯಿಂದ 'ಶಾಂತರಸ' ತನ್ನ ಶಾಶ್ವತ ಸ್ಥಾನವನ್ನು ಪಡೆದುದಲ್ಲದೇ ಮುಂದೆ ಅದನ್ನು ಕುರಿತ ಚರ್ಚೆಯೇ ಇಲ್ಲದಂತಾಯಿತು. ಮಹಾಭಾರತದಲ್ಲಿ ಶಾಂತರಸವೇ ಪ್ರಧಾನವೆಂದು ಆನಂದವರ್ಧನನು [೧೨೯]ಮತ್ತು ಕ್ಷೇಮೇಂದ್ರನು ತನ್ನ 'ಭಾರತಮಂಜರಿ'ಯ ಕೊನೆಯಲ್ಲಿ[೧೩೦] ಬೋಧಿಸಿದ್ದಾನೆ. ಶಾಂತರಸಕ್ಕೆ ಅನೇಕ ಕಾವ್ಯಗಳು ಉದಾಹರಣೆಗಳಾಗಿವೆ.[೧೩೧] [೧೩೨] [೧೩೩] ಕನ್ನಡದ ಅಲಂಕಾರಿಕರೆಲ್ಲರೂ ಶಾಂತರಸವನ್ನು ಅಂಗೀಕರಿಸುತ್ತಾರೆ. ಅದರ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಕವಿರಾಜಮಾರ್ಗವು [ಕ್ರಿ.ಶ.ಸು. ೮೫೦] ದಂಡಿಯ 'ಕಾವ್ಯದರ್ಶ'ವನ್ನೇ ಅನುಸ–ರಿಸಿದ್ದರೂ, ಈ ವಿಚಾರದಲ್ಲಿ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಒಟ್ಟಿನಲ್ಲಿ ಶಾಂತರಸವು ಸೇರಿ ನವರಸಗಳನ್ನು ಅಭಿನವಗುಪ್ತ ಮತ್ತು ಅನೇಕ ಅಲಂಕಾ–ರಿಕರೂ ಸಹ ಅಂಗೀಕರಿಸಿದಾರೆಂದು ತಿಳಿಯಲು ಅಭಿನವಗುಪ್ತನ ಶಾಂತರಸದ ಪ್ರತಿಪಾದನೆಯ ವಿವೇಚನೆಯಿಂದ ತಿಳಿಯುತ್ತದೆ. ಶಾಂತರಸದ ಜೊತೆಗೆ ಇತರ

ರಸಗಳ ಪರಿಕಲ್ಪನೆಯೂ ಅಭಿನವಗುಪ್ತನಿಗಿಂತ ಹಿಂದಿನಿಂದಲೂ ಬೆಳೆದು ಬಂದಿದೆ. ಮುಖ್ಯವಾಗಿ ಪ್ರೇಯಸ್, ಸ್ನೇಹ, ಲೌಲ್ಯ ಮತ್ತು ಭಕ್ತಿರಸಗಳನ್ನು ಅಭಿನವಗುಪ್ತನು ಪ್ರಸಿದ್ಧವಾದ ಒಂಬತ್ತು ರಸಗಳಲ್ಲೇ ಸಮಾವೇಶಗೊಳಿಸಿದ್ದಾನೆ. ಆದ್ದರಿಂದ ಅವುಗಳಲ್ಲಿ ಒಂದನ್ನೂ ಪ್ರತ್ಯೇಕ ರಸವೆಂದು ಹೇಳದೇ ರಸಗಳಿರುವುದು ಒಂಬತೇ ಎಂದು ಅಭಿನವಗುಪ್ತನು ಸ್ಪಷ್ಟಪಡಿಸುತ್ತಾನೆ.

## ೧೦. ವಾತ್ಸಲ್ಯ ರಸ

ವಾತ್ಸಲ್ಯ ರಸವನ್ನು ಹತ್ತನೆಯ ರಸವನ್ನಾಗಿ ಪರಿಗಣಿಸಿ ಇದು ಭರತನಿಗೆ ಸಮ್ಮತವಾಗಿದೆ ಎಂದು ವಿಶ್ವನಾಥನು ನಿರೂಪಿಸಿದ್ದಾನೆ. ವಾತ್ಸಲ್ಯವೆನಿಸಿದ ಸ್ನೇಹವೇ ಅದರ ಸ್ಥಾಯಿ ಭಾವ, ಹೂವಿನ ಮೊಗ್ಗಿನಂತೆ ವರ್ಣವಿದ್ದು ಗೌರೀ ಮೊದಲಾದ ಹದಿನಾರು ಲೋಕಮಾತೆಯರೇ ಇದಕ್ಕೆ ಅಧಿಷ್ಠಾನ ದೇವತೆಯರೆನಿಸುವರು. ಪುತ್ರ, ಕನ್ಯೆ, ಸೋದರ, ಮೊದಲಾದವರು ಆಲಂಬನ ವಿಭಾವ, ವಿದ್ಯೆ, ಶೌರ್ಯ, ಧನಾರ್ಜನೆ ಮೊದಲಾದ ಅದರ ವ್ಯಾಪಾರಗಳು ಉದ್ದೀಪನ ವಿಭಾವವೆನಿಸಿದೆ. ಆಲಿಂಗನ, ಅಂಗಸ್ಪರ್ಶ, ಶಿರಶ್ಚುಂಬನ, ಪರಸ್ಪರ ನೋಟ, ರೋಮಾಂಚನಗೊಳ್ಳುವುದು. ಆನಂದದಿಂದ ಕಣ್ಣೀರು ಸುರಿಸುವುದು. ಇವೆಲ್ಲವೂ ಅನುಭಾವಗಳು. ಅನಿಷ್ಟವನ್ನು ಊಹಿಸುವುದು. ಹರ್ಷ, ಗರ್ವ ಮೊದಲಾದವು ಸಂಚಾರಿ ಭಾವಗಳು.

ಉದಾಹರಣೆಯಾಗಿ ರಘುವಿನ ಬಾಲ್ಯಾವಸ್ಥೆಯನ್ನು[೧೩೪] ವರ್ಣಿಸುವ ಪದ್ಯವಿದು. "ದಾಸಿಯು ಮೊದಲಿನ ಬಾರಿಗೆ ಉಚ್ಚರಿಸಿದ ಮಾತನ್ನು ಬಾಲಕನಾದ ರಘುವು ಉಚ್ಚ-ರಿಸುತ್ತಲೂ, ಆ ದಾಸಿಯ ಬೆರಳನ್ನು ಹಿಡಿದುಕೊಂಡು ನಡೆಯುತ್ತಲೂ, ಹಿರಿಯರಿಗೆ ನಮಸ್ಕರಿಸಬೇಕೆಂಬ ಶಿಕ್ಷೆಯಿಂದ ನಮ್ರನಾಗಿಯೂ ತಂದೆಗೆ ಸಂತೋಷವನ್ನುಂಟು ಮಾಡಿದನು". ಇಲ್ಲಿ ದಿಲೀಪನ ಸ್ನೇಹವೇ ಸ್ಥಾಯಿಭಾವ. ರಘುವೇ ಆಲಂಬನ ವಿಭಾವ. ಆಲಿಂಗನ ಮೊದಲಾದವುಗಳು ಅನುಭಾವಗಳೂ. ಹರ್ಷ ಮೊದಲಾದವು ಸಂಚಾರಿ ಭಾವಗಳು. ಇವುಗಳೆಲ್ಲವೂ ಸೇರಿ ಸಾಮಾಜಿಕರ ವಾತ್ಸಲ್ಯ ರಸವಾಗಿ ಪರಿಣಮಿಸುತ್ತದೆ ಎಂದು ವಿಶ್ವನಾಥನು ವಾತ್ಸಲ್ಯ ರಸವನ್ನು ಹತ್ತನೆಯ ರಸವನ್ನಾಗಿ ವಿವರಿಸಿದ್ದಾನೆ.

ರಸದ ಪ್ರಕಾರಗಳನ್ನು ತಿಳಿಸಿದ ಮೇಲೆ ಅವುಗಳಲ್ಲಿ ಪರಸ್ಪರ ವಿರೋಧವು ಹೇಗೆ ಸಂಭವಿಸುತ್ತದೆ ಎಂಬುದನ್ನು ತಿಳಿಸಿಲಾಗಿದೆ. ಕರುಣ. ಭೀಭತ್ಸ, ರೌದ್ರ, ವೀರ, ಭಯಾನಕ ರಸಗಳೊಡನೆ ಶೃಂಗಾರ ರಸಕ್ಕೆ ವಿರೋಧವಿರುವುದರಿಂದ ಇದನ್ನು ಅವುಗಳೊಡನೆ ಸೇರಿಸಬಾರದು. ಇವುಗಳ ಸ್ಥಾಯಿಭಾವವೆನಿಸಿದ ಶೋಕ, ಜುಗುಪ್ಸೆ, ಕ್ರೋಧ, ಉತ್ಸಾಹ, ಭಯ ಇವು ಇರುವಾಗ ಶೃಂಗಾರದ ಸ್ಥಾಯಿ ಎನಿಸಿದ ರತಿಯೇ ತೋರುವುದಿಲ್ಲ. ಆದ್ದರಿಂದ ಶೃಂಗಾರಕ್ಕೆ ಈ ರಸಗಳೊಡನೆ ವಿರೋಧವಿದೆ. ಹಾಗೆಯೇ ಹಾಸ್ಯರಸಕ್ಕೆ ಭಯಾನಕ ಮತ್ತು ಕರುಣ ರಸಗಳೊಡನೆ ವಿರೋಧವಿದೆ. ರೌದ್ರರಸಕ್ಕೆ

ಹಾಸ್ಯ, ಶೃಂಗಾರ, ಭಯಾನಕರಸಗಳೊಡನೆ ವಿರೋಧವಿದೆ. ವೀರರಸಕ್ಕೆ ಭಯಾನಕ, ಶಾಂತರಸಗಳೊಡನೆ ವಿರೋಧವಿದೆ. ಭೀಭತ್ಸರಸಕ್ಕೆ ಶೃಂಗಾರದೊಡನೆ ವಿರೋಧವಿದೆ. ಭಯಾನಕರಸಕ್ಕೆ ಶೃಂಗಾರ, ವೀರ, ರೌದ್ರ, ಹಾಸ್ಯ ಶಾಂತರಸಗಳೊಡನೆ ವಿರೋಧವಿದೆ. ಭೀಭತ್ಸರಸಕ್ಕೆ ಶೃಂಗಾರದೊಡನೆ ವಿರೋಧವಿದೆ. ರಸಗಳಿಗೆ ಪರಸ್ಪರ ವಿರೋಧ ಹೇಗೆ ಸಂಭವಿಸುತ್ತದೆ ಎಂಬುದನ್ನು ವಿವರವಾಗಿ ಉದಾಹರಣೆಗಳೊಂದಿಗೆ ಮುಂದೆ ನಿರೂಪಿಸಲಾಗಿದೆ.

ಉನ್ಮಾದ, ನಿರ್ವೇದ ಇವು ಯಾವ ನಾಯಕನಲ್ಲೂ ಗ್ರಂಥವು ಮುಗಿಯುವರೆಗು ಸ್ಥಿರವಾಗಿರುವುದಿಲ್ಲವಾದರಿಂದ ಇವು ಸ್ಥಾಯಿ ಎನಿಸಲಾರವು ಎಂಬುದಕ್ಕೆ ವಿಶ್ವನಾಥ–ನು ಉದಾಹರಿಸಿದ್ದಾನೆ. "ಪುರೂರವನಿಗೆ ಬಂದ ಉನ್ಮಾದವು ಆ ಅಂಕದಲ್ಲಿ ಮಾತ್ರ ಇದ್ದು ನಾಟಕದ ಉದ್ದಕ್ಕೂ ಇಲ್ಲದೇ ಇರುವುದರಿಂದ ಸ್ಥಾಯಿ ಎನಿಸಿಲ್ಲ. ಅವನಿಗೆ ಉರ್ವಶಿಯಲ್ಲಿ ಇದ್ದ ರತಿಯು ಮಾತ್ರ ನಾಟಕದ ಕೊನೆಯವರೆಗೂ ಇರುವುದರಿಂದ ಸ್ಥಾಯಿ ಎನಿಸಿದೆ. [೧೩೫]

**ರಸಭಾವೌ ತದಾಭಾಸೌ ಭಾವಸ್ಯ ಪ್ರಶಮೋದಯೌ ।**
**ಸಂಧಿಃ ಶಬಲತಾ ಚೇತಿ ಸರ್ವೇऽಪಿ ರಸನಾದ್ರಸಾಃ[೧೩೬] ॥**

ರಸ, ಭಾವ, ರಸಾಭಾಸ, ಭಾವಪ್ರಶಮ, ಭಾವೋದಯ, ಭಾವಸಂಧಿ, ಭಾವಶಬಲತೆ, ಈ ಎಲ್ಲಾ ಚಿತ್ತವೃತ್ತಿಗಳು ಕಾವ್ಯನಾಟಕಗಳಲ್ಲಿ ಸಾಮಾಜಿಕನಿಗೆ ಹೇಗೆ ಆಸ್ವಾದ ಕೊಡಬಹುದೆಂದು ವಿವರಿಸಲಾಗಿದೆ. ರಸಕ್ಕಿಂತ ಪ್ರಧಾನವಾಗಿ ತೋರಿ ಬರುವ ನಿರ್ವೇದ ಮೊದಲಾದ ವ್ಯಭಿಚಾರಿಭಾವಗಳು, ದೇವಗುರು ಮೊದಲಾದವರ ಬಗ್ಗೆ ಹುಟ್ಟುವ ರತಿ ಇವೆಲ್ಲವೂ ಭಾವವೆನಿಸಿದೆ. ವಿಭಾವಾದಿಗಳಿಂದ ಪುಷ್ಟಿಯನ್ನು ಹೊಂದದೇ ಇರುವ ರತ್ಯಾದಿ ಸ್ಥಾಯಿಭಾವವು ಭಾವವೆನಿಸುತ್ತದೆ. "ನಿರ್ವೇದ ಮೊದಲಾದ ವ್ಯಭಿಚಾರಿಭಾವ ಗಳಿಲ್ಲದೆ ರಸವೇ ಇರುವುದಿಲ್ಲ. ಅವು ರಸಕ್ಕೆ ಪೋಷಕವಾದ್ದರಿಂದ ಅನಿವಾರ್ಯವೆನಿಸಿದೆ. ಹಾಗೆಯೇ ರಸವಿಲ್ಲದೆ ನಿರ್ವೇದ ಮೊದಲಾದ ಭಾವವೂ ಇರುವುದಿಲ್ಲ. ರಸಕ್ಕೆ ಮೂಲವೆನಿಸಿದ ಮೊದಲಾದ ಭಾವವೂ ಇರುವುದಿಲ್ಲ. ರಸಕ್ಕೆ ಮೂಲವೆನಿಸಿದ ಸ್ಥಾಯಿಭಾವ ದಲ್ಲಿ ವ್ಯಭಿಚಾರಭಾವವು ಜೊತೆಯಲ್ಲೆ ಇರಬೇಕು. ಆದ್ದರಿಂದಲೇ ರಸಭಾವಗಳು ಪರಸ್ಪರ ಅವಲಂಬನದಿಂದಲೇ ವಿಕಾಸಗೊಳ್ಳುತ್ತವೆ".[೧೩೭] ವ್ಯಭಿಚಾರಿಭಾವವು ಅಭಿವ್ಯಕ್ತವಾಗಿ ಭಾವವೆನಿಸುವುದಕ್ಕೆ ಉದಾಹರಿಸಲಾಗಿದೆ. "ನಾರದನು ಪಾರ್ವತಿಯ ಎದುರಿಗೆ ಅವಳ ತಂದೆಯೊಡನೆ ಅವಳ ವಿವಾಹದ ಬಗ್ಗೆ ಮಾತನಾಡುತ್ತಿರಲು ಅಕೆಯು ವಿನೋದಕಾಗಿ ಕೈಯಲ್ಲಿ ಹಿಡಿದಿದ್ದ ಕಮಲದ ದಳಗಳನ್ನು ಎಣಿಕೆ ಮಾಡತೊಡಗಿದಳು" ಇಲ್ಲಿ ಅವಹಿತ್ಥವೆಂಬ ವ್ಯಭಿಚಾರಿಭಾವವು ಅಭಿವ್ಯಕ್ತವಾಗಿ ಭಾವನೆನಿಸಿದೆ. ಅವಹಿತ್ಥವೆಂದರೆ ತನ್ನ ಅಭಿಪ್ರಾಯವನ್ನು ತೋರ್ಪಡಿಸದೇ ಇರುವ ಸ್ಥಿತಿ.

ದೇವರ ಬಗ್ಗೆ ಇರುವ ರತಿಯನ್ನು ಕುಂದ ಮಾಲೆಯಲ್ಲಿ ಹೀಗೆ ತಿಳಿಸಿದೆ. “ಎಲ್ಲೈ ನರಕಾಸುರನ ಶತ್ರು ಕೃಷ್ಣನೇ, ನನಗೆ ಸ್ವರ್ಗದಲ್ಲಾಗಲೀ, ಭೂಮಿಯಲ್ಲಾಗಲೀ, ನರಕದಲ್ಲಾಗಲೀ ವಾಸಮಾಡುವಂತಾದರೂ ಚಿಂತೆಯಿಲ್ಲ. ಅದರಿಂದ ನನಗೆ ಎಳ್ಳಷ್ಟು ದುಃಖವಿಲ್ಲ, ಆದರೂ ಶರತ್ಕಾಲದ ಕಮಲವನ್ನು ಸೌಂದರ್ಯದಲ್ಲಿ ಮೀರಿಸಿರುವ ನಿನ್ನ ಪಾದಗಳನ್ನು ಮರಣಕಾಲದಲ್ಲೂ ಚಿಂತಿಸುವೆನು”. ಇಲ್ಲಿ ತೋರುವ ರತಿಗಿಂತಲೂ ಭಿನ್ನವಾದುದು ಆದ್ದರಿಂದ ಈ ಬಗೆಯ ರತಿಯು ರಸವಾಗಿ ಪರಿಣಮಿಸದೆ ಭಾವವಾಗಿಯೇ ನಿಲ್ಲುತ್ತದೆ. ಹೀಗೆಯೇ ಮುನಿಗಳ ಬಗ್ಗೆ, ರಾಜನ ಬಗ್ಗೆ, ಗುರು, ಸ್ನೇಹಿತ ಇವರ ಬಗ್ಗೆ ಇರುವ ರತಿಯು ಭಾವವೇ ಆಗುತ್ತದೆಯೇ ಹೊರತು ರಸವಾಗುವುದಿಲ್ಲವೆಂಬುದನ್ನ ವಿವೇಚಿಸಲಾಗಿದೆ.

ವ್ಯಭಿಚಾರಿ ಭಾವವನ್ನು ರಸವೆನಿಸದೆ ಭಾವವೆನಿಸುವುದಕ್ಕೆ ಉದಾಹರಣೆಯ ನಂತರ ಸ್ಥಾಯಿಭಾವವು ಹೇಗೆ ತೋರುವುದೋ ಹಾಗೆಯೇ ನಿಂತು ರಸವೆನಿಸದೆ ಭಾವವೆನಿಸುವುದಕ್ಕೆ ಉದಾಹರಣೆ “ಚಂದ್ರನು ಉದಯಸಿದೊಡನೆ ಸಮುದ್ರದಲ್ಲಿ ಬದಲಾವಣೆಯಾಗುವಂತೆ ಈಶ್ವರನಲ್ಲೂ ಚಿತ್ತವು ಕೊಂಚ ಬದಲಾವಣೆಯಾಯಿತು. ಆಗ ಅವನು ತೊಂಡೆಯ ಹಣ್ಣಿನಂತೆ ಕೆಳತುಟಿಯುಳ್ಳ ಉಮೆಯ ಮುಖದಲ್ಲಿ ತನ್ನ ದೃಷ್ಟಿಯನ್ನಿಟ್ಟನು”. ಇಲ್ಲಿ ಶಿವನಿಗೆ ಅಲ್ಲಿ ದೃಷ್ಟಿಯಿಟ್ಟಾಗ ಅಭಿವ್ಯಕ್ತವಾದ ರತಿಯು ಉದ್ದೀಪನವಿಭಾವ ಮತ್ತು ಸಂಚಾರಿ ಭಾವಗಳು ಇಲ್ಲದ್ದರಿಂದ ಪುಷ್ಟಿಯನ್ನು ಹೊಂದದೇ ಹೇಗೆ ಹುಟ್ಟಿತೋ ಹಾಗೆಯೇ ನಿಂತು ಭಾವವೆನಿಸಿದೆ.

ರತಿ ಎಂಬ ಭಾವವು ಸೂಕ್ಷ್ಮ ರೂಪದಿಂದ ಇದ್ದು ಅಭಿವ್ಯಕ್ತವಾಗುವಾಗ ಉದ್ದೀಪನ ವಿಭಾವ ಮತ್ತು ವ್ಯಭಿಚಾರಿ ಭಾವಗಳ ಪರಿಪೋಷವಿಲ್ಲದಿದ್ದರೆ ಬೆಳೆಯುವುದಿಲ್ಲ ಇಲ್ಲಿ ಪಾರ್ವತಿಯ ಬಗ್ಗೆ ಶಿವನಿಗುಂಟಾದ ರತಿಭಾವಕ್ಕೆ ಉದ್ದೀಪನ ವ್ಯಭಿಚಾರಿಭಾವಗಳಿಂದ ಪರಿದೃಷ್ಟಿಯಾಗದೇ ಇರುವುದರಿಂದ ರತಿಯು ಭಾವವಾಗಿ ನಿಲ್ಲವುದೇ ಹೊರತು ಸ್ಥಾಯಿಯಾಗುವುದಿಲ್ಲ ವಿಶ್ವನಾಥನು ಇದಕ್ಕೆ ಪಾನಕರಸದ ಹೋಲಿಕೆಯನ್ನು ಕೊಟ್ಟಿದ್ದಾನೆ.  ಪಾನಕ ರಸದಲ್ಲಿ ಕಲ್ಲು ಸಕ್ಕರೆ ಮೆಣಸು ಇದನ್ನು ವ್ಯವಸ್ಥಿತವಾದ ಪ್ರಮಾಣದಲ್ಲಿಯೇ ಬೆರೆಸಬೇಕು. ಹಾಗೆ ಇಲ್ಲದೇ ಯಾವುದಾದರೊಂದು ಹೆಚ್ಚಾಗಿದ್ದರೂ ಅದಕ್ಕೆ ಪಾನಕವೆಂಬ ಹೆಸರು ಮಾತ್ರ ತಪ್ಪುವುದಿಲ್ಲ.[೨೬] ಹಾಗೆ ವಿಭಾವ, ಅನುಭಾವ, ವ್ಯಭಿಚಾರಿಗಳೆಲ್ಲವೂ ಬೆರೆತು ಒಂದೇ ರಸವಾಗಿ ಪರಿಣಮಿಸುವಾಗ ಒಂದು ವ್ಯಭಿಚಾ–ರಿಭಾವವು ಪ್ರಧಾನವಾಗಿ ಪ್ರಕಾಶಗೊಂಡರೆ ಅದರಿಂದ ಕಾವ್ಯಕ್ಕೆ ಹಾನಿ ಏನೂ ಇಲ್ಲ ಪಾನಕವೂ ಕೊಂಚ ಕಾರವಾಗಿದ್ದರೂ ಅಥವಾ ಸಿಹಿಹಾಗಿದ್ದರೂ ಪಾನಕವಾಗಿಯೇ ಉಳಿಯುವಂತೆ ವ್ಯಭಿಚಾರಿಭಾವವು ಎದ್ದು ಕಾಣುವ ಹಾಗಿದ್ದರೂ ದೋಷವಿಲ್ಲ. ಎಲ್ಲವೂ ಸಮನಾಗಿ ಸೇರಿದರೆ ಮಾತ್ರವೇ ರಸವಾಗಬೇಕು. ಆದರೂ ಒಮ್ಮೆ ವ್ಯಭಿಚಾರಿ ಭಾವಕ್ಕೆ ಪ್ರಾಧಾನ್ಯವಿದ್ದರೂ ವಿರೋಧವಿಲ್ಲವೆಂದು ಪಾನಕರಸದ ಹೋಲಿಕೆಯಿಂದ

ವಿಶ್ವನಾಥನು ವಿವರಿಸಿದ್ದಾನೆ. ಆದ್ದರಿಂದ ಕಾವ್ಯದಲ್ಲಿ, ಆಸ್ವಾದ್ಯವಾಗತಕ್ಕವು ಈ ಮುಖ್ಯ ಚಿತ್ತವೃತ್ತಿಗಳು ಮಾತ್ರವೇ ಅಲ್ಲ ಎಲ್ಲಾ ಬಗೆಯ ಚಿತ್ತವೃತ್ತಿಗಳು ಅವು ಸ್ಥಾಯಿಯಾಗಿರಲಿ, ಸಂಚಾರಿಯಾಗಿರಲಿ ಸರಿಯಾಗಿ ಪ್ರತಿಪಾದಿತವಾದಾಗ ಸವಿಯನ್ನು ಕೂಡಬಲ್ಲವು ಎಂಬುದನ್ನು ರುದ್ರಟನೂ ಒಪ್ಪಿದ್ದಾನೆ [೧೩೯] ಸಾಹಿತ್ಯ ದರ್ಪಣಕಾರನ ಪಾನಕರಸದ ಹೋಲಿಕೆಯನ್ನ ಮಮ್ಮಟನೂ ಅಂಗೀಕರಿಸಿದ್ದಾನೆ. [೧೪೦]

ರಸ, ಭಾವಗಳ ಬಗ್ಗೆ ತಿಳಿದ ಮೇಲೆ ರಸಭಾಸಗಳ ಬಗ್ಗೆ ಇಲ್ಲಿ ವಿವೇಚಿಸಲಾಗಿದೆ. ರಸಾಭಾಸ ಎಂದರೆ ತೋರಿಕೆ ಎಂದರ್ಥ ರಸವಿಲ್ಲದಿದ್ದರೂ ರಸದಂತೆ ತೋರುವುದೇ 'ಅಭಾಸ'ವಾಗಿದೆ. ಬಾಹ್ಯವಾದ ಸ್ಥಾಯಿಭಾವಗಳು ಭರತನು ಲಕ್ಷಣಗಳಿಗೂ ಸ್ವಾಭಾವಿಕ ನಿಯಮಗಳಿಗೆ, ಧರ್ಮಶಾಸ್ತ್ರಕ್ಕೆ ವಿರುದ್ದವಾಗಿದ್ದರೆ, ಅವು ಅಭಾಸವೆನಿಸುತ್ತದೆ. ಅದೇ ರೀತಿ ಸ್ಥಾಯಿಗಿಂತ ಬೇರೆಯಾದ ಭಾವವು ಹಾಗೆ ವಿರುದ್ಧವಾಗಿದ್ದರೂ ಅನುಚಿತವೆನಿಸುತ್ತದೆ. ಉದಾಹರಣೆಯಾಗಿ ವಿವಾಹವಾಗಿರುವ ನಾಯಿಕೆಯ ರತಿಯು ನಾಯಕನಲ್ಲಿರಬೇಕಾದ್ದು ಉಪನಾಯಕಲೂ ಪ್ರವರ್ತಿಸುವುದಾದರೆ ಅದು ಶೃಂಗಾರ ರಸದಲ್ಲಿ ಅನೌಚಿತ್ಯವೆನಿಸುತ್ತದೆ. ಹಾಗೆಯೇ ನಾಯಕನಲ್ಲಿರಬೇಕಾದ್ದು ಉಪನಾಯಕನಲ್ಲೂ ಪ್ರವರ್ತಿಸುವುದಾದರೆ ಧರ್ಮಶಾಸ್ತ್ರದ ವಿರೋಧವು ಬರುತ್ತದೆ. ನಾಯಕನ ರತಿಯು ನಾಯಿಕೆಯಲ್ಲಿರುವ ಬದಲು ಋಷಿಯ, ಹಾಗೂ ಗುರುವಿನ ಹೆಂಡತಿಯಲ್ಲಿ ಇರುವುದಾದರೆ ಅದು ಅನೌಚಿತ್ಯವೇ ಆಗಿದೆ. ರತಿಯು ಯೋಗ್ಯವಾದ ಆಲಂಬನದಲ್ಲಿಯೇ ಪ್ರಕಾಶಿಸಬಲ್ಲದು. ಅಯೋಗ್ಯವಾದ ಕಡೆ ಇದ್ದರೆ ಅದು ಅಭಾಸವಾಗುವುದು. ಹಾಗೆಯೇ ರತಿಯು ಅನೇಕ ನಾಯಕರಲ್ಲಿ ಪ್ರವರ್ತಿಸಿದರೂ, ಸತಿಪತಿಗಳಿಬ್ಬರಲ್ಲೂ ಹೊಂದಾಣಿಕೆ ಇಲ್ಲದಿದ್ದರು ಅದು ಶೃಂಗಾರ ರಸದಲ್ಲಿ ಅನೌಚಿತ್ಯವೆನಿಸುವುದು. ಹಾಗೆಯೇ ಅನುರಾಗವು ಪ್ರತಿನಾಯಕರ ಲ್ಲಾಗಲಿ, ನೀಚನಲ್ಲಾಗಲೀ ಇರುವುದಾದರೆ ಅದು ಸಹ ಶೃಂಗಾರ ರಸಕ್ಕೆ ಅನೌಚಿತ್ಯವಾಗಿದೆ. ಗುರು ಮೊದಲಾದ ಹಿರಿಯರ ಮೇಲೆ ಕೋಪ ಹುಟ್ಟಿದರೆ ಅದು ರೌದ್ರರಸದಲ್ಲಿ ಅನೌಚಿತ್ಯವೆನಿಸುವುದು. ನೀಚಜಾತಿಯಲ್ಲಿ ಶಮವಿದ್ದರೆ ಅದು ಶಾಂತರಸಕ್ಕೆ ಅನುಚಿತವೆನಿಸಿದೆ. ಗುರು ಮೊದಲಾದ ಪೂಜ್ಯ ವ್ಯಕ್ತಿಗಳ ಬಗ್ಗೆ ಹಾಸ್ಯ ಮಾಡುವುದಾದರೆ ಅದು ಹಾಸ್ಯ ರಸದಲ್ಲಿ ಅನೌಚಿತ್ಯವಾಗಿದೆ. ಬ್ರಹ್ಮವಧ ಮೊದಲಾದ ಪಾಪಗಳಲ್ಲಿ ನೀಚನಿಗೆ ಉತ್ಸಾಹ ಹುಟ್ಟಿದರೆ ಅದರಿಂದ ತೋರುವ ವೀರರಸವು ಅನೌಚಿತ್ಯ ದೋಷದಿಂದ ಅಭಾಸವಾಗುವುದು. ಉತ್ತಮ ಪಾತ್ರದಿಂದ ಭಯವುಂಟಾಗುವುದಾದರೆ ಅದು ಅಭಾಸವೇ ಹೊರತು ರಸವೆನಿಸಲಾರದು ನೀಚ ಪಾತ್ರದಲ್ಲಿ ಇರುವ ಭಯವೇ ಭಯಾನಕ ರಸವಾಗಬಲ್ಲದು.

ರತಿಯು ಉಪನಾಯಕನಲ್ಲಿದ್ದರೆ ಹೇಗೆ ಅನುಚಿತವಾಗುವೆಂಬುದಕ್ಕೆ ಉದಾಹ–ರಿಸ ಲಾಗಿದೆ: "ಕೃಷ್ಣನೇ, ನನ್ನನ್ನು ಲಗ್ನವಾಗಿರುವವನು ಬಹಳ ಮುಗ್ಧನು, ಏನನ್ನೂ ತಿಳಿಯದವನು, ಅವನಿಂದ ನನಗೆ ತೃಪ್ತಿಯಾಗುವುದಿಲ್ಲ, ಈ ಅರಣ್ಯವಾದರೋ

ಭಯಂಕರವಾಗಿದೆ. ನಾನ್ನಾದರೋ ಹುಡುಗಿ, ಒಬ್ಬಳೇ ಇರುವೆನು. ಆದ್ದರಿಂದ ಈಗ ವಿಳಂಬವೇ ಆಗಬಾರದು. ರಮಿಸಲು ಯಾವ ತಡೆಯೂ ಇಲ್ಲ. ಹೊಂಗೆ ನೆರಳಿನಂತೆ ಮಲೀನವಾಗಿರುವ ಕತ್ತಲೆಯ ರಾಶಿಯು ಭೂಮಿಯನ್ನು ಆವರಿಸಿದೆ. ಭೀಕರವಾದ ಕಾಲವಾದರಿಂದ ನಾವು ರಮಿಸುವುದನ್ನು ಯಾರೊಬ್ಬರೂ ತಿಳಿಯಲಾರರು ಆದ್ದ- ರಿಂದ ಎಲೈ ಸುಂದರರನೇ ನಿನ್ನನ್ನು ಬಿಟ್ಟು ಹೋಗಲಿಕ್ಕೆ ನನಗೆ ಮನಸ್ಸಿಲ್ಲ. ಬೇಗನೆ ನನ್ನ ಮನೆಯವರ ದಾರಿಯನ್ನು ಬಿಡು. ಹೀಗೆ ಹೇಳಿದ ಗೋಪಿಯ ಮಾತುಗಳುನ್ನು ಕೇಳಿ ಆಕೆಯನ್ನು ಆಲಂಗಿಸಿ ಲೀಲಾ ವಿಹಾರ ಕುಶಲನಾದ ಕೃಷ್ಣನು ನಿಮ್ಮನ್ನು ಕಾಪಾಡಲಿ", ಇಲ್ಲಿ ಮದುವೆ ಆದ ಪತಿಯು ಏನು ತಿಳಿಯದವನು ಎಂಬುದರಿಂದ ಬೇರೊಬ್ಬ ಪತಿ ಇರುವನೆಂಬುದು ತಿಳಿದುವರುವುದರಿಂದ ಗೋಪಿಗೆ ಕೃಷ್ಣನು ಉಪನಾಯಕನೇ ಆದನೆಂಬುದು ತಿಳಿದುಬರುತ್ತದೆ.

ಅನುರಾಗವು ತಿರ್ಯಾಗ್ಜಾತಿಯ ಪ್ರಾಣಿಗಳ ಬಗ್ಗೆ ಪ್ರವರ್ತಿಸುವುದಕ್ಕೆ ಉದಾಹರಣೆ "ಹೆಣ್ಣು ದುಂಬಿಯು ವೀಣೆಯ ನಾದದಂತೆ ಶಬ್ದವನ್ನು ಮಾಡುತ್ತ ವನದಲ್ಲಿ ಬೆಳೆದ ದಿವ್ಯವಾದ ಮಲ್ಲಿಗೆಯ ಹೂವಿನಲ್ಲೂ ಹಾಗೆಯೇ ಬೇರೆ ಕಡೆಗಳಲ್ಲೂ ಇರುವ ತನ್ನ ವಲ್ಲಭ ಗಂಡು ದುಂಬಿಯನ್ನು ಕರೆಯುತ್ತಲಿದೆ". ಹೆಣ್ಣುದುಂಬಿಗೆ ಗಂಡುದುಂಬಿಯಲ್ಲಿ ಇರುವ ರತಿಭಾವವು ಇಲ್ಲಿ ತೋರುತ್ತದೆಯಾದ್ದರಿಂದ ಇದು ಶೃಂಗಾರ ರಸಾಭಾಸವೆನಿಸಿದೆ.

ತಿರ್ಯಾಗ್ಜಾತಿಯ ಪ್ರಾಣಿಗಳಲ್ಲಿ ರಸಾಬಾಸ ಹೇಳುವುದನ್ನು ಅಲಂಕಾರಿಕರು ವಿರೋಧಿಸಿದ್ದಾರೆ.[೧೪೧] ಖಿರ್ಯಗ್ಜಂತುಗಳಲ್ಲಿ ಪ್ರೇಮ ಕ್ರೋಧಾದಿಗಳ ವರ್ಣನೆ ಒಳ್ಳೆಯ ಆಸ್ವಾದವನ್ನು ಕೊಡುತ್ತದೆ ಎಂಬುದಕ್ಕೆ ಉದಾಹರಣೆಯನ್ನು ಕೊಡಲಾಗಿದೆ. 'ಕುಮಾರಸಂಭವ' ದಲ್ಲಿ ಹರನು ತಪೋನಿಷ್ಟನಾಗಿ ಕುಳಿತಿದ್ದ ಆಶ್ರಮವನ್ನು ಮನ್ಮಥನು ಹೊಕ್ಕಾಗ, ಅಲ್ಲಿಯ ಪ್ರಾಣಿವರ್ಗದಲ್ಲಿ ಉಂಟಾದ ಪ್ರೇಮಸಂಚಾರವನ್ನು ಕಾಳಿದಾಸನು ವರ್ಣಿಸುತ್ತಾನೆ.

**ಮಧು ದ್ವಿರೇಫಃ ಕುಮ್ಮೈಕಪಾತ್ರೆ**<br>**ಪಪೌ ಪ್ರಿಯಾಂ ಸ್ವಾಮಾನು ವರ್ತಮಾನ ।**<br>**ಶೃಂಗೇಣ ಚ ಸ್ಪರ್ಶ ನಿಮಿಲಿತಾಕ್ಷೀಂ**<br>**ಮೃಗೀಮಕಂಡೂಯತ ಕೃಷ್ಣಸಾರಃ** [೧೪೨] ॥

ಭಾವಾಭಾಸವು ಲಜ್ಜೆನಿರ್ವೇದ ಮೊದಲಾದ ವ್ಯಭಿಚಾರಿ ಭಾವಗಳು ವೇಶ್ಯೆ ದೂತಿ ಮೊದಲಾದವರಲ್ಲಿ ಇರುವುದಾದರೆ ಭಾವಾಭಿನವಾಗುವವೇ ಹೊರತು ಭಾವವೆನಿಸಲಾರವು. ಲಜ್ಜೆಯನ್ನು ಪೂರ್ತಿಯಾಗಿ ತೊರೆದಿರುವ ವೇಶ್ಯೆಯಲ್ಲಿ ಲಜ್ಜೆ ಇರುವುದಾದರೆ ಅದು ಭಾವವೆನಿಸದೆ ಭಾವಭಾಸವೇ ಆಗುತ್ತದೆ ಎಂಬುದು ವಿಶ್ವನಾಥನು ನಿರೂಪಿಸಿದ್ದಾನೆ.

ರಸಾಭಾಸ, ಭಾವಾಭಾಸ ಎನ್ನುವುದು ಅಚೇನ ವಸ್ತುಗಳಿಗೆ ಸಚೇತನದ ಭಾವಗಳನ್ನು ಆರೋಪಿಸಿ ವರ್ಣಿಸುವ ವಿಷಯಗಳಲ್ಲಿ ತೋರಿಕೆಯು ನಿಜವಾದರೂ 'ರಸಾಭಾಸ, ಭಾವಭಾಸ' ಎನ್ನುವುದು. ಅನುಚಿತವಲ್ಲ. ಆದರೆ, ಅಭಾಸಗಳನ್ನು ದೋಷವೆಂದು ಭಾವಿಸಬಾರದು[೧೪೩] ಏಕೆಂದರೆ ಈ ಬಗೆಯು ನಿರೂಪಣೆ, ಕವಿಗಳ ಸಾಹಿತ್ಯದ ಎಷ್ಟು ಭಾಗ ಈ ಬಗೆಯ 'ಅಭಾಸ' ವಿಷಯವೇ ಆಗಿದೆ.[೧೪೪] 'ಮೇಘಸಂದೇಶ'ಕ್ಕೆ ಇದೇ ಜೀವಿತ. ವರ್ಣನೆಗಳು ಸರಸವಾಗುವುದು ಇದರಿಂದ ರೂಪಕ, ಉತ್ಪ್ರೇಕ್ಷೆ ಮೊದಲಾದ ಅನೇಕ ಅಲಂಕಾರಗಳಿಗೆ ಪರ್ಯಾವಸಾನ ಇಲ್ಲಿ.[೧೪೫] "ಜಗದ್ಗ್ರಾವಪ್ರಖ್ಯಂ ನಿಜ ರಸಭರಾತ್ ನಾಯತಿ" ಎಂಬ ಪ್ರಶಂಸೆ ಸಾರ್ಥಕವಾಗುವುದು ಎಂದು ಈ ಮೂಲಕ ತಿಳಿಸಿದ್ದಾನೆ.

ಹಿಂದೆ ತಿಳಿಸಿದ ಯಾವುದಾದರೂ ಒಂದು ವ್ಯಭಿಚಾರಿ ಭಾವವು ತೊಲಗಿದರೆ ಅದು ಭಾವಶಾಂತಿ ಎಂಬ ಹೆಸರಿನಿಂದ ಕಾವ್ಯಕ್ಕೆ ಆತ್ಮವೆನಿಸುವುದು. ಯಾವುದಾದರು ಒಂದು ಭಾವವು ಉತ್ಪನ್ನವಾಗಲು ಅದು ಭಾವೋದಯವೆನಿಸಿದೆ. ಎರಡು ಭಾವಗಳು ಸಮಾನವಾಗಿ ನೆಲಸಿದ್ದರೆ ಅದು ಭಾವಸಂಧಿ. ಅನೇಕ ಭಾವಗಳು ಸಮಾನಭಾವದಿಂದ ಮಿಶ್ರವಾಗಿದ್ದರೆ ಅದು ಭಾವಶಬಲತೆ ಹೆಸರಿನಿಂದ ಕಾವ್ಯದ ಜೀವವೆನಿಸುವುದು. ಉದಾಹರಣೆಗೆ

**ಸಲ್ಲದೆಸಕವಿದೆಲ್ಲಿ ನನ್ನ ಶಶಿಕುಲವೆಲಿ ।**
**ಇನ್ನೊಮ್ಮೆ ನಾನವಳ ಕಾಣಬಹುದೇ ।**
**ನನ್ನ ವಿದ್ಯೆಗೆ ದೋಷ ಶಮನವಲ್ಲವೆ ಫಲವು ।**
**ಆಹ, ಮುನಿದಾಗಲೂ ಸೂಗಸು ಮೊಗವು!**
**ಶುಭ್ರ ಚರಿತದ ಕುಶಲಮತಿಗಳೇನೆನ್ನುವರು।**
**ಕನಸಿನೊಳಗೂ ದೊರೆಯಳವಳು ನನಗೆ!**
**ಮನಸೆ ನೆಮ್ಮದಿ ಹೊಂದು ಆವ ತರುಣನಿಗವಳ**
**ತುಟಿಸವಿಯನೀಂಟುವಾ ಸುಕೃತೆವುಂಟೋ!**

ಈ ಪದ್ಯದಲ್ಲಿ ವಿತರ್ಕ, ಔತ್ಸುಕ್ಯ, ಮತಿ, ಸ್ಮರಣ, ಶಂಕೆ, ದೈನ್ಯ, ಧೃತಿ, ಚಿಂತೆ ಎಂಬ ಭಾವಗಳು ಶಂಬಲಿತವಾಗಿರುವುದೆಂದು ಮಮ್ಮಟನು ನಿರ್ದೇಶಿಸುತ್ತಾನೆ. [೧೪೬]

ಇಲ್ಲಿಗೆ ರಸ, ರಸಾಭಾಸ, ಭಾವ ಭಾವಾವಾಸ, ಭಾವೋಧಯ, ಭಾವಶಾಂತಿ, ಭಾವಸಂಧಿ, ಭಾವಶಬಲತೆ. ಈ ಎಲ್ಲಾ ಚಿತ್ತವೃತ್ತಿಗಳೂ ಕಾವ್ಯನಾಟಕಗಳಲ್ಲಿ ಅಭಿವ್ಯಕ್ತವಾಗಿ ಸಾಮಾಜಿಕನಿಗೆ ಆಸ್ವಾದ ಕೊಡಬಹುದು. ಪ್ರಾಧಾನ್ಯ ಶಾಸ್ತ್ರ ಪ್ರಾಮಣ್ಯ ಮೊದಲಾದ ದೃಷ್ಟಿಯಿಂದ 'ರಸ'ವು ಬಂದಿದೆ ಎಂಬುದನ್ನು ಇತರ ಅಲಂಕಾರಿಕರ ಅಭಿಪ್ರಾಯವನ್ನು ಉದಾಹರಣೆಗೆಗಳೊಂದಿಗೆ ವಿಮರ್ಶಿಸಲಾಗಿದೆ.

ಒಟ್ಟಿನಲ್ಲಿ ವಿಶ್ವನಾಥನು ನಿರೂಪಿಸಿರುವ ರಸದ ಸ್ವರೂಪವನ್ನು ಮತ್ತು ಕಾವ್ಯ ನಾಟಕಗಳಲ್ಲಿ ಸಹೃದಯವನು ಸವಿಯುವ ಎಲ್ಲಾ ಚಿತ್ತವೃತ್ತಿಗಳಿಗೂ 'ರಸ' ಎಂದು ಕರೆಯುವುದರಿಂದ ವಿಶ್ವನಾಥನು ಕೊಟ್ಟಿರುವ 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬ ಕಾವ್ಯಲಕ್ಷಣದಲ್ಲಿ ರಸಕ್ಕೆ ಆತ್ಮಸ್ಥಾನವನ್ನು ಕೊಟ್ಟ ಸಾಹಿತ್ಯದರ್ಪಣಕಾರನ 'ರಸ' ಶಬ್ದಕ್ಕೆ ಇದೇ ವಿಶಾಲಾರ್ಥ ಅನ್ವರ್ಥಕವಾಗಿದೆ. ಎಂದು ನಿರೂಪಿಸುವುದನ್ನು ವಿಶ್ವನಾಥನು ಮಾಡಿರುವ ರಸದ ವಿವೇಚನೆಯನ್ನು ಹಿಂದಿನ ಲಾಕ್ಷಣಿಕರ ಅಭಿಪ್ರಾಯ ಉದಾಹರಣೆ ಯೊಂದಿಗೆ ವಿವೇಚಿಸಿ ಮುಂದೆ ಕಾವ್ಯಭೇದಗಳನ್ನು ಪರಾಮರ್ಶಿಸಲಾಗಿದೆ.

* * * *

## ಅಡಿ ಟಿಪ್ಪಣಿಗಳು

೧. ಅಥರ್ವವೇದ X-VIII-44

೨. ಡಾ. ಕೆ. ಕೃಷ್ಣಮೂರ್ತಿ, 'ರಸೋಲ್ಲಾಸ'

೩. ಭಗವದ್ಗೀತೆ ೯, ೫೯

೪. ವಾಲ್ಮೀಕಿ ರಾಮಯಣದ ಬಾಲಕಾಂಡದ ೫ನೆ ಸರ್ಗದಿಂದ ಈ ಶ್ಲೋಕವು ಉದಾಹರಿತವಾಗಿದೆ.

೫. ಭಾಮಹ ಕಾವ್ಯಾಲಂಕಾರ, ೧–೨೧.

೬. ಭಾಮಹ ಕಾವ್ಯಾಲಂಕಾರ, ೩–೬

೭. ದಂಡಿ ಕಾವ್ಯಾದರ್ಶ ೧–೧೮

೮. ಆನಂದವರ್ಧನ, ಧ್ವನ್ಯಾಲೋಕ,

೯. ವಿಶ್ವನಾಥ, ಸಾಹಿತ್ಯದರ್ಪಣ, ೧,೩

೧೦. ಭರತನು ಪ್ರಖ್ಯಾತವಾದ ಎಂಟು ಸ್ಥಾಯಿಭಾವವನ್ನು ಈ ರೀತಿ ಸೂತ್ರಿಸಿದ್ದಾನೆ.
ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಹೌ ಭಯಂ ತಥಾ ।
ಜಗುಪ್ಸಾ ವಿಸ್ಮಯ ಸ್ಮೃತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ ॥
[ನಾಟ್ಯಶಾಸ್ತ್ರ, ೬, ೧೭]

೧೧ ಲೊಲ್ಲಟನು ಭರತನ 'ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನ ಬರೆಯುವಾಗ ಈ ಮತವನ್ನು ಪ್ರತಿಪಾದಿಸಿದ್ದಾನೆ.

೧೨ "ತೇನ ಸ್ಥಾಯ್ಯೇವ ವಿಭಾವಾನುಭಾವಾದಿಭಿರುಚೀತೋರಸಃ [ಅಭಿನವಭಾರತಿ ಪು, ೯೨೯]

೧೩ ದಂಡಿಯ ಕಾವ್ಯಾದರ್ಶ [೯,೯೮೧, ೯.೨೮೨, ೯೯೮೫]

೧೪ ರನ್ನನ 'ಗದ್ದಾಯುದ್ಧ' [೪.೨೩,೩೧]

೧೫ ಸ್ತಂಭಃಸ್ವೇಧೋಃಥಿಥ ರೋಮಾಂಚಃ ಸ್ವರಭೇದೋಥ ವೇಪಥುಃ ।
ವೈವರ್ಣ್ಯ ಮಶ್ರುಃ ಪುಲಯ ಇತ್ಯಷ್ಟೌ ಸಾತ್ವಿಕ ಮತಾಃ ॥ [ನಾಟ್ಯಶಾಸ್ತ್ರ, ೬, ೯೯]

೧೬ ಲೋಕೇ ಸಕಲವಿಘ್ನಮಿನಿರ್ಮುಕ್ತ ಸಂವಿಕ್ತಿ [ರೇವ] ಚಮತ್ಕಾರ ನಿರ್ವೆಶ ರಸನಾಸ್ವಾದನ ಭೋಗ ಸಮಾಪತ್ತಿಲಯ ವಿಶ್ರಾಂತ್ಯದಿ ಶಭ್ಧೈರಭಿಧೀಯತೆ" [ಅಭಿನವಭಾರತಿ ೧. ಪು. ೨೮೦]

೧೭ ಈ ಶ್ಲೋಕವು ಪ್ರಭಾಕರನ 'ರಸಪ್ರದೀಪ' ಉಕ್ತವಾಗಿದ್ದು ಧರ್ಮದತ್ತನದೆಂದು ತಿಳಿಸಲಾಗಿದೆ.

೧೮ ಈ ನಾರಾಯಣಪಂಡಿತನು ತನ್ನ ಪಿತಾಮಹನೆಂದು ವಿಶ್ವನಾಥನು ಸಾಹಿತ್ಯದರ್ಪಣ ೩.೩ ವೃತ್ತಿಯಲ್ಲಿ ತಿಳಿಸಿದ್ದಾನೆ.

೧೯ **ತತ್ರ ಸರ್ವೇ ಅಮಿ ಸುಖಪ್ರಧಾನಃ ಸ್ವಸಂವಿಚ್ಚರ್ವಣ ರೂಪಸ್ಯ ಏಕಘನಸ್ಯ ಪ್ರಕಾಶಸ್ಯ ಆನಂದ ಸಾರತ್ವತ್**

**ಅವಿಶ್ರಾಂತಿ ರೂಪತ್ವೈವ ದುಃಖಂ, ತತ ಏವ ಕಾಪಿಲೈಃ ದುಖಸ್ಯ ಚಾಂಚಲ್ಯಮೇವ ಪ್ರಾಣತ್ವೇನ ಉಕ್ತಂ"**

[ಅಭಿನವಭಾರತಿ,

ಪು.೨೮೨]

೨೦ **ಸವಾಸನಾನಾಂ ಸಭ್ಯಾನಾಂ ರಸನ್ಯಾಸ್ವಾದನಂ ಭವೇತ್ ।**
**ನಿರ್ವಾಸನಾಸ್ತು ರಂಗಾಂತಃ ಕಾಷ್ಟಕುಡ್ಯಾಶ್ಮಸಂನಿಭಾಃ ॥**
ಈ ಶ್ಲೋಕವನ್ನು ಪ್ರಭಾಕರನು [ಕ್ರಿ.ಶ. ೧೫೮೩] ತನ್ನ 'ರಸಪ್ರದೀಪ'ದಲ್ಲಿ [ಪು ೩೨] 'ತದುಕ್ತಂ ಧರ್ಮದತ್ತೇನೆ" ಎಂದು ಉದಾಹರಿಸಿದ್ದಾನೆ.

೨೧ **ಶೃಂಗಾರೇ ವಿಪ್ರಲಂಭಾಖ್ಯೇ ಕರುಣೇ ಚ ಪ್ರಕರ್ಷವತ್ ।**
**ಮಾಧುರ್ಯ ಮಾರ್ದ್ರತಾಂ ಯಾತಿ ಯತಸ್ತತ್ರಾಧಿಕಾಂ ಮನಃ ॥**
"ಸಂಭೋಗ ಶೃಂಗಾರಾತ್ ಮಧುರ ತರೋ ವಿಪ್ರಲಂಭಃ ತತೋ?ಪಿ ಮಧುರತಮಃ ಕರುಣಃ" ಎಂಬ ಅಭಿನವಗುಪ್ತನ ಉಕ್ತಿ ಇಲ್ಲಿ ಗಮನಿಸಬಹುದು.

೨೨ ಶೃಂಗಾರೀ ಚೇತ್ ಕವಿಃ ಕಾವ್ಯೇ ಜಾತಂ ರಸಮಯಂ ಜಗತ್ ?
ಸ ಏವ ವೀತರಾಗಶ್ಚೇತ್ ನೀರಸಂ ಸರ್ವಮೇವ ತತ್ ॥ [ಧ್ವನಾಲೋಕ, ಪು ೨೨೨] ಅಭಿನವಗುಪ್ತನು ಈ ಶ್ಲೋಕದ ಪ್ರತೀಕವನ್ನು 'ಅಭಿನವಭಾರತಿ'ಯಲ್ಲಿ ಉದಾಹರಿಸಿದ್ದಾನೆ.

೨೩ ಭರತನ ನಾಟ್ಯಶಾಸ್ತ್ರ [೬ನೆ ಅಧ್ಯಾಯ]

೨೪ ಕುವೆಂಪು: 'ರಸೋ ವೈ ಸಃ' ೧೯೭೦ ಪುಟ ೯೦

೨೫ "ಸ್ಥಾಯಿಪ್ರತೀತಿರನುಮಿತಿರೂಪಾ ವಾಚ್ಯಾ, ನರಸಃ" [ಅಭಿನವಭಾರತಿ, ಪು. ೨೮೪]

೨೬ ಸ್ವಾಳ, ರಸರತ್ನಾಕರ, ಪು ೫೧.

೨೭ ಅಭಿನವಭಾರತಿ, ಪು ೨೮೩.

೨೮ **ಉನ್ಮಜ್ಜಂತೋ ನಿಮ್ಮಜ್ಜಂತಃ ಸ್ಥಾಯಿನ್ಯಂಬುನಿಧಾವಿವ ।**
**ಊರ್ಮಿದ್ವಧರ್ಮಯಂತ್ಯೇನಂ ಯಾಂತಿ ತದ್ರೂಪತಾಂಚತೇ ॥**
**[ರಸಾರ್ಣವಸುಧಾಕರ, ೨.೩]**

೨೯ ಎಚ್. ತಿಪ್ಪೇಸ್ವಾಮಿ, ತೌಲನಿಕ ಕಾವ್ಯಮೀಮಾಂಸೆ,

೩೦ ವಿಭಾವಗಳನ್ನು ಆಲಂಬನ ಉದ್ದೀಪನಾ ಎಂದು ವಿಭಾಗಿಸುವುದು ಕಾಲ್ಪನಿಕ, ವಿಭಾವ ಸಮುದಾಯವು ಒಟ್ಟುಗೂಡಿ ಭಾವವನ್ನು ಕೆರಳಿಸುತ್ತದೆ. ಆದ

ಕಾರಣವೇ ಭರತಮುನಿ ಈ ವಿಭಾವವನ್ನು ಎಲ್ಲಿಯೂ ಹೇಳಿಲ್ಲ ಎಂದು ಆಕ್ಷೇಪವಿದೆ.
[ ಅಭಿನವಭಾರತಿ, ೧. ೨೦೮]

೩೧ ಸಾಹಿತ್ಯ ದರ್ಪಣ, ೩. ೪೦

೩೨ ಸಾಹಿತ್ಯದರ್ಪಣ, ೩, ೪೫

೩೩ 'ಅಮರುಶತಕ'ದಿಂದ ಉದಾಹರಿತ ಶ್ಲೋಕ

೩೪ ಸಾಹಿತ್ಯದರ್ಪಣ, ೩, ೪೬

೩೫. ರಾಮಾಯಣದಲ್ಲಿ ಬರುವ ನಾಯಕ ರಾಮಚಂದ್ರನಿಗೆ ಸುಗ್ರೀವನೇ ಪೀಠಮರ್ಧನೆನಿಸಿದ್ದಾನೆ.

೩೬ ಸಾಹಿತ್ಯದರ್ಪಣ, ೩, ೫೮.

೩೭ ಭವಭೂತಿಯ 'ಉತ್ತರರಾಮಚರಿತ'ದಿಂದ ಆಯ್ದ ಶ್ಲೋಕ.

೩೮ ಸಾಹಿತ್ಯದರ್ಪಣ, ೩,೬೪

೩೯. 'ಮೃಚ್ಛ ಕಟಕ'ದಲ್ಲಿ ಬರುವ ವಸಂತ ಸೇನೆ ಇದಕ್ಕೆ ಉದಾಹರಣೆ ಆಗಿದ್ದಾಳೆ.

೪೦ ನಟಕ ಮೇಲಕನ 'ಮದನ ಮಂಜರಿಯಲ್ಲಿ' ಈ ಗುಣವುಳ್ಳ ಸ್ತ್ರೀಯನ್ನು ಕಾಣಬಹುದು.

೪೧ ಮಾಲತಿ ಮಾಧವ'ದಲ್ಲಿ ಬರುವ 'ಮಾಲತಿ' ಇದಕ್ಕೆ ಉದಾಹರಣೆಯಾಗಿದ್ದಾಳೆ.

೪೨ ಸಾಹಿತ್ಯದರ್ಪಣ, ೩ನೆ ಪರಿಚ್ಛೇದದಲ್ಲಿ ಬರುವ ನಾಯಿಕೆಯರ ೨೮ ಅಲಂಕಾರಗಳು.

೪೩ ರಾಮಯಣದಲ್ಲಿ, ಬರುವ ನಾಯಕ ರಾಮನಿಗೆ ರಾವಣನೇ ಪ್ರತಿನಾಯಕನಾಗಿದ್ದಾನೆ.

೪೪ 'ಸತ್ವ'ದಿಂದ ಉದಿಸಿದ್ದು "ಸಾತ್ತ್ವಿಕ ಇಲ್ಲಿ ಸತ್ವ ಎಂದರೆ ಚಿತ್ತೈಕಾಗ್ರ್ಯಂ [ಅಭಿನವಭಾರತಿ, ೧ ಪು. ೩೪೬], 'ಪ್ರಾಣಾತ್ಮಕಂ ವಸ್ತು' [ಹೇಮಚಂದ್ರ 'ಕಾವ್ಯನುಶಾಸನ' ೯.೫೩ ವೃತ್ತಿ]. "ಸ್ವಾತ್ಮ ವಿಶ್ರಾಮ ಪ್ರಕಾಶನಕಾರೀ ಕಶ್ಚನ ಆಂತರೋ ಧರ್ಮಃ" [ಸಾಹಿತ್ಯದರ್ಪಣ, ೩, ೨೩೪ ವೃತ್ತಿ] ಹೀಗೆ ವಿಧವಿಧವಾಗಿ ಅರ್ಥ ಮಾಡಿದ್ದಾರೆ. 'ನಾಟ್ಯ ಶಾಸ್ತ್ರದಲ್ಲಿ ಬರುವ "ಮನಸಃ ಸಮಾಧೌ ಸತ್ತ್ವ ನಿಷ್ಪತ್ತಿರ್ಭವತಿ" [೭,೧೪೭] ಎಂಬ ವಾಕ್ಯವು ಅಭಿನವಗುಪ್ತನ ಅರ್ಥಕ್ಕೆ ಪುಷ್ಟಿಯನ್ನು ಕೊಡುವಂತೆ ತೋರುತ್ತದೆ.

೪೫ ರಸರತ್ನಾಕರ [ಪು ೧೦೩ ನೋಡಿ]

೪೬ 'ಅಭಿನವಗುಪ್ತ'ನು 'ಅಭಿನವಭಾರತಿ'ಯಲ್ಲಿ ಸ್ಥಾಯಿಭಾವಕ್ಕೂ ಸಂಚಾರಿಭಾವಕ್ಕೂ ಈ ರೀತಿ ಹೋಲಿಕೆ ಕೊಟ್ಟಿದ್ದಾನೆ.

೪೭ **ಉನ್ಮಜ್ಜಂತೋ ನಿಮಜ್ಜಂತಃ ಸ್ಥಾಯಿನ್ಯಂಬುನಿದಾವಿವ ।**

ಊರ್ಮಿವದ್ವ ಧರ್ಯಯಂತ್ಯೇನಂ ಯಾಂತಿ ತದ್ರೂಪತಾಂ ಚ ತೇ ॥

[ರಸವರ್ಣವಸುಧಾಕರ–೨.೩]

೪೮. 'ನಾಟ್ಯಶಾಸ್ತ್ರ' [೬,೧೮,೨೦] ಈ ಮೂವತ್ತಮೂರು ಸಂಚಾರಿಭಾವಗಳನ್ನು ಕನ್ನಡದಲ್ಲಿ ಮುಖ್ಯವಾಗಿ 'ರಸರತ್ನಾಕರ'ಕಾರನು ಹೇಮಚಂದ್ರನ ಮತವನ್ನು ಅವಲಂಬಿಸಿ ಈ ವಿಷಯಗಳನ್ನು ಉದಾಹರಣೆಗಳೊಡನೆ ನಿರೂಪಿಸಿದ್ದಾನೆ.

೪೯. ಕಾಳಿದಾಸನ 'ಕುಮಾರಸಂಭವ'ದಲ್ಲಿ ಮನ್ಮಥನನ್ನು ಸುಟ್ಟ ಮೇಲೆ ರತಿಯ ಅವಸ್ಥೆಯನ್ನು ತಿಳಿಸುವ ಶ್ಲೋಕ ಇದಕ್ಕೆ ಉದಾಹರಣೆಯಾಗಿದೆ.

೫೦. ಕಾಳಿದಾಸನ 'ಮೇಘಧೂತ'ದಲ್ಲಿ ಯಕ್ಷನು ಹೇಳುವ ಮಾತು ಇದಕ್ಕೆ ಉದಾಹರಣೆ ಆಗಿದೆ.

೫೧ 'ವೇಣಿಸಂಹಾರ'ದಲ್ಲಿ ಕರ್ಣನು ಹೇಳುವ ಮಾತು ಇದಕ್ಕೆ ಉದಾಹರಣೆಯಾಗಿದೆ.

೫೨ ಭರತ, ನ್ಯಾಟಶಾಸ್ತ್ರ [೬ ೧೮]

೫೩. ಭರತ, ನ್ಯಾಟಶಾಸ್ತ್ರ [೬, ೧೯]

೫೪. ಕಾವ್ಯದರ್ಶ [೨,೩೯೨]

೫೫. ಕಾವ್ಯಲಂಕಾರಸಾರಸಂಗ್ರಹ [೪, ೫]

೫೬. ಕಾವ್ಯಲಂಕಾರ [೧೨, ೩, ೧೫, ೧೭]

೫೭. ಕಾವ್ಯಪ್ರಕಾಶ [೪, ೨೭, ೨೮]

೫೮. ಭರತನ, ನಾಟ್ಯಶಾಸ್ತ್ರ ೬ನೆಅಧ್ಯಾಯ, ಶಾಂತರಸ ಪ್ರಕರಣ [ಪು ೨೨೪, ೨೨೬]

೫೯. ಭರತನ, ನಾಟ್ಯಶಾಸ್ತ್ರ (೬ – ೧೭)

೬೦. ಭರತನ, ನಾಟ್ಯಶಾಸ್ತ್ರ (೬–೧೫)

೬೧. ರಸರತ್ನಾಕರ, [ಪ್ರಕರಣ ೧, ಸೂತ್ರ ೧೨]

೬೨. ಸಾಹಿತ್ಯದರ್ಪಣ, ೩ನೆ ಪರಿಚ್ಛೇದ

೬೩. "ರತಿರ್ದೇವಾದಿ ವಿಷಯಾ... ಭಾವಃ ಪ್ರೋಕ್ತಃ" [ಕಾವ್ಯಪ್ರಕಾಶ, ೪, ೧೨,೩]

೬೪. "ಆದಿಶಬ್ದಾನ್ಮುನಿಗುರುನ್ನಪಪುತ್ರಾದಿವಿಷಯಾ ಕಾಂತವಿಷಯಾ ತು ವ್ಯಕ್ತಾ ಶೃಂಗಾರಾಃ" (ವೃತ್ತಿ)

೬೫. ಮಾಲತಿಮಾಧವ, ದಲ್ಲಿ ಮಾಲತಿಯನ್ನು ಉದ್ದೇಶಿಸಿ ಮಾಧವನು ಹೇಳುವ ಮಾತಾಗಿದೆ.

೬೬. ಕಾಳಿದಾಸನ, ಕುಮಾರ ಸಂಭವದಲ್ಲಿ ಶಿವನಲ್ಲಿ ಅನುರಕ್ತಳಾದ ಪಾರ್ವತಿಯ ಅವಸ್ಥೆಯನ್ನು ಈ ಪದ್ಯದಲ್ಲಿ ವರ್ಣಿಸಲಾಗಿದೆ.

೬೭ ಬಾಣನ, ಕಾದಂಬರಿಯಲ್ಲಿ ಬರುವ ಮಹಶ್ವೇತೆ ಮತ್ತು ಪುಂಡರಿಕ ಇವರ ವೃತ್ತಾಂತದಲ್ಲಿ ಮರಣದ ಮೂರನೆ ಬಗೆಯನ್ನು ತಿಳಿಯಬಹುದು.

೬೮. ರಾಮಾಯಣದಲ್ಲಿ ಸೀತಾರಾಮಗಿದ್ದ ಪ್ರೇಮ ಇದಕ್ಕೆ ಉದಾಹರಣೆ.

೬೯. ಕಾಳಿದಾಸನ, ಕುಮಾರ ಸಂಭವ ಸಂಧ್ಯಾವರ್ಣನದ ಭಾಗದಲ್ಲಿ ನೋಡಿಕೊಳ್ಳುವುದು.

೭೦. ಸಾಹಿತ್ಯದರ್ಪಣದ [೩ನೆ ಪರಿಚ್ಛೇದ]

೭೧. ರುದ್ರಟನ, ಕಾವ್ಯಲಂಕಾರ [ಸಾಮ, ದಾನ, ಭೇದ, ಪ್ರಣತಿ, ಉಪೇಕ್ಷಾ, ಪ್ರಸಂಗ ಭ್ರಂಶ ಈ ಆರು ಉಪಾಯಗಳನ್ನು ರುದ್ರಟನು ವಿಶ್ವನಾಥನಿಗಿಂತ ಮುಂಚಿತವಾಗಿಯೇ ತಿಳಿಸಿದ್ದಾನೆ. ೧೪ ಅಧ್ಯಾಯದಲ್ಲಿ ಬರುವ ವಿಪ್ರಲಂಭ ಶೃಂಗಾರ ಅದರ ಹತ್ತು ಅವಸ್ಥೆಗಳನ್ನು ವಿವರಿಸಿದ್ದಾನೆ.

೭೨. ಸಾಹಿತ್ಯದರ್ಪಣದ ೩ನೆ ಪರಿಚ್ಛೇದಲ್ಲಿನ ಪ್ರವಾಸವಿಪ್ರಲಂಭದ ಮುಂದಿನ ಕಾರಿಕೆ.

೭೩. ಸಾಹಿತ್ಯದರ್ಪಣದ, ಪ್ರಾವಸವಿಪುಲಭದ ಮುಂದಿನ ಕಾರಿಕೆ

೭೪. ಬಾಣನ, ಕಾದಂಬರಿ

೭೫. ಸಾಹಿತ್ಯದರ್ಪಣದ, ಕರುಣವಿಪ್ರಲಂಭದ ಮುಂದಿನಕಾರಿಕೆ

೭೬. ಅಮರುಶತಕ, [೮೨ರ ಅನುವಾದ].

೭೭. ನಾಟ್ಯಶಾಸ್ತ್ರ, ೬ನೆ ಅಧ್ಯಾಯ,

೭೮. ಕಾಳಿದಾಸನ, 'ಕುಮಾರಸಂಭವ' ೮ನೆಸ್ವರ್ಗದಲ್ಲಿ ಪಾರ್ವತಿ ಪರಮೇಶ್ವರರ ಸಂಭೋಗ ಪೂರ್ವರಾಗವೆಂಬ ವಿಪ್ರಲಂಬವನ್ನು ವರ್ಣಿಸಿದೆ.

೭೯. ಸಾಹಿತ್ಯದರ್ಪಣ, ೩ನೆ ಪರಿಚ್ಛೇದನದಲ್ಲಿ ಬರುವ ಕಾರಿಕೆ.

೮೦. 'ಶೃಂಗಾರಾನುಕೃತಿರ್ಯಾತು ಸ ಹಾಸ್ಯಸ್ತು ಪ್ರಕೀರ್ತಿತಃ' [ನಾಟ್ಯಶಾಸ್ತ್ರ ೬,೪೦]

೮೧. "ಅನೌಚಿತ್ಯಪ್ರವೃತ್ತಿಕೃತಮೇವ ಹಿ ಹಾಸ್ಯವಿಭಾವತ್ವಂ ತಚ್ಚ ಅನೌಚಿತ್ಯಂ ಸರ್ವ ರಸಾನಾಂ ವಿಭಾವಾನುಭಾವವೌ ಸಂಭಾವ್ಯತೇ, ತೇನ ವ್ಯಬಿದಾರಿಣಾಮಪಿ ಏಷ್ಯೆವ ವಾರ್ತ"

೮೨. ಪರಿಹಾಸಿಕ ದೇಶಕುಲ ವಯೋವರ್ಣ ವಿಪರೀತಾದಿಯಾಲಂಬನೆವಿಭಾವಂ, ಪರಿಹಾಸ ಕಾದಿಗಳ ಕೇಶಬಂಧನಮಸದ್ಭಾಷಣ ಪ್ರಲಾಪ ನರ್ತನ ಮನ್ಯಗತ್ಯಾದ್ಯನುಕರಣ ಮಿವಾದಿಯಾಗಿ ಯುದ್ದೀಪನ ವಿಭಾವಂ" (ಸಾಳ್ವ, ರಸರತ್ನಾಕರ)

೮೩ ಭರತನ, ನಾಟ್ಯಶಾಸ್ತ್ರ ೬ನೆ ಅಧ್ಯಾಯ, ಪ್ರಧಾನವಾಗಿ ಎರಡು ಬಗೆಯ ಹಾಸ್ಯವನ್ನು 'ಆತ್ಮಸ್ಥ' ತಾನೇ ನಗುವುದು, 'ಪರಸ್ಥ' ಅನ್ಯರನ್ನು ನಗಿಸುವುದು ಎಂದು ಹೇಳಿ ಈ ನಗುವಿನಲ್ಲಿ ಸ್ಮಿತ, ಹಸಿತ, ವಿಹಸಿತ, ಉಪಸಿತ, ಅಪಹಸಿತ, ಅತಿಸಿತ ಇವುಗಳನ್ನ ಉತ್ತಮ ಮಧ್ಯಮ ಅಧಮಗಳಾಗಿ ವಿಭಾಗಿಸಿದ್ದಾನೆ.

೮೪. ಕುಮಾರವ್ಯಾಸ, ಭಾರತದಲ್ಲಿ ಬರುವ ಉತ್ತರನ ಸನ್ನಿವೇಶ, [ವಿರಾಟಪರ್ವ ೫–೧೫]

೮೪. ಅಭಿನವಭಾರತಿ, ೧ ಪು ೩೧೭

೮೬. ನಾಟ್ಯಶಾಸ್ತ್ರ [೬, ೪೫ರ ಮುಂದೆ]

೮೭. ರಘುವಂಶ [೮, ೪೩-೭೦]

೮೮. ದಶರೂಪಕ [೪೬೭ರ ವ್ಯಾಖ್ಯಾನ]

೮೯. ಧ್ವನ್ಯಾಲೋಕ [ಪುಟ, ೧೬೫]

೯೦. ಅಭಿನವ ಭಾರತಿ

೯೧. ಸಾಹಿತ್ಯದರ್ಪಣ [೩, ೨೦೯]

೯೨. ಭವಭೂತಿಯ, ಉತ್ತರಾಮಚರಿತೆ, ೩, ೪೮ "ಏಕೋ ರಸಃ ಕರುಣ ಏವ..," ಎಂದಿದ್ದಾನೆ

೯೩. ಸಾಹಿತ್ಯದರ್ಪಣ, ಕರುಣರಸದ ಮುಂದಿನ ಕಾರಿಕೆ

೯೪. ವೇಣಿಸಂಹಾರದಲ್ಲಿ ದ್ರೋಣನನ್ನು ದೃಷ್ಟದ್ಯುಮ್ನನು ಕೊಂದನೆಂದು ಕೇಳಿ ದುರ್ಯೋದನನೆದುರಿಗೆ ಆಶ್ವಾತ್ಥಾಮನು ಹೀಗೆ ಹೇಳಿದ್ದಾನೆ.

೯೫. ನಾಟ್ಯಶಾಸ್ತ್ರ, ೬ನೆ ಅಧ್ಯಾಯ

೯೬. ಮಹಾವೀರಚರಿತ ನಾಟಕದಿಂದ ಆಯ್ದುಕೊಳ್ಳಲಾಗಿದೆ

೯೭. ಪಂಪ, 'ಪಂಪಭಾರತ' [೧೩, ೮೫]

೯೮. ರನ್ನ, ಗದ್ಧಾಯುದ್ಧ

೯೯. ಹರ್ಷಚಕ್ರವರ್ತಿ, ನಾಗಾನಂದ ನಾಟಕ

೧೦೦. ಕಾಳಿದಾಸನ ಶಾಂಕುತಲ ನಾಟಕ [೧, ೭]

೧೦೧. ಅಭಿನವಭಾರತಿ [೧, ಪು ೨೭೯]

೧೦೨. ಸಾಹಿತ್ಯದರ್ಪಣ, ೩ನೆ ಪರಿಚ್ಛೇದ

೧೦೩. ಮಾಲತಿ ಮಾಧವ, ಸ್ಮಶಾನದಲ್ಲಿ ಪಿಶಾಚಗಳ ಅವಸ್ಥೆಯನ್ನು ನೋಡಿ ಮಾಧವನು ಹೇಳುವ ಮಾತಿದು.

೧೦೪. ಸ್ವಾಳನ, ರಸರತ್ನಾಕರ

೧೦೫. ಕುವೆಂಪು, ರಾಮಯಣ ದರ್ಶನಂ [೧-೫೪೪-೩೫೫]

೧೦೬. ಜನ್ನನ, ಯೋಶೋಧರ ಚರಿತ್ರೆಯಲ್ಲಿ ಬರುವ ಅಷ್ಟಾವಕ್ರನ ಚಿತ್ರ

೧೦೭. ರನ್ನ, ಗದಾಯುದ್ಧ [೪, ೨೫]

೧೦೮. ಮಹಾಲಿಂಗರಂಗನ, ಅನುವಭವಾಮೃತ

೧೦೯. ಭರ್ತೃಹರಿಯ, ಶೃಂಗಾರ ಶತಕ ೬೦

೧೧೦. ಶೃಂಗಾರ ಶತಕದ ಅನುವಾದ ಶ್ಲೋಕ

೧೧೧. ಸಾಹಿತ್ಯದರ್ಪಣದ ಭೀಭತ್ಸರಸದ ಮುಂದಿನ ಕಾರಿಕೆ.

೧೧೨. ಭವಭೂತಿಯ, ಮಹಾವೀರಚರಿತದಿಂದ ಆಯ್ದ ಶ್ಲೋಕ

೧೧೩. ಸ್ವಾಳನ, ರಸರತ್ನಾಕರ

೧೧೪. ಕುವೆಂಪುರವರ, ರಾಮಾಯಣ ದರ್ಶನಂದಲ್ಲಿ ಬರುವ ಸಾಗರೋಲ್ಲಂಘನ

೧೧೫. ಕುವೆಂಪುರವರ, ಪಂಪನಲ್ಲಿ ಭವ್ಯತೆ

೧೧೬. ಕುವೆಂಪುರವರ, ಭವ್ಯತಾಮೀಮಾಂಸೆ

೧೧೭. ಸಾಹಿತ್ಯದರ್ಪಣದ ೩ನೆ ಪರಿಚ್ಛೇದದಲ್ಲಿ ಬರುವ ಶ್ಲೋಕ

೧೧೮. ಹರ್ಷ ಚಕ್ರವರ್ತಿ, ನಾಗಾನಂದ ನಾಟಕ

೧೧೯. ಅಮರಕೋಶದಲ್ಲಿ ಹೇಳಿರುವುದು ಎಂಟೇ ರಸಗಳು

೧೨೦. ದಂಡಿ, ಕಾವ್ಯದರ್ಶದಲ್ಲೂ ಎಂಟೇ ರಸಗಳು

೧೨೧. ಕಾಳಿದಾಸ, ವಿಕ್ರಮೋರ್ವಶೀಯ

೧೨೨. ಅಣುಒಗದಾರಸುತ [ಪ್ರಾಕೃತ ಗ್ರಂಥ, ಜೈನ ಕೃತಿಯಾಗಿದೆ] ದಲ್ಲಿ 'ಪ್ರಶಾಂತ'ರಸವು ಉಕ್ತವಾಗಿದೆ. [ಕ್ರಿ.ಶ ೫ನೆಯ ಶತಮಾನ]ಯೆಂದೂ ಪ್ರಶಾಂತದ ಲಕ್ಷಣವನ್ನು ಈ ರೀತಿಯಾಗಿ ಹೇಳಿದೆ.

**ನಿರ್ದೋಷಮನಃ ಸಮಾಧಾನ ಸಂಭವೋ ಯಃ ಪ್ರಶಾಂತಭಾವೇನ ।**
**ಅವಿಕಾರ ಲಕ್ಷ ಣಃ ಸ ರಸಃ ಪ್ರಶಾಂತ ಇತಿ ಜ್ಞಾತವ್ಯಃ ॥**

೧೨೩. ಧ್ವನ್ಯಾಲೋಕ, [ಪು, ೧೭೬, ೮]

೧೨೪. ಧ್ವನ್ಯಾಲೋಚನ, [ಪು, ೧೭೮]

೧೨೫. ದಶರೂಪಕ, ೪, ೩೫ರ ಮುಂದಕ್ಕೆ

೧೨೬. "ಶಾಂತಶ್ಚ ತೃಷ್ಣಾಕ್ಷಯ ಸುಖಸ್ಯ ಯಃ ಪರಿಪೋಷಃ
ತಲ್ಲಕ್ಷಣೋ ರಸಃ ಪ್ರತೀಯತೆ ಏವ" [ದ್ವನ್ಯಾಲೋಕ, ಪು ೧೭೯]

೧೨೭. ಭರತ, ನಾಟ್ಯಶಾಸ್ತ್ರ, [೬, ೮೨ ಮುಂದೆ]

೧೨೮. ನಾಟ್ಯಶಾಸ್ತ್ರ [೬, ೮೨] ರಲ್ಲಿ "ಭಾವವು ತನ್ನ ನಿಮಿತ್ತವೂದಗಿದಾಗ ಶಾಂತದಿಂದ ಹೊಮ್ಮುತ್ತದೆ. ಆ ನಿಮಿತ್ತ ತೊಲಗುತ್ತಲೂ ಮತ್ತೆ ಶಾಂತದಲ್ಲಿಯೇ ಅಡಗುತ್ತದೆ".

೧೨೯. ದ್ವನ್ಯಾಲೋಕ, ೪, ೫ ವೃತ್ತಿ

೧೩೦ **ರತ್ನೋದಾರಚತುಸ್ಸಮುದ್ರರಶಾನಾಂ ಭುಕ್ತ್ವಾ ಭುವಂ ಕಾರವೋ,**
**ಭಗ್ನೋರುಃ ಪತಿತಃ ಸ ನಿಷ್ಪರಿಜನೋ ಜೀವ್ ವೈಕೈರ್ಭಕ್ಷಿತಃ ।**
**ಗೋಪೈರ್ವಿಶ್ವಜಯಿಓಜಿತಾಃ ಸ ವಿಜಃ ಕಕ್ಷ್ಯೈ ಕ್ಷಿತಾ ವೃಷ್ಣಯಾಸ್ತಾಸ್ಮಾತ್,**
**ಸರ್ವಮಿದಂ ವಿಚಾರ್ಯ ಸುಚಿರಂ ಶಾಂತ್ಯೈ ಮನೋದೀಯತಾಂ ॥**
[ಭಾರತಮಂಜರಿ, ಪು. ೮೫೧]

೧೩೧. ರಾಘವಾಂಕ, ಹರಿಶ್ಚಂದ್ರ ಕಾವ್ಯ

೧೩೨. ಆಶ್ವಘೋಷ, ಬುದ್ಧಚರಿತ, ಸೌಂದರಾನಂದ

೧೩೩. ಕಲ್ಹಣ, ರಾಜತರಂಗಿಣಿ

೧೩೪. ಕಾಳಿದಾಸನ, ರಘುವಂಶದಲ್ಲಿ ಬರುವ ಪದ್ಯ

೧೩೫. ಕಾಳಿದಾಸನನ ವಿಕ್ರಮೋರ್ವಶೀಯ, [೪ನೆ ಅಂಕ]

೧೩೬. ಸಾಹಿತ್ಯದರ್ಪಣ, [೩, ೨೫೯ – ೬೦]

೧೩೭. **ನ ಭಾವಹೀನೋ?ಸ್ತಿ ರಸೋನ ಭಾವೋ ರಸವರ್ಜಿತಃ ।**
**ಪರಸ್ಪರ ಕೃತಾ ಸಿದ್ಧಿರನೆಯೋ ರಸಭಾವಯೋ ॥**
[ಸಾಹಿತ್ಯ ದರ್ಪಣ, ೩,]

೧೩೮. ಸಾಹಿತ್ಯದರ್ಪಣ, [೩, ೨೬೧–೨]

೧೩೯. ರುದ್ರಟನ ಕಾವ್ಯಲಂಕಾರ, [೧೨೪]

೧೪೦. ' 'ಮುಖ್ಯೆ ರಸೇsಪಿ ತೇsಗಿತ್ವಂ ಪ್ರಾಪ್ನುವಂತಿ ಕದಾಚನ" ಕಾವ್ಯಪ್ರಕಾಶ, [೪,೧೪]

೧೪೧. ವಿದ್ಯಾದರ, ಏಕಾವಳೀ

೧೪೨. ಕಾಳಿದಾಸ, ಕುಮಾರಸಂಭವ [೩, ೩೬]

೧೪೩. "ಇವು ರಸಾಭಾಸಂಗಳ್, ಇವು ದೋಷ ಮಲ್ತು" [ರಸರತ್ನಾಕರ, ಪು ೧೦೦]

೧೪೪. ಆನಂದವರ್ಧನ, ಧ್ವನ್ಯಾಲೋಕ, [ಪು ೭೫, ೬] ಕುಂತಕ, ವಕ್ರೋಕ್ತಿಜೀವಿತ, [ಪು ೧೬೨, ೩] ದಂಡಿ, ಕಾವ್ಯದರ್ಶ, [೧ ೯೩, ೧೦೦]

೧೪೫. ಸಮಾಸೋಕ್ತಿ ಅರ್ಥಾಂತರನ್ಯಾಸಂ ರೂಪಕಂ ಉತ್ಪ್ರೇಕ್ಷಾದಿಗಳ್ ಈ ರಸಭಾವಸಕ್ಕೆ ಜೀವಿತಂ" [ರಸರತ್ನಾಕರ, ಪು. ೧೦೩]

೧೪೬. ಮಮ್ಮಟ, ಕಾವ್ಯಪ್ರಕಾಶ [೪, ೩ ವೃತ್ತಿ]

# ಅಧ್ಯಾಯ – ೩

# ಕಾವ್ಯಭೇದಗಳು

# ಕಾವ್ಯಭೇದಗಳು

ವಿಶ್ವನಾಥನು ಕಾವ್ಯಭೇದಗಳನ್ನು ಧ್ವನಿಕಾವ್ಯ, ಗುಣೀಭೂತವ್ಯಂಗ್ಯಕಾವ್ಯ, ಶ್ರವ್ಯಕಾವ್ಯ, ಮತ್ತು ದೃಶ್ಯಕಾವ್ಯವೆಂದು ನಾಲ್ಕು ಬಗೆಯಾಗಿ ಹೇಳಿದ್ದಾನೆ. ಅದರಲ್ಲಿ ಧ್ವನಿ, ಗುಣಿಭೂತವ್ಯಂಗ್ಯಕಾವ್ಯವನ್ನು ಮೊದಲು ವಿಮರ್ಶಿಸಿ ಮುಂದಿನ ಅಧ್ಯಾಯದಲ್ಲಿ ಶ್ರವ್ಯ, ದೃಶ್ಯಕಾವ್ಯಗಳನ್ನ ವಿಮರ್ಶಿಸಲಾಗಿದೆ. ಧ್ವನಿಕಾವ್ಯವನ್ನು ಪ್ರಸ್ಥಾಪಿಸುವ ಮೊದಲು ಧ್ವನಿಯ ಹಿನ್ನೆಲೆಯನ್ನು ವಿವೇಚಿಸಲಾಗಿದೆ. ನಮಗೆ ತಿಳಿದಿರುವಂತೆ ಧ್ವನಿಸಿದ್ಧಾಂತದ ಪ್ರಪ್ರಥಮ ಪ್ರತಿಪಾದನೆಯನ್ನು ಆನಂದವರ್ಧನನ ಧ್ವನ್ಯಾಲೋಕದಲ್ಲಿ ಕಾಣುತ್ತೇವೆ. "ಕಾವ್ಯಸ್ಯ ಆತ್ಮಾಧ್ವನಿಃ[೧]" "ಧ್ವನಿಯು ಕಾವ್ಯದ ಆತ್ಮ" ಎಂದು ಹೇಳಿದ ಆನಂದವರ್ಧನನಿಗಿಂತ ಪ್ರಾಚೀನ ಅಲಂಕಾರಿಕರಾದ, ಭಾಮಹ, ದಂಡಿ, ಉದ್ಭಟ, ಮುಂತಾದವರಿಗೆ ವ್ಯಂಗ್ಯಾರ್ಥದ ಪರಿಚಯ ಇರಲಿಲ್ಲ ಎಂದರ್ಥವಲ್ಲ. ವಾಚ್ಯಲಕ್ಷ್ಯಗಳಿಗಿಂತ ಭಿನ್ನವಾದ ಅರ್ಥದ ಪರಿಚಯ ಪ್ರಾಚೀನರಿಗೆಲ್ಲರಿಗೂ ಇತ್ತು ಅವರು ಆಕ್ಷೇಪ, ಸಮಾಸೋಕ್ತಿ, ಪರ್ಯಾಯೋಕ್ತ, ಅಪ್ರಸ್ತುತಪ್ರಶಂಸಾ ಮುಂತಾದ ಅಲಂಕಾರಗಳಲ್ಲಿ ವ್ಯಂಗ್ಯಾರ್ಥವನ್ನು ಗುರುತಿಸಿದ್ದಾರೆ. ಉದಾಹರಣೆಗೆ ಭಾಮಹನು ಪರ್ಯಾಯೋಕ್ತ ಲಕ್ಷಣವನ್ನು ಗುರುತಿಸಿದ್ದಾನೆ. ಪರ್ಯಾಯೋಕ್ತಮ್ ಯದನ್ಯೇನ ಪ್ರಾಕಾರೋಣಾಭಿಧಿಯತೆ?[೨] 'ಅನ್ಯೇನ ಪ್ರಕಾರೇಣ' ಎಂದು ರುದ್ರಟನು ಹೇಳಿದ್ದಾನೆ.[೩] ಆನಂದವರ್ಧನನು ಧ್ವನಿಲಕ್ಷಣವನ್ನು ವಿವರಿಸುವ ಸಂದರ್ಭದಲ್ಲಿ ಹೇಳಿರುವಂತೆ ಧ್ವನಿಯ ಮೂಲಸ್ಪೂರ್ತಿ ಇರುವುದು ವೈಯಾಕರಣರ ಸ್ಫೋಟವಾದಲ್ಲಿ ಎಂದಿದ್ದಾನೆ. ಅವರು ಸ್ಫೋಟವೆಂಬ ವ್ಯಂಗ್ಯಕ್ಕೆ ವ್ಯಂಜಕಗಳಾದ ವರ್ಣಗಳನ್ನು ವೈಯಾಕರಣರು ಧ್ವನಿಯೆಂದು ಕರೆದಿದ್ದಾರೆ.[೪] ಅದೇ ರೀತಿ ವ್ಯಂಗ್ಯಾರ್ಥಕ್ಕೆ ವ್ಯಂಜಕಗಳಾದ ಶಭಾರ್ಥಗಳನ್ನು ಅವುಗಳ ಸಾಹಿತ್ಯವಾದ ಕಾವ್ಯವನ್ನು ಧ್ವನಿಯೆಂದು ಅಲಂಕಾರಿಕರು ಕರೆದಿದ್ದಾರೆ. ಧ್ವನಿ ಎಂದರೆ ವ್ಯಂಗ್ಯಾರ್ಥ, ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥವು ಪ್ರಧಾನವಾಗಿದ್ದರೆ ಧ್ವನಿ. ಇದೇ ಅರ್ಥದಲ್ಲಿ ವ್ಯಂಗ್ಯಾರ್ಥವು ಪ್ರಧಾನವಗಿರುವ ಕಾವ್ಯವೂ ಧ್ವನಿಕಾವ್ಯ ಅದೇ ಉತ್ತಮಕಾವ್ಯ ಆನಂದವರ್ಧನನು ಧ್ವನಿಕಾವ್ಯದ ಲಕ್ಷಣವನ್ನು ಈ ರೀತಿ ಕೊಟ್ಟಿದ್ದಾನೆ.

**ಯತಾರ್ಥಃಶಬ್ದೋವಾ ತಮರ್ಥಮ್ ಉಪಸರ್ಜನೀತ್ರೃತ ಸ್ವಾರ್ಥೌ ।**
**ವ್ಯಂಗ್ಯಕ್ತಃ ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ[೫] ॥**

"ಎಲ್ಲಿ ಅರ್ಥವು ಮತ್ತು ಶಬ್ದವು ತನ್ನನ್ನು ತಾನು ಮತ್ತು ಅರ್ಥವನ್ನು ಅಧೀನಗೊಳಿಸಿಕೊಂಡು ಆ [ಇನ್ನೊಂದು] ಅರ್ಥವನ್ನು ವ್ಯಂಗ್ಯವಾಗಿ ಕೊಡುತ್ತವೆಯೋ ಆ ಕಾವ್ಯ ಪ್ರಕಾರವನ್ನು ವಿದ್ವಾಂಸರು ಧ್ವನಿಯೆಂದು ಕರೆಯುತ್ತಾರೆ. ಇಂತಹ ಧ್ವನಿಯನ್ನೇ ಆನಂದವರ್ಧನನು ಕಾವ್ಯದ ಆತ್ಮವೆಂದು ಹೇಳಿದ್ದಾನೆ". ಏಕೆಂದರೆ ಅದೇ ಕಾವ್ಯದ ಆತಂರಿಕವಾದ ಸೌಂದರ್ಯತತ್ವ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ ಯಾವುದೇ ಕಾವ್ಯವಾಗಲೀ ಅದರಲ್ಲಿ ಅಂತಹ ಸೌಂದರ್ಯ ತತ್ವವಿರಲೇಬೇಕೆಂದು ಆನಂದವರ್ಧನ ಹೇಳುತ್ತಾನೆ. ಧ್ವನಿಯನ್ನು ವಸ್ತುಧ್ವನಿ, ಅಲಂಕಾರ ಧ್ವನಿ ಮತ್ತು ರಸಧ್ವನಿಯೆಂದು ಮೂರು ವಿಭಾಗಗಳನ್ನು ಮಾಡಿ ಅದರಲ್ಲಿ ರಸಧ್ವನಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಆನಂದವರ್ಧನನು ಕೊಟ್ಟಿದ್ದಾನೆ. ರಸವೆಂಬುದು ಯಾವಾಗಲೂ ವ್ಯಂಗ್ಯ, ಕನಸಿನಲ್ಲೂ ಕೂಡ ವಾಚ್ಯವಲ್ಲ 'ನಸ್ವಪ್ನೋಽಪಿ ವಾಚ್ಯಃ', ಈ ದೃಷ್ಟಿಯಿಂದ ರಸಧ್ವನಿಯೇ ಶ್ರೇಷ್ಠ ಎಂದು ಅಭಿನವಗುಪ್ತನು ಹೇಳಿದ್ದಾನೆ. ರಸವೇ ನಿಜವಾಗಿಯೂ ಕಾವ್ಯದ ಆತ್ಮ. ವಸ್ತುಧ್ವನಿ ಮತ್ತು ಅಲಂಕಾರಧ್ವನಿಗಳು ಅಂತಿಮವಾಗಿ ರಸದಲ್ಲಿಯೇ ಪರ್ಯಾವಸಾನಗೊಳ್ಳುತ್ತವೆ. ವಾಚ್ಯವಸ್ತು ಮತ್ತು ವಾಚ್ಯಅಲಂಕಾರಗಳಿಗಿಂತ ಉತ್ಕೃಷ್ಟವೆಂದು ಬಗೆದು ಧ್ವನಿಯು ಕಾವ್ಯದ ಆತ್ಮವೆಂದು ಸಾಮಾನ್ಯವಾಗಿ ಹೇಳಿದೆ.[೬] ಹೀಗೆ ಆನಂದವರ್ಧನನ ಅಭಿಪ್ರಾಯದಲ್ಲಿ ರಸಧ್ವನಿಗೆ ಪ್ರಾಧಾನ್ಯ ಎಂಬುದಕ್ಕೆ ರಸಾದಿಗಳ[೭] ಬಗ್ಗೆ ಆನಂದವರ್ಧನನು ಹೇಳಿರುವುದೇ ನಿದರ್ಶನವಾಗಿದೆ. ಇದೇ ಅಭಿಪ್ರಾಯವನ್ನು ಅಭಿನವಗುಪ್ತನು ಒಂದು ತಾರ್ಕಿಕ ನಿರ್ಣಯಕ್ಕೆ ತಲುಪಿದ್ದಾನೆ. ಈ ಅಭಿಪ್ರಾಯವನ್ನೇ ವಿಶ್ವನಾಥನು ತನ್ನ ಕಾವ್ಯಲಕ್ಷಣದಲ್ಲಿ ಸಮಾವೇಶಗೊಳಿಸಿ "ವಾಕ್ಯಂ ರಸಾತ್ಮಕಂ ಕಾವ್ಯಂ[೮]", "ರಸಾತ್ಮಕವಾದ ವಾಕ್ಯವು ಕಾವ್ಯ"ವೆಂದು ಹೇಳಿದ್ದಾನೆ. "ರಮಣೀಯಾರ್ಥಪ್ರತಿಪಾದಕಃ ಶಬ್ದಃ ಕಾವ್ಯಂ[೯]" ಎಂದು ಕಾವ್ಯಲಕ್ಷಣವನ್ನು ಹೇಳಿ ರಮಣೀಯತ್ವದ ಲಕ್ಷಣವನ್ನು ಕೊಟ್ಟಿರುವುದು ಇದೇ ಅಭಿಪ್ರಾಯವನ್ನು ಬಿಂಬಿಸುತ್ತದೆ.

ಆನಂದವರ್ಧನನು ಮೊದಲನೆಯದಾಗಿ ಧ್ವನಿಕಾವ್ಯ ವಾಚ್ಯಕ್ಕಿಂತ ವ್ಯಂಗ್ಯಾಥ–ರ್ವವು ಪ್ರಧಾನವಾಗಿರುವ ಕಾವ್ಯ. ಎರಡನೇಯದಾಗಿ ಗುಣಿಭೂತ ವ್ಯಂಗ್ಯ ಕಾವ್ಯ ವ್ಯಂಗ್ಯಾರ್ಥವು ಎಲ್ಲಿ ಪ್ರಧಾನವಾಗಿಲ್ಲವೋ ಆ ಕಾವ್ಯ ಗುಣಿಭೂತವ್ಯಂಗ್ಯವಾಗಿದೆ. ಮೂರನೆಯದಾಗಿ ಚಿತ್ರಕಾವ್ಯ ಎಲ್ಲಿ ರಸ, ಭಾವ ಇತ್ಯಾದಿಗಳ ತಾತ್ಪರ್ಯ ಇಲ್ಲವೂ, ವ್ಯಂಗ್ಯವೆಂಬ ಅರ್ಥ ವಿಶೇಷವನ್ನು ಕೊಡುವ ಸಾಮರ್ಥ್ಯವಿಲ್ಲವೋ, ಕೇವಲ ವಾಚ್ಯ–ವಾಚಕ ವೈಚಿತ್ರವನ್ನು ಆಶ್ರಯಿಸಿ ಚಿತ್ರದಂತೆ ಭಾಸವಾಗುವುದೋ ಅದು ಚಿತ್ರಕಾವ್ಯ.[೧೦] [ಇದು ಶಬ್ದ ಚಿತ್ರ ಅರ್ಥಚಿತ್ರವೆಂದು ಎರಡು ವಿಧ] ಮೂರು ಕಾವ್ಯಭೇದಗಳನ್ನು

ಆನಂದವರ್ಧನ ಮಾಡಿದ್ದಾನೆ. ಮಮ್ಮಟನು ಇವುಗಳನ್ನು ಅಂದರೆ ಧ್ವನಿ, ಗುಣಿಭೂತವ್ಯಂಗ್ಯ, ಚಿತ್ರಕಾವ್ಯಗಳನ್ನು ಕ್ರಮವಾಗಿ, ಉತ್ತಮ, ಮಧ್ಯಮ, ಮತ್ತು ಅದಮ ಕಾವ್ಯಗಳೆಂದು ಕರೆದಿದ್ದಾನೆ.[೧೧] ಜಗನ್ನಾಥನು ಧ್ವನಿಕಾವ್ಯವನ್ನು ಉತ್ತಮೋತ್ತಮವೆಂದು ಗುಣಿಭೂತವ್ಯಂಗ್ಯವನ್ನು ಉತ್ತಮವೆಂದೂ, ಅರ್ಥಚಿತ್ರ ಕಾವ್ಯವನ್ನು ಮಧ್ಯಮವೆಂದೂ, ಶಬ್ದ ಚಿತ್ರವನ್ನು ಅಧಮವೆಂದು ಕರೆದಿದ್ದಾನೆ [೧೨]. ಇಲ್ಲಿಗೆ ಧ್ವನಿಯ ಹಿನ್ನೆಲೆಯನ್ನು ವಿವೇಚಿಸಿ ಮುಂದೆ ವಿಶ್ವನಾಥನು ಮಾಡಿರುವ ಧ್ವನಿಕಾವ್ಯಗಳನ್ನ ಪರಾಮರ್ಶಿಸಲಾಗಿದೆ.

## ೧. ಧ್ವನಿಕಾವ್ಯ:

ಧ್ವನಿಯು ಪ್ರಧಾನವಾಗಿ ಅವಿವಕ್ಷಿತ ವಾಚ್ಯ [ಲಕ್ಷಣ ಮೂಲ ಧ್ವನಿ] ಮತ್ತು ವಿವಕ್ಷಿತಾನ್ಯ ಪರವಾಚ್ಯ [ಅಭಿಧಾಮೂಲಧ್ವನಿ] ಎಂದು ಎರಡು ವಿಧ. ಮೊದಲನೆಯದು ಅರ್ಥಾಂತರ ಸಂಕ್ರಮಿತ ವಾಚ್ಯ [ಅಜತ್ಸ್ವಾರ್ಥಾ ಲಕ್ಷಣೆ] ಮತ್ತು ಅತ್ಯಂತತಿರಸ್ಕೃತ ವಾಚ್ಯ [ಜಹತ್ಸ್ವಾರ್ಥಾ ಲಕ್ಷಣೆ] ಮತ್ತೆ ಎರಡು ವಿಧ. ಹಾಗೇಯೇ ಎರಡನೆಯದು ಅಸಂಲಕ್ಷಕ್ರಮ ವ್ಯಂಗ್ಯಧ್ವನಿಯೇ ರಸಾದಿಧ್ವನಿ. ಸಂಲಕ್ಷ್ಯಕ್ರಮ ವ್ಯಂಗ್ಯಧ್ವನಿಯು ಶಬ್ದಶಕ್ತಿ



ಮೂಲಧ್ವನಿ, ಅರ್ಥಶಕ್ತಿ ಮೂಲ ಧ್ವನಿಯು ಸ್ವತಃ ಸಂಭವಿ, ಕವಿಪ್ರೌಢೋಕ್ತಿಸಿದ್ದ, ಕವಿನಿಬದ್ಧವಕ್ತೃಪ್ರೌಢೋಕ್ತಿಸಿದ್ಧ ಎಂದು ಮೂರು ಬಗೆಯಾಗಿವೆ. ಈ ಬಗೆಯಲ್ಲೂ ಸ್ವತಸ್ಸಂಭವಿ ವಸ್ತುವಿನಿಂದ ವಸ್ತುಧ್ವನಿ, ಸ್ವತಸ್ಸಂಭವಿ ವಸ್ತುವಿನಿಂದ ಅಲಂಕಾರಧ್ವನಿ, ಸ್ವತಃ ಸಂಭವಿ ಅಲಂಕಾರದಿಂದ ವಸ್ತುಧ್ವನಿ, ಸ್ವತಸ್ಸಂಭವಿ ಅಲಂಕಾರದಿಂದ ಅಲಂಕಾರಧ್ವನಿ, ಹೀಗೆ ಅವರೆಡರಲ್ಲಿಯೂ ಒಂದೊಂದು ನಾಲ್ಕುಬಗೆಗಳಾಗಿ ಅರ್ಥಶಕ್ತಿ ಮೂಲಧ್ವನಿಯಲ್ಲಿ ಒಟ್ಟು ಹನ್ನೆರಡು ಬಗೆಗಳಾಗುತ್ತವೆ. ಈ ಭೇದಗಳಿಗೆ ಉದಾಹರಣೆ ಕೊಡುವುದಕ್ಕೆ ಮೊದಲು ನಕ್ಷೆಯ ಸಹಾಯದಿಂದ ಈ ಪ್ರಧಾನ–ಭೇದಗಳನ್ನು ಹೀಗೆ ಚಿತ್ರಿಸಲಾಗಿದೆ.

ವಿಶ್ವನಾಥನು ಧ್ವನಿಯಲ್ಲಿ ಪ್ರಧಾನವಾಗಿ ಎರಡು ವಿಭಾಗಗಳನ್ನು ಮಾಡಿದ್ದಾನೆ. ಒಂದು ಲಕ್ಷ್ಯಾರ್ಥವನ್ನು ಅವಲಂಬಿಸಿ ಬರುವ ಧ್ವನಿ, ಇನ್ನೊಂದು ನೇರವಾಗಿ ವಾಚ್ಯಾಥ–ರ್ದಿಂದಲೇ ಸಂಭವಿಸುವ ಧ್ವನಿ. ಮೊದಲನೆಯದನ್ನು 'ಅವಿವಕ್ಷಿತವಾಚ್ಯ'ವೆಂದೂ ಎರಡನೆಯದನ್ನು 'ವಿವಕ್ಷಿತಾನ್ಯಪರವಾಚ್ಯ'ವೆಂದೂ ಕರೆದಿದ್ದಾನೆ. ಮೊದಲನೆಯದರಲ್ಲಿ ವಾಚ್ಯವು ವಿವಕ್ಷಿತವಲ್ಲ ಅಂದರೆ ಉದ್ದೇಶಿತವಲ್ಲ ವಾಚ್ಯದಿಂದ ಬರುವ ಲಕ್ಷ್ಯಾಥ–ರ್ವು ಉದ್ದೇಶಿತ ಅದನ್ನೇ ಅವಲಂಬಿಸಿ ಧ್ವನಿಯು ಪ್ರತೀತವಾಗುತ್ತದೆ ಆದ್ದರಿಂದ ಅದನ್ನು 'ಅವಿವಕ್ಷಿತವಾಚ್ಯಧ್ವನಿ' ಎಂದು ಕರೆದಿದ್ದಾನೆ. ಇನ್ನೊಂದರಲ್ಲಿ ವಾಚ್ಯವೇ ಉದ್ದೇಶಿತ ಆದರೆ ಅದರಿಂದ ಅನ್ಯಪರವಾದವನ್ನು ವ್ಯಂಗ್ಯಾರ್ಥವು ಧ್ವನಿಸುತ್ತದೆ–ಅಂದರೆ ಇದು ಲಕ್ಷ್ಯಾರ್ಥದ ಸಂಭಂಧವೇ ಇಲ್ಲದೇ ನೇರವಾಗಿ ವಾಚ್ಯಾರ್ಥವನ್ನೇ ಅವಲಂಬಿಸಿ ಬರುವ ಧ್ವನಿ. ಅದರಿಂದ ಇದನ್ನು 'ವಿವಕ್ಷಿತಾನ್ಯಪರವಾಚ್ಯಧ್ವನಿ' ಎಂದು ಕರೆದಿದ್ದಾನೆ. ಇವುಗಳಲ್ಲಿ ಒಂದೊಂದರಲ್ಲೂ ಎರಡು ವಿಭಾಗಗಳನ್ನು ಮಾಡಿ ಮತ್ತೆ ಇವುಗಳಲ್ಲಿ ಒಳವಿಭಾಗಗಳನ್ನು ಮಾಡುತ್ತಾ ಹೋಗುತ್ತಾನೆ. ಈ ಧ್ವನಿ ಪ್ರಭೇದಗಳ ವಿವೇಚನೆ ಧೀರ್ಘವಾಗಿ ಬೆಳೆಯುತ್ತದೆ. ಇಲ್ಲಿ ಅವುಗಳ ಒಟ್ಟು ಚೌಕಟ್ಟನ್ನು ಗಮನಿಸಿ ಮುಖ್ಯವಾದಆಶಯ ಬಿಟ್ಟು ಹೋಗದಂತೆ ಸಂಗ್ರಹವಾಗಿ ಮಾತ್ರ ಅವುಗಳನ್ನು ವಿವ–ರಿಸಲಾಗಿದೆ.

ಅಭಿಧಾಮೂಲವಾದ ವಿವಕ್ಷಿತಾನ್ಯರ ವಾಚ್ಯ ಧ್ವನಿಯು ವ್ಯಾಪ್ತಿಯು ವಿಸ್ತಾರವಾಗಿರುವು ದರಿಂದ ಲಕ್ಷಣಮೂಲವಾದ ಅವಿವಕ್ಷಿತವಾಚ್ಯಧ್ವನಿಯನ್ನು ಮೊದಲು ತೆಗೆದುಕೊಳ್ಳಲಾಗಿದೆ. ಹಿಂದೆ ನೋಡಿದಂತೆ ಲಕ್ಷಣೆಯಲ್ಲಿ ಅಥ–ರ್ಾಂತರ ಸಂಕ್ರಮಿತ [ಅಜಹತ್ವರ್ಥಾ ಲಕ್ಷಣ] ಅತ್ಯಂತ ತಿರಸ್ಕೃತ [ಜಹತ್ಸ್ವಾಥ–ರ್ ಲಕ್ಷಣೆ] ಎರಡು ಬಗೆಯಿರುವುದರಿಂದ ಅದನ್ನು ಅವಲಂಬಿಸಿದ ಧ್ವನಿಯೂ ಎರಡೂ ಬಗೆಯಾಗಿದೆ. ಅರ್ಥಾಂತರ ಸಂಕ್ರಮಿತದಲ್ಲಿ ವಾಚ್ಯವು ಸಂಪೂರ್ಣವಾಗಿ ತಿರಸ್ಕೃತವಾಗುವುದಿಲ್ಲ. [ಭರ್ಜಿಗಳು ನುಗ್ಗಿದವು] ಅತ್ಯಂತ ತಿರಸ್ಕೃತವಾಚ್ಯದಲ್ಲಿ ವಾಚ್ಯಾರ್ಥವು ತಿರಸ್ಕೃತವಾಗುತ್ತದೆ. [ಕೇರಿಯೆಲ್ಲಾ ಕಣ್ಣೀರು ಕರೆಯಿತು] ಈ

ಎರಡರಲ್ಲಿಯೂ ವಾಚ್ಯಾ ಅಥವಾ ಮುಖ್ಯಾ ರ್ಥವು ವಿವಕ್ಷಿ ತವಲ್ಲ. ತನ್ನ ಅಸ್ತಿತ್ವವನ್ನು ಅದು ಸಂಪೂರ್ಣವಾಗಿ ಕಳೆದುಕೊಳ್ಳಬಹುದು. ಅಥವಾ ಲಕ್ಷ್ಯಾರ್ಥದಲ್ಲಿಯೇ ಅಲ್ಪಾಂಶದಿಂದ ಅದು ಲೀನವಾಗಿ ಹೋಗಬಹುದು. ಅರ್ಥಾಂತರ ಸಂಕ್ರಮಿತ ವಾಚ್ಯ ಧ್ವನಿಯನ್ನು ಕೆಲವು ಉದಾಹರಣೆ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಪಾಂಚಾಲಿಯ ಪರಾಭವವನ್ನು ಸಹಿಸಲಾರದೆ ಕೋಪಾವೇಶದಲ್ಲಿ ವೇಣಿಸಂಹಾರ ಮತ್ತು ಊರುಭಂಗ ಪ್ರತಿಜ್ಞೆಗಳನ್ನು ಮಾಡಿದ ಭೀಮನು ಸಭೆಯಲ್ಲಿ ಮೊಳಗುವಂತೆ ಹೀಗೆ ಗರ್ಜಿಸುತ್ತಾನೆ.

**ಮುಳಿಸಂ ಮಾಡಿಯುಮೇವಮಂ ಪಡೆದುಮಣೆ ಪಂದೆಗಳ್ ಪ್ರಾಣದಿಂ**
**ದೂಳರಿನ್ನುಂ ತಲೆ ಮತ್ತಮಟ್ಟೆಗಳ ಮೇಲಿರ್ದಪ್ಪುವೆಂದಂದೆ ದಲ್**
**ಮುಳಿಸಿಲ್ಲಣ್ಣನ ನನ್ನಿಯೆಂಬುದನೆ ಹೇಳ್ವೆವೇಬ್ಬುಮೀ ಕೌರವ**
**ರ್ಕಳನುಂತಿನ್ನೆಗಮುರ್ಚಿ ಮುಕ್ಕದೆ ಸದಿಲ್ದೀ ಭೀಮನೇಂ ಮಾಣ್ಬುಮೇ।**[೧೩]

ಇಲ್ಲಿ ಈ ಭೀಮಂ ಎಂದರೆ ಸುಮ್ಮನೆ 'ಧರ್ಮರಾಯನ ತಮ್ಮ' ಅಥವಾ 'ಕುಂತಿಯ ಮಗ' ಎಂದಿಷ್ಟೇ ಅರ್ಥವಲ್ಲ. ಇದಕ್ಕೆ ಸಾವಿರ ಪಾಲು ಮಿಗಿಲಾಗಿ ಪೌರುಷ, ಸಾಹಸ, ರೋಷ, ಪರಾಕ್ರಮಗಳಿಗೆಲ್ಲ ಆದರ್ಶಪ್ರಾಯನಾದ ಒಬ್ಬ ಲೋಕೈಕವೀರನೆಂಬ ವ್ಯಂಗ್ಯಾರ್ಥವೇ ಆ ಶಬ್ದದಿಂದ ಸಹೃದಯರಿಗೆ ಭಾಸವಾಗುತ್ತದೆ. ಇಲ್ಲಿ ಮೊದಲು ಹೇಳಿದ ಅರ್ಥಕ್ಕೆ ಭಾಧೆಯೇನೂ ಇಲ್ಲದಿದ್ದರೂ ಅದು ಸ್ವತಂತ್ರವಾಗಿ ಆಕರ್ಷಕವಲ್ಲ. ಅನಂತರ ಹೇಳಿದ ಮಹಾವ್ಯಂಗಾರ್ಥ ಸಾಗರದಲ್ಲಿ ಅದು ಲೀನವಾಗಿ ಹೋಗುತ್ತದೆ. ಇದನ್ನೇ 'ಅರ್ಥಾಂತರಸಂಕ್ರಮಿತ ವಾಚ್ಯಧ್ವನಿ' ಎನ್ನುವರು. ಇಲ್ಲಿ ಮುಖ್ಯಾರ್ಥ ಪರಿಮಿತವಾಗಿರುವುದೇ ಹೊರತು ವ್ಯಂಗ್ಯಾರ್ಥದಂತೆ ಅಪರಿಮಿತವಲ್ಲ.

ಇದಕ್ಕೆ ಆಧುನಿಕ ಕವಿಗಳ ಉದಾಹರಣೆಗಳನ್ನು ಸಹ ಕೊಡಬಹುದು. ಕುವೆಂಪು ಅವರ ಮೋಹಿಸು ಸಂಜೆ' ಎಂಬ ಕವನದಲ್ಲಿರುವ ಈ ಪದ್ಯ.

**ಬೈಗುಗೆಂಪೋಕುಳಿಯ**
**ತೆರೆನೆರೆಗೆ ಹರಡಿಹುದು;**
**ಹಸಿರು ತಲೆದೂಗುವುದು,**
**ಕೆರೆಯಂಚಲಿ,**
**ಗೂಡು ಬೀಡು, ಬಾ ಹೊರಗೆ,**
**'ಗೀತೆ'ಯಿರಲಿ.**[೧೪]

ಇಲ್ಲಿ 'ಹಸಿರು ತಲೆದೂಗುವುದು', ಎನ್ನುವ ಮಾತು 'ಹಸಿರು ಗಿಡಗಳು' ಎನ್ನುವ ಅರ್ಥಕ್ಕೆ ಕಾರಣವಾಗಿ ಹಸಿರಿನ ದಟ್ಟವಾದ ಸೌಂದರ್ಯವನ್ನು ಧ್ವನಿಸುತ್ತದೆ. ಇದೇ

ರೀತಿಯ ಲಕ್ಷ್ಯಾರ್ಥದಿಂದ ಧ್ವನಿಗೆ ಕಾರಣವಾಗುವ ಇನ್ನೊಂದು ಉದಾಹರಣೆಯನ್ನು ಬೇಂದ್ರೆಯವರಿಂದ ನೋಡಬಹುದು.

**ವಾರಿನೋಟ ಹಾರುತಿತ್ತೋ ಹೊಲಿಮ್ಯಾಗ ।**
**ಹೊಸ ಹರೆ ಈಸತಿತ್ತೋ ಹೊಳಿಯಾಗ ॥**
**ಸೆರಗು ಬಂದು ಅಲೆದಾಡುತಿತ್ತೋ ಹೊಳಿಮ್ಯಾಗ ।**
**ಬೆರಗು ಬಂದು ನಲಿದಾಡುತಿತ್ತೋ ಹೊಳಿಯಾಗ** [೧೫]**॥**

ಹೊಳೆಯ ದಡದಲ್ಲಿ ಹೆಣ್ಣು, ಹೊಳೆಯಲ್ಲಿ ಈಸುತ್ತಿರುವ ಗಂಡು ಇವರಿಬ್ಬರ ಪ್ರಣಯದ ಉತ್ಕಟತೆಯನ್ನು ಹೇಳುವ ಕವನ ಇದು. 'ಹೋಸ ಹರೆ ಈಸುತ್ತಿತ್ತು' ಎನ್ನುವ ಮಾತು ಹರೆಯದವನು ಎನ್ನುವ ಅರ್ಥವನ್ನು, ಹಾಗೇ 'ಸೆರಗು ಬಂದು ಅಲೆದಾಟುತ್ತಿತ್ತು' ಎನ್ನವುದು. ಆ ಸೆರಗಿನ ತರುಣಿ ಎಂಬ ಅರ್ಥವನ್ನು ಕೊಡುತ್ತದೆ. ಮಾತಿಗೆ ಮೀರಿದ ಅವರ ಪರಸ್ಪರ ಆಕರ್ಷಣೆಯನ್ನು ಇದು ಧ್ವನಿಸುತ್ತದೆ. ಇವು 'ಅರ್ಥಾಂತರಸಂಕ್ರಮಿತವಾಚ್ಯಧ್ವನಿ'ಗೆ ಕೊಡಬಹುದಾದ ಉದಾಹರಣೆಗಳಾಗಿವೆ.

ಇನ್ನು 'ಅವಿವಕ್ಷಿತವಾಚ್ಯಧ್ವನಿ'ಯ ಇನ್ನೊಂದು ಪ್ರಕಾರ 'ಅತ್ಯಂತತಿ-ರಸ್ಕೃತವಾಚ್ಯಧ್ವನಿ' ಇಲ್ಲಿ ಹೆಸರಿನಿಂದಲೇ ಸೂಚಿತವಾಗುವಂತೆ ವಾಚ್ಯಾರ್ಥ ಸಂಪೂರ್ಣವಾಗಿ ತಿರಸ್ಕೃತವಾಗುತ್ತದೆ ಅಂದರೆ ಮುಖ್ಯಾರ್ಥವನ್ನು ಪೂರ್ತಿಯಾಗಿ ತೊರೆದು ಬೇರೊಂದು ಅರ್ಥವನ್ನೇ ಪರಿಗ್ರಹಿಸುವುದಾದರೆ ಅತ್ಯಂತತಿರಸ್ಕೃತವಾಚ್ಯ ಹೇಳಬೇಕು. ಉದಾಹರಣೆಗಾಗಿ,

**ಭ್ರಮ ಧಾರ್ಮಿಕ ವಿಶ್ರಬ್ಧಃ ಸ ಶುನಕೋಽದ್ಯ ಮಾರಿತಸ್ತೇನ ।**
**ಗೋದಾವರಿನದಿತಿರಲತಾಗಹನವಾಬಸಿನಾ ದೃಪ್ತಸಿಂಹೇನ**[೧೬] **॥**

"ಧಾರ್ಮಿಕನೇ, ನೀನು ಇಲ್ಲಿ ವಿಶ್ವಾಸವಾಗಿ ತಿರುಗಾಡಬಹುದು. ಇಲ್ಲಿ ನೆಲಸಿದ್ದ ಆ ನಾಯಿಯೂ ಸತ್ತು ಹೋಗಿದೆ. ಇಲ್ಲಿಯೇ ಗೋದಾವರಿ ನದಿಯ ದಂಡೆಯ ಪೊದರಿನಲ್ಲಿ ವಾಸ ಮಾಡುವ ಸಿಂಹವು ಆ ನಾಯಿಯನ್ನು ಕೊಂದು ಹಾಕಿತು". ಇಲ್ಲಿ 'ಭ್ರಮ ಧಾರ್ಮಿಕ' ಎಂಬಲ್ಲಿ ಹೇಳಿರುವ 'ತಿರುಗಾಡು' ಎಂಬ ವಿಧಿಯು ಪ್ರಕೃತ ಸಂಧರ್ಭಕ್ಕೆ ಹೊಂದಿಕೆಯಾಗುವುದಿಲ್ಲವಾದ್ದ-ರಿಂದ ವಿಪರೀತ ಲಕ್ಷಣೆಯಿಂದ 'ಇಲ್ಲಿ ತಿರುಗಾಡಬೇಡ' ಎಂಬ ನಿಷೇದದಲ್ಲಿ ಇದು ಕೊನೆಗಾಣುವುದೆಂಬ ಶಂಕೆ ಬರಬಹುದು. ಆದರೆ ಇಲ್ಲಿ ಅವಕಾಶವಿಲ್ಲ ಎಲ್ಲಿ ನಿಷೇಧಗಳು ಮೊದಲು ತೋರುವಾಗಲೇ ನಿಷೇಧ ವಿಧಿಗಳಾಗಿ ಕೊನೆಯಾಗುತ್ತವೆಯೋ ಅಲ್ಲಿ ಮಾತ್ರವೇ ವಿಪರೀತಲಕ್ಷಣೆಯು ಪ್ರವರ್ತಿಸುತ್ತದೆ. ವಿಧಿರೂಪದಲ್ಲಿರುವ ವಾಕ್ಯವನ್ನು ಕೇಳುತ್ತಿರುವಾಗಲೇ ನಿಷೇಧವು ಎಲ್ಲಿ ತೋರುವುದೋ, ಅಲ್ಲಿಯೇ ವಿಪರೀತ ಲಕ್ಷಣೆಯನ್ನು ಅವಲಂಬಿಸಿ ಅತ್ಯಂತತಿ-ರಸ್ಕೃತವಾಚ್ಯಧ್ವನಿಯು ಸಂಭವಿಸುತ್ತದೆ. ಇದಕ್ಕೆ ಇನ್ನೊಂದು ಉದಾಹರಣೆ

**ಇಲ್ಲಿ ಹುಗಲಿಲ್ಲ ನಿನಗೆ ಓ ಬಿಯದ**
**ಇದು ಪಕ್ಷಿರಾಶಿ**[೧೭]

ಇಲ್ಲಿ ಪಕ್ಷಿಕಾಶಿ ಎನ್ನುವ ಮಾತೇ ವಾಚ್ಯಾರ್ಥವನ್ನು ತಿರಸ್ಕರಿಸುವುದರ ಮೂಲಕ ಒಂದು ಪ್ರತಿಮೆಯನ್ನು ನಿರ್ಮಿಸುತ್ತದೆ. 'ಬಿಯದ' ಎನ್ನುವುದು ಬೇಡ ಎನ್ನುವ ಅರ್ಥವನ್ನು ಕಳೆದುಕೊಂಡು ವಿಮರ್ಶಕನನ್ನು ಸೂಚಿಸುವುದಲ್ಲದೆ, ಕಾವ್ಯಗಳನ್ನು ಬಲಿಹಾಕುವ ಅತನ ಕಾರ್ಯವನ್ನು ಧ್ವನಿಸುತ್ತದೆ. ಅಲ್ಲದೆ "ಬಿಲ್ಲುಬಾಣಗಳ ಅಲ್ಲೇ ಬಿಟ್ಟು ಬಾ, ಮೈ ತೊಳೆದು ಬಾ, ಕೈ ಮುಗಿದು ಬಾ," ಮೊದಲಾದ ಮಾತುಗಳು ವಾಚ್ಯ ತಿರಸ್ಕೃತಿಯಿಂದ ಧ್ವನಿ ಸಮನ್ವಿತವಾಗುತ್ತದೆ.

**ಕರಿನರೆ ಬಣ್ಣದ ಪುಚ್ಚಗಳುಂಟು,**
**ಬಿಳಿ-ಹೊಳೆ ಬಣ್ಣದ ಗರಿ ಗರಿಯುಂಟು,**
**ಕೆನ್ನನ ಹೊನ್ನೆನ ಬಣ್ಣ ಬಣ್ಣಗಳ**
**ರೆಕ್ಕೆಗಳೆರಡೂ ಪಕ್ಕದಲುಂಟು,**
**ಹಕ್ಕಿ ಹಾರುತಿದೆ ನೋಡಿದಿರಾ.** [೧೮]

ಇಲ್ಲಿ ಹಕ್ಕಿ ಎನ್ನುವುದು ಹಕ್ಕಿಯಲ್ಲ 'ಕಾಲಪುರಷ'ನೆಂಬ ಅನುಭವದತ್ತ ನಮ್ಮನ್ನು ಒಯ್ಯುತ್ತದೆ. ಇಲ್ಲಿ ಪುಚ್ಚಗರಿ, ರೆಕ್ಕೆಗಳೆಲ್ಲಾ ಬೇರೆಯ ನಿಲವಿಗೇರುತ್ತವೆ. ವಾಚ್ಯಾಥ-ರ್ವನ್ನು ತಿರಸ್ಕರಿಸಿ ಈ ಇಡೀ ಪದ್ಯವೇ 'ಅತ್ಯಂತತಿರಸ್ಕೃತವಾಚ್ಯಧ್ವನಿ'ಯ ಸಾಂದ್ರವಾದ ಅನುಭವದ ಸಾಕಾರರೂಪವಾಗಿದೆ. ಹೀಗೆ ಅನುಭವದ ಅತಿಶಯತೆಯಿಂದ ಧ್ವನಿ ಸಾರ್ಥಕವಾಗುತ್ತದೆ. ಹೀಗೆ ಆಧುನಿಕ ಕವಿಗಳ ಕಾವ್ಯದಲ್ಲಿ ಲಕ್ಷಣಾಮೂಲಧ್ವನಿಯ ವಿಭಾಗವಾದ ಅತ್ಯಂತತಿರಸ್ಕೃತವಾಚ್ಯಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ಇನ್ನು ಅಭಿಧಾಮೂಲಧ್ವನಿ ಎನಿಸಿದ ವಿವಕ್ಷಿ ತಾನ್ಯಪರವಾಚ್ಯಧ್ವನಿಯನ್ನು ವಿವೇಚಿಸ ಲಾಗಿದೆ. ಇಲ್ಲಿ ಲಕ್ಷ್ಯಾರ್ಥದ ಸಂಪರ್ಕ ಇರುವುದಿಲ್ಲ. ವಾಚ್ಯಾರ್ಥಕ್ಕೆ ಸಂಗತವಾಗಿಯೇ ಇದ್ದು ಅದರ ಮೂಲಕವೇ ಧ್ವನಿ ಪ್ರತೀತವಾಗುತ್ತದೆ. ವಾಚ್ಯಾರ್ಥವು ಇಲ್ಲಿ 'ವಿವಕ್ಷಿತವು' ಹೌದು, 'ಅನ್ಯಪರ'ವೂ ಹೌದು. ಆದ್ದರಿಂದ ಇದನ್ನು 'ವಿವಕ್ಷಿತಾನ್ಯಪರವಾಚ್ಯ' ಎಂದು ಕರೆದಿರುವು ಅನ್ವರ್ಥಕವಾಗಿದೆ. ಇದು ಲಕ್ಷಣಮಾಲ 'ವಿವಕ್ಷಿತಾನ್ಯಪರವಾಚ್ಯ' ಧ್ವನಿಗಿಂತ ಹೆಚ್ಚು ವ್ಯಾಪಕವಾಗಿದ್ದು, ಪ್ರಭಾವಕಾರಿಯಾಗಿದೆ. ಈ 'ವಿವಕ್ಷಿತಾನ್ಯಪರವಾಚ್ಯದಲ್ಲಿ ವಿಶ್ವನಾಥನು 'ಅಸಂಲಕ್ಷ್ಯಕ್ರಮಧ್ವನಿ' ಮತ್ತು 'ಸಂಲಕ್ಷ್ಯಕ್ರಮಧ್ವನಿ' ಎಂದು ಎರಡು ಉಪವಿಭಾಗವನ್ನು ಮಾಡಿದ್ದಾನೆ.

ಇದರಲ್ಲಿ ಮೊದಲನೆಯದು 'ಅಸಂಲಕ್ಷ್ಯಕ್ರಮಧ್ವನಿ' ಇದು ವಿಭಾವಾನುಭಾವಾದಿಗಳ ರೂಪದಲ್ಲಿದ್ದು ರಸವಾಗಿ ಪರಿಣಮಿಸುತ್ತದೆ. ಈ ಧ್ವನಿಯ ಮುಖ್ಯ ರಹಸ್ಯವೆಂದರೆ

ವಿಭಾವಾದಿಗಳನ್ನು ಅರಿಯುತ್ತಿದ್ದಂತೆಯೇ ಥಟ್ಟನೆ ಅದು ರಸಾನುಭವದಲ್ಲಿ ಪರ್ಯಾವಸಾನವಾಗುತ್ತದೆ. ಅಂದರೆ ಮುಖ್ಯಾರ್ಥವನ್ನು ಚರ್ವಣಮಾಡುತ್ತಿರುವ ಕಾಲದಲ್ಲಿಯೇ ಯಾವ ಅಂತರವು ಇಲ್ಲದೆ ಧ್ವನಿಯೂ ಅನುಭವಗಮ್ಯವಾಗುತ್ತದೆ. ಇಲ್ಲಿ ಬರುವ ರಸ, ಭಾವ, ರಸಾಭಾಸ, ಭಾವಭಾಸ, ಭಾವಸಂಧಿ, ಭಾವಪ್ರಶಮ, ಭಾವಶಬಲತೆ ಇವಿಷ್ಟು ಅಸಂಲಕ್ಷ್ಯಕ್ರಮ ವ್ಯಂಗ್ಯವೆನಿಸಿದೆ. ಇದರಲ್ಲಿ ಶೃಂಗಾರಸದ ಬಗೆ ಎನಿಸಿದ ಸಂಭೋಗವೇ ಮೊದಲಾದ ಭೇದದಿಂದ ಅನಂತವಾಗುವುದರಿಂದ ಆ ಭೇದಗಳೆಲ್ಲವನ್ನೂ ವರ್ಣಿಸಲು ಸಾಧ್ಯವಿಲ್ಲದ್ದರಿಂದ ಆನಂದವರ್ಧನ, ವಿಶ್ವನಾಥ ಇತರ ಅಲಂಕಾರಿಕರು ಈ ಧ್ವನಿಗೆ ಹೆಚ್ಚು ಒತ್ತು ಕೊಡದೆ ಅಸಂಲಕ್ಷ್ಯಕ್ರಮವ್ಯಂಗ್ಯವು ಒಂದೇ ಬಗೆಯೆಂದು ಹೇಳಿದ್ದಾರೆ. ಇಲ್ಲಿ ವಿಭಾವಾನುಭಾವಾದಿಗಳಿಂದ ರಸವು ಹೇಗೆ ಪ್ರತೀತವಾಯಿತೆಂಬುದನ್ನು ವಿಮರ್ಶಿಸಿ ಪೂರ್ವಾಪರಕ್ರಮವನ್ನು ಗೊತ್ತು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದಲೇ ಇದನ್ನು 'ಅಸಂಲಕ್ಷ್ಯಕ್ರಮ' ಎಂದು ಕರೆದಿದ್ದಾನೆ. ಈ ಧ್ವನಿಗೆ ಕನ್ನಡ ಕವಿಗಳ ಪದ್ಯಗಳಿಂದ ಒಂದೆರಡು ಉದಾಹರಣೆಗಳನ್ನು ಕೂಡಲಾಗಿದೆ.

**ಆರವಮಂ ನಿರ್ಜಿತಕಂ**
**ಠೀರವರವಮಂ ನಿರಸ್ತ ಘನರವಮಂ ಕೋ**
**ಪಾರುಣನೇತ್ರಂ ಕೇಳ್ದಾ**
**ನೀರೋಳಗಿರ್ದುಂ ಜಿಮರ್ತನುರಗತಾಕಂ** [೧೯]

ಈ ಪದ್ಯದ ಕೊನೆಯ ಮಾತಿನಿಂದ ರೌದ್ರರಸ ಥಟ್ಟನೆ ಸಹೃದಯನ ಅನುಭವಗಮ್ಯಯವಾಗುತ್ತದೆ. 'ನೀರಿನಲ್ಲಿ ಇದ್ದರೂ ಅವನು ಬೆವೆತ'ನೆನ್ನುವ ಮಾತಿನ ಪರಿಣಾಮವನ್ನು ಪೂರ್ವಾಪರ ವಿವೇಚನಾಕ್ರಮದಿಂದ ಅದನ್ನು ವರ್ಣಿಸಿ ವಿವರಿಸುವ ಅಗತ್ಯವಿಲ್ಲ. ಹೀಗೆ ಯಾವುದೇ ಒಂದು ಮಾತಿನಲ್ಲಿ ಧ್ವನಿಕೇಂದ್ರೀಕೃತವಾಗಬೇಕೆಂದೇನು ಇಲ್ಲ. ಇಡೀ ಪದ್ಯರಚನೆಯ ಬಂಧ, ಪದಪ್ರಯೋಗಗಳು ರಸದ ಬೆಳವಣಿಗೆಗೆ ಕಾರಣವಾಗಬಹುದು. ಇದಕ್ಕೆ ಗದಾಯುದ್ಧದಿಂದಲೇ ಇನ್ನೊಂದು ಉದಾಹರಣೆ ನೋಡಬಹುದು.

**ಸ್ಥಿರಬದ್ಧ ಮತ್ಸರರ್ ಭೀ**
**ಕರ ಬದ್ಧ ಭ್ರುಕುಟಿಘಟಿತರದ್ಭುತರಟ್ಟಾ ।**
**ಸುರರಧಿಕ ಕೋಪಪಾಟಲ**
**ಪರುಷೇಕ್ಷಣರೆನಿಸಿ ದೃಷ್ಟಿ ಯುದ್ದ ಗೆಯ್ದರ್**[೨೦] **॥**

ಇದು ಗದಾಯುದ್ದ ಪ್ರಾರಂಭವಾಗುವುದಕ್ಕೆ ಮುಂಚಿನ ದೃಷ್ಟಿಯುದ್ಧ ಒಂದೊಂದು ಮಾತು ಕ್ರೋಧದ ಪಾರಕಾಷ್ಠತೆಯನ್ನು ತೋರುವ ಅಪೂರ್ವ ಧ್ವನಿಶಕ್ತಿಯಿಂದ

ದಿಪ್ತವಾಗಿ ಹೋಳೆಯುತ್ತಿದೆ. ಇವೆಲ್ಲದರಿಂದ ವಿವರಿಸಲಾಗದ ಧ್ವನಿ ಪ್ರಭೆಯು ಸುತ್ತಲೂ ಹರಡುತ್ತದೆ.

ಹೀಗೆ ರಸಾನುಭಾವದಲ್ಲಿ ಕ್ರಮವು ತಿಳಿಯದೆ ಇರುವುದರಿಂದ ರಸವನ್ನು ಅಸಂಲಕ್ಷ್ಯಕ್ರಮವ್ಯಂಗ್ಯಧ್ವನಿ ಎಂದು ಕರೆಯಲಾಗಿದೆ. ಅಲ್ಲದೆ ರಸಭಾವಾದಿಗಳ ಸ್ವರೂಪವನ್ನು ಹಿಂದೆಯೇ ತಿಳಿಸಲಾಗಿದೆ. ಹೀಗೆ ರಸಾದಿಗಳ ಭೇದವೂ ಅನಂತವೆನಿಸಿ ಎಣಿಕೆಗೆ ಸಿಕ್ಕದೇ ಇರುವುದರಿಂದ 'ಅಸಂಲಕ್ಷ್ಯವ್ಯಂಗ್ಯಧ್ವನಿಯು ಒಂದೇ ಬಗೆಯೆಂದು ವಿಶ್ವನಾಥನು ಹೇಳಿದ್ದಾನೆ. ಆನಂದವರ್ಧನನು ರಸಾದಿಗಳು ಧ್ವನಿತವಾಗುವುದರಿಂದ ಇದನ್ನೇ ಮುಂದೆ ರಸಧ್ವನಿ ಎಂದು ಗುರುತಿಸಿ 'ರಸ'ವನ್ನು ವ್ಯಾಪಕವಾದ ಅರ್ಥದಲ್ಲಿ ಎಲ್ಲಾ ಚಿತ್ತವೃತ್ತಿಗಳಿಗೂ ಅನ್ವಯವಾಯಿಸುವಂತೆ 'ಸೌಂದರ್ಯಾನುಭವ' 'ಕಾವ್ಯನುಭವ' ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕೆಂದಿದ್ದಾನೆ. ಸಹೃದಯರು ಸ್ವಬುದ್ಧಿಯಿಂದ ಊಹಿಸಿಕೊಳ್ಳುವಂತೆ ಮಾಡುವ ಅಸಾಧಾರಣತ್ವವೂ ಈ ವಿಭಾವವೊಂದಕ್ಕೆ ಇರುವುದೆಂಬುದು ಮಮ್ಮಟನ ಅಭಿಪ್ರಾಯವಾಗಿದೆ. ಆನಂದವರ್ಧನು ಈ ಚರ್ಚೆಯನ್ನು ಬೆಳಸಲಿಲ್ಲ. ವಿಶ್ವನಾಥನು 'ಅಸಂಲಕ್ಷ್ಯಕ್ರಮಧ್ವನಿ'[೨೧] ಒಂದೇ ಬಗೆಯೆಂದು ಹೇಳಿದ್ದಾನೆ. ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ 'ವಿವಕ್ಷಿತಾನ್ಯವರವಾಚ್ಯಧ್ವನಿ'ಯ ಎರಡನೆಯ ಪ್ರಕಾರವಾದ 'ಸಂಲಕ್ಷ್ಯಕ್ರಮವ್ಯಂಗ್ಯವನ್ನು ಮುಂದೆ ವಿವೇಚಿಸಲಾಗಿದೆ.

ಸಂಲಕ್ಷ್ಯ ಕ್ರಮಧ್ವನಿಯಲ್ಲಿ ರಸಭಾವಾದಿಗಳು ವ್ಯಂಗ್ಯವಾಗಿಲ್ಲದೆ ವಸ್ತು ಅಲಂಕಾರಗಳು ಧ್ವನಿತವಾಗುತ್ತವೆಂದು ಹೇಳುತ್ತಾನೆ. ಇದರ ಬಹುಮುಖ್ಯವಾದ ಲಕ್ಷಣವೆಂದರೆ ಇಲ್ಲಿ ಮುಖ್ಯಾರ್ಥಕ್ಕೂ ವ್ಯಂಗ್ಯಾರ್ಥಕ್ಕೂ ಪೂರ್ವಾಪರಕ್ರಮವು ಸುಸ್ಪಷ್ಟ ಅಥವಾ 'ಸಂಲಕ್ಷ್ಯ'ವಾಗಿರುತ್ತದೆ. ಆದ್ದರಿಂದಲೆ ಇದಕ್ಕೆ 'ಸಂಲಕ್ಷ್ಯಧ್ವನಿ' ಎಂದಿದ್ದಾರೆ. ಆದ್ದರಿಂದಲೇ ಆನಂದವರ್ಧನನು ಇದಕ್ಕೆ 'ಅನುರಣನಧ್ವನಿ' ಎಂದು ಅರ್ಥಾವತ್ತಾಗಿ ಹೇಳಿದ್ದಾನೆ.[೨೨] ಘಂಟೆಯನ್ನು ಬಾರಿಸಿದ ಮೇಲೆ ಅಲೆಅಲೆಯಾಗಿ ಹೊರಡುವ ನಾದದಂತೆ ವಾಚ್ಯಾರ್ಥ ಪ್ರತೀತೀಯಾದ ಬಳಿಕ ವ್ಯಂಗ್ಯವು ಇಲ್ಲಿ ಅನುರಣನವಾಗುವುದ-ರಿಂದ 'ಅನುರಣನಧ್ವನಿ' ಎನ್ನಲಾಗಿದೆ. ವಿಶ್ವನಾಥನು ಇದನ್ನು ಮೂರು ಬಗೆಯಾಗಿ ತಿಳಿಸಿದ್ದಾನೆ. ಮೊದಲನೆಯದಾಗಿ ಎಲ್ಲಿ ಒಂದು ಶಬ್ದವನ್ನು ತಿಳಿದೊಡನೆಯೇ ಅದ-ರಿಂದ ವ್ಯಂಗ್ಯಾರ್ಥವು ತಿಳಿದು ಬರುವುದೋ ಅಲ್ಲಿ 'ಶಬ್ದಶಕ್ತಿಮೂಲಧ್ವನಿ' ಎಂದೊ, ಎರಡನೆಯದಾಗಿ ಅರ್ಥವನ್ನು ತಿಳಿದೊಡನೆ ವ್ಯಂಗ್ಯಾರ್ಥವು ತೋರುವುದೋ ಅಲ್ಲಿ 'ಅರ್ಥಶಕ್ತಿಮೂಲಧ್ವನಿ' ಎಂದೂ ಎಲ್ಲಿ ಶಬ್ದಾರ್ಥಗಳೆರಡರ ಜ್ಞಾನದಿಂದ ವ್ಯಂಗ್ಯಾಥ-ರ್ವವು ತೋರಿ ಬರುವುದು ಅಲ್ಲಿ 'ಉಭಯಶಕ್ತಿಮೂಲ ಧ್ವನಿ' ಎಂದು ತಿಳಿಸಿದ್ದಾನೆ.[೨೩] ಸಂಲಕ್ಷ್ಯಕ್ರಮಧ್ವನಿಗೆ ಉದಾಹರಣೆಗಾಗಿ

**ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕತೋ ।**
**ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನೆಗುಂಟೆ ಭಾರತಂ ॥**
**ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳ ಮೇಕೆ ನೀಂ ಪಳಂ ।**
**ಚಲದಪೆಯಣ್ಣ ಸೂಲ್ಪಡೆಯಲಪ್ಪುದು ಕಾಣ ಮಾಹಾಜಿರಂಗದೊಳ್[೨೪] ॥**

ಮಹಾಭಾರತದ ಯುದ್ಧದ ಪ್ರಾರಂಭದಲ್ಲಿ ದುರ್ಯೋಧನ, ಭೀಷ್ಮರಿಗೆ ವೀರಪಟ್ಟವನ್ನು ಕಟ್ಟಿದಾಗ ಕರ್ಣ ಅವರನ್ನು ತಿರಸ್ಕರಿಸಿ ಮಾತನಾಡುತ್ತಾ ತನಗೆ ಪಟ್ಟವನ್ನು ಕಟ್ಟುವಂತೆ ಹೇಳುತ್ತಾನೆ. ದ್ರೋಣ ಪ್ರತಿಭಟಿಸುತ್ತಾನೆ. ಅದೆಲ್ಲವನ್ನೂ ಮೌನವಾಗಿ ಕೇಳಿದ ಭೀಷ್ಮರು ಕೊನೆಯಲ್ಲಿ ಹೇಳುವ ಮಾತನ್ನು ಪಂಪ ಈ ಮೇಲಿನ ಪದ್ಯದಲ್ಲಿ ತಿಳಿಸಿದ್ದಾನೆ. ಅಲ್ಲಿಬರುವ ಒಂದೊಂದು ಮಾತೂ ಭೀಷ್ಮರ ಔನ್ನತ್ಯವನ್ನು ಆ ಪ್ರಸಂಗದ ಜಟಿಲತೆಯನ್ನು ಬೆಳೆಸುತ್ತಾ ಹೋಗಿ ಅತ್ಯಂತ ಧ್ವನಿಪೂರ್ಣವಾದ ಮಾತಿನಲ್ಲಿ ಕೊನೆಗೊಳ್ಳುತ್ತದೆ. ಭೀಷ್ಮರಿಗೆ ವಯಸ್ಸಾದುದನ್ನೇ ಕರ್ಣ ಮತ್ತೆ ಮತ್ತೆ ಎತ್ತಿ ಹೇಳಿದ್ದ ಆಮಾತಿನಿಂದಲೇ ಭೀಷ್ಮರು ಪ್ರಾರಂಭಿಸುತ್ತಾರೆ ಕಲಿತನದ ಉಕ್ಕು, ಯೌವನದ ಸೊಕ್ಕು, ಸ್ವಾಮಿಭಕ್ತಿ, ಮತ್ತು ತೋಳ್‌ಬಲದ ಉತ್ಸಾಹ ಇವೆಲ್ಲಾ ನಿನಗಿರುವಷ್ಟು ನನಗಿದೆಯೋ ಕರ್ಣ? ಎಂದು ಅವರು ಕೇಳುವ ಪ್ರಶ್ನೆಯೇ ಕರ್ಣನನ್ನು ಚುಚ್ಚಿ ಎಚ್ಚರಿಸುವಂತಿದೆ. ಹಾಗೆಯೇ ಮುಂದುವರಿಯುತ್ತದೆ. ಆ ಮಾತು ಭಾರತಂ ಕಲಹಂ ಇದು ಸಾಮಾನ್ಯಯುದ್ಧವಲ್ಲ, ಮಹಾಭಾರತದ ಯುದ್ಧ ಎದುರಿಸುವವನು ಸಾಮಾನ್ಯನಲ್ಲ ಅರ್ಜುನ ಹಾಗಿರುವಾಗ ಯುದ್ಧ ಮಾಡುವುದಕ್ಕೆ ಇಷ್ಟೊಂದು ಆತುರವೇಕಣ್ಣ? ಈ ಮಾಹಾಜಿರಂಗದಲ್ಲಿ ನಿನ್ನ ಸರದಿಯೂ ಬರುತ್ತದೆ. 'ಸೂಲ್ ಪಡೆಯಲಪ್ಪುದು' ಎಂಬ ಮಾತು ಧ್ವನಿಸೌಧದಲ್ಲಿ ಶಿಖರ ಪ್ರಾಯವಾಗಿ ಪರಿಣಮಿಸುತ್ತದೆ. ಯುದ್ಧ ನನಗೇ ಮುಗಿಯುವುದಿಲ್ಲ, ನನ್ನ ಸರದಿ ಬಂದಿದೆ, ನಾನು ಹೋಗುತ್ತೇನೆ. ಇನ್ನೊಬ್ಬರ ಸರದಿ ಬರುತ್ತದೆ ಅವರದೂ ಕಥೆ ಮುಗಿಯುತ್ತದೆ. ಹಾಗೇ ನಿನ್ನ ಸರದಿಯೂ ಬರುತ್ತದೆ ಅಲ್ಲಿಗೆ ಯುದ್ಧ ನಿಲ್ಲುವುದಿಲ್ಲ ಹಾಗೆ ಮುಂದುವರೆಯುತ್ತದೆ ನಮ್ಮೆಲ್ಲರನ್ನೂ ತೆಗೆದುಕೊಂಡು ದುರ್ಯೋಧನನ ಬಳಿಗೂ ಹೋಗುತ್ತದೆ ಈ ಮಹಾಜಿರಂಗ ನಮ್ಮಾರನ್ನೂ ಉಳಿಸುವುದಕ್ಕೆ ಬಂದದ್ದಲ್ಲ ಸರದಿಯಲ್ಲಿ ನಾವು ನಿಂತಿದ್ದೇವೆ ಒಬ್ಬರಾದ ಮೇಲೊಬ್ಬರು ನಮ್ಮನ್ನು ಅದಕ್ಕೆ ಅರ್ಪಿಸಿಕೊಳ್ಳಬೇಕು ಆದ್ದರಿಂದ ಆತುರಪಡಬೇಡ ಇತ್ಯಾದಿಯಾಗಿ ಈ ಮಾತಿನ ಅರ್ಥ ಪರಿಭಾವಿಸಿದಷ್ಟು ಬೆಳೆಯುತ್ತಾ ಹೋಗುತ್ತದೆ.

ಇಂತಹ ಕಡೆಗಳೆಲ್ಲೆಲ್ಲಾ ವ್ಯಂಜಕ ಮತ್ತು ವ್ಯಂಗ್ಯಗಳಿಗೆ ಇರುವ ಪೂರ್ವಾಪರಕ್ರಮವು ಸುಸ್ಪಷ್ಟ ಅಥವಾ ಸಂಲಕ್ಷ್ಯವಾಗಿರುವುದನ್ನು ಕಾಣಬಹುದು. ಆದ್ದರಿಂದ ಇದನ್ನು ಸಂಲಕ್ಷ್ಯಕ್ರಮಧ್ವನಿಯೆಂದು ಕರೆದಿದ್ದಾನೆ. ಇಲ್ಲಿ ಅರ್ಥವು ಅನುರಣಿತವಾಗುವುದರಿಂದ 'ಅನುಕರಣನಧ್ವನಿ' ಎಂದು ಆನಂದವರ್ಧನ ಹೇಳಿರುವುದು ಅನ್ವರ್ಥವಾಗಿದೆ.

ಈ ಸಂಲಕ್ಷ್ಯಕ್ರಮಧ್ವನಿಯ ಮೂರು ವಿಭಾಗಗಳನ್ನು ವಿಶ್ವನಾಥನು ಗುರುತಿಸಿದ್ದಾನೆ. ಮೊದಲನೆಯದು ಶಬ್ದಶಕ್ತಿಮೂಲಧ್ವನಿ. ಒಂದು ಶಬ್ದದ ಶಕ್ತಿಯನ್ನು ಆಶ್ರಯಿಸಿ ಉಂಟಾಗುವ ಧ್ವನಿ. ಶಬ್ದಗಳಿಗಿರುವ ನಾನಾರ್ಥಬೋಧಕವಾದ ಚಮತ್ಕಾರವನ್ನವಲಂಬಿಸಿ ಬರುವ ಧ್ವನಿ. ಒಂದು ವಿಶಿಷ್ಟ ಶಬ್ದದ ಪ್ರಯೋಗವೇ ಧ್ವನಿಗೆ ಮುಖ್ಯಾಧಾರ ವಾಗಿರುವುದರಿಂದ ಇದಕ್ಕೆ 'ಶಬ್ದಶಕ್ತಿ ಮೂಲಧ್ವನಿ' ಎಂದು ಕರೆದಿದ್ದಾರೆ. ಅರ್ಥದ ಅಪೇಕ್ಷೆಯೇ ಇಲ್ಲದೆ ಕೇವಲ ಶಬ್ದದಿಂದ ಇಷ್ಟು ಅರ್ಥವು ಪ್ರತೀತವಾಯಿತೆಂಬುದು ಇದರ ತಾತ್ಪರ್ಯವಲ್ಲ. ಶಬ್ದಪ್ರಯೋಗವು ಇಲ್ಲಿ ಮೂಲಾಧಾರ, ಈ ಶಬ್ದ ವಿಶೇಷದಿಂದ ಹೊರಡುವ ಅರ್ಥವು ವ್ಯಂಗ್ಯಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದೇ ಇಲ್ಲಿಯ ಅಭಿಪ್ರಾಯವಾಗಿದೆ.

ಆನಂದವರ್ಧನನು ಇಲ್ಲಿ ಮುಖ್ಯವಾಗಿ ಅಲಂಕಾರ ಧ್ವನಿತವಾಗುತ್ತದೆಂಬುದನ್ನ ಹೇಳಿ. ಶ್ಲೇಷಾಲಂಕಾರಕ್ಕೂ ಇದಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಿದ್ದಾನೆ. ಶ್ಲೇಷಾಲಂಕಾರದಲ್ಲಿ ಎರಡೂ ಅರ್ಥಗಳು ವಾಚ್ಯವಾಗುತ್ತದೆ. ಆದರೆ, 'ಶಬ್ದಶಕ್ತಿಮೂಲ ಧ್ವನಿ'ಯಲ್ಲಿ ಒಂದೇ ಅರ್ಥ ವಾಚ್ಯ, ಇನ್ನೊಂದು ಅರ್ಥ ಸೂಚ್ಯವಾಗಿ ಅಲ್ಲಿ ವ್ಯಂಗ್ಯವಾಗಿ ಅಲಂಕಾರ ಧ್ವನಿತವಾಗುತ್ತದೆ ಎಂದಿದ್ದಾನೆ. ಶ್ಲೇಷಕ್ಕೆ ಸಂಬಂಧಿಸಿದಂತೆ ಮಮ್ಮಟ, ಅಪ್ಪಯದೀಕ್ಷಿತ, ಜಗನ್ನಾಥಪಂಡಿತ, ಮೊದಲಾದವರು ತಮ್ಮ ತಮ್ಮ ಅಭಿಪ್ರಾಯಗಳನ್ನು ನಿರೂಪಿಸುತ್ತಾರೆ. ಶ್ಲೇಷದಲ್ಲಿ ಶಬ್ದಕ್ಕೆ ಅನೇಕಾರ್ಥಗಳುಂಟು ಎಂಬುದು ನಿಜಾವಾದರೂ ಅರ್ಥಗಳಲ್ಲಿ ಇದೊಂದೇ ವಾಚ್ಯ ಎಂದು ನಿಯಂತ್ರಿಸುವುದರಲ್ಲಿ ಯಾವ ಸಂದರ್ಭ ಸಾಮಾಗ್ರಿಯೂ ಇಲ್ಲದಿರುವ ಕಾರಣ. ಎಲ್ಲವೂ ವಾಚ್ಯವೇ ಆಗುತ್ತದೆ. ಶಬ್ದಶಕ್ತಿಮೂಲ ಧ್ವನಿಯಲ್ಲಾದರೆ ಪ್ರಕರಣಾದಿಗಳ ಬಲದಿಂದ [೨೫] ವಾಚ್ಯಾರ್ಥವು ನಿಯಮಿತವಾಗುತ್ತದೆ. ಆ ಬಳಿಕ ಇನ್ನೊಂದು ಅರ್ಥವು ಸ್ಫುರಿಸುತ್ತದೆ. ಇದನ್ನು ವ್ಯಂಗ್ಯವೆಂದು ಕರೆಯಬೇಕು. ಮಮ್ಮಟನ ಅಭಿಪ್ರಾಯದಲ್ಲಿ ಶಬ್ದಶಕ್ತಿಮೂಲವು ಯಾವಾಗಲೂ ಅಲಂಕಾರಧ್ವನಿಯೇ ಆಗಬೇಕಾಗಿಲ್ಲ. ಅದು ವಸ್ತುಧ್ವನಿಯೂ ಆಗಬಹುದು ಎಂದಿದ್ದಾನೆ. ವಿಶ್ವನಾಥನು ಶಬ್ದಶಕ್ತಿಮೂಲವನ್ನು ವಸ್ತುಧ್ವನಿ ಮತ್ತು ಅಲಂಕಾರಧ್ವನಿ ಎಂದು ಎರಡು ಭೇದಗಳನ್ನು ಹೇಳಿದ್ದಾನೆ. ಉದಾಹರಣೆಗಾಗಿ

**ಆತಕೊಟ್ಟ ವಸ್ತು ಒಡವೆ**
**ನನಗೆ ಅವಗೆ ಗೊತ್ತು**
**ತೋಳುಗಳಿಗೆ ತೋಳಬಂದಿ**
**ಕೆನ್ನೆ ತುಂಬ ಮುತ್ತು** [೨೬]

ಎಂಬಲ್ಲಿ 'ನಾನು ಬಡವಿ, ಆತ ಬಡವ' ಎಂದು ಮೊದಲಾಗುವ ಭಾವವನ್ನು ಲಕ್ಷದಲ್ಲಿಟ್ಟರೆ, ಆಲಿಂಗನ ಚುಂಬನಗಳೆಂಬ ಅರ್ಥಾಂತರಗಳು ಶ್ಲೇಷೆಯಿಂದ

ವ್ಯಕ್ತವಾದೊಡನೆಯೇ ಅವು ಕೇವಲ ಉಪಮೆಯಲ್ಲಿ ವಿಶ್ರಾಂತವಾಗದೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬಂದಿ ಮುತ್ತುಗಳಿಗಿಂತ ನೂರ್ಮಡಿ ಅಧಿಕವಾದ ಒಡವೆ ವಸ್ತುಗಳಾಗಿದ್ದುವೆಂಬ ವ್ಯತಿರೇಕಾಲಂಕರವನ್ನು ಧ್ವನಿಸುತ್ತದೆ.

**ಕಾಮಿ ಬಿಟ್ಟೋಡಿ ದನ ಬಲೆಯ ಸತ್ರದಿ**
**ಕಾಮದ ಬಿಸಿಯಾರಿ ಹೊಗೆ**
**ಭೀಮಭವಾರ್ಣವದೊಳಗೆ ಜಲಿಜ್ವರೆ**
**ರಾಮಿ ಮತ್ತಾಕೆಯ ಪಾಪ**[೨೭]

ಎನ್ನುವಾಗ 'ಪಾಪ' ಎಂದರೆ ಶ್ಲೇಷಯ ಮಹಿಮೆಯಿಂದ 'ಶಿಶು' ಮತ್ತು 'ದುಷ್ಕೃತ' ಎಂಬ ಎರಡು ಅರ್ಥಗಳು ತೋರುತ್ತದೆ. ಆಮೇಲೆ ಪಾಪದ ಫಲದ ಮೂರ್ತರೂಪವೇ ಶಿಶು ಎಂಬ ಅಭೇದದ ಅಧ್ಯವಸಾಯವೂ ಬರುವುದರಿಂದ ಒಂದು ರೀತಿಯ ಅತಿಶಯೋಕ್ತಿಯ ಛಾಯೆಯನ್ನು ಇಲ್ಲಿ ಕಾಣಬಹುದು. ಇಲ್ಲಿ ಚಮತ್ಕಾರಕ್ಕೆ ಶ್ಲೇಷೆಯು ಕಾರಣವೆನ್ನುವುದಕ್ಕಿಂತಲೂ ಶಬ್ದ ಶಕ್ತಿ ಮೂಲಧ್ವನಿಯನ್ನೇ ಹೇಳಬಹುದು.

'ಸಂಲಕ್ಷ್ಯಕ್ರಮ ಧ್ವನಿಯ ಎರಡನೆಯ ಬಗೆಯಾದ 'ಅರ್ಥಶಕ್ತಿಮೂಲಧ್ವನಿ'ಯು ಯಾವುದೇ ಒಂದು ಶಬ್ದ ಪ್ರಧಾನವಲ್ಲ, ಒಟ್ಟು ಅರ್ಥದಿಂದ ಧ್ವನಿ ಉಂಟಾಗುತ್ತದೆ. ಒಂದು ಅರ್ಥದಿಂದ ಇನ್ನೊಂದು ಅರ್ಥವನ್ನು ತಾತ್ಪರ್ಯ ರೂಪದಿಂದ ಧ್ವನಿಸುವುದು 'ಅರ್ಥಶಕ್ತಿ ಮೂಲಧ್ವನಿ'ಯಾಗಿದೆ. ಉದಾಹರಣೆಗೆ

**ಏವಂವಾದಿನಿ ದೇವರ್ಷೌಪಾರ್ಶ್ವೇ ಪಿತುರಧೋ ಮುಖಿ ।**
**ಲೀಲಾ ಕಮಲ ಪತ್ರಾಣಿ ಗಣಯಾ ಮಾಸ ಪಾರ್ವತಿ**[೨೮] **॥**

ದೇವರ್ಷಿ ಹೀಗೆ ಹೇಳುತಿರಲು ತಂದೆಯ ಪಕ್ಕದಲಿದ್ದ ಪಾರ್ವತಿ ತಲೆತಗ್ಗಿಸಿ ಕೈಯಲ್ಲಿರುವ ಕಮಲಪತ್ರಗಳನ್ನು ಎಣಿಕೆ ಮಾಡಿದಳು. ಇಲ್ಲಿ ಕಮಲಪತ್ರಗಳ ಎಣಿಕೆ ಗೌಣವಾಗಿ ಆಕೆಯ ಲಜ್ಜೆ ಧ್ವನಿತವಾಗುತ್ತದೆ. ಇಲ್ಲಿ ಧ್ವನಿ ಯಾವ ಪದವನ್ನು ಅವಲಂಬಿಸಿಲ್ಲ ಒಟ್ಟು ಅರ್ಥವನ್ನು ಅವಲಂಬಿಸಿ ಅರ್ಥಶಕ್ತಿ ಮೂಲಧ್ವೈನಿಯಾಗಿದೆ.

ಈ 'ಅರ್ಥಶಕ್ತಿಮೂಲಧ್ವನಿಯು, ಸ್ವತಃಸಂಭವಿ, ಕವಿಪ್ರೌಢೋಕ್ತಿಸಿದ್ಧ, ಕವಿನಿಬದ್ಧವಕ್ತೃ ಪ್ರೌಢೋಕ್ತಿಸಿದ್ದ ವೆಂದು ಮೂರು ಬಗೆಯಾಗಿದ್ದು ಇದರಲ್ಲಿ ಒಂದೊಂದು

೧. ಸ್ವತಸ್ಸಂಭವಿವಸ್ತುವಿನಿಂದ ವಸ್ತುಧ್ವನಿ,
೨. ಸ್ವತಸ್ಸಂಭವಿವಸ್ತುವಿನಿಂದ ಅಲಂಕಾರಧ್ವನಿ
೩. ಸ್ವತಃ ಸಂಭಾವಿ ಅಲಂಕಾರದಿಂದ ವಸ್ತುಧ್ವನಿ ಮತ್ತು
೪. ಸ್ವತಸ್ಸಂಭವಿ ಅಲಂಕಾರದಿಂದ ಅಲಂಕಾರ ಧ್ವನಿ

೫. ಕವಿ ಪ್ರೌಢೋಕ್ತಿ ಸಿದ್ಧ ವಸ್ತುವಿನಿಂದ ವಸ್ತು ಧ್ವನಿ
೬. ಕವಿ ಪ್ರೌಢೋಕ್ತಿ ಸಿದ್ದ ವಸ್ತುವಿನಿಂದ ಅಲಂಕಾರಧ್ವನಿ
೭. ಕವಿಪ್ರೌಢೋಕ್ತಿ ಸಿದ್ಧಃ ಅಲಂಕಾರದಿಂದ ವಸ್ತುಧ್ವನಿ
೮, ಕವಿಪ್ರೌಢೋಕ್ತಿ ಅಲಂಕಾರದಿಂದ ಅಲಂಕಾರ ಧ್ವನಿ
೯. ಕವಿನಿಬದ್ಧ ವಕ್ತೃಪ್ರಾಢೋಕ್ತಿಸಿದ್ಧವಾದ ವಸ್ತುವಿನಿಂದ ವಸ್ತು ಧ್ವನಿ,
೧೦. ಕವಿನಿಬದ್ದ ವಕ್ತೃಪ್ರೌಢೋಕ್ತಿ ವಸ್ತುವಿನಿಂದ ಅಲಂಕಾರ ಧ್ವನಿ
೧೧. ಕವಿನಿಬದ್ಧ ವಕ್ತೃಪ್ರೌಢೋಕ್ತಿ, ಅಲಂಕಾರದಿಂದ ಅಲಂಕಾರ ಧ್ವನಿ

ಹೀಗೆ ಅರ್ಥಶಕ್ತಿ ಮೂಲಧ್ವನಿಯು ಒಟ್ಟು ಹನ್ನೆರಡು ಬಗೆಗಳಾಗುತ್ತವೆ.

ಇನ್ನು ಅರ್ಥಶಕ್ತಿಮೂಲಧ್ವನಿ ಮೊದಲನೆಯ ವಿಭಾಗವಾದ 'ಸ್ವತಃಸಂಭವಿ'ಲೋಕದಲ್ಲಿ ನಡೆದದ್ದರ ಅಥವಾ ನಡೆಯಬಹುದಾದ ಯಥಾವತ್ತಾದ ನಿರೂಪಣೆ ಸ್ವತಃ ವ್ಯಂಜ–ಕವಾಗಿರುವುದರಿಂದ ಅದಕ್ಕೆ ಯಾವ ಬಣ್ಣವನ್ನೂ ಕವಿ ಕಟ್ಟದೆ ಇದ್ದುದನ್ನು ಇದ್ದಂತೆಯೇ ವರದಿ ಮಾಡುತ್ತಾನೆ. ಉದಾಹರಣೆಗಾಗಿ

**ಕಷ್ಟಂ ನ ಯಾಮಿ ಕ್ಷೇತ್ರಂ ಖಾದ್ಯತಾಂ ಶಾಲಿರಪಿ ಕೀರನಿವಹೈಃ ।**
**ಜಾನಂತೋ?s ಪಥಿಕಾಃ ಪೃಚ್ಛಂತಿ ಪುನಃಪುನೋ ಮಾರ್ಗಂ** [೨೯] ॥

(ಅಯ್ಯೋ, ಗದ್ದೆಗೆ ನಾನು ಹೋಗೆನು, ನೆಲ್ಲನು
ತಿಂದುಕೊಳ್ಳಲಿ ಗಿಳಿವಿಂಡು,
ಅರಿತರಿತೂ ದಾರಿಹೋಕರು ದಾರಿಯ
ಬೆಸಗೊಳುವರು, ಮತ್ತೆ ಮತ್ತೆ [೩೦])

ಹೀಗೆಂದು ಬಹುಶಃ ತನ್ನ ತಾಯಿಯೊಂದಿಗೆ ಹೇಳಿ, ಗದ್ದೆಗೆ ಹೋಗಲೊಲ್ಲೆನೆಂದು ಹಠಹಿಡಿಯುವ ಹುಡುಗಿ ಮುಗ್ಧೆಯಾಗಿರುವುದು ಅಸಂಭವವಲ್ಲ. ತನಗೆ ಬಹುಶಃ ಅರಿವಿಲ್ಲದ ಅವಳ ಸೌಂದರ್ಯದ ಆಕರ್ಷಣ ಶಕ್ತಿ ಈ ಮಾತನು ಕೇಳುವವರಿಗೆ ಥಟ್ಟನೆ ಸ್ಫುರಿಸುತ್ತದೆ. ದಾರಿಯನ್ನು ತಿಳಿದು ತಿಳಿದು ಪಥಿಕರು ಇವಳನ್ನು ಕೇಳುವುದು ಒಂದು ನೆವ ಮಾತ್ರ; ಅವರಿಗೆ ಬೇಕಾದದ್ದು ದಾರಿಯಲ್ಲ; ಈ ಚೆಲುವೆಯ ಸಮೀಪದಲ್ಲಿ ಸಾಧ್ಯವಾದಷ್ಟು ಹೊತ್ತು ನಿಂತು ಅವಳೊಂದಿಗೆ ನಾಲ್ಕು ಮಾತನಾಡುವುದು.

ಇನ್ನು ಅರ್ಥಶಕ್ತಿಮೂಲಧ್ವನಿಯಲ್ಲಿ ಎರಡನೆಯ ವಿಭಾಗ 'ಕವಿಪ್ರೌಢೋಕ್ತಿ ಮಾತ್ರಸಿದ್ಧ'ದಲ್ಲಿ ಕವಿಯು ವಸ್ತುಸ್ಥಿತಿಯನ್ನು ರೂಪಾಂತರಗೊಳಿಸಿ ಸೊಗಸನ್ನು ಸೃಷ್ಟಿಸುವ ಪ್ರೌಢಮಾರ್ಗವಾಗಿದೆ. ಉದಾಹರಣೆಗಾಗಿ.

**ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕೆ?**

**ಕೂಸು ಕಂದಯ್ಯ ಒಳಹೊರಗೆ–ಆಡಿದರೆ**
**ಬೀಸಣಿಗೆ ಗಾಳಿ ಸುಳಿದಾವು.**[೩೧]

ಕಾಲುಬಂದ ಮಗು ಮನೆಯ ತುಂಬ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸುಳಿದಾಡುತ್ತಿದ್ದರೆ ಬೀಸಣಿಗೆಯಿಂದ ಗಾಳಿ ಹಾಕಿದಂತೆ ಮನೆಯೊಳಗೆಲ್ಲ ಗಾಳಿ ಹರಿದಾಡುತ್ತದೆ. ಕವಿಯ ಪ್ರತಿಭೆ ಮಗುವಿನ ಚರ್ಯೆಯನ್ನು ಇಲ್ಲಿ ಎಷ್ಟು ಚೆನ್ನಾಗಿ ರೂಪಿಸಿದೆ! ಮಗು ಸತತವಾಗಿ ಹಿಂದಕ್ಕೂ ಮುಂದಕ್ಕೂ ಸುಳಿದಾಡುವುದರ ಸೊಗಸೂ, ಇದರಿಂದ ಮನೆಯವರಿಗೆ ಒದಗುವ ಸುಖಾನುಭವವೂ ಇಲ್ಲಿ ಸುವ್ಯಕ್ತವಾಗುತ್ತದೆ.

ಈಗ ಅರ್ಥಶಕ್ತಿಮೂಲಧ್ವನಿಯ ಮೂರನೆಯ ವಿಭಾಗವಾದ ‘ಕವಿನಿಬದ್ಧಪ್ರೌಢೋಕ್ತಿ ಮಾತ್ರಸಿದ್ಧ’[೩೨] ಇಲ್ಲಿ ಕವಿಯ ಮಾತಿಗಿಂತಲೂ ಕವಿನಿಬದ್ಧನಾದ ವಕ್ತೃವಿನ ಮಾತು ಹೆಚ್ಚು ಅಭಿನಿವೇಶವಿರುವ ಪ್ರಯುಕ್ತ ಕವಿಯ ಮಾತಿಗಿಂತಲೂ ಕವಿನಿಬದ್ಧವಕ್ತೃವಿನ ಮಾತು ಸಹೃದಯರಿಗೆ ಹೆಚ್ಚು ಚಮತ್ಕಾರವನ್ನುಂಟುಮಾಡುತ್ತದೆ. ಇವುಗಳಲ್ಲಿ ಅಲಂಕಾರಗಳನ್ನು ಅಭಿವ್ಯಕ್ತಪಡಿಸುವ ಕಥೆಗಳಲ್ಲಿ ರೂಪಕದಲ್ಲಿ ಆರೋಪಿಸುವುದು, ಉತ್ಪ್ರೇಕ್ಷೆಯಲ್ಲಿ ಉತ್ಪ್ರೇಕ್ಷಿಸುವುದು, ವ್ಯತಿರೇಕದಲ್ಲಿ ಒಂದಕ್ಕಿಂತ ಮತ್ತೊಂದರಲ್ಲಿ ವಿಶೇಷವನ್ನು ತಿಳಿಸಿ ಪ್ರತ್ಯೇಕಿಸುವುದು ಉಪಮಾನದೊಡನೆ ಸದೃಶವೆನಿಸುವುದು ಹೀಗೆ ಇದಿಷ್ಟೆ ಸಹೃದಯ–ರಿಗೆ ಆನಂದವನ್ನುಂಟುಮಾಡುವುದರಿಂದ ಇದು ಪ್ರಧಾನವೆನಿಸಿದೆ. ಇವೆಲ್ಲವೂ ಮತ್ತೆ ಒಂದೊಂದು ನಾಲ್ಕು ಉಪ ವಿಭಾಗಗಳಾಗಿ ಅರ್ಥಶಕ್ತಿಮೂಲಧ್ವನಿಯು ಒಟ್ಟು ಹನ್ನೆರಡು ಬಗೆಗಳಾಗುತ್ತವೆ.

ಇನ್ನು ಸಂಲಕ್ಷ್ಯಕ್ರಮದ ಮೂರನೇ ವಿಭಾಗವಾದ ಉಭಯಶಕ್ತಿ ಮೂಲಧ್ವನಿಯು ಶಬ್ದಾರ್ಥಗಳೆರಡರ ಶಕ್ತಿಯಿಂದಲೂ ಸಂಭವಿಸುವುದು. ವಸ್ತುವೆನಿಸಿದ ಶಬ್ದಾಥ–ರ್ಗಗಳೆರಡೂ ಇಲ್ಲಿ ಬೇರೋಂದು ಅರ್ಥವನ್ನು ಪ್ರಕಾಶಪಡಿಸುವುದರಿಂದ ಆ ಅರ್ಥವು ಒಂದು ವಸ್ತುವೆನಿಸದೇ ಕೇವಲ ಅಲಂಕಾರವೇ ಆಗುವ ಪ್ರಯುಕ್ತ ಉಭಯ ಶಕ್ತಿ ಮೂಲಧ್ವನಿಯಾಗಿದೆ. ಇದು ಒಂದೇ ಬಗೆಯಾಗಿದೆ. ಇದಕ್ಕೆ ಉದಾಹರಣೆಗಾಗಿ.

**ರಾಮಮುಕ್ತ ಚಂದ್ರರುಚಿರಃಸಪದ್ಮಕೋಮದಯನ್**
**ದ್ವಿಜಾನ್‌ಜನಿತಮೀಸಕೇತನಃ ।**
**ಅಭವತ್ ಪ್ರಸಾದಿತಸುರೋ ಮಹೋತ್ಸವಃ**
**ಪ್ರಮಾದಾಜ ನಸ್ಯ ನ ಚಿರಾಯ ಮಾಧವಃ**[೩೩] ॥

“ಹಿಮಾವರಣದಿಂದ ಬಿಡುಗಡೆಯಾದ ಚಂದ್ರನಂತೆ ಸುಂದರನಾಗಿ, ಹೆಂಡತಿ ಪದ್ಮೆಯೊಡಗೂಡಿ, ದ್ವಿಜರೆನಿಸಿದ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಲ್ಲರಿಗೆ ಆನಂದವನ್ನುಂಟು ಮಾಡುತ್ತ, ಪ್ರದ್ಯುಮ್ನನೆಂಬ ಮಗನನ್ನು ಪಡೆದು, ರಾಕ್ಷಸರ ಸಂಹಾರದಿಂದ ದೇವತೆಗಳನ್ನು

ಸಂತೋಷಪಡಿಸಿದ ಶ್ರೀಕೃಷ್ಣನು ಶೀತಕಾಲದ ಹಿಮದಿಂದ ಬಿಡುಗಡೆಯಾದ ಚಂದ್ರನಿಂದ ಶೋಭಿಸುತ್ತಲೂ ವಿಕಸಿತವಾದ ಕಮಲಗಳೊಡಗೂಡಿಯೂ, ಕೋಗಿಲೆ ಮೊದಲಾದ ಪಕ್ಷಿಗಳನ್ನು ಸಂತೋಷಗೊಳಿಸುತ್ತಲೂ, ಜನರಿಗೆ ಕಾಮೋದ್ರೇಕವನ್ನುಂಟುಮಾಡುತ್ತಲೂ, ಮದ್ಯವನ್ನು ಕುಡಿಯಲು ಹಿತವಾಗುವಂತೆಯೂ ಮಾಡುವ ವಸಂತಕಾಲದಂತೆ ಇಂದ್ರ ಪ್ರಸ್ಥನಗರದ ಸ್ತ್ರೀಯರಿಗೆ ದರ್ಶನದಿಂದಲೇ ಹೆಚ್ಚು ಆನಂದವನ್ನು ಉಂಟುಮಾಡಿದನು". ಇಲ್ಲಿ ಪ್ರಕೃತ ಸಂದರ್ಭಕ್ಕೆ ಅನುಗುಣವಾದ ಶ್ರೀಕೃಷ್ಣನ ಆಗಮನವನ್ನು ವರ್ಣಿಸುವಾಗ ಅದರೊಡನೆಯೇ ಶಬ್ದಾರ್ಥಗಳೆರಡರಿಂದಲೂ ತೋರುವ ಅಪಕೃತವಾದ ವಸಂತಕಾಲದ ವರ್ಣನೆ ತೋರುತ್ತದೆ. ಹೀಗೆ ಶಬ್ದಾರ್ಥಗಳೆರಡರಿಂದಲೂ ತೋರುವ ಬೇರೊಂದು ಅರ್ಥವನ್ನು ಅಲಂಕಾರವೆಂದು ಇಲ್ಲಿ ಭಾವಿಸಲಾಗಿದೆ.

ಹೀಗೆ ವ್ಯಂಗ್ಯಾರ್ಥಗಳ ವ್ಯವಿಧ್ಯದಿಂದ ಅವನ್ನು ವ್ಯಕ್ತಪಡಿಸುವ ಕಾವ್ಯಗಳಲ್ಲೂ ಭೇದ ಪ್ರಭೇದಗಳಿವೆ. ವಿಶ್ವನಾಥನು ಅಸಂಲಕ್ಷ್ಯಕ್ರಮವ್ಯಂಗ್ಯವನ್ನು ಪದದಲ್ಲೂ, ಪದದ ಅಂಶಗಳಲ್ಲೂ, ವಾಕ್ಯದಲ್ಲೂ, ಮಹಾವಾಕ್ಯದಲ್ಲೂ, ವರ್ಣ, ರಚನೆಯಲ್ಲೂ ಆರುಬಗೆಯಾಗಿ ಹೇಳಿದ್ದಾನೆ. ಅರ್ಥಾಂತರ ಸಂಕ್ರಮಿತ ವಾಚ್ಯದಲ್ಲಿ ಪದಗತ ಮತ್ತು ವಾಕ್ಯಗತ ಎರಡು, ಅತ್ಯಂತ ತಿರಸ್ಕೃತ ವಾಚ್ಯಾದಲ್ಲಿ ಹೀಗೆಯೇ ಎರಡು, ಅಸಂಲಕ್ಷ್ಯ ಕ್ರಮ ವ್ಯಂಗ್ಯವು ಪದ, ಪದಾಂಶ, ವಾಕ್ಯ, ಮಹಾವಾಕ್ಯ, ವರ್ಣರಚನೆ ಒಟ್ಟು ಆರುಬಗೆ ಸಂಲಕ್ಷ್ಯಕ್ರಮವ್ಯಂಗ್ಯವು ಶಬ್ದಶಕ್ತಿಯಿಂದ ತೋರುವಾಗ ವಸ್ತುರೂಪವಾದರೆ ಪದದಲ್ಲಿ ಒಂದು ಬಗೆ, ವಾಕ್ಯದಲ್ಲಿ ಒಂದು ಬಗೆ, ಅದು ಅರ್ಥಶಕ್ತಿಯಿಂದ ತೋರಿದರೆ ಪದದಲ್ಲಿ ಹನ್ನೆರೆಡು ಬಗೆಗಳು, ವಾಕ್ಯದಲ್ಲಿ ಹನ್ನೆರಡು ಬಗೆಗಳು, ಮಹಾವಾಕ್ಯದಲ್ಲಿ ಹನ್ನೆರಡು ಬಗೆಗಳು, ಶಬ್ದಾರ್ಥೋಭಯಶಕ್ತಿಗಳಿಂದ ತೋರುವಾಗ ಒಂದು ಬಗೆ. ಒಟ್ಟು ಶುದ್ಧಧ್ವನಿಯಲ್ಲಿ ಐವತ್ತೊಂದು ಬಗೆಗಳಾಗುತ್ತವೆ. ಈ ಐವತ್ತೊಂದರಲ್ಲಿ ಒಂದೊಂದು ಬಗೆಯಲ್ಲೂ ಅಂಗಾಂಗಿಭಾವ, ಏಕಾಶ್ರಯಸ್ಥಿತಿ, ಸಂದಿಗ್ಧಭಾವವೆಂಬ ಮೂರು ಬಗೆಯ ಸಾಂಕರ್ಯದಿಂದಲೂ, ಸಂಸೃಷ್ಟಿಯಿಂದಲೂ ಒಂದಕ್ಕೊಂದು ಸೇರಿ ಐದು ಸಾವಿರದ ಮುನ್ನೂರ ಐವತ್ತೈದು ಧ್ವನಿ ಬಗೆಗಳನ್ನು ವಿಶ್ವನಾಥನು ಮಾಡಿದ್ದಾನೆ. ಆದ್ದರಿಂದಲೇ ಧ್ವನಿಕಾರನಾದ ಆನಂದವರ್ಧನನು ಧ್ವನಿವಿಭಾಗಕ್ಕೆ ಮೂಲವಾದ ತತ್ತ್ವ ನಿಸ್ಸಂದಿಗ್ಧವಾಗಿ ಅರ್ಥವಾಗಲು ಎಷ್ಟು ಪ್ರಕಾರಗಳ ಗಣನೆಯೂ ಉದಾಹರಣೆಯೂ ಅತ್ಯವಶ್ಯವೋ ಅಷ್ಟನ್ನು ಮಾತ್ರ ಅವನು ಹೇಳಿದ್ದಾನೆ. ಧ್ವನಿಯ ಭೇದ-ಪ್ರಭೇದಗಳ ಸಂಖ್ಯೆಯನ್ನು ಬೆಳೆಸಿ ಬೆರಗುಗೊಳಿಸಬೇಕೆಂಬ ಉದ್ದೇಶ ಅವನಿಗಿರಲಿಲ್ಲ ಅಭಿನವಗುಪ್ತ, ಮಮ್ಮಟ, ವಿಶ್ವನಾಥ, ವಿದ್ಯಾನಾಥ ಮೊದಲಾದವರು ಈ ದೃಷ್ಟಿಯಿಂದಲೇ ಹೊರಟು ಐದು ಸಾವಿರದಿಂದ ಹತ್ತು ಸಾವಿರ ಭೇದ ಪ್ರಭೇದಗಳನ್ನು ಲೆಕ್ಕ ಹಾಕಿದ್ದಾರೆ. ವಿಶೇಷ ಪ್ರಕಾರ ಅಥವಾ ಪ್ರಭೇದಗಳು ಅನಂತವೆಂದು ಅನಂದವರ್ಧನನು ಹೇಳಿದುದರಲ್ಲಿ ತೃಪ್ತಿಯಿಲದೆ ಇಂತಿಷ್ಟೇ ಎಂದು ತೀರ್ಮಾನ ಮಾಡುವ ಸಾಹಸ ಮಾಡಿದ್ದಾರೆ.

ವ್ಯಂಗ್ಯ ಪ್ರಭೇದಗಳು ಅನೇಕ ಅದಕ್ಕೆ ಅಂಗವಾಗಿ ಬರುವ ವಾಚ್ಯಲಂಕಾರಾದಿಗಳ ಪ್ರಭೇದಗಳು ಅನೇಕ ಇವುಗಳಿಗೆ ಬೇರೆ ಬೇರೆ ರೀತಿಯಲ್ಲಿ ಪರಸ್ಪರ ಸಂಬಂಧವನ್ನು ಕಲ್ಪಿಸಿ ನೋಡಿದರೆ ಪ್ರಭೇದಗಳ ಸಂಖ್ಯೆ ಅನಂತವಾಗುತ್ತದೆ.

**ತಸ್ಯಾಂಗಾನಾಂ ಪ್ರಭೇದಾ ಯೇ ಪ್ರಭೇದಾಃಸ್ವಗತಾಶ್ಚಯೇ ।**
**ತೇಷಾಮಾನಂತ್ಯಮಾನ್ಯೋನ್ಯಸಂಬಂಧ ಪರಿಕಲ್ಪನೇ**[೩೪] **॥**

ಈ ಎಲ್ಲಾ ಧ್ವನಿ ಪ್ರಭೇದಗಳ ಚರ್ಚೆಯು ನಮಗೆ ಅಪ್ರಸ್ತುತವಾಗಿದ್ದು ಇದಕ್ಕೆ ಪ್ರತ್ಯೇಕವಾದ ಅಧ್ಯಯನವನ್ನೇ ಮಾಡಬೇಕಾಗುತ್ತದೆ. ಆದ್ದರಿಂದ ಪ್ರಸ್ತುತ ವಿಷಯಕ್ಕೆ ಬೇಕಾದ ಧ್ವನಿಯ ಪ್ರಧಾನವಾದ ಹದಿನೆಂಟು ಭೇದಗಳನ್ನು ವಿವರಣೆಗಳೊಂದಿಗೆ ಚರ್ಚಿಸಿ, ಮುಂದಿನ ವಿಷಯವಾದ ಕಾವ್ಯದ ಎರಡನೇ ಭೇದವಾದ ಗುಣಿಭೂತ ವ್ಯಂಗ್ಯವನ್ನು ಚರ್ಚಿಸಲಾಗಿದೆ.

## ೨. ಗುಣೀಭೂತವ್ಯಂಗ್ಯ

ವ್ಯಂಗ್ಯವು ಗೌಣವಾಗಿದ್ದು ವಾಚ್ಯದ ಸೌಂದರ್ಯವೇ ಪ್ರಧಾನವಾಗಿ ಎದ್ದು ಕಾಣುವುದೋ ಅದನ್ನು ಗುಣೀಭೂತವ್ಯಂಗ್ಯ ಎಂದು ಕರೆಯಲಾಗಿದೆ.

**ಪ್ರಕಾರೋ?ನ್ಯೋ ಗುಣೀಭೂತವ್ಯಂಗ್ಯಃ ಕಾವ್ಯಸ್ಯ ದೃಶ್ಯತೇ ।**
**ಯತ್ರ ವ್ಯಂಗ್ಯಾನ್ವಯೇ ವಾಚ್ಯಚಾರುತ್ವಂ ಸ್ಯಾತ್ ಪ್ರಕರ್ಷವತ್**[೩೫] **॥**

"ಕಾವ್ಯದಲ್ಲಿ ಗುಣೀಭೂತ ವ್ಯಂಗ್ಯವೆಂಬ ಇನ್ನೊಂದು ಪ್ರಕಾರವನ್ನು ನೋಡಬಹುದು. ಅದರಲ್ಲಿ ವ್ಯಂಗ್ಯಾವಾದ ಅಂಶವು ಇರುವುದಾದರೂ ವಾಚ್ಯಾಂಶದ ಸೊಗಸೇ ಅಧಿಕವಾಗಿರುತ್ತದೆ". 'ನ ಸರ್ವತ್ರ ಧ್ವನಿರಾಗಿಣಾ ಭವಿತವ್ಯಂ'[೩೬] ಎಲ್ಲೆಲ್ಲೂ ಧ್ವನಿಯನ್ನು ಹುಡುಕುತ್ತಾ ಹೋಗಬಾರದೆಂಬ ಈತನ ಅಭಿಪ್ರಾಯಕ್ಕೆ ಅನುಗುಣವಾಗಿ ಈ 'ಗುಣೀಭೂತವ್ಯಂಗ್ಯ'ದ ದೃಷ್ಟಿ ಮೂಡಿ ಬಂದಿದೆ. ಧ್ವನಿಪೂರ್ಣವಾದ ಕಾವ್ಯ ಶ್ರೇಷ್ಠವೆಂದು ಒಪ್ಪಿಕೊಂಡರೂ ಕೆಲವು ವೇಳೆ ಧ್ವನಿ ಪ್ರಧಾನವಾಗಿಲ್ಲದ ವಾಚ್ಯದ ಚಮತ್ಕಾರದಿಂದಲೇ ಕಾವ್ಯದ ರಮಣೀಯತೆಯ ಅನುಭಾವವಾಗುತ್ತದೆ. ಅಂತಹ ಕಡೆಗಳಲ್ಲಿ ಧ್ವನಿ ಗುಣೀಭೂತವಾಗಿದ್ದು ವಾಚ್ಯದ ಸೌಂದರ್ಯವನ್ನೇ ಮುಂದೆ ಬಿಡುತ್ತದೆ. ಅಂದರೆ ಧ್ವನಿಯೇ ಇಲ್ಲವೆಂದಲ್ಲ ವಾಚ್ಯಕ್ಕೆ ಹಿನ್ನೆಲೆಯಲ್ಲಿದ್ದು ವ್ಯಾಚ್ಯವನ್ನೇ ಮುಂದೆ ಬಿಡುತ್ತದೆ. ಇಲ್ಲಿ ಧ್ವನಿ ಮತ್ತು ರಸದ ಅಪ್ರಧಾನತೆಯನ್ನು ಒಂದು ಸಾದೃಶ್ಯದಿಂದ ಆನಂದವರ್ಧನನು ಸೂಚಿಸಿದ್ದಾನೆ. "ಮದುವಣಿಗನಾದ ಸೇವಕನ ಜೊತೆಯಲ್ಲಿ ಬರುತ್ತಿರುವ ರಾಜನ ಅಪ್ರಾಧಾನತೆಗೆ ಹೋಲಿಸಬಹುದು[೩೭]" ವಿವಾಹ ಸಂದರ್ಭದಲ್ಲಿ ಮದುವಣಿಗನೇ ಪ್ರಮುಖ. ಆತ ಸೇವಕನಾಗಿದ್ದು ಆತನ ಮದುವೆಗೆ ರಾಜನೇ ಬಂದಿದ್ದರೂ ಮೆರವಣಿಗೆ ಆಗಬೇಕಾದುದು ಮದುವಣಿಗನಿಗೆ, ಹಾಗೆ

ಇಲ್ಲಿ ವ್ಯಂಗ್ಯ ಮತ್ತು ವಾಚ್ಯಗಳ ಸಂಬಂಧ. ಇಲ್ಲಿ ರಾಜನೇ ವ್ಯಂಗ್ಯ ಆದರೂ ಇಲ್ಲಿ ಪ್ರಾಧಾನ್ಯವಿರುವುದು ವಾಚ್ಯಕ್ಕೆ ಅಂದರೆ ಮದುವಣಿಗನಿಗೆ. ಆನಂದವರ್ಧನನು ಈ ಸುಂದರವಾದ ಸಾದೃಶ್ಯದಿಂದ ಗುಣೀಭೂತವ್ಯಂಗ್ಯದ ಸ್ವರೂಪವನ್ನು ಅರ್ಥೈಸಿದ್ದಾನೆ. ಗುಣೀಭೂತವ್ಯಂಗದ ಪ್ರಕಾರಗಳನ್ನೆಲ್ಲಾ ವಿಶ್ವನಾಥನು ಈ ರೀತಿ ಸಂಗ್ರಹಿಸಿದ್ದಾನೆ.

**ಸ್ಯಾದಿತರಾಂಗಂ ಕಾಕ್ವಾಕ್ಷಿಪ್ತಂ ಚ ವಾಚ್ಯಸಿದ್ದ್ಯಂಗಮ್ ।**
**ಸಂಧಿಗ್ಧ ಪ್ರಾಧಾನ್ಯಂ ತುಲ್ಯಪ್ರಾಧಾನ್ಯಮಸ್ಪುಟಮಗೊಢಮ್ ॥**
**ವ್ಯಂಗ್ಯಮಸುಂದರಮೇವ ಭೇದಾಸ್ತಸ್ಯೋದಿತಾ ಹ್ಯಷ್ಟೌ** [೩೮] **।**

ಹೀಗೆ ಗುಣೀಭೂತವ್ಯಂಗ್ಯದಲ್ಲಿ ಇತರಾಂಗ, ಕಾಕ್ವಾಕ್ಷಿಪ್ತ, ವಾಚ್ಯಸಿದ್ದ್ಯಂಗ, ಸಂದಿಗ್ಧ ಪ್ರಾಧಾನ್ಯ, ತುಲ್ಯಪ್ರಾಧಾನ್ಯ, ಅಸ್ಫುಟ, ಅಗೂಢ, ಅಸುಂದರ ಎಂದು ಎಂಟು ಬಗೆಯ ಗುಣೀಭೂತ ವ್ಯಂಗ್ಯವನ್ನು ಉದಾಹರಣೆಯೊಂದಿಗೆ ಪರಾಮರ್ಶಿಸಲಾಗಿದೆ.

## ಇತರಾಂಗ

ಇತರಾಂಗ ರಸಕ್ಕೆ ಪೋಷಕವಾಗಿರುತ್ತದೆ ಅಂದರೆ ಒಂದು ರಸ ಇನ್ನೊಂದು ರಸಕ್ಕೆ ಅಂಗವಾಗಿ ಪರಿಣಮಿಸಿದರೆ ಅದನ್ನು ಗುಣಿಭೂತವ್ಯಂಗ್ಯವೆಂದು ಗುರುತಿಸಲಾಗಿದೆ. ಉದಾಹರಣೆಗೆ

**ಮದನನ ಕೈದುವೆಲ್ಲಿದನನಂಗನ ಕೈಪೊಡೆಯೆಲ್ಲಿದಂ ವಿಳಾ ।**
**ಸದ ಕಣಿಯೆಲ್ಲಿದಂ ಚದುರಪುಟ್ಟಿದನೆಲ್ಲಿದಂ! ವಿನೋ ॥**
**ದದಮೊದಲೆಲ್ಲಿದಂ? ಸೂಬಗಿನಾಗರಮೆಲ್ಲಿದ ನಿಚ್ಚೆಯಾಣ್ಮನೆ ।**
**ಲ್ಲಿದನೆರ್ದೆಣಾರ್ಮನೆನ್ನ ರಸನೆಲ್ಲಿದನೋ ಲಲಿತಾಂಗವಲ್ಲಭಂ**[೩೯] **॥**

ಈ ಪದ್ಯದಲ್ಲಿ ಸ್ವಯಂಪ್ರಭೆ, ಲಲಿತಾಂಗನ ಅಗಲುವಿಕೆಯಿಂದ ಗೋಳಾಡುತ್ತಿರುವ ಸನ್ನಿವೇಶ. ಇಲ್ಲಿ ಬರುವ ಮಾತುಗಳೆಲ್ಲಾ ಶೃಂಗಾರಸ ಪರವಾಗಿದೆ. ಆದರೆ ಇವೆಲ್ಲಾ ಇಲ್ಲಿ ಕರುಣರಸಕ್ಕೆ ಕಾರಣವಾಗುತ್ತದೆ. ಇಲ್ಲಿ ಶೃಂಗಾರ, ಕರುಣರಸದ ಅಂಗವಾಗಿ ಬಂದಿದೆ. ಇತರಾಂಗಕ್ಕೆ ಇನ್ನೊಂದು ಉದಾಹರಣೆ.

**ಕಳಹಂಸಾಲಸಯಾನೆಯಾಂ ಮೃಗಮದಾಮೊದಾನ್ಯನಿಶ್ವಾಸೆಯಂ**
**ತಳಿರೇ ತಾವರೆಯೇ ಮದಾಳಿಕುಳಮೇ ಕನ್ನೈದಿಲೇ ಮಕ್ತಕೋ ।**
**ಕಿಳಮೇ ಕಂಡಿರೆ ಪಲ್ಲವಾದರೆ ಯನಂ ಭೋಜಾಸ್ಯೆಯಂ ಭೃಂಗ ಕುಂ**
**ತಳೆಯಂ ಕೈರವನೇತ್ರೆಯಂ ಪಿಕ್‌ನಿನಾದಖ್ಯಾತಿಯಂ ಸೀತೆಯಂ**[೪೦] **॥**

ಇಲ್ಲಿ ಸೀತೆಯ ಅಗಲುವಿಕೆಯಿಂದ ರಾಮ ಗೋಳಾಡುತ್ತಿರುವ ಸನ್ನಿವೇಶ. ಹಿಂದಿನ ಪದ್ಯದಂತೆಯೇ ಇಲ್ಲಿರುವ ಶೃಂಗಾರರಸ ಕರುಣರಸದಲ್ಲಿ ಪರ್ಯಾವಸಾನಗೊಂಡು

ಅದರ ಒಂದು ಅಂಗವಾಗಿ ಪರಿಣಮಿಸುತ್ತದೆ.

**೨. ಕಾಕ್ವಾಕ್ಷಿಪ್ತ**

ಸ್ವರವಿಕಾರದಿಂದಲೂ ವ್ಯಂಗ್ಯವು ವಾಚ್ಯವಾದೊಡನೆ ತೋರುತ್ತದೆ. ಕಾಕು[೪೧] ಉದ್ಗಾರಗಳು ಧ್ವನಿಸುವ ವ್ಯಂಗ್ಯಾಂಶವೇ ವಾಚ್ಯಕ್ಕಿಂತ ಪ್ರಧಾನವಾದಾಗ ಅವು ಧ್ವನಿಯೂ ಆಗಬಹುದು. ಆದರೆ ವಾಚ್ಯ ಪ್ರಧಾನವಾದರೆ ಅವು ಗುಣಿಭೂತವ್ಯಂಗ್ಯವೂ ಆಗಬಹುದು. ಉದಾಹರಣೆಗಾಗಿ

**ಎಲೆ ಮರುಳೆ ಭೂಪಾಲ ಕೌರವ**
**ಕುಲ ಪಿತಾಮಹನಹನು ಧರ್ಮಂ**
**ಗಳಲಿ ಪರಿಣತನಹನು ಕಾಳೆಗವೆತ್ತಲಿವರೆತ್ತ**
**ಗಳಿದ ಗರಳಿನ ದೊರೆಯೆ ಭಟಮಂ**
**ಡಳಿಯೊಳಗೆ ಮನ್ನಣೆಯ ಹೇಳ್ವೆ**
**ಕಳೆದ ಹರೆಯಂಗೆಂದು ಗಹಗಹಿಸಿದನು ಕಲಿಕರ್ಣ**[೪೨]

ಈ ಪದ್ಯದಲ್ಲಿ ಭೀಷ್ಮನಿಗೆ ಸೇನಾಧಿಪತಿಯ ಪಟ್ಟವನ್ನು ಕಟ್ಟಬೇಕೆಂದು ಕೌರವ ನಿರ್ಧರಿಸಿದಾಗ ಕರ್ಣ ಹೇಳುವ ಈ ಮಾತಿನಲ್ಲಿ ವ್ಯಂಗ್ಯವಾದ 'ಕಾಕು' ಇದೆ. 'ಎಲೆ ಮರುಳೆ' ಎಂದು ಕೌರವನನ್ನು ಆತ ಕರೆಯುವಲ್ಲಿರುವ ಮತ್ತು ಹರೆಯ ಕಳೆದ ಈತನಿಗೆ 'ಭಟಮಂಡಲಿಯೊಳಗೆ ಮನ್ನಣೆಯ ಹೇಳ್ವೆ' ಎಂದು ಕೇಳುವಲ್ಲಿರುವ 'ಕಾಕು' ಕರ್ಣನ ಅಭಿಪ್ರಾಯವನ್ನು ಧ್ವನಿಸುತ್ತದೆ. ಆದರೆ ಆ ಧ್ವನಿಗಿಂತ ವಾಚ್ಯದ ರೀತಿಯ ಚಮತ್ಕಾರವೇ ಎದ್ದು ತೋರುತ್ತದೆ.

**೩. ವಾಚ್ಯ ಸಿಧ್ಯಂಗಕ್ಕೆ ಉದಾಹರಣೆ**

"ಎಲ್ಲೈ ಮಹಾರಾಜನೇ ಶತ್ರುವೆಂಬ ಬಿದುರಿನಲ್ಲಿರುವ ಕಾಡುಗಿಚ್ಚೆನಿಸಿದ ಈ ನನ್ನ ಪ್ರತಾಪವು ಸ್ವರ್ಗಮರ್ತ್ಯಗಳೆರಡರ ಮದ್ಯಪ್ರದೇಶವನ್ನು ಪ್ರಕಾಶಿಸುತ್ತಾ ಎಲ್ಲೆಡೆಯಲ್ಲೂ ಶೋಭಿಸುತ್ತಲಿದೆ". ಶತ್ರುವಂಶದಲ್ಲಿ ಬಿದಿರುಮೆಳೆಯ ಅಭೇದವನ್ನು ಆರೋಪಿಸುವುದೇ ವ್ಯಂಗ್ಯಾರ್ಥ ಆದರೆ ಇಲ್ಲಿ ರಾಜನ ಪ್ರತಾಪವೇ ಕಾಡುಗಿಚ್ಚೆಂಬ ಆರೋಪವು ವಾಚ್ಯಾರ್ಥವಾಗಿದೆ. ಪ್ರತಾಪವನ್ನು ಬೆಂಕಿ ಎಂದು ಹೇಳಬೇಕಾದರೆ ಶತ್ರುವಂಶವೆಂಬ ಬಿದುರಿಗೆ ಕಾಡುಗಿಚ್ಚೆನಿಸಿದ್ದು ಪೋಷಕವಾಗಿದೆ.

**೪. ಸಂದಿಗ್ಧಪ್ರಾಧಾನ್ಯ:**

ಎಲ್ಲಿ ಪ್ರಧಾನವಾದದ್ದು ವಾಚ್ಯವೋ ವ್ಯಂಗ್ಯಾವೋ ಎಂಬ ಸಂಶಯವಿದೆಯೋ ಅದು ಸಂದಿಗ್ಧ ಪ್ರಾಧಾನ್ಯ ಗುಣೀಭೂತವ್ಯಂಗ್ಯ, ಉದಾಹರಣೆಗಾಗಿ "ಹರಸ್ತು ಕಿಂ–

ಚಿತ್ತರಿವೃತ್ತ ಧೈರ್ಯಂ” ಎಂಬ ಪದ್ಯದಲ್ಲಿ ಶಿವನು ಪಾರ್ವತಿಯ ಮುಖದಲ್ಲಿ ದೃಷ್ಟಿಯನ್ನಿಟ್ಟನು ಎಂಬುದು ವಾಚ್ಯಾರ್ಥ ಮುಖವಷ್ಟರಲ್ಲಿಯೇ ದೃಷ್ಟಿಯನ್ನಿಟ್ಟಿದ್ದರಿಂದ ಅವನಿಗೆ ಅದನ್ನು ಚುಂಬಿಸುವ ಅಭಿಲಾಷೆಯಿತ್ತೆಂಬುದು ವ್ಯಂಗ್ಯಾರ್ಥ ಇಲ್ಲಿ ಉಮೆಯ ಮುಖದಲ್ಲಿ ಶಿವನು ದೃಷ್ಟಿಯನ್ನಿಟ್ಟಿದ್ದು ಶೃಂಗಾರವನ್ನು ಪ್ರಕಾಶಪಡಿಸುವುದರಿಂದ ಹೀಗೆ ದೃಷ್ಟಿಯನ್ನಿಟ್ಟಿದ್ದು ಪ್ರಧಾನವೇ ಅಥವಾ ಇಲ್ಲಿ ಚುಂಬನವು ವ್ಯಂಗ್ಯವೆನಿಸಿ ಆಸ್ವಾದ್ಯವಾದ್ದರಿಂದ ಅದರ ಬಗ್ಗೆ ಶಿವನಿಗೆ ಇದ್ದ ಅಭಿಲಾಷವು ಪ್ರಧಾನವೋ ಎಂಬ ಬಗ್ಗೆ ಇಲ್ಲಿ ಸಂದೇಹವಿದೆ. ಈ ಬಗೆಯ ಸಂದೇಹವಿರುವ ಪ್ರಯುಕ್ತ ಇಲ್ಲಿ ವ್ಯಂಗ್ಯಾರ್ಥವು ಚಮತ್ಕಾರಿಯಲ್ಲದ್ದರಿಂದ ಇದು ಗುಣೀಭೂತವ್ಯಂಗ್ಯವಾಗಿದೆ.

**೫. ತುಲ್ಯಪ್ರಾಧಾನ್ಯ**

ಇಲ್ಲಿ ವ್ಯಂಗ್ಯಾರ್ಥಕ್ಕೆ ವಾಚ್ಯಾರ್ಥದೊಡನೆ ಪ್ರಾಧಾನ್ಯವು ಸಮವಾಗಿರುವುದು. ಉದಾಹರಣೆಗಾಗಿ ರಾವಣನಿಗೆ ಪತ್ರದ ಮೂಲಕ ಪರಶುರಾಮನು ಹೇಳಿ ಕಳುಹಿಸುವ ಮಾತಿದು.

**ಬ್ರಾಹ್ಮಣಾತಿಕ್ರಮತ್ಯಾಗೋ ಭವತಾಮೇವ ಭೂತಂಯೇ ।**
**ಜಾಮದಗ್ನ್ಯಾಯ ವೋ ಮಿತ್ರ ಮನ್ಯಥಾ ದುರ್ಮನಾಯತೆ** [೪೩]॥

‘ಬ್ರಾಹ್ಮಣರಿಗೆ ತೊಂದರೆಯನ್ನು ಕೊಡದಿರುವುದು ನಿಮ್ಮಂತಹ ರಾಕ್ಷಸರಿಗೆ ಮಾತ್ರವೇ ಮಂಗಳವನ್ನುಂಟು ಮಾಡುವುದು. ಹಾಗೇ ಬ್ರಾಹ್ಮಣರಿಗೆ ತೊಂದರೆಯನ್ನು ಕೊಟ್ಟರೆ ನಿಮ್ಮ ಹಾಗೆಯೇ ಶಿವನನ್ನು ಉಪಾಸನ ಮಾಡಿದ್ದರಿಂದ ನಿಮ್ಮ ಸ್ನೇಹಿತನಾದ ಪರಶುರಾಮನು ಅಸಂತುಷ್ಟನಾಗುವನು” ಇಲ್ಲಿ ‘ದುರ್ಮನಾಯತೆ’ ಎಂಬ ಪದದಿಂದ ತೋರುವ ವ್ಯಂಗ್ಯಾರ್ಥವೂ ಮಿತ್ರ ಎಂಬ ಪದದಿಂದ ತಿಳಿದುಬರುವ ಹಿತಕಾರಿತ್ವ ಎಂಬ ವಾಚ್ಯಾರ್ಥವೂ ಸಮಾನವಾಗಿ ಚಮತ್ಕಾರವನ್ನು ಹುಟ್ಟಿಸುತ್ತಿರುವುದರಿಂದ ಪ್ರಧಾನವೆನಿಸಿವೆ. ಇಲ್ಲಿ ವಾಚ್ಯಾರ್ಥಕ್ಕಿಂತಲೂ ವ್ಯಂಗ್ಯಾರ್ಥವು ಉತ್ತಮವಲ್ಲದ ಕಾರಣ ಇದು ಗುಣೀಭೂತವೆನಿಸಿದೆ.

**೬. ಅಸ್ಫುಟ**

ವ್ಯಂಗ್ಯಾರ್ಥವು ಹೆಚ್ಚು ಬುಧ್ಧಿಶಾಲಿಗಳಿಗೂ ಸಹ ಬಹಳ ಕ್ಷೇಶದಿಂದ ತಿಳಿದು ಬರುವುದೇ ಅಸ್ಫೂಟವಾಗಿದೆ. ಉದಾಹರಣೆಗಾಗಿ

**ಸಂಧೌ ಸರ್ವಸ್ವಹರಣಂ ವಿಗ್ರಹೇ ಪ್ರಾಣನಿಗ್ರಹಃ ।**
**ಅಲ್ಲಾವುದ್ದೀನ ನೃಪತೌ ನ ಸಂಧಿರ್ನ ಚ ವಿಗ್ರಹ** [೪೪]॥

ಅಲ್ಲಾವುದ್ದೀನ ಚಕ್ರವರ್ತಿಯೊಡನೆ ತನಗೆ ವಿರೋಧವನ್ನು ಭಾವಿಸಿ ಒಬ್ಬ ದುರ್ಬಲರಾಜನು ಹೇಳುವ ಮಾತಿದು. “ಅಲ್ಲಾವುದ್ದೀನನೊಡನೆ ಸಂಧಿಯನ್ನು

ಮಾಡಿಕೊಂಡರೆ ಅವನು ಶತ್ರುವಿನ ಐಶ್ವರ್ಯವೆಲ್ಲವನ್ನು ತೆಗೆದುಕೊಳ್ಳುವನು. ಯುದ್ಧವನ್ನು ಮಾಡುವುದಾದರೆ ಶತ್ರುವಿನ ಪ್ರಾಣವೇ ನಾಶವಾಗುತ್ತದೆ. ಆದ್ದ-ರಿಂದ ಅವನೊಡನೆ ಸಂಧಿವಿಗ್ರಹಗಳೆರಡೂ ಯುಕ್ತವಲ್ಲ". ಇಲ್ಲಿ ಅಲ್ಲಾವುದ್ದೀನನ ರಾಜನೊಡನೆ ದಾನಸಾಮ ಎಂಬ ಉಪಾಯಗಳನ್ನು ಬಿಟ್ಟರೆ ಬೇರೆ ಯಾವ ಶಾಂತಿ ಮಾರ್ಗವೂ ಹೊಂದುವುದಿಲ್ಲ ಎಂಬ ವ್ಯಂಗ್ಯಾರ್ಥವು ವ್ಯುತ್ಪನ್ನರಾದವರಿಗೂ ಸಹ ಬೇಗನೆ ತೋರುವುದಿಲ್ಲವಾದ್ದರಿಂದ ಅಸ್ಫುಟವ್ಯಂಗ್ಯವೆನಿಸಿದೆ. ಆದ್ದರಿಂದಲೇ ಇಲ್ಲಿ ವ್ಯಂಗ್ಯಾರ್ಥವು ವ್ಯಾಚ್ಯಾರ್ಥಕ್ಕಿಂತಲೂ ಉತ್ಕೃಷ್ಟವೆನಿಸಿಲ್ಲದರಿಂದ ಇದು ಗುಣೀಭೂತ ವ್ಯಂಗ್ಯದ ಒಂದು ಬಗೆಯಾಗಿದೆ.

### ೭. ಅಸುಂದರ

> **ವಾಣೀರಕುಂಜೋಡ್ಡೀನಶಕುನಿಕೂಲಾಹಲಂಶೃಣ್ವತ್ಯಾಃ ।**
> **ಗೃಹಕರ್ಮವ್ಯಾಪೃತಾಯಾಃ ವಧ್ವಾಃ ಸೀದಂತ್ಯಗಾನಿ**[೪೫] **॥**

ವ್ಯಂಗ್ಯಾರ್ಥವು ಚಮತ್ಕಾರಿ ಎನಿಸಿದೆ ಇರುವುದೇ ಅಸುಂದರ ಉಪನಾಯಕಿಗೆ ಸಂಕೇತವನ್ನು ಏರ್ಪಡಿಸಿದ ಅತಿಗೆಗೆ ನಾದಿನಿಯು ಹಾಸ್ಯ ಮಾಡುವ ಮಾತಿನಲ್ಲಿ ಇದು ಕಂಡು ಬರುತ್ತದೆ. "ಉಪನಾಯಕನ ಸಂಪರ್ಕದಿಂದ ವೇತಸಲತಾಗೃಹದಿಂದ ಹಠತ್ತಾಗಿ ಮೇಲಕ್ಕೆ ಹಾರಿದ ಪಕ್ಷಿಗಳ ಕೋಲಾಹಲವನ್ನು ಕೇಳುತ್ತಾ ಮನೆಯ ಕೆಲಸಗಳಲ್ಲಿ ತೊಡಗಿರುವ ಅತ್ತಿಗೆಯ ಅವಯವಗಳು ಆಯಾಯ ಕೆಲಸಗಳನ್ನು ಆನಂದದಿಂದ ನಡೆಸಲು ಸಮರ್ಥವೆನಿಸುತ್ತವೆ." ಇಲ್ಲಿ "ಹಿಂದೆ ಮಾಡಿದ್ದ ಸಂಕೇತದಂತೆ ಒಬ್ಬನು ಲತಾಗೃಹಕ್ಕೆ ಪ್ರವೇಶಿಸಿದನು" ಎಂಬುದೇ ವ್ಯಂಗವಾಗಿ ತೋರುವ ಅರ್ಥ. ಇದರಿಂದ 'ಸೀದಂತ್ಸಂಗಾನಿ' ಎಂಬಲ್ಲಿ ಹೇಳಿರುವ ವಾಚ್ಯರ್ಥಕ್ಕೆ ಚಮತ್ಕಾರವುಂಟಾಗುವುದೆಂದು ಸ್ಪಷ್ಟವಾಗಿ ತಿಳಿಯುತ್ತದೆ.

### ೮. ಅಗೂಢ

ಇಲ್ಲಿ ವ್ಯಂಗ್ಯಾರ್ಥವು ವಾಚ್ಯಾರ್ಥಕ್ಕೆ ಸಮವೆನಿಸುವುದರಿಂದ ಮಂದಮತಿಗಳಿಗೂ ಸಹ ಬೇಗನೆ ತಿಳಿಯುವಷ್ಟು ಗುಣೀಭೂತವ್ಯಂಗ್ಯವು ಸ್ಪಷ್ಟವಾಗಿರುತ್ತದೆ. ಉದಾಹರಣೆಗಾಗಿ,

> **ಅನೇನ ಲೋಕಗುರುಣಾ ಸತಾಂ ಧರ್ಮೋಪದೇಶಿನಾ ।**
> **ಅಹಂ ವೃತವತೀ ಸ್ವೈರಮುಕ್ತೇನ ಕಿಮತಃ ಪರಮ್**[೪೬] **॥**

ಬುದ್ಧನು ನೀಚಜಾತಿಯ ಹೆಂಗಸಿನೊಡನೆ ಬಲತ್ಕಾರದಿಂದ ಭೋಗಿಸಿದ್ದನ್ನು ಸಹಿಸಲಿಕ್ಕಾಗದೆ ಅವನ ಹೆಂಡತಿಯು ಆ ಸಮಾಚಾರವನ್ನು ತಿಳಿಯಲಿಚ್ಛಿಸಿದ ಸಖಿಗೆ ಹೇಳುವ ಮಾತಿದು. 'ಸತ್ಪುರುಷರಿಗೆ ಧರ್ಮವನ್ನು ಉಪದೇಶಿಸುತ್ತಲೂ ಲೋಕಕ್ಕೆ

ಗುರುವೆನಿಸಿಯೂ ಇರುವ ಪತಿಯೊಡನೆ ನಾನು ಪತಿವ್ರತೆಯ ನಿಯಮನ್ನಾಚ–ರಿಸುತ್ತಿರುವೆನು. ಇದರ ಮೇಲೆ ಪತಿಯ ದೋಷವನ್ನು ಹೇಳಬಾರದ್ದರಿಂದ ಇದರ ಮೇಲೆ ಬೇರೆ ಏನೊ ಹೇಳಬೇಕಾಗಿಲ್ಲ'. ಇಲ್ಲಿ ಶಾಕ್ಯಮುನಿಯು ತಿರ್ಯಗ್ಜಾತಿಯ ಸ್ತ್ರೀಯಲ್ಲಿ ಬಲತ್ಕಾರದಿಂದ ಭೋಗಿಸಿದನೆಂಬುದೇ ವ್ಯಂಗ್ಯವಾಗಿ ತೋರುವ ಅರ್ಥ. ಇದು ಇಲ್ಲಿ ವಾಚ್ಯದಂತೆ ಶೀಘ್ರವಾಗಿ ತಿಳಿದು ಬರುತ್ತದೆ. ಈ ಗುಣೀಭೂತವ್ಯಂಗ್ಯವನ್ನು ಮಮ್ಮಟ ವಿಶ್ವನಾಥರಿಬ್ಬರೂ ಧೀರ್ಘವಾಗಿ ವಿವೇಚಿಸಿ ಅದರಲ್ಲಿ ಎಂಟು ಪ್ರಕಾರದ ಗುಣೀಭೂತವ್ಯಂಗ್ಯವನ್ನ ಗುರುತಿಸಿ ಉದಾಹರಿಸಿದ್ದಾರೆ. ಆನಂದವರ್ಧನನು ವಿವೇಚಿಸಿರುವ ಗುಣೀಭೂತವ್ಯಂಗದ ಜೊತೆಗೆ ಇನ್ನು ಕೆಲವು ಪ್ರಕಾರಗಳನ್ನು ಸೇರಿಸಿ ವಿಶ್ವನಾಥನು ವಿಮರ್ಶಿಸಿದ್ದಾನೆ. ಒಟ್ಟಿನಲ್ಲಿ ಇದರ ಮೂಲ ಲಕ್ಷಣ ಸ್ಪಷ್ಟವಾಗಿದೆ. ಇಲ್ಲಿ ಧ್ವನಿ ಇರುತ್ತದೆ. ಆದರೆ ಅದಕ್ಕಿಂತ ವಾಚ್ಯಾದ ವಿವಿಧ ವಿನ್ಯಾಸಗಳೆ ಪ್ರಧಾನವಾಗಿದ್ದು ಧ್ವನಿಯಪ್ರಭಾವ ಸ್ವಲ್ಪ ಹಿಂದಕ್ಕೆ ಸರಿಯುತ್ತದೆ. ಇದರಿಂದ ಕಾವ್ಯದ ಮನೋಹರತೆಗೆ ಕುಂದಿಲ್ಲ. ಇದು ರಸಾದಿಗಳಲ್ಲೇ ತಾತ್ಪರ್ಯವಾಗುವುದರಿಂದ ಇದು ಧ್ವನಿಯೇ ಆಗುತ್ತದೆ. ಅನೇಕ ವೇಳೆ ಅಲಂಕಾರಗಳು ವಾಚ್ಯಾರ್ಥದಲ್ಲಿಯೇ ಚಮತ್ಕಾರತೆಯನ್ನು ಒಳಗೊಂಡು ಧ್ವನಿ ಎದು ಕಾಣುವಂತಿರುವುದಿಲ್ಲ ಅಥವಾ ಕವಿಯು ಒಮ್ಮೊಮ್ಮೆ ಧ್ವನಿತವಾಗಬಹುದಾದ್ದನ್ನು ಮತ್ತೆ ವಾಚ್ಯವಾಗಿ ಹೇಳಿಬಿಟ್ಟುರುತ್ತಾನೆ. ಇದರಿಂದ ಕಾವ್ಯತ್ವದ ಉತ್ತಮಿಕೆಯನ್ನು ನಿರಾಕರಿಸುವುದಕ್ಕಾಗುವುದಿಲ್ಲ. ಧ್ವನಿಯು ಅಲ್ಲಿ ಗೌಣವಾಗಿದ್ದರೂ ಸಾಕು, ಅದನ್ನು ನಾವು ಉತ್ತಮ ಕಾವ್ಯವೆಂದೇ ಪರಿಗಣಿಸಬೇಕಾಗುತ್ತದೆ. ಅಂತಹ ಸಂದರ್ಭಗಳನ್ನು ಗುಣೀಭೂತವ್ಯಂಗ್ಯವೆಂದು ಕರೆದು ಧ್ವನಿಯಂತೆಯೇ ಅದನ್ನು ಮಾನ್ಯ ಮಾಡಬೇಕೆಂಬುದು ಆನಂದವರ್ಧನ ಆಶಯವಾಗಿದೆ ಇದರಿಂದ ಧ್ವನಿಯ ವ್ಯಾಪಕತೆ ಇನ್ನೂ ವಿಸ್ತಾರವಾಗುತ್ತದೆ.

**ಧ್ವನೇರಿತ್ಥಂ ಗುಣೀಭೂತವ್ಯಂಗ್ಯಸ್ಯ ಚ ಸಮಾಶ್ರಯಾತ್ ।**
**ನಕಾವ್ಯಾರ್ಥ ವಿರಾಮೋಽಸ್ತಿ ಯದಿಸ್ಯಾತ್ ಪ್ರತಿಭಾಗುಣಃ**[೪೭] ॥

ಹೀಗೆ ಪ್ರತಿಭಾಗುಣವಿದ್ದುದೇ ಆದರೆ 'ಧ್ವನಿ' ಮತ್ತು ಗುಣೀಭೂತವ್ಯಂಗ್ಯಗಳನ್ನು ಆಶ್ರಯಿಸುವುದರಿದ ಕಾವ್ಯರ್ಥಕ್ಕೆ ಕೊರತೆಯೇ ಇರುವುದಿಲ್ಲ ಎಂದು ಕೊನೆಯಲ್ಲಿ ಆತ ಹೇಳುವ ಮಾತು 'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ'ಗಳೆರಡರ ಮಹತ್ವವನ್ನು ಸೂಚಿಸುತ್ತದೆ. ಅವೆರಡೂ ಕವಿಪ್ರತಿಭೆಯಿಂದ ಮಾತ್ರ ಸಾಧ್ಯವಾಗುತೆಂಬುದನ್ನು ಹೇಳುತ್ತಾನೆ.

### ಚಿತ್ರಕಾವ್ಯ

ಬುದ್ಧಿ ಪ್ರಧಾನವಾಗಿ 'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ'ಗಳೆರಡೂ ಇಲ್ಲದ ಕಾವ್ಯ ಕೇವಲ ಚಮತ್ಕಾರದಿಂದ ಕೊಡಿರುವುದೇ ಚಿತ್ರಕಾವ್ಯವೆನಿಸಿದೆ. ರಸಭಾವಾದಿಗಳನ್ನು

ನಿರೂಪಿಸುವ ಉದ್ದೇಶವಿಲ್ಲದೇ ಮೂಡಿಬಂದ ಪ್ರಾಸ ಅನುಪ್ರಾಸಾದಿ ಶಬ್ದಾಲಂಕಾರಗಳು ಕೇವಲ ಪಾಂಡಿತ್ಯಪೂರ್ಣವಾದ ಅನುಭವರಹಿತವಾದ ಅಲಂಕಾರಗಳು ವಿಶಿಷ್ಟ ಪದರಚನೆಗಳು ನಿಜವಾದ ಕಾವ್ಯವೇ ಅಲ್ಲ. ಇದರಲ್ಲಿ ಅಲ್ಲಿ ಇಲ್ಲಿ ರಸ ಪ್ರತೀತಿ ಇದ್ದರೂ ಗಮನಾರ್ಹವಾಗದೆ ಪಾಂಡಿತ್ಯವೇ ವಿಜೃಂಭಿಸುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಇದನ್ನೊಂದು ಕಾವ್ಯಪ್ರಕಾರವನ್ನಾಗಿ ವಿವೇಚಿಸುವ ಅಗತ್ಯವೇ ಇಲ್ಲವೆಂದು, ವಿಶ್ವನಾಥನು ಹೇಳಿದ್ದಾನೆ. ಆದ್ದರಿಂದ ಈ ವಿಷವಾಗಿ ಹೆಚ್ಚೇನು ಚರ್ಚಿಸದೆ ವ್ಯಂಗ್ಯವು ಪ್ರಧಾನವೆನಿಸಿರುವ ಕಾವ್ಯವನ್ನು ಧ್ವನಿ ಎಂದು ಅಪ್ರಧಾನವೆನಿಸಿರುವ ಕಾವ್ಯವನ್ನು ಗುಣೀಭೂತವ್ಯಂಗ್ಯವೆಂದೂ, ಇವೆರಡಕ್ಕಿಂತ ಬೇರೆಯಾಗಿರುವುದನ್ನು ಚಿತ್ರಕಾವ್ಯವೆಂದು[೪೮] ಕರೆಯಬಹುದೇ ಹೊರತು ಮಹಾಕಾವ್ಯವೆಂದು ಕರೆಯುವುದು ಯುಕ್ತವಲ್ಲ ಎಂದಿದ್ದಾನೆ. ಆನಂದವರ್ಧನನು ಸಹ ಈ ವಿಷಯವಾಗಿ ವಿಸ್ತಾರವಾಗಿ ಏನನ್ನೂ ಚರ್ಚಿಸಿಲ್ಲ ರಸಾಭಿನಿವೇಶವಿಲ್ಲದೇ ಕವಿ ಕಾವ್ಯರಚನೆ ಮಾಡಲೇಬಾರದೆಂದು ಆನಂದವರ್ಧನನ ಅಭಿಪ್ರಾಯವಾಗಿದೆ. ಇದುವರೆಗೂ ಕಾವ್ಯಭೇದಗಳಿಗೆ ಸಂಬಂಧಿಸಿದಂತೆ ಧ್ವನಿ ಮತ್ತು ಗುಣೀಭೂತವ್ಯಂಗ್ಯದ ವಿಚಾರವನ್ನು ವಿಶ್ವನಾಥನು ವಿವೇಚಿಸಿರುವುದರ ಜೊತೆಗೆ ಲಾಕ್ಷಣಿಕರ ಅಭಿಪ್ರಾಯದೊಂದಿಗೆ ಚರ್ಚಿಸಿ. ಮುಂದಿನ ವಿಷಯವಾದ ವಿಶ್ವನಾಥನು ಮಾಡಿರುವ ವ್ಯಂಜನಾ ವಿಚಾರವೇನೆಂಬುದನ್ನು ವಿವೇಚಿಸಲಾಗಿದೆ. ವ್ಯಂಜನಾ ವೃತ್ತಿ

**ವೃತ್ತಿನಾಂ ವಿಶ್ರಾಂತೇರಭಿಧಾತಾತ್ಪರ್ಯಲಕ್ಷಣಾಖ್ಯಾನಾಮ್ ।**
**ಅಂಗೀಕಾರ್ಯಾ ತುರ್ಯಾವೃತ್ತಿರ್ಭೋಧೇ ರಸಾದೀನಾಮ್**[೪೯] ॥

ಅಭಿಧೆ, ತಾತ್ಪರ್ಯ, ಲಕ್ಷಣೆ ಈ ಮೂರು ವೃತ್ತಿಗಳು ತಮ್ಮ ಕೆಲಸವನ್ನು ಮಾಡಿ ಮುಗಿಸಿದ ಮೇಲೆ ರಸಾದಿಗಳನ್ನು[೫೦] ವಸ್ತು ಅಲಂಕಾರವನ್ನು ಬೋಧಿಸಲು ನಾಲ್ಕನೆಯದೊಂದು ವೃತ್ತಿಬೇಕು ಅದನ್ನೇ 'ವ್ಯಂಜನಾವೃತ್ತಿ' ಎಂದು ಕರೆಯಲಾಗಿದೆ. ಅಭಿಧಾವೃತ್ತಿಯು ಒಂದು ಶಬ್ದಕ್ಕೆ ಯಾವ ಅರ್ಥದಲ್ಲಿ ಸಂಕೇತವಿದೆಯೋ ಅಷ್ಟನ್ನು ಮಾತ್ರ ತಿಳಿಸುತ್ತದೆ. ವಸ್ತು ಅಲಂಕಾರ, ರಸ ಮೊದಲಾದ ವ್ಯಂಗ್ಯಾಂರ್ಥಗಳನ್ನು ತಿಳಿಸಲು ಅಭಿಧಗೆ ಶಕ್ತಿಯಿಲ್ಲ. ಒಂದು ಶಬ್ದಕ್ಕೆ ಇಂತಹ ರಸಭಾವಗಳಲ್ಲಿಯೇ ಸಂಕೇತವಿದೆ ಎಂಬುದನ್ನು ಹಿಂದಿನಿಂದಲೂ ಯಾರು ವ್ಯವಸ್ಥೆ ಮಾಡಿಲ್ಲ. ವಿಭಾವ ಮೊದಲಾದವು ಗಳಿಂದ ರಸವು ತೋರುವುದಾದರೂ ಅವನ್ನು ತಿಳಿಸಿದ್ದರಿಂದಲೇ ರಸವನ್ನು ತಿಳಿಸಿದಂತಾಗುವುದಿಲ್ಲ. ವಿಭಾವ ಮೊದಲಾದವನ್ನೂ ರಸಭಾವಗಳನ್ನೂ ಒಂದೇ ಎಂದೂ ಯಾರೂ ಅಂಗೀಕರಿಸಿಲ್ಲ ವಿಭಾವಾದಿಗಳು ತಿಳಿಸಬೇಕಾದ ವಿಷಯಗಳು ರಸಭಾವಗಳು ಜ್ಞಾನದ ಬಗೆಗಳು. ಆದ್ದರಿಂದ ಅವುಗಳಿಗೆ ಪರಸ್ಪರವಾಗಿ ಭೇದವಿರುವುದರಿಂದ ಒಂದನ್ನು ತಿಳಿದರೆ ಮತ್ತೊಂದು ತಿಳಿದಂತಾಗುವುದಿಲ್ಲ. ಹಾಗಾದರೆ ತಾತ್ಪರ್ಯವೆಂಬ ವೃತ್ತಿಯೇ ರಸಭಾವ ಮೊದಲಾದ ವ್ಯಂಗ್ಯಾರ್ಥಗಳನ್ನು ತಿಳಿಸುತ್ತದೆ

ಎಂದರೆ ಅದೂ ಸಹ ಹೊಂದುವುದಿಲ್ಲ. ಅಭಿಹಿತನ್ವಯವಾದಿಗಳು ಹೇಳುವಂತೆ ತಾತ್ಪರ್ಯವೆಂಬ ವೃತ್ತಿಯು ಸಹ ವಾಚ್ಯಾರ್ಥವನ್ನು ತಿಳಿಸುವ ಪದಗಳಿಗೆ ಅನ್ವಯವನ್ನು ತಿಳಿಸುವಷ್ಟರಲ್ಲಿಯೇ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ವಾಕ್ಯದಲ್ಲಿ ತಿಳಿಸಿರುವ ಅನೇಕ ಪದಗಳಿಗೆ ಶಬ್ದಭೋಧವಾಗುವಂತೆ ಪರಸ್ಪರವಾಗಿ ಅನ್ವಯವನ್ನು ತಿಳಿಸಿದ ಮೇಲೆ ಬೇರೊಂದು ಅರ್ಥವನ್ನು ತಿಳಿಸಲು ತಾತ್ಪರ್ಯವೃತ್ತಿಗೆ ಸಾಮಥ-ರ್ಯವಿಲ್ಲದ್ದರಿಂದ ಅದು ವ್ಯಂಗಾರ್ಥವನ್ನು ತಿಳಿಸುವುದಿಲ್ಲ. ಹಾಗೆಯೇ ಅಭಿಧಾವೃತ್ತಿಗೆ ವ್ಯಂಗ್ಯಾಂರ್ಥವನ್ನು ತಿಳಿಸುವ ಸಾಮರ್ಥ್ಯವಿದೆ ಎಂದು ಕೆಲವರು ಅಭಿಪ್ರಾಯಪಟ್ಟರೂ ಇದು ಸಹ ಹೊಂದುವುದಿಲ್ಲ. ಏಕೆಂದರೆ ಅಭಿದಾವೃತ್ತಿಯು ಸ್ವಾರ್ಥವನ್ನು ಮೊದಲು ತಿಳಿಸಿ ನಂತರವೇ ವ್ಯಂಗ್ಯಾರ್ಥವನ್ನು ತಿಳಿಸುತ್ತದೆ. ಆದ್ದರಿಂದ 'ವ್ಯಂಜನೆ' ಎಂಬ ನೂತವಾದ ವೃತ್ತಿಯು ತಾತ್ಪರ್ಯ ವೃತ್ತಿಯಲ್ಲಿಯೇ ಸೇರಿರುವುದರಿಂದ ಈ ತಾತ್ಪರ್ಯವೃತ್ತಿಯೇ ಧ್ವನಿಯನ್ನು ತಿಳಿಸುತ್ತದೆ. ಆದ್ದರಿಂದ ಅಭಿಧೆ ಲಕ್ಷಣೆಗಳಿಂದ ತಿಳಿಯದೇ ಇರುವ ಅರ್ಥಗಳನ್ನು ತಾತ್ಪರ್ಯವೃತ್ತಿಯೂ ಪದಗಳಿಗೆ ಅನ್ವಯವನ್ನು ತಿಳಿಸಿಯಾದ ಮೇಲೆ ವ್ಯಂಗ್ಯಾರ್ಥವನ್ನು ತಿಳಿಸಬಹುದು. ಮುಂದೆ ಇವು ಎರಡು ಮತಗಳಾಗಿ ಧೀರ್ಘ ಧೀರ್ಘತರವಾದ ಅಭಿಧಾವೃತ್ತಿಯಿಂದಲೇ ವ್ಯಂಗ್ಯಾರ್ಥವು ತಿಳಿಯುವುದು ಒಂದು ವಾದ, ತಾತ್ಪರ್ಯ ವೃತ್ತಿಯಿಂದಲೇ ವ್ಯಂಗ್ಯಾರ್ಥವು ತಿಳಿಯುವುದೆಂಬುದು ಮತ್ತೊಂದು ವಾದ, ಇವರೆಡು ಮತಗಳಲ್ಲಿಯೂ ದೋಷವನ್ನು ತಿಳಿಸಲಾಗಿದೆ.[೫೧] ಅಭಿಧಾವೃತ್ತಿಯೂ ಸಾಂಕೇತಿಕವಾದ ಅರ್ಥವನ್ನು ತಿಳಿಸಿದ ಮೇಲೆ ತನ್ನ ಶಕ್ತಿಯನ್ನು ಕಳೆದುಕೊಂಡು ಹೇಗೆ ವ್ಯಂಗ್ಯಾಂರ್ಥವನ್ನು ತಿಳಿಸುವುದು? ತಾತ್ಪರ್ಯವೃತ್ತಿಯು ಪದಗಳಿಗೆ ಪರಸ್ಪರವಾಗಿ ಅನ್ವಯವನ್ನು ತಿಳಿಸಿದ ಮೇಲೆ ನಿರ್ವೀಯವಾಗುವುದರಿಂದ ಹೇಗೆ ವ್ಯಂಗ್ಯಾರ್ಥವನ್ನು ತಿಳಿಸುತ್ತದೆ. ಆದ್ದರಿಂದ ಇವೆರಡಕ್ಕೂ ಇಂತಿಷ್ಟೇ ಮಾತ್ರವೇ ತಿಳಿಸಬೇಕೆಂದು ನಿಯಮನ ಮಾಡಿರುವುದರಿಂದ ಮಂದಕ್ಕೆ ಅಂದರೆ ವ್ಯಂಗ್ಯಾರ್ಥವನ್ನು ತಿಳಿಸುವುದಕ್ಕೆ ಅವಕಾಶವೇ ಇಲ್ಲ "ಶಬ್ದಬುದ್ಧಿಕರ್ಮಣಾಂ ವಿರಮ್ಯ ವ್ಯಾಪಾರಭಾವಃ" ಎಂದು ನಯಾಯಿಕರು, ವೈಯಾಕರಣರು ಈ ದೋಷವನ್ನು ಆರೋಪಿಸಿ ಅಭಿಧೆ ಮತ್ತು ತಾತ್ಪರ್ಯವೃತ್ತಿಗಳಿಗೆ ಮುಂದೆ ವ್ಯಂಗ್ಯಾರ್ಥವನ್ನು ತಿಳಿಸಲು ಸಾಮಾರ್ಥ್ಯವಿಲ್ಲವೆಂದು ಅವೆರಡೂ ವ್ಯಾಪಾರಗಳು ಅಷ್ಟರಲ್ಲಿಯೇ ಮುಗಿಯುವುದರಿಂದ ವ್ಯಂಜನಾ ವ್ಯಾಪಾರವನ್ನು ಒಪ್ಪಬೇಕೆಂದಿದ್ದಾನೆ. ವ್ಯಂಗ್ಯಾರ್ಥವನ್ನು ಒಪ್ಪಿ ಅದು ಯಾವುದರಿಂದ ತೋರುತ್ತದೆ ಎಂಬ ವಾದವಿದ್ದರೂ ಒಟ್ಟಿನಲ್ಲಿ ವ್ಯಂಜನಾವೃತಿ ಎಂಬ ನಾಲ್ಕನೆ ವೃತ್ತಿಯಿದೆ ಎಂದು ಸಿದಿಸಿದ್ದಂತಾಯಿತು.

ತಾತ್ಪರ್ಯವೃತ್ತಿಯಿಂದ ವಿಭಾವಾದಿಗಳ ಜ್ಞಾನವೂ ರಸದ ಜ್ಞಾನವೂ ಒಟ್ಟಿಗೆ ಏಕಕಾಲದಲ್ಲಿ ಆಗುತ್ತವೆ ಎಂಬುದನ್ನು ಭರತಮಹರ್ಷಿಯು ಸ್ಪಷ್ಟಪಡಿಸಿದ್ದಾನೆ. ವಿಭಾವ ಅನುಭಾವ ವ್ಯಭಿಚಾರಿಭಾವಗಳು ಒಟ್ಟಿಗೆ ಸೇರುವುದರಿಂದ ರಸದ ಅನುಭವವಾಗುತ್ತದೆ. ಆದ್ದರಿಂದ ಇಲ್ಲಿ ಕಾರಣಭಾವವು ಇದ್ದೇ ಇರಬೇಕು. ಎಲ್ಲವೂ ಒಟ್ಟಿಗೆ ಸೇರಿ ಅನುಭವಕ್ಕೆ

ಬರುವುದರಿಂದ ಕಾರಣ ಹಿಂದನದು ಕಾರ್ಯ ಮುಂದಿನದು ಎಂದು ಕಂಡು ಬರುವುದಿಲ್ಲವೆಂದು ಸ್ಪಷ್ಟಪಡಿಸಿ ತಾತ್ಪರ್ಯವೃತ್ತಿಯು ವ್ಯಂಗ್ಯಾರ್ಥವನ್ನು ತಿಳಿಸುವುದಿಲ್ಲ ಇದು ಅಲಂಕಾರ ಸಿದ್ಧಾಂತಕ್ಕೆ ಹೊಂದುವುದಿಲ್ಲ. ಹಾಗೆಯೇ ಲಕ್ಷಣೆಯಿಂದಲೂ ಸಹ ವ್ಯಂಗ್ಯಾರ್ಥವು ತಿಳಿಯುವುದಿಲ್ಲವೆಂದು ಉದಾಹರಿಸಿ ತೋರಿಸಿದ್ದಾನೆ. "ಗಂಗಾಯಾಂ ಘೋಷಃ" ಎಂಬಲ್ಲಿ ಗಂಗಾಪದವು ಲಕ್ಷಣೆಯಿಂದ ತೀರವೆಂದು ಅರ್ಥವನ್ನು ತಿಳಿಸಿ ತನ್ನ ಶಕ್ತಿಯನ್ನು ಕಳೆದುಕೊಂಡ ಮೇಲೆ ಅದು ಆ ಹಳ್ಳಿಯಲ್ಲಿ ಎಲ್ಲರಿಗೂ ಅನುಭವಕ್ಕೆ ಬರುವಂತಹ ಶೈತ್ಯ, ಪಾವನತ್ವ ಮೊದಲಾದ ವ್ಯಂಗ್ಯಾರ್ಥಗಳನ್ನು ಹೇಗೆ ತಿಳಿಸಬಲ್ಲದು? ಆದ್ದರಿಂದ ಈ ಬಗೆಯ ಅರ್ಥವನ್ನು ತಿಳಿಸಲು ವ್ಯಂಜನೆ ಎಂಬ ನಾಲ್ಕನೆಯ ವೃತ್ತಿಯು ಬೇಕೆಂಬುದು ಅಲಂಕಾರಿಕನಾದ ಭರತನ ಅಭಿಪ್ರಾಯವಾಗಿದೆ.

ಅಭಿದೆ, ಲಕ್ಷಣೆ, ತಾತ್ಪರ್ಯವೃತಿಗಳಿಗಿಂತ ವ್ಯಂಜನಾವೃತ್ತಿಯು ಬೇರೆ ಎಂಬುದನ್ನು ತಿಳಿಸಿ. ಈಗ ವಾಚ್ಯ, ಲಕ್ಷ್ಯ ತಾತ್ಪರ್ಯಾರ್ಥಗಳಿಗಿಂತಲೂ ವ್ಯಂಗ್ಯಾರ್ಥವು ಬೇರೆ ಎಂಬುದನ್ನು ವಿಮರ್ಶಿಸಲಾಗಿದೆ. ಕೇಳುವವನ ಮತ್ತು ಹೇಳುವವನ ಅಭಿಪ್ರಾಯವು ಅನೇಕಬಗೆಯಾದರಿಂದ ಲಕ್ಷ್ಯಾರ್ಥ ಮತ್ತು ತಾತ್ಪಾರ್ಯಾರ್ಥಗಳಿಗಿಂತಲೂ ಬೇರೆಯೆನಿಸಿದೆ. ಉದಾಹರಣೆಗೆ "ಭ್ರಮ ಧಾರ್ಮಿಕ" ಎಂಬ ಪದ್ಯದಲ್ಲಿ ವಾಚ್ಯಾಥ-ರ್ವವು "ಧಾರ್ಮಿಕನೇ ಇಲ್ಲಿ ಸ್ವಚ್ಛಂಧವಾಗಿ ತಿರುಗಾಡು" ಎಂದು ವಿಧಿರೂಪವಾಗಿದ್ದರೆ, ವ್ಯಂಗ್ಯಾರ್ಥವು "ನೀನು ಇಲ್ಲಿ ತಿರುಗಾಡಬಾರದು" ಎಂದು ನಿಷೇಧರೂಪವಾಗಿದೆ. 'ನಿಶ್ಶೇಷಚ್ಯುತಚಂದನಂ' ಎಂಬ ಪದ್ಯದಲ್ಲಿ 'ನೀನು ಆ ನೀಚನ ಬಳಿಗೆ ಹೋಗಿರಲಿಲ್ಲ' ಎಂದು ನಿಷೇಧ ರೂಪವಾಗಿದ್ದರೆ ವ್ಯಂಗ್ಯಾರ್ಥವು "ಅವನಲ್ಲಿಗೆ ರಮಿಸಲಿಕ್ಕಾಗಿ ಹೋಗಿದ್ದೆ" ಎಂಬ ಅರ್ಥವನ್ನು ತಿಳಿಸುತ್ತದೆ. ಹೀಗೆ ವ್ಯಂಗ್ಯಾರ್ಥವು ಬೇರೆ ಅಥ-ರ್ಗಳಿಗಿಂತಲೂ ಸ್ವರೂಪದಲ್ಲಿ ವಿಲಕ್ಷಣವೆನಿಸಿದೆ. ವಾಚ್ಯ ಮೊದಲಾದ ಅರ್ಥಗಳು ಅನೇಕ ಬಗೆಯಾಗಿದ್ದರೆ ವ್ಯಂಗ್ಯಾರ್ಥವು ಒಂದೆ ಬಗೆಯಾಗಿರುತ್ತದೆ. ಉದಾಹರಣೆಗೆ "ಗತೋ?ಸ್ತಮರ್ಕಃ" ಎಂಬ ಮಾತಿನಲ್ಲಿ ವಾಚ್ಯಾರ್ಥವು ಒಂದೇ ಬಗೆಯಾಗಿದೆ ವ್ಯಂಗ್ಯಾರ್ಥವು ಕೇಳುವವರ ವೈವಿಧ್ಯದಿಂದ ಅನೇಕ ಬಗೆಯಾಗಿದೆ ಕೆಲವು ಕಡೆ ಇದು "ನಿನ್ನ ಪ್ರಿಯನನ್ನು ಹುಡುಕಿಕೊಂಡು ಹೊರಡಲು ಈ ಕಾಲ ಒದಗಿದೆ" ಎಂದೂ, ಗೋವು ಕಾಯುವವನಿಗೆ "ಮೇಯುತ್ತಿರುವ ಗೋವುಗಳನ್ನು ಒಂದೆಡೆಗೆ ಸೇರಿಸಿಕೋ" ಎಂಬರ್ಥವನ್ನು "ನಾಯಕನು ಈಗ ಬರುವ ಕಾಲವಾದ್ದರಿಂದ ನಿನ್ನ ಸಂತಾಪವು ತೊಲಗಿತು" ಎಂದು ವಿರಹಿಣಿಗೆ ಅರ್ಥವಾಗುತ್ತದೆ. ಕಳ್ಳನಿಗೆ ಮತ್ತೊಬ್ಬ ಕಳ್ಳನು ಇದನ್ನು ಹೇಳಿದರೆ 'ಕಳ್ಳತನಕ್ಕೆ ಹೊರಡುವ ಕಾಲ ಸಮೀಪಿಸಿತು' ಎಂದು ಅರ್ಥವಾಗುತ್ತದೆ. ಹೀಗೆ 'ಗತೋ<ಽ>?ಸ್ತಮರ್ಕಃ', ಒಂದೇ ವಾಕ್ಯವು ಕೇಳುವವರ ಇಚ್ಛೆ ಗುಣವಾಗಿ ಅನೇಕ ಬಗೆಯಾಗುತ್ತದೆ. ಹೀಗೆ ನಿಮಿತ್ತಭೇದ, ಪರಿಣಾಮಭೇದ, ಪ್ರತೀತಿಭೇದಗಳಿಂದ ವ್ಯಂಗ್ಯಾರ್ಥಕ್ಕೂ ಇತರ ಅರ್ಥಗಳಿಗೂ ತಿಳಿಯುವುದರಲ್ಲಿ ಭೇದವಿದೆ.

ವಾಚ್ಯಾರ್ಥವು ಕೇವಲ ಶಬ್ದವನ್ನು ಮಾತ್ರ ಆಶ್ರಯಿಸುತ್ತದೆ. ವ್ಯಂಗ್ಯಾರ್ಥವು ಶಬ್ದವನ್ನೂ ಅದರ ಏಕದೇಶವಾದ ಪ್ರಕೃತಿಪ್ರತ್ಯಯಗಳನ್ನೂ ಅದರ ಅರ್ಥಗಳನ್ನು, ಅಕ್ಷರಗಳನ್ನೂ, ಪದಗಳ ಜೋಡಣೆಯನ್ನೂ ಆಶ್ರಯಿಸಿರುವುದು. ಆದ್ದರಿಂದ ಇದಕ್ಕೆ ಬೇರೆ ಅರ್ಥಗಳಿಗಿಂತಲೂ ಆಶ್ರಯ ಭೇದವಿದೆ. ಹಾಗೆಯೇ ವ್ಯಂಗ್ಯಾರ್ಥ-ದ ಉದ್ದೇಶವು ಬೇರೆಯಾದ್ದರಿಂದ ತಿಳಿಸಬೇಕಾದ ವಿಷಯದಲ್ಲೂ ಭೇದವಿದೆ. ಆದ್ದರಿಂದ ವ್ಯಂಗ್ಯಾರ್ಥವು ವಾಚ್ಯಾರ್ಥದಿಂದ ಬೇರೆ ಎನಿಸಿದೆ. ಹಾಗೆ ರಸ ಭಾವ ಮೊದಲಾದವು ನಮ್ಮ ಒಂದು ಬಗೆಯ ಅನುಭವವೆನಿಸಿದ್ದರಿಂದ ಅನುಭವಕ್ಕೆ ಬರುವ ಮೊದಲು ಯಾವ ಪ್ರಮಾಣದಿಂದಲೂ ಸಿದ್ದವಾಗಿರುವುದಿಲ್ಲ. ಆದ್ದರಿಂದ ರಸವನ್ನು ವ್ಯಕ್ತಪಡಿಸಲು ಅಭಿಧೆಗೂ ಲಕ್ಷಣೆಗೂ ಸಾಧ್ಯವಿಲ್ಲ. ಆದ್ದರಿಂದ ರಸನವೆಂಬ ವ್ಯಾಪಾರಕ್ಕಿಂತಲೂ ಬೇರೆ ಯಾವ ಶಕ್ತಿಯೂ ರಸವನ್ನು ಹೊರಪಡಿಸಲಾರದು. ರಸನವೆಂದರೆ ಚಮತ್ಕಾರದೂಡಗೂಡಿದ ಒಂದು ಬಗೆಯ ಅನುಭವವಾದರಿಂದ ಇದರಿಂದಲೇ ಸಹೃದಯನಿಗೆ ರಸವು ಸಿದ್ಧಿಸಬೇಕು. ಇದನ್ನು ಬಿಟ್ಟು ಬೇರೆ ಯಾವ ಸಾಧನವೂ ರಸಪ್ರತೀತಿಗೆ ಅನುಕೂಲವಾಗಿಲ್ಲ. ರಸನ ವ್ಯಾಪರವು ಅಭಿಧೆಲಕ್ಷಣೆ ಇವನ್ನೂ ಮಿರಿದ್ದು "ಗಂಗಾಯಂ ಘೋಷಃ" ಎಂಬಲ್ಲಿ ತಿಳಿಸಿರುವ ಶಭ್ದಾರ್ಥಗಳಿಗೆ ಆಗಬೇಕಾಗಿರುವ ಅನ್ವಯ ಹೊಂದದೇ ಇರುವುದರಿಂದ ಅಲ್ಲಿಯೇ ಲಕ್ಷಣೆಯು ಪ್ರವೇಶಿಸುತ್ತದೆ. ಉದಯನಾಚಾರ್ಯರು ಹೀಗೆ ಹೇಳಿದ್ದಾರೆ.

**ಶ್ರುತಾನ್ವಯಾದನಾಕಾಂಕ್ಷ ನ ವಾಕ್ಯಂ ಹ್ಯನ್ಯದಿಚ್ಛತಿ ।**
**ಪದಾರ್ಥನ್ವಯ ವೈಧುರ್ಯಾತ್ ತದಾಕ್ಷಿಪ್ತೇನ ಸಂಗತಿಃ** [೨೨]**॥**

"ನಾವು ಕೇಳುವ ಶಬ್ದಗಳಿಗೆ ಪರಸ್ಪರ ಸಂಬಂಧವಿದ್ದು ಬೇರೊಂದು ಅರ್ಥದ ಆಕಾಂಕ್ಷೆ ಇಲ್ಲದ ಇರುವ ವಾಕ್ಯವು ಬೇರೆ ಯಾವ ಅರ್ಥವನ್ನೂ ಇಚ್ಛಿಸುವುದಿಲ್ಲ. ಆದರೆ ಶಬ್ದಗಳಿಗೆ ಪರಸ್ಪರ ಅನ್ವಯವಿಲ್ಲದೇ ಮುಖ್ಯಾರ್ಥದೊಡನೆ ಅನ್ವಯವನ್ನು ದೊರಕಿಸಲಿಕ್ಕಾಗಿ ಯಾವ ಬೇರೊಂದು ಅರ್ಥವನ್ನು ಎಲ್ಲಿ ಗ್ರಹಿಸುವೆವೂ ಅಲ್ಲಿ ಅದು ಮುಖ್ಯಾರ್ಥಕ್ಕೆ ಸಂಬಂಧಪಟ್ಟಿರಬೇಕು". ಇನ್ನು ದಾರ್ಶನಿಕ ಅಭಿಪ್ರಾಯದಂತೆ ಕಾರಣ ಮತ್ತು ಕಾರ್ಯ ಇವೆರಡೂ ಬೇರೆ ಬೇರೆ ಕಾಲದಲ್ಲಿ ಇರಬೇಕೆಂದಿದ್ದಾರೆ. ಮಿಮಾಂಸಕರ ಅಭಿಪ್ರಾಯದಲ್ಲಿ 'ಇದು ನೀಲಘಟ' ನೀಲವರ್ಣದ ಜ್ಞಾನವಾದ ಮೇಲೆಯೇ ಇದನ್ನು ನೀಲಘಟವೆಂದು ನಾನು ತಿಳಿದೆನು' ಎಂದು ಹಿಂದಿನದಕ್ಕೆ ಸಂಬಂಧಿಸಿದ ಬೇರೊಂದು ಜ್ಞಾನವು ಹುಟ್ಟುತ್ತದೆ. ಆದ್ದರಿಂದ ನೀಲವರ್ಣದ ಜ್ಞಾನವಿಲ್ಲದೆ ನೀಲಘಟದ ಜ್ಞಾನವು ಹುಟ್ಟುವುದಿಲ್ಲ ಎಂದು ಮೀಮಾಂಸಕರು ಹೇಳುತ್ತಾರೆ. ಇನ್ನು ನೈಯಾಯಿಕರ ಮತದಲ್ಲಿ ನೀಲವರ್ಣದ ಜ್ಞಾನವಾದ ಮೇಲೆಯೇ 'ಈ ಘಟವನ್ನು ನಾನು ನೋಡುತ್ತೇನೆ'. ಎಂದು ಅದರ ಬಗ್ಗೆ ಬೇರೊಂದು ಜ್ಞಾನವು

ಹುಟ್ಟುತ್ತದೆ. ಆದ್ದರಿಂದ 'ಗಂಗಾಯಾಂ ಘೋಷಃ'ದಲ್ಲಿ ತೀರ ಮತ್ತು ಪ್ರಯೋಜನ ಎರಡರ ಜ್ಞಾನವು ಒಟ್ಟಿಗೆ ಆಗುವುದಿಲ್ಲ. ಮೊದಲು ತೀರದ ಜ್ಞಾನವು ಲಕ್ಷಣೆಯಿಂದ ಆಗಿ ನಂತರವೇ ಗಂಗಾತೀರದಲ್ಲಿ ಇದಕ್ಕೆ ಅನೇಕ ಪ್ರಯೋಜನವಿದೆ ಎಂಬ ಜ್ಞಾನವು ಆಗುವುದರಿಂದ ಈ ಪ್ರಯೋಜನವನ್ನು ಲಕ್ಷಣೆಯು ಟಿಳಿಸುವುದಿಲ್ಲ. ಆದ್ದರಿಂದ ಪ್ರಯೋಜನವನ್ನು ತಿಳಿಸಲಿಕ್ಕಾಗಿ ವ್ಯಂಜನಾವೃತ್ತಿಯು ಬೇಕೆಂಬುದೇ ಇಲ್ಲಿಯ ವಾದವಾಗಿದೆ.

**ಅರ್ಥೋऽಪಿ ದ್ವಿವಿದೌ ವಾಚ್ಯೋಅನುಮೇಯಶ್ಚ। ತತ್ರ ಶಬ್ದಾ ವ್ಯಾಪಾರ ವಿಷಯೋ ವಾಚ್ಯಃ । ಸಾಏವ ಮುಖ್ಯಉಚ್ಯತೇ ತತ್ ಏವ ತದನುಮಿತದ್ವಾ ಲಿಂಗಬೂತಾದೆ ಯದರ್ಥಾಂತರಮನುಮೀಯತೆ ಸೋऽನುಮೇಯಃ । ಸ ಚ ತ್ರಿವಿದಃ। ವಸ್ತುಮಾತ್ರಮ್ ಅಲಂಕಾರ ರಸಾದಯಶ್ಚೇತಿ। ತತ್ರ ದ್ಯೋವಾಚ್ಯವಪಿ ಸಂಭವತಃ ಅಂತಸ್ತತ್ವನುಮೇಯ ಏವೇತಿ।**[೫೩]

ಮಹಿಮಭಟ್ಟನ ಮತದಂತೆ ಶಬ್ದಕ್ಕೆ ಎರಡೇ ಅರ್ಥಗಳುಂಟು ವಾಚ್ಯಾರ್ಥ, ಅನುಮೇಯಾರ್ಥ ಇವನ ಅಭಿಪ್ರಾಯದಂತೆ ಅನುಮೇಯಾರ್ಥದಲ್ಲಿಯೇ ಲಕ್ಷ್ಯ ಮತ್ತು ವ್ಯಂಗ್ಯಗಳೆರಡೂ ಅಂತರ್ಭಾವ ಹೊಂದುತ್ತದೆ. ಇವುಗಳಲ್ಲಿ ಶಬ್ದವ್ಯಾಪಾರದಿಂದ ಬಂದ ಅರ್ಥ ವಾಚ್ಯ ಅದೇ ಮುಖ್ಯಾರ್ಥ, ಹೇತುಭೂತವಾದ ಆ ವಾಚ್ಯಾರ್ಥದಿಂದ ಅನುಮಿತವಾದ ಇನ್ನೊಂದು ಅರ್ಥವು ಅನುಮೇಯಾರ್ಥ ಇದು ವಸ್ತು, ಅಲಂಕಾರ ಮತ್ತು ರಸವೆಂದು ಮೂರು ವಿಧವಾಗಿದೆ. ಇವುಗಳಲ್ಲಿ ವಸ್ತು ಅಲಂಕಾರವು ವಾಚ್ಯವಾಗಿ, ರಸವು ಅನುಮೇಯವಾಗಿದೆ. ಈ ತಾತ್ವಿಕ ನೆಲಗಟ್ಟಿನ ಮೇಲೆ ನಿಂತ ಮಹಿಮಭಟ್ಟನ ಅನುಮಾನ ಸಿದ್ಧಾಂತವು "ಸಭ್ಯೋ ರಸ ಪ್ರತೀತಿಮಾನ್ ವಿಭಾವಾದಿಪ್ರತೀತಿಮತ್ತ್ವಾತ್" ಎಂಬ ಅನುಮಾನದಿಂದ ಸಾಧಿಸಲಿಕ್ಕೆ ಇಷ್ಟವಾದ ಆನಂದಮಯವೂ ಸ್ವಪ್ರಕಾಶ ಜ್ಞಾನರೂಪವು ಆದ ರಸಕ್ಕಿಂತ ಬೇರೊಂದು ಅರ್ಥವನ್ನು ಅಲ್ಲಿ ಪ್ರತಿಪಾದಿಸುವುದರಿಂದ ಇದು ದುಷ್ಟಹೇತುವೆನಿಸಿದೆ. ಪ್ರತ್ಯಕ್ಷವಾಗಿ ಸಭ್ಯರು ರಸವನ್ನು ಅನುಭವಿಸುವ ಪ್ರಯುಕ್ತ ಅದರ ಪ್ರತೀತಿಯನ್ನು ಅನುಮಾನದಿಂದ ಪಡೆಯುವುದು ಅದಕ್ಕಿಂತ ಬೇರೆಯಾಗುತ್ತದೆ. ರಸಾನುಭವ, ಪ್ರತೀತಿ ಎರಡೂ ಬೇರೆ ಎನಿಸಿದೆ. ಅನುಮಾನವು ರಸಾನುಭವವನ್ನು ಪ್ರತಿಪಾದಿಸದೆ ರಸ ಪ್ರತೀತಿಯನ್ನು ಸಾಧಿಸುತ್ತದೆ. ಇಲ್ಲಿ ಸಾಧಿಸಬೇಕಾಗಿರುವುದಕ್ಕಿಂತ ವಿರುದ್ಧವಾದದ್ದು ಸ್ಥಾಪನೆಯಾಗುವುದರಿಂದ ಹೇತುದುಷ್ಟವೆನಿಸಿದೆ. ಅಲ್ಲಿಗೆ ವ್ಯಕ್ತಿವಿವೇಕಕಾರನು ಹೇತು, ಸಾಧ್ಯಗಳು ಒಂದೆಡೆಗೆ ಇರುವಂತೆ ಬೇರೆ ರೀತಿಯಿಂದ ವ್ಯಾಪ್ತಿಯನ್ನು ಪ್ರತಿಪಾದಿಸಿ ರಸಭಾವಗಳು ಅನುಮಾನದಿಂದಲೇ ಸಿದ್ಧಿಸುತ್ತವೆ ಎಂಬುದನ್ನು ನಿರಾಕರಿಸಲಾಗಿದೆ.

ವ್ಯಕ್ತಿವಿವೇಕಕಾರನು ವ್ಯಂಗ್ಯಾರ್ಥವನ್ನು ಅನುಮೇಯವೆಂದು ಹೇಳಿದ್ದನು. ಇಲ್ಲಿ ವಿಮರ್ಶಿಸಲಾಗಿದೆ. 'ನಿಶ್ಯೇಷಚ್ಯುತ ಚಂದನಮ್' ಎಂಬಲಿ ದೂತಿಯು ಸ್ನಾನ ಮಾಡಿದಕ್ಕಿಂತಲೂ ಬೇರೆ ರೀತಿಯಲ್ಲಿ ಸ್ತನತಟದಲ್ಲಿ ಮಾತ್ರವೇ ಶ್ರೀಗಂಧವು ಪೂರ್ತಿಯಾಗಿ ತೊಲಗಿದ್ದರಿಂದ ಆಕೆಯು ಸ್ನಾನವನ್ನು ಮಾಡಿಲ್ಲ ಆದರೆ ಕಾಮುಕನೊಡನೆ ಭೋಗವನ್ನೇ ಮಾಡಿರುವಳು ಎಂಬ ಅರ್ಥವು ಅನುಮಾನದಿಂದಲೇ ಸಿದ್ಧಿಸುತ್ತದೆ. ಸ್ನಾನವನ್ನು ಮಾಡಿದರೆ ದೇಹದ ಎಲ್ಲಾ ಅವಯವಗಳಲ್ಲೂ ಶ್ರೀಗಂಧವು ತೊಲಗಬೇಕಾಗಿತ್ತು. ಸ್ತನಗಳಲ್ಲಿ ಮಾತ್ರ ಪೂರ್ತಿಯಾಗಿ ತೊಲಗಿರುವುದರಿಂದ ಅವಳು ಕಾಮುಕನೊಡನೆ ರಹಸ್ಯವಾಗಿ ಭೋಗಿಸಿರುವಳು ಎಂಬುದು ಅನುಮೇಯವವೇ ಹೊರತು ವ್ಯಂಗ್ಯವಾಗಲಾರದು ಎಂದು ಮಹಿಮಭಟ್ಟ ವಾದಿಸುತ್ತಾನೆ. ಇಲ್ಲಿ ದೂತಿಯು ಕಾಮುಕನೊಡನೆ ಭೋಗಿಸಿದಳು ಎಂಬ ಅರ್ಥವನ್ನು ಸಹೃದಯರು ಅನುಮಾನದಿಂದ ತಿಳಿಯಬೇಕಾದರೆ ಈ ಮಾತನ್ನು ದೋತಿಗೆ ಹೇಳಿದ್ದೇ ಕಾರಣವೋ ಆ ಮಾತನ್ನು ಹೇಳುವ ಕಾಲದಲ್ಲಿ ಅಲ್ಲಿ ಹಾಜರಿದ್ದ ಸಖಿ ಮೊದಲಾದ ಬೇರೆ ಜನರ ಸಾನಿಧ್ಯವು ಕಾರಣವೋ ಅಥವಾ ಅಲ್ಲಿ ಹೇಳಿದ ಅಂಶವನ್ನು ಗ್ರಹಿಸಿದ ಸಹೃದಯರೇ ಕಾರಣವೋ? ಈ ಮೂರು ಕಾರಣಗಳಲ್ಲಿ ಯಾವುದರಿಂದ "ದೂತಿಯು ಸ್ನಾನ ಮಾಡಲಿಲ್ಲ ಆದ-'ರೆ ಕಾಮುಕನೊಡನೆ ಭೋಗಿಸಿದಳು"ಎಂಬ ಅನುಮಿತಿಯು ಹುಟ್ಟುತ್ತದೆ ಎಂಬ ವಿಚಾರ ಮಾಡಬೇಕಾದ ಅಂಶ. ಮೊದಲಿನ ಎರಡು ವಿಕಲ್ಪಗಳನ್ನು ಹೇಳುವುದಾದರೆ ಹೇತುವಿಗೆ ವ್ಯಭಿಚಾರ ದೋಷವು ಸಂಭವಿಸಿದ್ದರಿಂದ ಅನುಮಾನವು ಹೊಂದುತ್ತದೆ. ಮೂರನೆಯ ವಿಕಲ್ಪವನ್ನು ಅಂಗೀಕರಿಸಿದರೆ ಸಹೃದಯರಿಗೆ ಬೇರೆ ರೀತಿಯಲ್ಲೂ ದೂತಿಗೆ ಶ್ರೀಗಂಧವು ತೊಲಗಿರಬೇಕೆಂಬ ಜ್ಞಾನವು ಹುಟ್ಟುವುದರಿಂದ ಅನುಮಾನದಲ್ಲಿ ಹೇತ್ವಾಭಾಸವು ಸಂಭವಿಸುತ್ತದೆ. ಆಕೆಯು ಸಂಭೋಗವನ್ನು ಮಾಡದೆ ಕುತ್ತಿಗೆಯವರೆಗೆ ಮಾತ್ರವೇ ಸ್ನಾನ ಮಾಡಿದ್ದರಿಂದ ಸ್ತನಗಳಲ್ಲಿದ್ದ ಶ್ರೀಗಂಧವು ಪೂರ್ತಿಯಾಗಿ ತೊಲಗಿದೆ ಎಂಬುದೇ ಆಕೆಯ ಅಭಿಪ್ರಾಯವೆಂದು ಸಹೃದಯರು ತಿಳಿಯಬಹುದು. ಇದರಿಂದ ದೂತಿಯು ಸಂಭೋಗವನ್ನೇ ಮಾಡಿದಳೆಂಬ ಅರ್ಥವು ಇಲ್ಲಿ ಅನುಮಾನದಿಂದ ತೋರುವುದಿಲ್ಲ ವೆಂಬುದು ಸ್ಪಷ್ಟವಾಯಿತು. ಶ್ರೀಗಂಧವು ಸ್ತನಗಳಲ್ಲಿ ಮಾತ್ರವೇ ಪೂರ್ತಿಯಾಗಿ ತೊಲಗಿತ್ತೆಂಬ ಹೇತುವಿನಲ್ಲಿ ಒಂದು ವಿಶೇಷಣವನ್ನು ಕೊಟ್ಟರೆ ಇಲ್ಲಿ ದೋಷವು ತೊಲಗುತ್ತದೆ ಎಂದು ಹೇಳಿದ್ದಾನೆ. ದೂತಿಯ ಮುಖವು ವಿಕಸಿತವಾಗಿರುವುದರಿಂದ ಶ್ರೀಗಂಧವು ತೊಲಗಿತ್ತೆಂಬ ಹೇತುವಿನಲ್ಲಿ "ಸಂಭೋಗದಿಂದ ವಿಕಸಿತವಾದ ಮುಖವುಳ್ಳವಳು" ಎಂಬ ವಿಶೇಷಣವನ್ನು ಕೊಟ್ಟರೆ ದೂತಿಯ ಸ್ತನದಲ್ಲಿ ಶ್ರೀಗಂಧವು ತೊಲಗಿತ್ತೆಂದು ಹೇಳಬೇಕಾಗಿಲ್ಲ. ಸಂತೋಷ ದಿಂದ ಕೂಡಿದ್ದ ದೂತಿಯ ಶ್ರೀಗಂಧವು ತೊಲಗಿತ್ತು ಎಂಬುದನ್ನು ಹೇತುವೆಂದು ಭಾವಿಸಿದರೆ ಆಗ ದೋಷವು ಉಂಟಾಗುವುದಿಲ್ಲ. ಸ್ನಾನದಿಂದ ಮುಖವು ವಿಕಾಸಿತಗೊಳ್ಳುವುದಿಲ್ಲ. ಆದರೆ ಮುಖವು ವಿಕಾಸಗೊಂಡಿರುವುದರಿಂದ ಹೇತುವಿನಲ್ಲಿ ವ್ಯಭಿಚಾರಿ ದೋಷವು ಬರುವುದಿಲ್ಲ.

ಆದ್ದರಿಂದ ಶ್ಲೋಕದಲ್ಲಿ ಹೇಳದೆ ಇರುವ ವಿಶೇಷಣವನ್ನು ಪ್ರಯೋಗಿಸಬಾರದೆಂದು ವೇದದ ಆಜ್ಞೆ ಏನೂ ಇಲ್ಲವಾದ್ದರಿಂದ ಅಂತಹ ವಿಶೇಷಣವನ್ನು ಕೊಟ್ಟರೆ ಕೇವಲ ಪ್ರತಿಭೆಯಿಂದಲೇ ಹುಟ್ಟುವ ಕಾವ್ಯಗಳಿಗೆ ವೇದಗಳಂತೆ ಪ್ರಾಮಾಣ್ಯವಿರಬೇಕೆಂಬ ನಿಯಮವಿಲ್ಲದ್ದರಿಂದ ಇಲ್ಲಿ ಹೇಳಿರುವ 'ಚಂದನ ಚ್ಯವನ' ಇವೇ ಮೊದಲಾದ ಹೇತುಗಳು ನೀಚವೋ, ಸುಳ್ಳೋ ಎಂದು ಸಹೃದಯರಿಗೆ ಸಂದೇಹವಿರುವುದರಿಂದ ಹೇತುವಿಗೆ ಸ್ವರೂಪಸಿದ್ಧಿವುಂಟಾಯಿತು. ವ್ಯಕ್ತಿವಾದಿಗಳು ಸಹ 'ತಸ್ಯಾಧಮಸ್ಯಾಂತಿ-ಕಂ' ಎಂಬಲ್ಲಿ ಹೇಳಿರುವ ಅಧಮ ಎಂಬ ಪದಕ್ಕೆ ಸಂಬಂಧಿಸಿರುವ 'ನಿಶ್ಯೇಷ' ಮೊದಲಾದವುಗಳು "ಶ್ರೀಗಂಧವೆಲ್ಲವು ಪೂರ್ತಿಯಾಗಿ ತೊಲಗಿತು" ಎಂಬ ಅರ್ಥ-ವನ್ನು ವ್ಯಂಜನೆಯಿಂದಲೇ ತಿಳಿಸುತ್ತವೆ ಎಂದು ಒಪ್ಪಿರುವರು. ನೀಚ ಜಾತಿಯ ದೂತಿಯೊಡನೆ ನಾಯಕನು ಭೋಗಿಸಿದ್ದರಿಂದ ಅಧಮನೆನಿಸಿರುವನು. ಆದರೆ ಧೂತಿಯ ಅವಯಗಳಲ್ಲಿ ಶ್ರೀಗಂಧ ಮೊದಲಾದವು ಪೂರ್ತಿಯಾಗಿ ತೊಲಗಿರುವುದ-ರಿಂದ ನಾಯಕನು ಆಕೆಯೊಡನೆ ಭೋಗಿಸಿರುವನೆಂಬುದೇ ಸುಳ್ಳೆಂದು ತೋರುವುದ-ರಿಂದ ಅವನನ್ನು ಅಧಮನೆಂದು ಕರೆದದ್ದು ಸರಿಯೇ? ಎಂಬ ಸಂದೇಹವು ಬರುತ್ತದೆ. ಆದ್ದರಿಂದ ಅವನು ಆಕೆಯೊಡನೆ ಭೋಗಿಸಿದನೆಂಬುದು ಸುಳ್ಳಾಗಿ ತೋರುವುದ-ರಿಂದ ಅನುಮಾನಕ್ಕೆ ಇಲ್ಲಿ ಪ್ರಸಕ್ತಿಯಿಲ್ಲವೆಂದು ಮಹಿಮಭಟ್ಟನ ಅನುಮಾನವನ್ನು ದೋಷಿಸಲಾಗಿದೆ.

ಹೇತುವು ಎಲ್ಲೆಡೆಯಲ್ಲೂ ಅಭಾಸವೆನಿಸಿದ್ದರಿಂದ ವೇದಾಂತ ಮತದಲ್ಲಿ ಐದನೇಯ ಪ್ರಮಾಣವೆಂದು ಒಪ್ಪಿರುವ ಅರ್ಥಾಪತ್ತಿಯಿಂದ ವ್ಯಂಗ್ಯಾರ್ಥಗಳನ್ನು ತಿಳಿಯಬಹುದು ಎಂದರೆ ಇದನ್ನು ಸಹ ನಿರಾಕರಿಸಲಾಗಿದೆ. "ತಿಳಿಸಬೇಕಾದ್ದನ್ನು ತಿಳಿಸಲ್ಲಿಕ್ಕೆ ಒಂದು ಯುಕ್ತಿಯನ್ನು ಕಲ್ಪಿಸುವುದೇ ಅರ್ಥಾಪತ್ತಿ" ಎನಿಸಿದೆ. ಅರ್ಥಾಪತ್ತಿಯೂ ಸಹ ಹಿಂದೆ ಸಿದ್ಧವಾಗಿದ್ದ ವ್ಯತಿರೇಕ ವ್ಯಾಪ್ತಿಯನು ಆಶ್ರಯಿಸಿಕೊಂಡೆ ಪ್ರವರ್ತಿಸುತ್ತದೆ "ಯಾವನು ಬದುಕಿರುವನೋ ಅವನು ಎಲ್ಲಿಯಾದರೂ ಇರುತ್ತಾನೆ. ಇಲ್ಲಿ ಸಭೆಯಲ್ಲಿ ಇಲ್ಲದಿದ್ದರೂ ಚೈತ್ರನು ಬದುಕಿದ್ದಾನೆ." ಇಲ್ಲಿ ಇಲ್ಲದ ಚೈತ್ರನು ಬೇರೆ ಕಡೆ ಇದ್ದಾನೆ ಇಲ್ಲವಾದರೆ ಅವನು ಬದುಕಿರುವುದೇ ಅಸಂಭವವೆನಿಸೀತು. ಹೀಗೆ ವ್ಯತಿರೇಕ ವ್ಯಾಪ್ತಿಯ ಮೂಲಕವೇ ಅರ್ಥಾಪತ್ತಿಯು ಪ್ರವೇಶಿಸಲಿರುವುದು. ಇದು ಅನುಮಾನದಲ್ಲಿಯೇ ಸೇರಿರುವುದರಿಂದ ಬೇರೊಂದು ಪ್ರಮಾಣವೇ ಆಗುವುದಿಲ್ಲವೆಂದು ನೈಯಾಯಿಕರು ಹೇಳುತ್ತಾರೆ. ಆದ್ದ-ರಿಂದ ವಿಶ್ವನಾಥನು ಈ ದೃಷ್ಟಿಯಿಟ್ಟುಕೊಂಡು ಅನುಮನದೊಳಗೆ ಅರ್ಥಾಪತ್ತಿಯನ್ನು ಸೇರಿಸಿ ತಿಳಿಸಿದ್ದಾನೆ. ಆದರೆ ಇಲ್ಲಿ ವೇದಾಂತ ಮತವನು ಅನುಸರಿಸಿ ಅರ್ಥಾಪತ್ತಿಯನ್ನು ದೂಷಿಸಿದ್ದಾನೆ. 'ಶ್ಯೂನವಾಸಗೃಹಂ' ಎಂಬಲ್ಲಿ ಶೃಂಗಾರ ಮೊದಲಾದ ರಸಗಳ ಅರಿವು ಆಗಬೇಕಾದರೆ ಅದರಲ್ಲಿ ಆ ರಸಗಳ ಉಪಪಾದನವಿರಲೇಬೇಕೆಂದು ಅರ್ಥಾಪತ್ತಿಯನ್ನು ಕಲ್ಪಿಸುವುದಾದರೆ ರಸಗಳು ಸಹೃದಯರಿಗೆ ಆಸ್ವಾದನಕಾಲದಲ್ಲಿಯೇ ಹುಟ್ಟುವುದರಿಂದ ಹಿಂದೆ ಇದ್ದಿದ್ದರೆ ಅದನ್ನು ಪ್ರತಿಪಾದಿಸಬಹುದಾಗಿತ್ತು ಹಿಂದೆ ಇಲ್ಲದಿದ್ದ ಪ್ರಯುಕ್ತ

ವ್ಯತಿರೇಕವ್ಯಾಪ್ತಿಯು ಬರುವುದಿಲ್ಲ. ಆದ್ದರಿಂದ ಅರ್ಥಾಪತ್ತಿಯಿಂದ ರಸಾನುಭವವಾಗಲಾರದು ಹಾಗೆಯೇ ಸಂಕೇತ ಸ್ಮೃತಿಯಿಂದಲೂ ರಸಾನುಭವವಾಗುವುದಿಲ್ಲ.

ಅನುಮಾನ ಸಾಮಾಗ್ರಿಗಳಲ್ಲದಕಡೆ ವ್ಯಂಗ್ಯಾರ್ಥವನ್ನು ಹೇಗೆ ತಿಳಿಯಬೇಕೆಂಬುದಕ್ಕೆ ವ್ಯಕ್ತಿವಿವೇಕಕಾರನ ಮತವನ್ನು ದೂಷಿಸಿ, ಸರ್ವರಿಗೂ ಅನುಭವಗೋಚರವಾಗಿರುವ ಅರ್ಥವನ್ನು ಇಲ್ಲವೆಂದು ಹೇಳುವುದು ಕೇವಲ ಮೂರ್ಖತನವಲ್ಲದೇ ಸಹೃದಯತೆ ಎನಿಸುವುದಿಲ್ಲ. ಹೀಗೆ ಸರ್ವಾನುಭವಸಿದ್ಧವಾದ ರಸ, ಭಾವ ಮೊದಲಾದ ವ್ಯಂಗ್ಯಾರ್ಥವನ್ನು ಎಂದಿಗೂ ನಿರಾಕರಿಸುವುದಕ್ಕೆ ಆಗದೇ ಇರುವುದರಿಂದ ಆಯಾಯ ಶಬ್ದಗಳಿದ್ದರೆಯೇ ರಸ, ಭಾವ ಮೊದಲಾದ ವ್ಯಂಗ್ಯಾರ್ಥವೂ ತೋರುವುದಿಲ್ಲವೆಂಬ ನಿಯಮವಿರುವುದರಿಂದಲೂ, ಅಭಿಧ ಅನುಮಾನ ಮೊದಲಾದವುಗಳಿಂದ, ತಿಳಿಯದೇ ಇರುವುದರಿಂದ ನಾಲ್ಕನೆಯವೃತ್ತಿ ವ್ಯಂಜನೆಯನ್ನು ಅವಶ್ಯವಾಗಿ ಆಶ್ರಯಿಸಲೇಕೆಂಬುದು ಈ ಮೇಲಿನ ವಾದಗಳಿಂದ ಸ್ಪಷ್ಟಪಡಿಸಲಾಗಿದೆ. ವ್ಯಾಪ್ತಿ ಹೇತ್ವಾಭಾಸಗಳ ಅರಿವಿಲ್ಲದೆಯೇ ರಸ ಮೊದಲಾದ ವ್ಯಂಗ್ಯಾರ್ಥವನ್ನು ಭೋಧಿಸಲು ವ್ಯಂಜನಾವೃತ್ತಿಯೆ ಸಮರ್ಥವೆನಿಸಿದೆ. ವಸ್ತು ಅಲಂಕಾರವನ್ನು ಭೋಧಿಸಲು ವ್ಯಂಜನಾವೃತ್ತಿಯಿದ್ದರೂ ರಸಭಾವಗಳನ್ನು ಪ್ರಕಾಶಪಡಿಸಲು 'ರಸನೆ' ಎಂಬ ಐದನೆ ವೃತ್ತಿ ಬೇಕೆಂಬ ಅಭಿನವಗುಪ್ತಮತಾವಲಂಬಿಗಳು ಹೇಳುತ್ತಾರೆ. ಆದರೆ ವಸ್ತು, ಅಲಂಕಾರ, ರಸಾದಿಗಳು ವ್ಯಂಜನೆಯಿಂದಲೇ ತಿಳಿದು ಬರುವಾಗ ಬೇರೊಂದು ವೃತ್ತಿಯು ನಿರರ್ಥಕವೆನಿಸಿದೆ. ಇಲ್ಲಿಗೆ ರಸಾಧಿಗಳೆಲ್ಲವೂ [ರಸ, ಭಾವ, ಭಾವಾಭಾಸ, ಭಾವಸಂಧಿ, ಭಾವಪ್ರಶಮ, ಭಾವ ಶಬಲತೆ] ವ್ಯಂಗ್ಯವೆಂದು ಸ್ಪಷ್ಟಿಕರಿಸಲಾಗಿತು.

ಒಟ್ಟಿನಲ್ಲಿ ಹೇಳುವುದಾದರೆ ಅಭಿದಾವೃತ್ತಿ, ಲಕ್ಷಣಾವೃತ್ತಿ ಅನುಮಾನ, ಮೊದಲಾದವೆಲ್ಲಾ ಶಬ್ದದ ಅಥವಾ ಅರ್ಥದ ವ್ಯಂಜಕತ್ವಕ್ಕೆ ಸಹಾಯ ಮಾಡುತ್ತವೆ. [೫೪] "ಶಬ್ದಕ್ಕಿರುವುದು ಒಂದೇ ಅಭಿಧಾಶಕ್ತಿ, ಅರ್ಥಕ್ಕೆ ಮಾತ್ರ ಹೇತುತ್ವ ಸಲ್ಲುತ್ತದೆ. ಅವುಗಳಿಗೆ ವ್ಯಂಜಕತ್ವವೆಂಬುದು ಹೊಂದಿಕೊಳ್ಳುವುದಿಲ್ಲವೆಂದು ಸಮರ್ಥಿಸಿ. ಧ್ವನಿಯ ಲಕ್ಷಣದಲ್ಲಿ ಶಬ್ದ ಎಂಬುದರ ಪ್ರಯೋಗವು ವ್ಯರ್ಥವೆಂದು ಹೇಳಿ ಆ ಶಬ್ದಶಕ್ತಿಯ ಮೂಲದಿಂದ ಬೇರೊಂದು ಅರ್ಥದೆಡೆಗೆ ಪ್ರವೃತ್ತಿಯು ವಿಹಿತವಲ್ಲ" ಆದರೆ ಶಬ್ದವು ಅದರ ವಾಚ್ಯ ಪ್ರತಿಪಾದನೆಯ ಮೂಲಕ ಅನುಮಾಪಕವಾಗಬಹುದು ಎಂದು ಮಹಿಮಭಟ್ಟನು ಒಂದೆಡೆ ಒಪ್ಪಿದ್ದಾನೆ.[೫೫] ವ್ಯಂಜನಾವೃತ್ತಿಯು[೫೬] ಉಂಟೆಂಬ ತತ್ತ್ವವು ಕಾವ್ಯಮೀಮಾಂಸೆಯ ತಳಹದಿಯಾದರೂ, ಇದು ಮುಖ್ಯವಾಗಿ ದಾರ್ಶನಿಕರವಾದವಾಗಿದೆ. ಇಲ್ಲಿಗೆ ವಿಶ್ವನಾಥನು ಹೇಳಿರುವ ವ್ಯಂಜನಾ ವಿಚಾರವನ್ನು ಲಾಕ್ಷಣಿಕರ ಅಭಿಪ್ರಾಯದೊಂದಿಗೆ ವಿವೇಚಿಸಿ. ಮುಂದಿನ ಅಧ್ಯಾಯದಲ್ಲಿ ವಿಶ್ವನಾಥನು ಮಾಡಿರುವ ಕಾವ್ಯದ ಇನ್ನೆರಡು ಭೇದಗಳಾದ ದೃಶ್ಯ, ಶ್ರವ್ಯಕಾವ್ಯಗಳ ಬಗ್ಗೆ ವಿಮರ್ಶಿಸಲಾಗಿದೆ.

* * * *

## ಅಡಿ ಟಿಪ್ಪಣಿಗಳು

೧. ಆನಂದವರ್ಧನ, ಧ್ವನ್ಯಾಲೋಕ
೨. ಭಾಮಹ, ಕಾವ್ಯಲಂಕಾರಸಾರಸಂಗ್ರಹ
೩. ರುದ್ರಟ, ಕಾವ್ಯಲಂಕಾರಸಾರಸಂಗ್ರಹ
೪. ಧ್ವನ್ಯಾಲೋಕ, ಧ್ವನಿಕಾರಿಕೆಯ ವೃತ್ತಿ, [ಪು ೧೩೮, ೧೪೧–೧೪೨]
೫. ಧ್ವನ್ಯಾಲೋಕ, [೧, ೧೩]
೬. ಧ್ವನ್ಯಾಲೋಕ [ಪು. ೮೬]
೭. ಧ್ವನ್ಯಾಲೋಕ [ಪು ೫೨೯]
೮. ಸಾಹಿತ್ಯದರ್ಪಣ, [೩ನೆ ಪರಿಚ್ಛೇದ]
೯. ಜಗನ್ನಾಥ, ರಸಗಂಗಾಧರ [೧, ಆನನ, ಪು ೪, ೫]
೧೦. ಧ್ವನ್ಯಾ ಲೋಕ, [೩, ೪೩ವೃತ್ತಿ]
೧೧. ಮಮ್ಮಟ 'ಕಾವ್ಯಪ್ರಕಾಶ', [೧ನೇ ಉಲ್ಲಾಸ]
೧೨. ಜಗನ್ನಾತ ರಸಗಂಗಾಧರ, [೧ನೆ ಆನನ]
೧೩. 'ಪಂಪ ಭಾರತ', [೧೨೫, ೧೪]
೧೪. ಕುವೆಂಪು, ಕೊಳಲು [೧೯೫೮, ಪುಟ ೩೨]
೧೫. ಅಭಿಕಾತನಯದತ್ತ, ಮೂರ್ತಿ ಮತ್ತು ಕಾಮಕಸ್ತೂರಿ, [ಕವನ, ವಾರಿನೋಟ] ೧೯೪೬, ಕಾಮಕಸ್ತೂರಿ, ಪು ೧
೧೬. ಧ್ವನ್ಯಾಲೋಕ, [ಪು ೨೮೭]
೧೭. ಕುವೆಂಪು, 'ಪಕ್ಷಿಕಾಶಿ'
೧೮. ಅಂಬಿಕಾತನಯದತ್ತ', 'ಗರಿ', [ಅ೯೬೦, ಪು. ೫೬]
೧೯. 'ರನ್ನ'ನ, ಗದಾಯುದ್ಧ [೭–೨೨]
೨೦. 'ರನ್ನನ 'ಗದಾಯುದ್ದ' [೮–೨]

೨೧. [ಲಕ್ಷ್ಯೈಪು] ಯುದ್ಯಪಿ ವಿಭಾವಾನಾಮನುಭಾವಾನಾಂ ವ್ಯಬಿಚಾರಿಣಾಂ ಕೇವಾಲಾನಾಂ ಸ್ಥಿತಿಃ, ತಥಾ ಪ್ಯೇತೇಷಾಮ ಸುಧಾರಣತ್ವಮಿತ್ಯನ್ಯತಮದ್ಧಕ್ಷೇಪಕತ್ವೇ ಸತಿ ನಾಸ್ಯೈ ಕಾಂತಿಕತ್ವ ಮಿತಿ', ಕಾವ್ಯಪ್ರಕಾಶ, [೧೫, ೩೦]

೨೨. ಧ್ವನ್ಯಾಲೋಕ, [೨ನೆ ಉದ್ಯೋತ]

೨೩. ಆನಂದವರ್ಧನಾದಿಗಳು ಶಬ್ದ ಮತ್ತು ಅರ್ಥಶಕ್ತಿಮೂಲಧ್ವನಿ ಎಂದು ಎರಡು ವಿಭಾಗವನ್ನು ಹೇಳಿದ್ದಾರೆ.

೨೪. ಪಂಪಭಾರತ, [೧೦,೨೩]

೨೫. ಅನೇಕಾರ್ಥಗಳನ್ನೂ ಹೇಳಬಲ್ಲ ಶಬ್ದವನ್ನು ವಾಕ್ಯದಲ್ಲಿ ಪ್ರಯೋಗಿಸಿದಾಗ ಅದರ ಅರ್ಥವನ್ನು ನಿಯಮನ ಮಾಡತಕ್ಕದ್ದು. ಯಾವುದೆಂಬುದನ್ನು ಉತ್ತರವಾಗಿ ಮಮ್ಮಟನು ಈ ಕಾರಿಕೆಗಳನ್ನು ಉದಾಹರಿಸುತ್ತಾನೆ.

**ಸಂಯೋಗೋ ವಿಪ್ರಯೋಗಶ್ಚ ಸಾಹಚರ್ಯಂ ವಿರೋಧಿತಾ ।**
**ಅರ್ಥಃ ಪ್ರಕರಣಂ ಲಿಂಗಂ ಶಬ್ದಸ್ವಾನ್ಯಸ್ಯ ಸನ್ನಿಧಿಃ ॥**
**ಸಾಮರ್ಥ್ಯ ಮೌಚೀತೀ ದೇಶಃ ಕಾಲೋ ವ್ಯಕ್ತಿಃ ಸ್ವರಾದಯಃ ।**
**ಶಬ್ದಾರ್ಥಸ್ಯಾನವಚ್ಛೇದೇವಿಶೇಷಸ್ಮೃತಿ ಹೇತವಃ ॥**

[ಕಾವ್ಯಪ್ರಕಾಶ, ೨, ೧೪ ವೃತ್ತಿ]

೨೬. ಅಂಬಿಕಾತನಯದತ್ತರ, ನಾನು ಬಡವಿ ಎಂಬ ಕವನ.

೨೭. ಆಂಬಿಕಾತನಯದತ್ತರ 'ನಾನು ಬಡವಿ' ಎಂಬ ಕವನ.

೨೮. ಕಾಳಿದಾಸ, ಕುಮಾರಸಂಭವ [೬, ೮೪]

೨೯. ಗಾಥಾಸಪ್ತಶತಿ, ಪ್ರಾಕೃತಮೂಲದ ಸಂಸ್ಕೃತ ಚ್ಛಾಯೆ

೩೦. ಪದ್ಯವನ್ನು ತೀ.ನಂ ಶ್ರೀರವರು ಕನ್ನಡಕ್ಕೆ ಅನುಮೋದಿಸಿದ್ದಾರೆ.

೩೧. 'ಜನಪದ ಸಾಹಿತ್ಯ', [ಜೋಗಳದ ಹಾಡು]

೩೨. 'ಆನಂದವರ್ಧನನು ಸಂಲಕ್ಷ್ಯಕ್ರಮುವಾಲಧ್ವನಿಯುಲ್ಲಿ ಶಬ್ಧಶಕ್ತಿ, ಅರ್ಥಶಕ್ತಿಮೂಲಧ್ವನಿ ಎರಡು ಭೇದಗಳನ್ನು ಮಾತ್ರ ತಿಳಿಸಿದ್ದಾನೆ.

೩೩. ಶಿಶುಪಾಲವಧ, [೧೩ನೆ ಸರ್ಗ]

೩೪. ಧ್ವನ್ಯಾಲೋಕ, [೨, ೧೩]

೩೫. ಧ್ವನ್ಯಾಲೋಕ, [೩, ೩೪]

೩೬. ಧ್ವನ್ಯಾಲೋಕ, [ಪು, ೨೧೩]

೩೭. ಅಭಿನವಗುಪ್ತ, ಇದನ್ನೇ "ವಿವಾಹ ಪ್ರವೃತ್ತಾ ಭೃತ್ಯಾನು ಯಾಯಿ ರಾಜವತ್" ಎಂದು ಹೇಳಿದ್ದಾನೆ.

೩೮. ಸಾಹಿತ್ಯದರ್ಪಣ (೩ನೆ ಪರಿಚ್ಛೇದ)

**ಗುಣೀಭೂತವ್ಯಂಗ್ಯದ ಪ್ರಕಾರಗಳನ್ನು ಮಮ್ಮಟನು ಹೀಗೆ ಸಂಗ್ರಹಿಸಿದ್ದಾನೆ.**
**ಅಗೂಢಮಪರಸ್ಯಾಂಗ್ಯಂ ವಾಚ್ಯಸಿಧ್ಯಂಗಮಸ್ಫುಟಂ ।**
**ಸಂದಿಗ್ಧತುಲ್ಯಪ್ರಾಧಾನ್ಯೇ ಕಾಕ್ವಕ್ಷಿಪ್ತಮಸುಂದಂ ॥**
**ವ್ಯಂಗ್ಯಮೇವಂ ಗುಣೀಭೂತವ್ಯಂಗ್ಯನ್ಯಾಷ್ಟೌ ಭಿದಾಃ ಸ್ಮೃತಾಃ ।**
ಕಾವ್ಯಪ್ರಕಾಶ, [೫,೧-೨]

೩೯. ಆದಿಪುರಾಣ, [೩, ೧೪]

೪೦. ಪಂಪ ರಾಮಾಯಣ', [೯ -೧೧೮]

೪೧. ಕಾಕು' ಎಂದರೆ, ಭಾವಗೋಚರವಾಗುವಂತೆ ದನಿಯಲ್ಲಿ ತರುವ ಏರಳಿತ, ಉಚ್ಚಾರಣೆಯ "ಪಲುಕು"

೪೨. ಭೀಷ್ಮ ಪರ್ವ;, [೧-೩೪]

೪೩. ಮಹಾವೀರಚರಿತೆ, [೨ನೆ ಅಂಕ]

೪೪. ಸಾಹಿತ್ಯದರ್ಪಣ, [೪, ೧೪ರ ಕೆಳಗೆ]

೪೫. ಸಾಹಿತ್ಯದರ್ಪಣ, [೪ನೆ ಪರಿಚ್ಛೇದ]

೪೬. ಸಾಹಿತ್ಯದರ್ಪಣ, [೪ನೆ ಪರಿಚ್ಛೇದ]

೪೭. ಧ್ವನ್ಯಾಲೋಕ, [೪-೬]

೪೮. ಲಕ್ಷ್ಮೀಶ, ವಿರೂಪಾಕ್ಷ ಪಂಡಿತ, ರುದ್ರಭಟ್ಟ, ಷಡಕ್ಷರಿ ಇವರಲ್ಲಿ ಚಿತ್ರಕಾವ್ಯದ ಅನೇಕ ಉದಾಹರಣೆಗಳನ್ನು ಕಾಣಬಹುದಾಗಿದೆ.

೪೯. ಸಾಹಿತ್ಯದರ್ಪಣ, [೪.೧]

೫೦. ರಸ, ಭಾವ, ರಸಾಭಾಸ, ಭಾವಭಾಸ, ಭಾವಸಂಧಿ, ಪ್ರಶಮ, ಶಬಲತೆ, ಇವಿಷ್ಟು ರಸಾದಿಗಳಾಗಿವೆ.

೫೧. ಧ್ವನಿಕಾರ ಆನಂದವರ್ದನನ ಮತವಾಗಿದೆ.

೫೨. ಉದಯನಾಚಾರ್ಯ, ನ್ಯಾಯಕುಸುಮಾಂಜಲಿ

೫೩. ವ್ಯಕ್ತಿ ವಿವೇಕ, ಹರಿದಾಸ ಸಂಸ್ಕೃತ ಗ್ರಂಥಮಾಲಾ [೧೯೩೬, ಪು ೩೯]

೫೪. "ಕ್ವಚಿದನು ಮಾನೇನ ಅಭಿಪ್ರಾಯದೌ, ಕ್ವಚಿತ್ ಪ್ರತ್ಯಕ್ಷೇಣ ದೀಪಾಲೋಕಾದೌ

ಕ್ವಚಿತ್ ಕಾರಣೇನ ಗೀತಧ್ವನ್ಯಾದೌ ಕ್ವಚಿಚಭಿಧಯಾ ವಿವಕ್ಷಿತಾನ್ಯಪರವಾಚ್ಯದೌ ಕ್ವಚಿದ್ಗುಣವೃತ್ತ್ಯಾ ಅವಿವಕ್ಷಿತವಾಚ್ಯೇ ಅನುಗೃಹ್ಯಮಾಣಾಂ ವ್ಯಂಜಕಂ ದೃಷ್ಟಂ, ತತ ಏವ ತೇಭ್ಯಃ ಸರ್ವೇಭ್ಯೋ ವಿಲಕ್ಷಣಂ ಅಸ್ಯ ರೂಪಂ ಸಿಧ್ಯತಿ” [ಧ್ವನ್ಯಾಲೋಚನ, ಪು ೨೦೪]

೫೫ **ಶಬ್ದಪ್ರಯೋಗಃ ಪ್ರಾಯೇಣಾ ಪರಾರ್ಥಮುಪಯುಜ್ಯತೇ ?**

**ನಹಿತೇನವಿನಾ ಶಕ್ಯಯೋ ವ್ಯವಹಾರಯಿತುಂ ಪರಃ**

[ವ್ಯಕ್ತಿವಿವೇಕ, ೧, ೩೭]

೫೬ ವ್ಯಂಜನಾವೃತ್ತಿಯ ಚರ್ಚೆಯ ತಿಳಿಯಲು ಧ್ವನ್ಯಾಲೋಕ, [೩ನೆ ಉದ್ಯೋತ] ‘ಕಾವ್ಯಪ್ರಕಾಶ’, [೫ನೆ ಉಲ್ಲಾಸ] ಓದಬಹುದು.

# ಅಧ್ಯಾಯ – ೪

# ದೃಶ್ಯಶ್ರವ್ಯಕಾವ್ಯಗಳ ನಿರೂಪಣೆ

# ದೃಶ್ಯಶ್ರವ್ಯಕಾವ್ಯಗಳ ನಿರೂಪಣೆ

ವಿಶ್ವನಾಥನು ಮಾಡಿರುವ ಕಾವ್ಯಭೇದಗಳಲ್ಲಿ ಧ್ವನಿ ಗುಣೀಭೂತ ವ್ಯಂಗ್ಯ ಕಾವ್ಯಗಳನ್ನು ವಿಮರ್ಶಿಸಿ. ಇನ್ನೆರಡು ಭೇದಗಳಾದ ದೃಶ್ಯ ಶ್ರವ್ಯಕಾವ್ಯಗಳ ವಿಮರ್ಶೆಗೆ ಮೊದಲು ದೃಶ್ಯಶ್ರವ್ಯಕಾವ್ಯಗಳ ಹಿನ್ನೆಲೆಯನ್ನು ವಿವೇಚಿಸಲಾಗಿದೆ. 'ಭಾರತೀಯ ನಾಟ್ಯಶಾಸ್ತ್ರ'ವು ನಮಗೆ ದೊರೆಯುವ ನಾಟ್ಯಲಕ್ಷಣ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾಗಿದ್ದು ಇದರ ಕರ್ತೃ ಭರತ. ಈ ಭರತನ ಕಾಲ ಕ್ರಿ.ಶ ಎರಡು[೧] ಅಥವಾ ಮೂರು[೨] ಎಂಬ ಭಿನ್ನಾಭಿಪ್ರಾಯವಿದೆ. ನಾಟ್ಯಶಾಸ್ತ್ರವು ನಾಟಕದ ಉಗಮಕ್ಕೆ ಕಾರಣವೇನೆಂಬುದಕ್ಕೆ ಒಂದು ದಂತಕಥೆಯೊಡನೆ ಪ್ರಾರಂಭವಾಗುತ್ತದೆ. ಜನರು ರಾಗದ್ವೇಷ, ಈರ್ಷ್ಯೆ, ಅಸೂಯೆಗಳಿಗೆ ಒಳಗಾದಾಗ ದೇವತೆಗಳು ಅವರಿಗೆ ಮನರಂಜನೆಯನ್ನುಂಟುವುದರ ಮೂಲಕ ಇವುಗಳನ್ನು ಹೋಗಲಾಡಿಸುವ ಒಂದು ಸಾಧನಕ್ಕಾಗಿ ಬ್ರಹ್ಮನನ್ನು ಪ್ರಾರ್ಥಿಸಿದ್ದಾಗ ಆಗ ಬ್ರಹ್ಮ ನಾಲ್ಕು ವೇದಗಳಿಂದ ಒಂದೊಂದು ಅಂಶವನ್ನು ತೆಗೆದು ಅಂದರೆ ಋಗ್ವೇದದಿಂದ ಭಾಷೆಯನ್ನು, ಸಾಮವೇದದಿಂದ ಗೀತವನ್ನು, ಯಜುರ್ವೆದದಿಂದ ಅಭಿನಯವನ್ನು ಅಥರ್ವ ವೇದದಿಂದ ರಸಗಳನ್ನು ಆಯ್ದುಕೊಂಡು ನಾಟ್ಯವೇದವೆಂಬ ಐದನೆಯ ವೇದವನ್ನು ಸೃಷ್ಟಿಸುವಂತೆ ಭರತನಿಗೆ ಭೋಧಿಸಿದನು ಎಂಬ ಕಥೆಯಿದೆ. ಭರತನ ನಾಟ್ಯಶಾಸ್ತ್ರವು ಮೂವತ್ತಾರು ಅಧ್ಯಾಯವನ್ನೊಳಗೊಂಡಿದೆ. ಮನರಂಜನೆಯ ಜೊತೆಗೆ ಮನಸ್ಸನ್ನು ಉದಾತ್ತಗೊಳಿಸುವ ನಾಟಕದ ಉದ್ದೇಶವನ್ನು ಇದು ಸೂಚಿಸುತ್ತದೆ. ಎರಡನೆ ಅಧ್ಯಾಯಕ್ಕೆ ಸಂಬಂಧಿಸಿದಂತೆ ನಾಟ್ಯಮಂಟಪ, ಪ್ರೇಕ್ಷಗೃಹಗಳ ನಿರ್ಮಾಣವನ್ನೂ, ಮೂರನೇ ಅಧ್ಯಾಯವು ಮಹಾದೇವ, ಬ್ರಹ್ಮ, ವಿಷ್ಣು, ಮೊದಲಾದ ದೇವತೆಗಳ ಉಪಾಸನೆಯನ್ನು ವಿವರಿಸುತ್ತದೆ. ನಾಲ್ಕನೆ ಅಧ್ಯಾಯದಲ್ಲಿ 'ಅಮೃತಮಂಥನ' ಮತ್ತು 'ತ್ರಿಪುರದಾಹ' ಈ ನಾಟಕ ಪ್ರದರ್ಶನದ ವಿವರಗಳು ಬರುತ್ತವೆ. ಐದನೆಯದರಲ್ಲಿ ಪೂರ್ವರಂಗ, ನಾಂದಿ, ಧೃವ, ಪ್ರಸ್ತಾನಾದಿಗಳ ವಿವರಗಳು, ಆರನೆಯ ಅಧ್ಯಾಯದಲ್ಲಿ ನಾಟಕಕ್ಕೆ ಮುಖ್ಯ ಉದ್ದೇಶವಾದ ರಸದ ವಿಚಾರ ಎಂಟು ರಸಗಳು ಸ್ಥಾಯಿಭಾವಗಳು, ಸಾತ್ವಿಕ ಭಾವಗಳು, ಮೂವತ್ತಮೂರು ವ್ಯಭಿಚಾರಭಾವಗಳು ಇತ್ಯಾದಿಗಳ ವಿವರಣೆ ನಂತರ ನಾಲ್ಕು ಬಗೆಯ ಅಭಿನಯ [ಆಂಗಿಕ, ವಾಚಿಕ, ಆಹಾರ್ಯಾ, ಸ್ವಾತಿ–ಕ] ಎರಡು ಬಗೆಯ ಧರ್ಮಿ [ಲೋಕಧರ್ಮಿ, ನಾಟ್ಯಧರ್ಮಿ] ನಾಲ್ಕು ವೃತಿಗಳು [ಭಾರತಿ, ಸಾತ್ವಕಿ, ಕೈಶಿಕೀ, ಆರಭಟೀ] ನಾಲ್ಕು ಪ್ರವೃತ್ತಿಗಳು [ಆವಂತಿ, ದಾಕ್ಷಿಣಾತ್ಯ,

ಓಡ್ರಮಾಗಧಿ, ಪಾಂಚಾಲೀ] ಎರಡು ಸಿದ್ಧಿಗಳು [ದೈವೀ, ಮಾನುಷೀ] ಷಡ್ಜ, ಋಷಭಾದಿ ಸಪ್ತಸ್ವರಗಳು, ನಾಲ್ಕು ಬಗೆಯ ವಾದ್ಯಗಳು [ತತ್ರ, ಅವನದ್ಧ, ಘನ, ಸುಷಿರ] ಹದಿನಾರು, ಹದಿನೇಳನೆಅಧ್ಯಾಯದಲ್ಲಿ ಛಂದಸ್ಸಿನ ನಿರೂಪಣೆ, ನಾಟಕದಲ್ಲಿ ಬರುವ ವೃತ್ತಗಳ ಲಕ್ಷಣ, ಸಮ, ವಿಷಮ ವೃತ್ತಗಳು, ಆರ್ಯಾವೃತ್ತಗಳ ಮೊದಲಾದ ವಿವರಣೆ, ಕಾವ್ಯದಲ್ಲಿ ಬರುವ ಮೂವತ್ತಾರು ಲಕ್ಷಣಗಳು ಭೂಷಣಂ, ಅಕ್ಷರ ಸಂಘಾತ, ಶೋಭಾ, ಉದಾಹರಣ, ಹೇತು, ಸಂಶಯ, ದೃಷ್ಟಾಂತ , ಪ್ರಾಪ್ತಿ ಇತ್ಯಾದಿ ಲಕ್ಷಣಗಳು ನಾಟಕದಲ್ಲಿ ಅಳಪಡಿಸುವ ಬಗ್ಗೆ ಕುರಿತ ವಿವೇಚನೆ ಇವು ಭರತನಲ್ಲಿ ಅಲಂಕಾರಗಳಿಗಿಂತ ಹೆಚ್ಚು ಪ್ರತಿಪಾದಿತವಾಗಿದೆ. ನಂತರ ಬಂದ ಅಲಂಕಾರಿಕರು ಇವುಗಳನ್ನು ಗುಣ ಅಲಂಕಾರಗಳಲ್ಲಿ ಸಮಾವೇಶಗೊಳಿಸಿದ್ದಾರೆ. ಉಪಮಾ[೩], ರೂಪಕ, ದೀಪಕ, ಮತ್ತು ಯಮಕ ನಾಲ್ಕು ಅಲಂಕಾರಗಳು, ಗೂಢಾರ್ಥ, ಅರ್ಥಾಂತರ, ಅರ್ಥಹೀನ ಇತ್ಯಾದಿ ಹತ್ತು ದೋಷಗಳು, ಶ್ಲೇಷ[೪], ಪ್ರಸಾದ, ಸಮತಾ ಇತ್ಯಾದಿ ಹತ್ತುಗುಣಗಳು ಇವಿಷ್ಟು ನಾಟ್ಯಶಾಸ್ತ್ರದ ಪ್ರಮುಖ ವಿಷಯಗಳಾಗಿವೆ. ಇನ್ನೂ ನಾಟ್ಯಶಾಸ್ತ್ರದಲ್ಲಿ ನಾಟಕವೆಂದರೇನೆಂಬುದನ್ನು ಭರತನು ಈ ರೀತಿ ಹೇಳಿದ್ದಾನೆ.

**ನೈಕಾತ್ತತೋಽತ್ರ ಭವತಾಂ ದೇವಾನಾಂ ಚಾತ್ರ ಭಾವನಂ ।**
**ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಂ[೫] ॥**

ಈ ಪ್ರಪಂಚದಲ್ಲಿ ಕೇವಲ ದೇವತೆಗಳೇ ಇಲ್ಲ, ಅಂತೆಯೇ ಕೇವಲ ರಾಕ್ಷಸರೂ ಇಲ್ಲ ಅನೇಕ ಮನೋಧರ್ಮಗಳಿಂದ ಕೂಡಿದ ಅನೇಕ ಹಂತಗಳ ಮಾನವ ಸಮುದಾಯದ ಸಂಭಾಷಣೆಯ ರಂಗ ಇದು ನಾಟಕ ಅವರೆಲ್ಲರ 'ಭಾವಾನು ಕೀರ್ತನ', ಇಲ್ಲಿ 'ಅನುಕೀರ್ತನ' ಎಂದರೆ ಯಥಾವತ್ತಾದ ಅನುಕರಣೆಯಲ್ಲ. ಅಭಿನವಗುಪ್ತ ಇದಕ್ಕೆ ವ್ಯಾಖ್ಯಾನವನ್ನು ಬರೆಯುತ್ತಾ 'ಅನುಕಾರ' ಎಂದರೆ 'ತತ್ ಸದೃಶವಾದುದು' ಎಂದಲ್ಲ, ಒಂದು ರೀತಿಯ ಸ್ವತಂತ್ರ ಸೃಷ್ಟಿ 'ಅನುವ್ಯವಸಾಯ' ಎಂದು ಅರ್ಥವತ್ತಾಗಿ ಹೇಳುತ್ತಾನೆ.

**ಯೋಽಯಂ ಸ್ವಭಾವೋ ಲೋಕಸ್ಯ ಸುಖದುಃಖಸಮನ್ವಿತಃ ।**
**ಸೋಽಸಂಗಾದ್ಯಭಿನಯೋಪೇತೋ ನಾಟ್ಯಮಿತ್ಯಭಿದೀಯತೇ[೬] ॥**

"ಸುಖದುಃಖ ಸಮನ್ವಿತವಾದ ಮಾನವ ಸ್ವಭಾವವನ್ನು ಆಂಗಿಕಾದಿ [ಆಂಗಿಕ, ವಾಚಿಕ, ಸಾತ್ವಿಕ, ಆಹಾರ್ಯ] ಈ ಚತುರ್ವಿಧ ಅಬಿನಯಗಳಿಂದ ವ್ಯಕ್ತಪಡಿಸುವುದೇ ನಾಟಕವೆನಿಸಿದೆ".ಲೋಕಸ್ವಭಾವ ವೈಯುಕ್ತಿಕವಾಗಿ ಬೇರೆಬೇರೆಯಾದದ್ದು ಸುಖದುಃಖಗಳಿಂದ ಕೂಡಿದ್ದು. ಈ ನಾನಾ ಸ್ವಭಾವಗಳನ್ನು ಅಭಿನಯಗಳಿಂದ ಅನುಕರಿಸುವುದೆ ನಾಟಕ ಎಂದಿದ್ದಾನೆ.

**ನಾನಾ ಭಾವೋಪಸಂಪನ್ನಂ ನಾನಾವಸ್ಥಾಂತರಾತ್ಮಕಂ ।**
**ಲೋಕವೃತ್ತಾನುಕರಣಂ ನಾಟ್ಯಮೇತನ್ಮಯಾ ಕೃತಂ[೭] ॥**

ನಾನಾ ಭಾವಗಳಿಂದ ಕೂಡಿದ, ನಾನಾ ಅವಸ್ಥೆ ಅಂದರೆ ಸ್ಥಿತಿ ಅಥ–ವಾ ಸನ್ನಿವೇಶಗಳಲ್ಲಿರುವ ಲೋಕವೃತ್ತದ ಅನುಕರಣೆಯನ್ನಾಗಿ ಈ ನಾಟಕವನ್ನು ತಾನು ಸೃಷ್ಟಿಸಿದ್ದುದಾಗಿ ಭರತನು ಸ್ಪಷ್ಟವಾಗಿ ಹೇಳುತ್ತಾನೆ. ಭರತ ಹೇಳಿದ 'ನಾನಾವಸ್ಥಾಂತರಾತ್ಮಕಂ ಲೋಕವೃತ್ತಾನುಕರಣಂ' ಎಂಬ ಮಾತುಗಳಿಂದ ಪ್ರೇ–ರಿತನಾಗಿ ಧನಂಜನಯನು ಅವಸ್ಥಾನುತೃತಿರ್ನಾಟ್ಯಂ[೮]" ಎಂಬ ಸರಳ ಸೂತ್ರವೊಂದನ್ನು ನಿರೂಪಿಸಿದ್ದಾನೆ. ಧನಂಜಯನ ಈ ಸೂತ್ರಕ್ಕೆ ಧನಿಕನು ಈ ರೀತಿಯಾದ ವ್ಯಾಖ್ಯಾನವನ್ನು ಹೇಳಿದ್ದಾನೆ. "ವಿವಿಧ ಧರ್ಮಗಳ, ವಿವಿಧ ಅವಸ್ಥೆಗಳ ಅಂದರೆ ಪಾತ್ರಗಳ ಸ್ಥಿತಿಗಳನ್ನು ಅನುಕರಿಸುವುದೇ ನಾಟಕ[೯]" ಈ ಅಭಿಪ್ರಾಯವನ್ನು ಹೇಮಚಂದ್ರ ಶಾರದಾತನಯ ಹೇಳಿದ್ದಾರೆ[೧೦]. ಅಭಿನವಗುಪ್ತನ 'ಅಭಿನವಭಾರತಿ' ಒಳಿತು ಕೆಡಕುಗಳ ಅನುಕರಣೆಯಿಂದುಂಟಾಗುವ ಸಂಘರ್ಷವನ್ನು ನಾಟಕದ ಕೇಂದ್ರಬಿಂದುವಾಗಿ ಎತ್ತಿ ಹಿಡಿಯುತ್ತದೆ. ಮಹಾಕವಿ ಕಾಳಿದಾಸ ತನ್ನ 'ಮಾಲಿವಿಕಾಗ್ನಿಮಿತ್ರ' ನಾಟಕದ ಪ್ರಾರಂಭದಲ್ಲಿ ನಾಟಕದ ಸ್ವರೂಪವನ್ನು ಸೂಚಿಸುವಾಗ ಭರತನ 'ಲೋಕವೃತ್ತಾನುಕರ–ಣಂ' ಎಂಬ ಮಾತಿನಿಂದ ಪ್ರೇರಿತನಾಗಿ ಈ ರೀತಿ ಹೇಳಿದ್ದಾನೆ.

**ತ್ರೈಗುಣ್ಯೋದ್ಭವಮತ್ರ ಲೋಕಚರಿತಂ ನಾನಾರಸಂ ದೃಶ್ಯತೆ ।**
**ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ [೧೧]॥**

ಇಲ್ಲಿ ಲೋಕಚರಿತ ಎಂಬ ಮಾತು ನಾಟಕವು ಲೋಕಜೀವನದ 'ಅನುಕರಣೆ' ಎಂಬುದನ್ನು ಹೇಳುತ್ತದೆ. ವಿಭಿನ್ನ ರುಚಿಯ ಜನಗಳಿಗೆ ಆಸ್ವಾದ್ಯವಾಗುವಂತಹ ಏಕ–ರೀತಿಯ ಸಮಾರಾಧನೆಗೆ ಈ ಮಾಧ್ಯಮ ಸಮರ್ಥವಾಗುತ್ತದೆಂದೂ ಕಾಳಿದಾಸನು ಹೇಳುವುದರ ಮೂಲಕ ಭರತನ ವಿಚಾರಧಾರೆಯನ್ನೇ ಎತ್ತಿ ಹಿಡಿದಿದ್ದಾನೆ.

ಭರತ ಎತ್ತಿಕೊಂಡಿದ್ದು ನಾಟಕಕಲೆಯ ಸಮಗ್ರವಿವೇಚನೆ ಅದರ ಒಂದು ಅಂಗವಾಗಿ ಸಾಹಿತ್ಯ ಭಾಗದ ಪರಿಶೀಲನೆಯೂ ಬರುತ್ತದೆ ಆದ್ದರಿಂದ ಒಟ್ಟು ಕಾವ್ಯವೆಂದರೇನೆಂಬುದನ್ನು ಸೂತ್ರೀಕರಿಸುವ ಅಗತ್ಯ ಅವನಿಗೆ ಬರಲ್ಲಿಲ್ಲ. ನಾಟಕದ ಪರಮಪ್ರಯೋಜನವೇನೆಂಬುದನ್ನು ಹೇಳುತ್ತಾ 'ರಸಸೂತ್ರ'ವನ್ನು ಆತ ರಚಿಸಿದ್ದಾನೆ ಮಂದೆ ಅದು ಇಡೀ ಕಾವ್ಯ ಸಮುದಾಯಕ್ಕೆಲ್ಲಾ ಅನ್ವಯಿಸುವಂತಾಗಿ ವಿವಿಧ ವ್ಯಾಖ್ಯಾನಗಳಿಗೆ ಕಾರಣವಾಯಿತು. ಅಲ್ಲದೇ ನಾಟಕವೆಂದರೇನೆಂಬುದಕ್ಕೂ ಆತನದು ಸೂತ್ರಪ್ರಾಯವಾದ ಮಾತೊಂದಿದೆ "ತ್ರೈಲೋಕಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಂ" ಎಂಬ ಈ ಸೂತ್ರ ಅಭಿನವಗುಪ್ತನ ವ್ಯಾಖ್ಯಾನದಿಂದ ವ್ಯಾಪಕವಾದ ಅರ್ಥವನ್ನು ಪಡೆದು ಕಾವ್ಯಲಕ್ಷಣವನ್ನು ಒಳಗೊಳ್ಳುವಂತಾಯಿತು. ಭರತನ 'ನಾಟ್ಯಶಾಸ್ತ್ರ'ವು ಮೂವತ್ತಾರು ಅಧ್ಯಾಯನ ವನ್ನೊಳಗೊಂಡಿದ್ದು ಭಾರತೀಯ ನಾಟ್ಯ, ನಾಟಕ ಮತ್ತು ಸಂಗಿತಗಳ ವಿಶ್ವಕೋಶವಾಗಿದೆ. ಭರತನಲ್ಲಿ ಕಾಣುವುದು ಪರಿಣತ ಸ್ಥಿತಿಯಲ್ಲ, ಮುಂದಿನ ಸಾಹಿತ್ಯ

ಬೆಳವಣಿಗೆಗೆ ಕಾರಣವಾಗುವ ಪ್ರೇರಕಸ್ಥಿತಿಯಾಯಿತು. ನಾಟ್ಯಶಾಸ್ತ್ರವು ಕೇವಲ ನಾಟ್ಯಕ್ಕೆ ಸೀಮಿತವಾಗಿರದೇ ಅಲಂಕಾರಶಾಸ್ತ್ರದ ಮುಂದಿನ ಬೆಳವಣಿಗೆಗೆ ಕಾರಣವಾಗುವ ಎಲ್ಲ ಪರಿಕರಗಳೂ ನಾಲ್ಕು ಅಧ್ಯಾಯಗಳಲ್ಲಿ ಸೂಚಿತವಾಗಿರುವುದನ್ನು ನಾವು ಕಾಣಬಹುದಾಗಿದೆ. ಆದ್ದರಿಂದಲೇ ಭರತನನ್ನು ಅಲಂಕಾರಶಾಸ್ತ್ರದ ಪಿತಾಮಹ ಆದಿಅಲಂಕಾರಿಕನೆನ್ನಲಾಗಿದೆ.

ಕಾವ್ಯಕ್ಕೆ ಸಂಬಂಧಿಸಿದಂತೆ 'ವಾಲ್ಮೀಕಿರಾಮಾಯಣ'ವನ್ನು ಸಂಸ್ಕೃತದ ಆದಿಕಾವ್ಯವೆಂದು ಕರೆಯಲಾಗಿದೆ. ಆದರೆ ಇದಕ್ಕೆ ಮುಂಚೆಯೇ ಸಂಸ್ಕೃತ ಕಾವ್ಯದ ರಚನೆ ಆರಂಭವಾಯಿತೆನ್ನಬಹುದು. ಆರ್ಯರ ಆದಿಗ್ರಂಥವಾದ ವೇದ ಸಂಹಿತೆಯಲ್ಲಿ ಹಲವು ಸೂಕ್ತಗಳು, ಉಪನಿಷತ್ತುಗಳಲ್ಲಿ ಹಲವು ಭಾಗಗಳು ಉತ್ತಮ ಕಾವ್ಯ ಅವುಗಳಿಂದ ಲೌಕಿಕ ಜ್ಞಾನವನ್ನು ಪಡೆಯಲಿ ಬಿಡಲಿ, ಅಲ್ಲಿಯ ಉಕ್ತಿಸೌಂದರ್ಯವನ್ನೇ ಸವಿಯುವುದು ಸಾಧ್ಯ ಲೌಕಿಕ ಸಾಹಿತ್ಯದಲ್ಲಿಕೂಡ "ಆದಿಕವಿ"ಗೂ ಹಿಂದೆಯೇ ಕವಿಗಳಿದ್ದಿರಬೇಕು ರಾಮಾಯಣ ಹುಟ್ಟಿದಿಂದೀಚೆಗಂತೂ ಸಂಸ್ಕೃತ ಕಾವ್ಯವು ಸರ್ವತೋಮುಖವಾಗಿ ಬೆಳೆಯಿತು ಪತಂಜಲಿಯ ಕಾಲಕ್ಕೆ [೧೨] ವಾರರುಚಕಾವ್ಯವೊಂದು ಇದ್ದಂತೆ ಸೂಚನೆಯಿದೆ ನೀತಿ ಶೃಂಗಾರ ವೈರಾಗ್ಯಗಳನ್ನು ಪ್ರತಿಪಾದಿಸುವ ಪದ್ಯಖಂಡಗಳನ್ನು ಪತಂಜಲಿ ತನ್ನ 'ಮಹಾಭಾಷ್ಯ'ದಲ್ಲಿ ಉದಾಹರಿಸಿದ್ದಾನೆ[೧೩]. 'ಉಪಮೆ'ಯ ಪ್ರಸ್ತಾಪವು ಯಾಸ್ಕನ ನಿರುಕ್ತದಲ್ಲೂ ಪಾಣಿಯ 'ಆಷ್ಟಾಧ್ಯಾಯಿಯಲ್ಲೂ ಪ್ರಾಸಂಗಿಕವಾಗಿ ಬಂದಿದ್ದರೂ ಇಷ್ಟು ಮಾತ್ರದಿಂದ, ಆ ವೇಳೆಗೆ ಅಲಂಕಾರಶಾಸ್ತ್ರವೇ ಅವಿರ್ಭವಿಸಿದ್ದಿತ್ತೆಂದು ಹೇಳಲು ಸಾಧ್ಯವಿಲ್ಲ[೧೪]. ರಾಜಶೇಖರನು[೧೫] ತನ್ನ ಕಾವ್ಯಮೀಮಾಂಸೆಯಲ್ಲಿ ಇದರ ಉಗಮವನ್ನು ಕುರಿತು ಪೌರಾಣಿಕವಾದ ಒಂದು ಕಥೆಯನ್ನು ಕೊಡುತ್ತಾನೆ ಅದರ ಪ್ರಕಾರ ಶಿವನು ಬ್ರಹ್ಮ ವಿಷ್ಣು ಮೊದಲಾದ ಅರವತ್ತನಾಲ್ಕು ಜನ ಶಿಷ್ಯರಿಗೆ ಇದನ್ನು ಉಪದೇಶ ಮಾಡಿದ ಅದನ್ನು ಬ್ರಹ್ಮ ಮಾನಸ ಪುತ್ರರಾದ ತನ್ನ ಶಿಷ್ಯರಲ್ಲಿ ಸರಸ್ವತಿಯ ಪುತ್ರನಾದ ಕಾವ್ಯ ಪುರುಷ ಎನ್ನುವವನೂಬ್ಬನಿದ್ದ ಅವನು ಹದಿನೆಂಟು ಅಧಿಕರಣಗಳುಳ್ಳ ಈ ಕಾವ್ಯಶಾಸ್ತ್ರವನ್ನು ತನ್ನ ಶಿಷ್ಯರಿಗೆ ವಿಸ್ತಾರವಾಗಿ ಹೇಳಿದ ಅದರ ಒಂದೊಂದು ವಿಭಾಗಕ್ಕೂ ಒಬ್ಬೊಬ್ಬ ಪ್ರಾಚೀನಾಚಾರ್ಯನ ಹೆಸರನ್ನು ಈ ರೀತಿ ಕೊಟ್ಟಿದ್ದಾನೆ. "ಕವಿ ರಹಸ್ಯವನ್ನು ನಿರೂಪಿಸಿದನು, ಶಬ್ದಾರ್ಥ ವಿಚಾರಕ್ಕೆ ಕರ್ತೃ ಉಕ್ತಿಗರ್ಭ, ರೀತಿ ನಿರ್ಣಯಕ್ಕೆ ಸುವರ್ಣನಾಭ, ಅನುಪ್ರಾಸ, ಯಮಕ, ಚಿತ್ರ (ಬಂದ), ಶಬ್ದಶ್ಲೇಷಗಳೆಂಬ ಶಬ್ದಾಶಲಂಕಾರ ವಿಭಾಗಗಳಿಗೆ ಕ್ರಮವಾಗಿ ಪ್ರಚೇತಾಯನ, ಚಿತ್ರಾಂಗದ ಮತ್ತು ಶ್ಲೇಷ, ವಾಸ್ತವ, ಔಪಮ್ಯ ಅತಿಶಯ ಅರ್ಥಶ್ಲೇಷಗಳೆಂಬ ಅರ್ಥಾಲಂಕಾರ ವಿಭಾಗಗಳಿಗೆ ಕ್ರಮವಾಗಿ ಪುಲಸ್ತ್ಯ, ಔಪಕಾಯನ, ಪಾರಾಶರ ಮತ್ತು ಉತಥ್ಯ, ಉಭಯಾಲಂಕಾರ ವಿಚಾರಕ್ಕೆ ಕುಬೇರ, ನಾಗರಿಕನಿಗೆ ಉಚಿತವಾದ ವಿನೋದಗಳ ವಿಚಾರಕ್ಕೆ ಕಾಮದೇವ, ನಾಟಕ ನಿರೂಪಣೆಗೆ ಭರತ, ರಸಕ್ಕೆ ನಂದಿಕೇಶ್ವರ, ದೋಷ ಪ್ರಕರಣಕ್ಕೆ ಧೀಷಣ,

ಗುಣಕ್ಕೆ ಉಪಮನ್ಯು, ಯಂತ್ರಮಂತ್ರೋಪಾಸನಾದಿ ವಿಚಾರಕ್ಕೆ ಕುಚಮಾರ ಹೀಗೆ ಆ ಬಳಿಕ ಅವರು ತಮ್ಮ ತಮ್ಮ ಶಾಸ್ತ್ರಗಳನ್ನು ಬೇರೆ ಬೇರೆಯಾಗಿ ವಿರಚಿಸಿದರು[೧೬]" ಎಂಬ ರಾಜಶೇಖರನ [೧೭] ಈ ಕಥೆಯು ಕಾಲ್ಪನಿಕವಾದರು ಆತ ಕೂಡುವ ಹೆಸರುಗಳಲ್ಲಿ ಕೆಲವಾದರೂ ಐತಿಹಾಸಿಕ ಇರಬಹುದೇ ಎಂಬ ಸಂದೇಹ ಬರುತ್ತದೆ ಉದಾಹರಣೆಗೆ ಭರತನ ಹೆಸರು ಅಲ್ಲಿ ಬರುತ್ತದೆ. ಅಲ್ಲದೇ ಆತ ಹೇಳುವ ಸುವರ್ಣನಾಭ ಮತ್ತು ಕುಚಮಾರ ಈ ಹೆಸರುಗಳನ್ನು ಕಾಮಸೂತ್ರಕಾರನೂ ಗೌರವದಿಂದ ಉಲ್ಲೇಖಿಸಿದ್ದಾನೆ. ಪಾಣಿನಿಯ ಕಾಲಕ್ಕಾಗಲೇ[೧೮] ಶಿಲಾಲಿ ಕೃಶಾಶ್ವ ಎಂಬುವರ ನಟಸೂತ್ರಗಳಿದ್ದುವೆಂಬುದು ತಿಳಿದುಬರುತ್ತದೆ. ಆದರೆ ಇವೆಲ್ಲಾ ಕಾಲಗರ್ಭದಲ್ಲಿ ಅಡಗಿ ಹೋಗಿ ನಾಮಮಾತ್ರ ಉಳಿದಿವೆ. ಇಲ್ಲಿಗೆ ಕಾವಶಾಸ್ತ್ರಕ್ಕೆ ಸಂಬಂಧಿಸಿದಂತೆ ಅದರ ಹಿನ್ನೆಲೆಯೇನೆಂಬುದರ ಕುರಿತು ವಿವೇಚಿಸಿ. ಈಗ ವಿಶ್ವನಾಥನು ನಿರೂಪಿಸಿರುವ ದೃಶ್ಯ ಶ್ರವ್ಯಕಾವ್ಯದ ಬಗ್ಗೆ ಪರಾಮರ್ಶಿಸಲಾಗಿದೆ.

## ೧. ದೃಶ್ಯಕಾವ್ಯ

ಅಭಿನಯಕ್ಕೆ ಯೋಗ್ಯವಾದುದು ದೃಶ್ಯಕಾವ್ಯವೆನಿಸಿದೆ. ಈ ದೃಶ್ಯಕಾವ್ಯವು ಕಣ್ಣಿನಿಂದ ನೋಡಿ ಅನುಭವಿಸುವಂತಹದ್ದಾಗಿದೆ ಕಿವಿಯಿಂದ ಕೇಳಿ ತಿಳಿಯುವಂತಹುದೇ ಶ್ರವ್ಯಕಾವ್ಯ ಶ್ರವ್ಯಕಾವ್ಯದಲ್ಲಿ ನಟರು ಇಲ್ಲದ ಪ್ರಯುಕ್ತ ಇದನ್ನು ಅಭಿನಯಿಸಲಾಗುವುದಿಲ್ಲ ಶ್ರವ್ಯಕಾವ್ಯವನ್ನು ಮುಂದೆ ವಿವೇಚಿಸಲಾಗುವುದರಿಂದ ಈಗ ದೃಶ್ಯಕಾವ್ಯದ ಬಗ್ಗೆ ವಿವೇಚಿಸಲಾಗಿದೆ. ದೃಶ್ಯಕಾವ್ಯಗಳನ್ನು ಅಭಿನೇಯ ಮತ್ತು ರೂಪಕಗಳೆಂದು ಕರೆಯಲಾಗಿದೆ. ಅಭಿನೇಯವೆಂದರೆ ರಾಮ ಮೊದಲಾದ ನಾಯಕರ ಸ್ವರೂಪಗಳನ್ನು ಅನುಕರಣ ಮಾಡುವುದೇ ಅಭಿನೇಯವೆನಿಸಿದೆ.

**ಭವೇದಭಿನವೋಽವಸ್ಥಾನುಕಾರಃ ಸ ಚತುರ್ವಿಧಃ ।**
**ಆಂಗಿಕೋ ವಾಚಿಕಶ್ಚೈವಮಾಹರ್ಯಃ ಸಾತ್ತ್ವಿಕಸ್ತಥಾ[೧೯] ॥**

ಕೈ, ಕಣ್ಣು ಮೊದಲಾದ ಅವಯವಗಳ ಚಲನೆಯಿಂದ ಅಭಿನಯಿಸುವುದು 'ಆಂಗಿಕ'ವೆನಿಸಿದೆ. ಮಾತಿನಿಂದ ಅಭಿನಯಿಸುವುದು 'ವಾಚಿಕ'ವೆನಿಸಿದೆಯಾವುದಾದರೂ ವಸ್ತುವನ್ನು ತರುವುದು ಮೊದಲಾದ್ದನ್ನು ಅಭಿನಯಿಸುವುದು 'ಆಹಾರ್ಯ'ವೆನಿಸಿದೆ. ಬೆವರು ಸುರಿಸುವುದು. ಮೊದಲಾದ ಸ್ವಾತಿಕಭಾವಗಳನ್ನು [೨೦] ಪ್ರಕಟಿಸುವುದು 'ಸಾತ್ವಿಕಾಭಿನಯ' ವೆನಿಸಿದ್ದು, ಒಟ್ಟು ನಾಲ್ಕು ವಿಧಗಳಾಗಿವೆ. ಆಂಗಿಕ, ಆಹರ್ಯ, ಸಾತ್ವಿಕಾಅಭಿನಯಗಳಲ್ಲಿ ರಸಾತ್ಮಕ ವಾಕ್ಯವೇ ಇಲ್ಲದ್ದರಿಂದ ಅಂತಹ ಅಭಿನಯಗಳು ಕಾವ್ಯವೆನಿಸುವುದಿಲ್ಲವೇಂದರೆ ಅದು ಬಾಯಿಯಿಂದ ಹೇಳುವುದರಿಂದ ರಸಾತ್ಮಕವಾದ ವಾಕ್ಯವಿರುವುದರಿಂದ ಮುಖ್ಯ ಕಾವ್ಯವೆಂದೇ ಕರೆಯಬೇಕಾಗುತ್ತದೆ.

**ರೂಪಕ**

ರೂಪಕವೆಂದರೆ ನಟನಲ್ಲಿ ರಾಮ, ಯುಧಿಷ್ಠಿರ ಮೊದಲಾದ ನಾಯಕರ ಸ್ವರೂಪವನ್ನು ಆರೋಪಿಸುವುದರಿಂದ ರೂಪಕವೆಂದು ಕರೆಯಲಾಗಿದೆ. ರೂಪಕದಲ್ಲಿ

> **ನಾಟಿಕಮಥ ಪ್ರಕರಣಂ ಭಾಣವ್ಯಾಯೋಗಸಮವಕಾರಡಿಮಾಃ ॥**
> **ಈಹಾಮೃಗಾಂಕವೀಥ್ಯಃ ಪ್ರಹಸನಮಿತಿ ರೂಪಕಾಣಿ ದಶ** [೨೧]॥

ನಾಟಕ, ಪ್ರಕರಣ, ಭಾಣ, ವ್ಯಾಯೋಗ, ಸಮವಕಾರ, ಡಿಮ, ಈಹಾಮೃಗ, ಅಂಕ, ವೀಥಿ, ಪ್ರಹಸನ ಎಂದು ಹತ್ತುಬಗೆಗಳಿವೆ. ಇದರ ಮೇಲೆ ಹದಿನೆಂಟು ಉಪರೂಪಕಗಳಿದ್ದು ಇವುಗಳಲ್ಲಿ ಒಂದೊಂದರಲ್ಲೂ ಬೇರೆ ಯಾವ ವಿಶೇಷವು ಇಲ್ಲದೇ ಎಲ್ಲದಕ್ಕೂ ನಾಟಕದಂತೆಯೇ ಲಕ್ಷಣವು ಹೊಂದಿಕೆ ಆಗುತ್ತದೆ. ಆದರಿಂದ ಪ್ರಕರಣ ಮೊದಲಾದ ರೂಪಕಗಳಿಗೂ, ನಾಟಕ ಮೊದಲಾದ ಉಪರೂಪಕಗಳಿಗೂ ನಾಟಕದ ಲಕ್ಷಣವು ಅನ್ವಯಿಸುವುದರಿಂದ ಮೊದಲು ನಾಟಕ ಅದರ ಹತ್ತು ಬಗೆಗಳನ್ನು ವಿಚಾರಮಾಡಲಾಗಿದೆ.

**೧ ನಾಟಕ**

> **ನಾಟಕಂ ಖ್ಯಾತವೃತ್ತಂ ಸ್ಯಾತ್ ಪಂಚಚಂದಿ ಸಮನ್ವಿತಮ್।**
> **ವಿಲಾಸದ್ಧ್ಯಾದಿಗುಣವತ್ ಯುಕ್ತಂ ನಾನಾವಿಭೂತಿಭಿಃ** [೨೨]॥
> **ಪ್ರಖ್ಯಾತವಂಶೋ ರಾಜಾರ್ಷಿರ್ಧೀರೋದಾತ್ತಃ ಪುತಾಪವಾನ್ ।**
> **ದಿವ್ಯೋऽಥ ಧಿವ್ಯಾದಿವ್ಯೋವಾಗುಣವಾನ್ ನಾಯಕೋ ಮತಃ ॥**

ನಾಟಕದಲ್ಲಿ ಲೋಕವಿಖ್ಯಾತವಾದ ವೃತ್ತಾಂತರವಿರಬೇಕು. ಅದು ಪ್ರಕರಣದಲ್ಲಿರುವಂತೆ ಕವಿಕಲ್ಪಿತವಾಗಿರಬಾರದು. ಇಂತಹ ವೃತ್ತಾಂತನ್ನೊಳಗೊಂಡ ದೃಶ್ಯಕಾವ್ಯವೇ ನಾಟಕವೆನಿಸಿದೆ. ಇದರಲ್ಲಿ ಮುಖ, ಪ್ರತಿಮುಖ, ಗರ್ಭ, ವಿಮರ್ಷ, ಉಪಸಂಹೃತಿ ಎಂಬ ಐದು ಸಂಧಿಗಳಿರುತ್ತವೆ ಇವನ್ನು ಮುಂದೆ ವಿವರಿಸಲಾಗುವುದು. ಗಂಭೀರವಾದ ನೋಟ, ಔನ್ನತ್ಯ, ಪ್ರಿಯಪ್ರಾಪ್ತಿ ಮೊದಲಾದ ಗುಣವುಳ್ಳ ನಾಯಕನ ಅನೇಕ ಬಗೆಯ ವೈಭವಗಳನ್ನು ಇದು ತಿಳಿಸುತ್ತದೆ. ಸುಖದುಃಖಗಳಲ್ಲಿ ಒಂದಾದ ಮೇಲೊಂದು ಸಂಭವಿಸುವುದರಿಂದ ಅಲ್ಲಿ ಬರುವ ಶೃಂಗಾರ, ಕರುಣ ಮೊದಲಾದ ಅನೇಕ ಬಗೆಯ ರಸಗಳನ್ನು ನಾಟಕವು ಪ್ರಕಾಶಗೊಳಿಸುತ್ತದೆ ಒಂದೊಂದು ಸನ್ನಿವೇಶದಲ್ಲಿ ಒಂದು ಅಥವಾ ಎರಡು ರಸಗಳು ಪರಸ್ಪರ ವಿರೋಧವಿಲ್ಲದೆ ತೋರುತ್ತಿದ್ದು ಐದರಿಂದ ಹತ್ತುಅಂಕಗಳಿರುತ್ತವೆ. ಇಲ್ಲಿ ಬರುವ ನಾಯಕನಿಗೆ ಋಷಿಗೆ ಯೋಗ್ಯವಿನಿಸಿದ ದಯೆ, ದಾಕ್ಷಿಣ್ಯ, ಕ್ಷಮೆ ಮೊದಲಾದ ಗುಣಗಳಿರುತ್ತವೆ. ಆದ-'ರೆ ನಾಯಕನು ಋಷಿಗೆ ಸದೃಶ್ಯನಾದ ಕ್ಷತಿಯವಂಶದ ರಾಜನೇ ಆಗಿರಬೇಕೆಂಬ

ನಿರ್ಭಂಧವೇನು ಇಲ್ಲ[೨೪]. ಹೀಗೆ ನಾಯಕನು ಗುಣದಲ್ಲಿ ರಾಜರ್ಷಿ ಎನಿಸಿರಬೇಕು ಧೀರೂದಾತ್ತನೂ ಪ್ರತಾಪಗುಣವುಳ್ಳವನಾಗಿದ್ದು, ದೇವ ಮಾನವ ಗುಣಗಳೆರಡೂ ಇರುತ್ತವೆ. ದೇವಗುಣವೆಂದರೆ ವರ್ಚಸ್ಸು, ಮಾನವಗುಣವೆಂದರೆ ಶಾಂತ ಧಾರ್ಮಿಕ ಕ್ರಿಯೆಗಳನ್ನಾಚರಿಸುವ ಮನೋಭಾವವುಳ್ಳವರು ಇದರಲ್ಲಿ ಶೃಂಗಾರ, ವೀರರಸಗಳು ಪ್ರಧಾನವಾಗಿದ್ದು ಉಳಿದ ರಸಗಳು ಪೋಷಕ ವಾಗಿರುತ್ತವೆ. ನಾಯಕನ ಕಾರ್ಯವನ್ನು ನಡೆಸಲಿಕ್ಕೆ ನಾಲ್ವರೋ ಐವರೋ ಮುಖ್ಯರಾದ ಜನರು ಇದ್ದು ಅಂಶಗಳು ಕ್ರಮವಾಗಿ ಚಿಕ್ಕವಾಗಿರುತ್ತವೆ. "ಗೋವಿನ ಬಾಲಗಳಲ್ಲಿ ಕೆಲವು ಉದ್ದವಾಗಿಯೂ ಕೆಲವು ಮೋಟಾಗಿಯೂ ಇರುವಂತೆ ನಾಟಕದಲ್ಲಿ ಕೆಲವು ಕಾರ್ಯಗಳನ್ನು ಮುಖಸಂಧಿಯಲಿ, ಕೆಲವನ್ನು ಪ್ರತಿಮುಖ ಸಂಧಿಯಲ್ಲಿ ಉಳಿದವನ್ನು ಇತರ ಸಂಧಿಗಳಲ್ಲಿ ಏರ್ಪಡಿಸಬೇಕು[೨೫]". [ಕೆಲವರು ಹೇಳುತ್ತಾರೆ.] ಇವೆಲ್ಲಾ ನಾಟಕದ ಮುಖ್ಯಲಕ್ಷಣವಾಗಿದೆ.

**ಅಂಕ**

> **ಪ್ರತ್ಯಕ್ಷನೇತೃ ಚರಿತೋ ರಸಭಾವಸಮುಜ್ವಲಃ ।**
> **ಭವೇದ್ಗೂಢಶಶಬ್ದಾರ್ಥಃ ಷುದ್ರಚೂರ್ಣಕಸಂಯುತಃ[೨೬] ॥**

ನಾಯಕನ ಚರಿತ್ರೆಯನ್ನು ಪ್ರತ್ಯಕ್ಷವಾಗಿ ತಿಳಿಸುತ್ತಾ ಶಬಾರ್ಥವನ್ನು ಅನಾಯಾಸವಾಗಿ ತಿಳಿಸುತ್ತಲೂ ಇದ್ದು ಅಂಕವು ಚಿಕ್ಕ ಸಮಾಸಗಳಿರುವ ಸಣ್ಣ ಸಣ್ಣ ವಾಕ್ಯಗಳಿಂದ ಕೂಡಿರತ್ತದೆ. ಪ್ರಧಾನವೆನಿಸಿದ ಒಂದು ಕಾರ್ಯವಿದ್ದು ಅನೇಕ ಬಗೆಯ ಘಟನೆಗಳಿರುತ್ತವೆ. ಗದ್ಯಕ್ಕಿಂತಲೂ ಹೆಚ್ಚು ಗದ್ಯಗಳಿರದೆ ಪಾತ್ರಗಳಿಗೆ ಪರಸ್ಪರವಾಗಿ ಹೊಂದುವಂತೆ ಕಥೆಗಳನ್ನು ಜೋಡಿಸಬೇಕು. ನಾಯಕನ ಚರಿತ್ರೆಯು ಪ್ರತಿಯೊಂದು ಅಂಕದಲ್ಲಿ ಬಾರದಿದ್ದರೂ ಬರುವಂತೆ ತೋರುತ್ತಿರಬೇಕು ಕೂಲೆ, ಯುದ್ಧ, ರಾಜ್ಯ, ದೇಶದಲ್ಲಿ ಸಂಭವಿಸುವ ವಿಪತ್ತು, ವಿವಾಹ, ಸಂಭೋಗ ಇಂತಹವನ್ನು ತಿಳಿಸಬಾರದು ಸಮಾಚಾರಗಳೆಲ್ಲವೂ ಭಾವರಸವನ್ನು ಪ್ರಕಾಶಿಸುವಂತಿದ್ದು ಅಂಕವು ಕೊನೆಯಾಗುವ ವೇಳೆಗೆ ಪಾತ್ರಗಳೆಲ್ಲವೂ ರಂಗಸ್ಥಳದಿಂದ ಹೊರಗೆ ಹೋಗಿರಬೇಕು. ಅಂಕದ ಲಕ್ಷಣದ ಜೊತೆಗೆ ಗರ್ಭಾಂಕವೇನೆಂಬುದನ್ನು ತಿಳಿಸಲಾಗಿದೆ ಅಂಕದೊಳಗೆ ಪ್ರವೇಶಿಸುವ ಚಿಕ್ಕದೊಂದು ಅಂಕವೇ ಗರ್ಭಾಂಕವೆನಿಸಿದೆ ಇದು ರಂಗಸ್ಥಳದಲ್ಲಿ ಮೊದಲು ಬರುವ ಮಂಗಳಾಚರಣ, ಪ್ರಸ್ತಾವನೆ, ಸಭಾಪೂಜೆ, ಕಥೆಯ ಮೂಲವೆನಿಸಿದ ಬೀಜ ಇವಿಷ್ಟನ್ನು ಗರ್ಭಾಂಕವು[೨೭] ತಿಳಿಸುತ್ತದೆ.

**ಪೂರ್ವರಂಗ, ನಾಂದಿ**

> **ಯನ್ನಾಟ್ಯ ವಸ್ತುನಃ ಪೂರ್ವಂ ರಂಗವಿಘ್ನೋಪ ಶಾಂತೆಯೇ ।**
> **ಕುಶೀಲವಾಃ ಪ್ರಕುರ್ವಂತಿ ಪೂರ್ವರಂಗಃ ಸ ಉಚ್ಯತೇ[೨೮] ॥**

'ನಟರು ಅಭಿನಯುವನ್ನು ಆರಂಭಿಸುವ ಮೊದಲು ರಂಗಸ್ಥಳದಲ್ಲಿ ಸಂಭವಿಸಬಹುದಾದ ವಿಘ್ನವನ್ನು ತಡೆಯುವುದಕ್ಕಾಗಿ ಮಾಡಬೇಕಾದ್ದನ್ನು ಪೂರ್ವ ರಂಗವೆನಿಸಿದೆ. ಇದಕ್ಕೆ ಇಪ್ಪತ್ತೆರಡು ಅಂಗಗಳಿವೆ ಇವುಗಳೆಲ್ಲವನ್ನು ಕವಿಯು ತನ್ನ ಇಷ್ಟದಂತೆ ಅವಶ್ಯಕವಿದ್ದರೆ ಮಾತ್ರ ಸೇರಿಸಬಹುದು. ವಿಘ್ನಶಾಂತಿಗಾಗಿ 'ನಾಂದಿ'ಯನ್ನು ಆಚರಿಸಬೇಕಾಗುತ್ತದೆ ಇಷ್ಟಾರ್ಥವನ್ನು ತನಗಾಗಲೀ ಇತರರಿಗಾಗಲೀ ಬಯಸುವಂತೆ ತಿಳಿಸುವ ಮಾತೇ ಆಶೀರ್ವಚನವೆನಿಸಿದೆ. ಇಂತಹ ಮಾತನ್ನೊಳಗೊಂಡ ದೇವತೆ, ಬ್ರಹ್ಮಜ್ಞಾನಿಗಳು, ರಾಜಗುರುಗಳು, ಮೊದಲಾದ ಗುಣಗಳನ್ನು ಪ್ರಶಂಸಿಸುವುದೇ 'ನಾಂದಿ' ಎನಿಸಿದೆ. ಇದರಲ್ಲಿ ಮಂಗಳ ಸೂಚಕವಾದ ಶಂಖ, ಚಕ್ರ, ಕಮಲ, ಕನ್ನೈದಿಲೆ, ಚಕ್ರವಾಕ ಹೆಸರು ಬಂದಿರುತ್ತದೆ. ನಾಂದಿಯಲ್ಲಿ ಎಂಟು ಅಥವಾ ಹನ್ನೆರಡು ಪದಗಳಿರಬೇಕು[೨೯] ಇಲ್ಲಿ ಪದಗಳೆಂದರೆ ಶ್ಲೋಕದ ಪದಗಳು, ಸುಬಂತತಿಙಂತ ಪದಗಳು ಅಥವಾ ಅವಾಂತರ ವಾಕ್ಯವಾದರೂ ಆಗಬಹುದು ನಾಂದಿಯಲ್ಲಿ ದೇವಾದಿಗಳ ಪ್ರಶಂಸೆ[೩೦] ಇರುತ್ತವೆ. ನಾಂದೀಪದ್ಯಗಳನ್ನು ಹೇಳುವ ಮೊದಲು ರಂಗದ್ವಾರವನ್ನು ಆಚ-ರಿಸಲಾಗುತ್ತದೆ[೩೧]. ಇವೆಲ್ಲವೂ ಪೂರ್ವರಂಗ ಮತ್ತು ನಾಂದಿಯ ಲಕ್ಷಣವಾಗಿದೆ.

### ಸೂತ್ರದಾರ

**ಪೂರ್ವರಂಗಂ ವಿಧಾಯೈವ ಸೂತ್ರಧಾರೋ ನಿವರ್ತತೇ ।**
**ಪ್ರವಿಶ್ಯ ಸ್ಥಾಪಕಸ್ತದ್ವತ್ ಕಾವ್ಯಮಾಸ್ಥಾವಯೇತ್ತತಃ ॥**

[ಸಾಹಿತ್ಯದರ್ಪಣ, ೬, ೧೪]

ರಂಗಸ್ಥಳಕ್ಕೆ ಬಂದು ನಾಟಕದ ಕಥಾವಸ್ತುವನ್ನು ಮೊದಲು ಸೂಚಿಸುವವನೇ ಸೂತ್ರಧಾರನೆನಿಸುವನು. ಇವನು ನಾಟಕದ ಆರಂಭದಲ್ಲಿ ವಿಘ್ನ ಪರಿಹಾರಕ್ಕಾಗಿ ದೇವತಾ ಪ್ರಾರ್ಥನೆ ಎನಿಸಿದ ನಾಂದೀ ಪದ್ಯಗಳನ್ನು ಹೇಳುವ ಮೂಲಕ ನಾಟಕದ ಮುಂದಿನ ಕಥೆಯನ್ನು ಸೂಚಿಸಿ ರಂಗಸ್ಥಳದಿಂದ ಹೊರಡುವನು. ಅವನಂತೆಯೆ ಮತ್ತೊಬ್ಬ ನಟನು ಅಲ್ಲಿಗೆ ಬಂದು ಕಥೆಯ ವಿಷಯವನ್ನು ಸೂಚಿಸುವನು ಸ್ಥಾಪಕನೆನಿಸಿದ್ದಾನೆ. ಸ್ಥಾಪಕನು ದಿವ್ಯವೆನಿಸಿದ ದಿವ್ಯವಾದ ವಸ್ತುವನನ್ನಾಗಲೀ, ಮುಖವನ್ನಾಗಲೀ, ಪಾತ್ರವನ್ನಾಗಲೀ ಸೂಚಿಸುವನು. ಇವನು ಮರ್ತ್ಯನೆನಿಸಿ ಈ ಲೋಕಕಕ್ಕೆ ಸಂಬಂಧಿಸಿದ ಮುಖ ಪಾತ್ರಗಳನ್ನು ಸೂಚಿಸುವನು ಹೀಗೆ ಸೂತ್ರಧಾರನು ನಾಂದೀಪದ್ಯಗಳನ್ನು ಮಾತ್ರ ತಿಳಿಸುವನು ಸೂತ್ರದಾರನು ಪೂರ್ವರಂಗದ ಕೆಲಸವನ್ನು ಸರಿಯಾಗಿ ನಡೆಸದೇ ಇದ್ದಾಗ ಸ್ಥಾಪಕನು ಪೂರ್ವರಂಗದ ಕೆಲಸವನ್ನು ನಡೆಸುವನು ಕಥೆಯ ಹಿಂದಿನ ವಸ್ತುವನ್ನೂ ಮುಂದಿನ ಬೀಜವನ್ನೂ [೩೨] ಸೂಚಿಸುವನು ಪ್ರಕೃತ ವಸ್ತುವನ್ನು ಶ್ಲೇಷದ ಮೂಲಕ ತಿಳಿಸುವ ಮಾತೇ ಮುಖವೆನಿಸಿದೆ ಇದನ್ನು ತಿಳಿಸುವುದು ಸಹ ಸ್ಥಾಪಕನ ಕೆಲಸವಾಗಿದೆ ಮತ್ತು ಮಧುರವಾದ ಶ್ಲೋಕಗಳನ್ನು ಹೇಳುವುದು ನಾಟಕದ ಹೆಸರು

ಗೋತ್ರ, ವಂಶ, ಕವಿಯ ಹೆಸರು, ಋತು ಇತ್ಯಾದಿಗಳನ್ನು ಸ್ಥಾಪಕನು ಹೇಳುತ್ತಾನೆ ಅಲ್ಲದೇ ಭಾರತೀವೃತ್ತಿಯನ್ನು ಅನುಸರಿಸುತ್ತಾನೆ ಇವಿಷ್ಟು ಸೂತ್ರದಾರನ ನಂತರ ಬರುವ ಸ್ಥಾಪಕನ ಕೆಲಸವಾಗಿದೆ.

## ಪ್ರಸ್ತಾವನೆ

**ಚಿತ್ರೈರ್ವಾಕ್ಯೈಃ ಸ್ವಕಾರ್ಯೋತ್ಥೈಃ ಪ್ರಸ್ತುತಾ ಕ್ಷೇಪಿಭಿರ್ಮಿಥಃ ।**
**ಆಮುಖಂ ತತ್ತು ವಿಜ್ಞೇಯಂ ನಾಮ್ನಾ ಪ್ರಸ್ತಾವನಾಪಿ ಸಾ** [೩೩] ॥

ನಟಿಯಾಗಲೀ ವಿದೂಷಕನಾಗಲೀ ಪಾರಿಪಾರ್ಶಿಕನಾಗಲಿ ಸೂತ್ರಧಾರನೊಡನೆ ಸಂಲಾಪವನ್ನು ನಡೆಸುತ್ತಾ ತಮ್ಮ ಕಾರ್ಯಕ್ಕೆ ಸಂಬಂಧಿಸಿದಂತೆಯೂ ಪ್ರಕೃತವಸ್ತುವನ್ನು ತಿಳಿಸುವಂತೆ ಚಮತ್ಕಾರವನ್ನು ಹುಟ್ಟಿಸುವ ಮಾತುಗಳನ್ನು ಪ್ರಯೋಗಿಸುವುದೇ ಆಮುಖ ಅಥವಾ ಪ್ರಸ್ತಾವನೆ ಎನ್ನಲಾಗಿದೆ. ಇದರಲ್ಲಿ ಉದ್ಧಾತ್ಯಕ, ಕಥೋದ್ಘಾತ, ಪ್ರಯೋಗಾತಿಶಯ, ಪ್ರವರ್ತಕ, ಅವಲಗಿತ ಎಂದು ಐದು ವಿಧಗಳಿವೆ.

ಪ್ರಸ್ತಾವನೆಯಲ್ಲಿ ನಟ ಮೊದಲಾದವರು ಪ್ರಯೋಗಿಸುವ ಪದಗಳಿಗೆ ಅನೇಕ ಅರ್ಥಗಳು ಸಂಭವಿಸುವುದರಿಂದ ಪ್ರಕೃತ ಸಂಧರ್ಭಕ್ಕೆ ಇದೇ ಅರ್ಥವೆಂಬ ನಿರ್ಣಯವು ಸಭ್ಯರಿಗೆ ಆಗುವಂತೆ ಬೇರೆ ಪದಗಳನ್ನು ಪ್ರಯೋಗಿಸಿ ಅದನ್ನು ವಿಶದ ಪಡಿಸುವುದೇ 'ಉದ್ಧಾತ್ಯಕ[೩೪]' ಎಂಬ ಮೊದಲನೆ ವಿಧವಾಗಿದೆ. ಸೂತ್ರದಾರನು ವಾಕ್ಯವನ್ನು ಪೂರ್ತಿಯಾಗಿ ಉಚ್ಚರಿಸುತ್ತಲ್ಲೂ ಅಥವಾ ಅವನು ತಿಳಿಸಿದ ವಿಷಯದಂತೆ ಕಥೆಗೆ ಸಂಬಂಧಪಟ್ಟವನೊಬ್ಬನು ಪ್ರವೇಶಿಸುವುದು ಕಥೆಯಿಂದ 'ಉದ್ಧಾತ' ಅಂದರೆ ಸೂತ್ರದಾರನ ಮಾತಿನಂತೆ ಬೇರೊಂದು ಪಾತ್ರದ ಪ್ರವೇಶವೆಂದು ಅರ್ಥವನ್ನು 'ಕಥೋದ್ಘಾತ[೩೫]'ವೆಂಬ ಎರಡನೆಯ ವಿಧವಾಗಿದೆ. ಸೂತ್ರಧಾರನು ಒಂದು ವಿಷಯವನ್ನು ಆಲೋಚನೆ ಮಾಡುತ್ತಿರುವಾಗಲೇ ಬೇರೊಂದು ವಿಷಯವನ್ನು ಆಲೋಚನೆ ಮಾಡುವನು ಹಾಗೆ ಬೇರೊಂದು ವಿಷಯವನ್ನು ಪ್ರಯೋಗಿಸುವಾಗ ಕಥಾವಸ್ತುವಿಗೆ ಸಂಬಂಧಿಸಿದವನೊಬ್ಬನು ಪ್ರವೇಶಿಸುವನು ಅಂದರೆ ಹಿಂದಿನ ಪ್ರಯೋಗಕ್ಕಿಂತಲೂ ಮುಂದಿನ ಪ್ರಯೋಗದಲ್ಲಿ ಅತಿಶಯವಿರುವುದರಿಂದ 'ಪ್ರಯೋಗಾತಿಶಯ'ವೆಂಬ ಮೂರನೆ ವಿಧವಾಗಿದೆ. ಸೂತ್ರಧಾರಿಯ ಆ ಕಾಲದಲ್ಲಿ ಪ್ರಚಾರದಲ್ಲಿರುವ ವಸಂತ ಮೊದಲಾದ ಕಾಲ ವಿಶೇಷವನ್ನಾಶ್ರಯಿಸಿ ವರ್ಣಿಸುವುದು ವರ್ಣನೆಯಲ್ಲಿ ಶ್ಲೇಷದ ಮೂಲಕ ಎರಡು ಅರ್ಥಗಳಿದ್ದು ಒಂದು ಆ ಕಾಲಕ್ಕೆ ಅನ್ವಯಿಸಲು, ಮತ್ತೊಂದು ಅರ್ಥವನ್ನು ಭಾವಿಸುತ್ತಾ ಕಥೆಗೆ ಸಂಬಂಧಿಸಿದ ಬೇರೊಬ್ಬ ವ್ಯಕ್ತಿಯು ಪ್ರವೇಶಿಸುವುದು ಒಂದು ಪ್ರಾತ್ರವನ್ನು ಅಭಿನಯದಲ್ಲಿ ತೊಡಗಿಸುವುದರಿಂದ ಇದು 'ಪ್ರವರ್ತಕ'ವೆಂಬ ನಾಲ್ಕನೆಯ ವಿಧವಾಗಿದೆ. ಸೂತ್ರಧಾರನು ಒಂದು ವಿಷಯಕ್ಕೆ ಸಾದೃಶವನ್ನು ತಿಳಿಸಿ ಅದನ್ನು ಪೂರ್ತಿ ಗೊಳಿಸಲು ಉಪಮಾನವೆಂಬ ಬೇರೊಬ್ಬನ

ಪ್ರವೇಶವನ್ನು ಸೂಚಿಸುವುದು ‘ಅವಲಗೀತ[೩೬]’ವೆಂಬ ಪ್ರಸ್ತಾವನೆಯ ಐದನೆವಿಧವಾಗಿದೆ. ಪ್ರಸ್ತಾವನೆ ಮತ್ತು ಅದರ ಐದು ವಿಧಗಳನ್ನ ವಿವರಿಸಿ ಮುಂದೆ ಪತಾಕಾಸ್ಥಾನಕವನ್ನು ವಿಚಾರ ಮಾಡಲಾಗಿದೆ.

**ಪತಾಕಾಸ್ಥಾನಕ**

> **ಪತಾಕಾಸ್ಥಾನಕಂ ಯೋಜ್ಯಂ ಸುವಿಚಾರ್ಯೇಹ ವಸ್ತುನಿ ।**
> **ಆಗತುಂಕೇನ ಭಾವೇನ ಪತಾಕಾಸ್ಥಾನಕಂ ತು ತತ್ [೩೭]॥**

ವಿಷಯವು ಪ್ರಕೃತವೆಂದು ತಿಳಿದಾಗ ಬೇರೊಂದು ಅನಿರೀಕ್ಷಿತ ರೀತಿಯಲ್ಲಿ ತಿಳಿಸುವ ಮತ್ತೊಂದು ವಿಷಯುವನ್ನು ಪ್ರಯೋಗಿಸುವುದೇ ‘ಪತಾಕಾಸ್ಥಾನಕ’ವೆನಿಸಿದೆ. ಇದು ಧ್ವಜದಂತೆ ನಾಟ್ಯದ ಪ್ರಸಿದ್ಧಿಯನ್ನು ಹರಡುವುದರಿಂದ ಅಂತಹ ಬಂಧವನ್ನ ‘ಪತಾಕೆ’ ಎಂದು ಕರೆಯಲಾಗಿದೆ ಇವು ನಾಲ್ಕುಬಗೆಯಾಗಿವೆ. ಅನಿರೀಕ್ಷಿತವಾಗಿ ಹೆಚ್ಚು ಪ್ರೀತಿಯನ್ನು ಆಚರಿಸುವುದರಿಂದ ವಿಶೇಷವಾದ ಫಲವು ದೂರಕುವುದೇ

ಮೊದಲನೆಯ ಪತಾಕ ಸ್ಥಾನಕವೆನಿಸಿದೆ. ಉದಾಹರಣೆಗಾಗಿ “ಈಕೆ ವಾಸವದತ್ತೆ’ ಎಂದು ರಾಜನು ಆಕೆಯ ಕುತಿಗೆಗೆ ಕಟ್ಟಿದ್ದ ಪಾಶವನ್ನು ಬಿಡಿಸುತ್ತಾನೆ. ಆಗ ಆ ಮಾತನ್ನು ಕೇಳಿ ಈಕೆ ಸಾಗರಿಕೆ ಎಂದು ತಿಳಿದು ನನ್ನ ಪ್ರಿಯ ಸಾಗರಿಕೆ ಇಲ್ಲಿ ಹೇಗೆ ಬಂದಳು? ಪ್ರಿಯೆ, ಈ ಲತಾಪಾಶವನ್ನು ತೊರೆದು ಬಿಸಾಡು ನನ್ನ ಕುತ್ತಿಗೆಯಲ್ಲಿ ನಿನ್ನ ಈ ಬಾಹು ಪಾಶವನ್ನು ತೊರೆದು ಬಿಸಾಡು ನನ್ನ ಕುತ್ತಿಗೆಯಲ್ಲಿ ನಿನ್ನ ಈ ಬಾಹು ಪಾಶವನ್ನು ಇರಿಸು ಎಂದು ಹೇಳುವನು. ಇಲ್ಲಿ ಸಾಗರಿಕೆ ಯಾರು? ಅವಳ ಸ್ವರೂಪವೇನು? ಎಂದು ತಿಳಿಯಬೇಕೆಂಬುದೇ ಫಲ ಇದನ್ನು ಸಾಧಿಸಲು ರಾಜನಿಗೆ ಬಹುಕಾಲದಿಂದಲೂ ಇಚ್ಚೆಯಿತ್ತು ಈಗ ಅದು ದೊರೆಯಿತು ಇದು ಹಿಂದೆ ಅವನಿಗೆ ವಾಸವದತ್ತೆಯು ದೊರೆಕಿದ್ದಕ್ಕಿಂತ ಹೆಚ್ಚು ಪ್ರೀತಿಯನ್ನು ಹುಟ್ಟಿಸಿದ್ದರಿಂದ ‘ಈಕೆ ವಾಸವದತ್ತೆಯೇ ಇರಬೇಕು[೩೮]’ ಎಂದು ಆಲೋಚಿಸುವಾಗ ಆಕೆಯ ಸಾಕ್ಷಾತ್ಕಾರವೆಂಬ ಅನಿರೀಕ್ಷಿತವಾದ ವಿಷಯದಿಂದ ಸಾಗರಿಕೆ ಎಂಬ ಬೇರೊಂದು ವ್ಯಕ್ತಿಯ ವಿಷಯವನ್ನು ಪ್ರಯೋಗಿಸಿದ್ದ–ರಿಂದ ಇದು ಪತಾಕಾಸ್ಥಾನಕದ [೩೯]ಮೊದಲನೆಯ ಬಗೆ ಎನಿಸಿದೆ. ಅನೇಕ ಅರ್ಥಗಳನ್ನು ತಿಳಿಸುವ ಅನೇಕ ಶಬ್ದಗಳನ್ನೊಳಗೊಂಡು ಅನೇಕ ಬಗೆಯ ಬಂಧಗಳಿಗೆ ಆಶ್ರಯವನ್ನು ನೀಡುವ ವಾಕ್ಯವೇ ಪಾತಾಕಾಸ್ಥಾನಕ ಎರಡನೆಯ ಬಗೆಯಾಗಿದೆ. ಪ್ರಧಾನವಾದ ವಿಷಯವನ್ನು ವ್ಯಕ್ತವಾಗದಂತೆಯೂ ನಿಶ್ಚಿತವಾಗುವಂತೆಯೂ ಸೂಚಿಸುತ್ತ ಶ್ಲೇಷದಿಂದ ಪ್ರಕೃತ ಸಂದರ್ಭಕ್ಕೆ ಅನುಗುಣವಾದ ಬೇರೊಂದು ಅಭಿಪ್ರಾಯವನ್ನೊಳಗೊಂಡ ಪ್ರತ್ಯುತ್ತರವನ್ನು ಕೊಡುವ ವಾಕ್ಯವು ಪತಾಕಾಸ್ಥಾನಕ[೪೦]ದ ಮೂರನೆಯ ಬಗೆಯಾಗಿದೆ. ಈ ಎರಡು ಪಕ್ಷಗಳಿಗೆ ಅನ್ವಯಿಸುವಂತೆ ಅರ್ಥಗಳನ್ನು ಕಾವ್ಯದೊಳಗೆ ಸೇರಿಸಿ ಬೇರೊಂದು ಪ್ರಧಾನವಾದ ಅರ್ಥವನ್ನು ಸೂಚಿಸುವ ವಾಕ್ಯವನ್ನು ಪ್ರಯೋಗಿಸುವುದೇ ಪತಾಕಾಸ್ಥಾನಕದ ನಾಲ್ಕನೆಯ ಬಗೆಯಾಗಿದೆ. ಇಲ್ಲಿಗೆ ಪತಾಕಾಸ್ಥಾನಕ ಮತ್ತು ಅದರ

ನಾಲ್ಕು ಬಗೆಗಳನ್ನು ತಿಳಿಸಿದ ಮೇಲೆ ಅರ್ಥೋಪಕ್ಷೇಪವೇನೆಂಬುದನ್ನ ವಿವೇಚಿಸಲಾಗಿದೆ.

## ಅರ್ಥೋಪಕ್ಷೇಪ

ಸರಸವಾದ ವೃತ್ತಾಂತಗಳನ್ನು ಸಭ್ಯರಿಗೆ ತಿಳಿಯಪಡಿಸುವಂತಹ ಸಂದರ್ಭಗಳನ್ನು 'ಅರ್ಥೋಪಕ್ಷೇಪ' ಎಂದು ಕರೆಯಲಾಗಿದೆ. ಇವು ವಿಷ್ಕಂಭಕ, ಪ್ರವೇಶಕ, ಚೋಲಿಕೆ, ಅಂಕಾವತಾರ, ಅಂಕಮುಖ ಎಂದು ಐದು ಬಗೆಗಳಾಗಿವೆ. ನಾಟಕದ ಕಥೆಗಳಲ್ಲಿ ಹಿಂದೆ ಕಳೆದು ಹೋದವನ್ನು ಮುಂದೆ ನಡೆಯಲ್ಲಿರುವುದನ್ನು ತಿಳಿಸುತ್ತ, ಅಂಕಕ್ಕಿಂತ ಚಿಕ್ಕದಾಗಿರುವ ಭಾಗವೇ 'ವಿಷ್ಕಂಭಕ' ಎನಿಸಿದೆ. ಇದನ್ನು ಅಂಕದ ಆರಂಭದಲ್ಲಿ ಸೇ-ರಿಸಬೇಕಾಗುತ್ತದೆ ಇದು ಮಿಶ್ರ ಶುದ್ಧ ಎಂದು ಎರಡು ಬಗೆಯಾಗಿದೆ. ಮಿಶ್ರವೆನಿಸಿದ್ದರಲ್ಲಿ [೪೧]ನೀಚಪಾತ್ರಗಳೂ ಮಧ್ಯಮಪಾತ್ರಗಳು ಭಾಗವಹಿಸುತ್ತವೆ. ಶುದ್ಧವೆನಿಸಿದ್ದರಲ್ಲಿ[೪೨] ಮಧ್ಯಮ ದರ್ಜೆಯ ಒಂದು ಪಾತ್ರವು ಭಾಗವಹಿಸುತ್ತದೆ ನೀಚಪಾತ್ರಗಳು ರಂಗಸ್ಥಳವನ್ನು ಪ್ರವೇಶಿಸಿ ಸಂಸ್ಕೃತ ಭಾಷೆಯನ್ನುಳಿದು ಇತರ ಭಾಷೆಯಲ್ಲಿ ವ್ಯವಹ-ರಿಸುತ್ತ ಕಥೆಯ ಹಿಂದಿನ ಮುಂದಿನ ಸಮಾಚಾರವನ್ನು ಸಂಕ್ಷೇಪವಾಗಿ ತಿಳಿಸಿಕೊಡುವ ಸಂದರ್ಭವನ್ನ 'ಪ್ರವೇಶಕ[೪೩]'ವೆಂಬ ಎರಡನೆ ಬಗೆಯಾಗಿದೆ. ತೆರೆಯಮರೆಯಲ್ಲಿ ಇರುವ ಜನರು ಕಥೆಯ ವಸ್ತುವನ್ನು ಸೂಚಿಸುವುದೇ 'ಚೋಲಿಕೆ' ಎಂಬ ಮೂರನೆ ಬಗೆಯಾಗಿದೆ. ಉದಾಹರಣೆಗೆ "ಎಲೈ ವೈಮಾನಿಕರೇ, ರಂಗಸ್ಥಳಕ್ಕೆ ಬೇಕಾದ ಮಂಗಳಕಾರ್ಯವು ಆರಂಭವಾಗಲಿ" ಎಂದು ಹೇಳಿದ ಮೇಲೆ ತೆರೆಯ ಹಿಂದೆ "ರಾಮನು ಪರಶುರಾಮನನ್ನು ಜಯಿಸಿದನು[೪೪]" ಎಂದು ತಿಳಿಸಿದೆ. ಹೀಗೆ ತಿಳಿಸುವುದೇ 'ಚೋಲಿಕೆ' ಎನಿಸಿದೆ. ಒಂದೇ ಅಂಕದಲ್ಲಿ ಎಲ್ಲಾ ಅಂಕಗಳ ಸೂಚನೆಯನ್ನು ಸೇ-ರಿಸುವುದನ್ನು 'ಅಂಕಮುಖ[೪೫]' ಎನ್ನಲಾಗಿದ್ದು ನಾಲ್ಕನೆ ಬಗೆಯಾಗಿದೆ. ಹಿಂದಿನ ಅಂಕದ ಕೊನೆಯಲ್ಲಿ ಮುಂದಿನ ಅಂಕದ ಆರಂಭವನ್ನು ಸೂಚಿಸುವುದನ್ನ 'ಅಂಕಾವತಾರ'ವೆಂಬ ಐದನೆ ಬಗೆಯಾಗಿದೆ. ಇಲ್ಲಿಗೆ ಅರ್ಥೋಪಕ್ಷೇಪ ಅದರ ಐದು ಬಗೆಗಳನ್ನ ವಿವೇಚಿಸಿ ಮುಂದೆ ಅರ್ಥಪ್ರಕೃತಿಗಳನ್ನು ಅದರ ಐದು ಬಗೆಗಳನ್ನು ಪರಾಮರ್ಶಿಸಲಾಗಿದೆ.

## ಅರ್ಥ ಪ್ರಕೃತಿಗಳು

ಮೂಲ ಪ್ರಯೋಜನವು ಸಿದ್ಧಿಸುವುದಕ್ಕೆ ಕಾರಣವೆನಿಸಿದ ಅಂಶಗಳನ್ನ ಅಥ-ರ್ಪಪ್ರಕೃತಿಗಳೆಂದು ಕರೆಯಲಾಗಿದೆ. ಇವನ್ನು ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಸೇರಿಸಬೇಕು. ಬೀಜ, ಬಿಂದು, ಪತಾಕೆ, ಪ್ರಕರೀ, ಕಾರ್ಯ ಎಂದು ಐದು ಬಗೆಗಳಿವೆ. ಮೊದಲು ಸ್ವಲ್ಪವಷ್ಟೆ ಮೊಳಕೆಯಂತೆ ತೋರಿಸಿ ನಂತರ ಕ್ರಮವಾಗಿ ಸಹಕಾರಿಕಾರಣಗಳ ಮೂಲಕ ಅನೇಕ ಬಗೆಯ ಅವಾಂತರ ಕಾರ್ಯಗಳನ್ನ ಸಾಧಿಸುತ್ತ ವಿಸ್ತಾರಗೊಳ್ಳುವ ವಸ್ತುವನ್ನು ನಾಯಕನಿಗೆ ಮುಖ್ಯ ಫಲವನ್ನು ದೊರಕಿಸಲು ಕಾರಣವಾಗುವುದನ್ನ

‘ಬೀಜ[೪೬]’ ಎಂದು ಕರೆಯಲಾಗಿದೆ. ಸಂಪೂರ್ಣವೃತ್ತಾಂತದಲ್ಲಿ ಒಂದು ಭಾಗವು ಮುಗಿಯುವಾಗ ಅದನ್ನು ಅಲ್ಲಿಯೇ ಕೊನೆಗಾಣಿಸದೆ ಬೇರೊಂದು ವೃತ್ತಾಂತವನ್ನು ಜೋಡಿಸುವುದನ್ನು ‘ಬಿಂದು’ ಎನ್ನಲಾಗಿದೆ. ಕೊನೆಯವರೆಗೂ ಮುಂದುವರೆಯುವ ವೃತ್ತಾಂತವೊಂದನ್ನು ಪ್ರಸಂಗದಿಂದ ಜೋಡಿಸುವುದೇ ‘ಪತಾಕೆ[೪೭]’ ಎನ್ನಲಾಗಿದೆ. “ಗರ್ಭಸಂಧಿಯಾಗಲೀ ವಿಮಾರ್ಷಸಂಧಿಯಾಗಲೀ ಮುಗಿಯುವ ಮೊದಲು ಪತಾಕೆಯು ಕೂನೆಯಾಗುತ್ತದೆ[೪೮]. ನಾಯಕನ ಚರಿತ್ರೆಯನ್ನು ತಿಳಿಸುವ ಪ್ರಸಂಗದಲ್ಲಿ ಬಂದು ಯಾವುದೋ ಒಂದು ಕಡೆಯಲ್ಲಿ ಮಾತ್ರವೇ ಇರುವಂತಹ ವೃತ್ತಾಂತವನ್ನು ‘ಪ್ರಕರಿ’ ಎನ್ನಲಾಗಿದೆ. ಇಷ್ಟವಾದದ್ದನು ನಡೆಸಲು ಅವಶ್ಯಕವಾದ, ಸ್ವಶಕ್ತಿಯಿಂದ ಸಾಧಿಸಲು ಸಾಧ್ಯವಾದ ಯಾವುದೇ ಒಂದು ಉದ್ದೇಶವನ್ನು ಸಾಧಿಸುವುದಕ್ಕಾಗಿ ಆರಂಭವಾಗಿ ಅದರ ಸಿಧ್ಧಿಗೆ ಬೇಕಾದ ಉಪಾಯಗಳನ್ನು ಸಂಗ್ರಹಿಸುವುದನ್ನ ‘ಕಾರ್ಯ’ ಎಂದು ಕರೆಯಲಾಗಿದೆ.

## ಅವಸ್ಥೆ

ಫಲವನ್ನು ಇಚ್ಛಿಸುವರು ಪ್ರಾರಂಭಿಸಿದ ಕಾರ್ಯಕ್ಕೆ ‘ಅವಸ್ಥೆ’ ಎನ್ನಲಾಗಿದೆ. ಆರಂಭ, ಪ್ರಯತ್ನ, ಪ್ರಾಪ್ತ್ಯಾಶೆ, ನಿಯತಾಪ್ತಿ ಎಂದು ಇವು ಐದು ಬಗೆಗಳಾಗಿವೆ. ನಾಯಕನ ಪ್ರಧಾನವಾದ ಉದ್ದೇಶವನ್ನು ನೇರವೇರಿಸುವುದಕ್ಕೆ ಅವನಿಗಿರುವ ಉತ್ಸಾಹವೂ ಅದರಂತೆ ಅವನ ಜೊತೆಯವರಿಗೆ ಆ ಬಗ್ಗೆ ಇರುವ ಪ್ರಬಲವಾದ ಇಚ್ಛೇಯೂ ಕಾರ್ಯದ ಆರಂಭವೆನಿಸಿದೆ[೪೯]. ಫಲವನ್ನು ನಾಯಕನಿಗಾಗಲೀ ನಾಯಿಕೆಗಾಗಲೀ ದೊರೆಸುವುದಕ್ಕಾಗಿ ಹೆಚ್ಚು ಉತ್ಸಾಹದಿಂದ ಪ್ರತಿಯೊಬ್ಬನು ಮಾಡುವುದೆಲ್ಲವೂ ‘ಪ್ರಯತ್ನ’ವಾಗಿದೆ. ಫಲವು ಸಿಧ್ಧಿಸಲು ಬೇಕಾಗಿರುವ ಕಾರಣವನ್ನೂ ಅದಕ್ಕೆ ಒದಗುವ ಆಂತಕಗಳನ್ನು ಪರಿಶೀಲಿಸುವುದರಿಂದ ಫಲವು ದೊರೆಯಬಹುದೆಂದು ಊಹಿಸುವುದೇ ‘ಪ್ರಾಪ್ತ್ಯಾಶೆ[೫೦]’ ಎನಿಸಿದೆ. ಅಪಾಯಗಳು ತೊಲಗಿದಾಗ ಫಲವು ದೊರಕುವುದೆಂಬ ನಿಶ್ಚಯವನ್ನು ಗಳಿಸುವುದೇ ‘ನಿಯತಾಪ್ತಿ’ ಎನಿಸಿದೆ. ಕಾರ್ಯದಿಂದ ಬರಬೇಕಾದ ಫಲಗಳೆಲ್ಲವನ್ನು ದೊರಕುವ ಅವಸ್ಥೆಯನ್ನ ‘ಫಲಾಗಮ’ ಎನ್ನಲಾಗಿದೆ. ನಾಟಕದ ವೃತ್ತಾಂತವನ್ನು ಈ ಐದು ಅವಸ್ಥೆಗಳೊಡನೆ ಹೊಂದಿಕೊಳ್ಳುವುದರಿಂದ ಇದರಲ್ಲಿ ಐದು ಬಗೆಯ ಸಂಧಿಗಳು ಹುಟ್ಟುತ್ತವೆ. ಒಂದು ಮುಖ್ಯಪ್ರಯೋಜನವನ್ನು ಹೊಂದಿಸುವ ವೃತ್ತಾಂತದೊಡನೆ ಸೇರಿರುವ ಇದರ ಇತರ ಭಾಗಗಳನ್ನು ಅದರೋಳಗಿನ ಪ್ರಯೋಜನದೊಡನೆ ಸೇರಿಸಿರುವುದೇ ‘ಸಂಧಿ’ ಎನ್ನಲಾಗಿದೆ. ಈ ಐದು ಸಂಧಿಗಳನ್ನು ಮುಂದೆ ವಿವರಿಸಲಾಗಿದೆ.

**ಮುಖಂ ಪ್ರತಿಮುಖಂ ಗರ್ಭೋ ವಿಮರ್ಷ ಉಪಸಂಹೃತಿಃ ।**
**ಇತಿ ಪಂಚಾಸ್ಯ ಭೇದಾಃ ಸ್ಯುಃ ಕ್ರಮಾಲ್ಲಕ್ಷಣ ಮುಚ್ಯತೇ[೫೧] ॥**

ಮುಖ, ಪ್ರತಿಮುಖ, ಗರ್ಭ, ವಿಮರ್ಷೆ, ಉಪಸಂಹೃತಿ ಎಂದು ಸಂದಿಗಳು ಬಗೆಗಳಾಗಿವೆ.

## ೧. ಮುಖಸಂಧಿ

**ಯತ್ರ ಬೀಜಸಮುತ್ಪತ್ತಿಃ ನಾನಾರ್ಥರಸ ಸಂಭವಾ ।**
**ಪ್ರಾರಂಭೇಣ ಸಮಾಯುಕ್ತ ತನ್ಮುಖಂ ಪರಿಕೀರ್ತಿತಮ್**[೫೨] **॥**

ಅನೇಕ ವೃತ್ತಾಂತಗಳಿಂದ ಶೃಂಗಾರ ಮೊದಲಾದ ರಸಗಳಿಂದ ಸಂಭವಿಸಿ ಆರಂಭದ ಅವಸ್ಥೆಯೊಡಗೂಡಿ ಬೀಜವನ್ನು ಹುಟ್ಟಿಸುವುದೇ 'ಮುಖಸಂಧಿ[೫೩]' ಎನಿಸಿದೆ. ಇದರಲ್ಲಿ ಉಪಕ್ಷೇಪ, ಪರಿಕರ, ಪರಿನ್ಯಾಸ, ವಿಲೋಭನ ಯುಕ್ತಿ, ಪ್ರಾಪ್ತಿ, ಸಮಾಧಾನ, ವಿಧಾನ, ಪರಿಭಾವನೆ, ಉದ್ಭೇದ, ಕಾರಣ, ಭೇಧಗಳೆಂಬ ಒಟ್ಟು ಹನ್ನೆರಡು ಅಂಗಗಳು ಮುಖ ಸಂಧಿಯಲ್ಲಿದೆ. ಕಾವ್ಯದಲಿ ತಿಳಿಸಬೇಕಾಗಿರುವ ವಸ್ತುವನ್ನು ಮೊದಲ ಬಾರಿಗೆ ತಿಳಿಸುವುದೇ 'ಉಪಕ್ಷೇಪ'ವೆನಿಸಿದೆ. ಕಾವ್ಯದಲ್ಲಿ ತಿಳಿಸಬೇಕಾಗಿರುವ ವಸ್ತುವೆಂದರೆ ಪ್ರಕೃತ ಸಂದರ್ಭಕ್ಕೆ ಅನ್ವಯಿಸುವ ಇತಿವೃತ್ತ ಎಂದರ್ಥ. ಉದಾಹರಣೆಗೆ

**ಲಾಕ್ಷಾಗೃಹಾನಲವಿಷ್ಟಾನ್ನ ಸಭಾಪ್ರವೇಶೈಃ ।**
**ಪ್ರಾಣೇಷು ವಿತ್ತನಿಚಯೇಷು ಚ ನಃ ಪ್ರಹೃತ್ಯ ॥**
**ಆಕೃಷ್ಯ ಪಾಂಡವವಧೂಪರಿಧಾನಕೇಶಾನ್ ।**
**ಸ್ವಸ್ಥಾ ಭವಂತಿ ಮಯಿ ಜೀವತಿ ಧಾರ್ತರಾಷ್ಟ್ರಾಃ**[೫೪] **॥**

'ಅರಗಿನ ಮನೆಯ ಬೆಂಕಿಗೆ ನಮ್ಮನ್ನು ಸಿಕ್ಕಿಸಿದ್ದು, ನಮಗೆ ವಿಷಾನ್ನವನ್ನು ಕೊಟ್ಟಿದ್ದು, ಜೂಜಾಟದಲ್ಲಿ ಸೋಲಿಸಿದ್ದು ಇಂತವುಗಳಿಂದಲೂ, ಪ್ರಾಣ, ಹಣ ಮೊದಲಾದ ಎಲ್ಲಾ ಬಗೆಗಳಲ್ಲೂ ನಮ್ಮನ್ನು ಹಿಂಸಿಸಿ, ನಮ್ಮ ಹೆಂಡತಿಯ ಬಟ್ಟೆ ಕೂದಲುಗಳನ್ನು ಸೆಳೆದು ಅವಮಾನಗೊಳಿಸಿದ್ದರಿಂದ ಈ ಧುರ್ಯೋಧನಾದಿಗಳು ನಾನು ಬದುಕಿರುವಾಗ ಹೇಗೆ ಸುಖಿಗಳಾದಾರು?' ವೇಣಿಸಂಹಾರದಲ್ಲಿ ಭೀಮಸೇನನ ಈ ಮಾತಿನಲ್ಲಿ ಉಪಕ್ಷೇಪ, ಇತಿವೃತ್ತವು ಕಂಡು ಬರುತ್ತದೆ.

ಹಿಂದೆ ತಿಳಿಯಪಡಿಸಿದ ಕಾವ್ಯರ್ಥವನ್ನು ಹೆಚ್ಚು ಬೆಳೆಸುವುದೇ 'ಪರಿಕರ'ವೆನಿಸಿದೆ. ಉದಾಹರಣೆಗೆ

**ಪ್ರವೃತ್ತಂ ಯದ್ವೈರಂ ಮಮ ಖಲು ಶಿಶೋರೇವ ಕುರುಭಿಃ ।**
**ನ ತತ್ರಾರ್ಯೋಹೇತುರ್ನ ಭವತಿ ಕಿರೀಟೀ ನ ಚ ಯುವಾಮ್ ॥**
**ಜರಾ ಸಂಧಸ್ಯೋರಸ್ಥಲಮಿವ ವಿರೂಢಂ ಪುನರಪಿ ।**
**ಕ್ರುಧಾ ಭೀಮಃ ಸಂಧಿವಿಘಟಯತಿ ಯೂಯಂ ಘಟಯತ** [೫೫]**॥**

"ನಾನು ಶಿಶುವಾಗಿರುವಾಗಲೇ ಕೌರವರೊಡನೆ ದ್ವೇಷವು ಬೆಳೆಯಿತು. ಈ ಬಗ್ಗೆ ಹಿರಿಯ ಅಣ್ಣನಾಗಲೀ, ಅರ್ಜುನನಾಗಲೀ, ನಕುಲಸಹದೇವರಾಗಲಿ, ಕಾರಣವೆನಿಸಿಲ್ಲ ಆ ಬಗ್ಗೆ ನಾನೇ ಕಾರಣವೆನಿಸುವೆನು. ಈ ಸಂಧಿಯಿಂದ ನನಗೆ ಶಾಂತಿಯಾಗಲಾರದು ಆದ್ದರಿಂದಲೇ ಭೀಮನು ಸಿಟ್ಟಿನಿಂದ ಹಿಂದೆ ಜರಾಸಂಧನ ತೊಡೆಯನ್ನು ಸೀಳಿದಂತೆ ನಿಮ್ಮೆಲ್ಲರ ಪ್ರಯತ್ನದಿಂದಲೂ ಸಂಭವಿಸುವ ಸಂಧಿಯನ್ನು ಮತ್ತೆ ಸೀಳಲಿರುವೆನು ನಾವು ಸಮರ್ಥರಾದರೆ ಅದನ್ನು ಕೂಡಿಸಿರಿ" ಹೀಗೆ ಬೆಳೆದ ವೃತ್ತಾಂತವನ್ನು ನಿಶ್ಚಯವೆಂದು ಮನಸ್ಸಿನಲ್ಲಿ ಭಾವಿಸಿ ಹೃದಯದಲ್ಲಿ ನಿಲ್ಲಿಸಿಕೊಳ್ಳುವುದನ್ನ 'ಪರಿನ್ಯಾಸ' ಎನಿಸಿದೆ.

ಒಂದೊಂದು ಪಾತ್ರಕ್ಕೆ ಸಂಬಂಧಿಸಿದ ಶೌರ್ಯ ಸೌಂದರ್ಯ ಮೊದಲಾದ ಗುಣಗಳನ್ನು ತಿಳಿಸುವುದನ್ನ 'ವಿಲೋಭನ' ಎಂದು ಕರೆಯಲಾಗಿದೆ. ಉದಾಹರಣೆಗೆ ದ್ರೌಪತಿಯು 'ಸ್ವಾಮಿ ನೀನು ಕೋಪಗೊಂಡರೆ ಯಾವುದು ತಾನೇ ಆಸಾಧ್ಯವೆನಿಸೀತು?' ಹೀಗೆಂದು ಭೀಮನ ಶೌರ್ಯವನ್ನು ಪ್ರಶಂಸೆ ಮಾಡಿದ್ದರಿಂದ ದುರ್ಯೋಧನನ ಮರಣದಲ್ಲಿ ಆಸೆಯನ್ನು ಹುಟ್ಟಿಸುವುದರಿಂದ ಇದು 'ವೀಲೋಭನ' ಎಂಬ ಸಂಧ್ಯಾಂಗವೆನಿಸಿದೆ. ಇದು ಯವೌವನದ ವಿಲಾಸವೆನಿಸಿದೆ. ಚಂದ್ರಕಲೆಯ ವರ್ಣನೆಯಿಂದ ನಾಯಕಿಯಲ್ಲಿ ತನಗೆ ಇರುವ ಆಸೆಯನ್ನು ತಿಳಿಸಿರುವ ಪ್ರಯುಕ್ತ ಇದನ್ನ 'ವಿಲೋಭನ[೩೬]' ಎಂದು ಕರೆಯಲಾಗಿದೆ.

ತಿಳಿಯಬೇಕಾಗಿರುವ ವಿಷಯಗಳನ್ನು ನಿಶ್ಚಯಿಸುವುದೇ 'ಯುಕ್ತಿ' ಎನಿಸಿದೆ. ಇದೇ ಸಿದ್ಧಾಂತವೆಂದು ಭಾವಿಸುವುದು 'ಯುಕ್ತಿ' ಎನ್ನಲಾಗಿದೆ. ಉದಾಹರಣೆಗೆ ವೇಣಿಸಂಹಾರ ದಲ್ಲಿ ಸಹದೇವನು ಭೀಮನಿಗೆ ಪೂಜ್ಯನೇ, ಮಹಾರಾಜನ ಆಜ್ಞೆಗೆ ಅರ್ಥವಿಲ್ಲವೆಂದು ನೀನು ತಿಳಿದಿರುವೆಯಾ ಎಂದು ಕೇಳುವನು ಇಲ್ಲಿಂದ ಮುಂದೆ ಭೀಮನ ಮಾತು ಬರುವವರೆಗೂ ಇರುವುದೆಲ್ಲವೂ ಯುಕ್ತಿ ಎನಿಸಿದೆ. "ಸಿಟ್ಟಿನಿಂದ ಶತ್ರುಗಳ ವಂಶವನ್ನು ನಾಶಮಾಡುವುದು. ನಿಮಗೆ ಲೋಕದಲ್ಲಿ ನಾಚಿಕೆಯನ್ನು ಹುಟ್ಟಿಸುತ್ತದೆ ಹೆಂಡತಿಗೆ ಸಭೆಯಲ್ಲಿ ಕೂದಲನ್ನು ಶತ್ರುವು ಸೆಳೆದದ್ದರಿಂದ ಆದ ಅವಮಾನವು ನಿಮಗೆ ನಾಚಿಕೆಯನ್ನು ಹುಟ್ಟಿಸುವುದಿಲ್ಲ ಇದು ನಿಜವಾಗಿಯೂ ಆಶ್ಚರ್ಯ[೩೭]" ಇಲ್ಲಿ ಶತ್ರುವಿನ ವಂಶವನ್ನು ನಾಶಮಾಡಬೇಕಾದ್ದು ಅವಶ್ಯಕವೆಂಬುದನ್ನು ನಿಶ್ಚಯಿಸುವುದೇ 'ಯುಕ್ತಿ' ಆಗಿದೆ.

ಆಯಾಯ ಪಾತ್ರಗಳಿಗೆ ಸುಖವನ್ನು ದೊರಕಿಸುವುದನ್ನ 'ಪ್ರಾಪ್ತಿ' ಎಂದು ಕರೆಯಲಾಗಿದೆ. 'ಕೌರವರನ್ನು ಯುದ್ಧದಲ್ಲಿ ಕೋಪದಿಂದ ನಾನು ನಾಶಮಾಡುವುದಿಲ್ಲವೇ? ಹೀಗೆ ಭೀಮನು ಹೇಳುವ ಮಾತನ್ನು ಕೇಳಿಸಿಕೊಂಡು ದ್ರೌಪದಿಯು ಸಂತೋಷಗೊಂಡು 'ಸ್ವಾಮಿ ನಿನ್ನ ಈ ಮಾತನ್ನು ನಾನು ಹಿಂದೆ ಕೇಳಿರಲಿಲ್ಲ. ಇದನ್ನು ಮತ್ತೆ ಮತ್ತೆ ಹೇಳು[೩೮]' ಎಂದು ಹೇಳುವಳು. ಇಲ್ಲಿ ಭೀಮನ ಮಾತನ್ನು ಕೇಳಿದ್ದರಿಂದ ದ್ರೌಪದಿಗೆ ದೊರೆತ ಸುಖವನ್ನು 'ಪ್ರಾಪ್ತಿ' ಎಂಬ ಸಂಧ್ಯಾಂಗವಾಗಿದೆ.

ಕಥೆಯ ಮೂಲಕಾರಣವೆನಿಸಿದ ಬೀಜವು ನಾಯಕನಿಗೆ ಸಂಬಂಧಿಸಿರುವುದೆಂಬ ಅರಿವೇ 'ಸಮಾಧಾನ'ವೆನಿಸಿದೆ. ಸುಖದಿಂದಲೂ ದುಃಖದಿಂದಲೂ ಕೂಡಿಕೊಂಡಿರುವ ಸ್ಥಿತಿಯೇ 'ವಿಧಾನ'ವೆನಿಸಿದೆ. ಕುತೂಹಲದಿಂದ ಹೊರಡುವ ಮಾತೇ 'ಪರಿಭಾವನೆ' ತಿಳಿಸಿದ ಬೀಜವನ್ನು ಮತ್ತೆ ಬೆಳೆಸುವುದೇ 'ಉದ್ಭೇದ' ನಾಯಕನಿಗೆ ಸಂಬಂಧಿಸಿದ ಪ್ರಕೃತ ಕಾರ್ಯವನ್ನು ಆರಂಭಿಸುವುದೇ 'ಕರಣ', ಕಾರ್ಯಸಾಧನೆಗಾಗಿ ಜೊತೆಯವರಿಂದ ಬೇರೆಯಾಗುವುದೇ 'ಭೇದ' ಎಂದು ಕರೆಯಲಾಗಿದೆ. ಇಲ್ಲಿಯವರೆಗೆ ಮುಖ ಸಂಧಿ ಮತ್ತು ಅದರ ಹನ್ನೆರಡು ಅಂಗಗಳನ್ನು ವಿವೇಚಿಸಿ ಮುಂದಿನ ಪ್ರಮುಖ ಸಂಧಿಯನ್ನು ವಿವೇಚಿಸಲಾಗಿದೆ.

### ೨. ಪ್ರತಿಮುಖ ಸಂಧಿ

**ಫಲಪ್ರಧಾನೋಪಾಯಸ್ಯ ಮುಖಸಂಧಿವೇಶಿನಃ**
**ಲಕ್ಷಾಲಕ್ಷ್ಯ ಇವೋದ್ಭೇದೋ ಯತ್ರ ಪ್ರತಿಮುಖಂ ಚ ತತ್** [೫೯]

ಮುಖಸಂಧಿಯಲ್ಲಿ ಹುಟ್ಟಿ ಮುಖ್ಯ ಪ್ರಯೋಜನಕ್ಕೆ ಕಾರಣವೆನಿಸಿದ್ದನ್ನು ಸ್ವಲ್ಪ ಕಾಣುವಂತೆಯೂ, ಸ್ವಲ್ಪ ಕಾಣದಂತೆಯೂ ಪ್ರಕಾಶಪಡಿಸುವುದನ್ನ 'ಪ್ರತಿಮುಖಸಂಧಿ[೬೦]' ಎಂದು ಕರೆಯಲಾಗಿದೆ. ಈ ಸಂಧಿಯು ವಿಲಾಸ, ಪರಿಸರ್ಪ ವಿದೃತ, ತಾಪನ, ನರ್ಮ, ನರ್ಮದ್ಯುತಿ, ಪ್ರಗಮನ, ವಿರೋಧ, ಪರ್ಯುಪಾಸನ, ಪುಷ್ಪಾ, ವಜ್ರ, ಉಪನ್ಯಾಸ, ವರ್ಣಸಂಹಾರ ಎಂಬ ಹದಿಮೂರು ಅಂಗಗಳನ್ನು ಪ್ರತಿಮುಖಸಂಧಿಯು ಹೊಂದಿದೆ. ಒಬ್ಬನಿಗೆ ಇಷ್ಟವಾದ ವಸ್ತುವು ನಷ್ಟವಾಗಿದ್ದರೆ ಅದನ್ನು ಹುಡುಕುವುದೇ 'ಪರಿಸರ್ಪ' ಎನಿಸಿದೆ. ಉದಾಹರಣೆಗೆ

**ಕಾಮಂ ಪ್ರಿಯಾನ ಸುಲಭಾ ಮನಸ್ತು ತದ್ಭಾವದರ್ಶನಾಶ್ವಾಸಿ ।**
**ಅಕೃತ್ವಾರ್ಥೇಽಪಿ ನುನಸಿಜೇ ರತಿಮುಭಯಪ್ರಾರ್ಥನಾ ಕುರುತೇ**[೬೧] ॥

"ಲತಾಮಂಟಪದಲ್ಲಿ ಶಕುಂತಲೆ ಇರಬೇಕು ಏಕೆಂದರೆ ಬಿಳುಪಾದ ಮರಳಿರುವ ಈ ಲತಾಮಂಟಪದ ಬಾಗಿಲಿನಲ್ಲಿ ಮುಂದುಗಡೆ ಬಹಳ ದೊಡ್ಡವಾಗಿದ್ದು ಶಾರೀರದ ಹಿಂಭಾಗದ ಭಾರದಿಂದ ಹಿಂದೆ ಕೊಂಚ ಮೊಟಕಾಗಿದ್ದು ಈಗ ತಾನೆ ಇಟ್ಟಿರುವ ಹೆಜ್ಜೆಯ ಗುರುತು ಕಾಣಿಸುತ್ತಲಿದೆ" ಹೀಗೆ ಹೇಳುವುದರಿಂದ ಅವನಿಗೆ ಇಷ್ಟವಾದ ಶಕುಂತಲೆಯು ಕಾಣಿಸದೆ ಇರುವುದರಿಂದ ಅವಳಿಗಾಗಿ ಅವನು ಹುಡುಕುವುದನ್ನ ತಿಳಿಸುವುದೇ 'ಪರಿಸರ್ಪ[೬೨]' ಎನಿಸಿದೆ. ಮೊದಲು ಮಾಡಿಕೊಂಡ ಸಮಾಧಾನವನ್ನು ಒಪ್ಪದಿರುವುದೇ 'ವಿಧೃತ[೬೩]' ಎನಿಸಿದೆ. ಕಷ್ಟವು ಸಂಭವಿಸಿದಾಗ ಅದನ್ನು ಹೇಗೆ ಹೋಗಲಾಡಿಸಿ ಕೊಳ್ಳಬೇಕೆಂಬುದನ್ನ ಕಾಣದಿರುವುದೇ 'ತಪನ[೬೪]' ಎನ್ನಲಾಗಿದೆ. ತನಗೆ ಕಷ್ಟಬಂದಕಾಲದಲ್ಲಿ ಮನಸ್ಸಿನ ಸಮಾಧಾನಕ್ಕಾಗಿ ಬೇರೆಯವರಲ್ಲಿ ಕೊಂಚ

ಹಾಸ್ಯ ಮಾಡುವುದನ್ನು 'ನರ್ಮ[೬೫]' ಎಂದು ಕರೆಯಲಾಗಿದೆ. ಪರಿಹಾಸವಿದ್ದರೂ ತೋರುವ ಧೈರ್ಯವೇ 'ನರ್ಮದ್ಯುತಿ' ಎನಿಸಿದೆ. ಮುಂದು ಮುಂದಿನ ಮಾತು ಉತ್ಕೃಷ್ಟವಾಗಿರುವಂತೆ ಮಾತನಾಡುವುದು 'ಪ್ರಗಮನ[೬೬]'ವಾಗಿದೆ. ಯಾವುದಾದರೂ ವಿಪತ್ತು ಸಂಭವಿಸುವುದನ್ನು 'ವಿರೋಧ' ಎಂದು ಕರೆಯಲಾಗಿದೆ. ತಾನು ಮಾಡಿದ ತಪ್ಪನ್ನು ತೊಳೆದುಕೊಳ್ಳಲು ಸಮಾಧಾನ ಮಾಡಿಕೊಳ್ಳುವುದನ್ನು 'ಪರ್ಯುಪಾಸನ' ಎನ್ನಲಾಗಿದೆ. ಹೆಚ್ಚಿನ ಉತ್ಕರ್ಷವನ್ನು ತಿಳಿಸುವ ಮಾತೇ 'ಪುಷ್ಟಿ'ಯಾಗಿದೆ. ಹೂವಿನಂತೆ ಇದು ಚಿತ್ತವನ್ನು ಆಕರ್ಷಿಸುವುದರಿಂದ 'ಪುಷ್ಪ' ಎಂದು ಕರೆಯಲಾಗಿದೆ. ಕೇಳುವವರಿಗೆ ಕಠಿಣವಾಗಿ ತೋರುವ ಮಾತು 'ವಜ್ರ'ವೆನಿಸಿದೆ. ಯುಕ್ತಿಯಿಂದ ಸಾಧಿಸಿದ ಅಥ–ರ್ವವು 'ಉಪನ್ಯಾಸ'ವಾಗಿದೆ. ಯಾವುದಾದರೊಂದು ವಿಷಯವನ್ನು ಯುಕ್ತಿಯಿಂದ ಉಪಪಾದನ ಮಾಡುವುದನ್ನು 'ಉಪನ್ಯಾಸ' ಎನ್ನಲಾಗಿದೆ. "ಬ್ರಾಹ್ಮಣ ಮೊದಲಾದ ನಾಲ್ಕು ವರ್ಣದವರನ್ನು ಒಂದೆಡೆಗೆ ಸೇರಿಸುವುದನ್ನ 'ವರ್ಣ ಸಂಹಾರ' ಎಂದು ಕರೆಯಾಲಾಗಿದೆ.

**ಪರಿಷದಿಯಮೃಷೀಣಾಮೇಷ ವೀರೋ ಯುಧಾಜಿತ್ ।**
**ಸರಾಹ ನೃಪತಿರಮಾತ್ಯೈಃ ಲೋಮಪಾದಶ್ಚ ವೃದ್ಧಃ ॥**
**ಅಯಮವಿರತಯಾಜ್ಞೋ ಬ್ರಹ್ಮವಾದೀ ಪುರಾಣಃ ।**
**ಪ್ರಭುರಪಿ ಜನಕಾನಾಮಂಗ ಭೋಯಾಚಕಾಸ್ತೇ[೬೭] ॥**

"ಎಲೈ ಪರಶುರಾಮನೇ, ಇದು ಋಷಿಗಳ ಸಭೆ ಇಲ್ಲಿರುವ ವೀರನು ಯದಾಜಿತನೆಂಬ ರಾಜನು ಮಂತ್ರಿಗಳೊಡನೆ ಲೋಮಪಾದನೆಂಬ ರಾಜನೂ ಇಲ್ಲಿಗೆ ಬಂದಿರುವನು ಯಾವಾಗಲೂ ಯಜ್ಞಾಗಳನ್ನಾಚರಿಸುತ್ತ ಬ್ರಹ್ಮವಾದಿ ಎನಿಸಿ ಜನಕನ ವಂಶೀಯರಿಗೆ ಪ್ರಭುವೆನಿಸಿ ಹಳಬನಾದ ಸೀರಧ್ವಜನೂ ಇಲ್ಲಿಯೇ ಇರುವನು ಇವರೆಲ್ಲರೂ ನಿನ್ನಲ್ಲಿ ಶಾಂತಿಭಿಕ್ಷೆಗಾಗಿ ಬಂದಿರುವರು". ಇಲ್ಲಿ ಋಷಿಗಳು, ಕ್ಷತ್ರಿಯರು, ವೈಶ್ಯರು, ಶೂದ್ರರು, ಎಲ್ಲರೂ ಸೇರಿರುವುದರಿಂದ 'ವರ್ಣಸಂಹಾರ[೬೮]'ವೆಂಬ ಅಂಗವೆನಿಸಿದೆ. ಇಲ್ಲಿಗೆ ಪ್ರತಿಮುಖ ಸಂಧಿ ಇದರ ಹದಿಮೂರು ಅಂಗಗಳನ್ನು ವಿವೇಚಿಸಿ ನಂತರ ಬರುವ ಗರ್ಭಸಂಧಿ ಅದರ ಹದಿಮೂರು ಅಂಗಗಳನ್ನು ವಿಚಾರ ಮಾಡಲಾಗಿದೆ.

### ೩. ಗರ್ಭಸಂಧಿ

**ಫಲಪ್ರಧಾನೋಪಾಯಸ್ಯ ಪ್ರಾಗುದ್ಭಿನ್ನಸ್ಯ ಕಿಂಚನ ।**
**ಗರ್ಭೋ ಯತ್ರ ಸಮುದ್ಭೇದೋ ಹ್ರಾಸಾನ್ವೇಷಣವಾನ್ ಮುಹುಃ[೬೯] ॥**

ಮುಖಪ್ರತಿಮುಖ ಸಂಧಿಗಳೆರಡರಲ್ಲಿ ಕೊಂಚ ಪ್ರಕಾಶಗೊಂಡು ಫಲಸಿದ್ಧಿಗೆ

ಮುಖ್ಯ ಪ್ರಯೋಜನವೆನಿಸಿ ಕ್ಷೀಣವಾಗುವುದೆಂದು ಊಹಿಸುತ್ತಿರುವಾಗಲೇ ಪ್ರಕಾಶಗೊಳ್ಳುವುದನ್ನು 'ಗರ್ಭಸಂಧಿ' ಎಂದು ಕರೆಯಲಾಗಿದೆ. ಮುಖ್ಯಫಲವನ್ನು ತನ್ನೊಳಗೆ ಸೇರಿಸಿ ಕೊಳ್ಳುವುದರಿಂದ ಗರ್ಭಸಂಧಿ ಎಂಬ ಹೆಸರು ಅನ್ವರ್ಥವಾಗಿದೆ. ಉದಾಹರಣೆಗೆ "ಸಖಿ ನೀನು ಈಗ ದಾಕ್ಷಿಣ್ಯ ಪ್ರಕೃತಿಯಿಲ್ಲದವಳಾಗಿರುವೆ. ರಾಜನು ನಿನನ್ನು ತನ್ನ ಕೈಯಿಂದಲೇ ಹಿಡಿದುಕೊಂಡರೂ ನೀನು ಕೋಪವನ್ನು ಬಿಟ್ಟಿಲ್ಲ. ಈ ಮಾತಿನಿಂದ ರಾಜನಿಗೆ ನಾಯಿಕೆಯಲ್ಲಿ ಇದ್ದ ಅನುರಾಗವು ಪ್ರಕಾಶವಾಗುತ್ತದೆ. ಮತ್ತೆ ವಾಸವದತೆಯ ಪ್ರವೇಶದಿಂದ ಅನುರಾಗವು ಮೊಟಕಾಗುತ್ತದೆ ಮತ್ತೆ ಪ್ರಕಾಶಗೊಳ್ಳುತ್ತದೆ[೭೦].

ಗರ್ಭಸಂಧಿಯು ಅಭೋತಾಹರಣ, ಮಾರ್ಗ, ರೂಪ, ಉದಾಹರಣ, ಕ್ರಮ, ಸಂಗ್ರಹ, ಅನುಮಾನ, ಪ್ರಾರ್ಥನೆ, ಆಕ್ಷಿಪ್ತಿ, ತೋಟಕ, ಅಧಿಬಲ, ಉದ್ವೇಗ, ವಿದ್ರವ ಒಟ್ಟು ಹದಿಮೂರು ಅಂಗಗಳೆನಿಸಿದೆ. ಅಸತ್ಯವಾದ ಅಂಶವನ್ನು ಚಮತ್ಕಾರವಾದ ರೀತಿಯಲ್ಲಿ ತಿಳಿಸಿ ಕಪಟದಿಂದ ಕೂಡಿದ ಮಾತನಾಡುವುದೇ 'ಅಭೂತಾಹರಣ' ಎಂದು ಕರೆಯಲಾಗಿದೆ. ಉದಾಹರಣೆಗೆ,

**ಅಶ್ವತ್ಥಾಮಾ ಹತ ಇತಿ ಪೃಥಾಸೂನುನಾ ಸ್ಪಷ್ಟಮುಕ್ತ್ವಾ ।**
**ಸ್ವೈರಂ ಶೇಷೇ ಗಜ ಇತಿ ಪುನಾರ್ವ್ಯಾಹೃತಂ ಸತ್ಯವಾಚಾ [೭೧]॥**

"ಅಶ್ವತ್ಥಾಮನು ಸತ್ತನು ಎಂದು ಯುಧಿಷ್ಠಿರನು ಸ್ಪಷ್ಟವಾಗಿ ಎಲ್ಲರಿಗೂ ಕೇಳಿಸುವಂತೆ ಹೇಳಿ ಕೊನೆಯಲ್ಲಿ ಮೆಲ್ಲಗೆ ಬೇರೆ ಯಾರಿಗೂ ಹೇಳಿ ಕೂನೆಯಲ್ಲಿ ಮೆಲ್ಲಗೆ ಬೇರೆಯಾರಿಗೂ ಕೇಳಿಸದಂತೆ ಆ ಹೆಸರಿನ ಆನೆಯು ಸತ್ತಿತೆಂದು ಸತ್ಯವಾದ ಮಾತಿನಿಂದ ತಿಳಿಸಿದನು". ಇಲ್ಲಿ ಮಾತಿನಲ್ಲಿ ವಂಚನೆಯಿರುವುದರಿಂದ ಹೀಗೆ ತಿಳಿಸಿದ್ದು 'ಅಭೂತಾಹರಣ'ವೆನಿಸಿದೆ. ಯಥಾರ್ಥವಾಗಿ ಮಾಡಬೇಕಾದ್ದನ್ನು ತಿಳಿಸುವುದು 'ಮಾರ್ಗ'ವೆನಿಸಿದೆ. ಧಾರ್ಮಿಕರು ಸತ್ಯವಾದ ವಿಷಯವನ್ನು ತಿಳಿಸುವುದೇ ಮಾರ್ಗ.

**ಗೃಹತಾಮರ್ಜಿತಮಿದಂ ಭಾರ್ಯೊತನಯ ವಿಕ್ರಯಾತ್ ॥**
**ಶೇಷಸ್ಯಾರ್ಥೇ ಕರಿಷ್ಯಾಮಿ ಚಂಡಾಲೇಽಪ್ಯಾತ್ಮ ವಿಕ್ರಯಮ್[೭೨] ॥**

ರಾಜನು "ಸ್ವಾಮಿ, ಹೆಂಡತಿ ಮಗ ಇವರನ್ನು ಮಾರಾಟ ಮಾಡಿದ್ದರಿಂದ ಬಂದಿರುವ ಹಣವನ್ನು ದಯವಿಟ್ಟು ಸ್ವೀಕರಿಸಿ, ಉಳಿದ ಹಣವನ್ನು ತೀರಸಲು ಚಂಡಾಲನಲ್ಲಿಯಾದರೂ ನನ್ನನ್ನು ಮಾರಿಕೂಳ್ಳುವೆನು" ಇಲ್ಲಿ ಹರಿಶ್ಚಂದ್ರನು ತನ್ನ ಕರ್ತವ್ಯ ಯಾವುದೆಂಬುದನ್ನು ತಿಳಿಸಿರುವುದರಿಂದ ಇದು ಮಾರ್ಗವೆನಿಸಿದೆ. ವಿಚಾರದಿಂದ ಕೂಡಿದ ಮಾತು 'ರೂಪ'ವೆನಿಸಿದೆ. ತನಗಾಗಲೀ ಉತ್ಕರ್ಷವನ್ನು ಸೂಚಿಸುವ ಮಾತು 'ಉದಾಹರಣ[೭೩]' ಎಂದು ಕರೆಯಲಾಗಿದೆ. ಒಬ್ಬನು ಆಚ–

ರಿಸುತ್ತಿರುವ ಚೇಷ್ಟೆಯ ಮರ್ಮವನ್ನು ತಿಳಿಯುವುದನ್ನು ‘ಕ್ರಮ[೭೪]’ ಎನ್ನಲಾಗಿದೆ. ಒಳ್ಳೆಯ ಮಾತನ್ನಾಡುವ ಕೊಡುವ ದಾನದಿಂದ ಹಣವನ್ನು ಗಳಿಸುವುದನ್ನ ‘ಸಂಗ್ರಹ’ ಎನ್ನಲಾಗಿದೆ. ಸಾಧಿಸಬೇಕಾಗಿರುವ ಫಲವನ್ನು ಸಾಧಿಸಲು ಕಾರಣವಿದೆ ಎಂದು ಊಹಿಸುವುದೇ ‘ಅನುಮಾನ[೭೫]’ ಎನಿಸಿದೆ. ಸುರತ, ಪ್ರೀತಿ, ಉತ್ಸವ, ಇವುಗಳನ್ನು ನಡೆಸಲಿಕ್ಕಾಗಿ ಯಾಚಿಸುವುದನ್ನ ‘ಪ್ರಾರ್ಥನೆ’ ಎನಿಸಿದೆ. ಗೋಪ್ಯವಾದ ವಿಷಯವನ್ನು ಪ್ರಕಾಶಪಡಿಸುವುದೇ ‘ಕ್ಷಿಪ್ತಿ[೭೬]’ ಎನ್ನಲಾಗಿದೆ. ಕೋಪಗೊಂಡವನು ತನ್ನ ಕೋಪವನ್ನು ತಿಳಿಸುವ ಮಾತು ‘ತ್ರೋಟಕ[೭೭]’ ವಾಗಿದೆ. ಛಲದಿಂದ ಅಭಿಪ್ರಾಯವನ್ನು ತಿಳಿಯುವುದು ಅಂದರೆ ಬುದ್ಧಿಬಲದ ಆಧಾರದ ಮೇಲೆ ತಿಳಿಯುವುದೇ ‘ಅಧಿಬಲ’ ರಾಜನೇ ಮೊದಲಾದವರಿಂದ ಹುಟ್ಟುವ ಭಯವನ್ನ ‘ಉದ್ವೇಗ’ ಎನಿಸಿದೆ. ಅನಿಷ್ಟವನ್ನು ಊಹಿಸುವ ಶಂಕೆ, ಮುಂದೆ ಅನಿಷ್ಟವಾಗುವುದೆಂಬ ಭಯ ಇವುಗಳಿಂದ ಚಿತ್ತವು ಚಲಿಸುವುದೇ ‘ವಿದ್ರವ’ ಇವಿಷ್ಟು ಗರ್ಭಸಂಧಿ ಮತ್ತು ಅದರ ಹದಿಮೂರು ಅಂಗಗಳಾಗಿವೆ.

## ೪. ವಿಮರ್ಷ ಸಂಧಿ

**ಯತ್ರ ಮುಖ್ಯಪಲೋವಾಯ ಉದ್ಭಿನ್ನೋ ಗರ್ಭತೋಽಧಿಕಃ ।**
**ಶಾಪಾದ್ಯೈಃ ಸಾಂತರಾಯಶ್ಚ ಸ ವಿಮರ್ಷ ಇತಿ ಸ್ಮೃತಃ [೭೮]॥**

ಮುಖ್ಯಫಲವನ್ನು ದೊರಕಿಸುವಂತಾಗುವ ಗರ್ಭಸಂಧಿಗಿಂತಲೂ ಹೆಚ್ಚು ಪ್ರಕಾಶಗೊಂಡು ದೊಡ್ಡವರ ಶಾಪವೇ ಮೊದಲಾದ ಕಾರಣಗಳಿಂದ ಅಡಚಣೆಗಳಿಗೆ ಸಿಲುಕುವುದೆಂದು ತಿಳಿದು ಬರುವುದೇ ‘ವಿಮರ್ಷಸಂಧಿ’ ಎಂದು ಕರೆಯಲಾಗಿದೆ. ಉದಾಹರಣೆಗೆ ಶಾಕುಂತಲ ನಾಟಕದಲ್ಲಿ “ಅನುಸೂಯ ಪ್ರಿಯವಂದೆಗೆ ಹೀಗೆ ಹೇಳುತ್ತಾಳೆ. ಗಾಂಧರ್ವ ವಿವಾಹದಿಂದ ನಮ್ಮ ಪ್ರಿಯಸಖಿ ಶಕುಂತಲೆಗೆ ಆಶ್ರಮದಲ್ಲಿ ಕಲ್ಯಾಣವು ಆಗಲೇ ನಡೆಯಿತು ಆದರೂ ಅನುಗುಣವಾದ ಪತಿಯು ದೊರೆತನಾದ್ದರಿಂದ ಮನಸ್ಸಿಗೆ ನೆಮ್ಮದಿಯುಂಟಾಯಿತು ಹಾಗಾದರೂ ಇಲ್ಲಿ ಇಷ್ಟನ್ನು ಆಚರಿಸಬೇಕು[೭೯]”.

ಅಪವಾದ, ಸಂಫೇಟ, ವ್ಯವಸಾಯ, ದ್ರವ, ದ್ಯುತಿ, ಶಕ್ತಿ, ಪ್ರಸಂಗ, ಭೇದ, ಪ್ರತಿಷೇಧ, ವೀರೊಧನ, ಪ್ರರೋಚನ, ಆದಾನ, ಛಾದನ ಇವಿಷ್ಟು ವಿಮರ್ಷಸಂಧಿಯ ಹದಿಮೂರು ಅಂಗಗಳಾಗಿವೆ. ಒಬ್ಬನು ತನ್ನಲ್ಲಿರುವ ದೋಷವನ್ನು ತಿಳಿಸುವುದೇ ‘ಅಪವಾದ’ ಎಂದು ಕರೆಯಲಾಗಿದೆ. ಉದಾಹರಣೆಗೆ ಯುದ್ಧಿಷ್ಠಿರನು “ಪಾಂಚಾಲಕನೇ, ಆ ನೀಚನು ದುಷ್ಟನೂ ಆದ ದುರ್ಯೋಧನನು ಮಾರ್ಗವಷ್ಟೇ ಅಲ್ಲದೇ ಹಿಂದೆ ದೇವಿಯ ಕೇಶವನ್ನು ಮುಟ್ಟಿದ ಮಹಾಪಾಪಕ್ಕೆ ಮೂಲಕಾರಣವೆನಿಸಿದ ಆ ದುಷ್ಠನೇ ಸಿಕ್ಕಿದನು[೮೦]” ಹೀಗೆ ಹೇಳುವನು ಇಲ್ಲಿ ದುರ್ಯೋದನನಲ್ಲಿದ್ದ ದೋಷವನ್ನು ತಿಳಿಸಿರುವುದರಿಂದ ಇದು ‘ಅಪವಾದ’ ಎಂದು ಕರೆಯಲಾಗಿದೆ.

ಸಿಟ್ಟಿನಿಂದ ಬಿರುಸಾಗಿ ಮಾತನಾಡುವುದೇ 'ಸಂಫೇಟ' ಎನ್ನಲಾಗಿದೆ. ಉದಾಹರಣೆಗೆ "ಧುರ್ಯೋಧನನು ಮೊದಲಿಸಲು ಭೀಮನೂ ಯುಧಿಷ್ಠರನು ಕೋಪದಿಂದ ಹಾ! ಪಾಪಿ! ಹಾ! ಪಾಪಿ! ಎಂದು ಮುಂತಾಗಿ ಹೇಳುವರು[೮೧]. ಹೀಗೆ ಅವರು ಸಿಟ್ಟಿನಿಂದ ಮಾತನಾಡಿದ್ದು ಸಂಫೇಟವೆನಿಸಿದೆ. ಕರ್ತವ್ಯವನ್ನು ಸೂಚಿಸುವುದೇ 'ಪ್ರತಿಜ್ಞೆ'. ಇಂತಹ ಪ್ರತಿಜ್ಞೆಯನ್ನು ನಡೆಸಲು ಸಂಭವಿಸುವ ಉದ್ಯಮವೇ 'ವ್ಯವಸಾಯ' ಎನ್ನಲಾಗಿದೆ. ಶೋಕದಿಂದಲೂ, ಕ್ರೋಧದಿಂದಲೂ, ಗುರುಜನರನ್ನು ಅತಿಕ್ರಮಿಸಿ ನಡೆಯುವುದು 'ದ್ರವ'ವೆನಿಸಿದೆ. ಒಬ್ಬನನ್ನು ಗದರಿಸುವುದೋ ಆಥವಾ ಬೆದರಿಸುವುದೋ 'ದ್ಯುತಿ'. ಪರಸ್ಪರವಾಗಿ ಸಂಭವಿಸುವ ವಿವಾದವನ್ನು ಪರಿಹರಿಸಿಕೊಳ್ಳುವುದನ್ನ 'ಶಕ್ತಿ' ತಂದೆ ಮೊದಲಾದ ಹಿರಿಯರ ಹೆಚ್ಚುಗಾರಿಕೆಯನ್ನು ತಿಳಿಸುವುದು 'ಪ್ರಸಂಗ[೮೨]', ಶೋಕ ಮೊದಲಾದ ಮಾನಸಿಕ ವ್ಯಾಪಾರದಿಂದಾಗಲೀ, ದೈಹಿಕ ವ್ಯಾಪರದಿಂದಾಗಲೀ ಹುಟ್ಟಿದ ಆಯಾಸವು 'ಖೇದ[೮೩]' ಎನಿಸಿದೆ. ಸೀತೆಯ ವಿಯೋಗದಿಂದ ರಾಮನಿಗೆ ಹೆಚ್ಚು ದುಃಖವುಂಟಾಗಿ ಅದರಿಂದ ಆಗಿರುವ ಮನಸ್ಸಿನ ವ್ಯಥೆಯನ್ನು ತಿಳಿಸಿರುವುದರಿಂದ ಇದು ಖೇದವನಿಸಿದೆ[೮೪]. ಇಷ್ಟಾರ್ಥವನ್ನು ಹೊಂದಲು ಇರುವ ತಡೆಯನ್ನು ತಿಳಿಸುವುದು 'ಪ್ರತಿಷೇದ[೮೫]' ಎನಿಸಿದೆ. ಮಾಡಬೇಕಾದ ಕರ್ತವ್ಯದಲ್ಲಿ ಅಡಚಣೆಗಳು ಸಂಭವಿಸುವುದು 'ವಿರೋಧ', ಹಿಡಿದ ಕಾರ್ಯವು ಕೊನೆಯಾಗುವುದೆಂಬುದನ್ನು ತಿಳಿಸುವ ಮಾತು 'ಪ್ರರೋಚನೆ' ಮಾಡಬೇಕಾಗಿರುವ ಕೆಲಸವನ್ನು ಒಂದೆಡೆಗೆ ಕೂಡಿಸುವುದನ್ನ 'ಆದಾನ', ಕರ್ತವ್ಯವನ್ನು ಸಾಧಿಸುವುದಕ್ಕಾಗಿ ಅವಮಾನ ಮೊದಲಾದವನ್ನು ಸಹಿಸಿಕೊಳ್ಳುವುದು 'ಛಾದನ' ಎಂದು ಕರೆಯಲಾಗಿದೆ. ಉದಾಹರಣೆ.

**ಅಪ್ರಿಯಾಣಿ ಕರೋತ್ವೇಷ ವಾಚಾ ಶಕ್ತೋ ನ ಕರ್ಮಣಾ ।**
**ಹೃತಭ್ರಾತೃಶತೋ ದುಃಖೀ ಪ್ರಲಾಪೈರಸ್ಯ ಕಾ ವ್ಯಥಾ[೮೬] ॥**

ಅರ್ಜುನನು "ಪೂಜ್ಯನೇ, ನೂರುಜನ ಸೋದರರರನ್ನು ಕಳೆದುಕೊಂಡು ದುಃಖಪಡುತ್ತಿರುವ ಈ ದುರ್ಯೋಧನನು ಬಾಯಿಂದ ಅಪ್ರಿಯಾವನ್ನಾಡಲಿ, ಆದರೆ ಕಾರ್ಯತಃ ಅದನ್ನು ಆಚರಿಸುವಂತಿಲ್ಲ. ಆದ್ದರಿಂದಲೇ ಇವನ ಉನ್ಮತ್ತ ಪ್ರಲಾಪಗಳಿಂದ ನಮಗೆ ವ್ಯಥೆಯಾಗುವುದು?" ಇಲ್ಲಿ ದುರ್ಯೋಧನನ ತೀಕ್ಷ್ಣವಾದ ಮಾತುಗಳಿಂದ ಉಂಟಾಗುವ ಅವಮಾನವನ್ನು ಸಹಿಸಬೇಕೆಂದು ತಿಳಿಸುವುದರಿಂದ ಇದು ಛಾದನ ಎಂದು ಕರೆಯಲಾಗಿದೆ. ಇಲ್ಲಿಗೆ ವಿಮರ್ಷಸಂಧಿಯ ಅದರ ಹದಿಮುರು ಅಂಗಗಳನ್ನು ವಿಮರ್ಶಿಸಿ ನಾಲ್ಕನೆಯದಾದ ನಿರ್ವಹಣ ಸಂಧಿಯನ್ನು ವಿವೇಚಿಸಲಾಗಿದೆ.

### ೫. ನಿರ್ವಹಣಸಂಧಿ [ಉಪಸಂಹಾರಸಂಧಿ]

**ಬೀಜವಂತೋ ಮುಖಾದ್ಯರ್ಥ ವಿಪ್ರಕೀರ್ಣಾಯಥಾಯಥಮ್ ।**
**ಏಕಾರ್ಥಮುನೀಯಂತೇ ಯತ್ರ ನಿರ್ವಹಣಾಂ ಹಿ ತತ್[೮೭] ॥**

ಆಯಾಯ ಸ್ಥಾನದಲ್ಲಿ ಬೀಜದೊಡನೆ ಸೇರಿಸಿ ತಿಳಿಸಿರುವ ಮುಖ್ಯಸಂಧಿಯೇ ಮೊದಲಾದವುಗಳಲ್ಲಿ ಬಂದ ವಿಷಯಗಳನ್ನು ಮುಖ್ಯ ಪ್ರಯೋಜನಕ್ಕೆ ಹೊಂದಿಸುವುದು 'ನಿರ್ವಹಣಸಂಧಿ' ಎನಿಸಿದೆ. ಉದಾಹರಣೆಗೆ "ಕಂಚುಕಿಯು ಮಹಾರಾಜನ ಬಳಿಗೆ ಹೋಗಿ ಸಂತೋಷದಿಂದ ಹೇಳುವನು ಮಹಾರಜನಿಗೆ ಜಯವಾಗಲಿ, ಈ ಭೀಮಸೇನನು ದುರ್ಯೋದನನ ರಕ್ತದಿಂದ ತನ್ನ ಮೈಯನ್ನೆಲ್ಲಾ ಒದ್ದೆಮಾಡಿಕೊಂಡು ನೋಡಲಿಕ್ಕಾಗದ ರೀತಿಯಲ್ಲಿರುವನು[೬೮]". ಇದರಿಂದ ದ್ರೌಪದಿಯ ಕೂದಲನ್ನು ಕಟ್ಟುವುದೇ ಮೊದಲಾದ ಅಂಶಗಳು ಬೀಜ ರೂಪದಲ್ಲಿ ಮುಖಸಂಧಿ ಮೊದಲಾದಡೆಗಳಲ್ಲಿ ಬಿತ್ತಿದ್ದು ಹಿಂದಿನಿಂದಲೂ ಆಯಾಯ ಸ್ಥಾನಗಳಲ್ಲಿ ಬೆಳೆದಿದ್ದರೂ ನಿರ್ವಣಸಂಧಿಯು ಮುಖ್ಯಾರ್ಥದೊಡನೆ ಹೊಂದಿಕೆ ಆಗುತ್ತದೆ.

ಸಂಧಿ, ವಿಭೋಧ, ಗ್ರಥನ, ನಿರ್ಣಯ, ಪರಿಭಾಷಣ, ಕೃತಿ, ಪ್ರಸಾದ, ಆನಂದ, ಸಮಯ, ಉಪಗೊಹನ, ಭಾಷಣ, ಪೂರ್ವವಾಕ್ಯ, ಕಾವ್ಯಸಂಹಾರ, ಪ್ರಶಸ್ತಿ, ಒಟ್ಟು ಹದಿನಾಲ್ಕು ನಿರ್ವಹಣಸಂಧಿಯ ಅಂಗಗಳೆನಿಸಿವೆ. ಮುಖ ಸಂಧಿಯಲ್ಲಿ ಆರಂಭಿಸಿದ ಬೀಜವೆಂಬ ಮುಖ್ಯಾರ್ಥವನ್ನು ಪುನಃ ನಮ್ಮ ಗಮನಕ್ಕೆ ತರುವುದೇ 'ಸಂಧಿ' ಎನಿಸಿದೆ. "ಭೀಮನು, ತನ್ನ ಧರ್ಮಪತ್ನಿ ದ್ರೌಪತಿದಿಗೆ 'ಚಂಚದ್ಭುಜ' ಎಂಬ ಶ್ಲೋಕದಲ್ಲಿ ಹೇಳಿದ್ದ ಅಭಿಪ್ರಾಯವು ಜ್ಞಾಪಕವಿದೆಯೇ?[೬೯] ಎಂದು ಕೇಳುವನು, ಹೀಗೆ ಹಿಂದೆ ಮುಖಸಂಧಿಯಲ್ಲಿ ನೆಟ್ಟಿದ ಬೀಜವನ್ನು ಮತ್ತೆ ನಮ್ಮ ಗಮನಕ್ಕೆ ತಂದಿರುವುದರಿಂದ 'ಸಂಧಿ' ಎನಿಸಿದೆ. ಆಗಾಗ ಮಾಡಬೇಕಾದ ಕಾರ್ಯವು ಯಾವುದು ಎಂಬುದನ್ನು ನಿಶ್ಚಯಿಸುವುದು 'ವಿಭೋಧ' ಎನ್ನಲಾಗಿದೆ. ಮಾಡಬೇಕಾದ ಕಾರ್ಯಗಳನ್ನು ಒಂದೊಂದಾಗಿ ಉಲ್ಲೇಖ ಮಾಡುವುದು ಅಥವಾ ಪ್ರಕೃತ ಸಂದರ್ಭಕ್ಕೆ ಹೊಂದಿಸಿಕೊಳ್ಳುವುದು 'ಯೋಜನೆ' "ಭೀಮನು 'ಪಾಂಚಾಲಿ', ದುಶ್ಯಾಸನನಿಂದ ಬಿಚ್ಚಿದ್ದ ಕೂದಲನ್ನು ನಾನಿರುವಾಗ ನೀನು ನಿನ್ನ ಕೈಗಳಿಂದ ಕಟ್ಟಿಕೂಳ್ಳಬಾರದು ನಿಲ್ಲು ನಾನೇ ಅದನ್ನು ಕಟ್ಟುವೆನು[೭೦]". ಹೀಗೆ ಹೇಳಿದ್ದರಿಂದ ಕಾರ್ಯವನ್ನು ಸ್ಪಷ್ಟವಾಗಿ ತಿಳಿಸಿವುದರಿಂದ 'ಗ್ರಂಥನ'ವಾಗಿದೆ. ಪ್ರತ್ಯಕ್ಷವಾಗಿ ತಿಳಿದ ವಿಷಯವನ್ನು ಮತ್ತೆ ತಿಳಿಸುವುದು 'ನಿರ್ಣಯ', ಅಪವಾದವನ್ನು ಸೂಚಿಸುವ ವಾಕ್ಯವು 'ಪರಿಭಾಷಣ'ವಾಗಿದೆ. ನಿರ್ಧಿಷ್ಟವಾದ ಫಲವನ್ನು ಪಡೆದು ದುಃಖವನು ತಡೆದು ಮನಸ್ಸನ್ನು ಸ್ಥಿರಗೊಳಿಸುವುದೇ 'ಕೃತಿ' ಕೈಯಿಂದ ಸೇವೆ ಮಾಡುವುದು, ಚಾಮರವನ್ನು ಬೀಸುವುದು ಇತ್ಯಾಧಿಗಳು 'ಪ್ರಸಾದ' ಎನಿಸಿದೆ. ಇಷ್ಟಾರ್ಥವು ಸಿಧ್ಧಿಸಿದ್ದರಿಂದ ಹುಟ್ಟುವ ಪ್ರೀತಿಯು 'ಆನಂದ' ದುಃಖವು ಕೊನೆಗಾಣುವುದೇ 'ಸಮಯ' ವಾಸವದತ್ತೆಯು ರತ್ನಾವಳಿಯನ್ನು ಆಲಂಗಿಸುತ್ತ 'ಸೋದರಿ ಸಮಾಧಾನದಿಂದಿರು[೭೧]" ಎಂದು ಹೇಳುವಳು. ಇದರಿಂದ ಅವಳಿಗೆ ವಿರಹ ದುಃಖವು ತೂಲಗುವುದರಿಂದ ಇದು ಸಮಯವೆನಿಸಿದೆ. ಅದ್ಭುತವಾದ ಘಟನೆಯನ್ನು ಅನುಭವಿಸುವುದು 'ಉಪಗೂಹನ' ಎಂದು ಕರೆಯಲಾಗಿದೆ. ಸಂತೋಷವನ್ನುಂಟು

ಮಾಡುವುದು ಮಾತನ್ನಾಡುವುದು, ದಾನ ಮಾಡುವುದು ಇವೆಲ್ಲವೂ 'ಭಾಷಣ' ಎನಿಸಿದೆ. ಹಿಂದೆ ತಿಳಿಸಿದ್ದ ಅನುಗುಣವಾದ ವಿಷಯವನ್ನು ತಿಳಿಸುವುದು 'ಪೂರ್ವವಾಕ್ಯ'. ಒಬ್ಬನಿಗೆ ಇಷ್ಟವಾದ್ದನ್ನು ನೇರವೇರಿಸಿಕೊಡುವುದೇ 'ಕಾವ್ಯಸಂಹಾರ' ರಾಜ ದೇಶ, ದೇವತೆಗಳು ಇವರಿಂದ ಶಾಂತಿಯುಂಟಾಗಲೆಂದು ಬಯಸುವುದನ್ನು 'ಪ್ರಶಸ್ತಿ' ಉದಾಹರಣೆಗೆ.

**ರಾಜಾನಃ ಸುತ ನಿರ್ವಿಶೇಷಮಧುನಾ ಪಶ್ಯಂತು ನಿತ್ಯಂ ಪ್ರಜಾಃ ।**
**ಚಿಯಾಸುಃ ಸದಸದ್ವಿವೇಕಪಟವಃ ಸಂತೋ ಗುಣಗ್ರಾಹಿಣಾಃ ॥**
**ಶಸ್ಯ ಸ್ವರ್ಣಸಮೃದ್ಧಯಃ ಸಮಧಿಕಾಃಸಂತು ಕ್ಷಮಾಮಂಡಲೇ ।**
**ಭೂಯಾದವ್ಯಭಿಚಾರಿಣಿ ತ್ರಿಜಗತೋ ಭಕ್ತಿಶ್ಚನಾರಾಯಣೇ ॥**[೨]

"ರಾಜರು ಯಾವಾಗಲೂ ಪ್ರಜೆಗಳನ್ನು ಮಕ್ಕಳಂತೆ ಕಾಣಲಿ ಒಳ್ಳೆಯದು ಕೆಟ್ಟದ್ದು ಇವುಗಳ ವಿವೇಚನೆಯಲ್ಲಿ ಶಕ್ತರೆನಿಸಿದ ಜನರು ಸುಖವಾಗಿ ಬಾಳಲಿ ಭೂಮಂಡಲದಲ್ಲಿ ಹೆಚ್ಚಿನ ಸಸ್ಯಗಳ ಮತ್ತು ಐಶ್ವರ್ಯದ ಸಮೃದ್ಧಿಗಳುಂಟಾಗಲಿ ಮೂರು ಲೋಕಗಳಲ್ಲಿರುವ ಜನರಿಗೂ ನಾರಾಯಣನಲ್ಲಿ ನಿರಂತರವಾಗಿ ಭಕ್ತಿಯು ನೆಲಸಲಿ". ಇಲ್ಲಿ ರಾಜನಿಂದ ಲೋಕಕ್ಕೆ ಶಾಂತಿಯುಂಟಾಗಲೆಂದು ಪ್ರಾರ್ಥಿಸಿರುವುದರಿಂದ ಇದು 'ಪ್ರಶಸ್ತಿ' ಎನಿಸಿದೆ. ಇಲ್ಲಿಗೆ ನಿರ್ವಹಣ ಸಂಧಿಯಲ್ಲಿ ಬರುವ ಹದಿನಾಲ್ಕು ಅಂಗಗಳನ್ನು ವಿವೇಚಿಸಲಾಯಿತು.

ಒಟ್ಟು ಮುಖ ಇತ್ಯಾದಿ ಸಂಧಿಗಳಿಂದ ಅರವತನಾಲ್ಕು ಸಂಧಿಗಳನ್ನು ವಿವೇಚಿಸ ಲಾಗಿದೆ. ನಾಟ್ಯದಲ್ಲಿ ಬರುವ ಸಂಧಿಗಳಲ್ಲಿ ಮುಖಸಂಧಿಗೆ ಸಂಬಂಧಿಸಿದ ಉಪಕ್ಷೇಪ, ಪರಿಕರ, ಪರಿನ್ಯಾಸ, ಯುಕ್ತ್ಯುದ್ಭೇವ ಮತ್ತು ಸಮಾಧಾನ, ಪ್ರತಿಮುಖಸಂಧಿಯಲ್ಲಿ ಪರಿಸರ್ಪಣ, ಪ್ರಗಮನ, ವಜ್ರೋಪನ್ಯಾಸ, ಪುಷ್ಪ. ಗರ್ಭಸಂಧಿಯಲ್ಲಿ ಅಪವಾದ ಶಕ್ತಿ, ವ್ಯವಸಾಯ, ಪ್ರರೋಚನೆ, ದಾನ, ಇವು ಎಲ್ಲಾ ಕಡೆಯಲ್ಲಿಯೂ ಸಂಭವಿಸುತ್ತದೆ ಈ ಸಂಧ್ಯಂಗಗಳು ರಸಪ್ರಕಾಶಕ್ಕೆ ಅಡ್ಡಿಯಾಗದಂತೆ ಆಯಾಯ ಸನ್ನಿವೇಶಕ್ಕೆ ಅನುಗುಣವಾಗಿ ಸೇರಿಸಬೇಕು. "ದುರ್ಯೋಧನ, ಕರ್ಣ, ಇವರಿಬ್ಬರಿಗೂ ಕರ್ತವ್ಯವನ್ನೂ ನಿರ್ಣಯಿಸುವ ಬಗ್ಗೆ 'ಯುಕ್ತಿ' ಎಂಬ ಮುಖಸಂಧಿಯ ಅಂಗವನ್ನು[೩] ರಸಾನುಗುಣವಾಗಿ ಉಪಯೋಗಿಸ ಲಾಗಿದೆ ಇಷ್ಟಾರ್ಥವು ನಾಯಕನಿಗೆ ದೂರಕುವಂತೆ ಏರ್ಪಡಿಸುವುದು ಮಾಡುವವನಿಗೆ ಆಶ್ಚರ್ಯವನ್ನು ಹುಟ್ಟಿಸುವುದು, ತಿಳಿಸಬೇಕಾದ ಸಮಾಚಾರವನ್ನು ವಿಶಾಲಗೊಳಿಸುವುದು, ಪ್ರಕಾಶಿಸಬೇಕಾದ ಅಂಶಗಳನ್ನು ಪ್ರಕಾಶಿಸುವುದು ಸಂಧ್ಯಂಗಗಳಲ್ಲಿ ಪ್ರಧಾನಪುರುಷರೇ ಪ್ರತಿನಿಧಿಸುವರು. ಹೇಗೆ ಹಸ್ತಪಾದ ಮೊದಲಾದ ಅವಯಗಳಿಲ್ಲದವನ್ನು ಯಾವ ಕಾರ್ಯವನ್ನೂ ಮಾಡಲಾರರು ಹಾಗೆ ಸಂಧ್ಯಾಂಗಗಳಿಲ್ಲದೇ ರೂಪಕವು ಪ್ರಯೋಗಕ್ಕೆ ಅರ್ಹವಾಗುವುದಿಲ್ಲವೆಂದು ತಿಳಿಸಿ ಮುಂದೆ ವೃತ್ತಿಗಳ ಬಗ್ಗೆ ವಿಮರ್ಶಿಸಲಾಗಿದೆ.

## ವೃತ್ತಿ

ನಾಯಿಕೆ, ನಾಯಕ, ಪ್ರತಿನಾಯಕ ಚೇಷ್ಟೆಗಳೆನಿಸಿದ ವೃತ್ತಿಗಳು ರೂಪಕಗಳಲ್ಲಿ ಅಭಿನಯಕ್ಕೆ ಹೊಂದಿಕೆಯಾಗುವಂತೆ ರಸಪ್ರಕಾಶಕ್ಕೆ ಅನುಕೂಲವೆನಿಸಿರುವುದನ್ನು 'ವೃತ್ತಿ' ಎಂದು ಕರೆಯಲಾಗಿದೆ.

**ಶೃಂಗಾರೇ ಕೌಶಿಕೀ ವೀರೆ ಸಾತ್ತ್ವ ತ್ಯಾರಭಟೀ ಪುನಃ ।**
**ರಸೇರೌದ್ರೇ ಚ ಭೀಭತ್ಸೆ ವೃತ್ತಿಃ ಸರ್ವತ್ರ ಭಾರತೀ ॥**
**ಚತಸ್ರೋವೃತ್ತಯೋ ಹ್ಯೇತಾಃ ಸರ್ವನಾಟ್ಯಸ್ಯ ಮಾತೃಕಾಃ ।**
**ಸ್ಯುರ್ನಾಯಿಕಾದಿವ್ಯಾವಾರವಿಶೇಷಾ ನಾಟಕಾದಿಷು[೬] ॥**

ಈ ವೃತ್ತಿಗಳು ಕೌಶಿಕೀವೃತ್ತಿಯೂ ವೀರರಸವನ್ನು, ಸಾತ್ತ್ವತೀ, ಆರಭಟೀ ವೃತ್ತಿಯೂ ರೌದ್ರಬೀಭತ್ಸರಸಗಳನ್ನು, ಪ್ರಕಾಶಪಡಿಸುತ್ತದೆ ಮತ್ತು ಭಾರತೀವೃತ್ತಿ ಒಟ್ಟು ನಾಲ್ಕು ವೃತ್ತಿಗಳಿವೆ.

### ೧. ಕೌಶಿಕೀವೃತ್ತಿ

ಕಾಮಸುಖವನ್ನು ಅನುಭವಿಸಲು ಬೇಕಾದ ಉಪಚಾರಗಳನ್ನು ದೂರಕಿಸುತ್ತಾ ಮನೋಹರವಾದ ವಿಲಾಸ ವೈಭವಗಳಿಂದಕೂಡಿದ್ದು ಇದರಲ್ಲಿ ಪುಷ್ಕಳವಾದ ನೃತ್ಯವು ಹೆಚ್ಚು ಸ್ತ್ರೀಪಾತ್ರಗಳಿರುತ್ತವೆ. ನಾಯಿಕೆ ಮೊದಲಾದವರು ಧರಿಸಿರುವ ಸುಂದರವಾದ ವೇಷಭೂಷಣಗಳಿಂದ, ಚೇಷ್ಟೆಗಳಿಂದ, ಮಾತಿನಿಂದ ಕೇಳುವುದಕ್ಕೆ ಇದು ಮನೋಹರವಾಗಿರುವುದು ಕೌಶಿಕೀವೃತ್ತಿಯಲ್ಲಿ ನರ್ಮ, ನರ್ಮಸ್ಫೂರ್ಜ, ನರ್ಮಸ್ಫೂಟ, ನರ್ಮಗರ್ಭ ಎಂಬ ನಾಲ್ಕು ಅಂಗಗಳಿವೆ. ನರ್ಮವೆಂದರೆ ಇಷ್ಟರಾದ ಜನರಿಗೆ ಸಂತೋಷ ವನ್ನುಂಟುಮಾಡುವಂತೆ ನೈಪುಣ್ಯದಿಂದ ಪ್ರೀತಿಸುವುದೇ 'ನರ್ಮ' ಎನಿಸಿದೆ. ಈ ನರ್ಮವು ಸಹ ಮೂರು ಬಗೆಯಾಗಿದೆ. ಹಾಸ್ಯದಿಂದ ಕೂಡಿದ್ದು, ಶೃಂಗಾರಹಾಸ್ಯದಿಂದ ಕೂಡಿದ್ದು, ಭಯಹಾಸ್ಯದಿಂದ [೭] ಕೂಡಿದ್ದು. ಪ್ರಾರಂಭದಲ್ಲಿ ಸುಖವನ್ನು ಕೊಟ್ಟು ಕೂನೆಗೆ ಭಯವನ್ನು ಹುಟ್ಟಿಸುವ ಇಬ್ಬರು ಪ್ರೇಮಿಗಳ ಮೊದಲನೆಯ ಸಮಾಗಮವೇ 'ನರ್ಮಸ್ಫೂರ್ಜ[೬]'ವೆನಿಸಿದೆ. ಮನಸ್ಸಿನ ವಿಕಾರಗಳಿಂದ ಪ್ರೇಮವನ್ನು ಸ್ವಲ್ಪವನ್ನು ಮಾತ್ರ ಸೂಚಿಸುವುದಕ್ಕೆ 'ನರ್ಮಸ್ಫೂಟ[೭]' ಗೋಪ್ಯ ವೇಷದಿಂದ ನಾಯಕನು ನಡೆಸುವ ವ್ಯವಹಾರವನ್ನ ನರ್ಮಗರ್ಭ ಎನಿಸಿದೆ ಸಖಿಯ ರೂಪವನ್ನು ಧರಿಸಿರುವ ಮಾಧವನು ಮಾಲತಿಯು ಸಾಯಲಿಕ್ಕಾಗಿ ಮಾಡುತ್ತಿದ್ದ ಪ್ರಯತ್ನವನ್ನು ತಡೆಯುವನು[೮]" ಇದು ಗುಪ್ತವೇಷದಿಂದ ನಾಯಕನ ವ್ಯವಹಾರವನ್ನು ತಿಳಿಸುವುದ- ರಿಂದ ನರ್ಮಗರ್ಭವೆನಿಸಿದೆ.

## ೨. ಸಾತ್ತ್ವತೀವೃತಿ

ನಿಶ್ಚಲ, ಬಲ, ದಾನಶಕ್ತಿ, ದಯೆ ಸರಳತನ, ಇವುಗಳಿಂದ ತುಂಬಿ ಹರ್ಷ ಮತ್ತು ಅದ್ಭುತಗಳೊಡನೆ ಬೆರೆತು ಶೋಕವಿಲ್ಲದ, ಕೊಂಚ ಶೃಂಗಾರವಿರುವ ರಚನೆಯೇ 'ಸಾತ್ತ್ವತೀವೃತ್ತಿ' ಎನ್ನಲಾಗಿದೆ. ಇದರಲ್ಲಿ ಉತ್ಥಾಪಕ, ಸಾಂಘಾತ್ಯ, ಸಂಲಾಪ, ಪರಿವರ್ತಕ, ಎಂದು ನಾಲ್ಕು ಬಗೆಗಳಿವೆ. ಶತ್ರುವನ್ನು ಉತ್ತೇಜನಗೊಳಿಸುವ ಮಾತು ಉತ್ಥಾಪಕವೆನಿಸಿದೆ. ಉದಾಹರಣೆಗೆ

> **ಆನಂದ ಚ ವಿಸ್ಮಯಾಯ ಚ ಮಾಯಾ ದೃಷ್ಟೋ?ಸಿ ದುಃಖಾಯಾ ವಾ ।**
> **ವೈತೃಷ್ಣ್ಯಂ ತು ಮಮಾಪಿ ಸಂಪ್ರತಿ ಕೃತಸ್ತ್ವದರ್ಶನನೇ ಚಕ್ಷುಷಃ ॥**
> **ತ್ವತ್ಸಾಂಗತ್ಯ ಸುಖಸ್ಯ ನಾಸ್ಮಿ ವಿಷಯಸ್ತತ್ಕಿಂ ವೃಥಾ ವ್ಯಾಹುತೈಃ ।**
> **ಅಸ್ಮಿನ್ ವಿಶ್ರುತಜಾಮದಗ್ನ್ಯದಮನೇ ಪಾಣೌ ಧನುರ್ಜೃಂಭ ತಾಮ್**[೧೮೯] **॥**

"ನಿನ್ನ ಪ್ರಿಯದರ್ಶನದಿಂದ ಆನಂದವೂ, ಅಲೌಕಿಕ ಸೌಂದರ್ಯದಿಂದ, ವಿಸ್ಮಯವೂ ನಿನ್ನಿಂದಲೇ ಕೊಲೆಯಾಗಬೇಕಾದ್ದರಿಂದ ದುಃಖವೂ ನನಗೆ ಸಂಭವಿಸಿದೆ. ಆದರೂ ಈಗ ವಿನಾಶಕಾಲದಲ್ಲಿ ನಿನ್ನನ್ನು ನೋಡಿದ್ದರಿಂದ ನನ್ನ ಕಣ್ಣಿನ ಆಶೆಯು ಹೇಗೆ ತೊಲಗಿ–ತು? ಅದು ಬಹುಕಾಲ ಇರುವಂತೆಯೇ ಇಲ್ಲ ನಿನ್ನ ಸಮ್ಮೇಳನದಿಂದ ನನಗೆ ಯಾವ ಸುಖವುಂಟಾಗಿದೆಯೋ ಅದನ್ನು ಅನುಭವಿಸಲು ನಾನು ಅರ್ಹವೆನಿಸಿಲ್ಲ ಆದ್ದರಿಂದ ವ್ಯರ್ಥವಾಗಿ ಮಾತನಾಡಿದ್ದರಿಂದ ಆಗುವ ಪ್ರಯೋಜನವೇನು? ಮಹಾವೀರನೆಂದು ಪ್ರಸಿದ್ಧನಾದ ಪರಶುರಾಮನನ್ನು ನಾಶಮಾಡುವ ಈ ಕೈಯಲ್ಲಿ ಧನಸ್ಸು ಯುದ್ಧಕ್ಕಾಗಿ ಸಿದ್ಧವಾಗಲಿ" ಇಲ್ಲಿ ರಾಮನಿಗೆ ಉತ್ತೇಜನವನ್ನು ಕೂಡಲಿಕ್ಕಾಗಿ ಹೊರಟಿರುವ ವಾಲಿಯ ಈ ಮಾತು 'ಉತ್ಥಾಪಕ'ಎನಿಸಿದೆ. ಜೊತೆಗಿರುವವರನ್ನು ಮಂತ್ರಶಕ್ತಿಯಿಂದ, ಹಣ, ದೈವಬಲದಿಂದ ಬೇರ್ಪಡಿಸುವುದನ್ನು 'ಸಾಂಘಾತ್ಯ[೧೯೦]'ವೆನಿಸಿದೆ. ಅನೇಕ ಅಭಿಪ್ರಾಯಗಳನ್ನು ತಿಳಿಸುವಂತಹ ಗಂಭೀರವಾದ ವಾಣಿಯನ್ನು 'ಸಲ್ಲಾಪ[೧೯೧]' ಎನ್ನಲಾಗಿದೆ. ಆರಂಭಿಸಿದ್ದಕ್ಕಿಂತ ಬೇರೊಂದು ಕಾರ್ಯಗಳನ್ನು ನಡೆಸುವುದು 'ಪರಿವರ್ತಕ[೧೯೨]' ಎನಿಸಿದೆ.

## ೩. ಆರಭಟೀವೃತ್ತಿ

ಮಾಯ, ಇದ್ರಜಾಲ, ಪ್ರಯೋಗ, ಯುದ್ಧ, ಕ್ರೋಧದಿಂದ ಭ್ರಮೆಗೊಂಡು ಹೆದರುವುದು ಸಾಹಸಕೃತ್ಯಗಳಿಂದಲೂ, ವಧೆ, ಬಂದ ಮೊದಲಾದ ವ್ಯಾಪಾರಗಳಿಂದ ಕೂಡಿದ ಭಯಂಕರವಾದ ವೃತ್ತಿಯು 'ಆರಭಟೀವೃತ್ತಿ' ಆಗಿದೆ. ಇದು ವಸ್ತೂತ್ಥಾಪನ, ಸಂಫೇಟ, ಸಂಕ್ಷಿಪ್ತ, ಅವಪಾತನ ಎಂದು ನಾಲ್ಕು ಬಗೆಗಳಾಗಿವೆ. ಮಾಯಾ, ಇಂದ್ರಜಾಲ ಪ್ರಯೋಗ ಇವುಗಳಿಂದ ವಸ್ತುಗಳನ್ನು ಪ್ರಕಟಿಸುವುದನ್ನ 'ವಸ್ತೂತ್ಥಾಪನ' ಎನಿಸಿದೆ.

ಕೋಪ ಮತ್ತು ಆತುರಪಡುವರಿಬ್ಬರು ಪರಸ್ಪರವಾಗಿ ಹೊಡೆದಾಡುವುದೇ 'ಸಂಫೇಟ[೧೦೩]' ಶಿಲ್ಪದಿಂದಾಗಲೀ ಬೇರೆ ರೀತಿಯಿಂದಾಗಲೀ ಒಂದು ವಸ್ತುವನ್ನು ನಿರ್ಮಿಸುವುದನ್ನು 'ಸಂಕ್ಷಿಪ್ತಿ' ಎನಿಸಿದೆ. ಪ್ರವೇಶ, ಭಯ, ನಿರ್ಗಮನ, ಹರ್ಷ, ಪಲಾಯನ, ಇವುಗಳಿಂದ ಉಂಟಾಗುವ ಸಂಘರ್ಷವನ್ನು 'ಅವಪಾತನ' ಎನ್ನಲಾಗಿದೆ. 'ಖಡ್ಗಧಾರಿಯಾದ ಪುರುಷನು ಪ್ರವೇಶಿಸಿ[೧೦೪] ಎಂದು ಹೇಳಿದ್ದರಿಂದ ಮುಂದೆ ಅವನು ಹೊರಡುವವರಿಗೂ ನಡೆದವೆಲ್ಲವೂ 'ಅಪಾತನ' ಎನಿಸಿದೆ.

## ೪. ಭಾರತೀವೃತ್ತಿ

ಸಂಸ್ಕೃತದಲ್ಲಿ ವ್ಯವಹರಿಸುವುದನ್ನ 'ಭಾರತೀವೃತ್ತಿ' ಎಂದು ಕರೆಯಲಾಗಿದೆ. ಕೇವಲ ಮನುಷ್ಯರ ವಿಷಯವಾಗಿ ವ್ಯವಹರಿಸುವುದನ್ನ ಭಾರತೀವೃತ್ತಿ ಎನಿಸಿದೆ. ಈ ವೃತ್ತಿಯಲ್ಲಿ ಹೆಚ್ಚು ಸಂಸ್ಕೃತವನ್ನೂ ಕೊಂಚ ಪ್ರಾಕೃತವನ್ನು ಉಪಯೋಗಿಸಲಾಗಿದೆ. ಗಂಡಸರು ಪರಸ್ಪರ ವ್ಯವಹರಿಸುವಾಗ ಈ ವೃತ್ತಿಯನ್ನು ಅನುಸರಿಸುತ್ತಾರೆ ಪ್ರಲೋಚನೆ, ವೀಥಿ, ಪ್ರಹಸನ, ಆಮುಖ, ಇವು ಭಾರತೀವೃತ್ತಿಯ ನಾಲ್ಕು ಅಂಗಗಳಾಗಿವೆ. ಪ್ರರೋಚನೆಯು ಕವಿ ಕಾವ್ಯ, ಸಭ್ಯರನ್ನು ಪ್ರಶಂಸೆ ಮಾಡುವ ಮೂಲಕ ಸಭ್ಯರಿಗೆ ನಾಟಕದಲ್ಲಿ ರುಚಿ ಹುಟ್ಟುವಂತೆ ಮಾಡುತ್ತದೆ. ಅವರಿಗೆ ಕಥೆಯನ್ನು ಕೇಳುವುದರಲ್ಲಿ ಪ್ರವೃತ್ತಿಯನ್ನು ಹುಟ್ಟಿಸುವುದೇ 'ಪ್ರರೋಚನೆ'ಆಗಿದೆ. ಉದಾಹರಣೆಗೆ.

**ಶ್ರೀಹರ್ಷೋ ನಿಪುಣಃ ಕವಿಃ ಪರಿಷದಪ್ಯೇಷಾ ಗುಣಗ್ರಾಹಿಣೀ ।**
**ಲೋಕೇ ಹಾರಿ ಚ ವತ್ಸರಾಜ ಚರಿತಂ ನಾಟ್ಯ ಚದಕ್ಷಾ ವಯಮ್ ॥**
**ವಸ್ತ್ವೇಕೈಕಮಪೀಹ ವಾಂಛಿತ ಫಲಪ್ರಾಪ್ತೇಃ ಪದಂ ಕಿಂ ಪುನಃ ।**
**ಮದ್ಭಾಗ್ಯೋ ಪಚಯಾದಯಂ ಸರ್ವೋ ಗುಣಾನಾಂ ಗಣಃ** [೧೦೫] **॥**

"ಶ್ರೀಹರ್ಷನು ನಿಪುಣನಾದ ಕವಿ, ಸಭ್ಯರೂ ಸಹ ಗುಣಗಾನಗಳು ಗ್ರಾಹಿಕತೆಯಂತೂ ವತ್ಸರಾಜನಿಗೆ ಸಂಬಂಧಿಸಿದ್ದರಿಂದ ಮನೋಹರವೆನಿಸಿದೆ ಇದನ್ನು ಅಭಿನಯಿಸುವುದರಲ್ಲಿ ನಾವು ಸಹ ಚೆನ್ನಾಗಿ ಪಳಗಿರುವೆವು ಇಲ್ಲಿ ಒಂದೊಂದೇ ಅಂಶವು ಸಹ ಅವರವರ ಇಷ್ಟಾರ್ಥವನ್ನೂ ಸಲ್ಲಿಸಲು ಸಮರ್ಥವೆನಿಸಿದ್ದು ನನ್ನ ಸುದೈವದ ಏಳಿಗೆಯಿಂದ ಜನ–ರಿಗೆ ಸಂತೋಷವನ್ನುಂಟುಮಾಡುವಂತಹ ಗುಣಗಳೆಲ್ಲವೂ ಇಲ್ಲಿ ಸೇರಿವೆ". ಎಲ್ಲರ ಪ್ರಶಂಸೆಯೂ ಬಂದು ಶ್ರೋತೃಗಳಿಗೆ ಮುಂದೆ ನಡೆಯುವ ನಾಟಕವನ್ನು ನೋಡುವುದಕ್ಕೆ ರುಚಿಯುಂಟಾಗುತ್ತದೆ. ನಟಿಯಾಗಲೀ ವಿದೂಷಕನಾಗಲೀ, ಪಾರಿಪಾರ್ಶ್ವಿಕನಾಗಲೀ ಸೂತ್ರಧಾರನೊಡನೆ ಸಂಲಾಪವನ್ನು ನಡೆಸುತ್ತಾ ತಮ್ಮ ಕಾರ್ಯಕ್ಕೆ ಸಂಬಂದಿಸಿದಂತೆ ಪ್ರಕೃತವಸ್ತುವನ್ನು ತಿಳಿಸುವಂತಹ ಚಮತ್ಕಾರವನ್ನು ಹುಟ್ಟಿಸುವ ಮಾತುಗಳನ್ನು ಪ್ರಯೋಗಿಸುವುದನ್ನು 'ಆಮುಖ' ಎಂದು ಕರೆಯಲಾಗಿದೆ. ಇಲ್ಲಿಗೆ ಐದು ವೃತ್ತಿಗಳು ಮತ್ತು ಅದರ ಅಂಗಗಳನ್ನು ವಿವೇಚಿಸಿ ಮುಂದೆ ನಾಟಕದ ಇತರ ಅಂಗಗಳಾದ

ಮೂವತ್ತಾರು ಲಕ್ಷಣಗಳು ಮತ್ತು ಮೂವತ್ತಮೂರು ನಾಟ್ಯಾಲಂಕಾರಗಳ ಬಗ್ಗೆ ವಿಚಾರ ಮಾಡಲಾಗಿದೆ.

**ಲಕ್ಷಣಗಳು:**

ನಾಟಕದ ಸ್ವರೂಪವನ್ನು ತಿಳಿಯಲು ಅನುಕೂಲವಾಗುವ ಮೂವತ್ತಾರು ಲಕ್ಷಣಗಳನ್ನು ಭರತನು[೧೦೬] ಮೊದಲಿಗೆ ಹೇಳಿದ್ದಾನೆ. ಇವುಗಳ ಸ್ವರೂಪ ನಿರ್ಣಯದ ವಿಚಾರದಲ್ಲಿ ಅಭಿನಯಗುಪ್ತನ [೧೦೭]ಕಾಲಕ್ಕೆ ಬೇಕಾದಷ್ಟು ಚರ್ಚೆಯೂ ಸಹ ನಡೆದಿದೆ. ಒಬ್ಬಿಬ್ಬರನ್ನು ಬಿಟ್ಟರೆ ಈಚಿನ ಲಾಕ್ಷಣಿಕರು ಯಾರೂ ಈ ಲಕ್ಷಣಗಳಿಗೆ ಕಾವ್ಯದಲ್ಲಾಗಲಿ ನಾಟ್ಯದಲಾಗಲಿ ವಿಶೇಷಸ್ಥಾನವನ್ನು ಕೊಟ್ಟಿಲ್ಲ. ಅವುಗಳಲ್ಲಿ ಹಲವನ್ನು ಅಲಂಕಾರಗಳೊಗೆ ಸೇರಿಸಿದ್ದಾರೆ[೧೦೮]. ನಾಟಕದ ಲಕ್ಷಣಕ್ಕೆ ಸಂಬಂಧಿಸಿದಂತೆ ವಿಶ್ವನಾಥನೂ ಸಹ ಮೂವತ್ತಾರು ಲಕ್ಷಣಗಳನ್ನು ತಿಳಿಸಿದ್ದಾನೆ. ಅವು ಭೂಷಣ, ಅಕ್ಷರ ಸಮೂಹ, ಶೋಭೆ, ಉದಾಹರಣ, ಹೇತು, ಸಂಶಯ, ದೃಷ್ಟಾಂತ, ಅನುಕೂಲತರ್ಕ, ಪದಸಮೂಹ, ನಿದರ್ಶನೆ, ಅಭಿಪ್ರಾಯ, ಜ್ಞಪ್ತಿ, ವಿಚಾರ, ದಿಷ್ಟ ಉಪದಿಷ್ಟ, ಗುಣಾತಿಪಾತ, ಗುಣಾತಿಶಯ, ವಿಶೇಷಣ, ನಿರುಕ್ತಿ, ಸಿದ್ಧಿ, ಭ್ರಂಶ, ವಿಪರ್ಯಯ, ದಾಕ್ಷಿಣ್ಯ, ಅನುನಯ, ಮಾಲೆ, ಅರ್ಥಾಪತ್ತಿ, ಗರ್ಹಣ, ಪೃಚ್ಛೆ, ಪ್ರಸಿದ್ಧಿ, ಸಾರೂಪ್ಯ, ಸಂಕ್ಷೇಪ ಗುಣಕೀರ್ತನ, ಲೇಶ, ಮನೋರಥ, ಅನುಕ್ತಸಿದ್ಧಿ, ಪ್ರಿಯವಚನ ಇವಿಷ್ಟು ಲಕ್ಷಣಗಳೆನಿಸಿವೆ.

ರೂಪಕ ಮೊದಲಾದ ಅಲಂಕಾರಗಳ ಮತ್ತು ಮಾಧುರ್ಯ ಓಜಸ್ಸು ಮೊದಲಾದ ಗುಣಗಳ ಪರಸ್ಪರವಾಗಿ ನಾಟಕವನ್ನು ಅಲಂಕರಿಸುವುದೇ 'ಭೂಷಣ'ವೆನಿಸಿದೆ. ವಿಚಿತ್ರವಾದ ಅರ್ಥವನ್ನು ತಿಳಿಸುವ ಮಿತವಾದ ಅಕ್ಷರಗಳಿಂದ ತಿಳಿಸಬೇಕಾದ ಅಂಶವನ್ನು ತಿಳಿಸುವುದೇ 'ಅಕ್ಷರಸಮೂಹ' ರಾಜನು 'ಶರೀರದ ಸಂತಾಪವು ನಿಮ್ಮ ಸಖಿಯನ್ನು ಹೆಚ್ಚು ಬಾಧಿಸುವುದಿಲ್ಲವೇ? ಎಂದು ಕೇಳಲು ಅದಕ್ಕೆ ಪ್ರಿಯಂವದೆಯ "ಈಗ ಪ್ರಿಯನಾದ ನೀನೇ ಔಷಧವಾಗಿ ದೊರೆತಿರುವುದರಿಂದ ಸಂತಾಪವು ಬೇಗನೆ ಶಮನವಗುವುದು", ಎಂದು ಹೇಳಿದಳು. ಇಲ್ಲಿ ಇಷ್ಟು ಮಿತವಾದ ಒಂದೆರಡು ಅಕ್ಷರಗಳಿಂದ 'ನಿನ್ನಿಂದಲೇ ಇವಳ ಮನೋವ್ಯಥೆಯು ಬಗೆಹರಿಯಬೇಕು ಎಂಬ ವಿಚಿತ್ರವಾದ ಅರ್ಥವನ್ನು ತಿಳಿಸಿರುವುದರಿಂದ ಇದು 'ಅಕ್ಷರಸಂಘಾತ[೧೦೮]' ಲಕ್ಷಣ ಎನಿಸಿದೆ. ಮಿತವಾದ ಅಕ್ಷರಗಳಿಂದ ತಿಳಿಸುವುದು ನಾಟಕಕ್ಕೆ ಒಂದು ಬಗೆಯ ಅಲಂಕಾರವೆನಿಸಿದೆ. ಪ್ರಸಿದ್ಧವಾದ ಅರ್ಥದೊಡನೆ ಅಪ್ರಸಿದ್ಧವಾದ ಅರ್ಥವು ಎಲ್ಲಿ ತೋರುವುದೋ ಅಲ್ಲಿ ಶೋಭೆಯು ನಾಟ್ಯವನ್ನು ಅಲಂಕರಿಸುತ್ತದೆ. ಪ್ರಕೃತ ಸಂದರ್ಭಕ್ಕೆ ಅನುಗುಣವಾದ ಅರ್ಥವನ್ನು ತಿಳಿಸುವ ಮೂಲಕ ತನ್ನ ಅಭಿಮತವಾದ ಅರ್ಥವನ್ನು ಪ್ರಕಟಿಸುವುದು 'ಉದಾಹರಣ'ವೆನಿಸಿದೆ. ಉಪಯುಕ್ತವಾದ ಕಾರಣವು 'ಉದಾಹರಣ'ವಾಗಿದೆ. ಉಪಯುಕ್ತವಾದ ಕಾರಣವನ್ನು ತೋರಿಸಿ ಸಂಕ್ಷೇಪವಾಗಿ

ಇಷ್ಟಾರ್ಥವನ್ನು ಸೂಚಿಸುವ ವಾಕ್ಯವು 'ಹೇತು'ವೆಂಬ ಲಕ್ಷಣವಾಗಿದೆ. ಯಥಾಥ–ರ್ವನ್ನು ತಿಳಿಯದೇ ಇರುವವನ ಮಾತಿನಲ್ಲಿ ನಿಶ್ಚಯವಿಲ್ಲ ದಿರುವುದೇ 'ಸಂಶಯವೆಂಬ ಲಕ್ಷಣವಾಗಿದೆ ಉದಾಹರಣೆ.

**ಇಯಂ ಸ್ವರ್ಗಾಧಿನಾಥಸ್ಯ ಲಕ್ಷ್ಮೀಃ ಕಿಂ ಯಜ್ಞಕನ್ಯಾಕಾ ।**
**ಕಿಂ ಚಾಸ್ಯ ವಿಷಯಸ್ಯೈವ ದೇವತಾ ಕಿಮು ಪಾರ್ವತೀ**[೧೧೦] ॥

"ಈಕೆಯ ಸ್ವರ್ಗಾಧಿಪತಿಯಾದ ಇಂದ್ರನ ಲಕ್ಷ್ಮಿಯೇ ಅಥವಾ ಯಜ್ಞದಲ್ಲಿ ಹುಟ್ಟಿದ ಕನ್ಯೆಯೇ? ಅಥವಾ ಈ ದೇಶದ ದೇವತೆಯೋ ಅಥವಾ ಪಾರ್ವತಿಯೋ?" ಎಂದು ಈಕೆ ಯಾರೆಂಬ ಬಗ್ಗೆ ನಿಜಾಂಶವು ತಿಳಿಯದೇ ಇರುವುದರಿಂದ ಯಯಾತಿಯ ಮಾತಿನಲ್ಲಿ ಅನೇಕ ಬಗೆಯ ಸಂಶಯವಿದೆ. ಪಕ್ಷದಲ್ಲಿ ಸಾಧ್ಯಾಂಶವಿದೆ ಎಂದು ಸಾಧಿಸಲಿಕ್ಕಾಗಿ ಒಂದು ಕಾರಣವನ್ನು ಸೂಚಿಸುವುದೇ 'ದೃಷ್ಟಾಂತ'ವೆನಿಸಿದೆ. ಪ್ರಕೃತ ಸಂದರ್ಭಕ್ಕೆ ಅನುಗುಣವಾದ ವಿಷಯದ ಮೂಲಕ ಮುಂದಿನ ವಿಷಯವನ್ನು ಭಾವಿಸುವುದೇ 'ಸಮಾನತರ್ಕ' ಎನಿಸಿದೆ. ಅರ್ಥಕ್ಕೆ ಅನುಗುಣವಾಗಿ ಅಂದರೆ ಕೋಮಲವಾಗಿಯೂ, ಕಟುವಾದ ಅರ್ಥಕ್ಕೆ ಕಟುವಾಗಿಯೂ ಇರುವ ಪದಗಳ ಸಮೂಹವನ್ನು 'ಪದೋಚ್ಚಯ[೧೧೧]' ವೆನಿಸಿದೆ. ಎದುರಾಳಿಯನ್ನು ನಿರಾಕರಿಸುವುದಕ್ಕಾಗಿ ಪ್ರಸಿದ್ಧವಾದ ವಿಷಯಗಳನ್ನು ತಿಳಿಸುವುದು 'ನಿದರ್ಶನ' ಎನಿಸಿದೆ. ಸಾದೃಶ್ಯದಿಂದ ಆರಂಭವಾದ ವಿಷಯವನ್ನು ಕಲ್ಪಿಸುವುದು. 'ಅಭಿಪ್ರಾಯ' ಲಕ್ಷಣವಾಗಿದೆ. ಯಾವುದೋ ಒಂದು ಅಂಶವನ್ನು ತಿಳಿಸುವ ವಾಕ್ಯದಿಂದ ಬೇರೊಂದು ಅಂಶವನ್ನು ಊಹಿಸುವುದೆ 'ಜ್ಞಪ್ತಿ' ಲಕ್ಷಣ. ಯುಕ್ತಿ ಯುಕ್ತ ಮಾತುಗಳಿಂದ ಪರೋಕ್ಷವಾದ ವಿಷಯವನ್ನು ನಿರೂಪಿಸುವುದು. 'ವಿಚಾರ'ವೆಂಬ ಲಕ್ಷಣವಾಗಿದೆ. ದೇಶಾಕಾಲಗಳಿಗೆ ಸಮಾನವಾದ ಧರ್ಮವುಳ್ಳದೆಂದು ವರ್ಣಿಸುವುದೇ 'ದಿಷ್ಟ'ವೆಂಬ ಲಕ್ಷಣವಾಗಿದೆ ಸ್ಮೃತಿಶಾಸ್ತ್ರಗಳಿಗೆ ಅನುಸಾರವಾಗಿ ಮನೋಹರವಾದ ರೀತಿಯಲ್ಲಿ ತಿಳಿಸಿರುವುದರಿಂದ 'ಉಪದಿಷ್ಟ'ವೆಂಬ ಲಕ್ಷಣವಾಗಿದೆ. ಒಬ್ಬನಲ್ಲಿ ಇರುವ ಗುಣಗಳಿಗೆ ವಿರುದ್ಧವಾಗಿ ಆಚರಿಸುವುದೇ 'ಗುಣಾತಿಪಾತ' ಎಂಬ ಲಕ್ಷಣವಾಗಿದೆ. ಗೌರವಪೂರ್ವಕವಾಗಿ ಪ್ರಾರ್ಥಿಸುವುದನ್ನು ತಿಳಿಸುವ ವಾಕ್ಯದಿಂದ ವಿಷಯಗಳನ್ನು ಹುಡುಕುವುದೇ 'ಪೃಚ್ಛೆ'ಯೆಂಬ ಲಕ್ಷಣವಾಗಿದೆ. ಲೋಕಪ್ರಸಿದ್ಧವೂ ಉತ್ಕೃಷ್ಟವೂ ಆಗಿರುವ ವಸ್ತುಗಳಿಂದ ಪ್ರಕೃತ ವಿಷಯವನ್ನು ಸಂಪಾದಿಸುವುದೇ 'ಪ್ರಸಿದ್ಧಿ' ಎನಿಸಿದೆ. ಉದಾಹರಣೆಗೆ

**ಸೂರ್ಯಾಚಂದ್ರಮಸೌ ಯಸ್ಯ ಮತಾಮಹಪಿತಾಮಹೌ ।**
**ಸ್ವಯಂ ವೃತಃ ಪತಿರ್ದ್ವಾಭ್ಯಾಂ ಉರ್ವಶ್ಯಾಚ ಭುವಾಚಯಃ** [೧೧೨] ॥

ರಾಜನು "ಸೂರ್ಯಚಂದ್ರರಿಬ್ಬರೂ ಯಾವನಿಗೆ ಪೂಜ್ಯರೆನಿಸಿರುವರೋ ಯಾವನನ್ನು ಉರ್ವಶಿ ಮತ್ತು ಭೂದೇವಿ ಇಬ್ಬರೂ ಪತಿಯನ್ನಾಗಿ ವರಿಸಿರುವರೋ"

ಎಂದು ತನ್ನ ಬಗ್ಗೆ ಹೇಳುತ್ತಾನೆ. ಇದರಿಂದ ಅವನಿಗೆ ಉತ್ಕೃಷ್ಟವಾದ ಸೂರ್ಯ ಚಂದ್ರರೂಡನೆ ಪರಿಚಯವುಂಟೆಂದು ತಿಳಿಸಿರುವ ಪ್ರಯುಕ್ತ ಇಲ್ಲಿ ಪ್ರಸಿದ್ಧಿ ಎಂಬ ಲಕ್ಷಣವಿದೆ. ತಿರಸ್ಕಾರ ಹೊಂದಿದವನು ವಿರೋಧಿ ಜನರಿಗೆ ಸಮಾನವೆನಿಸಿದ್ದರಿಂದ ವಿಷಾದದಿಂದಲು ಅಧೈರ್ಯದಿಂದ ಬಾಳುವುದು 'ಸಾರೂಪ್ಯ' ಲಕ್ಷಣವೆನಿಸಿದೆ. "ದುರ್ಯೋಧನನೆಂಬ ಭ್ರಾಂತಿಯಿಂದ ಭೀಮನನ್ನು ಯುಧಿಷ್ಠಿರನು ದುಷ್ಟ, ನೀಚ ದುರ್ಯೋಧನ! ಎಂದು ಇತ್ಯಾದಿಯಾಗಿ ಕರೆಯುವನು ದುರ್ಯೋಧನನಿಂದ ಭೀಮನು ಸತ್ತನು" ಎಂದು ಚಾರ್ವಾಕನು ಹೇಳಿದ ಮಾತಿನಿಂದ ದುಃಖಿತನಾದ ಯುಧಿಷ್ಠಿರನು ದುರ್ಯೋಧನನ ಸಾರೂದವನ್ನು ಕಂಡು 'ದುರಾತ್ಮನ್' ಎಂದು ಮುಂತಾಗಿ ಕೋಪದಿಂದ ಮಾತನಾಡುವನು[೧೧೩]". ಆದರಿಂದ ಇದು ಸಾರೂಪ್ಯವೆಂಬ ಲಕ್ಷಣವಾಗಿದೆ. ತನ್ನನ್ನು ಸಂಕ್ಷೇಪವಾಗಿ ಕಡಿಮೆ ಎಂದು ಬೇರೆಯವರ ಸ್ಥಾನದಲ್ಲಿ ಹೇಳಿಕೊಳ್ಳುವುದು 'ಸಂಕ್ಷೇಪ' ಲಕ್ಷಣವಾಗಿದೆ. ರಾಜನು ಪ್ರಿಯೆಗೆ 'ಮಲ್ಲಿಗೆ ಹೂವಿನಿನಂತೆ ಮೃದುವಾದ ಅವಯವಗಳನ್ನು ಏಕೆ ವ್ಯರ್ಥವಾಗಿ ಆಯಸಗೊಳಿಸುವೆ? ಎಂದು ಹೇಳಿ ತನ್ನನ್ನೂ ಉದ್ದೇಶಿಸಿ "ನೀನು ಕೂಯ್ಯಬೇಕಾದ ಪುಷ್ಪಗಳನ್ನು ನಾನು ನಿನಗಾಗಿ ಕೀಳುವ ದಾಸನಾಗಿರುವೆನು[೧೧೪]" ಎಂದು ಹೇಳಿಕೊಳ್ಳುವನು. ಹೀಗೆ ಹೇಳುವುದರಿಂದ ಇಂತಹ ಸಂಕ್ಷಿಪ್ತ ವಾಕ್ಯದಿಂದಲೇ ರಾಜನು, ತನನ್ನು ನಾಯಿಕೆಯ ದಾಸನನ್ನಾಗಿ ತಿಳಿಸಿಕೊಂಡಿರುವ ಪ್ರಯುಕ್ತ ಇದು 'ಸಂಕ್ಷೇಪ'ವೆಂಬ ಲಕ್ಷಣವೆನಿಸಿದೆ.

ಪೂಜ್ಯನನ್ನು ಗೌರವಿಸುವುದಕ್ಕಾಗಿ ಅವರಿಗೆ ಆನಂದವುಂಟಾಗುವಂತೆ ಆಡುವ ವಾಕ್ಯವೇ 'ಪ್ರಿಯೋಕ್ತಿ' ಎಂಬ ಮೂವತ್ತಾರನೆಯ ಮತ್ತು ಕೊನೆಯ ಲಕ್ಷಣವಾಗಿದೆ. ಉದಾಹರಣೆಗೆ ಕಶ್ಯಪ ಮಹರ್ಷಿಗೆ ರಾಜನು ಹೇಳುವ ಮಾತಿನಲ್ಲಿ ಇದು ತಿಳಿದುಬರುತ್ತದೆ. 'ಮೊದಲು ಪುಷ್ಪವು ಕಾಣಿಸುತ್ತದೆ. ಆಮೇಲೆ ಫಲವು ಬಿಡುತ್ತದೆ ಮೊದಲು ಮೇಘವು ಉದಯಿಸುತ್ತದೆ ಆಮೇಲೆ ಮಳೆಯ ನೀರು ತುಂಬಿಕೊಳ್ಳುತ್ತದೆ[೧೧೫]' ಮೊದಲು ಕಾರಣವೆನಿಸಿದ ಪುಷ್ಪ ಮೇಘಗಳು ಕಾಣಿಸಿ ಆಮೇಲೆ ಕಾರ್ಯಗಳು ಕಾಣಿಸಿಕೊಳ್ಳುತ್ತವೆ. ಇದು ವಾಸ್ತವ ಪರಿಸ್ಥಿತಿ ಕಾರ್ಯ ಕಾರಣ ನಿಯಮವು ಮೊದಲಿನಿಂದಲೂ ಹೀಗೆ ನಡೆಯುತ್ತಾ ಬಂದಿದೆ. ಆದರೆ ನಿನ್ನ ಪ್ರಸಾದಕ್ಕಾದರೋ ಮೊದಲೇ ಸಂಪತ್ಸಮೃದ್ಧಿ ರೂಪವಾದ ಫಲವು ಸಿದ್ಧಿಸುವುದರಿಂದ ನಿನ್ನ ಪ್ರಸಾದದ ಮಹಿಮೆಯು ಅದ್ಭುತವೆನಿಸಿದೆ. ಲೋಕಪ್ರಸಿದ್ಧವಾದ ಕಾರ್ಯಕಾರಣಭಾವವು ವ್ಯತ್ಯಾಸವನ್ನು ಹೊಂದಿ ನಿನ್ನ ಪ್ರಸಾದವು ದೊರೆಯುವ ಮೊದಲೇ ಜನರಿಗೆ ಸಂವತ್ಸಮೃದ್ಧಿ ಉಂಟಾಗುವುದೆಂದು ದುಷ್ಯಂತನು ತಿಳಿಸುತ್ತಾನೆ. ಇಲ್ಲಿ ಕಶ್ಯಪ ಮಹರ್ಷಿಯನ್ನು ಗೌರವಿಸಲಿಕ್ಕಾಗಿ ಅವನಿಗೆ ಸಂತೋಷವಾಗುವಂತೆ ರಾಜನು ಮಾತನಾಡುವುದರಿಂದ ಪ್ರಿಯೋಕ್ತಿ ಎನಿಸಿದೆ. ಇಲ್ಲಿಗೆ ನಾಟಕದ ಮೂವತ್ತಾರು ಲಕ್ಷಣಗಳನ್ನು ವಿವರಿಸಿ ಮುಂದೆ ನಾಟ್ಯದಲ್ಲಿ ಬರುವ ಮೂವತ್ತಮೂರು ಲಕ್ಷಣಗಳನ್ನು ವಿಚಾರ ಮಾಡಲಾಗಿದೆ.

## ನಾಟ್ಯಾಲಂಕಾರಗಳು

ಆಶೀರ್ವಾದ, ಆಕ್ರಂದ, ಕಪಟ, ಅಕ್ಷಮೆ, ಗರ್ವ, ಉದ್ಯಮ, ಆಶ್ರಯ, ಉತ್ಪಾಸನ, ಸ್ಪೃಹೆ, ಕ್ಷೋಭೆ, ಪಶ್ಚಾತ್ತಾಪ, ಉಪಪತ್ತಿ, ಆಶಂಸೆ, ಅಧ್ಯವಸಾಯ, ವಿಸರ್ಪ, ಉಲ್ಲೇಖ, ಉತ್ತೇಜನ, ಪರೀವಾದ, ನೀತಿ, ಅರ್ಥವಿಶೇಷಣ, ಪ್ರೋತ್ಸಾಹನಸಾಹಾಯ್ಯ, ಅಭಿಮಾನ, ಅನುವರ್ತನ, ಉತ್ಕೀರ್ತನ, ಯಾಚ್ಞಾ ಪರಿಹಾರ, ನಿವೇದನ, ಪ್ರವರ್ತನ, ಆಖ್ಯಾನ, ಯುಕ್ತಿ, ಪ್ರಹರ್ಷ, ಉಪದೇಶನ, ಒಟ್ಟು ಮೂವತ್ತಮೂರು ಅಲಂಕಾರಗಳು ನಾಟ್ಯದಲ್ಲಿ ಶೋಭೆಯನ್ನು ಹುಟ್ಟಿಸುತ್ತಾ ನಾಟ್ಯಲಂಕೃತಿಗಳೆನಿಸಿವೆ ಎಂದು ವಿಶ್ವನಾಥನು ವಿವ-ರಿಸಿದ್ದಾನೆ. ಇಷ್ಟವಾದ ಯಾವುದಾದರೊಂದು ಒಳ್ಳೆಯ ಫಲವು ದೊರಕಲೆಂದು ಹೇಳುವುದನ್ನ 'ಆಶೀರ್ವಾದ' ಅಲಂಕಾರವಾಗಿದೆ. ಉದಾಹರಣೆಗಾಗಿ.

**ಯಯಾತೇರಿವ ಶರ್ಮಿಷ್ಠಾ ಪತ್ಯುರ್ಬಹುಮತಾ ಭವ ।**
**ಪುತ್ರಂ ತ್ವಮಿಹ ಸಮ್ರಾಜಂ ಸೇವ ಪುರುಮವಾಪ್ನುಹಿಃ** [೧೧೬] ॥

"ಯಯಾತಿಗೆ ಶರ್ಮಿಷ್ಠೆಯಂತೆ ನೀನು ಪತಿಗೆ ಪ್ರೇಮ ಪಾತ್ರಳಾಗಿರು. ಹಾಗೆ ಶರ್ಮಿಷ್ಠೆಯು ಪೊರುಪಂಬ ಸತ್ಪುತ್ರನನ್ನು ಪಡೆದಂತೆ ನೀನೂ ಸಹ ಬಲಿಷ್ಠನಾದ ಮಗನನ್ನು ಪಡೆ" ಇಲ್ಲಿ ಇಷ್ಟವಾದ ಮಗನು ದೊರಕಲೆಂದು ಕಣ್ವ ಮಹರ್ಷಿಯು ಶಕುಂತಲೆಗೆ ಆಶೀರ್ವಾದ ಮಾಡುವುದರಿಂದ ಆಶೀರ್ವಾದವೆಂಬ ಅಲಂಕಾರವು ಶ್ಲೋಕದಲ್ಲಿ ಬಂದಿದೆ.

ದುಃಖದಿಂದ ಗೋಳಾಡುವುದು 'ಆಕ್ರಂದ'ವೆಂಬ ಅಲಂಕಾರವೆನಿಸಿದೆ. ಉದಾಹರಣೆಗೆ ಕಂಚುಕಿಯು ಕುಂತೀದೇವಿಯೇ ಅರಮನೆಯಲ್ಲಿ ನಿನ್ನ ಸಚ್ಚಾ-ರಿತ್ರ್ಯದಿಂದ ಧ್ವಜದಂತೆ ಗೌರವಾರ್ಹಳೆನಿದವಳೇ[೧೧೭]" ಎಂದು ಮುಂತಾಗಿ ದುಃಖದಿಂದ ಗೋಳಾಡುವುದು ಆಕ್ರಂದವೆಂಬ ಅಲಂಕಾರವಾಗಿದೆ. ಯಾವುದೂ ನೆಪದಿಂದ ಬೇರೊಂದು ರೂಪವನ್ನು ಭಾವಿಸಿಕೊಳ್ಳುವುದೇ 'ಕಪಟ', ತಿರಸ್ಕಾರವನ್ನು ಸಹಿಸದಿರುವುದೇ 'ಅಕ್ಷಮ' ಉದಾಹರಣೆ, "ಎಲೈ ಸತ್ಯವಾದಿಯೇ, ನಾನು ಇಂತಹನೆಂಬುದನ್ನು ನಾನು ಒಪ್ಪಿಕೊಂಡಿರುವೆನು. ಈ ಶಕುಂತಲೆಯನ್ನು ವಂಚಿಸಿದರೆ ನನಗೆ ಆಗುವ ಫಲವೆಂತಹುದು[೧೧೮]?" ಎಂದು ಹೇಳುವನು. ಇಲ್ಲಿ ರಾಜನು ಶಾರ್ಙರುವನು "ಇದರಿಂದ ನಿನಗೆ ವಿಶಾದವುಂಟಾಗುವುದು ನಿಶ್ಚಿತ" ಎಂದು ಹೇಳುವನು. ಇಲ್ಲಿ ರಾಜನು ಶಾರ್ಙರವನನ್ನು ಸತ್ಯವಾದಿನ್ ಎಂದು ಗರ್ವದಿಂದ ಸಂಭೋಧಿಸಿದ್ದರಿಂದ ತೋರುವ ಅವಮಾನವನ್ನು ಶಾರ್ಙ್ಗರವನನ್ನು ಸಹಿಸದೇ ಇದ್ದುದರಿಂದ ಇದು ಅಕ್ಷಮೆ ಎನಿಸಿದೆ.

ಅಹಂಕಾರದಿಂದ ಆಡುವ ಮಾತು 'ಗರ್ವ'ವೆನಿಸಿದೆ. ಒಂದು ಕಾರ್ಯವನ್ನು ಆರಂಭಿಸುವುದು 'ಉದ್ಯಮ' ಎನಿಸಿದೆ. ಯಾವುದಾದರೊಂದು ಪ್ರಯೋಜನವನ್ನು ಸಾಧಿಸಬೇಕಾದ ಉದ್ದೇಶದಿಂದ ಉತ್ಕೃಷ್ಟ ವ್ಯಕ್ತಿಯೊಬ್ಬನನ್ನು ಆಶ್ರಯಿಸುವುದೇ 'ಆಶ್ರಯ'ವೆನಿಸಿದೆ. ಆಸಾಧುವಿನ ಬಗ್ಗೆ ಮಾಡುವ ಉಪಹಾಸವನ್ನ 'ಉತ್ಪ್ರಾಸನ' ಯಾವುದಾದರೊಂದು ವಸ್ತುವು ರಮಣೀಯವಾಗಿದೆ ಎಂಬ ಕಾರಣದಿಂದ ಅದರಲ್ಲಿ ಆಸೆ ಹುಟ್ಟುವುದೇ 'ಸ್ಪೃಹೆ' ಎನಿಸಿದೆ. ರಾಜನು "ಬೇರೆಯವರು ಕಚ್ಚದಿರುವುದರಿಂದ ಕೋಮಲವೆಸಿದ ಈ ಶಕುಂತಲೆಯ ಕೆಳತುಟಿಯ ಮನೋಹರವಾಗಿ ಅದುರುತ್ತಿರುವುದ ರಿಂದ ಪಾನಮಾಡಬೇಕೆಂಬ ಇಚ್ಛೆಯನ್ನು ಅದು ನನಗೆ ತಾನಾಗಿಯೇ ಹುಟ್ಟಿಸುತ್ತಲಿದೆ[೧೯]. ಇಲ್ಲಿ ಶಕುಂತಲೆಯ ತುಟಿಯು ರಮಣೀಯವಾಗಿದ್ದರಿಂದ ದುಷ್ಯಂತನು ಅದನ್ನು ಇಚ್ಛಿಸುವುದೇ ಸ್ಪೃಹೆ ಎನಿಸಿದೆ.

ತಿರಸ್ಕಾರದ ಮಾತನ್ನು ತಿಳಿಸುವ ಮನೋವಿಕಾರವು 'ಕ್ಷೋಭೆ' ಎನಿಸಿದೆ. ಮೋಹದಿಂದ ತಿರಸ್ಕರಿಸಿದ ವಿಷಯದ ಬಗ್ಗೆ ಅನುಪಾತ ಪಡುವುದೇ 'ಪಶ್ಚಾತ್ತಾಪ' ಯಾವುದಾದರೊಂದು ಕಾರ್ಯವನ್ನು ಸಿದ್ಧಿಸುವುದಕ್ಕಾಗಿ ಕಾರಣವನ್ನು ತಿಳಿಸುವುದು 'ಉಪಪತ್ತಿ', ಇಷ್ಟವಾದ ವಸ್ತುವು ದೊರಕಲೆಂದು ಆಶಿಸುವುದು 'ಆಶಂಸೆ' ಎನಿಸಿದೆ. ಉದಾಹರಣೆಗಾಗಿ ಸ್ಮಶಾನದಲ್ಲಿ ಮಾಧವನು "ಮನ್ಮಥನ ಮಂಗಳ ಗೃಹವೆನಿಸಿದ ಮಾಲತಿಯ ಮುಖವನ್ನು ಮತ್ತೆ ನೋಡಬೇಕೆಂದು[೨೦]" ಇಲ್ಲಿ ಬಯಸಿರುವುದ–ರಿಂದ ಇದು ಆಶಂಸೆ ಎನಿಸಿದೆ. ಮಾಡಬೇಕಾದ ಕರ್ತವ್ಯವನ್ನು ನಿಶ್ಚಯಿಸುವುದನ್ನು 'ಅಧ್ಯವಸಾಯ' ಅನಿಷ್ಟವಾದ ಫಲವನ್ನು ಕೂಡುವ ಯಾವ ಕರ್ಮವಿದ್ಯೆಯೂ ಅದನ್ನು 'ವಿಸರ್ಪ' ಎನಿಸಿದೆ. ಉದಾಹರಣೆಗೆ.

**ವಿಸರ್ಪೋ ಯತ್ಸಮಾರಬ್ಧಂ ಕರ್ಮಾನಿಷ್ಟಫಲಪ್ರದಮ್ ।**
**ಯಥಾವೇಣ್ಯಾ 'ಏತಸ್ಯ ತಾವತ್ ಪಾಕೋಽಯಮ್[೨೧] ॥**

"ಹಿಂದೆ ಒಮ್ಮೆ ದುಶ್ಯಾಸನನು ದ್ರೌಪದಿಯ ಕೇಶವನ್ನು ಹಿಡಿದು ಆಕೆಯನ್ನು ಎಳೆದದ್ದರಿಂದ ಇಷ್ಟೊಂದು ಅನಾಹುತವುಂಟಾಯಿತು. ಈಗ ಎರಡನೆಯ ಸಾರಿ ದುಷ್ಟದ್ಯುಮ್ನನು ದ್ರೋಣನ ಕೂದಲನ್ನು ಹಿಡಿದು ಎಳೆದದ್ದರಿಂದ ಲೋಕದ ಪ್ರಜೆಗಳೆಲ್ಲರೂ ನಾಶವಾದರೂ" ಎಂದು ಅಶ್ವತ್ಥಾಮನು ಕೋಪದಿಂದ ಹೇಳುತ್ತಾನೆ. ಇಲ್ಲಿ ಅನಿಷ್ಟವನ್ನುಂಟು ಮಾಡುವ ದ್ರೋಣನ ಕೇಶಗ್ರಹಣವೆಂಬ ಕರ್ಮವನ್ನು ದೃಷ್ಟದ್ಯುಮ್ನನು ಆರಂಭಿಸಿದ್ದರಿಂದ ಇದು 'ವಿಸರ್ಪ'ವೆನಿಸಿದೆ. ಹಿಂದೆ ಕಳೆದು ಹೋದ ಸಮಾಚಾರವನ್ನು ತಿಳಿಸುವುದನ್ನು 'ಉತ್ಕೀರ್ತನ' ಎಂದು ಕರೆಯಲಾಗಿದೆ. ಉದಾಹರಣೆಯಾಗಿ.

**ಅತ್ರಾಸೀತ್ಫಣಿಪಾಶ ಬಂಧನವಿಧಿಃ ಶಕ್ಯಾ ಭವದ್ದೇವರೇ ।**
**ಗಾಢಂ ವಕ್ಷಸಿ ತಾಡಿತೇ ಹನುಮತಾ ದ್ರೋಣಾದ್ರಿರತ್ರಾಹೃತಃ** [೧೨೨] **॥**

"ಎಲೈ ಪ್ರೇಯಸಿ, ಇಲ್ಲಿ ನಮ್ಮಿಬ್ಬರಿಗೂ ಇಂದ್ರಜಿತುಕುಮಾರನಿಂದ ನಾಗಪಾಶದಿಂದ ಬಂಧನವಾಗಿತ್ತು. ಇದೇ ಸ್ಥಾನದಲ್ಲಿ ಲಕ್ಷಣನಿಗೆ ಶಕ್ತಿ ಎಂಬ ಬಾಣವನ್ನು ರಾವಣನು ಪ್ರಯೋಗಿಸಿ ವಕ್ಷಸ್ಥಳದಲ್ಲಿ ಗಟ್ಟಿಯಾಗಿ ಹೊಡೆದಿದ್ದನು. ಆಗಲೇ ಹನುಮಂತನು ಗಂಧಮಾದನ ಪರ್ವತವನ್ನು ಇಲ್ಲಿಗೆ ತಂದನು". ಹೀಗೆ ಹೇಳಿರುವುದರಿಂದ ನಾಗಪಾಶ ಬಂಧನ ಮೊದಲಾದ ಹಿಂದಿನ ಕಾರ್ಯಗಳನ್ನು ಇಲ್ಲಿ ತಿಳಿಸಿದ್ದರಿಂದ ಇದು ಉತ್ಕೀರ್ತನವೆನಿಸಿದೆ. ಒಬ್ಬರು ಅನುಭವಿಸುವ ಹೆಚ್ಚಿನ ಆನಂದವು 'ಪ್ರಹರ್ಷ'ವೆಂಬ ಅಲಂಕಾರವಾಗಿದೆ. "ಆಶ್ರಮದಲ್ಲಿರುವವರು ಅತಿಥಿ ಸೇವೆಯನ್ನು ಮಾಡದೆ ಅವನನ್ನು ತೊರೆದು ಮನಬಂದಂತೆ ಬೇರೆ ಕಡೆಗೆ ಹೋಗುವುದು ಯುಕ್ತವಲ್ಲ"ವೆಂದು ತಿಳಿಸಿದೆ. ಇಲ್ಲಿ ಅತಿಥಿಯ ಸೇವೆಯನ್ನು ಮಾಡದೆ ಅವನನ್ನು ತೊರೆದು ಮನಬಂದಂತೆ ಬೇರೆ ಕಡೆಗೆ ಹೋಗುವುದು ಯುಕ್ತವಲ್ಲವೆಂದು[೧೨೩] ತಿಳಿಸಿದೆ. ಇಲ್ಲಿ ಅತಿಥಿಯ ಸೇವೆಯನ್ನು ಮಾಡದೆ ಬೇರೆ ಕಡೆಗೆ ಹೋಗುವುದು ಯುಕ್ತವಲ್ಲವೆಂದು ಶಕುಂತಲೆಗೆ ತಿಳಿಸಿರುವುದರಿಂದ ಇದು ಉಪದೇಶನ'ವೆಂಬ ಅಲಂಕಾರವಾಗಿದೆ. ಇದುವರೆಗೂ ನಾಟಕದಲ್ಲಿ ಬರುವ ಮೂವತ್ತಮೂರು ನಾಟ್ಯಲಂಕಾರಗಳನ್ನು ವಿಚಾರಮಾಡಿ ಇವು ರಸಪುಷ್ಟಿಗೆ ಅನುಕೂಲವಾಗುವಂತಹ ಸನ್ನಿವೇಶವಿದ್ದರೇ ಅಲಂಕಾರ, ಭಾವ ಇವನ್ನು ಸಂಧ್ಯಂಗಗಳನ್ನೂ ಹೆಚ್ಚಾಗಿ ಉಪಯೋಗಿಸಬಹುದು. ಆಗ ನಾಟ್ಯಲಕ್ಷಣ, ನಾಟ್ಯಾಲಂಕಾರಗಳನ್ನು ಅವಶ್ಯವಾಗಿ ತಿಳಿಸಬೇಕಾಗುತ್ತದೆ.

ಇನ್ನು ನಾಟಕದಲ್ಲಿ ಬರುವ ಮಾತುಗಳ ಸ್ವರೂಪವನ್ನು ವಿವೇಚಿಸಲಾಗಿದೆ. ಬೇರೆಯವರಿಗೆ ಕೇಳಿಸದಂತೆ ಆಡುವ ಮಾತು 'ಸ್ವಗತ'ವೆನಿಸುವುದು, ಎಲ್ಲರೂ ಕೇಳಿಸುವಂತೆ ಆಡುವ ಮಾತು 'ಪ್ರಕಾಶ' ಎನಿಸಿದೆ. ಒಬ್ಬನೊಡನೆ ಮಾತನಾಡುತ್ತಿರುವಾಗ ಮತ್ತೊಬ್ಬನ ಕಡೆಗೆ ತಿರುಗಿ ರಹಸ್ಯವನ್ನು ತಿಳಿಸುವುದು. 'ಅಪವಾರಿತ', ಬೇರೆಯವರ ಜೊತೆಯಲಿ ಮಾತನಾಡುವಾಗ ಅವರಿಗೆ ಕೇಳಿಸದಂತೆ ಮುಂದಕ್ಕೆ ಹೋಗಿ ಮಾತನಾಡುವುದು 'ಜನಾಂತಿಕ' ಯಾರು ಹೇಳಿದೆ ಇರುವುದನ್ನ ತಾನು ಕೇಳಿಸಿಕೊಂಡಂತೆ ಭಾವಿಸಿಕೊಂಡು ಮಾತನಾಡುವುದು 'ಆಕಾಶಭಾಷಿತ'ವಾಗಿದೆ.

**ರಾಜ್ಯಾಸ್ವಾಮಿೊಮಿತಿದೇವೇತಿ ಭೃತ್ಯೈರ್ಭಟ್ಟೇತಿ ಚಾಧಮೈಃ ॥**
**ಯಸ್ಯ ಯತ್ಕರ್ಮ ಶಿಲ್ಪಂ ವಾ ವಿದ್ಯಾ ವಾ ಜಾತಿರೇವಾವಾ** [೧೨೪] **॥**

ರಾಜನನ್ನು ಭೃತ್ಯನೇ ಮೊದಲಾದರು ಸ್ವಾಮಿ ದೇವನೆಂದೂ, ನೀಚರು ಭಟ್ಟನೆಂದೂ, ರಾಜರ್ಷಿಗಳು ಮತ್ತು ವಿದೂಷಕನು ವಯಸ್ಯನೆಂದೂ ಕರೆಯಬೇಕು. ವಿದೂಷಕನು ರಾಜನ್ ಎಂದೂ ಕರೆಯಬಹುದು. ಬಾಹ್ಮಣನನ್ನು 'ಆರ್ಯ' ಎಂದು

ನಟೀ ಸೂತ್ರದಾರ ಇವರು ತಮ್ಮಲಿಯೇ 'ಆರ್ಯ', 'ಆರ್ಯೆ' ಎಂದು ಅಣ್ಣನನ್ನು 'ಆರ್ಯ' ಎಂದು ದೇವತೆ, ಋಷಿ, ಸನ್ಯಾಸಿ ಅಥವಾ ಬ್ರಹ್ಮಚಾರಿಗಳನ್ನು 'ಭವತಿ'ಎಂದು ಕರೆಯಬೇಕು. ಮಗನನ್ನು ವತ್ಸ, ಪುತ್ರಕ, ತಾತ ಎಂದು, ಶಾಂತಸ್ವಭಾವದ ವ್ಯಕ್ತಿಯನ್ನು ಸಾಧು, ತಪಸ್ವಿ, ಎಂದು, ಗುರುಗಳನ್ನು ಶಿಷ್ಯ ಮೊದಲಾದವರು 'ಪೂಜ್ಯ'ನೆಂದೂ ಕರೆಯಲಾಗಿದೆ. ವೇಶ್ಯೆಯರನ್ನು ದತ್ತಾ, ಸಿದ್ಧಿ, ಸೇನಾ ಎಂಬ ಹೆಸರಿನಿಂದ, ಚೇಟನಿಗೆ ಕಲಹಂಸ, ಚೇಟಿಗೆ ಮಂದಾರಿಕೆ ಯುವರಾಜನನ್ನು 'ಸ್ವಾಮಿ' ರಾಜಪುತ್ರನನ್ನು 'ಕುಮಾರ' ರಾಜನ ಮಗಳನ್ನು 'ಭರ್ತ್ಯದಾರಿಕೆ' ಎಂದು, ಪೂಜ್ಯಸ್ತ್ರಿಯರನ್ನು 'ಅಂಬಿ' ಆಯಾಯ ಕಾಲಕ್ಕನುಗುಣವಾಗಿ ಆಯಾಯ ಹೆಸರಿನಿಂದ ಕರೆಯಲಾಗಿದೆ. ಇನ್ನು ಒಬ್ಬನ ಜಾತಿ, ಕರ್ಮ, ಶಿಲ್ಪ, ವಿದ್ಯಗೆ ಸಂಬಂಧಿಸಿದಂತೆ ತಾಂಬುಲವನ್ನು ಕೂಡುವವನಿಗೆ 'ತಾಂಬೂಲಿಕ' ನೆಂದೂ, ಚಿತ್ರಗಾರನಿಗೆ, 'ಚೈತ್ರಿಕ', ವ್ಯಾಕರಣವಿದ್ಯಯನ್ನು ಓದಿದವನಿಗೆ 'ವೈಯಾಕರಣ', ಬಟ್ಟೆ ಹೊಗೆಯುವವನಿಗೆ 'ರಜತ' ಹೀಗೆಯೇ ನಾಟಕದಲ್ಲಿ ಬರುವ ಪಾತ್ರಗಳಿಗೆ ಅವರ ವ್ಯಕ್ತಿಗಳಿಗನುಗುಣವಾಗಿ ಹೆಸರನ್ನು ಸೂಚಿಸಲಾಗಿದೆ. ಇನ್ನು ಭಾಷೆಗೆ ಸಂಬಂಧಿಸಿದಂತೆ

**ಪುರುಷಾಣಾಮನೀಚಾನಾಂ ಸಂಸ್ಕೃತಂ ಸ್ಯಾತ್ ಕೃತಾತ್ಮನಾಮ್ ।**
**ವೈದಗ್ಧ್ಯಾರ್ಥಂ ಪ್ರದಾತವ್ಯಂ ಸಂಸ್ಕೃತಂ ಚಾಂತರಾಂತರಾ**[೧೨೫] **॥**

ನಾಟಕದಲ್ಲಿ ಬರುವ ಪಾತ್ರಗಳಿಗೆ ಸಂಬಂಧಿಸಿದಂತೆ ಭಾಷೆಗಳ ವ್ಯವಸ್ಥೆಯನ್ನು ಈಗ ತಿಳಿಸಲಾಗಿದೆ. ಸುಶಿಕ್ಷಿತರು ಉತ್ತಮ ಸ್ವಭಾವದವರು ಸಂಸ್ಕೃತ ಭಾಷೆಯನ್ನು ಮಾತನಾಡುತ್ತಾರೆ. ಉತ್ತಮ ಸ್ವಭಾವದ ಸನ್ಯಾಸಿಗಳು ಸಂಸ್ಕೃತವನ್ನು ಉಪಯೋಗಿಸುತ್ತಾರೆ. ಬಾಲಕರು ಷಂಡರು, ಸಾಮ್ಯರೆನಿಸಿದ ಜ್ಯೋತಿಷ್ಯರು, ಉನ್ಮತ್ತರು, ರೋಗಿಗಳು ಕೆಲವು ವೇಳೆ ಸಂಸ್ಕೃತ ಭಾಷೆಯನ್ನು ಉಪಯೋಗಿಸಬಹುದು. ಹಾಗೆಯೇ ಸ್ತ್ರೀಯರು, ಸಖಿಯರು, ಬಾಲಕರು, ವೇಶ್ಯೆಯರು, ದೂರ್ತರು, ಅಪ್ಸರೆಯರು ತಮ್ಮ ವಾಕ್ಚಾತುರ್ಯವನ್ನು ತೋರಿಸಲಿಕ್ಕಾಗಿ ಮಧ್ಯದಲ್ಲಿ ಅವಕಾಶ ಸಿಕ್ಕಾಗ ಸಂಸ್ಕೃತದಲ್ಲಿ ಮಾತನಾಡಬಹುದು. ಸ್ತ್ರೀಯರು ಸುಸಂಸ್ಕೃತಯರು 'ಶೌರಸೇನಿಭಾಷೆ'ಯನ್ನು ಇಂತಹ ಸ್ತ್ರೀಯರು ಗೀತೆಯನ್ನು ಹೇಳುವಾಗ 'ಮಹಾರಾಷ್ಟ್ರೀಭಾಷೆ'ಯನ್ನು ಅಂತಃಪುರದಲ್ಲಿ ಸಂಚರಿಸುವರು 'ಮಾಗಧಿಭಾಷೆ'ಯನ್ನು ರಾಜನ ಸೇವಕರು, ರಾಜಪುತ್ರರು, ವೈಶ್ಯರು 'ಅರ್ಧಮಾಗಧಿಭಾಷೆ' ಯನ್ನು ವಿದೂಷಕ ಮೊದಲಾದವರು "ಗೌಡೀಯ ಭಾಷೆಯನ್ನು ದೂರ್ತರು 'ಆವಂತಿ ಭಾಷೆ'ಯನ್ನು ಯೋಧರು ಜೂಜಾಡುವರು ದಾಕ್ಷಿಣಾತ್ಯಭಾಷೆಯಲ್ಲಿ ಬೇಡ, ಶಕ ಮೊದಲಾದ ಜಾತಿಯರು 'ಶಾಬರೀಭಾಷೆ', ಅಂಜುಬುರುಕರು 'ಅಭೀ-ರೀಭಾಷೆ'ಯನ್ನ ಚಂಡಾಲರು 'ಚಾಂಡಾಲಿಭಾಷೆ' ಪಿಶಾಚಿಗಳು ಆಡುವ ಮಾತು ಪೈಶಾಚಿ, ದ್ರಾವಿಡರು 'ದ್ರಾವಿಡಭಾಷೆ'ಯಲ್ಲಿ ಔತ್ತರೇಯರು 'ವಾಹ್ಲೀಕಭಾಷೆ'ಯಲ್ಲಿ

ಹೀಗೆ ನಾಟಕದಲ್ಲಿ ಬರುವ ಆಯಾಯ ಪಾತ್ರಗಳಿಗೆ ಅನ್ವಯಿಸುವಂತೆ ಭಾಷೆಗಳಲ್ಲಿ ವ್ಯವಹರಿಸುವರೆಂಬುದನ್ನು ನಾಟ್ಯಗ್ರಂಥಗಳಿಂದ ತಿಳಿಯಬಹುದು. ಭಾಷೆಗಳ ಸ್ವರೂಪ ಲಕ್ಷಣಗಳನ್ನು ತಿಳಿಯಲು 'ಭಾಷಾರ್ಣವ[೧೨೬]' ಗ್ರಂಥದಿಂದ ತಿಳಿಯಬಹುದಾಗಿದೆ.

ಇನ್ನು ಲಾಸ್ಯಕ್ಕೆ ಸಂಬಂಧಿಸಿದಂತೆ. . . ,

**ಗೇಯಪದಂ ಸ್ಥಿತವಾಕ್ಯಮಾಸೀನಂ ಪುಷ್ಪಗಂಡಿಕಾ ।**
**ಪುಚ್ಛೇದಕಸ್ತ್ರೀಗೊಢಂ ಚ ಸೈಂಧವಾಖ್ಯಂ ದ್ವಿಗೂಢಕಮ್ ॥**
**ಉತ್ತಮೋತ್ತ ಮಕಂ ಜಾನ್ಯದುತ್ತಪ್ರತ್ಯುತ್ತಮೇವ ಚ ।**
**ಲಾಸ್ಯೇ ದಶವಿಧಂ ಹ್ಯೇತದಂಗಮುಕ್ತಂ ಮನೀಷಿಭೀಃ[೧೨೭] ॥**

"ಗೇಯಪದ ಸ್ಥಿತಪಾಠ್ಯ, ಆಸೀನ, ಪುಷ್ಪಗಂಡಿಕಾ, ಪ್ರಚ್ಛೇದಕ, ತ್ರಿಗೂಢ, ಸೈಂಧವ, ದ್ವಿಗೂಢಕ, ಉತ್ತಮೋತ್ತಮಕ, ಉತ್ತಪ್ರತ್ಯುಕ್ತ, ಇವು ನಾಟಕದಲ್ಲಿ ಬರುವ ಹತ್ತು ಬಗೆಯ ಲಾಸ್ಯಗಳೆನಿಸಿವೆ. ಉದಾಹರಣೆಗಾಗಿ.

**ಉತ್ಪುಲ್ಲಕಮಲಕೇಸರಪರಾಗಗೌರದ್ಯುತೇ ಮಮಹಿ ಗೌರಿ ।**
**ಅಭಿವಾರಿಭಿತಂ ಪ್ರಸಿದ್ಧ್ಯತು ಭಗವತಿ! ಯುಷ್ಮತ್ಪಸಾದೇನ[೧೨೮] ॥**

ಗೌರೀಗೃಹದಲ್ಲಿ ವೀಣೆಯನ್ನು ಬಾರಿಸುತ್ತಿದ್ದ ಮಲಯವತಿಯು "ವಿಕಸಿತವಾದ ಕಮಲದ ದಳಗಳಲ್ಲಿರುವ ಪರಾಗದಂತೆ ಬೆಳಗಿರುವ ಎಲೈ ಗೌರೀದೇವತೆಯೇ, ಪೂಜ್ಯಳೇ, ನಿನ್ನ ಪ್ರಸಾದದಿಂದ ನನ್ನ ಇಷ್ಟಾರ್ಥವು ಸಿದ್ಧಿಸಲಿ" ಹೀಗೆ ಶುದ್ಧವಾದ ಗಾನದಿಂದ ಇಲ್ಲಿ ಮಲವತಿಯು ಹಾಡಿರುವುದರಿಂದ ಇದು ಗೇಯಪದವೆನಿಸಿದೆ. ಕಾಮಬಾಧೆಗೆ ಸಿಲುಕಿದಳು ಪ್ರಾಕೃತ್‌ಭಾಷೆಯಲ್ಲಿ ಹಾಡುವುದನ್ನ 'ಸ್ಥಿತಪಾಠ್ಯ' ಎಂದು ಕರೆಯಲಾಗಿದೆ. ಶೋಕಚಿಂತೆಗಳಿಂದೊಡಗೂಡಿದವಳು ಹಾಡುವುದೇ 'ಆಸೀನ' ವಾದ್ಯಸಾಮಾಗ್ರಿಗಳೊಡನೆ ಕೂಡಿದ ಗಾನವನ್ನು ಬೇರೆ ಬೇರೆ ವೃತ್ತದ ಪದ್ಯಗಳಲ್ಲಿ ಹಾಡುವುದನ್ನು 'ಪುಷ್ಪಗಂಡಿಕೆ', ಕೋಪದಿಂದ ವೀಣೆಯನ್ನು ಬಾರಿಸುತ್ತ ಹಾಡುವುದು 'ಪ್ರಚ್ಛೇದಕ', ಸ್ತ್ರೀ ವೇಷಧರಿಸಿ ಪುರುಷರು ನಾಟ್ಯವಾಡುವುದು 'ತ್ರಿಗೂಢಕ[೧೨೯]', ನಾಯಕನು ಸಂಕೇತ ಸ್ಥಾನದಲ್ಲಿ ಪ್ರೇಯಸಿಯನ್ನು ಕಾಡದೆ ನಿರಾಶನಾಗಿ ವೀಣೆ ಮೊದಲಾದ ಸಂಗೀತದ ಸಾಮಾಗ್ರಿಗಳೊಡನೆ ಪ್ರಾಕೃತದಲ್ಲಿ ಹಾಡುವುದನ್ನು 'ಸೈಂಧವ', ನಾಲ್ಕುಬಗೆಯಾಗಿ ವಿಂಗಡಿಸಿದ ಪದಗಳಿದ್ದು ಮುಖಪ್ರತಿಮುಖಸಂಧಿಯೊಡಗೂಡಿ ರಸಭಾವಗಳೊಡನೆ ಸೇರಿರುವುದನ್ನ 'ದ್ವಿಗೂಡ' ಎನಿಸಿದೆ, ಮನೋಹರವಾದ ಲಾಸ್ಯಗಂಧ 'ಉತ್ತಮಾತ್ತಮ'ವಾಗಿದೆ. ವಿಲಾಸದಿಂದ ಕೂಡಿರುವ ಗೀತಾರ್ಥವನ್ನ 'ಉಕ್ತಪ್ರತ್ಯುಕ್ತ' ಲಾಸ್ಯ ಎಂದು ಕರೆಯಲಾಗಿದೆ.

ಇಲ್ಲಿಗೆ ರೂಪಕದಲ್ಲಿ ಬರುವ ಹತ್ತು ವಿಧಗಳಲ್ಲಿ ಮೊದಲನೆಯದಾದ ನಾಟಕದ

ಸ್ವರೂಪ ಲಕ್ಷಣ, ಅದರಲ್ಲಿ ಬರುವ ಐದು ಅವಸ್ಥೆಗಳು, ಸಂಧಿ, ಸಧ್ಯಂಗಳು ನಾಲ್ಕು ವೃತ್ತಿ, ಅರವತ್ತನಾಲ್ಕು ಅಂಗಗಳು ಮೂವತ್ತಾರು ಲಕ್ಷಣ, ಮೂವತ್ತಮೂರು ಅಲಂಕಾರಗಳು, ಮಾತು, ಭಾಷೆ ಹತ್ತು ಬಗೆಯ ಲಾಸ್ಯ ಇವುಗಳಿಂದ ಕೂಡಿದ್ದು ವೀರ ಮತ್ತು ಶೃಂಗಾರರಸವು ಪುಷ್ಕಳವಾಗಿದ್ದು ಉತ್ಕೃಷವಾದ ರಚನೆ ಹಾವಭಾವವಿಲಾಸಗಳನ್ನು ಚೆನ್ನಾಗಿ ತೋರಿಸುತ್ತಿರಬೇಕು. ಧೀರೋದಾತ್ತ ನಾಯಕನ ಸಭ್ಯವ್ಯವಹಾರವಿದ್ದು ನೋಡುಗರಿಗೆ ಸುಖವನ್ನುಂಟುಮಾಡಬೇಕೆಂಬುದನ್ನು ಭರತ ಮುನಿಯು[೧೩೦] ತಿಳಿಸಿದ್ದಾನೆ. ನಾಟಕದ ವಿಚಾರವನ್ನು ತಿಳಿಸಿದ ಮೇಲೆ ರೂಪಕದ ಎರಡನೇ ವಿಧವಾದ ಪ್ರಕರಣವನ್ನು ಈಗ ವಿಚಾರ ಮಾಡಲಾಗಿದೆ.

## ೨. ಪ್ರಕರಣ

**ಭವೇತ್ಪ್ರಕರಣೇ ವೃತ್ತಂ ಲೌಕಿಕಂ ಕವಿಕಲ್ಪಿತಂ ।**
**ಶೃಂಗಾರೋಽಂಗೀ ನಾಯಕಸ್ತು ವಿಪ್ರೋಽಮಾತ್ಯೋಽಥವಾವಣಿಕ್ ॥**
**ಸಾಪಾಯಧರ್ಮ ಕಾಮಾರ್ಥಪರೋ ಧೀರಪ್ರಶಾಂತಕಃ [೧೩೧] ।**

ಪ್ರಕರಣದಲ್ಲಿ ವೃತ್ತಾಂತವು ಪ್ರಪಂಚದ ನಿತ್ಯಜೀವನದಲ್ಲಿ ನಡೆಯುವಂತದಾಗಿರಬೇಕು. ಮರ್ತ್ಯಲೋಕದಲ್ಲಿ ಸಂಭವಿಸದೇ ಸ್ವರ್ಗ ಮೊದಲಾದ ಲೋಕಗಳಿಗೆ ಅನ್ವಯಿಸಬಾರದು. ಕಥಾವಸ್ತುವನ್ನು ಪುರಾಣಗಳಿಂದ ತೆಗೆದುಕೊಳ್ಳದೆ ಕವಿಕಲ್ಪಿತವಾಗಿದ್ದು. ಶೃಂಗಾರರಸವು ಪ್ರಧಾನವಾಗಿದ್ದು ನಾಯಕನು ಧೀರಪ್ರಶಾಂತನಾಗಿದ್ದು ಧರ್ಮಕಾಮಾರ್ಥಗಳನ್ನು ಸಂಪಾದಿಸುವುದರಲ್ಲಿ ಆಸಕ್ತನಾಗಿರಬೇಕು. ಈ ಪ್ರಕರಣದಲ್ಲಿ ಮೂರು ಬಗೆಯ ನಾಯಕರಿರುವರು. ಬ್ರಾಹ್ಮಣನಾಯಕ[೧೩೨], ಮಂತ್ರಿಯೇ[೧೩೩] ನಾಯಕ ಮತ್ತು ಸತ್ಕುಲಪ್ರಸೂತೆಯಾದ ಹೆಂಗಸು ನಾಯಿಕೆಯಾಗಿರುವಳು. ಕೆಲವು ಕಡೆಯಲ್ಲಿ ಇಬ್ಬರು ನಾಯಿಕೆ[೧೩೪]ಯರಿರುವರು. ಇದರಲ್ಲಿ ಸದ್ವಂಶ ಸ್ತ್ರೀ, ವೇಶ್ಯೆ ಇಬ್ಬರೂ ನಾಯಿಕೆರೆನಿಸುವರು. ಮೂರನೆಯದಾಗಿ ಕಿತವ, ದ್ಯೂತಕಾರ, ವಿಟ, ಚೇಟ, ಇವರು ಸಹ ನಾಯಕರಗಿರುತ್ತಾರೆ. ಇನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಇದರಲ್ಲಿಯೂ ಸಹ ನಾಟಕದಲ್ಲಿರುವಂತೆ ಉಳಿದ ಅಂಶಗಳಿರುತ್ತವೆ.

## ೩. ಭಾಣ

**ಭಾಣಃ ಸ್ಯಾದ್ಧೂರ್ತ ಚರಿತೋ ನಾನಾವಸ್ಥಾಂತರಾತ್ಮಕಃ ।**
**ಏಕಾಂಕ ಏಕ ಏವತ್ರ ನಿಪುಣಃ ಪಂಡಿತೋ ವಿಟಃ [೧೩೫]॥**

"ದೂರ್ತನಾಯಕನ ಚರಿತ್ರದಿಂದ ಕೂಡಿದ್ದು ಅನೇಕ ಬಗೆಯ ಅಂಗಗಳಿದ್ದು ಒಂದೇ ಅಂಕವಿರುವ ರೂಪಕವನ್ನು 'ಭಾಣ' ಎಂದು ಕರೆಯಲಾಗಿದೆ". ಇಲ್ಲಿ ಪಂಡಿತನೂ ಚತುರನೂ ಆದ ವಿಟನು ತಾನು ಅನುಭವಿಸಿದ್ದಾಗಲೀ ತಾನಾಗಿಯೇ

ಯಾವುದಾದರೊಂದು ಉಪಾಯದಿಂದ ತಿಳಿದು ರಂಗಸ್ಥಳವನ್ನು ಪ್ರಕಾಶಗೊಳಿಸುವನು ಆಕಾಶಭಾಷಿತವೆನಿಸಿದ ಬೇರೆಯವರ ಮಾತನ್ನು ತಾನು ಅನುವಾದ ಮಾಡುತ್ತ ವಿಟನು ಅದಕ್ಕೆ ಉತ್ತರವನ್ನು ಪ್ರತ್ಯುತ್ತರವನ್ನು ಕೊಡುವನು ಶೃಂಗಾರರಸವನ್ನು ಸೌಭಾಗ್ಯ ವರ್ಣನದಿಂದ ವೀರರಸವನ್ನು ಶೌರ್ಯದ ವರ್ಣನೆಯಿಂದ ಸೂಚಿಸಲಾಗುವುದು ಭಾರತೀವೃತ್ತಿ ಕೆಲವುಕಡೆ ಕಾಶಿಕೀವೃತ್ತಿಯನ್ನು ಪ್ರಯೋಗಿಸಿರುತ್ತಾರೆ. ಗೇಯಪದ ಮೊದಲಾದ ಹತ್ತು ಲಾಸ್ಯಂಗಗಳನ್ನು ಸೇರಿಸಲಾಗಿರುತ್ತದೆ. ಇವಿಷ್ಟು ಬಾಣವೆಂಬ[೧೩೬] ರೂಪಕದ ವಿಚಾರವಾಗಿದೆ.

### ೮. ವ್ಯಾಯೋಗ

**ಖ್ಯಾತೇತಿವೃತ್ತೋ ವ್ಯಾಯೋಗಃ ಸ್ವಲ್ಪ ಸ್ತ್ರೀಜನ ಸಂಯುತಃ ।**
**ಹೀನೋ ಗರ್ಭವಿಮರ್ಷಾಭಾಂ ನರೈರ್ಬ ಹುಭಿರಾಶ್ರಿತಃ [೧೩೭] ॥**

"ಪ್ರಸಿದ್ಧವಾದ ಇತಿವೃತ್ತದಿಂದಲೂ ಕೆಲವೇ ಸ್ತ್ರೀಪಾತ್ರಗಳಿಂದಲೂ, ಗರ್ಭ ವಿಮರ್ಷ ಸಂಧಿಗಳಿಲ್ಲದೆ ಅನೇಕ ಗಂಡಸರಿಂದ ನಿರ್ವಹಿಸಬೇಕಾದ ರೂಪಕವೇ ವ್ಯಾಯೋಗವಾಗಿದೆ. ಇದರಲ್ಲಿ ಒಂದೇ ಅಂಕವಿದ್ದು ಸ್ತ್ರೀಯನ್ನು ಉದ್ದೇಶಿಸಿ ಇಲ್ಲಿ ಯುದ್ಧವನ್ನಾರಂಭಿಸುವ ಪ್ರಸಂಗವಿರುವುದಿಲ್ಲ. ಕೌಶಿಕೀವೃತ್ತಿಗೆ ಇಲ್ಲಿ ಅವಕಾಶವಿಲ್ಲ ಮತ್ತು ಪ್ರಸಿದ್ಧ ನಾಯಕನಿರುವನು ಇವನು ರಾಜರ್ಷಿ ಅಥವಾ ಸ್ವರ್ಗಲೋಕದವನಾಗಿದ್ದು ಧೀರೋದಾತ್ತನಾಗಿರುತ್ತಾನೆ ಇಲ್ಲಿ ಹಾಸ್ಯ, ಶೃಂಗಾರ, ಶಾಂತರಸಗಳನ್ನು ಬಿಟ್ಟು ಉಳಿದ ರಸಗಳು ಪ್ರಧಾನವಾಗಿರುತ್ತವೆ. ಇವಿಷ್ಟು ವ್ಯಾಯೋಗ[೧೩೮]ವೆಂಬ ರೂಪಕದ ಲಕ್ಷಣವಾಗಿದೆ.

### ೯. ಸಮವಕಾರ

**ವೃತ್ತಂ ಸಮವಕಾರೇ ತು ಖ್ಯಾತಂ ದೇವಾನುರಾಶ್ರಯಮ್ ।**
**ಸಂಧಯೋ ನಿರ್ವಿಮರ್ಷಾಸ್ತು ತ್ರಯೋಽಕಾಸ್ತತ್ರ ಚಾದಿಯೇ ॥**

ಸಮವಕಾರ ರೂಪಕದಲ್ಲಿ ದೇವಾಸುರರಿಗೆ ಸಂಬಂಧಿಸಿದ ಪ್ರಸಿದ್ಧ ವೃತ್ತಾಂತವಿರುತ್ತದೆ. ವಿಮರ್ಷ ಸಂಧಿಯನ್ನುಳಿದು, ಇತರ ನಾಲ್ಕುಸಂಧಿಗಳಿರುತ್ತವೆ ಮೂರು ಅಂಕಗಳಿಂದ ಕೂಡಿದ್ದು ಮುಖಪ್ರತಿಮುಖ ಸಂಧಿಗಳಿರುತ್ತವೆ ಎರಡು ಮೂರನೆ ಅಂಕಗಳಲ್ಲಿ ಒಂದೊಂದು ಸಂಧಿ ಇರುತ್ತದೆ. ದ್ವಿತಿಯಾಂಕದಲ್ಲಿ ಗರ್ಭಸಂಧಿ, ತೃತಿಯಾಂಕದಲ್ಲಿ ಉಪಸಂಹಾರ ಸಂಧಿಯು ಸೇರಿರುತ್ತದೆ. ಧಿರೋದಾತ್ತರೆನಿಸಿ ಪ್ರಸಿದ್ಧರಾದ ಹನ್ನೆರಡು ಜನ ನಾಯಕರಿರುತ್ತಾರೆ ಇವರು ದೇವ, ಮಾನವ ಗುಣವುಳ್ಳವರಾಗಿರುತ್ತಾರೆ ಇದರಲ್ಲಿ ವೀರರಸವು ಪ್ರಧಾನವಾಗಿರುತ್ತವೆ ಕೌಶಿಕೀವೃತ್ತಿಯು ಮಿತವಾಗಿದ್ದು ಇತರ ವೃತ್ತಿಗಳು ಹೆಚ್ಚಾಗಿರುತ್ತವೆ. ಆರು ಅಕ್ಷರದ ಗಾಯತ್ರಿ, ಏಳು ಅಕ್ಷರಗಳ ಉಷ್ಣಿಕ್ ಮೊದಲಾದ

ಛಂದಸ್ಸುಗಳನ್ನು ಕವಿಯು ಪ್ರಯೋಗಿಸಿರುತ್ತಾನೆ. ಇನ್ನೂ ಅಂಕಗಳಿಗೆ ಸಂಬಂಧಿಸಿದಂತೆ ಮೊದಲನೆಯ ಅಂಕವು ಇಪ್ಪತ್ತನಾಲ್ಕು ಗಳಿಗೆಯಲ್ಲಿ, ಎರಡನೆಅಂಕವು ಆರುಗಳಿಗೆಯಲ್ಲಿ ಮೂರನೆಅಂಕವು ನಾಲ್ಕುಗಳಿಗೆಯಲ್ಲಿ ಮುಗಿಯುವಂತಿರಬೇಕು. ಇನ್ನು ಶೃಂಗಾರವು ಧರ್ಮಶೃಂಗಾರ, ಅರ್ಥಶೃಂಗಾರ, ಕಾಮಶೃಂಗಾರವೆಂದು ಧರ್ಮ, ಅರ್ಥ, ಕಾಮಗಳಿಗೆ ಸಂಬಂಧಿಸಿದಂತೆ ಮೂರು ಬಗೆಯಾಗಿವೆ. ಶಾಸ್ತ್ರಕ್ಕೆ ವಿರೋಧವಿಲ್ಲದೇ ಗಳಿಸುವುದು ಧರ್ಮಶೃಂಗಾರ, ಹಾಸ್ಯಕ್ಕಾಗಿ ಅನುಭವಿಸುವ ಶೃಂಗಾರವು ಕಾಮಶೃಂಗಾರ, ಅಥ–ರ್ಕ್ಕಾಗಿ ಸಂಬಂಧಿಸಿದ್ದು ಅರ್ಥಶೃಂಗಾರ [ವೇಶ್ಯಾಸ್ತ್ರೀಯು ಅನುಭವಿಸುವಂತದ್ದು] ಕಾಮಶೃಂಗಾರ ವನ್ನು ಪ್ರಥಮಾಂಕದಲ್ಲಿ ಮಾತ್ರ ಬರುವಂತಿರಬೇಕು. ಹೀಗೆ ಅನೇಕ ವಿಷಯಗಳನ್ನು ಕವಿಯು ಒಂದೆಡೆಗೆ ಸೇರಿಸುವುದರಿಂದ ಈ ಬಗೆಯ ರೂಪಕಕ್ಕೆ ಸಮವಕಾರ[೨೯]ವೆಂಬ ಹೆಸರು ಅನ್ವರ್ಥವಾಗಿದೆ.

**೬ ಡಿಮ**

**ಮಾಯೇಂದ್ರಜಾಲ ಸಂಗ್ರಾಮಕ್ರೋಧೊದ್ಭ್ರಾಂತಾದಿಜೇಷ್ಟಿತೈಃ ।**
**ಉಪರಾಗೈಶ್ಚ ಭೂಮಿಷ್ಠೋಡಿಮಃ ಖ್ಯಾತೇತಿವೃತ್ತಕಃ [೩೦] ॥**

ಡಿಮವೆಂಬ ರೂಪಕವು ಮಾಯೆ, ಇಂದ್ರಜಾಲ, ಯುದ್ಧ ಸಿಟ್ಟು, ಬ್ರಾಂತಿಗೊಳ್ಳುವುದು, ಹೆಚ್ಚು ರೋಗದಿಂದ ನರಳುವುದು ಮತ್ತು ಚಂದ್ರಗ್ರಹಣವನ್ನು ಸೂಚಿಸುತ್ತ ಪ್ರಸಿದ್ಧವಾದ ಇತಿವೃತ್ತದಿಂದ ಶೋಭಿಸುವ ರೂಪಕವನ್ನ 'ಡಿಮ' ಎಂದು ಕರೆಯಲಾಗಿದೆ ಇದರಲ್ಲಿ ದೇವತೆಗಳು, ಗಂಧರ್ವರು, ಯಕ್ಷರಾಕ್ಷಸರು, ಮಹಾಸರ್ಪಭೂತ, ಪೀಡೆ, ಪಿಶಾಚಿ, ಮೊದಲಾದವರು ನಾಯಕರಾಗಿದ್ದಾರೆ. ವೀರರಸವು ಪ್ರಧಾನವಾಗಿದ್ದು ಉಳಿದರಸವು ಪೂಷಕವಾಗಿರುತ್ತವೆ ಕೌಶಿಕೀವೃತ್ತಿ ಬಿಟ್ಟು ಉಳಿದ ವೃತ್ತಿಗಳು, ವಿಮರ್ಶಬಿಟ್ಟು ಉಳಿದ ಸಂಧಿಗಳು ಇದ್ದು ನಾಲ್ಕು ಅಂಕಗಳಿದ್ದರೂ ವಿಷ್ಕಂಭಕ ಪ್ರವೇಶಕಗಳಿರುವುದಿಲ್ಲ ಇವಿಷ್ಟು ಡಿಮ[೩೧]ವೆಂಬ ರೂಪಕದ ಸ್ವರೂಪವಾಗಿದೆ.

**೭. ಈಹಾಮೃಗ**

**ಈ ಹಾಮೃಗೋ ಮಿಶ್ರವೃತ್ತಶ್ಚತುರಂಕಃ ಪ್ರಕೀರ್ತಿತಃ ।**
**ಮುಖಪ್ರತಿಮುಖೇ ಸಂಧೀ ತತ್ರ ನಿರ್ವಹಣಂ ತಥಾ [೩೨] ॥**

ಈಹಾಮೃಗದಲ್ಲಿ ಇತಿವೃತ್ತವು ಕೊಂಚ ಪ್ರಸಿದ್ಧವು ಕೊಂಚ ಕಲ್ಪಕವು ಆಗಿರುತ್ತದೆ ನಾಲ್ಕು ಅಂಕಗಳಿಂದ ಕೂಡಿದ್ದು ಮುಖಪ್ರತಿಮುಖ, ನಿರ್ವಹಣಸಂಧಿ ಇರುತ್ತವೆ. ಮರ್ತ್ಯರು ದಿವ್ಯರೂ ಆದ ನಾಯಕರಿರುವರು ಪ್ರತಿನಾಯಕನು ಗೋಪ್ಯವಾಗಿ ಆಯುಕ್ತವಾದ ಕಾರ್ಯವನ್ನು ಮಾಡುವಂತನಾಗಿರುತ್ತಾನೆ. ತನ್ನನ್ನು ಬಯಸದಿರುವ ಸ್ತ್ರೀಯನ್ನು ಅಪಹರಿಸುವ ಇಚ್ಛೆಯುಳ್ಳ ಪ್ರತಿನಾಯಕನ ಶೃಂಗರಾಭಾಸವನ್ನು ಕೊಂಚ,

ಕೊಂಚವಾಗಿ ಕವಿಯು ತೋರಿಸಬೇಕು. ಪತಾಕಾ ನಾಯಕರು ಹತ್ತು ಜನರಿದ್ದು ದಿವ್ಯರೂ, ಮರ್ತ್ಯರು ಆಗಿರುತ್ತಾರೆ. ಲೋಕಪ್ರಸಿದ್ಧ ಕವಿಕಲ್ಪನೆ ಇವೆರಡರಿಂದಲೂ ಕೂಡಿರುತ್ತದೆ ಜಿಂಕೆಯಂತೆ ಸುಲಭವಾಗಿ ಸಿಕ್ಕದೇ ಇರುವ ನಾಯಿಕೆಯನ್ನು ನಾಯಕನು ಮೃಗದಂತೆ ಹುಡುಕುವುದರಿಂದ ಈಹಾಮೃಗ[೧೪೩]ವೆಂಬ ರೂಪಕವಾಗಿದೆ.

### ೮. ಅಂಕ

> **ಉತ್ಸೃಷ್ಟಿಕಾಂಕ ಏಕಾಂಕೋ ನೇತಾರಃ ಪ್ರಾಕೃತಾ ನರಾಃ ।**
> **ರಸೋऽತ್ರ ಕರುಣಃ ಸ್ಥಾಯೀ ಬಹುಸ್ತ್ರೀ ಪರಿದೇವಿತಮ್** [೧೪೪] ॥

ಅಂಕವೆಂಬ ರೂಪಕದಲ್ಲಿ ಒಂದೇ ಅಂಕವಿರುವುದರಿಂದ ಇದಕ್ಕೆ 'ಉತ್ಸೃಷ್ಟಿಕಾಂಕ' ವೆಂಬ ಹೆಸರಿದೆ. ಸಾಮಾನ್ಯ ಜನರು ಇಲ್ಲಿ ನಾಯಕರಾಗಿದ್ದಾರೆ ಕರುಣರಸವು ಪ್ರಧಾನವಾಗಿದ್ದು ಕಥಾವಸ್ತುವು ಕಲ್ಪಿತವಾಗಿರದೇ ಪ್ರಸಿದ್ಧವಾಗಿರುತ್ತದೆ ಆದರೆ ಕವಿಯು ಇದನ್ನು ಸ್ವಬುದ್ಧಿಯಿಂದ ವಿಸ್ತಾರಗೊಳಿಸುವನು. ಭಾರತೀವೃತ್ತಿಯು ವಿಶೇಷವಾಗಿದ್ದು ಕೌಶಿಕೀವೃತ್ತಿಯು ಮಿತವಾಗಿ ಬರುತ್ತವೆ. ಮುಖಪ್ರತಿಮುಖ ಸಂಧಿಕೂಡಿರುತ್ತದೆ. ಕವಿಯು ದುಃಖವನ್ನು ಸೂಚಿಸುವ ಮಾತುಗಳನ್ನು ಪ್ರಯೋಗಿಸುತ್ತಾನೆ. ನಾಯಕ ಪ್ರತಿನಾಯಕರ ಜಯ ಪರಾಜಯಗಳನ್ನು ಇಲ್ಲಿ ತಿಳಿಸಲಾಗಿದೆ. ಯುದ್ಧವನ್ನು ಬಾಯಿಮಾತಿನಿಂದಲೇ ತಿಳಿಸಬೇಕು. ಇವಿಷ್ಟೂ ಅಂಕ[೧೪೫]ವೆಂಬ ರೂಪಕದ ಸ್ವರೂಪವಾಗಿದೆ.

### ೯. ವೀಥಿ

> **ವೀಥ್ಯಾಮೇಕೋ ಭವೇದಂತಃ ಕಶ್ಚಿದೇಕೋ?ತ್ರ ಕಲ್ಪ್ಯತೇ ।**
> **ಆಕಾಶಭಾಷಿತೈರುಕ್ತೈಃ ಚಿತ್ರಾಂ ಪ್ರತ್ಯುಕ್ತಿಮಾಶ್ರೀತಃ** [೧೪೬] ॥

ಈ ರೂಪಕದಲ್ಲಿ ಒಂದೇ ಅಂಕವಿದು ಒಬ್ಬನೇ ನಾಯಕನಿರುವನು. ಇವನು ಆಕಾಶಭಾಷಿತಗಳನ್ನು ಕೇಳಿ ಚಿತ್ರವಿಚಿತ್ರವಾಗಿ ಮಾತನಾಡುತ್ತಾ ಅದಕ್ಕೆ ಉತ್ತರಗಳನ್ನು ಕೊಡುವನು ಶೃಂಗಾರರಸವು ಪ್ರಧಾನವಾಗಿದ್ದು ಉಳಿದ ರಸಗಳು ಪೋಷಕವಾಗಿರುವುವು. ನಿರ್ವಹಣ ಮುಖಸಂಧಿಗಳು, ಬೀಜ ಮೊದಲಾದ ಐದು ಅರ್ಥ ಪ್ರಕೃತಿಗಳೂ, ಕೌಶಿಕೀವೃತ್ತಿಯು ಹೆಚ್ಚಾಗಿ ಬರುತ್ತವೆ. ಇವು ಉದ್ಧಾತ್ಯಕ, ಅವಲಗಿತ ಪ್ರಪಂಚ, ತ್ರಿಗತ, ಛಲ, ವಾಕ್ಕೇಲಿ, ಅಧಿಬಲ, ಗಂಡ, ಅವಸ್ಯಂದಿತ, ನಾಲಿಕೆ, ಅಸತ್ಪ್ರಲಾಸ, ವ್ಯಾಹಾರ, ಮೃದವ ಎಂಬ ಹದಿಮೂರು ವೀಥ್ಯಂಗಗಳನ್ನು ಹೊಂದಿವೆ. ಒಂದಕ್ಕೊಂದು ಸೇರಿ ಸುಳ್ಳೆನಿಸುವ ಹಾಸ್ಯವಾದ ಮಾತನ್ನು 'ಪ್ರಪಂಚ'ವೆಂಬ ವೀಥ್ಯಂಗವಾಗಿದೆ.

> **ತತ್ರೋದ್ಘಾತ್ಯಕಾವಲಗಿತೇ ಪ್ರಸ್ತಾವನಾಪ್ರಸ್ತಾವೇ ನೋದಾಹರಣಂ ಲಕ್ಷಿತೇ।**
> **ಮಿಥೋ ವಾಕ್ಯಮಸ್ ದ್ಭೂತಂ ಪ್ರಪಂಚೋ ಹಾಸ್ಯಕೃನ್ಮತಃ** [೧೪೭] ॥

ಚಂದ್ರಶಿಲೆಯ ಮೇಲ್ಭಾಗದಲ್ಲಿ ವಿದೂಷಕನು ಚೇಟಿಯೊಡನೆ ಆಡುವ ಮಾತೆಲ್ಲವೂ ಪರಸ್ಪರವಾಗಿ ಸುಳ್ಳಾದರೂ ಹಾಸ್ಯದಿಂದ ತುಂಬಿಕೊಂಡಿರುವ ಮಾತು 'ಪ್ರಪಂಚ' ಎನಿಸಿದೆ. ಹೇಳುವನು, ಕೇಳುವವನು, ಅಭಿನಯಿಸುವನು ಈ ಮೂವರಿಗೊ ಸಂಬಂಧಿಸಿದ್ದರಿಂದ ಇದು 'ತ್ರಿಗತ' ಎನಿಸಿದೆ. ಉದಾಹರಣೆಗೆ

**ಸರ್ವಕ್ಷಿತಿಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ ।**
**ರಾಮಾರಮ್ಯೇವ ವನಾಂತೇ?ಸ್ಮಿನ್ಮಯಾ ವಿರಹಿತ ತ್ವಯಾ** [೧೪೮] ॥

ಇಂತಹ ಕಲ್ಪನೆಗಳು ಶಬ್ದಸಾಮ್ಯದಿಂದ ಹೊರಬೀಳುತ್ತದೆ. "ಪರ್ವತಗಳೆಲ್ಲಕ್ಕೂ ಶ್ರೇಷ್ಠನೇ, ಈ ಮನೋಹರವಾದ ಪ್ರದೇಶದಲ್ಲಿ ನನ್ನಿಂದ ಬೇರ್ಪಟ್ಟಿರುವ ಒಬ್ಬ ಸ್ತ್ರೀಯಳನ್ನು ನೀನು ಕಂಡೆಯಾ" ಎಂದು ಪ್ರಶ್ನೆ ಮಾಡುತ್ತಾನೆ. ಅದಕ್ಕೆ ಉತ್ತರವು "ರಾಜರೆಲ್ಲರಿಗೂ ಶ್ರೇಷ್ಠವೆನಿಸಿದವನೇ ಈ ಕಾಡಿನಲ್ಲಿ ನಿನ್ನಿಂದ ಬೇರ್ಪಟ್ಟಿರುವ ಸರ್ವಾಂಗ ಸುಂದರಿಯೊಬ್ಬಳನ್ನು ನಾನು ಕಂಡೆನು" ಎಂದು ಹೊರ ಬೀಳುವುದು. ತೆರೆಯ ಹಿಂಭಾಗದಲ್ಲಿ ಅಲಿಯೇ ಇದಕ್ಕೆ ಪ್ರತಿಶಬ್ದವು ಹೊರಬೀಳುವುದು ಆಗ ರಾಜನು ಆಹಾ! ನಿನಗೆ ಹೇಗೆ ಆಕೆ ಕಾಣಿಸಿಕೊಂಡಳು ಎಂದು ಹೇಳುವನು. ಇಲ್ಲಿ ಪ್ರಶ್ನೆ ವಾಕ್ಯವೇ ಕಾಕುವೆಂಬ ಸ್ವರವಿಕಾರದಿಂದ ಉತ್ತರವನ್ನು ದೊರಕಿಸುವುದು. ಆದ್ದರಿಂದಲೇ ಇದು ತ್ರಿಗತ ಎನಿಸಿದೆ.

ಪ್ರಿಯವಾದಂತೆ ತೋರುತ್ತ ಆಪ್ರಿಯವಾದ ವಾಕ್ಯಗಳಿಂದ ತನ್ನ ಅಭಿಪ್ರಾಯದ ಬಗ್ಗೆ ಒಬ್ಬನಿಗೆ ಆಸೆಯನ್ನು ಹುಟ್ಟಿಸಿ ವಂಚನೆ ಮಾಡುವುದನ್ನು 'ಛಲ'ವೆಂಬ ವೀಥ್ಯಂಗವೆನಿಸಿದೆ. ಒಬ್ಬನು ಕೇಳುವ ಅನೇಕ ಪ್ರಶ್ನೆಗಳಿಗೆ ಒಂದೇ ಉತ್ತರವು ಇಲ್ಲಿ ದೊರಕುವುದೂ ಅದನ್ನು 'ವಾಕ್ಕೇಲಿ' ಎಂದು ಕರೆಯುತ್ತಾರೆ. ಸ್ಪರ್ಧೆಯಿಂದ ಪ್ರಕೃತ ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಅರ್ಥವನ್ನು ತಿಳಿಸುತ್ತ ಆತುರದಿಂದ ಆಡುವ ಮಾತು 'ಗಂಡ'ವೆಂಬ ವೀಥ್ಯಂಗವಾಗಿದೆ. ಸ್ವರಸವಾಗಿ ತನ್ನ ಅಭಿಪ್ರಾಯವನ್ನು ತಿಳಿಸುವುದಕ್ಕಾಗಿ ಹೇಳುವ ಮಾತಿನಿಂದ ಬೇರೆಯ ಅರ್ಥವನ್ನು ಕಲ್ಪಿಸುವುದು 'ಅವಸ್ಯಂಧಿತ'ವೆಂಬ ಸಧ್ಯಂಗವಾಗಿದೆ. ಹಾಸ್ಯದಿಂದ ಕೂಡಿದ ಪ್ರಹೇಳಿಕೆಯ ಮಾತು ನಾಳಿಕೆ ಎನಿಸಿದೆ. ಇದು ಹೃದಯದಲ್ಲೂ ಬುದ್ಧಿಯಾಗಿಯೂ ಇರುವುದು ಇಂತಹ ಮಾತನ್ನು ನಾಳಿಕೆ ಎಂಬ ಮಿಥ್ಯಂಗ ಎನಿಸಿದೆ ಹಿಂದಿನ, ಮುಂದಿನ ಸಂಬಂಧವಿಲ್ಲದಂತೆ ಮಾತನಾಡುವುದು ಉತ್ತರವನ್ನು ಕೊಡುವುದು, ಅದನ್ನು ಕೇಳಿದವರು ಸಹ ಅದನ್ನು ಅನುಸರಿಸದೇ ಇರುವುದು. ಹೀಗೆ ಹೇಳುವ ಮೂರ್ಖನಿಗೆ ಮುಂದೆ ಹಿತವಾಗಿ ಕಾಣುವ ಮಾತು 'ಅಸತ್ಪ್ರಲಾಪ[೧೪೯]'ವೆನಿಸಿದೆ. ಬೇರೊಬ್ಬನನ್ನು ನಿಮಿತ್ತ ವಾಗಿಟ್ಟುಕೊಂಡು ಹಾಸ್ಯದಿಂದ, ಆಸೆಯಿಂದ ಮಾತನಾಡುವುದೇ 'ವ್ಯಾಹಾರ[೧೫೦]' ಎನಿಸಿದೆ. ದೋಷಗಳೇ ಗುಣಗಳಾಗಿಯೂ, ಗುಣಗಳೇ ದೋಷವಾಗಿಯೂ ಪರಿಣಮಿಸುವುದು 'ಮೃದವ'ವೆಂಬ

ವೀಥ್ಯಂಗವಾಗಿದೆ. ಇಲ್ಲಿ ತಿಳಿಸಿದ ಅಂಗಗಳನ್ನು ನಾಟಕ ಮೊದಲಾದ ಇತರ ಒಂಬತ್ತು ರೂಪಕಗಳಲ್ಲಿ ಸಾಮಾನ್ಯವಾಗಿ ಬಂದರೂ ವೀಥಿ ಎಂಬ ರೂಪಕದಲ್ಲಿ ಇವು ಒಂದೇ ಬರಬೇಕೆಂಬ ನಿಯಮವಿದೆ. ಇವು ನಾಟಕದಲ್ಲಿ ಅಗತ್ಯವಿದ್ದರೆ ಮಾತ್ರ ಬರುತ್ತೇವೆಯಾದರೂ ವೀಥಿರೂಪಕದಲ್ಲಿ ಈ ಅಂಗಗಳು ಅನಿವಾರ್ಯವೆನಿಸಿದೆ.

## ೧೦. ಪ್ರಹಸನ

**ಭಾಣ ವತ್ಸಂಧಿಸಂಧ್ಯಂಗಲಾಸ್ಯಂಗಾಂ ಕೈರ್ವಿನಿರ್ಮಿತಮ್ ।**
**ಭವೇತ್ಪ್ರಹಸನಂ ವೃತ್ತಂ ನಿಂದ್ಯಾನಾಂ ಕವಿಕಲ್ಪನಮ್**[೧೫೧] **॥**

ಈ ರೂಪಕದಲ್ಲಿ ಬಾಣವೆಂಬ ರೂಪಕದಲ್ಲಿರುವಂತೆ ಇಲ್ಲಿಯೂ ಮುಖನಿರ್ವಹಣ ಸಂಧಿಗಳು, ಸಂಧ್ಯಂಗಗಳು ಲಾಸ್ಯಂಗಗಳು ಒಂದು ಅಂಕವು ಇದ್ದು ನಿಂದಾರ್ಹರಾದ ಜನರ ವೃತ್ತಾಂತವನ್ನು ಕವಿಯು ಇಲ್ಲಿ ಕಲ್ಪಿಸುತ್ತಾನೆ ಇದೇ 'ಪ್ರಹಸನ'ವೆಂಬ ರೂಪಕವಾಗಿದೆ. ಇಲ್ಲಿ ವಿಷ್ಕಂಭಕ ಪ್ರವೇಶಕಗಳು ಇರುವುದಿಲ್ಲ. ಆರಭಟೀವೃತ್ತಿ, ಮಿಥ್ಯಂಗಗಳು ಇಲ್ಲಿ ಬರುವುದಿಲ್ಲ ಹಾಸ್ಯರಸವೇ ಪ್ರಧಾನವಾಗಿದ್ದು, ಇಲ್ಲಿ ತಪಸ್ವಿಗಳು ವ್ರತಗಳನ್ನಾಚರಿಸುವರು, ಬ್ರಾಹ್ಮಣರು ಇವರಲ್ಲಿ ಯಾರದರು ಇಲ್ಲಿ ನಾಯಕನಾಗಿರಬಹುದು. ಶುದ್ಧ, ಸಂಕೀರ್ಣ, ವಿಕೃತ ಎಂದು ಮೂರು ಬಗೆಯಾಗಿದೆ. ಎಲ್ಲಿ ಧೃಷ್ಠನಾಯಕನಿದ್ದು ಪ್ರಹಸನವು ಹಾಸ್ಯದಿಂದ ಕೂಡಿರುವುದೋ ಅದು 'ಶುದ್ಧಪ್ರಹಸನ[೧೫೨]'ವಾಗಿದೆ. ದೃಷ್ಟನಲ್ಲದೆ ಬೇರೊಬ್ಬನು ನಾಯಕ ನಾಗಿರುವ ಪ್ರಹಸನವೇ 'ಸಂಕೀರ್ಣ' ರಾಜಪುರುಷರು ಇವರ ನಡೆನುಡಿಗಳಿಂದ ಕೂಡಿದ ಪ್ರಹಸನವೇ 'ವಿಕೃತ[೧೫೩]' ವೆನಿಸಿದೆ. ಇಲ್ಲಿಗೆ ರೂಪಕದ ಹತ್ತು ಬಗೆಗಳನ್ನು ಪರಮರ್ಶಿಸಿ ಮುಂದಿನ ಹದಿನೆಂಟು ಉಪರೂಪಕಗಳನ್ನು ಮತ್ತು ಅದರ ಲಕ್ಷಣಗಳನ್ನು ಪರಾಮರ್ಶಿಸಲಾಗಿದೆ.
ಉಪರೂಪಕಗಳ ಲಕ್ಷಣ

ವಿಶ್ವನಾಥನು ಹದಿನೆಂಟು ಉಪರೂಪಕಗಳನ್ನು ತಿಳಿಸಿದ್ದಾನೆ. ಈ ಉಪರೂಪಕಗಳಲ್ಲಿ ಒಂದೊಂದರಲ್ಲು ಬೇರೆ ಯಾವ ವಿಶೇಷವು ಇಲ್ಲದೆ. ಎಲ್ಲದಕ್ಕೂ ನಾಟಕದ ಲಕ್ಷಣವೇ ಹೊಂದಿಕೆಯಾಗುವುದರಿಂದ ಈ ಉಪರೂಪಕದ ಲಕ್ಷಣವೇನೆಂಬುದನ್ನು ಇಲ್ಲಿ ವಿಮರ್ಶಿಸಲಾಗಿದೆ. .

## ೧. ನಾಟಿಕೆ

ಈ ರೂಪಕವು ನಾಲ್ಕು ಅಂಕಗಳಿಂದ ಕೂಡಿದ್ದು ಇದರಲ್ಲಿ ಕವಿಕಲ್ಪಿತವಾದ ಇತಿವೃತ್ತವಿರುತ್ತದೆ. ಧೀರಲಲಿತನೆಂಬ ಪ್ರಸಿದ್ಧ ನಾಯಕನಿರುತ್ತಾನೆ. ಅವನು ಒಂದು ದೇಶದ ರಾಜನಾಗಿರಬೇಕು ಇಲ್ಲಿ ರಾಜವಂಶದ ಕನ್ಯೆಯೇ ನಾಯಿಕೆಯಾಗಿರಬೇಕು ಆಕೆಯು ನಾಯಕನ ಮೇಲೆ ಹೆಚ್ಚು ಅನುರಾಗವುಳ್ಳವಳು ಆಗಿದ್ದು ಅಂತಃಪುರದ

ಸಂಬಂಧವನ್ನು ಹೊಂದಿರುತ್ತಾಳೆ. ಪಟ್ಟಮಹಿಷಿಯ ಭಯದ ಶಂಕೆಯಿರಬೇಕು. ಕಾಶಿಕೀವೃತ್ತಿಯು ಇದ್ದು, ಇವಿಷ್ಟು ಉಪರೂಪಕದಲ್ಲಿ ಬರುವ ನಾಟಿಕೆ[೧೫೪]ಯ ಲಕ್ಷಣವಾಗಿದೆ.

## ೨. ತ್ರೋಟಕ

ತ್ರೋಟಕದಲ್ಲಿ ಐದು, ಏಳು, ಎಂಟು, ಅಥವಾ ಒಂಬತ್ತು ಅಂಕಗಳಿರುತ್ತವೆ. ದೇವಮಾನರಿಬ್ಬರ ಚರಿತ್ರೆಗಳಿಂದ ಕೂಡಿದ್ದು ಪ್ರತಿಯೊಂದು ಅಂಕದಲ್ಲೂ ವಿದೂಷಕ ನಿರುವನು ಉತ್ಕರ್ಷದಿಂದ ಬೇರೆ ರೂಪಕಗಳನ್ನು ಕೀಳು ಮಾಡುವುದರಿಂದ 'ತ್ರೋಟಕ[೧೫೫]' ಎಂದು ಕರೆಯಲಾಗಿದೆ.

## ೩. ಗೋಷ್ಠಿ

ಈ ಉಪರೂಪಕವು ಒಂದೇ ಅಂಕವನ್ನು ಹೊಂದಿರುತ್ತದೆ. ಇದರಲ್ಲಿ ಒಂಬತ್ತು ಅಥವಾ ಹತ್ತು ಮಂದಿ ಗಂಡಸರಿದ್ದು ಸಾಮಾನ್ಯ ಶಿಕ್ಷಣವನ್ನು ಪಡೆದಿರುವುದರಿಂದ ಉದಾತ್ತವಾದ ನಡೆನುಡಿಗಳಿರುವುದಿಲ್ಲ ಮತ್ತು ಐದು ಆರು ಜನ ಹೆಂಗಸರಿದ್ದು ಅವರು ಕಾಮಶೃಂಗಾರದಲ್ಲಿ ತೊಡಗಿರುತ್ತಾರೆ ಗರ್ಭ, ವಿಮರ್ಷೆ ಸಂಧಿಗಳಿಲ್ಲದೆ ಕೌಶಿಕೀವೃತ್ತಿಯಿಂದ ಕೂಡಿರುತ್ತದೆ. ಇವಿಷ್ಟುಗೋಷ್ಠಿ[೧೫೬]ವೆಂಬ ಉಪರೂಪಕದ ಲಕ್ಷಣವಾಗಿದೆ.

**ಸಟ್ಟಕ** : ಸಟ್ಟಕ[೧೫೭]ದಲ್ಲಿ ಪ್ರಯೋಗಿಸುವ ವಾಕ್ಯವು ಪೂರ್ತಿಯಾಗಿ ಪ್ರಾಕೃತ ಭಾಷೆಯದಾಗಿರುತ್ತವೆ. ಪ್ರವೇಶಕ ವಿಷ್ಕಂಭಕಗಳಿಲ್ಲದೆ ಅದ್ಭುತರಸವೇ ಪ್ರಧಾನವಾಗಿರುತ್ತದೆ ಇದರಲ್ಲಿ ಅಂಕಗಳಿಗೆ ಯವನಿಕೆ ಶಬ್ದಗಳ ಪ್ರಯೋಗವಿರುತ್ತದೆ. ಇದಿಷ್ಟನ್ನು ಬಿಟ್ಟು ಉಳಿದ ಅಂಶಗಳೆಲ್ಲವೂ ನಾಟಿಕೆಯಲ್ಲಿರುವಂತೆಯೇ ಇರುತ್ತದೆ.

## ೪. ನಾಟ್ಯರಾಸಕ

ಇಲ್ಲಿ ಅನೇಕ ಬಗೆಯ ತಾಳಲಯಗಳು ಸೇರಿದ್ದು ಒಂದೇ ಅಂಕವಿರುತ್ತದೆ. ಧೀರೋದಾತ್ತ ನಾಯಕನೂ, ಪೀಠಮರ್ಧನೆಂಬ ಉಪನಾಯಕನು ಇರುವವರು ಶೃಂಗಾರದಿಂದ ಕೂಡಿದ ಹಾಸ್ಯವು ಇಲ್ಲಿ ಪ್ರಧಾನವಾಗಿರುತ್ತದೆ. ಹತ್ತು ಬಗೆಯ ಲಾಸ್ಯಾಂಗಗಳು ಮುಖ, ನಿರ್ವಹಣಸಂಧಿಗಳಿದ್ದು, ವಾಸಕಸಜ್ಜಿಕೆ ಎನಿಸಿದ ಹೆಂಗಸು ನಾಟ್ಯರಾಸಕದಲ್ಲಿ ನಾಯಿಕೆಯಾಗಿರುವಳು.

## ೫. ಪ್ರಸ್ಥಾನ

ಇದರಲ್ಲಿ ಎರಡು ಅಂಕಗಳಿದ್ದು ದಾಸನು ನಾಯಕನಾದರೆ ನಿಕೃಷ್ಟಜಾತಿಯಲ್ಲಿ ಹುಟ್ಟಿದವನು ಉಪನಾಯಕನಾಗಿರುವನು ದಾಸಿಯೇ ಇಲಿ ನಾಯಿಕೆಯೆನಿಸಿದ್ದಾಳೆ.

ಇಲ್ಲಿ ಕೌಶಿಕೀಭಾರತೀವೃತ್ತಿಗಳನ್ನು ಪ್ರಯೋಗಿಸಲಾಗಿದ್ದು ಕವಿಯು ಕತೆಯನ್ನು ಮಧ್ಯಪಾನ ಸಂಬಂಧದಿಂದ ಕೊನೆಗಾಣಿಸುವನು. ಪ್ರಸ್ಥಾನದಲ್ಲಿ ರಸವು ವಿಶೇಷವಾಗಿ ಪ್ರಕಾಶಿಸುವುದ ರಿಂದ ಇದು ಸಹೃದಯರ ಮನಸ್ಸಿಗೆ ಬೇಗನೆ ಪ್ರವೇಶಿಸುವುದರಿಂದ ಈ ಉಪರೂಪಕವನ್ನು 'ಪ್ರಸ್ಥಾನ[೧೫೮]' ವೆಂದು ಕರೆಯಲಾಗಿದೆ.

## ೭, ಉಲ್ಲಾಪ್ಯ

ಉಲ್ಲಾಪ್ಯದಲ್ಲಿ ಧೀರೋದಾತ್ತನಾಯಕನಿದ್ದು ನಾಲ್ವರು ನಾಯಿಕೆರಿರುತ್ತಾರೆ. ಸ್ವರ್ಗೀಯ ಉಪಾಖ್ಯಾನವೇ ಇಲ್ಲಿಯ ಕಥೆಯ ವಸ್ತುವಾಗಿರುತ್ತದೆ. ಒಂದೇ ಅಂಕವಿದ್ದು, ಆಶಂಸೆ ಮೊದಲಾದ ಶಿಲ್ಪಕಾಂಗಗಳಿಂದ ಕೂಡಿದ್ದು ಹಾಸ್ಯ, ಶೃಂಗಾರ, ಕರುಣ ರಸಗಳಿಂದ ಶೋಭಿಸುತ್ತದೆ. ಇಲ್ಲಿ ತೆರೆಯ ಮರೆಯ ಗೀತೆಗಳು ಹೆಚ್ಚಾಗಿದ್ದು ಅನೇಕ ಬಗೆಯ ಯುದ್ಧಗಳನ್ನು ಅಭಿನಯಿಸಬೇಕಾಗುತ್ತದೆ ಇವು ಉಲ್ಲಪ್ಯ[೧೫೯]ದ ಲಕ್ಷಣವಾಗಿದೆ.

## ೮. ಕಾವ್ಯ

ಇದನ್ನು ಕಾವ್ಯವೆಂದು ಕರೆದಿದ್ದರೂ ಶ್ರವ್ಯಕಾವ್ಯವಾಗಿರದೇ ದೃಶ್ಯ ರೂಪಕದ ಒಂದು ಬಗೆಯಾಗಿದೆ. ಕಾವ್ಯವೆಂದರೆ ಆರಭಟೀವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಳಿಂದ ಕೂಡಿದ ಒಂದೇ ಅಂಕವಿದ್ದು ಹಾಸ್ಯದಿಂದ ತುಂಬಿರುವ ಉಪರೂಪಕವೇ 'ಕಾವ್ಯ'ವೆನಿಸಿದೆ. ಖಂಡಮಾತ್ರೆ, ದ್ವಿಪದಿಕೆ, ಭಗ್ನತಾಳ ಎಂಬ ಗೀತಗಳಿಂದ ಕಾವ್ಯವು ಅಲಂಕೃತ ವಾಗಿರುವುದು. ಇದರಲ್ಲಿ ವರ್ಣಮಾತ್ರೆ, ಭಡ್ಡಲಿಕೆ ಎಂಬ ಛಂದಸ್ಸಿನಿಂದ ಪದ್ಯಗಳು ರಚನೆಯಾಗಿರುತ್ತವೆ. ಪ್ರತಿಮುಖನಿರ್ವಹಣಸಂಧಿಗಳು ಮಾತ್ರ ಕಾವ್ಯರೂಪಕ[೧೬೦]ದಲ್ಲಿರುತ್ತದೆ. ನಾಯಕ ನಾಯಿಕೆಯರು ಉದಾತ್ತವರ್ತನೆಯುಳ್ಳವರಾಗಿದ್ದು, ಇವರ ಪ್ರಣಯಕತೆಯೇ ಇಲ್ಲಿಯ ಕಥಾವಸ್ತುವಾಗಿರುತ್ತದೆ.

## ೯. ಪ್ರೇಂಖಣ

ಈ ಉಪರೂಪಕವು ರಸಾನುಭವದ ಆನಂದದಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳುವುದರಿಂದ ಇದಕ್ಕೆ 'ಪ್ರೇಂಖಣ'ವೆಂಬ ಹೆಸರಿದೆ. ಪ್ರೇಂಖಣಕ್ಕೆ ಹೀನಸ್ವಭಾವದ ನಾಯಕನಿರುವನು ಇಲ್ಲಿ ಒಂದೇ ಅಂಕವಿದ್ದು ಸಿಟ್ಟಿನ ಮಾತಿನಿಂದ ಬಾಹುಯುದ್ಧದಿಂದ ಕಥೆಯು ಮುಂದುವರೆಯುತ್ತದೆ. ಕೌಶೀಕೀ ಮೊದಲಾದ ನಾಲ್ಕು ವೃತ್ತಿಗಳು ಇಲ್ಲಿರುತ್ತವೆ ಗರ್ಭ, ವಿಮರ್ಷ ಸಂಧಿಗಳು ಬಿಟ್ಟು ಉಳಿದ ಸಂಧಿಗಳಿರುತ್ತವೆ. ಪ್ರೇಂಖಣ[೧೬೧]ದಲ್ಲಿ ಸೂತ್ರದಾರನಿಲ್ಲದ್ದರಿಂದ ನಾಂದೀಪದ್ಯ, ಪ್ರರೋಚನೆಯನ್ನು ತೆರೆಯ ಹಿಂದೆ ಹೇಳಲಾಗುತ್ತದೆ. ಇವಿಷ್ಟು ಪ್ರೇಂಖಣವೆಂಬ ಉಪರೂಪಕದ ಲಕ್ಷಣವಾಗಿದೆ.

## ೧೦. ರಾಸಕ

ರಾಸಕದಲ್ಲಿ ಪ್ರಸಿದ್ಧನಾದ ನಾಯಿಕೆಗೆ ಮೂರ್ಖನಾದ ನಾಯಕನಿರುವನು. ಕಥೆಯು

ಮುಂದುವರೆದಂತೆ ನಾಯಿಕೆಯು ಉದಾತ್ತವರ್ತನೆಯನ್ನು ತೋರಿಸಿರುವುದರಿಂದ ತನಗೆ ಸೂಕ್ತವಾಗಿ ಭೋಧಿಸಿ ಉದ್ಧರಿಸುವುದರಿಂದ ಇಂತಹ ರೂಪಕವನ್ನು 'ರಾಸಕ' ಎಂದು ಕರೆಯಲಾಗಿದೆ. ಇದರಲ್ಲಿ ಐದು ಪಾತ್ರಗಳಿರುತ್ತವೆ. ಸಂಸ್ಕೃತ ಪ್ರಾಕೃತ ಭಾಷೆಗಳು ಇಲ್ಲಿ ವಿಶೇಷವಾಗಿರುತ್ತವೆ. ಮುಖ, ನಿರ್ವಹಣಸಂಧಿಗಳು, ಭಾರತೀ ಕೌಶಿಕೀವೃತ್ತಿಗಳಿರುತ್ತವೆ. ಇಲ್ಲಿ ಸೂತ್ರಧಾರನಿಲ್ಲದ್ದರಿಂದ ಒಂದೇ ಅಂಕದಲ್ಲಿ ಮಿಥ್ಯಂಗಗಳೊಡನೆ, ನೃತ್ಯಗೀತಾದಿ ಕಲೆಗಳೊಡನೆ ಕೂಡಿಕೊಂಡಿರುವುದು ಮತ್ತು ನಾಂದಿಪದ್ಯವು ಎರಡು ಅರ್ಥಗಳನ್ನು ಕೂಡುವಂತಹದಿರುತ್ತದೆ. ಇವುಗಳು ರಾಸಕ[೧೬]ವೆಂಬ ಉಪರೂಪಕದ ಸ್ವರೂಪವಾಗಿದೆ.

## ೧೧. ಸಂಲಾಪಕ

ಇದರಲ್ಲಿ ನಾಲ್ಕು ಅಥವಾ ಮೂರು ಅಂಕಗಳಿದ್ದು ನಾಯಕನು ಷಂಡನೆನಿಸಿರುವನು. ಶೃಂಗಾರ ಕರುಣ ರಸಗಳು ಬಿಟ್ಟು ಉಳಿದ ರಸಗಳಿರುತ್ತವೆ ನಗರಗಳನ್ನು ಮುತ್ತಿಗೆ ಹಾಕುವುದು ಪರಹಿತವಾಗುವಂತೆ ತೋರುವ ಅಹಿತವಾದ ವಾಕ್ಯಗಳಿಂದ ವಂಚಿಸುವುದು, ಭಾರತೀಕೌಶೀಕೀ ವೃತ್ತಿಗಳನ್ನು ಇಲ್ಲಿ ಪ್ರಯೋಗಿಸಬಾರದು ಮತ್ತು ಯುದ್ಧ, ಸಂಭ್ರಮಗಳು ಸಂಲಾಪಕ[೧೬೩]ದಲ್ಲಿ ವಿಶೇಷವಾಗಿ ಬರುತ್ತವೆ. ಇವಿಷ್ಟು ಸಂಲಾಪಕದ ಲಕ್ಷಣವಾಗಿದೆ.

## ೧೨. ಶ್ರೀಗಧಿತ

ಶ್ರೀ ಎಂಬ ಶಬ್ದವನ್ನು ಇಲ್ಲಿ ಪ್ರಯೋಗಿಸಿರುವುದರಿಂದ ಈ ಉಪರೂಪಕವನ್ನು ವಿದ್ವಾಂಸರು "ಶ್ರೀಗದಿತ"ವೆಂದು ಕರೆದಿದ್ದಾರೆ. ಇದರಲ್ಲಿ ಧೀರೋಧಾತ್ತ ನಾಯಕ, ಪ್ರಸಿದ್ಧಳಾದ ನಾಯಿಕೆ ಇರುತ್ತಾರೆ. ಗರ್ಭ ವಿಮರ್ಷ ಸಂಧಿಗಳು ಬಿಟ್ಟು ಇತರ ಸಂಧಿಗಳಿರುತ್ತವೆ ಭಾರತೀವೃತ್ತಿಯನ್ನು ವಿಶೇಷವಾಗಿ ಇಲ್ಲಿ ಪ್ರಯೋಗಿಸುತ್ತಾರೆ. "ಶ್ರೀಗದಿತವೆಂಬ ಉಪರೂಪಕದಲ್ಲಿ ಲಕ್ಷ್ಮಿಯ ಪಾತ್ರವನ್ನು ಅಭಿನಯಿಸುವ ಚೇಟಿಯು ಕುಳಿತುಕೊಂಡೇ ಕೊಂಚ ಕೊಂಚವಾಗಿ ಆಡಬೇಕು ಮತ್ತು ಹಾಡಬೇಕು. ಒಂದೇ ಅಂಕವಿದ್ದು ಭಾರತೀವೃತ್ತಿಯನ್ನು ಸಾಮಾನ್ಯವಾಗಿ ಪ್ರಯೋಗಿಸಬೇಕು" ಎಂದು ಕೆಲವರು ಶ್ರೀಗಧಿತ ಉಪರೂಪಕದ ಲಕ್ಷಣವನ್ನು ಹೀಗೆ ಹೇಳಿದ್ದಾರೆ.

## ೧೩. ಶಿಲ್ಪಕ

ಶಿಲ್ಪಕ ಉಪರೂಪಕದಲ್ಲಿ ಬ್ರಾಹ್ಮಣನು ನಾಯಕನಾಗಿದ್ದು ಹೀನಜಾತಿಯವನು ಉಪನಾಯಕನಾಗಿರುತ್ತಾನೆ. ಇದರಲ್ಲಿ ನಾಲ್ಕು ಅಂಕಗಳು, ನಾಲ್ಕು ವೃತ್ತಿಗಳು ಇಲ್ಲಿ ಬರುತ್ತವೆ. ಶಾಂತ, ಹಾಸ್ಯ ರಸಗಳು ಬಿಟ್ಟು ಉಳಿದ ರಸಗಳು ಇಲ್ಲಿ ಬರುತ್ತವೆ. ಸ್ಮಶಾನ ಮೊದಲಾದ ವರ್ಣನೆಗಳು ಈ ಉಪರೂಪಕದಲ್ಲಿರುತ್ತವೆ. ಶಿಲ್ಪಕಕ್ಕೆ ಇಪ್ಪತ್ತೇಳು ಅಂಗಗಳಿವೆ. ಅವು, ಆಶಂಸೆ, ತರ್ಕ, ಸಂದೇಹ, ತಾಪ, ಉದ್ವೇಗ, ಪ್ರಸಕ್ತಿ, ಪ್ರಯತ್ನ,

ಗ್ರಥನ, ಉತ್ಕಂಠೆ, ಅವಹಿತ್ಥೆ, ಪ್ರತಿಪತ್ತಿ, ವಿಲಾಸ, ಅಲಸ್ಯ, ಬಾಷ್ಪ, ಪ್ರಹರ್ಷ, ಅಶ್ವಾಸ, ಮೂಢತೆ, ಸಾಧನ, ಅನುಗಮ, ಉಚ್ಛ್ವಾಸ, ವಿಸ್ಮಯ ಪ್ರಾಪ್ತಿ, ಲಾಭ, ವಿಸ್ಮೃತಿ, ಸಂಫೇಟ, ವೈಶಾರಧ್ಯ, ಪ್ರಬೋಧನ, ಚಮತ್ಕೃತಿ ಇವಿಷ್ಟು ಶಿಲ್ಪಕದ ಅಂಗಗಳಾಗಿದ್ದು ಶಿಲ್ಪಕದ ಲಕ್ಷಣವಾಗಿದೆ.

## ೧೪. ವಿಲಾಸಿಕೆ

ಸಹೃದಯವನ್ನು ವಿಶೇಷವಾಗಿ ವಿಲಾಸಗೊಳಿಸುವುದರಿಂದ ಇದನ್ನು 'ವಿಲಾಸಿಕೆ' ಎನ್ನಲಾಗಿದೆ. ಇದರಲ್ಲಿ ಒಂದೇ ಅಂಶವಿದ್ದು. ಶೃಂಗಾರರಸವು ವಿಶೇಷವಾಗಿ ಪ್ರಕಾಶಿತವಾಗಿರುತ್ತದೆ. ಲಾಸ್ಯ ಹತ್ತುಬಗೆಯ ಅಂಗಗಳು ಇಲ್ಲಿ ಇರುತ್ತವೆ. ವಿದೂಷಕ ವಿಟ, ಪೀಠಮರ್ಧ ಇವರಿಂದ ಇದು ಶೋಭಿಸುತ್ತದೆ. ಇಲ್ಲಿ ಇತಿವೃತ್ತವು ಮಿತವಾಗಿದ್ದು ಗರ್ಭವಿಮರ್ಷ ಸಂಧಿಗಳು ಇರುವುದಿಲ್ಲ. ವಿಲಾಸಿಕೆಯ ಉಪರೂಪಕದಲ್ಲಿ ನಾಯಕನು ಹೀನವಂಶದವನೂ, ಹೀನಸ್ವಭಾವದವನು ಆಗಿರುತ್ತಾನೆ.

## ೧೫. ದುರ್ಮಲ್ಲಿಕೆ

ದುರ್ಮಲ್ಲಿಕೆಯು ಸುವಾಸನೆಯಿಲ್ಲದ ಮಲ್ಲಿಗೆ ಹೂವಿನಂತೆ ಇರುವುದ-ರಿಂದ ಇದಕ್ಕೆ 'ದುರ್ಮಲ್ಲಿಕೆ' ಎಂಬ ಹೆಸರು ಬಂದಿದೆ. ಇದರಲ್ಲಿ ಉತ್ತಮ ಸ್ವಭಾವದ ನಾಯಕನಿರುವನು. ಕೌಶಿಕೀ ಹಾಗೂ ಭಾರತೀವೃತ್ತಿಗಳನ್ನು ಇಲ್ಲಿ ಪ್ರಯೋಗಿಸಲಾಗುವುದು. ಗರ್ಭಸಂಧಿ ಯನ್ನುಳಿದು ಬೇರೆ ಸಂಧಿಗಳು ಇಲ್ಲಿ ಇರುತ್ತವೆ. ಪಾತ್ರಗಳು ಸಾಕಷ್ಟು ಎಲ್ಲಾ ವಿಷಯುಗಳಲ್ಲು ಅನುಭವವನ್ನು ಪಡೆದಿರುವರು ಇದರಲ್ಲಿ ನಾಲ್ಕು ಅಂಕಗಳಿರುತ್ತವೆ. ಇದರಲ್ಲಿ ಮೊದಲನೆ ಅಂಕವು ವಿಟನ ಕ್ರೀಡೆಯೊಡನೆ ಮೂರುನಾಡಿಗಳಲ್ಲಿ ಕೊನೆಯಾಗುವುದು. ಎರಡನೆ ಅಂಕವು ವಿದೂಷಕನ ವಿಲಾಸದೊಡನೆ ಐದು ನಾಡಿಗಳಲ್ಲಿ ಕೊನೆಯಾಗುವುದು. ಮೂರನೆ ಅಂಕವು ಪೀಠಮರ್ದನ ವಿಲಾಸದೊಡನೆ ಆರುನಾಡಿಗಳಲ್ಲಿ ಕೊನೆಗಾಣುವುದು. ನಾಲ್ಕನೆ ಅಂಕವು ನಾಯಕನ ಚರಿತ್ರೆಯೊಡನೆ ಹತ್ತುನಾಡಿಗಳಲ್ಲಿ ಮುಗಿಯುವುದು. ಇವು ದುರ್ಮಲ್ಲಿಕೆ [೧೬೪] ಎಂಬ ಉಪರೂಪಕದ ಸ್ವರೂಪವಾಗಿದೆ.

## ೧೬. ಪ್ರಕರಣಿಕೆ

ಇದರಲ್ಲಿ ವರ್ತಕ ಮೊದಲಾದವರು ನಾಯಕರೆನಿಸುವರು. ನಾಯಕನಿಗೆ ಸಮಾನವಾದ ವಂಶದಲ್ಲಿ ಹುಟ್ಟಿದಳು ನಾಯಿಕೆಯಾಗಿರುವಳು. ಉಳಿದಂತೆ ನಾಟಿ-ಕೆಯಲ್ಲಿರುವಂತಹ ಅಂಶಗಳು ಪ್ರಕರಣಿಕೆಯಲೂ ಇರುತ್ತವೆ.

## ೧೭. ಹಲ್ಲೀಶ

ಹಲ್ಲೀಶ ಉಪರೂಪಕದಲ್ಲಿ ಒಂದು ಅಂಕವಿರುತ್ತದೆ. ಏಳು, ಎಂಟು, ಅಥ–ವಾ ಹತ್ತು ಜನ ಹೆಂಗಸರು ಇಲ್ಲಿ ಭಾಗವಹಿಸುವರು. ಶೌರಸೇನಿ ಎಂಬ ಉತ್ಕೃಷ್ಟ ಭಾಷೆಯಲ್ಲಿ ವ್ಯವಹಾರವು ನಡೆಯುವುದು. ಒಬ್ಬ ಗಂಡಸು ಅಷ್ಟು ಜನ ಹೆಂಗಸರೊಡನೆ ವ್ಯವಹರಿಸುವನು. ಇಲ್ಲಿ ಕೌಶಿಕೀ ವೃತ್ತಿಯಿದ್ದು ಮುಖನಿರ್ವಹಣ ಸಂಧಿಗಳೆರಡನ್ನು ಮಾತ್ರ ಇಲ್ಲಿ ಪ್ರಯೋಗಿಸಲಾಗಿದೆ. ಮತ್ತು ಅನೇಕ ಬಗೆಯ ತಾಳಲಯಗಳು ಇಲ್ಲಿ ಸೇರಿಕೊಂಡಿರುತ್ತವೆ. ಇವಿಷ್ಟು ಈ ಉಪರೂಪಕದ ಲಕ್ಷಣವಾಗಿದೆ.

## ೧೮. ಭಾಣಿಕೆ

ಭಾಣಿಕೆಯಲ್ಲಿ ನಾಯಿಕೆಯು ಉದಾತ್ತ ಸ್ವಭಾವದಳಾಗಿದ್ದು. ನಾಯಕನು ಉತ್ಕೃಷ್ಟ ಸ್ವಭಾವದನಾಗಿರುತ್ತಾನೆ. ಈ ರೂಪಕದಲ್ಲಿ ಪಾತ್ರಗಳು ಸುಂದರವಾದ ವೇಷಭೂಷಣಗಳನ್ನು ಉಪಯೋಗಿಸುತ್ತಾರೆ. ಮುಖ ಮತ್ತು ನಿರ್ವಹಣ ಸಂಧಿಗಳು ಇಲ್ಲಿ ಬರುತ್ತವೆ ಕೌಶಿಕೀ ಭಾರತೀವೃತ್ತಿಗಳ ಪ್ರಯೋಗವಿರುತ್ತದೆ. ಇವಿಷ್ಟು ಒಂದೇ ಅಂಕದಲ್ಲಿ ರಚನೆಯಾಗಿರುತ್ತದೆ ಭಾಣಿಕೆಯಲ್ಲಿ ಏಳು ಅಂಕಗಳಿದ್ದು ಒಂದೊಂದು ಅಂಕಕ್ಕೂ ಒಂದೊಂದು ಹೆಸರುಗಳಿವೆ. ಮೊದಲನೆ ಅಂಕಕ್ಕೆ ಸಂಬಂಧಿಸಿದಂತೆ 'ಉಪನ್ಯಾಸ'ವೆಂಬ ಹೆಸರಿದೆ ಇದು ಬೇರೆ ಯಾವುದೋ ಸಂದರ್ಭವನ್ನು ಕಲ್ಪಿಸಿಕೊಂಡು ಆ ಮೂಲಕ ನಾಟಕದ ವಸ್ತುವನ್ನು ತಿಳಿಸುವುದು ಉಪನ್ಯಾಸವಾಗಿದೆ. ನಿರ್ವೇದನವನ್ನು ತಿಳಿಸುವ ವಾಕ್ಯವನ್ನು ಪ್ರಯೋಗಿಸುವುದು 'ವಿನ್ಯಾಸ'ವೆಂಬ ಎರಡನೆ ಅಂಕ ಭ್ರಾಂತಿಯು ಸಂಭವಿಸಿ ತೊಲಗುವುದೇ 'ವಿಭೋಧ'ವೆಂಬ ಮೂರನೆಅಂಕ. ಸುಳ್ಳಾದ ಕಥೆಯನ್ನು ಕಲ್ಪಿಸುವುದೇ 'ಸಾಧ್ವಸಾಂಕ'ವೆಂಬ ನಾಲ್ಕನೆ ಅಂಕವಾಗಿದೆ. ಕೋಪದ ಹಿಂಸೆಯಿಂದ ಒಬ್ಬನನ್ನು ನಿಂದಿಸಲ್ಲಿಕೆ ಮಾತನ್ನಾಡುವುದೇ 'ಸಮರ್ಪಣಾಂಕ' ವೆಂಬ ಐದನೆ ಅಂಕ. ದೃಷ್ಟಾಂತವನ್ನು ತಿಳಿಸುವುದೆ 'ನಿವೃತ್ತ್ಯಂಕ' ಎಂಬ ಆರನೆಯ ಅಂಕ ಆರಂಭಿಸಿದ ಕಾರ್ಯವನ್ನು ಕೊನೆಗಾಣಿಸುವುದೆ 'ಸಂಹರಾಂಕ' ಎಂಬ ಏಳನೆಯ ಅಂಕವಾಗಿದೆ. ಇವಿಷ್ಟು ಭಾಣಿಕೆ [೧೭೫] ಎಂಬ ಉಪರೂಪಕದ ಲಕ್ಷಣವಾಗಿದೆ.

ಈ ಹದಿನೆಂಟು ಉಪರೂಪಕಗಳು ನಾಟಕದ ಸ್ವಭಾವವನ್ನು ಹೊಂದಿದ್ದರೂ, ಅವಶ್ಯಕತೆಯಿದ್ದಾಗ ಮಾತ್ರ ಸಂದರ್ಭೋಚಿತವಾಗಿ ಇದನ್ನು ಬೇರೆ ಬೇರೆ ಬಗೆಯ ಉಪರೂಪಕಗಳಾಗಿ ಪ್ರಯೋಗಿಸಲಾಗುವುದು. ನಾಟಕದಲ್ಲಿ ಹೇಳಿರುವ ಅಂಶವನ್ನು ಮತ್ತೆ ತಿಳಿಸಿದ್ದರೂ ಅದು ಹೊಂದುತ್ತದೆ. ಆದರೆ ನಾಂದೀ ಪ್ರಸ್ತಾವನೆ ಮೊದಲಾದ ಸಾಮಾನ್ಯಾಂಶವು ನಾಟಕದಂತೆ ಉಪರೂಪಕದಲ್ಲೂ ಇರಬಹುದು. ಆದರೆ ಖ್ಯಾತವೃತ್ತ ಮೊದಲಾದ ನಾಟಕದ ವಿಶೇಷ ಲಕ್ಷಣವು ಉಪರೂಪಕಗಳಲ್ಲಿ ಅನ್ವಯಿಸಲಾರವು. ಇಲ್ಲಿಗೆ ದೃಶ್ಯಕಾವ್ಯದ ಬಗ್ಗೆ ಪರಿಪೂರ್ಣವಾದ ಪರಾಮರ್ಶೆಯನ್ನು ಮಾಡಿ., ಕಾವ್ಯದ ಇನ್ನೊಂದು ಭೇದವಾದ ಶ್ರವ್ಯಕಾವ್ಯವನ್ನು ವಿವೇಚಿಸಲಾಗಿದೆ.

## ಶ್ರವ್ಯಕಾವ್ಯ

ಕೇಳುವುದಕ್ಕೆ ಮಾತ್ರ ಯೋಗ್ಯವಾಗಿರುವಂತಹ ಕಾವ್ಯವನ್ನು 'ಶ್ರವ್ಯಕಾವ್ಯ' ಎಂದು ಕರೆಯಲಾಗಿದೆ. ಇದು ಪದ್ಯ ಗದ್ಯಮಯವೆಂದು ಎರಡು ಬಗೆಯಾಗಿರುವುದು.

**ಪದ್ಯಮಯ ಕಾವ್ಯದ ಲಕ್ಷಣ**
**ಛಂದೋಬದ್ಧಪದಂ ಪದ್ಯಂ ತೆನೈಕೇನ ಚ ಮುಕ್ತಮ್ ।**
**ದ್ವಾಭ್ಯಾಂ ತು ಯುಗ್ಮಕಂ ಸದಾನಿತಕಂ ತ್ರಿಭಿರಿಷ್ಯತೇ ॥**
**ಕಲಾಪತಂ ಚತುರ್ಭಿಶ್ಚ ಪಂಚಭಿಃ ಕುಲಕಂ ಮತಮ್** [೧೬೬] **।**

ಪದ್ಯಮಯ ಕಾವ್ಯವು ಗಾಯಿತ್ರಿ ಮೊದಲಾದ ವೃತ್ತದಲ್ಲಿ ಪದಗಳನ್ನು ಜೋಡಿಸಿರುವಂತಹ ಕಾವ್ಯವಾಗಿರುವುದು. ಎರಡು ಪದ್ಯಗಳು ಸೇರಿದರೆ ಅದು 'ಯುಗ್ಮಕ'ವೆನಿಸಿದೆ. ಮೂರು ಪದ್ಯಗಳು ಸೇರಿ ಒಂದು ಅರ್ಥವನ್ನು ತಿಳಿಸಿದ್ದರೆ ಅದನ್ನು 'ಸಂದಾನಿಕ' ಎಂದು, ನಾಲ್ಕು ಪದ್ಯಗಳು ಸೇರಿರುವುದಕ್ಕೆ 'ಕಲಾಪ' ಐದು ಪದ್ಯಗಳು ಕೂಡಿರುವುದನ್ನು 'ಕುಲಕ'ವೆಂದು, ಒಂದೇ ಪದ್ಯದಲ್ಲಿ ನಿರ್ದಿಷ್ಟವಾದ ಅರ್ಥವನ್ನು ತಿಳಿಸುವುದನ್ನು 'ಮುಕ್ತಕ'ವೆಂದು ಕರೆಯಲಾಗಿದೆ. ಉದಾಹರಣೆಗೆ

**ಸಾಂದ್ರಾನಂದಮನಂದಮವ್ಯಯಮಜಂ ಯದ್ಯೋಗಿನೋಽಪಿ ಕ್ಷಣಂ ।**
**ಸಾಕ್ಷಾತ್ಕರ್ತುಮುಪಾಸತೇ ಪ್ರತಿಮುಹುರ್ಧ್ಯಾನೈಕತಾನಾಃ ಪರಮ್ ॥**
**ಧನ್ಯಾಸ್ತಾ ಮಧುರಾಪುರೀಯುವತಯಸ್ತದ್ಬ್ರಹ್ಮಯಾಃ ಕೌತುಕಾತ್ ।**
**ಆಲಿಂಗಂತಿ ಸಮಾಲಪಂತಿ ಶತಧಾ ಕುರ್ವಂತಿ ಚುಂಬಂತಿ ಚ** [೧೬೭]**॥**

"ಪ್ರತಿ ನಿಮಿಷವು ಸಹ ಧ್ಯಾನದಲ್ಲಿಯೇ ಆಸಕ್ತರಾಗಿರುವ ಯೋಗಿಗಳು ಸಹ ಒಂದು ಕ್ಷಣವಾದರೂ ಅನುಭವಿಸಲಿಕ್ಕಾಗಿ ಆನಂದಮಯವೂ, ಎಲ್ಲೆ ಕೊನೆಗಳಿಲ್ಲದೆಯೂ ಹುಟ್ಟು ನಾಶಗಳಿಲದೆಯೂ ಇರುವ ಯಾವ ಪರಮಾತ್ಮನನ್ನು ಉಪಾಸನಮಾಡುವರೋ ಅಂತವನನ್ನು ಮಥುರಾನಗರದ ಸ್ತ್ರೀಯರು ಕುತೂಹಲದಿಂದ ಆಲಿಂಗಿಸಿ ಅನೇಕ ಬಗೆಯಾಗಿ ಎಳೆದು ಮುಟ್ಟಿ ಅವನೊಡನೆ ನೇರವಾಗಿ ಮಾತನಾಡಿ ಸಂತೋಷ ಪಡುತ್ತಿರುವರು ಅವರೇ ಧನ್ಯರು". ಇಲ್ಲಿ ಧನ್ಯಾಭವಂತಿ ಎಂದು ಹೇಳಿದ್ದರಿಂದ ಅಲ್ಲಿ ಕ್ರಿಯೆಯೂ ಕೊನೆಗಾಣುವುದರಿಂದ ಅನ್ವಯವು ಹೊಂದಿಕೆಯಾಗಿ ಮುಂದಿನ ಪದ್ಯದ ಅರ್ಥವನ್ನು ಹುಡುಕಿಕೊಂಡು ಹೋಗುವ ಅವಶ್ಯಕತೆ ಇಲ್ಲದರಿಂದ ಇದು 'ಮುಕ್ತಕ ಕಾವ್ಯ' ಕ್ಕೆ ಶ್ಲೋಕವು ಉದಾಹರಣೆಯಾಗಿದೆ.

ಎರಡು ಪದ್ಯಗಳು ಸೇರುವುದನ್ನು 'ಯುಗ್ಮಕ ಕಾವ್ಯ' ಎನ್ನಲಾಗಿದೆ. ಉದಾಹರಣೆಗಾಗಿ.,

**ಕಿಂ ಕರೋಮಿ ಕರೊಪಾಂತೆ ಕಾಂತೇ ಗಂಡಸ್ಥಲೀಮಿಮಾಮ್ ।**
**ಪ್ರಣಯಪ್ರವಣೆ ಕಾಂತೇಽನೈಕಾಂತೇ ನೋಚಿತಾಃ ಕ್ರುಧಃ ॥**
**ಇತಿ ಯಾವಕ್ಕುರಂಗಾಕ್ಷೀಂ ವಕ್ತುಮೀಹಾಮಹೇ ವಯಮ್ ।**
**ತಾವದಾವಿರಭೂಚ್ಚೂತೇ ಮಧುರೋ ಮಧುಪಧ್ವನಿಃ**[೧೬೮] **॥**

"ಎಲೈ ಕಾಂತೆಯೇ, ಕೈಗಳ ಸಮೀಪದಲ್ಲಿ ಈ ಕೆನ್ನೆಯನ್ನು ಇಡುವೆಯಾ? ನಿನ್ನ ಪತಿಯು ಬೇರೆ ಯಾರಲ್ಲೂ ಆಸಕ್ತನಾಗದೆ ನಿನ್ನಲ್ಲಿಯೇ ಪೂರ್ಣವಾಗಿ ಮನಸ್ಸಿಟ್ಟಿರುವಾಗ ಅವನ ಮೇಲೆ ಹೀಗೆ ಕೋಪ ಮಾಡುವುದು. ನ್ಯಾಯವಲ್ಲವೆಂದು ನಾಯಿಕೆಗೆ ನಾವು ಎಷ್ಟರೊಳಗೆ ತಿಳಿಸಲು ಇಚ್ಚಿಸಿದೆವೋ ಅಷ್ಟರೊಳಗೆ ಮಾವಿನಮರದಲ್ಲಿ ದುಂಬಿಗಳ ಮಧುರವಾದ ಝೇಂಕಾರನಾದವು ಆರಂಭವಾಯಿತು". ಇಲ್ಲಿ 'ಅವಿರಭೂತ್' ಎಂಬ ಕೊನೆಯ ಕ್ರಿಯಾಪದದಲ್ಲಿ ಎರಡು ಪದ್ಯಗಳಿಗೂ ಅನ್ವಯ ಬಂದು ಎರಡಕ್ಕೂ ಪರಸ್ಪರವಾಗಿ ಸಂಘಟನೆ ಇರುವುದರಿಂದ ಇವೆರಡೂ ಸೇರಿ 'ಯುಗ್ಮಕಾವ್ಯ' ಎನಿಸಿದೆ.

## ಮಹಾಕಾವ್ಯದ ಲಕ್ಷಣ

**ಸರ್ಗಬಂಧೋ ಮಹಾಕಾವ್ಯಂ ತತ್ರೈಕೋ ನಾಯಕಃ ಸುರಃ ।**
**ಸದ್ವಂಶಃ ಕ್ಷತ್ರಿಯೋ ವಾಪಿ ಧೀರೋದಾತ್ತಾ ಗುಣಾನ್ವಿತಃ**[೧೬೯] **॥**

ರಸವತ್ತಾದ ಪದ್ಯಗಳ ಸಮೂಹವನ್ನು 'ಮಹಾಕಾವ್ಯ'ವೆಂದು ಕರೆಯಲಾಗಿದೆ. ಇಲ್ಲಿ ಧೀರೋದಾತ್ತ ಗುಣದಿಂದ ಕೂಡಿ ದೇವತಾ ಸ್ವರೂಪವೆನಿಸಿದ ಒಬ್ಬ ನಾಯಕ ನಿರುವನು. ಅವನು ಸದ್ವಂಶದಲ್ಲಿ ಹುಟ್ಟಿರಬೇಕು ಅಥವಾ ಕ್ಷತ್ರಿಯ ವಂಶದನಾಗಿರಬಹುದು. ಒಂದೇ ವಂಶದಲ್ಲಿ ಹುಟ್ಟಿದ ಅನೇಕ ಜನರ ಚರಿತ್ರೆಯಾಗಲಿ ಅಥವಾ ಸದ್ವಂಶದಲ್ಲಿ ಹುಟ್ಟಿದ ಚರಿತ್ರೆಯನ್ನಾಗಲಿ ಮಹಾಕಾವ್ಯವು ತಿಳಿಸಬಹುದು. ವೀರ, ಶಾಂತ, ಶೃಂಗಾರ ರಸಗಳಲ್ಲಿ ಒಂದು ಪ್ರಧಾನರಸವಾಗಿದ್ದು ಉಳಿದವು ಪೂಷಕ ರಸವಾಗಿರಬೇಕು. ನಾಟಕದಲ್ಲಿ ಬರುವ ಸಂಧಿಗಳೆಲ್ಲವೂ ಕಾವ್ಯದಲ್ಲಿರುತ್ತವೆ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ತಿಳಿಸಿ ಅವುಗಳಲ್ಲಿ ಒಂದು ಫಲವಾಗಿ ದೂರಕಿಸುವಂತಿರಬೇಕು. ಪ್ರಾರಂಭದಲ್ಲಿ ದೇವರಿಗೆ ನಮಸ್ಕಾರ ಹಿರಿಯರ ಆಶೀರ್ವಾದ, ಒಂದು ವಸ್ತುವಿನ ಸೂಚನೆಯಾಗಲಿ ಬಂದಿರುತ್ತದೆ. ಕೆಲವು ಕಡೆ ನೀಚರ ನಿಂದೆಯೂ ಸತ್ಪುರುಷರ ಗುಣ ಪ್ರಶಂಸೆಯೂ ಬಂದಿರುತ್ತದೆ. ಪದ್ಯಗಳೆಲ್ಲವೂ ಒಂದೇ ವೃತ್ತದಲ್ಲಿದ್ದು ಕೊನೆಗೆ ಬೇರೆ ಬೇರೆ ವೃತ್ತಗಳಿರುತ್ತವೆ. ಇದರಲ್ಲಿ ಸರ್ಗಗಳು ಎಂಟಕ್ಕಿಂತ ಹೆಚ್ಚಾಗಿರಬೇಕು ಇವು ಬಹಳ ಉದ್ದ ಅಥವಾ ಬಹಳ ಕಡಿಮೆಯೂ ಇರಬಾರದು ಕಥೆಯ ಸರ್ಗದಲ್ಲಿ ಮುಂದಿನ ಸರ್ಗದ ಕಥೆಯು ಸೂಚಿತವಾಗಿರಬೇಕು. ಸಂಧ್ಯಾಕಾಲ, ಸೂರ್ಯಚಂದ್ರರ ಉದಯಾಸ್ತಗಳು, ರಾತ್ರಿ, ಪ್ರದೋಷಕಾಲ, ಕತ್ತಲೆ, ಹಗಲು, ಪ್ರಾತಃಕಾಲ, ಮಧ್ಯಾಹ್ನ ಸಮಯ, ಬೇಟೆ, ಬೆಟ್ಟಗಳು, ಋತು, ಅರಣ್ಯ, ಸಾಗರ, ಸಂಭೋಗ, ವಿಪ್ರಲಂಬಶೃಂಗಾರ, ಸ್ವರ್ಗ, ಪಟ್ಟಣ್ಣ,

ಯಾಗ, ಋಷಿ, ಪ್ರಯಾಣ, ಯುದ್ಧ, ವಿವಾಹ, ವ್ಯುತ್ಪತ್ತಿ ಮೊದಲಾದ ಅಂಶಗಳೂ ಸಂದರ್ಭಕ್ಕೆ ಅನುಗುಣವಾಗಿ ವರ್ಣಿಸಬೇಕು. ಕವಿಯ ಅಥವಾ ಇತಿವೃತ್ತದ ಹೆಸರನ್ನು ನಾಯಕ [೧೭೦] ಅಥವಾ ಬೇರೆಯವರ ಹೆಸರಿನಿಂದ ಸೂಚಿಸಿರಬೇಕು. ಸ್ವರ್ಗದ ಹೆಸರನ್ನು ಅಲ್ಲಿ ವರ್ಣಿಸಿರುವ ಕಥೆಯಿಂದ ತಿಳಿಸಬೇಕು.

ಇಂತಹ ಕಾವ್ಯವನ್ನು ಋಷಿಯಲ್ಲದವನು ಬರೆಯರಲಾರನು. ಇಂತಹ ಅರ್ಷ ಕಾವ್ಯದಲ್ಲಿ ಸರ್ಗಗಳಿಗೆ ಆಶ್ವಾಸವೆಂಬ ಸಂಜ್ಞೆಯನ್ನು ಪ್ರಯೋಗಿಸುವ ರೂಡಿಯಲ್ಲಿದೆ. ಪ್ರಾಕೃತ ಭಾಷೆಗಳಲ್ಲಿ ರಚಿಸಿರುವ ಕಾವ್ಯದಲ್ಲಿನ ಸರ್ಗಗಳಿಗೆ ಆಹ್ವಾನವೆಂಬ ಸಂಜ್ಞೆ ಇದೆ. ಇಂತಹ ಕಾವ್ಯವು ಕೆಲವು ಅಂಶಗಳಲ್ಲಿ ಸ್ಪಂದಕ ಗಳಿಕವೆಂಬ ಛಂದಸ್ಸಿನಿಂದಲೂ ರಚಿತವಾಗಿರುತ್ತದೆ[೧೭೧]. ಅಪಬ್ರಂಶವೆಂಬ ಭಾಷೆಯಲ್ಲಿ ವಿರಚಿತವಾದ ಕಾವ್ಯದ ಸರ್ಗಗಳಿಗೆ 'ಕುಡವಕ' ಎಂಬ ಹೆಸರಿದೆ. ಹಾಗೆ ಅಪಭ್ರಂಶ ಭಾಷೆಗೆ ಯೋಗ್ಯವಾದ ಅನೇಕ ಬಗೆಯ ಛಂದಸ್ಸುಗಳಲ್ಲಿ ಪದ್ಯದ ರಚನೆಯಾಗುತ್ತದೆ. ಸಂಸ್ಕೃತ ಭಾಷೆಯಲ್ಲಿ ಆರಂಭಿಸಿದ್ದನ್ನು ಬೇರೆ ಭಾಷೆಯಲ್ಲಿ ಆರಂಭಿಸಿದ್ದನ್ನು ಅದರಲ್ಲಿಯೇ ಕಾವ್ಯವನ್ನು ಮುಂದುವರಿಸಿ, ಮುಗಿಸಬೇಕು ಎಂಬ ನಿಯಮದಿಂದ ಕಾವ್ಯವು ಸರ್ಗಗಳಿಲ್ಲದ ಸಂಧಿಸಾಮಗ್ರಿಗಳಿಲ್ಲದ ಒಂದೇ ವಿಷಯವನ್ನು ತಿಳಿಸುವ ಪದ್ಯಗಳಿಂದ ಕೂಡಿರುತ್ತವೆ. ಮಹಾಕಾವ್ಯದ ಒಂದು ಭಾಗವೆನಿಸಿದ ಕಾವ್ಯವನ್ನು 'ಖಂಡಕಾವ್ಯ[೧೭೨]' ಎಂದು ಕರೆಯಲಾಗಿದೆ. ಇವಿಷ್ಟು ಪದ್ಯ ಕಾವ್ಯ ಸಮೂಹವಾದ ಮಹಾಕಾವ್ಯ[೧೭೩]ದ ಲಕ್ಷಣವಾಗಿದ್ದು ಮುಂದೆ ಗದ್ಯಕಾವ್ಯಗಳನ್ನು ವಿವೇಚಿಸಲಾಗಿದೆ.

## ಗದ್ಯಕಾವ್ಯ

ಛಂದಸ್ಸಿಗೆ ಸಂಬಂಧಿಸಿದ ಹ್ರಸ್ವದೀರ್ಘ ಮೊದಲಾದ ನಿಯಮಗಳಿಲ್ಲದಿರುವಂತಹ ಕಾವ್ಯವನ್ನು ಗದ್ಯಕಾವ್ಯವೆಂದು ಕರೆಯಲಾಗಿದೆ. ಇದು ಮುಕ್ತಕ, ವೃತ್ತಗಂಧಿ, ಉತ್ಕಲಿಕಾಪ್ರಾಯ ಚೂರ್ಣಕ ಎಂಬ ನಾಲ್ಕು ಬಗೆಯಾಗಿರುತ್ತದೆ. ಸಮಾಸಗಳಿಲ್ಲದ್ದು 'ಮುಕ್ತಕ'ವಾಗಿದೆ, ವೃತ್ತದ ಕೊಂಚ ಭಾಗದಿಂದ ಕೂಡಿರುವುದೇ ವೃತ್ತಗಂಧಿ, ಧೀರ್ಘಸಮಾಸಗಳಿರುವಂತಹದು 'ಉತ್ಕಲಿಕಪ್ರಾಯ' ಎನಿಸುತ್ತದೆ, ಎರಡು ಮೂರು ಸಮಾಸಗಳಿರುವುದು ಚೂರ್ಣಕವೆನಿಸಿದೆ, "ಗುರುರ್ವಚಸಿ ಪೃಥುರುರಸಿ" ಎಂಬಲ್ಲಿ ಸಮಾಸವೇ ಇಲ್ಲದ್ದರಿಂದ ಇದು ಮುಕ್ತಕವಾಗಿದೆ. 'ಸಮರ ಕಂಡೂಯನ' ಎಂಬಲ್ಲಿ ಸಮ ಎಂಬ ಮೊದಲನೆಯ ಅಕ್ಷರಗಳನ್ನು ಬಿಟ್ಟರೆ ಅನುಷ್ಟುಪ್ ವೃತ್ತದ ಭಾಗವಾಗುತ್ತದೆ ಮತ್ತು 'ಕುಂಡಲೀಕೃತಕೋದಂಡ' ಅನುಷ್ಟಪ್ ವೃತ್ತದ ಪಾದವೆನಿಸಿದೆ ಆದ್ದರಿಂದ ಈ ಬಗೆಯ ಗದ್ಯವು 'ವೃತ್ತಿಗಂದಿ' ಎನಿಸಿದೆ. "ಯುದ್ಧದ ನೆವದಿಂದ ನಿಬಿಡವಾದ ಭುಜದಂಡಗಳಿಂದ ಸಂಪೂರ್ಣವಾಗಿ ಸೆಳೆದ ಧುನುಸ್ಸಿನ ಶಿಂಜಿನಿಯ ಧ್ವನಿಯಿಂದ ಶತ್ರುರಾಜರಿಗೆ ನಿದ್ರೆಯನ್ನು ಬಿಡಿಸಿ ಮೇಲಕ್ಕೆ ಎಳಿಸುತ್ತಿರುವ ಮಹಾರಾಜನೇ!" ಇದು ಧೀರ್ಘ ಸಮಾಸಗಳಿರುವ ಗದ್ಯದ ಉತ್ಕಲಿಕಾಪ್ರಾಯಕ್ಕೆ ಉದಾಹರಣೆಯಾಗಿದೆ. "ಗುಣ–

ರತ್ನಸಾಗರ, ಜಗದೇಕ ಸಾಗರ! ಕಾಮಿೀನಿ ಮದನ ಜನರಂಜನ" ಇಲ್ಲಿ ಎರಡು ಮೂರು ಪದಗಳಿಂದ ಆಗಿರುವ ಸಮಾಸಗಳಿರುವುದರಿಂದ 'ಚೂರ್ಣಕ'ವೆಂಬ ಗದ್ಯವಾಗಿದೆ.

ಕಥೆಯಲ್ಲಿ ಸ್ವಾರಸ್ಯವಾದ ವಸ್ತುವನ್ನು ಗದ್ಯಗಳಿಂದಲೇ ರಚಿಸಲಾಗುವುದು. ಕೆಲವು ಕಡೆ ಆಯಾವೃತ್ತದಲ್ಲಿ, ಕೆಲವು ಕಡೆ ವಕ್ರ ಅಪವಕ್ತ್ರಗಳಲ್ಲೂ ಪದ್ಯಗಳು ಬಂದಿರುತ್ತವೆ. ಮೊದಲು ಪದ್ಯಗಳಲ್ಲಿ ದೇವರ ಬಗ್ಗೆ ನಮಸ್ಕಾರವೂ ನೀಚರ ದುರ್ವರ್ತನೆ ಬಂದಿರುತ್ತದೆ[೧೭೪]. ಆಖ್ಯಾಯಿಕೆಯೂ ಕಥೆಯಂತೆಯೇ ಇರುತ್ತದೆ. ಆದರೆ ಇಲ್ಲಿ ಕವಿಯ ವರ್ಣನೆ ವಿಶೇಷವಾಗಿ ಬರುತ್ತದೆ ಇದು ಆಖ್ಯಾಯಿಕೆಯ ಲಕ್ಷಣವಾಗಿದೆ. ಕೆಲವು ವೇಳೆ ಕಥೆಯಲ್ಲೂ ಬರುತ್ತವೆ. ಇದರಲ್ಲಿ ಬೇರೆ ಬೇರೆ ಕವಿಗಳ ವೃತ್ತ ಪದ್ಯಗಳು ಅಲ್ಲಲಿ ಸೇರಿರುತ್ತವೆ ಕಥಾಂಶಗಳ ಪರಿಚ್ಛೇದವನ್ನು ಆಶ್ವಾಸಗಳಾಗಿ ಆರ್ಯ, ವಕ್ತ್ರ, ಅಪವಕ್ತ್ರ ವೃತ್ತಿಗಳಲ್ಲಿ ಕವಿಯು ರಚಿಸುತ್ತಾನೆ. ಆಶ್ವಾಸದ ಆರಂಭದಲ್ಲಿ ಯಾವುದಾದರೊಂದು ನೆಪದಿಂದ ಮುಂದಿನ ವಿಷಯವನ್ನು ಸೂಚಿಸಲಾಗುವುದು ಆಖ್ಯಾಯಿಕೆಯನ್ನು[೧೭೫] [೧೭೬] ನಾಯಕನೇ ಹೇಳಬೇಕು.

ಗದ್ಯಪದ್ಯಮಯವಾದ ಕಾವ್ಯವನ್ನು 'ಚಂಪೂಕಾವ್ಯ' ಎನ್ನಲಾಗಿದೆ. ಗದ್ಯ ಪದ್ಯದಲ್ಲಿ ರಚಿತವಾಗಿರುವ ರಾಜನ ಸ್ತೋತ್ರವು 'ಬಿರುದು' ಎನಿಸಿದೆ. ಅನೇಕ ಬಗೆಯ ಭಾಷೆಗಳಿಂದ ರಚಿತವಾಗಿರುವುದನ್ನ 'ಕರಂಭಕ[೧೭೯]' ಎನಿಸಿದೆ. ಇಲ್ಲಿಗೆ ಶ್ರವ್ಯಕಾವ್ಯದ ಬಗ್ಗೆ ವಿಶ್ವನಾಥನು ಹೇಳಿರುವುದನ್ನು ವಿವೇಚಿಸಲಾಯಿತು.

ದೃಶ್ಯಕಾವ್ಯಕ್ಕೆ ಸಂಬಂಧಿಸಿದಂತೆ ವಿಶ್ವನಾಥನು ನಾಟಕದಲಕ್ಷಣವನ್ನು ಪರಿಪೂರ್ಣವಾಗಿ ವಿವೇಚಿಸಿದ್ದಾನೆ. ನಾಟ್ಯಶಾಸ್ತ್ರಕಾರದ ಭರತನು ನಾಟಕಲಕ್ಷಣದ ಬಗ್ಗೆ ವಿಚಾರವನ್ನು ಮಾಡುವುದನ್ನು ಬಿಟ್ಟರೆ ರುದ್ರಟನು[೧೮೦] ಕಾವ್ಯಾಲಂಕಾರದಲ್ಲಿ ರಸದ ವಿಚಾರದಲ್ಲಿ ನಾಯಕ ಅವನ ಸಹಚರರು ನಾಯಕ ನಾಯಿಕೆಯ ಪ್ರಕಾರಗಳನ್ನು ನಿರೂಪಿಸಿದ್ದಾನೆ. ನಂತರ ಬಂದ ವಿದ್ಯಾನಾಥನು[೧೮೧] ನಾಟಕಲಕ್ಷಣವನ್ನು ವಿಸ್ತಾರವಾಗಿ ನಿರೂಪಿಸಿ ನಾಟಕಲಕ್ಷಣವನ್ನು ಪ್ರತಿಪಾದಿಸಿದ್ದಾನೆ. ಭರತನ ನಂತರದ ಅಲಂಕಾರಿರಾದ ದಂಡಿ, ವಾಮನ, ಮಮ್ಮಟ ಇತ್ಯಾದಿ ಅಲಂಕಾರಿಕರು ಕಾವ್ಯಲಕ್ಷಣಕ್ಕೆ [ಅಲಂಕಾರಶಾಸ್ತ್ರ] ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟರು. ಮಮ್ಮಟನಂತಹ ಪ್ರಖ್ಯಾತ ಅಲಂಕಾರಿಕನು ನಾಟಕದ ವಿಚಾರವನ್ನು ಹೇಳದೇ ಇರುವುದು ಶ್ಲಾಘನೀಯವಾಗಿದೆ. ಕಾವ್ಯದ ಒಟ್ಟಾರೆ ಅರ್ಥವು ದೃಶ್ಯ, ಶ್ರವ್ಯ ಕಾವ್ಯವೆಂದರೂ ನಾಟ್ಯಶಾಸ್ತ್ರದ ನಂತರ ನಾಟಕಲಕ್ಷಣ, [ನಾಟ್ಯಶಾಸ್ತ್ರ], ಕಾವ್ಯಲಕ್ಷಣ [ಅಲಂಕಾರ ಶಾಸ್ತ್ರ] ಎಂದು ಬೇರೆ ಬೇರೆ ಸಂಪ್ರದಾಯದಲ್ಲಿ ಮುಂದುವರೆಯಿತು. ಏಕೆಂದರೆ ನಾಟಕವು ಒಂದು ಸಂಕೀರ್ಣ ಕಲೆಯಾದ್ದರಿಂದ ಇಲ್ಲಿ ಕಾವ್ಯಲಕ್ಷಣಕ್ಕೆ ಸರ್ವ ಸ್ವತಂತ್ರ ವಾದ ಸ್ಥಳವಿಲ್ಲದಂತಾಯಿತು. ನಾಟಕವು ನೃತ್ಯ, ಗಾನ, ವೇಷ ಭೂಷಣ ಜೊತೆಗೆ ಅಭಿನಯದ ಅಂಗವಾಗಿ ಬರುವುದರಿಂದ [೧೮೨] ನಾಟಕವು

ತನ್ನ ಸಹಯೋಗಿಗಳ ಪ್ರಭಾವಕ್ಕೆ ಕಟ್ಟುಬಿದ್ದು ಮಿಕ್ಕ ಕಾವ್ಯವರ್ಗದಿಂದ ಪ್ರತ್ಯೇಕವಾಗಿ ಮುಂದುವರೆಯಿತು. ಆದ್ದರಿಂದಲೇ ಕಾವ್ಯಲಕ್ಷಣವನ್ನು ನಿರೂಪಿಸಲು ಹೊರಟ ಅಲಂಕಾರಿಕರು ನಾಟಕದ ವಿಚಾರವನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟು ಅದನ್ನು 'ಆಗಮಾಂತರ' ಅಂದರೆ ಬೇರೆ ಶಾಸ್ತ್ರವೆಂದು ಭಾವಿಸಿದರು. ಆದರೆ ನಾಟ್ಯಶಾಸ್ತ್ರ ಮತ್ತು ಅಲಂಕಾರಶಾಸ್ತ್ರ ಬೇರೆ ಬೇರೆಯಾಗಿ ಮುಂದುವರೆದರೂ ಇವೆರಡರ ವಿಷಯವು ಒಂದೇ ಆಗಿದೆ. ನಾಟಕದಲ್ಲಿ ಮೊದಲಿನಿಂದಲೂ ರಸಕ್ಕೆ ದೊರೆತಿರುವ ಎಲ್ಲಾ ಬಗೆಯ ಪ್ರಾಶಸ್ತ್ಯವು ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ವಿಶ್ವನಾಥನು ತನ್ನ ಕಾವ್ಯಲಕ್ಷಣಗ್ರಂಥವಾದ ಸಾಹಿತ್ಯದರ್ಪಣದಲ್ಲಿ ನಾಟಕಲಕ್ಷಣದ ಸಂಪೂರ್ಣ ವಿಚಾರವನ್ನು ಆರನೆ ಪರಿಚ್ಛೇದದಲ್ಲಿ **ನಿರೂಪಿಸಿದ್ದಾನೆ.** ಇಲ್ಲಿಗೆ ದೃಶ್ಯ ಶ್ರವ್ಯಕಾವ್ಯಗಳನ್ನು ವಿವೇಚಿಸಿ. ಮುಂದಿನ ಅಧ್ಯಾಯದಲ್ಲಿ ವಿಶ್ವನಾಥನು ತಿಳಿಸಿರುವ ದೋಷಗುಣಗಳನ್ನು ಪರಾಮರ್ಶಿಸಲಾಗಿದೆ.

* * * *

## ಅಡಿಟಿಪ್ಪಣಿಗಳು

೧. ಕ್ರಿ.ಶ. ಎರಡನೆ ಶತಮಾನವೆಂದು ಮನಮೋಹನ ಘೋಷರವರ ಅಭಿಪ್ರಾಯ.

೨. ಪಿ. ವಿ. ಕಾಣೇ ಅವರ ಹೇಳಿಕೆ

೩. ಯಾಸ್ಕ, [ಕ್ರಿ.ಪೂ. ಸು. ೬೦೦]

೪. ಪಾಣಿನಿ, ಕ್ರಿ.ಪೂ ಸು. ೪೦೦ ಇದರಲ್ಲಿ ಉಪಮಾ ಅಲಂಕಾರದ ಬಗ್ಗೆ ಕೆಲವು ಸೂಚನೆಗಳು ಕಂಡು ಬರುತ್ತವೆ.

೫. ಭರತ, ನಾಟ್ಯಶಾಸ್ತ್ರ [೧, ೧೦೩]

೬. ಭರತ, ನಾಟ್ಯಶಾಸ್ತ್ರ [೧, ೧೧೯]

೭. ಭರತ, ನಾಟ್ಯಶಾಸ್ತ್ರ,

೮. ಧನಂಜಯನ, ದಶರೂಪಕ

೯. ಕಾವ್ಯೋಪನಿಬದ್ಧಧೀರೋದಾತ್ತಾದ್ಯವ ಸ್ಥಾನುಕಾರಶ್ಚತುರ್ವಿಧಾಭಿನಯೇನ ತಾದಾತ್ಮ್ಯಪತ್ತಿರ್ನಾಟ್ಯಂ [ಧನಿಕನ, ವ್ಯಾಖ್ಯಾನ]

೧೦. ಹೇಮಚಂದ್ರನ, ಕಾವ್ಯಾನುಶಾಸನ, ಶಾರದಾತನಯನ, ಭಾವಪ್ರಕಾಶನ,

೧೧. ಕಾಳಿದಾಸನ, ಮಾಲವಿಕಾಗ್ನಿಮಿತ್ರ, [೧–೪]

೧೨. ಪತಂಜಲಿಯ ಕಾಲ, [ಕ್ರಿ.ಪೂ. ಸು. ೧೫೦]

೧೩. A.B.Keith; Sanskrit Literature PP 45-7

೧೪. S.K.De;Sanskrit Poetics, Vol. I PP4ff

೧೫ 'ರಾಜಶೇಖರ', ೯ನೆ ಶತಮಾನದಿಂದ ೧೦ನೆ ಶತಮಾನದ ಪ್ರಾರಂಭ

೧೬. ತತ್ರ ಕವಿರಹಸ್ಯಂ ಸಹಸ್ರಾಕ್ಷಃ ಸಮಾಂನಾಸೀತ್, ಔಕ್ತಿಕಂ ಉಕ್ತಿಗರ್ಭಃ, ರೀತಿನಿರ್ಣಯಂ ಸುವರ್ಣಾಭಃ, ಅನುಪ್ರಾಸಿಕಂ ಪ್ರಚೇತಾಯನಃ ಯಮಕಾನಿ ಚಿತ್ರಂ ಚಿತ್ರಾಂಗದಃ, ಶಬ್ದಶ್ಲೇಷಂ ಶ್ಲೇಷಃ, ವಾಸ್ತವಂ ಪುಲಸ್ತ್ಯ, ಔಪಮ್ಯಂ ಔಪಕಾಯನಃ, ಅತಿಶಯಂ ಪಾರಾಶರಃ, ಅರ್ಥಶ್ಲೇಷಂ ಉತರ್ಥ್ಯಃ, ಉಭಯಾಲಂಕಾರಿಕಂ ಕುಬೇರಃ ಮನೋದಿಕಂ ಕಾಮದೇವಃ, ರೂಪಕ ನಿರೂಪಣೀಯಂ, ಭರತಃ ರಸಾದಿಕಾರಿಕಂ ನಂದಿಕೇಶ್ವರಃ ದೋಷಾಧಿಕಾರಣಂ ಧೀಷಣಃ, ಗುಣೌಪಾಧಾನಿಕಂ ಉಪಮನ್ಯುಃ ಔಪನಿಷದಿಕಂ ಕುಚಮಾರ ಇತಿ ತತಸ್ತೇ ಪ್ರಥಕ್ ಪೃಥಕ್ ಸ್ವಶಾಸ್ತ್ರಣಿ ವಿರಚಯಾಂಚಕ 'ಕಾವ್ಯಮೀಮಾಂಸೆ' [ಪು. ೧]

೧೭. ರಾಜಶೇಖರ ಹೇಳಿಕೆಯನ್ನು ಕುರಿತ ವಿಶೇಷ ವಿಚಾರಕ್ಕೆ P.V.Kane History of Sanskrit PP ೧–೩ ನೋಡಿ.

೧೮. ಪಾಣಿನಿಯ ಕಾಲ, [ಕ್ರಿ.ಪೂ. ೫ನೇ ಶ.]

೧೯. ಸಾಹಿತ್ಯದರ್ಪಣ, [೬. ೨]

೨೦. ಭರತನು ಎಂಟು ಸಾತ್ವಿಕ ಭಾವಗಳನ್ನು ಈ ರೀತಿ ಹೇಳಿದ್ದಾನೆ.

ಸ್ತಂಭ ಸ್ವೇದೋಥ ರೋಮಾಂಚ ಸ್ವರಭೇದೋऽಥವೇಪಥುಃ ।
ವೈವರ್ಣ್ಯಮರ್ಶ್ರುಃ ಪ್ರಲಯ ಇತ್ಯಷ್ಟೌ ಸಾತ್ವಿಕಾ ಮತಾಃ ॥
[ನಾಟ್ಯಾಶಾಸ್ತ್ರ ೬, ೨೨]

೨೧. ಸಾಹಿತ್ಯದರ್ಪಣ, [೬, ೩]

೨೨. ಸಾಹಿತ್ಯದರ್ಪಣ [೬ನೇ ಪರಿಚ್ಛೇದ]

೨೩. ದಿವ್ಯಗುಣವುಳ್ಳ ನಾಯಕನಿಗೆ 'ಶ್ರೀ ಕೃಷ್ಣ' ದಿವ್ಯಾದಿವ್ಯ ನಾಯಕನಿಗೆ 'ಶ್ರೀ ರಾಮ' ಉದಾಹರಣೆಗಳಾಗಿದ್ದಾರೆ.

೨೪. ಮುದ್ರಾರಾಕ್ಷಸ ನಾಟಕದಲ್ಲಿನ ಚಂದ್ರಗುಪ್ತ

೨೫. ಯುಥಾಗೋಪೃಚ್ಛೇ ಕೆಚಿದ್ಬಾಲಾಃ ಹ್ರಸ್ವಾಃ ಕೆಚಿದ್ದೀರ್ಘಾಃ, ತಥೇಹ ಕಾನಿಚಿತ್ ಕಾರ್ಯಾಣಿ ಮುಖಸಂಧೌ ಸಮಾಪ್ತಾನಿ, ಕಾನಿಚಿತ್ ಪ್ರತಿಮುಖೆ ಏವಮನ್ಯೇಷ್ವಪಿ ಕಾನಿಚಿತ್ ಕಾನಿಚಿತ್ [ಸಾಹಿತ್ಯದರ್ಪಣ, ೬ನೆ ಪರಿಚ್ಛೇದ]

೨೬. ಸಾಹಿತ್ಯದರ್ಪಣ, [೬, ೬]

೨೭. ಬಾಲರಾಮಯಾಣದಲ್ಲಿ ಬರುವ ಸೀತಾಸ್ವಯಂವರ ಗರ್ಭಾಂಕಕ್ಕೆ ಉದಾಹರಣೆ ಯಾಗಿದೆ.

೨೮. ಸಾಹಿತ್ಯದರ್ಪಣ [೬, ೧೦]

೨೯. 'ಅನರ್ಘರಾಘವ'ದಲ್ಲಿ ಎಂಟು ಪದಗಳ ನಾಂದಿ ಇದೆ. 'ವೇಣಿ ಸಂಹಾರದಲ್ಲಿ ಹನ್ನೆರಡು ಪದಗಳ ನಾಂದಿ ಇದೆ. 'ಮಾಲತಿ ಮಾಧವ'ದಲ್ಲಿ ಎರಡು ಶ್ಲೋಕಗಳಿರುವುದ ರಿಂದ 'ಅಷ್ಟಪದಿ' ಎನಿಸಿವೆ.

೩೦. ಧನಂಜಯ, ದಶರೂಪಕದಲ್ಲಿ ಹೇಳಲಾಗಿದೆ.

೩೧. ಭರತನ, ನಾಟ್ಯಶಾಸ್ತ್ರ

೩೨. ದ್ವೀಪಾದನ್ಯಸ್ಮಾದಪಿ ಮಧ್ಯಾಪಿ ಜಲನಿದೇರ್ದಿ ಶೋऽಪ್ಯಂತಾತ್ ।
ಅನೀಯ ಝುಟಿತ ಘಟಯತಿ ವಿಧಿರಭಿಮತಮಭಿಮುಖೀ ಭೂತಃ ॥
[ರತ್ನಾವಳಿ, ನಾಟಕದಿಂದ ಉದಾಹರಿಸಲಾಗಿದೆ.]

೩೩. ಸಾಹಿತ್ಯದರ್ಪಣ, [೬, ೨೩]

೩೪. ವಿಶಾಖದತ್ತ, ಮುದ್ರಾರಾಕ್ಷಸ ನಾಟಕವು ಉದ್ಘಾತ್ಯಕಕ್ಕೆ ಉದಾಹರಣೆಯಾಗಿದೆ.

೩೫. ರತ್ನಾವಳಿ, ದ್ವೀಪಾದನ್ಯಾಸ್ಮಾದಪಿ ಪದ್ಯ ಉದಾಹರಣೆ ಆಗಿದೆ.

೩೬. ಕಾಳಿದಾಸ, ಶಾಕುಂತಲ ನಾಟಕ ಉದಾಹರಣೆಯಾಗಿದೆ.

೩೭. ಸಾಹಿತ್ಯ ದರ್ಪಣ, ಪ್ರಸ್ತಾವನೆಯ ಮುಂದಿನ ಕಾರಿಕೆ [೬ನೇ ಪರಿಚ್ಛೇದ]

೩೮. ರತ್ನಾವಳಿ ನಾಟಕದಿಂದ ಆರಿಸಲಾಗಿದೆ.

೩೯. ರಕ್ತಪ್ರಸಾಧಿತಭುವಃ ಕ್ಷತವಿಗ್ರಹಾಶ್ಚ ಸ್ವಸ್ಥಾ ಭವಂತು ಕುರುರಾಜಸುತಾ ಸ್ಸಭೃತ್ಯಾಃ ।

[ವೇಣಿ ಸಂಹಾರದಿಂದ, ಉದಾಹರಿಸಲಾಗಿದೆ.]

೪೦. ಭಗ್ನಂ ಭೀಮೇನ ಭವತೋ ಮರುತಾ ರಥಕೇತನಮ್ ।
ಪಾತಿತಂ ಕಿಂಕೀಣೀಜಾಲಬದ್ಧಾಕ್ರಂದಮಿಯ ಕ್ಷಿತೌ ॥

[ವೇಣಿಸಂಹಾರ, ದ್ವಿತಿಯಾಂಕ]

೪೧ 'ರಾಮಾಭಿನಂದ'ದಲ್ಲಿ ಕ್ಷಪಣಿಕಕಾಪಲಿಕರು ಭಾಗವಹಿಸುವುದನ್ನು ಕಾಣಬಹುದು ಇಂದು ಮಿಶ್ರವಿಷ್ಕಂಭಕ್ಕೆ ಉದಾಹರಣೆಯಾಗಿದೆ.

೪೨. 'ಮಾಲತೀಮಾಧವ' ಸ್ಮಶಾನದಲ್ಲಿ ಕಪಾಲಕುಂಡಲೆಯು ಭಾಗವಹಿಸುವುದು ಶುದ್ಧವಿಷ್ಕಂಭಕ್ಕೆ ಉದಾಹರಣೆಯಾಗಿದೆ.

೪೩. 'ವೇಣಿಸಂಹಾರ'ದ 'ಅಶ್ವತ್ಥಾಮಾಂಕದಲ್ಲಿ' ಬರುವ ರಾಕ್ಷಸರಿಬ್ಬರು ರಂಗಸ್ಥಳಕ್ಕೆ ಬಂದು ವ್ಯವಹರಿಸುವುದು ಪ್ರವೇಶಕವಾಗಿದೆ.

೪೪. ಮಹಾವೀರಚರಿತದ ನಾಲ್ಕನೇ ಅಂಕದ ಮೊದಲು

೪೫. ಮಹಾವೀರಚರಿತದ ಎರಡನೇ ಅಂಕದ ಕೊನೆಯಲ್ಲಿ

೪೬. ರತ್ನಾವಳಿಯಲ್ಲಿ ವತ್ಸರಾಜನಿಗೆ ರತ್ನಾವಳಿಯು ದೊರೆಯುವುದಕ್ಕೆ ದೈವಾನುಕೂಲದಿಂದ ಕೂಡಿದ ಯೌಗಂಧರಾಯಣನ ವ್ಯಾಪರವೇ 'ಬೀಜ' ಎನಿಸಿದೆ.

೪೭. ವೇಣಿ ಸಂಹಾರದಲ್ಲಿ ಭೀಮನ ವೃತ್ತಾಂತ, 'ಶಾಕುಂತಲ'ದಲ್ಲಿ ವಿದೂಷಕನ ವೃತ್ತಾಂತ 'ಪತಾಕೆ' ಎನಿಸಿದೆ.

೪೮. ಭರತನು ಹೇಳಿದ್ದಾನೆ.

೪೯. ರತ್ನಾವಳಿಯನ್ನು ಅಂತಃಪುರದಲ್ಲಿ ಇರಿಸುವುದಕ್ಕೆ ಯೌಗಂಧರಾಮಣನಿಗೆ ಇದ್ದ ಉತ್ಕಟವಾದ ಇಚ್ಛೆಯನ್ನ ಆರಂಭ ಎನ್ನಲಾಗಿದೆ.

೫೦. ರತ್ನಾವಳಿ ೩ನೇ ಅಂಕದಲ್ಲಿ ಬಟ್ಟೆಗಳನ್ನು ಬದಲಾಯಿಸುವುದು, ನಾಯಕನನ್ನು ಹುಡುಕಿಕೊಂಡು ಹೋಗುವುದು ಮೊದಲಾದ ಸಮಾಗಮದ ಉಪಾಯಗಳು. ಪ್ರಾಪ್ತ್ಯಾಶೆಯಾಗಿದೆ.

೫೧. ಸಾಹಿತ್ಯದರ್ಪಣ, [೬, ೩೦]

೫೨. ಸಾಹಿತ್ಯದರ್ಪಣ, [೬ನೇ ಪರಿಚ್ಛೇದ]

೫೩. ೧ರತ್ನಾವಳಿ'ಯ ಪ್ರಥಮಾಂಕದಲ್ಲಿ 'ಮುಖಸಂಧಿ' ಕಂಡು ಬರುತ್ತದೆ.

೫೪. ವೇಣಿಸಂಹಾರ, ನಾಟಕದ ಯುದ್ಧವೃಂತ್ತಾದಿಂದ ಆರಿಸಲಾಗಿದೆ.

೫೫. ವೇಣಿಸಂಹಾರ ನಾಟಕದ ಯುದ್ಧವೃತ್ತಾಂತ

೫೬. ಕುಪಿತೇನ ಯಥಾ ಮಮ ಚಂದ್ರಕಲಾಯಾಂ ಚಂದ್ರಕಲಾ ವರ್ಣನೇ 'ನೇಯಂ ತಾರುಣ್ಯಸ್ಯ ವಿಲಾಸಃ' [ 'ವೇಣಿಸಂಹಾರ' ನಾಟಕದ ಯುದ್ಧವೃತ್ತಾಂತ]

೫೭. ಯಷ್ಮಾನ್ ಪ್ರೇಪಯತಿ ಕ್ರೋಧಾಲ್ಲೋಕೇ ಶತುಕುಲಕ್ಷಯಃ ।
ನಲಜ್ಜಯಿತಿ ದಾರಾಣಂ ಸಭಾಯಾಂ ಕೇಶಕರ್ಷಣಮ್ ॥
('ವೇಣಿಸಂಹಾರ' ನಾಟಕದ 'ಯುದ್ಧವೃತ್ತಾಂತ')

೫೮. 'ಮಥ್ನಾಮಿ ಕೌರವಶತಂ ಸಮರೇ ನ ಕೋಪಾತ್' ಇತ್ಯಾದಿ ಶುತ್ವ ದ್ರೌಪದೀ ಸಹರ್ಷಂ ನಾಥ ಅಶ್ರುತಪೂರ್ವಂ ಖಲ್ವೇತದ್ವ ಚನಂ, ತತ್ಪುನಃ ಪುನರ್ಭಣ ಇತಿ
(ವೇಣಿಸಂಹಾರ ನಾಟಕದ 'ಯುದ್ಧ ವೃತಾಂತ')

೫೯. ಸಾಹಿತ್ಯದರ್ಪಣ [೬ನೇ ಪರಿಚ್ಛೇದ]

೬೦. 'ರತ್ನಾವಳಿ' ನಾಟಕದ ಎರಡನೆ ಅಂಕ

೬೧. ಕಾಳಿದಾಸನ 'ಶಾಂಕುತಲ' ನಾಟಕದಿಂದ ಉದಾಹರಿಸಲಾಗಿದೆ.

೬೨. 'ಶಾಕುಂತಲ' ನಾಟಕದಿಂದ ಉದಾಹರಿಸಲಾಗಿದೆ.

೬೩. 'ಶಾಕುಂತಲ' ನಾಟಕದಿಂದ ಉದಾಹರಿಸಲಾಗಿದೆ.

೬೪. 'ರತ್ನಾವಳಿ' ನಾಟಕದಿಂದ ಉದಾಹರಿಸಲಾಗಿದೆ.

೬೫. 'ರತ್ನಾವಳಿ' ನಾಟಕದಿಂದ ಉದಾಹರಿಸಲಾಗಿದೆ.

೬೬. ಉತ್ತರೋತ್ತರಂ ವಾಕ್ಯಂ ಪ್ರಗಮನಂ ಸ್ಯಾತ್, ಉರ್ವಶಿ ಜಯತು ಮಹಾರಾಜಃ ರಾಜಾ ಮಯಾ ನಾಮ ಜಿತಂ ಯಸ್ಯೈತ್ವಯಾ ಜಯ ಉದೀರ್ಯತೇ [ಕಾಳಿದಾಸ, ವಿಕ್ರಮೋರ್ಶಿಯ]

೬೭. ಮಹಾವೀರಚರಿತದ ಮೂರನೇ ಅಂಕ

೬೮. ರತ್ನಾವಳಿ ನಾಟಕದ ದ್ವಿತೀಯಾಂಕದಲ್ಲಿ ಅಭಿನವಗುಪ್ತನು ವರ್ಣಸಂಹಾರದ ಬಗ್ಗೆ ತಿಳಿಸಿದ್ದಾರೆ.

೬೯. ಸಾಹಿತ್ಯದರ್ಪಣ [೬ನೆ ಪರಿಚ್ಛೇದ]

೭೦. ರತ್ನಾವಳಿ, ೨, ೩ನೆ ಅಂಕ

೭೧. ವೇಣಿಸಂಹಾರ, ೩ನೆ ಅಂಕ

೭೨. 'ಚಂಡಕೌಶಿಕ'ದಿಂದ ಉದಾಹರಿಸಲಾಗಿದೆ.

೭೩. ವೇಣಿಸಂಹಾರ, ಅಶ್ವತ್ಥಾಮಾಂಕ

೭೪. ಶಾಕುಂತಲ, ನಾಟಕದಿಂದ ಉದಾಹರಿಸಲಾಗಿದೆ.

೭೫. ಜಾನಕೀರಾಘವ ನಾಟಕದಿಂದ ಉದಾಹರಿಸಲಾಗಿದೆ.

೭೬. ವೇಣಿಸಂಹಾರ, ೩ನೆ ಅಂಕ

೭೭. 'ಚಂಡಕೌಶಿಕ'ದಿಂದ ಉದಾಹರಿಸಲಾಗಿದೆ.

೭೮. ಸಾಹಿತ್ಯದರ್ಪಣ, ೬ನೆ ಪರಿಚ್ಛೇದ

೭೯. ಅನಸೂಯಾ ಪ್ರಿಯಂವದೇ ಯದ್ಯಪಿ ಗಾಂಧರ್ವೇಣ ವಿವಾಹೇನ ನಿವೃತ್ತ ಕಲ್ಯಾಣಾ

ಪ್ರಿಯಸಖೀ ಶಕುಂತಲಾ ಅನುರೂಪ ಭರ್ತ್ವಭಾಗಿನೀ ಸಂವೃತ್ತೇತಿ ನಿರ್ವ್ಯತಂ ಮೇ ಹೃದಯಂ ತಥಾಪಿ ಏತಾವ ಚ್ಚಿಂತನೀಯಮ್ [ಶಾಕುಂತಲ ನಾಟಕದ ನಾಲ್ಕನೆಯ ಅಂಕ]

೮೦. ವೇಣಿಸಂಹಾರದಿಂದ ಉದಾಹರಿಸಲಾಗಿದೆ.

೮೧. ವೇಣಿಸಂಹಾರದಿಂದ ಉದಾಹರಿಸಲಾಗಿದೆ.

೮೨. ಮೃಚ್ಛಕಟಿಕದಿಂದ ಉದಾಹರಿಸಲಾಗಿದೆ.

೮೩. ಮಾಲತೀಮಾಧವ ದಿಂದ ಉದಾಹರಿಸಲಾಗಿದೆ.

೮೪. ಭವಬೂತಿಯ ಉತ್ತರರಾಮಚರಿತ ದಿಂದ ಉದಾಹರಿಸಲಾಗಿದೆ.

೮೫. ಪ್ರಭಾವತಿನಾಟಕ ದಿಂದ ಉದಾಹರಿಸಲಾಗಿದೆ.

೮೬. ವೇಣಿಸಂಹಾರ ದಿಂದ ಉದಾಹರಿಸಲಾಗಿದೆ.

೮೭. ಸಾಹಿತ್ಯದರ್ಪಣ, ೬ನೆ ಪರಿಚ್ಛೇದ

೮೮. ಕಂಚುಕೀ ಮಹಾರಾಜ! ವರ್ಧಸೇ ಆಯಂ ಖಲು ಭೀಮಸೇನೋ ದುರ್ಯೋಧನಕ್ಷತ್ರಚಾರುಣೀಕೃತಸರ್ವಶರೀರೋ ದುರ್ಲಕ್ಷ್ಯವೃತ್ತಿಃ

[ವೇಣಿಸಂಹಾರ, ಯುದ್ಧವೃತ್ತಾಂತಕ]

೮೯. ಭೀಮಃ ಭವತಿ! ಯಜ್ಞವೇದಿಸಂಭವೇ, ಸ್ಮರತಿ ಭವತೀ ಯನ್ಮಯೋಕ್ತಂ ಚಂಚದ್ಭುಜೇ [ವೇಣಿಸಂಹಾರದಿಂದ ಉದಾಹರಿಸಲಾಗಿದೆ.]

೯೦. 'ಭೀಮ ಪಾಂಚಾಲಿ! ನ ಖಲು ಮಯಿ ಜೀವತಿಸಂಹರ್ತವ್ಯದುಶಾಸನವಿಲುಖಿತ ವೇಣಿರಾತ್ಮಪಾನೀಭ್ಯಾಮ್ ಶಿಷ್ಟ! ರ್ವಯವೇವಾಹಂ ಸಂಹಾರಾಮಿಃ

[ವೇಣಿಸಂಹಾರದಿಂದ ಉದಾಹರಿಸಲಾಗಿದೆ.]

೯೧. ವಾಸವದತ್ತಾ ರತ್ನಾವಳೀಮಾಲಿಂಗ್ಯ ಸಮಾಶ್ವ ಸಿಹಿ ಭಗಿನಿ ಸಮಾಶ್ವ ಸಿಹಿ

['ರತ್ನಾವಳಿ' ನಾಟಕದಿಂದಉದಾಹರಿಸಲಾಗಿದೆ.]

೯೨. ವೇಣಿಸಂಹಾರ, ತೃತಿಯಾಂಕ

೯೩. ರುದ್ರಟನು 'ಕಾವ್ಯಾಲಂಕಾರ'ದಲಿ ಆಯಾಯ ಅಂಗಗಳನ್ನು ಅಲ್ಲಲ್ಲಿಯೇ ಉಪಯೋಗಿಸಬೇಕೆಂದು ಹೇಳಿರುವನು.

೯೪. ಸಾಹಿತ್ಯದರ್ಪಣ [೬, ೧೫೫]

೯೫. ವಾಸವದತ್ತಾ ಫಲಮುದ್ದಿಶ್ಯಸಹಾನಂ ಏಷಾಪರಾತವ ಸಮಿಪೇ ಯಾ ಲಿಖಿತಾ, ಏಕತ್ ಕಿಮಾರ್ಯವಂಸತಸ್ಯ ವಿಜ್ಞಾನಮ್

[ರತ್ನಾವಳಿ ನಾಟಕದಿಂದ ಉದಾಹರಿಸಲಾಗಿದೆ.]

೯೬. ಮಾಲವಿಕಾಗ್ನಿಮಿತ್ರ ದಿಂದ ಉದಾಹರಿಸಿದೆ.

೯೭. ಮಾಲತೀಮಾಧವ ದಿಂದ ಉದಾಹರಿಸಿದೆ.

೯೮. ಮಾಲತೀಮಾಧವ ದಿಂದ ಉದಾಹರಿಸಲಾಗಿದೆ.

೧೦೦. ಮುದ್ರಾರಾಕ್ಷಸ ನಾಟಕದಲ್ಲಿ ಮಂತ್ರದಿಂದ ಭೇದಿಸುವುದನ್ನು ಕಾಣಬಹುದು.

೧೦೧. ಮಹಾವೀರಚರಿತದಿಂದ ಉದಾಹರಿಸಿದೆ.

೧೦೨. ವೇಣಿಸಂಹಾರದಿಂದ ಉದಾಹರಿಸಿದೆ.

೧೦೩. ಮಾಲತಿಮಾಧವದಿಂದ ಉದಾಹರಿಸಿದೆ.

೧೦೪. ಕೃತ್ಯರಾವಣದ ಆರನೆಯಅಂಕದಿಂದ ಉದಾಹರಿಸಲಾಗಿದೆ.

೧೦೫. ರತ್ನಾವಳಿ ನಾಟಕದಿಂದ ಉದಾಹರಿಸಲಾಗಿದೆ.

೧೦೬. ಭರತನ ನಾಟ್ಯಶಾಸ್ತ್ರ [೧೬ನೆ ಅಧ್ಯಾಯ]

೧೦೭. ಅಭಿನವಗುಪ್ತ ಅಭಿನವ ಭಾರತಿ

೧೦೮. V. Raghavan, "The History of Laksana" (Some Concepts, PP147) ಪದಿನಾಲ್ಲವಲಂಕ್ರಿಯಾರಚನೆ ಮೂವತ್ತಾರು ನೇರ್ಪಟ್ಟುವು ಎಂದು ವಾಕ್ಸಂದರಿಯನ್ನು ಕುರಿತು ರನ್ನನು ಹೇಳಿರುವುದು ಭರತನ ೩೬ ಭೂಷಣಗಳನ್ನು ನೆನೆದೇ ಇರಬಹುದೇ।[ರನ್ನ, ಗದಾಯುದ್ಧ, ೧, ೭]

೧೦೯. 'ಶಾಕುಂತಲ' ನಾಟಕದಿಂದ ಉದಾಹರಿಸಲಾಗಿದೆ.

೧೧೦. 'ಯಯಾತಿವಿಜಯ'ದಿಂದ ಉದಾಹರಿಸಲಾಗಿದೆ.

೧೧೧. ಅಧರಃ ಕಿಸಲಯ ರಾಗಃ ಕೋಮಲವಿಟಪಾನುಕಾರಿಣೀಬಾಹೂ ।
ಕುಸುಮಮಿವ ಲೋಭನಿಯಂ ಯೌವನಮಂಗೇಷು ಸನ್ನದ್ದಮ್ ॥ [ಕಾಳಿದಾಸ, ಶಾಕುಂತಲ]

೧೧೨. ಕಾಳಿದಾಸನ 'ವಿಕ್ರಮೋರ್ವಶೀಯ ನಾಟಕದಿಂದ ಉದಾಹರಿಸಲಾಗಿದೆ.

೧೧೩. ದುರ್ಯೋಧನ ಭ್ರಂತ್ಯಾ ಭೀಮಂ ಪ್ರತಿ ಯುಧಿಷ್ಠಿರಃ ದುರಾತ್ಮನ್
ದುರ್ಯೋಧನಹತಹಕ! ವೇಣಿಸಂಹಾರದಿಂದ ಉದಾಹರಿಸಲಾಗಿದೆ.

೧೧೪. ರಾಜಾ– ಪ್ರಿಯೇ! ಅಂಗಾನಿ ಖೇದಯಸಿ ಕಿಂ ಶಿರೀಷಕುಸುಮ
ಪರಿಪೇಲವಾದಿ ಮುಧಾ । [ಚಂದ್ರಕಲಾ ನಾಟಕದಿಂದ ಉದಾಹರಿಸಲಾಗಿದೆ.]

೧೧೫. ಉದೇತಿ ಪೂರ್ವ ಕುಸುಮಂ ತತಃ ಫಲಂ
ಘನೋಧಯಃ ಪ್ರಾತ್ ತದನಂತರಂ ಪಯಃ ನಿಮಿತ್ತ
ನೈಮಿತ್ತಿಕಯೋರಯಂ ವಿಧಿಸ್ತವ ಪುಸಾದಸ್ಯ ಪುರಸ್ತು ಸಂಪದಃ
[ಶಾಕುಂತಲ, ನಾಟಕದಿಂದ ಉದಾಹರಿಸಲಾಗಿದೆ]

೧೧೬. ಶಾಕುಂತಲ, ನಾಟಕದಿಂದ ಉದಾಹರಿಸಲಾಗಿದೆ.

೧೧೭. ಕಂಚುಕೀ ಹಾ ದೇವೀ! ಕುಂತಿ! ರಾಜಭವನ ಪತಾಕೆ! [ವೇಣಿ ಸಂಹಾರ'ದಿಂದ ಆರಿಸಲಾಗಿದೆ.]

೧೧೮. ಭೋಃ ಸತ್ಯವಾದಿನ್! ಅಭ್ಯುಪಗತಂ ತಾವದ ಸ್ಮಾಭಿಃ
ಏವಂವಿಧಾ ಏವ ವಯಮ್. ಕಿ ಪುನರಿಮಾಮಭಿಸಂದಾಯ
ಲಭ್ಯತೇಶಿ ರ್ಜಾರನ್ನ ನಿಪಾತಃ ಶಾಕುಂತಲ ನಾಟಕದಿಂದ ಉದಾರಿತವಾಗಿದೆ.

೧೧೯ ಚಾರುಣ ಸ್ಫುರಿತೇನಾಯಮಪರಿಕ್ಷತ ಕೋಮಲಃ ॥
ಪೀಪಾಸತೋಮಮಾನುಜ್ಞಾಂ ದದಾತೀವ ಪ್ರಯೋಽಧರಃ ॥
['ಶಾಕುಂತಲ', ನಾಟಕದಿಂದ ಉದಾಹರಿಸಲಾಗಿದೆ.]

೧೨೦. ತತ್ಪಶ್ಯೇಯ ಮನಂಗಮಂಲಗೃಹ ಭುಯೋಽಪಿತಸ್ಯಾಮುಖಮ್
[ಮಾಲತೀಮಾಧವದಿಂದ ಉದಾಹರಿಸಲಾಗಿದೆ]

೧೨೧. ವೇಣಿಸಂಹಾರ, ಅಶ್ವತ್ಥಾಮಾಂಕದಿಂದ ಉದಾಹರಿಸಲಾಗಿದೆ.

೧೨೨. ಬಾಲರಾಮಾಯಣದಿಂದ ಉದಾಹರಿಸಲಾಗಿದೆ.

೧೨೩. ನ ಯುಕ್ತಮಾಶ್ರಮವಾಸಿನೋ ಜನಸ್ಯ ಅಕೃತ ಸತ್ಕಾರ
ಮತಿಥಿವಿಶೇಷ ಮುಜಿತ್ವಾ ಸ್ವಚ್ಛಂದತೋ ಗಮನಮ್
['ಶಾಕುಂತಲ' ನಾಟಕದಿಂದ ಉದಾಹರಿಸಲಾಗಿದೆ.]

೧೨೪. ಸಾಹಿತ್ಯದರ್ಪಣ, [೬ರನೆ ಪರಿಚ್ಛೇಧ]

೧೨೫. ಸಾಹಿತ್ಯದರ್ಪಣ [೬ನೆ ಪರಿಚ್ಛೇಧ]

೧೨೬. ನಾರಾಯಣ ಪಂಡಿತ, ಭಾಷಾರ್ಣವ ನಾರಾಯಣ ಪಂಡಿತನು ವಿಶ್ವನಾಥನ ತಾತನೆಂದು ವಿಶ್ವನಾಥನು ಸಾಹಿತ್ಯದರ್ಪಣದಲ್ಲಿ ಹೇಳಿಕೊಂಡಿದ್ದಾನೆ.

೧೨೭. ಸಾಹಿತ್ಯದರ್ಪಣ, ೬ನೆ ಪರಿಚ್ಛೇಧ

೧೨೮. ಹರ್ಷ, ನಾಗಾನಂದ ನಾಟಕ

೧೨೯. ಉಪಲಕ್ಷಣಂ ಚೈತತ್ ಕ್ರೋಧತ್ ಭ್ರಾಂತ ಸ್ಯಾಪಿ ಪ್ರಾಕೃತ ಪಠನಂ ಸ್ಥಿತಪಾಠ್ಯಮ್. ಅಭಿನವಗುಪ್ತನು, ಅಭಿನವಭಾರತಿಯಲ್ಲಿ ಈ ರೀತಿ ಹೇಳಿದ್ದಾನೆ.

೧೩೦. ಭರತನ ನಾಟ್ಯಶಾಸ್ತ್ರ, [೧೬ನೆ ಆಧ್ಯಾಯ]

೧೩೧. ಸಾಹಿತ್ಯದರ್ಪಣ, [೬ನೆ ಪರಿಚ್ಛೇದ]

೧೩೨. ಮೃಚ್ಛಕಟಿಕದಲ್ಲಿ ಬ್ರಾಹ್ಮಣನಾಗಿದ್ದಾನೆ.

೧೩೩. ಮಾಲತಿಮಾಧವದಲ್ಲಿ ಮಂದಿನಾಯಕನಗಿದ್ದಾನೆ.

೧೩೪. ಮೃಚ್ಛಕಟಿಕ, ಪುಷ್ಪಭೂಷಿತದಲ್ಲಿ ಇಬ್ಬರು ನಾಯಿಕೆಯರನ್ನು ಕಾಣಬಹುದು.

೧೩೫. ಸಾಹಿತ್ಯದರ್ಪಣ, [ಆರನೇ ಪರಿಚ್ಛೇದ]

೧೩೬. 'ಲೀಲಾಮಧುಕರ' ಎಂಬ ಪ್ರಕರಣದಲ್ಲಿ ಕಾಣಬಹುದು.

೧೩೭. 'ಸಾಹಿತ್ಯದರ್ಪಣ', [೬ನೆ ಪರಿಚ್ಛೇದ]

೧೩೮. 'ಸೌಂಗಧಿಕಾಹರಣ' ಉದಾಹರಣೆಯಾಗಿದೆ.

೧೩೯. ಸಮುದ್ರಮಥನ ರೂಪಕವು ಸಮವಕಾರ ರೂಪಕಕ್ಕೆ ಉದಾಹರಣೆಯಾಗಿದೆ.

೧೪೦. ಸಾಹಿತ್ಯದರ್ಪಣ [೬ನೆ ಪರಿಚ್ಛೇದ]

೧೪೧. ತ್ರಿಪುರದಾಹ ಎಂಬ ರೂಪಕವು ಡಿಮಕ್ಕೆ ಉದಾಹರಣೆಯಾಗಿದೆ.

೧೪೨. ಸಾಹಿತ್ಯದರ್ಪಣ, [೬ನೆ ಪರಿಚ್ಛೇದ]

೧೪೩. ಕುಮಾಶೇಖರವಿಜಯ, ಈ ರೂಪಕವನ್ನು ಕಾಣಬಹುದಾಗಿದೆ

೧೪೪. ಸಾಹಿತ್ಯದರ್ಪಣ [೬ನೆ ಪರೀಚ್ಛೇದ]

೧೪೫. ಶರ್ಮಿಷ್ಟಾಯಯಾತಿ, ಎಂಬ ರೂಪಕದಲ್ಲಿ ಕಾಣಬಹುದು.

೧೪೬. ಸಾಹಿತ್ಯದರ್ಪಣದಲ್ಲಿ ಆರನೇ ಪರಿಚ್ಛೇದ.

೧೪೭. ವಿಕ್ರಮೋರ್ವಶಿಯದಿಂದ ಉದಾಹರಿಸಲಾಗಿದೆ.

೧೪೮. ವಿಕ್ರಮೋರ್ವಶಿಯದಿಂದ ಉದಾಹರಿಸಲಾಗಿದೆ.

೧೪೯. ವೇಣಿಸಂಹಾರದಲ್ಲಿ, ದುರ್ಯೋಧನನಿಗೆ ಗಾಂಧಾರಿಯು ಹೇಳುವ ಮಾತು ಅಸತ್ಪ್ರಲಾಪವಾಗಿದೆ.

೧೫೦. ಮಾಲವಿಕಾಗ್ನಿಮಿತ್ರದಿಂದ ಉದಾಹರಿಸಲಾಗಿದೆ.

೧೫೧. ಸಾಹಿತ್ಯದರ್ಪಣ ೬ನೆ ಪರಿಚ್ಛೇದದಿಂದ.,

೧೫೨. ಕಂದರ್ಪಲೀಲಿ ಎಂಬುದು ಈ ಬಗೆಯ ಪ್ರಹಸವಾಗಿದೆ.

೧೫೩. 'ವಿಕೃತ ಪ್ರಹಸವನ್ನು ಸಂಕೀರ್ಣವೆಂಬ ಪ್ರಹಸನದಲ್ಲಿ ಸೇರಿಸಿರುವುದರಿಂದ ಭರತನು ಇದನ್ನು ಬೇರೆಯಾಗಿ ಹೇಳಿಲ್ಲ. ನಾಟ್ಯಶಾಸ್ತ್ರ, [೧೬ನೆ ಅಧ್ಯಾಯ]

೧೫೪. ರತ್ನಾವಳೀ, ವಿಧ್ಧಶಾಲಂಜಿಕೆ, ನಾಟಿಕೆಗಳು

೧೫೫. ವಿಕ್ರಮೋರ್ವಶೀಯದಲ್ಲಿ ಐದುಅಂಕಗಳು 'ಸ್ತಂಭಿತರಂಭ'ದಲ್ಲಿ ಏಳು ಅಂಕಗಳಿಂದ ಕೂಡಿದ ತ್ರೋಟಕವೆನಿಸಿದೆ.

೧೫೬. ರೈವತಮದನಿಕೆ, ಎಂಬುದು ಉಪರೂಪಕವಾಗಿದೆ.

೧೫೭. ಕರ್ಪೂರ ಮಂಜರಿ, ಸಟ್ಟಕವೆಂಬ ಉಪರೂಪಕವಾಗಿದೆ.

೧೫೮. ಶೃಂಗಾರತಿಲಕ', 'ಪ್ರಸ್ಥಾನವೆಂಬ ಉಪರೂಪಕ್ಕೆ ಉದಾಹರಣೆಯಾಗಿದೆ.

೧೫೯. ದೇವಿಮಹಾದೇವ, 'ಉಲ್ಲಪ್ಯ'ಕ್ಕೆ ಉದಾಹರಣೆಯಾಗಿದೆ.

೧೬೦. ಯಾದವೋದಯ, 'ಕಾವ್ಯ'ಕ್ಕೆ ಉದಾಹರಣೆಯಾಗಿದೆ.

೧೬೧. ವಾಲಿವಧ, ಪ್ರೇಂಖಣಕ್ಕೆ ಉದಾಹರಣೆಯಾಗಿದೆ.

೧೬೨. ಮೇನಕಾಹಿತ, ರಾಸಕಕ್ಕೆ ಉದಾಹರಣೆಯಾಗಿದೆ.

೧೬೩. ಮಾಯಾಕಾಪಾಲಿಕ, ಸಂಲಾಪಕಕ್ಕೆ, ಉದಾಹರಣೆಯಾಗಿದೆ.

೧೬೪. 'ದುರ್ಮಲ್ಲಿಕೆ' ಉಪರೂಪ ರೂಪಕ್ಕೆ ಉದಾಹರಣೆಯಾಗಿದೆ. 'ಭಿಂದುಮತಿ;

೧೬೫. 'ಕಾಮದತ್ತೇ ಎಂಬುದು 'ಭಾಣಿಕೆ'ಯ ಉಪರೂಪಕ್ಕೆ ಉದಾಹರಣೆಯಾಗಿದೆ.

೧೬೬. ಸಾಹಿತ್ಯದರ್ಪಣ ಉಪರೂಪಕದ ಮುಂದಿನ ಕಾರಿಕೆ [೬ನೆ ಪರಿಚ್ಛೇದ]

೧೬೭. ಸಾಹಿತ್ಯದರ್ಪಣದ ಉದಾಹರಿತ ಶ್ಲೋಕ

೧೬೮. ಸಾಹಿತ್ಯದರ್ಪಣದ ಉದಾಹರಿತ ಶ್ಲೋಕ

೧೬೯. 'ಸಾಹಿತ್ಯದರ್ಪಣ' ಶ್ರವ್ಯಕಾವ್ಯದ ಮುಂದಿನ ಕಾಣಿಕೆ [೬ನೆ ಪರಿಚ್ಛೇದ]

೧೭೦. ಮಾಘ, ಕುಮಾರಸಂಭವ, ರಘುವಂಶ, ಕೀಚಕನವಧೆ, ಭಾರವಿ, ಮಾರ್ಕಂಡೇಯ ಪುರಾಣ

೧೭೧. ಸೇತುಬಂಧ, ಛಂದಸ್ಸಿನಿಂದ ಕೂಡಿದ ಕಾವ್ಯಕ್ಕೆ ಉದಾಹರಣೆಯಾಗಿದೆ.

೧೭೨. ಕಾಳಿದಾಸ, ಮೇಘದೂತ

೧೭೩. ಮಹಾಭಾರತ, ರಾಮಯಣಾ ಇತ್ಯಾದಿ ಮಹಾಕಾವ್ಯಗಳು.

೧೭೪. ಭಾಣಭಟ್ಟ, ಕಾದಂಬರಿ

೧೭೫. ಕಥೆ ಮತ್ತು ಆಖ್ಯಾಯಿಕಾ ಒಂದೇ ಪ್ರಕಾರವಾಗಿದ್ದು ಹೆಸರು ಬೇರೆ ಬೇರೆಯಾಗಿದೆ ಎಂದಿದ್ದಾನೆ. [ದಂಡಿ, ಕಾವ್ಯಾದರ್ಶ, ೧ನೆ ಪರಿಚ್ಛೇದ]

೧೭೬. ಹರ್ಷಚರಿತವು ಈ ಬಗೆಯ 'ಆಖ್ಯಾಯಿಕೆ'ಯಾಗಿದೆ.

೧೭೭. ದೇಶರಾಜಚರಿತ, ಚಂಪೂಕಾವ್ಯವಾಗಿದೆ.

೧೭೮. ಬಿರುದುಮಣಿಮಾಲೆ ಇದಕ್ಕೆ ಉದಾಹರಣೆಯಾಗಿದೆ.

೧೭೯. ಪ್ರಶಸ್ತಿ ರತ್ನಾವಳಿ 'ಕರಂಭ'ಕ್ಕೆ ಉದಾಹರಣೆಯಾಗಿದೆ.

೧೮೦. ರುದ್ರಟ, ಕಾವ್ಯಲಂಕಾರ [೧೨ನೆ ಅಧ್ಯಾಯ]

೧೮೧. ವಿಧ್ಯಾನಾಥ, ಪ್ರತಾಪರುದ್ರಯಶೋಭೂಷಣ

೧೮೨. ಅಭಿನಯತ್ರಯಂ ಗೀತಾತೋದ್ಯೇ ಚೇತಿ ಪಂಚಾ ಗಂ ನಾಟ್ಯಂ [ಅಭಿನವಗುಪ್ತ, ಅಭಿನವಭಾರತಿ]

೧೮೩. ದಂಡಿ ಕಾವ್ಯಾದರ್ಶ, [೧, ೩೧] ಭಾಮಹ, ಕಾವ್ಯಾಲಂಕಾರ [೨, ೪]

## ಅಧ್ಯಾಯ – ೪

# ದೋಷ ಗುಣಗಳ ಸ್ವರೂಪ

# ದೋಷಗಳ ಸ್ವರೂಪ

ದೋಷಗಳೆಂದರೆ ಕಾವ್ಯದಲ್ಲಿ ರಸಾದಿಗಳಾದ ರಸ, ಭಾವ, ಅವುಗಳ ಅಭಾಸ, ಭಾವಸಂಧಿ, ಭಾವಪ್ರಶಮ, ಭಾವಶಬಲತೆ, ಇವುಗಳಲ್ಲಿ ಯಾವುದೊಂದನ್ನಾಗಲೀ ನೇರವಾಗಿಯೋ, ಬೇರೊಂದರ ಮೂಲಕವೂ ಸಭ್ಯರಿಗೆ ಆಸ್ವಾದನ ಮಾಡಿಕೊಡದೇ ಇರುವ ಅಂಶವನ್ನು 'ದೋಷ' ಎಂದು ಕರೆಯಲಾಗಿದೆ. ಅಂದರೆ ರಸಾನುಭವಕ್ಕೆ ಅಡಚಣೆಯನ್ನು ತಂದೊಡ್ಡುವ ಧರ್ಮವೇ 'ದೋಷ' ಎನ್ನಲಾಗಿದೆ. ಭರತನು[೧] ಹತ್ತು ದೋಷಗಳನ್ನು, ದಂಡಿಯು[೨] ಸಹ ಹತ್ತು ದೋಷಗಳನ್ನು ವಾಮನನು[೩] ಆರು ಉಪಮಾದೋಷಗಳನ್ನು ರುದ್ರಟನು[೪] ಹತ್ತು ಅರ್ಥದೋಷಗಳು ನಾಲ್ಕು ಉಪಮಾದೋಷ ಗಳನ್ನು ಮಹಿಮಭಟ್ಟನು[೫] ಆರ್ಥಕ್ಕೆ ಶಬ್ದಕ್ಕೆ ಸಂಬಂಧಿಸಿದ ಅಂತರಂಗ ಮತ್ತು ಬಹಿರಂಗವೆಂದು ಎರಡು ವಿಧವಾದ ಅನೌಚಿತ್ಯ ಹಾಗೂ ಬಹಿರಂಗ ಅನೌಚಿತ್ಯಕ್ಕೆ ಸಂಬಂಧಿಸಿದಂತೆ ವಿಧೇಯಾವಿಮರ್ಶೆ ಪ್ರಕ್ರಮಭೇದ, ಕ್ರಮಭೇದ, ಪಾನರುಕ್ತ್ಯ ವಾಚ್ಯಾವಚನ ಎಂಬ ಐದು ದೋಷಗಳನ್ನು ವ್ಯಕ್ತಿ ವಿವೇಕಕಾರನು ನಿರೂಪಿಸಿದ್ದಾನೆ. ಮಮ್ಮಟನು[೬] ಪದ, ವಾಕ್ಯ, ಅರ್ಥ ಮತ್ತು ರಸಗಳಿಗೆ ಸಂಬಂಧಿಸಿದ ದೋಷಗಳನ್ನು ವಿವರಿಸಿದ್ದಾನೆ. ದೋಷಗಳಿಗೆ ಸಂಬಂಧಿಸಿದಂತೆ ಭರತನು ಮೊದಲ ಪ್ರತಿಪಾದಿತನಾಗಿದ್ದಾನೆ. ಈತ ಹೇಳಿರುವ ಹತ್ತು ದೋಷಗಳನ್ನು ನಂತರ ಬಂದ ಅಲಂಕಾರಿಕರು ಸಾಂಪ್ರಾದಾಯಿಕವಾಗಿ ಹತ್ತು ದೋಷಗಳನ್ನೇ ಮುಂದುವರಿಸಿದರೂ ನಂತರ ಅಲಂಕಾರಿಕರು ಈ ಹತ್ತು ದೋಷಗಳನ್ನು ನಾಲ್ಕು ಐದು ಇತ್ಯಾದಿ ಸಂಖ್ಯೆಗಳಲ್ಲಿ ಇಳಿಸಿ. ಈ ಹತ್ತು ದೋಷಗಳನ್ನು ಅದರಲ್ಲಿ ಸಮನ್ವಯಗೊಳಿಸಿದ್ದಾರೆ.

ವಿಶ್ವನಾಥನು ಕಾವ್ಯದಲ್ಲಿ ಬರುವ ದೋಷಗಳನ್ನು ಐದು ವಿಧಗಳಲ್ಲಿ ಹೇಳಿದ್ದಾನೆ. ಅವು

**ರಸಾಪಕರ್ಷಕಾ ದೋಷಾಃ ತೇಪುನಃ ಪಂಚಧಾಮತಾಃ ।**
**ಪದೇ ಪದಾಂಶೇ ವಾಕ್ಯೇಽರ್ಥೇ ಸಂಭವಂತಿ ರಸೇಽಪಿಯತ್[೭]॥**

"ಪದದಲ್ಲೂ ಪದದ ಅವಯವಗಳೆನಿಸಿದ ಸುಪ್, ತಿಙ ಪ್ರತ್ಯಯಗಳಲ್ಲೂ, ವಾಕ್ಯದಲ್ಲೂ, ಅರ್ಥ, ರಸಗಳಲ್ಲೂ ದೋಷವು" ಸಂಭವಿಸುತ್ತವೆಂದು ಹೇಳಿದ್ದಾನೆ ಮತ್ತು ದುಃಶ್ರವತ್ವ, ಮೂರು ಬಗೆಯ ಅಶ್ಲೀಲತೆ, ಅನುಚಿತಾರ್ಥತ್ವ, ಅಪ್ರಯುಕ್ತತೆ, ಗ್ರಾಮ್ಯತೆ,

ಅಪ್ರತೀತತ್ವ, ಸಂದಿಗ್ಧತೆ, ನೇಯಾರ್ಥತ್ವ, ಅವವಾಚಕತ್ವ, ಕ್ಲಿಷ್ಟತ್ವ ವಿರುದ್ಧಮತಿಕಾರತ್ವ, ಅವಿಮೃಷ್ಟಾ ವಿಧೇಯಾಂಶತ್ವ ಈ ಹದಿಮೂರು ಬಗೆಯ ದೋಷಗಳು ಪದದಲ್ಲೂ, ವಾಕ್ಯದಲ್ಲೂ ಸಂಭವಿಸುತ್ತದೆ.

## ೧. ದುಃಶ್ರವತ್ವ

ಶಬ್ದದಲ್ಲಿ ಕರ್ಕಶವಾದ ಅಕ್ಷರಗಳಿರುವುದರಿಂದ ಕೇಳುವಾಗ ದುಃಖವನ್ನುಂಟು ಮಾಡುವ ದೋಷವನ್ನು 'ದುಃಶ್ರವತ್ವ' ಎಂದು ಕರೆಯಲಾಗಿದೆ. ಕೇಳುವಾಗ ದೋಷವನ್ನುಂಟು ಮಾಡುವುದೇ ಈ ಬಗೆಯ ದೋಷವಾಗಿದೆ. "ಕಾರ್ತಾರ್ಥ್ಯಂ ಯಾತು ತನ್ವಂಗೀ ಕದಾನಂಗವಶಂದದಾ[೮]" "ಮನ್ಮಥನಿಗೆ ಅಧೀನಳಾಗಿರುವ ಈಕೆಯು ಪ್ರಿಯನ ಸಂಪರ್ಕದಿಂದ ಯಾವಾಗ ಕೃತಾರ್ಥತೆಯನ್ನು ಹೊಂದಿಯಾಳು"! ಇಲ್ಲಿ ಕೃತಾರ್ಥ ಶಬ್ದದ ಮೇಲೆ ಭಾವಾರ್ಥದಲ್ಲಿ 'ಯತ್' ಪ್ರತ್ಯಯವನ್ನು ಹಚ್ಚಿದ್ದರಿಂದ ಕಾರ್ತಾರ್ಥ್ಯ ಎಂಬ ಪದವು ಸಿದ್ಧವಾಗಿದೆ. ಇದರಲ್ಲಿ ಕಠಿಣವಾದ ಅಕ್ಷರಗಳೆರಡು ಇರುವುದರಿಂದ ರಸವನ್ನು ಆಸ್ವಾದಿಸಲು ಇಚ್ಛಿಸುವ ಸಹೃದಯನಿಗೆ ಈ ಪದವನ್ನು ಕೇಳುವಾಗಲೇ ದುಃಖವಾಗುವುದರಿಂದ ರಸಾಸ್ವಾದವೇ ಆಗುವುದಿಲ್ಲ. ಹೀಗೆ ರಸಾಸ್ವಾದಕ್ಕೆ ಹಾನಿಯಾಗುವುದರಿಂದ ಇಲ್ಲಿ ದುಶ್ರಃವತ್ವ ಎಂಬ ದೋಷವಿದೆ.

## ೨. ಅಶ್ಲೀಲ

ಅಶ್ಲೀಲವು ವ್ರೀಡೆ, ಜುಗುಪ್ಸೆ, ಅಮಂಗಳವನ್ನು ಸೂಚಿಸುವುದರಿಂದ ಮೂರು ಬಗೆಯಾಗಿದೆ. "ದೃಪ್ತಾರಿವಿಜಯೇರಾಜನ್ ಸಾಧನಂ ಸುಮಹತ್ತವ[೯]", "ಎಲೈ ರಾಜನೇ, ಗರ್ವಿಷ್ಟರಾದ ಶತ್ರುಗಳನ್ನು ಜಯಿಸುವುದರಲ್ಲಿ ನಿನಗೆ ಸೈನ್ಯ, ಶಸ್ತ್ರ ಮೊದಲಾದ ಉಪಾಯಗಳೆಲ್ಲವೂ ಸಿದ್ಧವಾಗಿದೆ". ಇಲ್ಲಿ ಸಾಧನ ಪದವು ಲಜ್ಜೆಯನ್ನು ಸೂಚಿಸುತ್ತ ರಾಜನ 'ರತಿಭಾವ'ವನ್ನು ಅನುಭವಿಸಲಿಕ್ಕೆ ಅಡಚಣೆಯನ್ನು ತಂದೊಡ್ಡುತ್ತದೆ. "ಪ್ರಸಸಾರ ಶನೈರ್ವಾಯುರ್ವಿನಾ ಶೇ ತನ್ವಿ! ತೇ ಮುದಾ", "ಎಲೈ ಕೃಶಾಂಗಿಯೇ ಆಗ ನೀನು ಕಾಣಿಸದೇ ಇದ್ದುದರಿಂದ ಗಾಳಿಯು ಮೆಲ್ಲಗೆ ಸುಳಿದಾಡುತ್ತಿತ್ತು". ಇಲ್ಲಿ ಪ್ರಥಮ ಪಾದದಲ್ಲಿ ಸೃಧಾತುವಿಗೆ ಕರ್ತೃವೆನಿಸಿದ ವಾಯುವನ್ನು ತಿಳಿಸುವ ಪದವು 'ಜುಗುಪ್ಸೆ'ಯನ್ನು ಹುಟ್ಟಿಸುವುದರಿಂದ ಕೇಳುವವರಿಗೆ ರಸಾನುಭವಕ್ಕೆ ಅಡಚಣೆಯಾಗುತ್ತದೆ. ಎರಡನೆ ಪದದಲ್ಲಿ ವಿನಾಶವೆಂಬ ಪದವು ಮರಣವೆಂಬ ಆಮಂಗಳಾರ್ಥವನ್ನು ತಿಳಿಸುವುದರಿಂದ ಕೇಳುವವನಿಗೆ ಉದ್ವೇಗವುಂಟಾಗಿ ಇದರಿಂದ ರಸದ ಪ್ರಾಮುಖ್ಯತೆಗೆ ಭಂಗವುಂಟಾಗುವುದು. ಈ ಮೂರು ಬಗೆಯು ಅಶ್ಲೀಲವೆಂಬ ಕಾವ್ಯದೋಷವಾಗಿದೆ.

### ೩. ಅನುಚಿತಾರ್ಥತ್ವ

"ಶೂರ ಅಮರತಾಂ ಯಾಂತಿ ರಣಧ್ವೈರೇ", "ವೀರರು ಯುದ್ಧಯಜ್ಞದಲ್ಲಿ ಮೇಕೆ ಮೊದಲಾದ ಪಶುಗಳಂತೆ ಕುತ್ತಿಗೆಯನ್ನು ಸಮರ್ಪಿಸಿ ಸ್ವರ್ಗಕ್ಕೆ ಹೋಗುತ್ತಾರೆ". ಇಲ್ಲಿ ಪಶು ಪದವು ವೈಮನಸ್ಯವನ್ನು ಹುಟ್ಟಿಸುವುದರಿಂದ ರಸ ಪ್ರಕರ್ಷಕ್ಕೆ ಅಡಚಣೆಯಾದ್ದ–ರಿಂದ ಅನುಚಿರ್ತಾರ್ಥತ್ವ ದೋಷವಾಗಿದೆ.

### ೪. ಅಪ್ರಯುಕ್ತತೆ

ಕೋಶ ಮೊದಲಾದ ಕಡೆಗಳಲ್ಲಿ ಒಂದು ಪದವು ಪ್ರಸಿದ್ಧವೆನಿಸಿದ್ದರೂ ಅದನ್ನು ಅನೇಕರು ವಾಕ್ಯದಲ್ಲಿ ಉಪಯೋಗಿಸದೇ ಇರುವುದರಿಂದ ಅಪ್ರಯುಕ್ತವೆಂಬ ದೋಷವೆನಿಸಿದೆ. "ಪದ್ಮವು ಸರೋವರದಲ್ಲಿ ಶೋಭಿಸುತ್ತದೆ" ಎಂಬಲ್ಲಿ ಪದ್ಮವನ್ನು ಪುಲ್ಲಿಂಗದಲ್ಲಿ ವಿಕಲ್ಪವಾಗಿ ಉಪಯೋಗಿಸಬಹುದೆಂದು ಹೇಳಿದ್ದರೂ ಯಾರು ಹಾಗೆ ಪ್ರಯೋಗಿಸದೆ ಇರುವುದರಿಂದ ಇಲ್ಲಿ ಅಂತಹ ಪ್ರಯೋಗವು ರಸಕ್ಕೆ ದೋಷವೆನಿಸಿದೆ.

### ೫. ಗ್ರಾಮ್ಯತೆ

"ನಿನ್ನ ಕಟಿಪ್ರದೇಶವು ಮನಸ್ಸನ್ನು ಅಪಹರಿಸುತ್ತದೆ" ಎಂಬಲ್ಲಿ ಕಟಿಶಬ್ದವು 'ಗ್ರಾಮ್ಯ'ವೆನಿಸಿದೆ.

### ೬. ಅಪ್ರತೀತತ್ವ

ಎಲ್ಲೋ ಒಂದು ಕಡೆ ಮಾತ್ರ ಪ್ರಸಿದ್ಧವೆನಿಸಿ ಬೇರೆ ಎಲ್ಲೂ ರೂಢಿಯಲ್ಲಿಲ್ಲದ ಪದವನ್ನು ಪ್ರಯೋಗಿಸುವುದು. 'ಅಪ್ರತೀತತ್ವ[೧೦]' ಎಂಬ ದೋಷವಾಗಿದೆ. ಚಿತ್ತವೃತ್ತಿಯು ನಿರೋಧದಿಂದ ಹೀನ ಸಂಸ್ಕಾರವನ್ನು ಕಳೆದುಕೊಳ್ಳಬೇಕು'. ಇಲ್ಲಿ ಯೋಗಶಾಸ್ತ್ರದಲ್ಲಿ ಮಾತ್ರ ಆಶ್ರಯಶಬ್ದವು ವಾಸನೆ ಎಂಬ ಅರ್ಥವನ್ನು ತೋರುವುದಿಲ್ಲ. ಇಂತಹ ಪ್ರಯೋಗವು 'ಅಪ್ರತೀತತ್ವ'ವೆನಿಸಿ ರಸಕ್ಕೆ ಅಡಚಣೆ ಉಂಟುಮಾಡುತ್ತದೆ.

### ೭. ಸಂದಿಗ್ಧತೆ

ಸಂದಿಗ್ಧತೆ ಎಂದರೆ ಯಾವ ಅರ್ಥವನ್ನು ಗ್ರಹಿಸಬೇಕೆಂಬ ಸಂದೇಹವಿರುವುದನ್ನು ಸಂದಿಗ್ಧತೆ ಎನ್ನಲಾಗಿದೆ. ಉದಾಹರಣೆಗೆ "ವಂದ್ಯವೆನಿಸಿದೆ ಆಶೀರ್ವಾದ ಸಮೂಹವನ್ನು ಕೇಳಿ ಕೃಪೆಮಾಡು" ಇಲ್ಲಿ ಯುದ್ಧದಲ್ಲಿ ಸೆರೆ ಸಿಕ್ಕಿರುವವನು ಬಂದೀ ಎನಿಸುವಂತೆ ವಂದನಾರ್ಹನೂ ವಂದ್ಯನೆನಿಸುವುದರಿಂದ ಯಾವ ಅರ್ಥವನ್ನು ಗ್ರಹಿಸಬೇಕೆಂಬ ಬಗ್ಗೆ ಸಂದೇಹವಿರುವುದರಿಂದ ಇದು ಸಂದಿಗ್ಧತೆ ಎನಿಸಿದೆ.

## ೮. ನೇಯಾರ್ಥ

ನೇಯಾರ್ಥವೆಂದರೆ ರೂಢಿಯಾಗಲಿ ಪ್ರಯೋಜನವಾಗಲೀ ಇಲ್ಲದಿರುವಾಗ ಒಂದು ಪದದಲ್ಲಿ ಲಕ್ಷ್ಯಾರ್ಥವನ್ನು ಗ್ರಹಿಸುವುದೇ ನೇಯಾರ್ಥವೆಂದು ಕರೆಯಲಾಗಿದೆ. ಉದಾಹರಣೆಗೆ "ಎಲೈ ಸುಮುಖಿಯೇ, ನಿನ್ನ ಮುಖವು ಕಮಲದಲ್ಲಿ ಪದ ಪ್ರಹಾರವನ್ನುಂಟು ಮಾಡಿತು". ಮುಖವು ಕಮಲವನ್ನು ಜಯಿಸಿತು ಎಂಬ ಅರ್ಥವು ಲಕ್ಷಣೆಯಿಂದ ತೋರುವುದೆಂಬುದೇ ದೋಷವೆನಿಸಿದೆ. ಮುಖಕ್ಕೆ ಪಾದವಿಲ್ಲದ್ದ-ರಿಂದ ಅದರಲ್ಲಿ ಪಾದಘಾತವು ಸಂಭವಿಸುವುದಿಲ್ಲವೆಂದು ಚರಣಾಘಾತವೆಂಬ ಪದದಿಂದ ಜಯಿಸಿತೆಂಬ ಲಕ್ಷ್ಯಾರ್ಥವನ್ನು ಗ್ರಹಿಸಲಾಗಿದೆ. ಆದರೆ ಹೀಗೆ ಗ್ರಹಿಸಲು ಇಲ್ಲಿ ರೂಢಿಯಾಗಲಿ ಪ್ರಯೋಜನವಾಗಲೀ ಯಾವುದೂ ಕಾಣುವುದಿಲ್ಲ. ಆದರೂ ಇಲ್ಲಿ ಲಕ್ಷಣೆಯಿಂದ ಲಕ್ಷ್ಯಾರ್ಥವನ್ನು ಗ್ರಹಿಸಿದರಿಂದ ಇದು ನೇಯಾರ್ಥ ಎಂಬ ದೋಷವಾಗಿದೆ.

## ೯. ನಿಹತಾರ್ಥ

ಎರಡು ಅರ್ಥಗಳನ್ನು ತಿಳಿಸುವ ಪದಕ್ಕೆ ಪ್ರಸಿದ್ಧಾರ್ಥವನ್ನು ಬಿಟ್ಟು ಅಪ್ರಸಿದ್ಧವಾದ ಅರ್ಥದಲ್ಲಿ ಪ್ರಯೋಗಿಸುವುದನ್ನು 'ನಿಹತಾರ್ಥ' ಎಂಬ ದೋಷವಾಗಿದೆ. "ಯಮುನಾ ನದಿಯ ನೀರು ಆಕಾಶವನ್ನು ವ್ಯಾಪಿಸಿತು" ಇಲ್ಲಿ ಶಂಬರ ಶಬ್ದವು ದೈತ್ಯನನ್ನು ತಿಳಿಸುವುದಾಗಿ ಪ್ರಸಿದ್ಧಿ ಇದೆ. ಅದು ನೀರೆಂಬ ಅರ್ಥವನ್ನು ತಿಳಿಸುವುದು ಪ್ರಸಿದ್ಧವೆನಿಸಿಲ್ಲ. ಆದ್ದರಿಂದ ಇಂತಹ ಪ್ರಯೋಗವನ್ನು ನಿಹತಾರ್ಥ ದೋಷ ಎನ್ನಲಾಗಿದೆ.

## ೧೦. ಅವಾಚಕತ್ವ

"ಗೀತಗಳಲ್ಲಿ ಕಿವಿಯನ್ನು ಅರ್ಪಿಸುತ್ತಾನೆ" ಇಲ್ಲಿ ಅಜ್ಞಾಪೂರ್ವಕವಾದ ದಾಧಾತು 'ಅರ್ಪಿಸು' ಎಂಬ ಅರ್ಥವನ್ನು ಬೋಧಿಸುತ್ತದೆ. ಆದ್ದರಿಂದ ಇಂತಹ ಪ್ರಯೋಗವು ಅವಚಕವೆಂಬ ದೋಷವಾಗಿದೆ. ಇದಕ್ಕೆ ಇನ್ನೊಂದು ಉದಾಹರಣೆ "ನೀನು ಎದು-ರಿಗೆ ಇದ್ದರೆ ಕತ್ತಲೆ ಎಲ್ಲವೂ ತೊಲಗಿ ರಾತ್ರಿಯು ಹಗಲಾಗುತ್ತದೆ. ಇಲ್ಲಿ ದಿನ ಶಬ್ದವು ಸೂರ್ಯಕಿರಣಗಳಿಂದ ವ್ಯಾಪಿಸಿದ ಕಾಲವನ್ನು ತಿಳಿಸುವುದರಿಂದ 'ರಾತ್ರಿಯು ಪ್ರಕಾಶಮಯವಾಗಿರುತ್ತದೆ" ಎಂಬ ಅರ್ಥವನ್ನು ತಿಳಿಸದೇ ಇರುವುದರಿಂದ ಅವಾಚಕ ದೋಷವಾಗಿದೆ.

## ೧೧. ಕ್ಲಿಷ್ಟತ್ವ

ಒಂದು ಪದವನ್ನು ಕೇಳಿದಾಗ ವಿವಕ್ಷಿತವಾದ ಅರ್ಥವು ತಡವಾಗಿ ತೋರಿದರೆ ಅಲ್ಲಿ ಕ್ಲಿಷ್ಟವೆಂಬ ದೋಷವು ಸಂಭವಿಸುತ್ತದೆ. 'ಕ್ಷೀರಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಗೆ

ಅವಾಸವೆನಿಸಿದ ಕಮಲಕ್ಕೆ ಆಶ್ರಯವಾದದ್ದು ನೀರು' ಎಂಬ ಅರ್ಥವು ಸಮಸ್ತ ಪದದಿಂದಲೂ ವಿಳಂಬವಾಗಿ ತೋರುವುದರಿಂದ ರಸಸ್ಫೂರ್ತಿಗೆ ದೋಷಯುಕ್ತವಾಗಿದೆ.

## ೧೨. ವಿರುದ್ಧಮತಿಕಾರಿತ್ವ

ಕೇಳುವವರಿಗೆ ವಿರುದ್ಧ ಭಾವನೆಯನ್ನು ಹುಟ್ಟಿಸುವ ದೋಷವೇ ವಿರುದ್ಧ ಮತಿಕಾರಿತ್ವವಾಗಿದೆ. ಉದಾಹರಣೆಗೆ "ಭವಾನಿಯಪತಿ ಎನಿಸಿದ ಈಶ್ವರನು ನಿಮಗೆ ಐಶ್ವರ್ಯವನ್ನು ಕೊಡಲಿ" ಭವಾನೀಶ ಎಂಬ ಪದದಲ್ಲಿ ಭಾವಪದದ ಮೇಲೆ ಅನಜ ಪ್ರತ್ಯಯವು ಪತ್ನಿ ಎಂಬ ಅರ್ಥದಲ್ಲಿ ಬಂದು ಭವಾನೀ ಎಂದು ಆಗಿದೆ. ಭವನ ಹೆಂಡತಿಗೆ ಈಶನೆಂದು ಹೇಳಿದ್ದರಿಂದ ಈ ಪದವು ದೇವದತ್ತನ ಪತ್ನಿಯ ಪತಿ ಎಂಬಂತೆ ಭವಾನಿಗೆ ಬೇರೊಬ್ಬ ಪತಿ ಇರುವನೆಂಬ ವಿರುದ್ಧಾರ್ಥವನ್ನು ತಿಳಿಸುತ್ತದೆ. ಆದ್ದರಿಂದಲೇ ಈ ದೋಷವು ಕೇಳುವವರಿಗೆ ವಿರುದ್ಧವಾದ ಭಾವನೆಯನ್ನು ಹುಟ್ಟಿಸುವುದರಿಂದ ರಸಪ್ರಕಾಶಕ್ಕೆ ದೋಷವನ್ನುಂಟು ಮಾಡುತ್ತದೆ.

## ೧೩. ಅವಿಮೃಷ್ಟಾವಿದೇಯಾಂಶತ್ವ

ಈ ದೋಷವು ವಿಧೇಯಾಂಶವನ್ನು ಪ್ರಧಾನವಾಗಿ ತಿಳಿಸದೇ ಮತ್ತೊಂದಕ್ಕೆ ವಿಶೇಷಣವಾಗಿ ತಿಳಿಸುವುದನ್ನು ಅವಿಮೃಷ್ಟಾವಿಧೇಯಾಂಶತ್ವ ಎಂಬ ದೋಷವಾಗಿದೆ. ಇಲ್ಲಿ ತಿಳಿಸಬೇಕಾದ ಅಂಶವನ್ನು ಪ್ರಧಾನವಾಗಿ ತಿಳಿಸಬೇಕೇ ಹೊರತು ಮತ್ತೊಂದರಲ್ಲಿ ವಿಶೇಷಣವಾಗಿ ಸೇರಿರುವಂತೆ ಪ್ರಯೋಗಿಸಬಾರದು. ಉದಾಹರಣೆಗೆ "ಸ್ವರ್ಗವೆಂಬ ಸಣ್ಣಹಳ್ಳಿಯನ್ನು ದರೋಡೆ ಮಾಡಿದ್ದರಿಂದ ವ್ಯರ್ಥವಾಗಿ ಬೆಳೆದಿರುವ ಈ ಭುಜಗಳಿಂದ ಏನು ಫಲ?" ಇಲ್ಲಿ ಭುಜಗಳ ವ್ಯರ್ಥ್ಯವನ್ನು ತಿಳಿಸುವುದು ಮುಖ್ಯವಾದ ಅಂಶ. ಇದೇ ಇಲ್ಲಿ ವಿಧೇಯಾಂಶವಾಗಿದೆ. ಇದು ಪ್ರಧಾನವಾಗಿ ನಿರ್ಧಿಷ್ಟವಾಗದೇ ಸಮಾಸದಲ್ಲಿ ವಿಶೇಷವಾಗಿರುವುದರಿಂದ ಅನುವಾದ್ಯವೆಂಬ ಭಾವನೆಯನ್ನು ಹುಟ್ಟಿಸುತ್ತದೆ. ವಿದೇಯಾಂಶವು ವಿಧೇಯವಾಗಿರಬೇಕೇ ಹೊರತು ಅನುವಾದ್ಯವಾಗಬಾರದು.

ಈ ಹದಿಮೂರು ದೋಷಗಳು ಪದ, ಪದಾಂಶ ಮತ್ತು ವಾಕ್ಯದಲ್ಲಿ ಸಂಭವಿಸುತ್ತದೆ. ನಿರರ್ಥಕತ್ವ, ಅಸಮರ್ಥತ್ವ, ಚ್ಯುತಸಂಸ್ಕಾರತ್ವ ಇವು ಮೂರು ದೋಷಗಳು ಪದದಲ್ಲಿ, ದುಃಶ್ರವತ್ವ ಅಶ್ಲೀಲತ್ವ, ನಿಹತಾರ್ಥತ್ವ, ಅವಾಚಕತ್ವ, ನೇಯಾರ್ಥತ್ವ, ದೋಷಗಳು ಪದಾಂಶದಲ್ಲಿ ಸಂಭವಿಸುತ್ತದೆ.

ಇನ್ನು ಪದಾಂಶದಲ್ಲಿರುವ ವಿದೇಯವಿಮರ್ಶದೋಷವನ್ನು ವಿವರಿಸಲಾಗಿದೆ. 'ಅಸಮುದ್ರ ಕ್ಷಿತಿಶಾನಾಂ' 'ಸಮುದ್ರದವರೆಗೂ ವ್ಯಾಪಿಸಿರುವ ಭೂಮಿಗೆ ಅಧೀಶರೆನಿಸಿದವರು' ಇಲ್ಲಿ 'ಅಸಮುದ್ರಂ' ಎಂಬ ಪದವನ್ನು ಪ್ರತ್ಯೇಕವಾಗಿ ಉಪಯೋಗಿಸಬೇಕಾಗಿತ್ತು.

ಆ ರಾಜರಿಗೆ ಸಮುದ್ರಗಳ ಮೇಲೂ ಯಜಮಾನ್ಯವಿತ್ತೆಂಬುದನ್ನು ತಿಳಿಸುವುದೇ ಕವಿಯ ಆಶಯ. ಇದು 'ಅಸಮುದ್ರಕ್ಷಿತೀಶಾನಾಂ' ಎಂಬುದರಿಂದ ತೋರುವುದಿಲ್ಲ. ಸಮುದ್ರದವರೆಗೂ ಇರುವ ಭೂಮಿಯ ಮೇಲೆ ಅವರಿಗೆ ಅಧಿಕಾರವಿತ್ತು' ಎಂಬ ಅರ್ಥವಷ್ಟೇ ಇಲ್ಲಿ ತೋರುತ್ತದೆ. 'ಅಸಮುದ್ರಂಕ್ಷಿತೀಶಾನಾಂ' ಎಂದಿದ್ದರೆ ಸಮುದ್ರದ ಮೇಲೆಯೂ ಅವರಿಗೆ ಅಧಿಕಾರವಿತ್ತು ಎಂಬ ಅರ್ಥವು ತೋರುತ್ತಿತ್ತು. ಇಲ್ಲಿ ಸಮುದ್ರ ಪದವು ಸಮಾಸದಲ್ಲಿ ಸೇರಿಕೊಂಡು ತನ್ನ ಪ್ರಾಧಾನ್ಯವನ್ನು ಕಳೆದುಕೊಂಡಿರುವುದರಿಂದ ಇದು ವಿಧೇಯಾಮಿರ್ಮವೆಂಬ ದೋಷವೆನಿಸಿದೆ ಎಂಬುದನ್ನು ವಿವರಿಸಿ ದೋಷವಿಲ್ಲದ ವಿಧೇಯಾಂಶವನ್ನೂ ವಿವರಿಸಲಾಗಿದೆ.

'ಲೀಪನು ಭಯಪಡದೆಯೇ ತನ್ನನ್ನು ರಕ್ಷಿಸಿಕೊಂಡನು. ಆತುರ ಪಡದೆಯೇ ಧರ್ಮವನ್ನಾಚರಿಸಿದನು. ಆಶೆ ಮಾಡದೆಯೇ ಹಣವನ್ನು ಸಂಪಾದಿಸಿದನು. ಯಾವ ಆಸಕ್ತಿಯೂ ಇಲ್ಲದೆಯೇ ಸುಖವನ್ನು ಅನುಭವಿಸಿದನು'. ಇಲ್ಲಿ ನಕಾರವು ನ+ತ್ರಸ್ತಃ = ಅತ್ರಸ್ತ ಎಂದು ಮುಂತಾಗಿ ನಾಲ್ಕು ಕಡೆಗಳಲ್ಲೂ ಸಮಾಸದಲ್ಲಿ ವಿಶೇಷವಾಗಿ ತನ್ನ ಪ್ರಾಧಾನ್ಯವನ್ನು ಕಳೆದುಕೊಂಡು ಕ್ರಿಯೆಯೊಡನೆ ಅನ್ವಯಿಸುತ್ತಿಲ್ಲ. ಇಲ್ಲಿ ಅತ್ರಸ್ತತ್ವ, ಅನಾತುರತ್ವ, ಅಗೃಧ್ನುತ್ವ, ಅನಾಸಕ್ತತ್ವ ಇವನ್ನು ಅನುವಾದ ಮಾಡಿ ಇವುಗಳಿಂದ ಆತ್ಮಗೋಪನ, ಧರ್ಮಚರಣ, ಅರ್ಥಸ್ವೀಕಾರ, ಸುಖಾನುಭವ ಇವೆಲ್ಲವು ರಾಜನಲ್ಲಿದ್ದವೆಂದು ಇದನ್ನ ಇಲ್ಲಿ ವಿಧೇಯವನ್ನಾಗಿ ತಿಳಿಸಿದೆ. ಹೀಗೆ ನಿಷೇಧವು ಇಲ್ಲಿ ಪ್ರಧಾನವಲ್ಲದ್ದರಿಂದ ಸಮಾಸದಲ್ಲಿ ವಿಶೇಷಣವಾಗಿರುವುದು ಯುಕ್ತವಾಗಿದೆ. ಆದ-ದ್ರಿಂದ ಇಲ್ಲಿ ವಿಧೇಯಾವಿಮರ್ಶ ದೋಷವಿಲ್ಲವೆಂದು ಸ್ಪಷ್ಟವಾಗುತ್ತದೆ. ಇದರಿಂದ ಎಲ್ಲಿ ವಿಧೇಯಾಂಶವು ಪ್ರಧಾನವಾಗಿದ್ದು ನಿಷೇಧಾಂಶವು ಅಪ್ರಧಾನವಾಗಿರುವುದೋ ಅಲ್ಲಿ ನಿಷೇಧವು ಪರ್ಯುದಾನಿ [ಆಮುಖ್ಯ]ವೆನಿಸಿ ಉತ್ತರಪದದೊಡನೆ ನಕಾರವು ಅನ್ವಯಿಸುತ್ತದೆ. ನಕಾರವು ಪ್ರಧಾನವಾಗಿರುವುದೋ ಅಲ್ಲಿ ಅದು ಕ್ರಿಯೆಗೆ ಸಂಬಂಧಿಸಿದೆ. ಪಕ್ಕದಲ್ಲಿರುವ ಪದದೊಡನೆ ಅನ್ವಯಿಸುತ್ತದೆ. ಹೀಗೆ ಪದ ಪದಾಂಶದಲ್ಲಿನ ದೋಷವನ್ನು ಮತ್ತು ವಿದೇಯಾವಿಮರ್ಶದ ದೋಷ ಅದೋಷವನ್ನು ತಿಳಿಸಿ. ಮುಂದೆ ವಾಕ್ಯದಲ್ಲಿ ಬರುವ ದೋಷಗಳನ್ನು ವಿವರಿಸಲಾಗಿದೆ.

ಇನ್ನು ಪದಸಮೂಹವಾದ ವಾಕ್ಯವು ಕೇಳುವುದಕ್ಕೆ ಕಠಿಣವಾಗುವುದರಿಂದ ರಸಪ್ರಕರ್ಷಕ್ಕೆ ಹೇಗೆ ದೋಷವುಂಟು ಮಾಡುತ್ತದೆ ಎಂಬುದನ್ನು ವಿವರಿಸಲಾಗಿದೆ. ಇನ್ನು ವಾಕ್ಯದಲ್ಲಿನ ದುಃಶ್ರವತ್ವಅಶ್ಲೀಲತ್ವ ದೋಷವನ್ನು ಉದಾಹರಿಸಲಾಗಿದೆ.

**ಸ್ಮರಾರ್ತ್ಯಧಃ ಕದಾ ಲಪ್ಸ್ಯೇ ಕಾರ್ತಾರ್ಥ್ಯಂ ವಿರಹೇ ತವ ।**
**ಕೃತ ಪ್ರವೃತ್ತಿರನ್ಯಾರ್ಥೇ ಕವಿರ್ವಾಂತಂ ಸಮಶ್ನುತೇ[೧೧] ।**

'ನಿನ್ನ ವಿರಹದಿಂದ ಕಾಮಬಾಧೆಗೆ ಸಿಲುಕಿ ವಿವೇಕ ಶೂನ್ಯನಾಗಿರುವ ಪ್ರಯುಕ್ತ ಯಾವಾಗ ಜನ್ಮ ಸಾಫಲ್ಯವನ್ನು ಹೊಂದುವೆನು?" ಇಲ್ಲಿ ಸ್ಮರಾರ್ತ್ಯಂಧಃ, ಕಾರ್ತಾರ್ಥ–ರ್ಯ ಇವೆರಡು ಪದಗಳಲ್ಲಿ ಪುರುಷ ವರ್ಣಗಳಿರುವುದರಿಂದ ವಾಕ್ಯವು ಕಿವಿಯಿಂದ ಕೇಳಲು ಕಠಿಣವಾಗುತ್ತದೆ. ಈಗ ಅಶ್ಲೀಲವೆಂಬ ದೋಷವನ್ನು ವಿವರಿಸಲಾಗಿದೆ. "ಬೇರೆ ಕವಿಗಳು ಸಂಗ್ರಹಿಸಿದ ಭಾವವನ್ನೂ, ಶಬ್ದವನ್ನೂ ತೆಗೆದುಕೊಳ್ಳಲಿಚ್ಚಿಸುವ ಕವಿಯು ಕೋಳಿಯಂತೆ ನಿಂದಾರ್ಹನೆನಿಸುತ್ತಾನೆ". ಇಲ್ಲಿ 'ವಾಂತಂ ಸಮಶ್ನುತೇ' ಎಂಬ ವಾಕ್ಯವು 'ವಾಂತಿ ಮಾಡುತ್ತಾನೆ' ಎಂಬ ಅರ್ಥವನ್ನು ತಿಳಿಸುವುದರಿಂದ ಅದು ಕೇಳುವವರಿಗೆ ಜುಗುಪ್ಸೆಯನ್ನು ಹುಟ್ಟಿಸುವುದರಿಂದ ಅಶ್ಲೀಲವೆಂಬ ದೋಷವು ಈ ವಾಕ್ಯದಲ್ಲಿ ಬಂದಿದೆ.

ವಾಕ್ಯದಲ್ಲಿ ಬರುವ ನೇಯಾರ್ಥ ದೋಷವನ್ನು ಈಗ ವಿವರಿಸಲಾಗಿದೆ. ಉದಾಹರಣೆಗೆ

**ಉದ್ಯತ್ಕ ಮಲಲೌಹಿತ್ಯೈ ರ್ವಕ್ರಾಭಿರ್ಭೂಷಿತಾ ತನೂಃ ।**
**ಅತ್ರ ಕಮಲ ಲೌಹಿತ್ಯಂ ಪದ್ಮರಾಗಃ ವಕ್ರಾಭಿರ್ವಾಮಾಭಿರಿತಿ ನೇಯಾರ್ಥತಾ**

ಸುಂದರಿಯರ ಪ್ರಕಾಶಮಾನದ ಪದ್ಮರಾಗಮಣಿಗಳಿಂದ ಶರೀರವು ಅಲಂಕೃತವಾಗಿದೆ. ಇಲ್ಲಿ ಕಮಲಲೌಹಿತ್ಯವೆಂಬ ಪದವು ಕಮಲದಲ್ಲಿರುವ ಕೆಂಪು ಬಣ್ಣವನ್ನು ತಿಳಿಸುತ್ತದೆ. ಆದರೆ, ಪದ್ಮರಾಗವೆಂಬ ಮಣಿಯನ್ನು ಭೋಧಿಸುವುದಿಲ್ಲ. ವಕ್ರ ಶಬ್ದವು ಕುಟಿಲ ಸ್ವಭಾವದವಳು ಎಂಬ ಅರ್ಥವನ್ನು ತಿಳಿಸುವುದೇ ಹೊರತು ಸುಂದರಿ ಎಂದು ತಿಳಿಸುವುದಿಲ್ಲ. ಆದ್ದರಿಂದ ಇಲ್ಲಿ ರೂಢಿ ಪ್ರಯೋಜನಗಳಲ್ಲಿ ಯಾವುದೂ ಇಲ್ಲದಿದ್ದರೂ ಕಮಲ ಲಾಹಿತ್ಯ ಪದದಿಂದ ಪದ್ಮರಾಗಮಣಿ ಎಂಬ ಅರ್ಥವನ್ನೂ, ವಾಮಾ ಪದದಿಂದ ಸುಂದರಿ ಎಂಬ ಅರ್ಥವನ್ನೂ ಲಕ್ಷಣೆಯಿಂದ ಇಲ್ಲಿ ಗ್ರಹಿಸಲಾಗಿದೆ. ಅನೇಕ ಪದಗಳೆನಿಸಿದ ವಾಕ್ಯದಲ್ಲಿ ಹೀಗೆ ರೂಢಿ ಪ್ರಯೋಜನಗಳಿಲ್ಲದೆಯೇ ಅನೇಕ ಪದಗಳೆನಿಸಿದ ವಾಕ್ಯದಲ್ಲಿ ಹೀಗೆ ರೂಢಿ ಪ್ರಯೋಜನಗಳಿಲ್ಲದೆಯೋ ಲಕ್ಷಾರ್ಥ್ಯವನ್ನು ಸ್ವೀಕರಿಸಿದ್ದರಿಂದ ಇಲ್ಲಿ ಸೀಯಾರ್ಥ ಎಂಬ ವಾಕ್ಯದೋಷವುಂಟಾಗಿದೆ.

ವಾಕ್ಯದಲ್ಲಿ ಬರುವ ಕ್ಲಿಷ್ಟತ್ವದೋಷವನ್ನು ಈಗ ವಿವರಿಸಲಾಗಿದೆ. ಉದಾಹರಣೆಗೆ

**ಧಮ್ಮಿಲ್ಲಸ್ಯನ ಕಸ್ಯ ಪ್ರೇಕ್ಷ್ಯನಿಕಾಮಂ ಕುರಂಗಶಾಬಾಕ್ಷ್ಯಾಃ ।**
**ರಜ್ಯತ್ಯಪೂರ್ವಬಂಧವ್ಯತ್ಪತ್ತೇರ್ಮಾನಸಂ ಶೋಭಾಮ್**[೧೨] ॥

ಜಿಂಕೆಯ ಮರಿಯಂತೆ ಕಣ್ಣುಗಳಿರುವ "ಪ್ರೇಯಸಿಯು ಕುತೂಹಲವನ್ನು ಹುಟ್ಟಿಸುವಂತೆ ಜೋಡಿಸಿ ಕಟ್ಟಿರುವ ಕೇಶಪಾಶದ ಶೋಭೆಯನ್ನು ನೋಡಿ ಯಾವನ ಮನಸ್ಸು ವಿಶೇಷವಾದ ಅನುರಾಗವನ್ನು ಹೊಂದುವುದಿಲ್ಲ?[೧೩]" ಇಲ್ಲಿ "ಕೇಶಪಾಶದ

ಶೋಭೆಯನ್ನು ನೋಡಿ ಯಾವನ ಮನಸ್ಸು ಮೋಹಿಸುವುದಿಲ್ಲ?" ಎಂಬ ಅರ್ಥಕ್ಕೆ ಬಹಳ ಕಷ್ಟದಿಂದ ಹೊಂದಿಕೆಯಾಗಬೇಕಾಗಿರುವುದರಿಂದ ಈ ವಾಕ್ಯವು ಕ್ಲಿಷ್ಟತ್ವವೆಂಬ ದೋಷವೆನಿಸಿದೆ. ಇಲ್ಲಿಗೆ ವ್ಯಾಕದಲ್ಲಿ ಬರುವ ದುಃಶ್ರವತ್ವ, ಅಶ್ಲೀಲತ್ವ, ನೇಯಾರ್ಥತೆ, ಕ್ಲಿಷ್ಟತ್ವವೆಂಬ ದೋಷವನ್ನು ವಿವರಿಸಿ ಮುಂದೆ ವಾಕ್ಯದಲ್ಲಿ ಬರುವ ವಿಧೇಯಾವಿಮರ್ಷ ದೋಷವನ್ನು ವಿವರಿಸಲಾಗಿದೆ.

ವಾಕ್ಯದಲ್ಲಿ ಬರುವ ವಿಧೇಯಾವಿಮರ್ಷದೋಷ. ಉದಾಹರಣೆಗೆ. "ನ್ಯಕ್ಕಾರೋ ಹ್ಯಯಮೇವ ಮೇ ಯದರಯಃ"[೧೪] "ನನಗೆ ಶತ್ರುಗಳಿರುವರೆಂಬ ತಿರಸ್ಕಾರವು ಇದೆಯೇ" ಎಂದು ಹೇಳಿದ್ದರಿಂದ ವಿಧೇಯವೆನಿಸಿದ ನ್ಯಕ್ಕಾರವು ಪ್ರಧಾನ್ಯವನ್ನು ಕಳೆದುಕೊಂಡು ಅನುವಾದ್ಯವೆನಿಸುತ್ತದೆ. 'ಇದೇಯೇ ತಿರಸ್ಕಾರ' ಎಂದು ಹೇಳಿದ್ದರೆ ತಿರಸ್ಕಾರವು ವಿಧೇಯವೆನಿಸುತ್ತದೆ. ಹೀಗೆ ತಿಳಿಸುವುದೇ ಇಲ್ಲಿ ಕವಿಗೆ ವಿವಕ್ಷಿತವೆನಿಸಿದೆ. ಇಲ್ಲಿ ಶಬ್ದಗಳನ್ನು ಜೋಡಿಸುವಾಗ 'ಅಯಮೇವ ನ್ಯಕ್ಕಾರಃ' ಎಂಬುದಕ್ಕೆ ಬದಲಾಗಿ 'ನ್ಯಕ್ಯಾರೋ ಹ್ಯಯಮೇವ' ಎಂದು ಪ್ರಯೋಗಿಸಿದ್ದು ತಪ್ಪಾಯಿತು. ವಿಧೇಯಾಂಶವು ಗೌಣವೆನಿಸಿತು. ಇಲ್ಲಿ 'ಇದಂ' ಎಂಬ ಪದವನ್ನು ವಿಪರೀತವಾಗಿ ಪ್ರಯೋಗಿಸಿದ್ದ-ರಿಂದ ವಾಕ್ಯದೋಷವಿದೆ ಯತ್, ತತ್ ಇವೆರಡೂ ಒಂದೆಡೆಯಲ್ಲಿ ಪ್ರಯೋಗಿಸದೆ ಯಾವುದಾದರೊಂದನ್ನು ತಾತ್ಪರ್ಯದಿಂದಲೇ ತಿಳಿಸಬೇಕಾದ್ದರಿಂದ ಅಲ್ಲಿ ಒಂದನ್ನು ತಿಳಿಸಿ ತೋರಬೇಕಾಗಿರುವ ಆಕಾಂಕ್ಷೆಯು ಪೂರ್ತಿಯಾಗಿರುವುದರಿಂದ ವಿಧೇಯಾವಿಮರ್ಶೆ ದೋಷವು ಸಂಭವಿಸುವುದಿಲ್ಲ ಎಂಬುದಕ್ಕೆ ಉದಾಹರಣೆಗೆ

**ಸಹತ್ವಾ ವಾಲಿನಾಂ ವೀರಸ್ತತ್ಪದೇ ಚಿರಕಾಂಕ್ಷಿತೇ ।**
**ಧಾತೋಃ ಸ್ಥಾನ ಇವಾದೇಶಂ ಸುಗ್ರೀವಂ ಸಂನ್ಯವೇಶಯತ್** [೧೫]॥

"ಆ ವೀರನಾದ ರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ ಬಹುಕಾಲದಿಂದಲೂ ಅಪೇಕ್ಷಿತವೆನಿಸಿದ್ದ ವಾಲಿಯ ಸಿಂಹಾಸನದಲ್ಲಿ ಹನ್ ಧಾತುವಿನ ಸ್ಥಾನದಲ್ಲಿ ವಧ್ ಎಂಬ ಆದೇಶವನ್ನಿರಿಸುವಂತೆ ಸುಗ್ರೀವನನ್ನು ನೆಲೆಗೊಳಿಸಿದನು". ಇಲ್ಲಿ ಸಃ ಎಂಬುದು ಪ್ರಸಿದ್ಧನಾದ ರಾಮನನ್ನು ತಿಳಿಸುವುದರಿಂದ ಯತ್ಪದವನ್ನು ಅಪೇಕ್ಷಿಸುವುದಿಲ್ಲ.

ಈಗ ತತ್ಪದವು ಪ್ರಸಿದ್ಧವಾದ ಅರ್ಥವನ್ನು ತಿಳಿಸುವಾಗ ಯತ್ಪದವನ್ನು ಬಯಸುವುದಿಲ್ಲ ಉದಾಹರಣೆಗೆ.

**ಸವಃ ಶಶಿಕಲಾಮೌಲಿಸ್ತಾದಾತ್ತ್ಯಾಯೋಪಕಲ್ಪತಾಮ್ ।**
**ತಾಮಿಂಧುಸುಂದರಮುಖೀಂ ಹೃದಿ ಚಿಂತಯಾಮಿ**[೧೬]॥

"ಅಪ್ರಸಿದ್ಧನಾದ ಚಂದ್ರಶೇಖರನು ನಿಮಗೆ ಸಾಯುಜ್ಯಮುಕ್ತಿಯನ್ನು ಅನುಗ್ರಹಿಸಲಿ"

ಇಲ್ಲಿ ಸಃ ಎಂಬುದು ಪ್ರಸಿದ್ಧವಾದ ಅರ್ಥವನ್ನು ತಿಳಿಸುವುದರಿಂದ ಯತ್ಪದವನ್ನು ಅಪೇಕ್ಷಿಸುವುದಿಲ್ಲ. ಹಾಗೆ ಅದು ಸ್ವಾನುಭೂತವಾದ ಅಂಶವನ್ನು ತಿಳಿಸುವುದಾದರೆ ಯತ್ಪದವನ್ನು ಬಯಸುವುದಿಲ್ಲವೆಂಬುದಕ್ಕೆ 'ಚಂದ್ರನಂತೆ ಸುಂದರವಾದ ಮುಖವಿರುವ ಆಕೆಯನ್ನು ಹೃದಯದಲ್ಲಿ ಚಿಂತಿಸುವೆನು" ಇಲ್ಲಿ ತಾಂ ಎಂಬುದು ಹಿಂದೆ ತಾನೇ ನೋಡಿದ್ದ ಮುಖವನ್ನು ತಿಳಿಸುವುದರಿಂದ ಇಲ್ಲಿ ಯತ್ಪದವು ಬೇಕಾಗಿಲ್ಲ ಹೀಗೆ ವಾಕ್ಯದಲ್ಲಿ ಬರುವ ದುಃಶ್ರವತ್ವ, ಅಶ್ಲೀಲತ್ವ ನೇಯಾರ್ಥ, ಕ್ಲಿಷ್ಟತ್ವದೋಷಗಳನ್ನು ಇದರಲ್ಲಿ ಬರುವ ವಿಧೇಯಾವಿಮರ್ಶದೋಷವನ್ನೂ, ಅದೂಷವನ್ನು ವಿವರಿಸಲಾಗಿದೆ. ವಾಕ್ಯದಲ್ಲಿ ಬರುವ ಇನ್ನು ಅನೇಕ ದೋಷಗಳನ್ನು ವಿಶ್ವನಾಥನು ಹೇಳಿದ್ದರೂ ಪ್ರಮುಖವಾದ ಕೆಲವು ದೋಷಗಳನ್ನು ವಿವರಿಸಿ ಮಂದೆ ಬರುವ ಅರ್ಥದೋಷಗಳನ್ನು ವಿವೇಚಿಸಲಾಗಿದೆ.

**ಅರ್ಥದೋಷಗಳು**

> **ಅಪುಷ್ಟ ದುಷ್ಕ ಮಗ್ರಾಮ್ಯವ್ಯಾಹತಾಶ್ಲೀಲಕಷ್ಟತಾಃ ।**
> **ಅನವೀಕೃತ ನಿರ್ಹೇತು ಪ್ರಕಾಶಿತ ವಿರುದ್ಧ ತಾ ॥**
> **ಸಂದಿಗ್ಧ ಪುನರುತ್ತತ್ವೇ ಖ್ಯಾತಿವಿದ್ಯಾವಿರುದ್ಧತೇ ।**
> **ಸಾಕಾಂಕ್ಷತಾ ಸಹಚರಭಿನ್ನ ತಾऽಸ್ಥಾನಯುಕ್ತತಾ ॥**
> **ಅವಿಶೇಷೇ ವಿಶೇಷಶ್ಚಾನಿಯಮೇ ನಿಯಮಸ್ತಥಾ ।**
> **ತಯೋರ್ವಿಪರ್ಯಯೋ ವಿಧ್ಯನುವಾದಾಯುಕ್ತತೇ ತಥಾ ॥**
> **ನಿರ್ಮುಕ್ತ ಪುನರುಕ್ತತ್ವಮರ್ಥದೋಷಾಃ ಪ್ರಕೀರ್ತಿತಾ ೧೪**

ಅಪುಷ್ಟತ್ವ, ದುಷ್ಕ್ರಮತ್ವ, ಗ್ರಾಮ್ಯತ್ವ, ವ್ಯಾಹತತ್ವ, ಅಶ್ಲೀಲತೆ, ಕಷ್ಟಸ್ಥಿತಿ, ಅನವೀಕೃತತ್ವ, ನಿರ್ಹೇತುತ್ವ, ವಿರೋಧ ಪ್ರಕಾಶಕತ್ವ, ಸಂದಿಗ್ಧತೆ, ಪುನರುಕ್ತತೆ, ಖ್ಯಾತಿವಿರೋಧ, ವಿದ್ಯಾವಿರೋಧ, ಸಾಕಾಂಕ್ಷತ್ವ, ಸಹಚರಭಿನ್ನತೆ, ಅಸ್ಥಾನಯುಕ್ತತೆ, ವಿಶೇಷವಿಲ್ಲದ ಕಡೆ ವಿಶೇಷವನ್ನು ತಿಳಿಸುವುದು. ನಿಯಮವಿಲ್ಲದ ಕಡೆ ನಿಯಮವನ್ನು ತಿಳಿಸುವುದು, ವಿಪರೀತವಾದ್ದನ್ನು ತಿಳಿಸುವುದು, ಅನರ್ಹವಾದ ಕಡೆಗಳಲ್ಲಿ ವಿಧಿಯನ್ನೂ ಅನುವಾದವನ್ನೂ ತಿಳಿಸುವುದು, ನಿರ್ಮುಕ್ತಪುನರುಕ್ತತೆ ಈ ಇಪ್ಪತ್ತಮೂರು ಅರ್ಥ ದೋಷಗಳನ್ನು ವಿಶ್ವನಾಥನು ತಿಳಿಸಿದ್ದಾನೆ.

## ೧. ಅಪುಷ್ಟತ್ವ

ಮುಖ್ಯಾರ್ಥಕ್ಕೆ ಉಪಯೋಗವಾಗಿರುವುದನ್ನು ಅಪುಷ್ಟತ್ವವೆಂಬ ಅರ್ಥ-ದೋಷವಾಗಿದೆ. ಉದಾಹರಣೆಗೆ 'ವಿಲ್ಯೋಕ್ಯ ವಿತತೇ ವ್ಯೋಮ್ನಿ ವಿಧುಂ ಮುಂಚ ರುಷಂ ಪ್ರಿಯೇ' "ಎಲೈ ಪ್ರಿಯೆಯೇ ವಿಸ್ತಾರವಾದ ಆಕಾಶದಲ್ಲಿ ಚಂದ್ರವನ್ನು ನೋಡಿ ಕೋಪವನ್ನು ಬಿಡು" ಇಲ್ಲಿ 'ವಿತ' ಶಬ್ದದ ಅರ್ಥವು ಪ್ರೇಯಸಿಯ ಮಾನತ್ಯಾಗಕ್ಕೆ

ಸ್ವಲ್ಪವೂ ಸಹಕಾರಿಯಾಗಿಲ್ಲ. ಆದ್ದರಿಂದ ಈ ಪದವು ಅನಾವಶ್ಯಕ ಎನಿಸಿದೆ. ಅಧಿಕ ಪದತ್ವವೆಂಬ ದೋಷದಲ್ಲಿ ಪದಾರ್ಥಗಳಿಗೆ ಪರಸ್ಪರವಾಗಿ ಅನ್ವಯವಾಗುವ ಬಾಧವು ತೋರುತ್ತದೆ. ಆದರೆ ಇಲ್ಲಿ ಪದಾರ್ಥಗಳಿಗೆ ಅನ್ವಯವಾದ ಮೇಲೆ ದೋಷವು ತೋರುವುದರಿಂದ ಇವೆರಡಕ್ಕೂ ಇರುವ ಭೇದವು ಸಹೃದಯರ ಪ್ರತೀತಿಯೇ ಪ್ರಮಾಣವೆನಿಸಿದೆ.

### ೨. ದುಷ್ಕ್ರಮತ್ವ

ಕ್ರಮದಲ್ಲಿ ವೈಪರೀತ್ಯವಿರುವುದರಿಂದ ಉಂಟಾಗುವ ದೋಷವನ್ನು ದುಷ್ಕ್ರಮತ್ವವೆಂಬ ಅರ್ಥದೋಷವಾಗಿದೆ. "ಎಲೈ ರಾಜನೇ, ನನಗೆ ಕುದುರೆಯನ್ನಾಗಲಿ, ಮದಿಸಿದ ಆನೆಯನ್ನಾಗಲೀ ಕೊಡು" ಇಲ್ಲಿ ಹೆಚ್ಚು ಬೆಲೆವುಳ್ಳ ಆನೆಯನ್ನು ಕೊಡೆಂದು ಮೊದಲು ಕೇಳುವುದು ಯುಕ್ತವಾಗಿದೆ. ಹೆಚ್ಚು ಬೆಲೆಯ ವಸ್ತುವನ್ನು ಮೊದಲು ಕೇಳಿ, ಅದು ಸಿಕ್ಕದಿದ್ದರೆ ಕಡಿಮೆ ಬೆಲೆಯ ವಸ್ತುವನ್ನು ಕೇಳುವುದು ಲೋಕ ರೂಢಿಯಾದ್ದರಿಂದ ಈ ವಾಕ್ಯದಲ್ಲಿ ದುಷ್ಕ್ರಮತ್ವವೆಂಬ ಅರ್ಥಧೋಷವಿದೆ.

### ೩. ಗ್ರಾಮ್ಯತ್ವ

"ಸ್ವಪಿಹಿ ತ್ವಂ ಸಮೀಪೇ ಮೇ ಸ್ವಪಿಮ್ಯೇವಾಧುನಾ ಪ್ರಿಯ" 'ಪ್ರಿಯನೇ, ನೀನು ನನ್ನ ಸಮೀಪದಲ್ಲಿಯೇ ಮಲಗು. ನಾನು ಸಹ ಈಗ ಇಲ್ಲಿಯೇ ಮಲಗಿದ್ದೇನೆ'. ಇಲ್ಲಿ ಹೇಳಿರುವ ವಾಕ್ಯದ ಅರ್ಥವು ಅಸಂಸ್ಕೃತರಾದ ಜನರು ಆಡುವ ಮಾತಿನಂತೆ ಇರುವುದರಿಂದ ಸ್ವಪಿಹಿ ಸ್ವಪಿಮಿ ಎಂಬ ಪದಗಳ ಅರ್ಥವು ಗ್ರಾಮ್ಯತ್ವವೆಂಬ ದೋಷವನ್ನುಂಟು ಮಾಡುತ್ತದೆ.

### ೪. ವ್ಯಾಹತತ್ವ

ವ್ಯಾಹತತ್ವ ಎಂದರೆ ಮೊದಲು ಒಬ್ಬನ ಉತ್ಕರ್ಷವಾಗಲೀ ಆಕರ್ಷವನ್ನಾಗಲೀ ತಿಳಿಸಿ ನಂತರ ಅದಕ್ಕಿಂತ ಬೇರೆಯಾದ್ದನ್ನು ತಿಳಿಸುವುದು ವ್ಯಾಹತವೆಂಬ ಅರ್ಥದೋಷ ವಾಗಿದೆ. ಉದಾಹರಣೆಗೆ.

**ಹರತಿ ಹೃದಯಂ ಯೂನಾಂ ನ ನವೇಂದು ಕಲಾದಯಃ ।**
**ವೀಕ್ಷ್ಯತೇ ಯೈರಿಯಂ ತನ್ವಿ ಲೋಕ ಲೋಚನ ಚಂದ್ರಿಕಾ**[೧೮] ॥

"ಲೋಕದ ಜನರ ಕಣ್ಣುಗಳಿಗೆ ಚಂದ್ರಿಕೆ ಎನಿಸಿದ ಈ ಕೃಶಾಂಗಿಯನ್ನು ಯಾವ ಯುವಕರು ನೋಡುವರೋ ಅಂತಹ ಯುವಕರ ಹೃದಯವನ್ನು ಹೊಸದಾಗಿ ಉದಯಿಸಿದ ಚಂದ್ರನ ಕಲೆಯು ಆನಂದವನ್ನು ಕೊಡುವುದಿಲ್ಲವೋ ಅವರಿಗೆ ಅನಂದವನ್ನುಂಟು ಮಾಡುವುದಕ್ಕಾಗಿ ಪ್ರೇಯಸಿಯಲ್ಲಿ ಚಂದ್ರಿಕೆ ಎಂಬುದನ್ನು

ಆರೋಪಿಸಲಾಗಿದೆ. ಚಂದ್ರಕಲೆಯು ಹೃದಯವನ್ನು ಅಪಹರಿಸುವುದಿಲ್ಲ ಎಂದು ಹೇಳಿದ್ದರಿಂದ ಚಂದ್ರಕಲೆಯ ಆಕರ್ಷಣೆಯನ್ನು ಮೊದಲು ತಿಳಿಸಿ ಆಮೇಲೆ ಚಂದ್ರನ ಕಿರಣವೆನಿಸಿದ ಚಂದ್ರಿಕೆಯನ್ನು ನಾಯಿಕೆಯಲ್ಲಿ ಆರೋಪಿಸಿದ್ದರಿಂದ ನಾಯಿಕೆಯ ಉತ್ಕರ್ಷದ ಮೂಲಕ ಚಂದ್ರಕಲೆಗೆ ಉತ್ಕರ್ಷವನ್ನು ತಿಳಿಸಲಾಗಿದೆ. ಆದ್ದರಿಂದ ಇಲ್ಲಿ ವ್ಯಾಹತತ್ವವೆಂಬ ಅರ್ಥದೋಷವಿದೆ.

**೫. ಕಷ್ಟಸ್ಥಿತಿ**

ಕಷ್ಟಸ್ಥಿತಿ ಎಂದರೆ ವಾಕ್ಯದಲ್ಲಿರುವ ಅರ್ಥವು ಸ್ಪಷ್ಟವಾಗಿ ತೋರದೆ ಇರುವುದು ಎಂದರ್ಥ ಉದಾಹರಣೆಗೆ ಇಲ್ಲಿ ನಾಯಕನೇ ಬೇರೊಬ್ಬ ನಾಯಿಕೆಗೆ ಐಶ್ವರ್ಯವನ್ನು ಕೊಡುತ್ತಾನೆ. ಆ ಹಣದಿಂದ ಆಕೆಯ ವೇಷಭೂಷಣಗಳು ಹೆಚ್ಚುತ್ತವೆ ಎಂದು ನಾಯಕನು ತಾನೇ ಹೇಳುತ್ತಾನೆ. ಹಾಗೆಯೇ ಲೋಕವು ಹೇಳುತ್ತಲಿದೆ. ಆದರೂ ಬೇರೊಬ್ಬ ನಾಯಿಕೆಯು ಇದೊಂದನ್ನು ಒಪ್ಪುವುದಿಲ್ಲ. ಆಕೆಗೆ ಆ ನಾಯಕನು ಹೇಳುವ ಈ ಮಾತಿನಲ್ಲಿ ಕಷ್ಟತೆ ಎಂಬ ಅರ್ಥದೋಷವಿರುವುದನ್ನು ತಿಳಿಸಿದ್ದಾರೆ.

**ವರ್ಷತ್ಯೇತದಹರ್ಪತಿರ್ನ ತುಫಿನೋ ಧಾಮಸ್ಥಮಚ್ಛಂ ದಯಃ**
**ಸತ್ಯಂ ಸಾ ಸವಿ ತುಸ್ಸುತಾ ಸುರಸರಿತ್ಪೂರೋ ಯಯಾ ಪ್ಲಾವಿತಃ ।**
**ವ್ಯಾಸಸ್ಯೋಕ್ತಿಷು ವಿಶ್ವಸಿತ್ಯಪಿ ನಕಃ ಶ್ರದ್ಧಾ ನಕಸ್ಯ ಶ್ರುತೌ**
**ನ ಪ್ರತ್ಯೇತಿ ತಥಾಪಿ ಮುಗ್ಧಹರಿಣೀ ಭಾಸ್ವನ್ಮರೀಚಿಷ್ವಪಃ ೧೮॥**

"ಸೂರ್ಯನು ತನ್ನ ಕಿರಣಗಳಲ್ಲಿರುವ ನಿರ್ಮಲವಾದ ಈ ನೀರನ್ನು ಸುರಿಸುತ್ತಾನೆ. ಆದರೆ ದೊಡ್ಡದಾದ ಮೇಘವು ಸುರಿಸುವುದಿಲ್ಲ. ಆದಿತ್ಯನಿಂದ ದೃಷ್ಟಿಯುಂಟಾಗುತ್ತದೆ ಎಂದು ಶ್ರುತಿಯು ಹೇಳುತ್ತಿದೆ. ಆ ಯಮುನೆಯು ಸೂರ್ಯನ ಮಗಳೆಂಬುದೂ ಸತ್ಯವೇ. ಸೂರ್ಯನಿಂದ ಮಳೆಯು ಸುರಿದು ಆ ನೀರೇ ಯಮುನಾ ನದಿಯಾಗಿ ಪರಿಣಮಿಸಿದೆ. ಯಾವ ಯಮುನೆಯಿಂದ ಗಂಗೆಯ ಪ್ರವಾಹವು ಹೆಚ್ಚಿತ್ತೋ, ಸೂರ್ಯನು ಎಂಟು ತಿಂಗಳ ಕಾಲ ಆ ನೀರನ್ನು ತೆಗೆದುಕೊಂಡು ಮಳೆಯನ್ನು ಸುರಿಸುವನೋ ಅದರಿಂದ ಜಗತ್ತು ಬೆಳೆಯುತ್ತಿದೆ ಎಂದು ವ್ಯಾಸನು ಹೇಳಿರುವ ಮಾತಿನಲ್ಲಿ ಯಾರಿಗೆ ವಿಶ್ವಾಸವಿಲ್ಲ? ಯಾರಿಗೆ ತಾನೇ ಶೃತಿಯಲ್ಲಿ ವಿಶ್ವಾಸವಿಲ್ಲ? ಆದರೂ ಬುದ್ದಿಯಿಲ್ಲದ ಜಿಂಕೆಯು ಪ್ರಕಾಶಮಾನವಾದ ಸೂರ್ಯನ ಕಿರಣಗಳಲ್ಲಿ ನೀರಿದೆ ಎಂಬುದನ್ನು ನಂಬುವುದಿಲ್ಲ". ಸೂರ್ಯನಿಂದ ವೃಷ್ಟಿ ಮತ್ತು ಯಮುನಾ ನದಿ ಇವೆರಡು ಹುಟ್ಟುವುದೆಂದು ತಿಳಿಸಿದ್ದರಿಂದ ಸೂರ್ಯನ ಕಿರಣದಲ್ಲಿ ನೀರಿದೆ ಎಂದು ನಂಬುವುದೇ ಸರಿಯಾದುದು ಆದರೆ ಹೆಣ್ಣು ಜಿಂಕೆಯು ಭ್ರಾಂತಿಗೊಂಡು ಕಿರಣದಲ್ಲಿ ನೀರಿದೆ ಎಂಬುದನ್ನು ನಂಬುವುದಿಲ್ಲ. ಆದರೆ ಅರ್ಥವೇ ಅಪ್ರಕೃತವಾದುದು

ಇಲ್ಲಿ ನೇರವಾಗಿ ತಿಳಿದು ಬರುವ ಈ ಪ್ರಕೃತಾರ್ಥ ಇದು ಎಲ್ಲರಿಗೂ ತಿಳಿದಿದ್ದರೂ ಮುಗ್ಧನಾಯಿಕೆಯು ಇದನ್ನು ನಂಬುವುದಿಲ್ಲವೆಂದು ಆಕೆಗೆ ನಾಯಕನು ಹೇಳುವುದೆ ಪ್ರಕೃತಾರ್ಥ. ಇದು ಇಲ್ಲಿ ವಾಕ್ಯದಿಂದ ಸ್ಪಷ್ಟವಾಗಿ ತೋರುವುದಿಲ್ಲ ಆದ್ದರಿಂದ ಇದು ಕಷ್ಟಸ್ಥಿತಿ ಅಥವಾ ಅರ್ಥಕ್ಲೇಶಕ್ಕೆ ಉದಾಹರಣೆಯಾಗಿದೆ.

## ೬. ನಿರ್ಹೇತುತ್ವ

ಕಾರ್ಯಸಾಧನಿಗೆ ಅಪೇಕ್ಷಿತವಾದ ಹೇತುವಿಲ್ಲದಿರುವುದೇ ನಿರ್ಹೇತುತ್ವ ಎಂದು ಕರೆಯಲಾಗಿದೆ. ಹೇತುವಿನ ಅವಶ್ಯಕತೆ ಇದ್ದರೂ ಸಹ ಅದನ್ನು ಹೇಳದೇ ಇರುವುದ-ರಿಂದ ಅದಕ್ಕಾಗಿ ಆಲೋಚನೆ ಮಾಡುವವನಿಗೆ ರಸಾನುಭವದಲ್ಲಿ ವಿಳಂಬವಾಗುವುದ-ರಿಂದ ಇದು ದೋಷವೆನಿಸಿದೆ.

ಉದಾಹರಣೆಗೆ ಅಶ್ವತ್ಥಾಮನು ತನ್ನ ಶಸ್ತ್ರವನ್ನು ಉದ್ದೇಶಿಸಿ ಹೇಳುವ ಈ ಪದ್ಯದಲ್ಲಿ ನಿರ್ಹೇತುವೆಂಬ ಅರ್ಥದೋಷವನ್ನು ಕಾಣಬಹುದು.

**ಗೃಹೀತಂ ಯೇನಾಸೀಃ ಪರಭವಭಯಾ ನೋ ಚಿತಮಪಿ**
**ಪ್ರಭಾವಾದ್ಯಸ್ಯಾಭೂನ್ನ ಖಲು ತವ ಕಶ್ಚಿನ್ನ ವಿಷಯಃ ।**
**ಪರಿತ್ಯಕ್ತಂ ತೇನ ತ್ವಮಪಿ ಸುತಶೋಕಾನ್ನ ತು ಭಯಾತ್**
**ವಿಮೋಕ್ಷ್ಯೇಶಸ್ತ್ರ! ತ್ವಾಮಹಮಪಿ ಯತೇ ಸ್ವಸ್ತಿ ಭವತೇ**[೨೦] ॥

"ಎಲ್ಲೈ ಶಸ್ತ್ರವೇ, ನನ್ನ ತಂದೆಯಾದ ದ್ರೋಣನು ಬೇರೆಯವರಿಂದ ಆದ ಅವಮಾನದ ಭಯದಿಂದ ಬ್ರಾಹ್ಮಣಧರ್ಮಕ್ಕೆ ವಿರುದ್ಧವಾಗಿ ನಿನ್ನನ್ನು ಕೈಯಲ್ಲಿ ಹಿಡಿದದ್ದಾಯಿತು. ಹಾಗೆಯೇ ಅವನ ಪ್ರಭಾವದಿಂದ ದೇವ ಮನುಷ್ಯರಲ್ಲಿ ಯಾವನೊಬ್ಬನೂ ನಿನಗೆ ಗುರಿಯಾಗಲಿಲ್ಲ. ಅವನು ಮಗನ ಮೇಲಿನ ಪ್ರೇಮದಿಂದ ನಿನ್ನನ್ನು ತೊರೆದದ್ದೂ ಆಯಿತು, ಆದರೆ ಯಾರಿಗೂ ಹೆದರಿ ಅವನು ನಿನ್ನನ್ನು ತೊರೆಯಲಿಲ್ಲ. ಅಂತಹ ನಿನ್ನನ್ನು ನಾನು ಸಹ ಇಂದು ತೊರೆಯುವೆನು. ನನ್ನಿಂದ ಮುಂದೆ ಹೊರಡಲಿರುವ ನಿನಗೆ ಮಂಗಳವಾಗಲಿ". ಇಲ್ಲಿ ಅಶ್ವತ್ಥಾಮನು ಶಸ್ತ್ರವನ್ನು ತೊರೆಯುವುದಕ್ಕೆ ಕಾರಣವನ್ನು ಹೇಳದೆ ಇರುವುದರಿಂದ ಇದು ನಿರ್ಹೇತುತ್ವವೆಂಬ ಅರ್ಥ ದೋಷವಾಗಿದೆ.

## ೭. ವಿರುದ್ಧ ಪ್ರಕಾಶತ್ವ

ವಿರುದ್ಧ ಪ್ರಕಾಶತ್ವ ಎಂದರೆ ಅನಿಷ್ಟವಾದ ಅರ್ಥವನ್ನು ಪ್ರಕಾಶ ಪಡಿಸುವುದು ಎಂಬ ಅರ್ಥವಾಗಿದೆ. ಕುಮಾರಸ್ತೇನರಾಧೀಶ! ಶ್ರೀಯಂ ಸಮುಧಿಗಚ್ಛತು! "ಎಲೈ ಮಹಾರಾಜನೇ, ನಿನ್ನ ಮಗನು ರಾಜ್ಯಲಕ್ಷ್ಮಿಯನ್ನು ಹೊಂದಲಿ" ಇಲ್ಲಿ ತಂದೆಯು

ಜೀವಿಸಿರುವಾಗ ಮಗನಿಗೆ ರಾಜ್ಯಪ್ರಾಪ್ತಿಯಾಗುವ ಸಂಭವವಿಲ್ಲದ್ದರಿಂದ "ನೀನು ಸಾಯಬೇಕು ಅನಂತರ ನಿನ್ನ ಮಗನಿಗೆ ರಾಜಲಕ್ಷ್ಮಿಯು ಬರಬೇಕು" ಎಂಬ ಅನಿಷ್ಟವಾದ ಅರ್ಥವು ಪ್ರಕಾಶವಾಗುತ್ತದೆ. ಹೀಗೆ ಅನಿಷ್ಟವಾದ ಅರ್ಥವನ್ನು ಪ್ರಕಾಶಪಡಿಸುವುದನ್ನು ಪ್ರಕಾಶಿತ ವಿರುದ್ಧ ಎನಿಸಿದೆ. ಅನಿಷ್ಟವಾದ ಅರ್ಥವನ್ನು ತಿಳಿಸುವುದರಿಂದ ಕೇಳುವವರಿಗೆ ಉದ್ವೇಗ ಉಂಟಾಗುತ್ತದೆ. ಆಗ ಚಮತ್ಕಾರ ಹುಟ್ಟಿಸುವ ರಸಾಸ್ವಾದವು ಕುಂದುವುದ–ರಿಂದ ದೋಷವುಂಟಾಗುತ್ತದೆ. ವಿರುದ್ಧಮತಿಕಾರಿತ್ವವೆಂಬ ದೋಷದಲ್ಲಿ ಶಬ್ದಕ್ಕೆ ಸಂಬಂಧಿಸಿದಂತೆ ದೋಷವುಂಟಾದರೆ ವಿರುದ್ಧಪ್ರಕಾಶತ್ವದಲ್ಲಿ ಅರ್ಥ ಸಂಬಂಧಿಸಿದ ದೋಷವುಂಟಾಗುತ್ತದೆ.

## ೮. ಖ್ಯಾತಿವಿರುದ್ಧತೆ

ಖ್ಯಾತಿವಿರುದ್ಧತೆ ಎಂದರೆ ಸಮಾಜದಲ್ಲೂ ಕವಿ ಸಂಪ್ರದಾಯದಲ್ಲೂ ಪ್ರಸಿದ್ಧವಲ್ಲದ್ದನ್ನೂ ಬೇರೆ ರೀತಿಯಲ್ಲಿ ಹೇಳುವುದೇ ಖ್ಯಾತಿವಿರುದ್ಧವೆನಿಸಿದೆ. ಇಲ್ಲಿ ತತಶ್ಚಚಾರ ಸಮರೇ ಶೀತಶೂಧರೋ ಹರಿಃ! "ತೀಕ್ಷ್ಣವಾದ ಶೂಲಾಯುಧವನ್ನು ಹಿಡಿದಿರುವ ಹರಿಯು ಯುದ್ಧದಲ್ಲಿ ಸಂಚರಿಸಿದನು" ಇಲ್ಲಿ ಹರಿಗೆ ತ್ರಿಶೂಲವಿದೆ ಎಂಬುದು ಲೋಕದಲ್ಲಿ ಎಲ್ಲಿಯೂ ಪ್ರಸಿದ್ಧವಿಲ್ಲ. ಪಾದಾಘಾತದಶೋಕಸ್ತೇ ಸಂಜಾಂತಾಂಕುರಕಂಟಕಃ! "ಎಲೈ ಪ್ರೇಯಸಿ, ನಿನ್ನ ಪಾದದ ಹೊಡೆತದಿಂದ ಅಶೋಕ ವೃಕ್ಷದಲ್ಲಿ ಮೊಳಕೆಯನ್ನು ಹುಟ್ಟಿಸುವ ಮುಳ್ಳುಗಳು ಕಾಣಿಸಿಕೊಂಡವು" ಇಲ್ಲಿ ಪಾದಾಘಾತದಿಂದ ಅಶೋಕವೃಕ್ಷದಲ್ಲಿ ಪುಷ್ಪವೇ ಹುಟ್ಟುವುದೇ ಹೊರತು ಅಂಕುರ ಹುಟ್ಟುವುದಿಲ್ಲವೆಂಬುದು ಲೋಕಪ್ರಸಿದ್ಧವಾಗಿದೆ. ಅದಕ್ಕೆ ವಿರುದ್ಧವಾಗಿ ವರ್ಣಿಸುವುದು ಕವಿ ಸಮಯಕ್ಕೂ ವಿರುದ್ಧವಾಗಿದೆ.

## ೯. ವಿದ್ಯಾವಿರುದ್ಧ

ವ್ಯಾಕರಣವನ್ನು ಬಿಟ್ಟು ಉಳಿದ ಶಾಸ್ತ್ರಗಳ ನಿಯಮಕ್ಕೆ ವಿರುದ್ಧವಾಗಿರುವುದು ವಿದ್ಯಾವಿರುದ್ಧ ದೋಷವಾಗಿದೆ. ವ್ಯಾಕರಣಶಾಸ್ತ್ರಕ್ಕೆ ವಿರುದ್ಧವಾಗಿರುವುದು ಚ್ಯುತಸಂಸ್ಕಾರವೆನಿಸುವುದರಿಂದ ಅದನ್ನು ಬಿಟ್ಟು ಉಳಿದ ಶಾಸ್ತ್ರಗಳನ್ನು ಇಲ್ಲಿ ಗ್ರಹಿಸಬೇಕಾಗುತ್ತದೆ. ಹಾಸ್ಯರಸದಲ್ಲಿ ಈ ನಿಯಮವನ್ನು ಉಲ್ಲಂಘಿಸುವುದರಲ್ಲಿ ಗುಣವಿರುವುದರಿಂದ ಇದು ಅನಿತ್ಯದೋಷವೆನಿಸುವುದು. "ಅಧರೇ ಕರಜಕ್ಷತಂ ಮೃಗಾಕ್ಷ್ಯಾಃ" "ಜಿಂಕೆಯಂತೆ ಕಣ್ಣುಗಳಿರುವ ಆ ಸುಂದರಿಗೆ ತುಟಿಯಲ್ಲಿ ಉಗುರಿನಿಂದ ಜಿಗುಟಿದ ಗುರುತಿದೆ". ಇಲ್ಲಿ ತುಟಿಯಲ್ಲಿ ಉಗುರಿನಿಂದ ಜಿಗುಟುವುದು ಶೃಂಗಾರರಸಕ್ಕೆ ವಿರುದ್ಧವಾಗಿದೆ. ತುಟಿಯನ್ನು ಹಲ್ಲಿನಿಂದ ಕಚ್ಚಬೇಕೇ ಹೊರತು ಉಗುರಿನಿಂದ ಕಚ್ಚುವುದು ಯುಕ್ತವಲ್ಲ. ಹೀಗೆ ಬೇರೆ ಶಾಸ್ತ್ರಗಳಿಗೆ ವಿರುದ್ಧವಾಗಿರುವುದನ್ನ ವಿದ್ಯಾವಿರುದ್ಧ ಅರ್ಥದೋಷವೆನಿಸಿದೆ.

## ೧೧. ವಿಧ್ಯಯುಕ್ತತೆ

ಕೊನೆಗಾಣದೇ ಇರುವ ಕ್ರಿಯೆಯಲ್ಲಿ ಕೊನೆಗಾಣುವ ಕ್ರಿಯೆಯನ್ನು ಆರೋಪಿಸುವುದರಿಂದ ರಸಪ್ರತೀತಿಗೆ ಪ್ರತಿಬಂಧವುಂಟಾಗುವುದರಿಂದ ವಿಧ್ಯಯುಕ್ತತೆ ಎಂಬ ಅರ್ಥದೋಷವೆನಿಸಿದೆ. ಅಯೋಗ್ಯವಾದ ಅಂಶವನ್ನು ವಿಧಿಸುವುದು ವಿಧ್ಯಯುಕ್ತತೆ ಎಂದು ಕರೆಯಲಾಗಿದೆ. "ತನ್ನ ಕಡೆಯವರನ್ನು ಆನಂದ ಪಡಿಸುತ್ತಲೇ ಈತನು ಬೇರೆಯವರನ್ನು ಕೊಲ್ಲುವನು" ಇಲ್ಲಿ ಬೇರೆಯವರನ್ನು ಕೊಂದು ತನ್ನ ಕಡೆಯವರನ್ನು ಸಂತೋಷಗೊಳಿಸುವುದು ವಿಧೇಯವೆನಿಸಬೇಕಾಗಿತ್ತು ಆದರೆ ಇಲ್ಲಿ ದೋಷವಿಲ್ಲ. ಅದಕ್ಕೆ ಬದಲಾಗಿ ಆಯುಕ್ತವಾದ್ದು ಇಲ್ಲಿ ವಿಧೇಯವೆನಿಸಿದ್ದು ದೋಷವೆನಿಸಿದೆ.

**ಚಂಡೀಶ ! ಚೂಡಾಭರಣ! ಚಂದ್ರ! ಲೋಕತಾಮೋಽಪಹ ।**
**ವಿರಹಿ ಪ್ರಾಣಹರಣ! ಕದರ್ಥಯ ನಮಾಂ ವೃಥಾ**[೨೧] ॥

"ದುರ್ಗಾಪತಿ ಎನಿಸಿದ ಶಿವನ ಶಿಖೆಗೆ ಅಲಂಕಾರವೆನಿಸಿ ವಿರಹಿಗಳ ಪ್ರಾಣವನ್ನು ಅಪಹರಿಸುತ್ತಲೂ, ಲೋಕದ ಕತ್ತಲೆಯನ್ನು ಅಪಹರಿಸುತ್ತಲೂ ಇರುವ ಚಂದ್ರನೇ, ವಿರಹಿಯಾದ ನನ್ನನ್ನು ವ್ಯರ್ಥವಾಗಿ ಕಾಡಿಸಬೇಡ". ಇಲಿ ವಿರಹಿಯೊಬ್ಬನು ಹೇಳುವ ಮಾತಿನಲ್ಲಿ ಮೂರನೆ ಪಾದದ ಅರ್ಥವನ್ನು ಕರ್ತೃವೆನಿಸಿದ ಚಂದ್ರನಿಗೆ ಅನ್ವಯಿಸುವಂತೆ ಅನುವಾದ ಮಾಡಿದ್ದು ಅನುವಾದಾಯುಕ್ತತೆ ಎಂಬ ಅರ್ಥದೋಷ ಎನಿಸಿದೆ.

## ನಿರ್ಮುಕ್ತ ಪುರುಕ್ತತೆ

ವಾಕ್ಯಾರ್ಥವು ಪರಿಸಮಾಪ್ತವಾಗಿದ್ದರೂ ಬೇರೆ ಕಾರಣದಿಂದ ಅದನ್ನು ಮತ್ತೆ ತಿಳಿಸುವುದನ್ನು ನಿರ್ಮುಕ್ತ ಪುನರುಕ್ತವೆನಿಸುತ್ತದೆ. ಬೇರೊಂದು ವಿಶೇಷಣವಾದ್ದರಿಂದ ವಾಕ್ಯಾರ್ಥವನ್ನು ಮತ್ತೆ ತಿಳಿಸುವುದು ಸಮಾಪ್ತ ಪುನರಾತ್ತವೆನಿಸಿದರೆ, ವಿಶೇಷವೆನಿಸಿದ ಬೇರೊಂದು ಕಾರಣದಿಂದ ಅದನ್ನು ಮತ್ತೆ ತಿಳಿಸುವುದು ನಿರ್ಮುಕ್ತಪುನರುಕ್ತತೆ ಎನಿಸುವುದು. ಈ ಅರ್ಥದೋಷವನ್ನು ರಾಜನನ್ನು ಪ್ರಶಂಸಿಸುವ ಈ ಶ್ಲೋಕದಲ್ಲಿ ಕಾಣಬಹುದು.

**ಲಗ್ನಂ ರಾಗಾವೃತಾಂಗ್ಯಾ ಸುದೃಢಮಿಹ ಯಯ್ಯೈ ವಾಸಿಯಷ್ಟ್ಯೈರಿಕಂಠೇ**
**ಮಾತಂಗಾನಾಮಪೀಹೋಪರಿ ಪರಪುರುಷೈರ್ಯಾ ಚ ದೃಷ್ಟಾ ಪತಂತೀ ।**
**ತತ್ಸಕ್ತೋಽಯಂ ನ ಕಿಂಚಿದ್ಗುಣಯತಿ ವಿದಿತಂ ತೇಽಸ್ತು ತೇನಾಸ್ಮಿದತ್ತಾ**
**ಭೃತ್ಯೇಭ್ಯಃ ಶ್ರೀನಿಯೋಗಾದ್ಗದಿತುಮಿತಿ ಗತೇವಾಂಬುಧಿಂ ಯಸ್ಯಕೀರ್ತಿಃ**[೨೨] ॥

"ಶತ್ರುವಿನ ರಕ್ತದಿಂದಲೂ ಅನುರಾಗದಿಂದಲೂ ಎಲ್ಲಾ ಭಾಗಗಳಲ್ಲೂ ವ್ಯಾಪಿಸಿಕೊಂಡಿರುವ ಯಾವ ಕೃಶವಾದ ಕತ್ತಿಯೂ ಅದರಂತೆ ಕೃಶಳಾದ ಸ್ವೈರಿಣಿಸ್ತ್ರೀಯು

ಇಲ್ಲಿಯೇ ಶತ್ರುಗಳ ಕಂಠದಲ್ಲಿ ಶಿರಶ್ಛೇಧಕ್ಕಾಗಿಯೂ ಆಲಿಂಗನಕ್ಕಾಗಿಯೂ ಅಂಟಿಕೊಂಡಿತ್ತೋ, ಯಾವ ಖಡ್ಗವು ಆನೆಗಳ ಮತ್ತು ಆನೆಯ ಲಕ್ಷಣವಿರುವ ಪುರುಷರ ಮೇಲೆ ಅವರ ವಧಕ್ಕಾಗಿ ಬಿದ್ದು ಶತ್ರುವಿನ ಕಡೆಯವರಿಗೂ ಪತಿಯಲ್ಲಿದ್ದ ಬೇರೆ ಜನ–ರಿಗೂ ಕಾಣಿಸಿಕೊಂಡಿತ್ತೋ ಅಂತಹ ಖಡ್ಗದಲ್ಲೂ ಆ ಸ್ವೈರಿಣಿಯಲ್ಲೂ ಆಸಕ್ತನಾದ ನನ್ನ ಪತಿ ಎನಿಸಿದ ಈ ರಾಜನು ನನ್ನ ಸುಖವನ್ನು ಸ್ವಲ್ಪವೂ ಗಮನಿಸುತ್ತಿಲ್ಲ. ಆದರೆ ಅವನು ನನ್ನನ್ನು ಅವನ ಸೇವಕರಿಗೆ ಒಪ್ಪಿಸಿರುವನೆಂಬುದು ನನ್ನ ತಂದೆಯಾದ ನಿನಗೆ ತಿಳಿದಿರಲಿ. ಅನಂತರ ನಿನ್ನ ಮಗಳ ದುಃಖವಿಮೋಚನೆಗೆ ಮಾಡಬೇಕಾದ್ದನ್ನು ನೀನು ಮಾಡುವೆ. ಹೀಗೆಂದು ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯಲ್ಲಿ ತಿಳಿಸಲಿಕ್ಕೂ ಏನೂ ಎಂಬಂತೆ ನಿನ್ನ ಕೀರ್ತಿಯು ಸಮುದ್ರವನ್ನು ಹೊಕ್ಕಿತು". ಇಲ್ಲಿ 'ವಿದಿತಂ ತೇಽಸ್ತು' ಎಂಬುದರಿಂದ ವಾಕ್ಯಾರ್ಥವು ಕೊನೆಗೊಂಡರೂ 'ತೇನಾಸ್ಮಿದತ್ತಾ' ಎಂಬುದರಿಂದ ಅದನ್ನೇ ಮತ್ತೆ ತಿಳಿಸಿದ್ದು ದೋಷವೆನಿಸಿದೆ. ಇಲ್ಲಿಗೆ ಕಾವ್ಯದಲ್ಲಿ ಬರುವ ಇಪ್ಪತ್ತಮೂರು ಅರ್ಥದೋಷಗಳನ್ನು ವಿವರಿಸಿ ಮುಂದೆ ರಸದೋಷಗಳನ್ನು ವಿವರಿಸಲಾಗಿದೆ.

**ರಸದೋಷಗಳು**

**ರಸಸ್ಯೋಕ್ತಿಃ ಸ್ವಶಬ್ದೇನ ಸ್ಥಾಯಿಸಂಚಾರಿಣೋರಪಿ ।**
**ಪರಿಪಂಥಿರಸಾಂಗಸ್ಯ ವಿಭಾವಾದೇಃ ಪರಿಗ್ರಹ ॥**
**ಅಕ್ಷೇಪಃ ಕಲ್ಪಿತಃ ಕೃಚ್ಛ್ರಾದನುಭಾವವಿಭಾವಯೋಃ ।**
**ಅಕಾಂಡೇ ಪ್ರಥನಚ್ಛೇದೌ ತಥಾ ದೀಪ್ತಿಃ ಪುನಃ ಪುನಃ ॥**
**ಅಂಗಿನೋಽನನು ಸಂಧಾನಂ ಅನಂಗಸ್ಯ ಚ ಕೀರ್ತನಂ ।**
**ಅತಿವಿಸ್ತೃತಿರಂಗಸ್ಯ ಪ್ರಕೃತೀನಾಂ ವಿಪರ್ಯಯಃ ॥**
**ಅಥಾನೌಚಿತ್ಯಮನ್ಯಚ್ಚ ದೋಷಾ ರಸಗತಾ ಮತಾಃ** ೨೩।

ಇನ್ನು ರಸದೋಷಗಳಿಗೆ ಸಂಬಂಧಿಸಿದಂತೆ ದೋಷವು "ರಸಶಬ್ದದಿಂದಾಗಲೀ ಶೃಂಗಾರಾದಿ ಶಬ್ದಗಳಿಂದಾಗಲೀ ರಸವನ್ನು ತಿಳಿಸುವುದು, ಸ್ಥಾಯಿಭಾವ ಸಂಚಾರಿ ಭಾವಗಳನ್ನು ಆಯಾ ಶಬ್ದಗಳಿಂದ ತಿಳಿಸುವುದು, ವಿರುದ್ಧವಾದ ರಸಕ್ಕೆ ಅಂಗವೆನಿಸಿದ ವಿಭಾವಾದಿಗಳನ್ನು ಶಬ್ದದಿಂದ ತಿಳಿಸುವುದು, ಕಷ್ಟದಿಂದ ಅನುಭಾವ ವಿಭಾವಗಳನ್ನು ಕಲ್ಪಿಸಿಕೊಳ್ಳುವುದು, ಅವಕಾಶವಿಲ್ಲದ ಕಡೆ ರಸವು ವಿಸ್ತಾರಗೊಳ್ಳುವುದು, ಹಾಗೆಯೇ ಅದಕ್ಕೆ ಭಂಗವುಂಟಾಗುವುದು, ಅದನ್ನು ಮತ್ತೆ ಮತ್ತೆ ಪ್ರಕಾಶಗೊಳಿಸುವುದು, ಪ್ರಧಾನವಾದ ರಸವನ್ನು ಮಾತಿನಿಂದ ಸ್ಪಷ್ಟಪಡಿಸುವುದು, ಅಂಗವೆನಿಸಿದ ರಸವನ್ನು ವಿಸ್ತಾರಗೊಳಿಸುವುದು, ನಾಯಕ ಮೊದಲಾದವರನ್ನೂ ಅದರ ಸ್ವಭಾವಗಳನ್ನು ಬೇರೆ ರೀತಿಯಲ್ಲಿ ಬದಲಾಯಿಸುವುದು, ಅಲ್ಲದೇ ಬೇರೆ ಬಗೆಯ ಅನೌಚಿತ್ಯ" ಇವಿಷ್ಟು ರಸಕ್ಕೆ ಸಂಬಂಧಿಸಿದ ದೋಷಗಳಾಗಿವೆ.

ರಸಶಬ್ದದಿಂದಾಗಲೀ ಶೃಂಗಾರಾದಿಶಬ್ದಗಳಿಂದಾಗಲೀ ಉಂಟಾಗುವ ರಸದೋಷವನ್ನು ಈಗ ವಿವೇಚಿಸಲಾಗಿದೆ. ಉದಾಹರಣೆಗೆ

**ತಾಮುದ್ವೀಕ್ಷ್ಯ ಕುರಂಗಾಕ್ಷೀಂ ರಸೋ ನಃ ಕೋऽಪ್ಯಜಾಯತ ।**
**ಚಂದ್ರಚಂಚಾಲಮಾಲೋಕ್ಯ ಶೃಂಗಾರೇ ಮಗ್ನಮಂತರಮ್**[೨೪] **॥**

"ಜಿಂಕೆಯಂತೆ ಕಣ್ಣುಗಳಿರುವ ಆಕೆಯನ್ನು ನೋಡಿ ನಮಗೆ ಯಾವುದೋ ಒಂದು ಬಗೆಯ ರಸವು ಹುಟ್ಟಿತು, ಚಂದ್ರಮಂಡಲವನ್ನು ನೋಡಿ ಶೃಂಗಾರದಲ್ಲಿ ಮನಸ್ಸು ಅಂಟಿತು". ಇಲ್ಲಿ ರಸವನ್ನು ಶಬ್ದದಿಂದಲೂ ಶೃಂಗಾರ ಪದದಿಂದಲೂ ತಿಳಿಸಿದ್ದು ದೋಷವಾಗಿದೆ. ಸ್ಥಾಯಿಭಾವವನ್ನು ಸ್ವಶಬ್ದದಿಂದ ತಿಳಿಸುವುದಕ್ಕೆ ಉದಾಹರಣೆ "ಜಾತಾ ಲಜ್ಜಾವತೀ ಮುಗ್ಧಾ ಪ್ರಿಯಸ್ಯ ಪರಿಚುಂಬನೇ" "ಮುಗ್ಧೆಯು ಪ್ರಿಯನನ್ನು ಚುಂಬಿಸುತ್ತಲೇ ಲಜ್ಜೆಗೊಂಡಳು". ಇಲ್ಲಿ ಲಜ್ಜಾ ಪದವನ್ನು ಶಬ್ದದಿಂದ ತಿಳಿಸಿದ್ದು ದೋಷವಾಗಿದೆ. ಇಲ್ಲಿ "ಆಕೆಯ ಕಣ್ಣುಗಳನ್ನು ಮುಚ್ಚಿಕೊಂಡಳು" ಎಂದು ಲಜ್ಜೆಯನ್ನು ಅನುಭಾವದ ಮೂಲಕ ತಿಳಿಸಿದರೆ ಹೊಂದಿಕೆಯಾಗುತ್ತದೆ. ಮಾನಂ ಮಾ ಕುರು ತನ್ವಂಗಿ! ಜ್ಞಾತ್ವಾ ಯೌವನಮ ಸ್ಥಿರಮ್! ಎಲೈ ಕೃಶಾಂಗಿಯೇ "ಯೌವನವು ಸ್ಥಿರವಲ್ಲವೆಂದು ತಿಳಿದು ಪ್ರಣಯ ಕೋಪವನ್ನು ಮಾಡಬೇಡ" ಇಲ್ಲಿ ಯೌವನವು ಸ್ಥಿರವಲ್ಲವೆಂದು ತಿಳಿಸುವುದು ಶೃಂಗಾರ ರಸಕ್ಕೆ ಶತ್ರುವೆನಿಸಿದ ಶಾಂತರಸಕ್ಕೆ ಪೋಷಕವೆನಿಸಿ ಆ ಶಾಂತರಸಕ್ಕೆ ವಿಭಾವವಾಗಿದೆ. ಶೃಂಗಾರರಸವನ್ನು ಪ್ರಕಾಶಪಡಿಸುವ ಪ್ರಕರಣದಲ್ಲಿ ಅದಕ್ಕೂ ವಿರುದ್ಧವಾದ ಶಾಂತರಸದ ವಿಭಾವವನ್ನು ತಿಳಿಸಿದ್ದರಿಂದ ಇದು ಒಂದು ಬಗೆಯ ರಸದೋಷವಾಗಿದೆ. ವಿಭಾವಾದಿಗಳು ಬಹಳ ಕ್ಲೇಶದಿಂದವುಂಟಾಗುವುದನ್ನ ರಸದೋಷವೆಂದು ಪರಿಗಣಿಸಿ ಅದನ್ನು ಉದಾಹರಣೆಯ ಮೂಲಕ ತಿಳಿಸಲಾಗಿದೆ.

**ಧವಳಯೇತಿ ಶಿರರೋಚಿಷಿ ಭುವನತಲಂ ಲೋಕಲೋಚನಾನಂದೇ ।**
**ಈಷ ತಿ ಕ್ಷಿಪ್ತ ಕಟಾಕ್ಷ ಸ್ಮೇರಮುಖೀ ಸಾನೀಕ್ಷ್ಯತಾಂ ತನ್ವೀ** [೨೫]**॥**

"ಲೋಕದ ಜನರ ಕಣ್ಣುಗಳನ್ನು ಆನಂದಪಡಿಸುವ ಶೀತಕಿರಣವೆನಿಸಿದ ಚಂದ್ರನು ಭೂಮಿಯನ್ನು ಬೆಳ್ಳಗೆ ಮಾಡುತ್ತಿರಲು ಕೊಂಚವೇ ಓರೆನೋಟವನ್ನು ಬೀರಿದ ನಗುಮುಖದ ಆ ಕೃಶಾಂಗಿಯನ್ನು ನೋಡಬೇಕು". ಇಲ್ಲಿ ಕಟಾಕ್ಷಪಾತ ಮಂದಹಾಸಗಳೇ ಉದ್ದೀಪನ ವಿಭಾವ, ನಾಯಕನೇ ಆಲಂಬನ ವಿಭಾವ, ಇವೇ ಇಲ್ಲಿ ನಾಯಕ ನಾಯಕಿಯರ ನಿರೀಕ್ಷಣವೆಂಬ ಅನುಭವವಾಗಿ ಪರಿಣಾಮವಾಗುವುದರಿಂದ ಇಲ್ಲಿ ಅವನು ಕಷ್ಟದಿಂದ ಕಲ್ಪಿಸಬೇಕಾಗಿರುವುದರಿಂದ ರಸಪ್ರಕಾಶಕ್ಕೆ ತಡೆವುಂಟಾಗಿ ರಸದೋಷವಾಗಿದೆ.

ಇನ್ನು ನಾಯಿಕೆಯಲ್ಲಿ ಅನುರಾಗವಿಟ್ಟಿರುವ ಸ್ನೇಹಿತನ ಅವಸ್ಥೆಯನ್ನು ಮತ್ತೊಬ್ಬ ಸ್ನೇಹಿತನು ವರ್ಣಿಸುವುದನ್ನು ಉದಾಹರಿಸಲಾಗಿದೆ.

**ಪರಿಹರತೀ ರತಿಂ ಮತಿಂ ಲುನೀತೇ ಸ್ಖಲತಿತರಾಂ ಪರಿವರ್ತತೇ ಚ ಭೂಯಃ।**
**ಇತಿ ಬತ ವಿಷಮಾ ದಶಾऽಸ್ಯ ದೇಹಂ ಪರಿಭವತಿ ಪ್ರಸಭಂ ಕಿಮತ್ರ ಕರ್ಮಃ ॥**

"ಈ ಸ್ನೇಹಿತನು ಬೇರೆ ವಸ್ತುಗಳ ಬಗ್ಗೆ ಅನುರಾಗವನ್ನು ತೊರೆದಿದ್ದಾನೆ. ಧೈರ್ಯದಿಂದ ಸಂಪಾದಿಸಬೇಕಾದ ಬುದ್ಧಿಯನ್ನೂ ಸಹ ತೊರೆದಿದ್ದಾನೆ. ಆಡಿದ ಮಾತನ್ನು ಪದೇ ಪದೇ ಬದಲಾಯಿಸುತ್ತಾನೆ. ಮತ್ತೆ ಮತ್ತೆ ಹಾಸಿಗೆಯಲ್ಲಿ ಹೊರಳಾಡುತ್ತಾನೆ. ಹೀಗೆ ಇವನ ಅವಸ್ಥೆಯು ಅಸಹ್ಯವೆನಿಸಿದೆ. ಶರೀರವು ಬಲತ್ಕಾರದಿಂದ ಕ್ಲೇಶಕ್ಕೆ ಸಿಕ್ಕಿಕೊಂಡಿದೆ. ಈ ಬಗ್ಗೆ ಏನು ಮಾಡೋಣ"? ಇಲ್ಲಿ ಹೇಳಿರುವ ರತಿಪರಿಹಾರ ಮೊದಲಾದ ಅನುಭವಗಳು ಕರುಣ ರಸದಲ್ಲೂ ಸಂಭವಿಸುವುದ–ರಿಂದ ಕಾಮಿನಿಯನ್ನು ಉದ್ದೇಶಿಸಿ ಇವೆಲ್ಲವೂ ಅವನಿಗೆ ಉಂಟಾಗುತಿರುವುದರಿಂದ ಹೊಂದಿಸಿಕೊಳ್ಳಬೇಕಾಗಿದೆ. ಈಗ ಅವಕಾಶವಿಲ್ಲದ ಕಡೆ ರಸದೋಷವಿರುವುದನ್ನು ಉದಾಹರಿಸಲಾಗಿದೆ. ವೇಣಿಸಂಹಾರದಲ್ಲಿ[೨೬] ಅನೇಕ ಭೀಕರ ಕೊಲೆಯಾಗುತ್ತಿರುವ ವಿಷಮಕಾಲದಲ್ಲಿ ದುರ್ಯೋಧನನು ಭಾನುಮತಿಯೊಡನೆ ಶೃಂಗಾರದ ಅನುಭವದಲ್ಲಿ ತೊಡಗಿರುವುದಾಗಿ ವರ್ಣಿಸಿದ್ದರಿಂದ ಇಲ್ಲಿ ಅವಕಾಶವಿಲ್ಲದ ಕಡೆ ಶೃಂಗಾರರಸವನ್ನು ವರ್ಣಿಸಿರುವುದು ರಸದೋಷವಾಗಿದೆ. ಮಹಾವೀರಚರಿತದಲ್ಲಿ ರಾಘವ ಭಾರ್ಗವ ಇವರಿಬ್ಬರೂ ಊರಿನ ಬಾಗಿಲಿನಲ್ಲಿಯೇ ಯುದ್ಧವು ಆರಂಭವಾಗುವಾಗ "ನಾನು ಕಂಕಣವನ್ನು ತೆರೆಯಲಿದ್ದೇನೆ" ಎಂದು ರಾಘವನು ಹೇಳುವ ಮಾತಿನಿಂದ ಕಾರಣವಿಲ್ಲದ ರಸವು ಬೇಗನೆ ಕೊನೆಯಾಗುವುದು ರಸಪ್ರಕಾಶಕ್ಕೆ ದೋಷವುಂಟಾಗಿದೆ. ಅಮೂಲ್ಯವಾದ ವಸ್ತುವನ್ನು ತಿಳಿಸುವುದೂ ಸಹ ರಸದೋಷವೇ ಆಗಿದೆ. ಇದಕ್ಕೆ ಉದಾಹರಣೆ "ರಾಜನಿಗೂ ನಾಯಿಕೆಗೂ ನಡೆಯುವ ವಸಂತನ ವರ್ಣನವನ್ನು ತೊರೆದು ನಂದಿಯು ತಿಳಿಸುವ ವಸಂತವರ್ಣನವನ್ನೇ ಪ್ರಶಂಸಿಸಿದ್ದು"[೨೭] ಇದು ಅಮುಖ್ಯವಾದ್ದರಿಂದ ರಸದೋಷವಾಗಿದೆ. ಹಾಗೆಯೇ ಕಿರಾತಾರ್ಜುನಿಯದಲ್ಲಿ ಸುರಾಂಗನೆಯ ವಿಲಾಸವು ಅಪ್ರಾಧಾನ ರಸವನ್ನು ಬಹಳ ವಿಸ್ತಾರಗೊಳಿಸುವುದಕ್ಕೆ ಉದಾಹರಣೆಯಾಗಿದೆ. ಇದು ಸಹ ರಸದೋಷವಾಗಿದೆ. ಕುಮಾರಸಂಭವದಲ್ಲಿ ರತಿವಿಲಾಸದಲ್ಲಿ ರಸವು ಮತ್ತೆ ಮತ್ತೆ ಪ್ರಕಾಶಗೊಳ್ಳುವುದನು ಕಾಣಬಹುದು. ಪ್ರಧಾನವಸ್ತುವನ್ನು ಪ್ರಕಾಶ ಪಡಿಸದಿರುವುದಕ್ಕೆ ರತ್ನಾವಳಿಯಲ್ಲಿ [೨೮]ಉದಾಹರಣೆಯನ್ನು ಕಾಣಬಹುದು. "ಬಾಂಧವ್ಯನೆಂಬ ಕಂಚುಕಿಯು ಬಂದ ಮೇಲೆ ಸಾಗರಿಕೆಯನ್ನು ಮರೆತದ್ದರಿಂದ ಪ್ರಧಾನ ವ್ಯಕ್ತಿಯನ್ನೇ ತೊರೆದಂತಾಯಿತು". ಈ ಉದಾಹರಣೆಯಲ್ಲಿ ಪ್ರಧಾನವಾದ ವ್ಯಕ್ತಿಯನ್ನು ತೊರೆಯುವುದೇ ರಸ ದೋಷವಾಗಿದೆ. ಹಾಗೆಯೇ

‘ಧೀರೋದಾತ್ತನಾದ ರಾಮನನ್ನು ಧೀರೋದ್ಧತನೆಂದು ವರ್ಣಿಸಿ ಅವನು ಮೋಸದಿಂದ ವಾಲಿಯನ್ನು ಕೊಂದನೆಂದು ತಿಳಿಸುವುದು’, ‘ಪ್ರಕೃತಿ ವಿಪರ್ಯಯ’ ದೋಷವಾಗಿದೆ ಮತ್ತು ಉತ್ತಮ ದೇವತೆಯರೆನಿಸಿದ “ಪಾರ್ವತಿ ಪರಮೇಶ್ವರ ಸಂಭೋಗ ಶೃಂಗಾರವನ್ನು ವರ್ಣಿಸುವುದು”[೨೯] ಇಲ್ಲಿ ಪ್ರಕೃತಿ ವಿಪರ್ಯಯವೆಂಬ ರಸದೋಷವಿದೆ. ಒಟ್ಟಿನಲ್ಲಿ ರಸಸ್ಫೂರ್ತಿಗೆ ಅನುಕೂಲವಲ್ಲದ ಕಾಲ ಮತ್ತು ಸ್ಥಳಗಳಲ್ಲಿ ವರ್ಣನವು ಬಂದರೆ ಅನೌಚಿತ್ಯವಾಗಿ, ರಸಪ್ರಕಾಶಕ್ಕೆ ತೊಂದರೆವುಂಟಾಗುವುದರಿಂದ ಸಹೃದಯರು ಕಾವ್ಯದ ಬಗ್ಗೆ ಹೆಚ್ಚು ಗಮನವನ್ನು ಕೊಡಲಾರರು.

ಇನ್ನು ಭೋಜರಾಜ[೩೦] ಮೊದಲಾದವರು ಹೇಳಿರುವ ಅಲಂಕಾರ ದೋಷಗಳನ್ನು ವಿಶ್ವನಾಥನು ತಾನು ಹೇಳಿರುವ ಐದು ದೋಷಗಳಲ್ಲಿಯೇ ಸೇರಿಸಿ ಉದಾಹರಿಸಿದ್ದಾನೆ. ಹೇಗೆಂದರೆ ಉಪಮಾಲಂಕಾರದಲ್ಲಿ ಸಾಧಾರಣ ಧರ್ಮವಿಲ್ಲದ್ದರಿಂದ ಅಸಂಭವವೆಂದೂ ಅಲ್ಲಿಯೇ ಉಪಮೇಯಕ್ಕಿಂತ ಉಪಮಾನವು ಜಾತಿಯಲ್ಲೂ ಪ್ರಮಾಣದಲ್ಲೂ ನ್ಯೂನವೂ ಆಧಿಕವೋ ಆಗಿರುವಾಗಲೂ ಹಾಗೆಯೇ ಅರ್ಥಾಂತರನ್ಯಾಸದಲ್ಲೂ ಉತ್ಪ್ರೇಕ್ಷಿಸಬೇಕಾದ ಅಂಶವನ್ನು ಸಮರ್ಥಿಸುವಾಗ ಅನುಚಿತವಾದ ಅರ್ಥವನ್ನು ತಿಳಿಸುವುದನ್ನು ದೋಷವೆಂದು ಪರಿಗಣಿಸಿ ಇವೆಲ್ಲವನ್ನು ಬೇರೆ ದೋಷಗಳನ್ನಾಗಿ ಮಾಡದೇ ತಾನು ಮಾಡಿರುವ ಐದು ದೋಷಗಳಲ್ಲಿಯೇ ಸೇರಿಸಿ, ಉದಾಹರಿಸಿದ್ದಾನೆ.

“ಕಿರಣಗಳಂತೆ ವಿಸ್ತಾರವಾದ ಅರ್ಥವುಳ್ಳ ಚಂದ್ರನಂತಿರುವ ಕಾವ್ಯವನ್ನು ರಚಿಸುವೆನು” ಇಲ್ಲಿ ಅರ್ಥರಶ್ಮಿಗಳಿಗೂ ಕಾವ್ಯಶಶಿಗಳಿಗೂ ಸಾಧಾರಣ ಧರ್ಮವನ್ನು ತಿಳಿಸಿಲ್ಲವಾದ್ದರಿಂದ ಸಾದೃಶ್ಯವೆ ತೋರದೇ ಇರುವುದರಿಂದ ಇಲ್ಲಿ ಅನುಚಿತಾರ್ಥ ದೋಷವಿದೆ. ಇನ್ನು ಉಪಮೇಯವು ಅನುಚಿತವೆನ್ನುವುದಕ್ಕೆ ಉದಾಹರಣೆ ನಿನ್ನ ಬಾಣಗಳು ಉರಿಯುವ ನೀರಿನ ಧಾರೆಯಂತೆ ಬೀಳುತ್ತಿವೆ. ಉರಿಯುವ ಕಟ್ಟಿಗೆಯಂತೆ ನೀರಿನಲ್ಲಿ ಉರಿಯುವಿಕೆ ಯೆಂಬುದೇ ಸಂಭವಿಸದಿರುವುದರಿಂದ ಇಲ್ಲಿ ಉಪಮಾಲಂಕಾರದಲ್ಲಿ ಅನೌಚಿತ್ಯವಿದೆ. “ಚಂಡಾಲನಂತೆ ಈ ರಾಜನು ಯುದ್ಧದಲ್ಲಿ ಹೆಚ್ಚು ಸಾಹಸಿಯಾಗಿರುವನು”. ಇಲ್ಲಿ ಉಪಮೇಯವೆನಿಸಿದ ಕ್ಷತ್ರಿಯಜಾತಿಯ ರಾಜನಿಗಿಂತಲೂ ಉಪಮಾನವೆನಿಸಿದ ಚಂಡಾಲಜಾತಿಯು ನ್ಯೂನವೆನಿಸಿದೆ. ಇದರಿಂದ ರಾಜನು ನೀಚನೆನಿಸುವುದರಿಂದ ಉಪಮೇಯವು ಅನುಚಿತವೆನಿಸಿದೆ. “ಹಗಲಿಗೆ ಹೆದರಿಯೋ ಏನೋ ಎಂಬಂತೆ ಗವಿಗಳಲ್ಲಿ ಅಡಗಿರುವ ಕತ್ತಲೆಯನ್ನು ಹಿಮವಂತನು ಸೂರ್ಯನಿಂದ ರಕ್ಷಿಸಿದನು. ನೀಚನಾದರೂ ಶರಣಾಗತನಾದರೆ ಅವನ ಬಗ್ಗೆ ದೊಡ್ಡವರಿಗೆ ಹೆಚ್ಚು ಆತ್ಮೀಯತೆ ಇರುತ್ತದೆ”. ಇಲ್ಲಿ ಕತ್ತಲೆಯು ಹಗಲಿಗೆ ಹೆದರಿತೆಂದು ಹೇಳಿದ್ದರಿಂದ ಅದರಲ್ಲಿ ಈ ಬಗೆಯ ಹೆದರಿಕೆಯನ್ನು ಉತ್ಪ್ರೇಕ್ಷಿಸಿದ್ದು ಅಸಂಭವ, ಅಚೇತನವಾದ ಅಂಧಕಾರದಲ್ಲಿ ಚೇತನಧರ್ಮವೆನಿಸಿದ ಭಯವು ಸಂಭವಿಸುವುದಿಲ್ಲ.

ಅದು ಹಗಲಿನಲ್ಲಿ ಗವಿಯಲ್ಲಿ ಅಡಗುವುದು ಸಹಜ. ಇಂತಹ ಕಡೆಗಳಲ್ಲಿ ಅದನ್ನು ಅರ್ಥಾಂತರನ್ಯಾಸದಿಂದ ಸತ್ಯವೆಂದು ಪ್ರತಿಪಾದಿಸುವುದು ಅನುಚಿತವಾಗಿದೆ.

ಹಾಗೆಯೇ ಮೂರು ಪಾದಗಳಲ್ಲಿ ಮಾತ್ರ ಯಮಕವನ್ನು ಸೇರಿಸುವುದು ಅಪ್ರಯುಕ್ತವೆಂಬ ದೋಷವೆನಿಸುವುದನ್ನು ಉದಾಹರಿಸಲಾಗಿದೆ. "ಆ ಸುಂದರಿಯು ಚಂದ್ರೋದಯವಾದ ಮೇಲೆ ಪ್ರೀತಿಪಾತ್ರರಾದ ಸಖಿಯರೊಡನೆ ಹಾಸ್ಯವಾಡುತ್ತ ಬೇಗನೆ ಲತಾಗೃಹಕ್ಕೆ ಹೋಗುತ್ತಾಳೆ". ಇಲ್ಲಿ ಮೂರನೆಯ ಪಾದದಲ್ಲಿ ಯಮಕವಿಲ್ಲದ್ದರಿಂದ ಉಳಿದ ಮೂರು ಪಾದಗಳಲ್ಲಿ ಮಾತ್ರ ಯಮಕವಿರುವುದು ಶಾಸ್ತ್ರ ಸಮ್ಮತವಾದರೂ ಅಪ್ರಯುಕ್ತವೆನಿಸಿದೆ. ಸಂಭಾವನೆಯನ್ನು ತಿಳಿಸುವುದಕ್ಕಾಗಿ ಉತ್ಪ್ರೇಕ್ಷೆಯಲ್ಲಿ ಯಥ-ಾಶಬ್ದವನ್ನು ಉಪಯೋಗಿಸುವುದು ಅವಾಚಕವೆನಿಸುವುದಕ್ಕೆ ಉದಾಹರಣೆ "ಶರೀರಧಾ-ರಿಯಾದ ಧರ್ಮದಂತೆ ರಾಜನು ಭೂಮಿಯನ್ನು ರಕ್ಷಿಸುತ್ತಾನೆ. ಇಲ್ಲಿ 'ಮೂರ್ತೋಧರ್ಮ ಇವ' ಎಂಬ ಅರ್ಥದಲ್ಲಿ ಯಥಾ ಶಬ್ದವನ್ನು ಪ್ರಯೋಗಿಸಿರುವುದರಿಂದ ಇದು ಉತ್ಪ್ರೇಕ್ಷೆಯನ್ನು ತಿಳಿಸದೇ ಇರುವುದರಿಂದ ಅವಾಚಕವೆನಿಸಿದೆ. ಹೀಗೆ ಅನುಪ್ರಾಸದಲ್ಲಿ ರಸಕ್ಕೆ ವಿರುದ್ಧವಾದ ವರ್ಣಗಳನ್ನು ಪ್ರಯೋಗಿಸುವುದರಿಂದಲೂ ದೋಷವುಂಟಾಗುತ್ತದೆ. "ಉದ್ವರ್ತಯತಿ" ಎಂಬಲ್ಲಿ ಶೃಂಗಾರರಸಕ್ಕೆ ವಿರುದ್ದವಾಗಿ ಟಕಾರಗಳನ್ನು ಪ್ರಯೋಗಿಸಿದ್ದು ದೋಷವಾಗಿದೆ. ಇನ್ನು ಉಪಮಾಲಂಕಾರದಲ್ಲಿ ಸಾಧಾರಣಧರ್ಮವು ಅಧಿಕ ಮತ್ತು ನ್ಯೂನವಾಗಿರುವುದಕ್ಕೆ ಉದಾಹರಣೆ. "ಕಪ್ಪು ಮೇಘದ ಕೊಂಚಭಾಗವನ್ನು ಮಾತ್ರ ಧ-ರಿಸಿರುವ ಶರತ್ಕಾಲದ ಮೇಘವು ಮಿಂಚಿನಿಂದ ಶೋಭಿಸುವಂತೆ ಭಸ್ಮದಿಂದ ಬೆಳ್ಳಗಿರುವ ಶಂಭುವು ಮೂರನೇ ಕಣ್ಣಿನ ಕಾಂತಿಯಿಂದ ಶೋಭಿಸುತ್ತಾನೆ. ಇಲ್ಲಿ ಶಿವನಲ್ಲಿರುವ ನೀಲಕಂಠತ್ವವನ್ನು ತಿಳಿಸದೇ ಇರುವುದರಿಂದ ಮೇಘದಲ್ಲಿ ಅದನ್ನು ತಿಳಿಸುವುದು ವ್ಯರ್ಥವಾಯಿತು. ಅದಕ್ಕಾಗಿ ನಾಲ್ಕನೆಯ ಪಾದವನ್ನು ತಿಳಿಸಿದ್ದು ಅಧಿಕವೆನಿಸಿ ದೋಷಯುಕ್ತವಾಗಿದೆ. ಇನ್ನು ಭಗ್ನಪ್ರಕ್ರಮವೆಂಬ ದೋಷವನ್ನು ತಿಳಿಸಲಾಗಿದೆ. "ಲಕ್ಷ್ಮಿಯನ್ನು ಆಲಿಂಗಿಸಿಕೊಂಡು ಮುಕ್ತಮಾಲೆಯಿಂದ ಮನೋಹರನಾದ ಮರಾ-ರಿಯು ಮಿಂಚಿನಿಂದ ಅಲಂಕೃತವಾದ ನೀಲಮೇಘದಂತೆ ಶೋಭಿಸುತ್ತಾನೆ". ಇಲ್ಲಿ ಉಪಮೇಯವೆನಿಸಿದ ಕೃಷ್ಣನು ಮುಕ್ತಮಾಲೆಯಿಂದೊಡಗೂಡಿರು ವಂತೆ ಉಪಮಾನವೆನಿಸಿದ ನೀಲಜೀಮೂತವು ಬಕಪಕ್ಷಿಗಳ ಶ್ರೇಣಿಯೊಡಗೂಡಿರುವುದಾಗಿ ಹೇಳಬೇಕಾಗಿರುವುದರಿಂದ ಈ ಉಪಮಾಲಂಕಾರದಲ್ಲಿ ಉಪಮನೋಪಮೇಯಗಳಿಗೆ ವಚನಭೇದವಿದ್ದರೂ ವರ್ತಮಾನ ಮೊದಲಾದ ಕಾಲದಲ್ಲೂ, ಪ್ರಥಮ ಪುರುಷ ಮೊದಲಾದವುಗಳಲ್ಲೂ, ವಿಧಿಯನ್ನು ಭೋದಿಸುವ ವಿಭಕ್ತಿಗಳಲ್ಲೂ ಭೇದವಿದ್ದರೆ ಅದು 'ಭಗ್ನ ಪ್ರಕ್ರಮ'ವೆಂಬ ದೋಷವಾಗುವುದು. ಹೀಗೆ ಅಲಂಕಾರ ದೋಷಗಳೆಲ್ಲವೂ ಅನೌಚಿತ್ಯದಲ್ಲಿ ಸೇರುವುದರಿಂದ ಬೋಜ ಮೊದಲಾದ ವಿದ್ವಾಂಸರು ಹೇಳಿರುವ ಆರನೆ

ದೋಷವನ್ನು ಪ್ರತ್ಯೇಕವಾಗಿ ಪರಿಗಣಿಸದೆ ವಿಶ್ವನಾಥನು ತಾನು ಹೇಳಿರುವ ಐದು ದೋಷಗಳಲ್ಲಿಯೇ ಅವುಗಳನ್ನು ಸಮನ್ವಯಗೊಳಿಸಿ ಸಮರ್ಥಿಸಿಕೊಂಡಿರುವುದನ್ನು ಇದುವರೆಗೂ ವಿಮರ್ಶಿಸಲಾಯಿತು.

ಇನ್ನು ಹಿಂದೆ ಹೇಳಿದ ದೋಷಗಳಲ್ಲಿ ಕೆಲವು ಅನಿತ್ಯವೆನಿಸಿದ್ದರಿಂದ ದೋಷಗಳೇ ಆಗುವುದಿಲ್ಲ. ಮತ್ತು ಕೆಲವು ಉತ್ಕರ್ಷವನ್ನುಂಟು ಮಾಡುತ್ತ ಗುಣಗಳೆನಿಸುವುದನ್ನು ಈಗ ವಿಮರ್ಶಿಸಲಾಗಿದೆ.ದುಃಶ್ರವತ್ವ

ಮಾತನಾಡುವವನು ಕ್ರೋಧದಿಂದ ಕೂಡಿದ್ದರೂ, ಹಾಗೆ ಅವನಾಡುವ ಮಾತು ತುಂಬಾ ಭಯಂಕರವಾಗಿದ್ದರೂ ಆಗ ರೌದ್ರ ಮೊದಲಾದ ರಸಗಳಲ್ಲಿ ದುಃಶ್ರವತ್ವವೆಂಬ ದೋಷವು ಗುಣವಾಗುತ್ತದೆ. ಹೀಗೆ ದೋಷವೆನಿಸಿದ ದುಃಶ್ರವತ್ವ ಮೊದಲಾದವು ಆಸ್ವಾದವೆನಿಸಿದ ರಸಕ್ಕೆ ಪೂಷಕವಾಗುವುದರಿಂದ ಮಾಧುರ್ಯ ಮೊದಲಾದ ಗುಣಗಳನ್ನು ಹುಟ್ಟಿಸುವುದರಿಂದ ರಸಕ್ಕೆ ಅನುಕೂಲವೆನಿಸುತ್ತದೆ. ಆದ್ದರಿಂದ ದುಃಶ್ರವತ್ವ ಎಂಬ ದೋಷವನ್ನು ಗುಣವೆಂದು ಗೌಣವಾಗಿ ಭಾವಿಸುವುದರಿಂದ ವಕ್ತೃವು ಕೋಪಗೊಂಡಾಗ ದುಃಶ್ರವತ್ವವು ಗುಣವೆನಿಸುತ್ತದೆ.  ಉದಾಹರಣೆಗೆ

> **ತದ್ವಿ ಚ್ಛೆದಕೃಶಸ್ಯ ಕಂಠಲುಲಿತ ಪ್ರಾಣಸ್ಯ ಮೇ ನಿರ್ದಯಮ್**
> **ಕ್ರೂರಂ ಪಂಚಶರಃ ಶರೈರತಿಶಿತೈರ್ಭಿಂದನ್ ಮನೋನಿರ್ಭರಮ್ ।**
> **ಶಂಭೋರ್ಭೋತಕೃಪವಿಧೇಯಮನಸಃ ಪ್ರೋದ್ಧಾಮನೇತ್ರಾನಲ**
> **ಜ್ವಾಲಾಜಾಲಕರಾಲಿತಃ ಪುನರಸಾವಾಸ್ತಾಂ ಸಮಸ್ತಾತ್ಮನಾ** [೩೧]॥

"ಆ ಪ್ರಿಯೆಯವಿಚ್ಛೇದದಿಂದ ಕೃಶನಾಗಿ, ಪ್ರಾಣವನ್ನೇ ತೊರೆಯುವುದಲ್ಲಿರುವ ನನ್ನ ಈ ಮನಸ್ಸನ್ನು ತೀಕ್ಷ್ಣವಾದ ಬಾಣಗಳಿಂದ ನಿರ್ದಯನಾಗಿಯೂ ಭೇದಿಸುತ್ತಿರುವ ಕ್ರೂರನಾದ ಈ ಮನ್ಮಥನು ಎಲ್ಲಾ ಬಗೆಯಿಂದಲೂ ಪ್ರಾಣಿಗಳಿಗೆ ದಯೆ ಕಲಿಸುವಂತಹ ಶಂಭುವಿನ ಉರಿಯುವ ಮೂರನೆಯ ಕಣ್ಣಿನ ಜ್ವಾಲೆಗಳ ಸಮೂಹಕ್ಕೆ ಸಿಲುಕಿ ಭಯಗೊಳ್ಳಲಿ" ಇಲ್ಲಿ ಮನ್ಮಥನ ಬಗ್ಗೆ ಹುಟ್ಟಿರುವ ಕ್ರೋಧವು ವಾಸ್ತವಿಕವೆನಿಸದೆ ಮನಸ್ಸಿನಲ್ಲಿ ಕ್ಷೋಭೆಯನ್ನುಂಟುಮಾಡುವುದರಿಂದ ಅದು ಸ್ಥಾಯಿಭಾವವೆನಿಸಿಲ್ಲದ್ದರಿಂದ ಇಲ್ಲಿ ರೌದ್ರರಸವಿಲ್ಲ. ಆದರೆ ರತಿಯೇ ಇಲ್ಲಿ ಸ್ಥಾಯಿ ಎನಿಸಿದ್ದರಿಂದ ಶೃಂಗಾರರಸವು ತೋರುತ್ತದೆ. ಆದರೆ ಇದನ್ನು ಹೇಳುವವನು ಕೋಪಗೊಂಡಿರುವುದರಿಂದ ಇಲ್ಲಿ ಅವಶ್ಯವಾಗಿ ಓಜೋಗುಣವೂ, ಅದಕ್ಕೆ ಬೇಕಾದ ವಿಕಟವರ್ಣಗಳು ಇರಬೇಕಾದ್ದರಿಂದ ಇಲ್ಲಿ ಬಂದಿರುವ ವಿಕಟವರ್ಣಗಳ ಸಂಬಂಧವಾದ ದುಃಶ್ರವತ್ವವೆಂಬ ದೋಷವು ಇಲ್ಲಿ ಗುಣವೇ ಆಗಿದೆ.

ಇನ್ನು ಹೇಳುವ ಮಾತು ಬಹಳ ಭಯಂಕರವಾಗಿದ್ದರೆ ದುಃಶ್ರವತ್ವವೆಂಬ ದೋಷವು ಗುಣವೆನಿಸುವುದಕ್ಕೆ ಉದಾಹರಣೆ.

**ಮೂರ್ಧವ್ಯಾಧೂಯಮಾನಧ್ವನದಮರಧುನೀಲೋಲಕಲ್ಲೋಲಜಾಲೋ ।**
**ದ್ದತಾಂಭಃಕ್ಷೋದದಂಭಾತ್ ಪ್ರಸಭಮಭಿನಭಃ ಕ್ಷಿಪ್ರನಕ್ಷತ್ರಲಕ್ಷಮ್ ॥**
**ಉರ್ಧ್ವನ್ಯಸ್ತಾಂಘ್ರಿದಂಡ ಭ್ರಮಿಭವರಸೋಢ್ಯನ್ನಭಸ್ವ ತ್ತ್ರ ವೇಗ ।**
**ಭ್ರಾಂತಬ್ರಹ್ಮಾಂಡಖಂಡಂ ಪ್ರವಿತರತು ಶಿವಂ ಶಾಂಭವಂ ತಾಂಡವಂ ವಃ** [೩] ॥

"ಶರೀರವನ್ನು ಅಳ್ಳಾಡಿಸುವುದರಿಂದ ನಡುಗುತ್ತಿರುವ ಗಂಗೆಯ ಮಹಾತರಂಗಗಳ ಸಮೂಹದಿಂದ ಮೇಲಕ್ಕೆ ಎದ್ದ ನೀರಿನ ತುಂತುರುಗಳ ಛಲದಿಂದ ಆಕಾಶದಲ್ಲಿ ಹಠತ್ತಾಗಿ ನಕ್ಷತ್ರಗಳ ಸಮೂಹವನ್ನು ಎರಚುತ್ತಲೂ, ಮೇಲಕ್ಕೆ ಎತ್ತಿರುವ ಪಾದವನ್ನು ತಿರುಗಿಸುವುದರಿಂದ ಹುಟ್ಟುವ ವೇಗದಿಂದ ಹೊರಡುವ ಗಾಳಿಯ ಪ್ರವೇಶದಿಂದ ಬ್ರಹ್ಮಾಂಡಗಳೇ ಅಳ್ಳಾಡುತ್ತಲೂ ಇರುವಂತೆ ನಡೆಯುತ್ತಿರುವ ಶಿವನ ತಾಂಡವಲೀಲೆಯು ನಿಮಗೆ ಕ್ಷೇಮವನ್ನುಂಟುಮಾಡಲಿ". ಇಲ್ಲಿ ಉದ್ಧತವಾದ ತಾಂಡವು ಬಹಳ ಭಯಂಕರವಾಗಿತ್ತೆಂದು ತಿಳಿಸುವುದೇ ಮುಖ್ಯ ವಿಷಯವಾಗಿದೆ. ವಿಕಟವಾದ ವರ್ಣಗಳನ್ನು ಇಲ್ಲಿ ಪ್ರಯೋಗಿಸಿರುವುದು. ಅನಿವಾರ್ಯವೆನಿಸಿದೆ. ಶಿವನ ಬಗ್ಗೆ ವಕ್ತೃವಿಗೆ ಇರುವ ರತಿಯನ್ನು ಸಹೃದಯನು ಆಸ್ವಾದಿಸಲು ಈ ದುಃಶ್ರವತ್ವ ದೋಷವು ಇಲ್ಲಿ ಗುಣವೇ ಆಗಿದೆ. ಆದ್ದರಿಂದಲೇ ಇಲ್ಲಿನ ವಿಷಯವು ಉದ್ಧತವಾಗಿರುವುದಕ್ಕಿಂತಲೂ, ಹೇಳುವವನು ಕೋಪಗೊಂಡಿರುವುದಕ್ಕಿಂತಲೂ ರೌದ್ರರಸದಲ್ಲಿ ದುಃಶ್ರವತ್ವವು ದೋಷದ ಬದಲು ಅನುಕೂಲವಾಗಿರುವುದರಿಂದ ದುಃಶ್ರತತ್ವವು ಇಲ್ಲಿ ಗುಣವಾಗಿದೆ. ಹೀಗೆ ದುಃಶ್ರವತ್ವ ದೋಷವು ಒಬ್ಬನು ಹೇಳಿದ್ದನ್ನು ಮತ್ತೊಬ್ಬನು ಅನುಕರಣ ಮಾಡುವಾಗಲು ದೋಷವೆನಿಸುವುದಿಲ್ಲ. "ದುಷ್ಚ್ಯನವನನ್ನು ಸ್ತುತಿಸುವನೆಂದು ಒಬ್ಬ ಹೇಳಿಕೊಳ್ಳುತ್ತಾನೆ". ದುಶ್ಚ್ಯವನ ಶಬ್ದವು ಇಲ್ಲಿ ಇಂದ್ರ ಎಂಬ ಅರ್ಥದಲ್ಲಿ ಪ್ರಸಿದ್ಧವಾಗಿದ್ದರೂ ಕವಿಗಳು ಆದರಿಸಿಸದೇ ಇರುವುದರಿಂದ ಇಂತಹ ಶಬ್ದವನ್ನು ಆ ಅರ್ಥದಲ್ಲಿ ಪ್ರಯೋಗಿಸುವುದು ಅಪ್ರಯುಕ್ತವಾದರೂ, ಇಲ್ಲಿ ಅನುಕರಣವೆನಿಸಿದ್ದರಿಂದ ದುಃಶ್ರವತ್ವ ದೋಷವು ಗುಣವೆನಿಸಿದೆ.

ಹಾಗೆಯೇ ಹೇಳುವವನು ಮತ್ತು ಕೇಳುವವನು ಇಬ್ಬರೂ ಬುದ್ಧಿವಂತರೆನಿಸಿದರೆ ಹೇಳದ ಮಾತು ಅರ್ಥವಾಗದಂತಿದ್ದರೂ ದೋಷವಾಗದೇ ಗುಣವೇ ಆಗುತ್ತದೆ ಎಂಬುದಕ್ಕೆ ಉದಾಹರಣೆ,

ದೇವತೆಗಳು ಬ್ರಹ್ಮನನ್ನು ಸ್ತುತಿಸುವಾಗ ಹೇಳುವ ಮಾತಿನಲ್ಲಿ ಇದು ತಿಳಿದುಬರುತ್ತದೆ. "ಪುರುಷಾರ್ಥಗಳನ್ನು ಜನರಿಗೆ ದೊರಕಿಸುವ ಪ್ರಕೃತಿ ಎಂದೂ

ಎಲ್ಲರಲ್ಲೂ ಉದಾಸೀನನಾಗಿದ್ದು ಅವನ್ನು ತೋರಿಸಿಕೊಂಡು ಪುರುಷನೆಂದೂ ಅನುಭವಿಗಳು ನಿನ್ನನ್ನು ಭಾವಿಸಿರುವರು". ಇಲ್ಲಿ ಸ್ತುತಿಸುವ ದೇವತೆಗಳು, ಆಸ್ತುತಿಯನ್ನು ಕೇಳುವ ಬ್ರಹ್ಮ ಇಬ್ಬರೂ ಬುದ್ಧಿವಂತರಾದ್ದರಿಂದ ಇಲ್ಲಿ ಹೇಳುವ ಮಾತು ಎಲ್ಲರಿಗೂ ಸುಲಭವಾಗಿ ತಿಳಿಯು ವಂತಿರುವುದರಿಂದ ಇಲ್ಲಿ ದೋಷದ ಬದಲಾಗಿ ಗುಣವೆನಿಸಿದೆ.

ಹಾಗೆಯೇ ಅಶ್ಲೀಲತ್ವ, ನಿಹತಾರ್ಥತ್ವ, ಖ್ಯಾತಿವಿರೋಧ, ಪುನರುತ್ತತೆ, ತಾನು ತಿಳಿಸಿರುವ ದೋಷಗಳೆಲ್ಲವನ್ನೂ ಗುಣಗಳೆನಿಸುತ್ತವೆ ಎಂಬುದನ್ನು ವಿವರಿಸಿದ್ದಾನೆ ಮತ್ತು ಶೃಂಗಾರ, ವೀರ, ರೌದ್ರ ರಸಗಳು ಪರಸ್ಪರ ಒಂದೆಡೆ ಹೇಗೆ ಇರಬಹುದು ಎಂಬುದನ್ನು ತಿಳಿಸಿದ್ದಾನೆ. ಆದರಿಂದಲೇ ವಿಶ್ವನಾಥನು ಗುಣ ದೋಷಗಳನ್ನು ಎಲ್ಲಾ ಕಡೆಗಳಲ್ಲಿಯೂ ಯುಕ್ತಿ ಔಚಿತ್ಯವನ್ನು ಗಮನಿಸಿ ನಿರ್ಧರಿಸಬೇಕೆಂದಿದ್ದಾನೆ. ತಾನು ತಿಳಿಸಿರುವ ಐದು ದೋಷಗಳಲ್ಲಿಯೇ (ಹಿಂದಿನ ಅಲಂಕಾರಿಕರು ತಿಳಿಸಿರುವ ದೋಷಗಳನ್ನು) ಸಮನ್ವಯಗೊಳಿಸಿ ಹೇಳುವುದನ್ನು ಇಲ್ಲಿಯವರೆಗೆ ಚರ್ಚಿಸಿ. ಮುಂದೆ ಈತನು ತಿಳಿಸಿರುವ ಗುಣಗಳ ಬಗ್ಗೆ ಪರಾಮರ್ಶಿಸಲಾಗಿದೆ.

## ಗುಣಗಳ ಸ್ವರೂಪ

ಗುಣಗಳೆಂದರೆ[೩೩] ಕಾವ್ಯಶೋಭೆಗೆ ಕಾರಣೀಭೂತವಾದ ಧರ್ಮಗಳು ಈ ಗುಣಗಳನ್ನು ಭರತನು[೩೪] ಪ್ರಥಮವಾಗಿ ಶ್ಲೇಷ, ಪ್ರಸಾದ, ಸಮತಾ, ಸಮಾಧಿ, ಮಾಧುರ್ಯ, ಓಜಸ್ಸು, ಸೌಕುಮಾರ್ಯ, ಅರ್ಥವ್ಯಕ್ತಿ, ಉದಾರತೆ, ಕಾಂತಿ, ಒಟ್ಟು ಹತ್ತು ಗುಣಗಳನ್ನು ಹೇಳಿದ್ದಾನೆ. ಭಾಮಹ ಮಾಧುರ್ಯ, ಓಜಸ್ಸು, ಪ್ರಸಾದ ಎಂಬ ಮೂರು ಗುಣಗಳನ್ನು ದಂಡಿಯು[೩೫] ಭರತನು ಹೇಳಿರುವ ಹತ್ತು ಗುಣಗಳನ್ನು ವಾಮನ[೩೬] ಭರತನು ಹೇಳಿರುವ ಹತ್ತು ಶಬ್ದಗುಣವನ್ನು ಮತ್ತು ಅದೇ ಹೆಸರಿನ ಹತ್ತು ಅರ್ಥಗುಣಗಳನ್ನು ಹೇಳಿದ್ದಾನೆ. ಆನಂದವರ್ಧನನು[೩೭] ಭಾಮಹೋಕ್ತವಾದ ಮಾಧುರ್ಯ, ಓಜಸ್, ಪ್ರಸಾದ ಎಂಬ ಮೂರು ಗುಣಗಳನ್ನು ಅಂಗೀಕರಿಸಿ ಅವುಗಳನ್ನು ರಸವ್ಯಂಜಕ ಧರ್ಮಗಳೆಂದು ವಿವರಿಸಿದ್ದಾನೆ. ಕುಂತಕನು[೩೮] ಮಾರ್ಗಗಳಿಗೆ ಸಂಬಂಧಿಸಿದಂತೆ ಔಚಿತ್ಯ, ಸೌಭಾಗ್ಯವೆಂಬೆರಡು ಸಾಮಾನ್ಯ ಗುಣಗಳು, ಮಾಧುರ್ಯ, ಪ್ರಸಾದ, ಲಾವಣ್ಯ, ಅಭಿಜಾತ್ಯಗಳೆಂಬ ನಾಲ್ಕು ವಿಶೇಷ ಗುಣಗಳನ್ನು ಮಮ್ಮಟನು [೩೯]ಮಾಧುರ್ಯ, ಓಜಸ್, ಪ್ರಸಾದ ಎಂಬ ಮೂರು ಗುಣಗಳನ್ನು ವಿವರಿಸಿದ್ದಾನೆ. ಹೀಗೆ ಆದಿ ಅಲಂಕಾರಿಕನಾದ ಭರತನು ತಿಳಿಸಿರುವ ಹತ್ತು ಗುಣಗಳನ್ನು ದಂಡಿ, ವಾಮನನು ಅನುಸರಿಸಿದನು. ನಂತರ ಬಂದ ಅಲಂಕಾರಿಕರು ಈ ಹತ್ತು ಗುಣಗಳನ್ನು ತಮ್ಮ ಕಾವ್ಯಲಕ್ಷಣಕ್ಕೆ ಅನುಗುಣವಾಗಿ ಮೂರು, ನಾಲ್ಕು ಗುಣಗಳನ್ನಾಗಿ ಹೇಳಿದ್ದಾರೆ. ಕೆಲವು ಅಲಂಕಾರಿಕರು ಮಾಧುರ್ಯ, ಓಜಸ್ಸು, ಪ್ರಸಾದ, ಈ ಮೂರು ಗುಣಗಳೆಂದು

ಹೇಳಿ, ಶ್ಲೇಷ, ಸಮಾಧಿ ಇತರ ಗುಣಗಳನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲವೆಂದಿದ್ದಾರೆ. ಏಕೆಂದರೆ ಈ ಗುಣಗಳೆಲ್ಲವೂ ತಾವು ತಿಳಿಸಿರುವ ಮಾಧುರ್ಯ, ಓಜಸ್, ಪ್ರಸಾದ ಗುಣಗಳಲ್ಲಿಯೇ ಸೇರಿಹೋಗುತ್ತೆಂದು ವಿವರಿಸಿ ಹೇಳಿದ್ದಾರೆ.

**ರಸಸ್ಯಾಂಗಿತ್ವ ಮಾಪ್ತಸ್ಯ ಧರ್ಮಾಃ ಶೌರ್ಯದಯೋ ಯಥಾ**
**ಗುಣಾಃ ಮಾಧುರ್ಯ ಮೋಜೋಽಥ ಪ್ರಸಾದ ಇತಿ ತೇ ತ್ರಿದಾ** [೪೦]

"ಉತ್ಕರ್ಷಹೇತವಃ ಪ್ರೋಕ್ತಾ ಗುಣಲಂಕಾರ ರೀತಯಃ"[೪೧] ಎಂದು ಹಿಂದೆ ಹೇಳಿದ ಕಾವ್ಯಲಕ್ಷಣಗಳಲ್ಲಿ ಗುಣಗಳ ಸ್ವರೂಪವನ್ನು ಸಾಹಿತ್ಯದರ್ಪಣಕಾರನು ವಿವರಿಸಿದ್ದಾನೆ. ಆತ್ಮನಲ್ಲಿ ಶೌರ್ಯ ಮೊದಲಾದ ಗುಣಗಳಿರುವಂತೆ ಕಾವ್ಯದಲ್ಲಿ ಪ್ರಧಾನವಾದ ರಸಕ್ಕೆ ಗುಣಗಳು ಸಂಬಂಧಿಸಿದೆ. ದೇಹದಲ್ಲಿ ಪ್ರಧಾನವೆನಿಸಿದ ಆತ್ಮನಿಗೆ ಉತ್ಕರ್ಷವನ್ನು ಹೆಚ್ಚಿಸುವುದರಿಂದ ಶೌರ್ಯ ಮೊದಲಾದವುಗಳು ಗುಣವೆನಿಸುವಂತೆ ಕಾವ್ಯದಲ್ಲಿ ಪ್ರಧಾನವಾದ ರಸದ ಸ್ವರೂಪ ವಿಶೇಷಗಳೆನಿಸಿದ ಮಾಧುರ್ಯ ಮೊದಲಾದವು ರಸ ಪ್ರಕಾಶಗೊಳಿಸುವ ಪದ ಸಮೂಹಕ್ಕೆ ಕಾವ್ಯವೆನಿಸಲು ಅರ್ಹವಾಗುವಂತೆ ಮಾಡುತ್ತದೆ ಎಂದು ವಿಶ್ವನಾಥನು ಮಾಧುರ್ಯ, ಓಜಸ್ಸು, ಪ್ರಸಾದವೆಂಬ ಮೂರು ಗುಣಗಳನ್ನು ತಿಳಿಸಿದ್ದಾನೆ. ಈ ಮೂರು ಗುಣಗಳನ್ನು ಚರ್ಚಿಸಲಾಗಿದೆ.

## ೧. ಮಾಧುರ್ಯಗುಣ

ಮಾಧುರ್ಯಗುಣವೆಂದರೆ ಚಿತ್ತವನ್ನು ಕರಗಿಸುವ ಆನಂದ ವಿಶೇಷವನ್ನು ಮಾಧುರ್ಯಗುಣ ಎಂದು ಕರೆಯಲಾಗಿದೆ. ಆನಂದವರ್ಧನನು ಮಾಧುರ್ಯಗುಣವೆಂದರೆ "ಶಬ್ದಾರ್ಥಗಳಲ್ಲಿ ಇರುವ ಮಧುರ ಶೃಂಗಾರಾದಿಗಳ ವ್ಯಂಜಕತ್ವ ಸಾಮರ್ಥ್ಯವನ್ನು ಮಾಧುರ್ಯಗುಣ[೪೨]" ಎಂದಿದ್ದಾನೆ. ಮಮ್ಮಟನು "ಚಿತ್ತವನ್ನು ಕರಗಿಸಲು ಕಾರಣವಾದದ್ದೇ ಮಾಧುರ್ಯಗುಣ[೪೩]" ಎಂದಿದ್ದಾನೆ. ಮಮ್ಮಟನ ಈ ಉಕ್ತಿಯನ್ನು ಹೊಂದುವುದಿಲ್ಲವೆಂದು ವಿಶ್ವನಾಥನು ಅದನ್ನು ಈ ರೀತಿಯಾಗಿ ವಿವರಿಸಿದ್ದಾನೆ. ಕಾವ್ಯವನ್ನು ಆಸ್ವಾದಿಸುವುದರಿಂದ ದೊರಕುವ ಆಹ್ಲಾದಕ್ಕಿಂತ ದ್ರವೀಭಾವವು ಬೇರೆಯಲ್ಲವಾದ್ದರಿಂದ ಅದು ಕಾರ್ಯ ವೆನಿಸಲಾರದು. ದ್ರವಿಭಾವವೆಂದರೆ ಸಹೃದಯ ಚಿತ್ತವನ್ನು ಕರಗಿಸುವುದಲ್ಲದೆ ಬೇರೆಯಲ್ಲ. ಆದ್ದರಿಂದಲೇ ಸಹೃದಯನು ಒಂದು ಕಾವ್ಯವನ್ನು ನೋಡಿದಾಗಲೂ ಕೇಳಿದಾಗಲೂ ಅವನ ಮನಸ್ಸು ಸಹಜವಾಗಿಯೇ ಮಾನಸಿಕ ಕ್ಲೇಶದಿಂದ ಬಿಡುಗಡೆಯಾಗುತ್ತದೆ. ಅಂತಹ ಕಾಲದಲ್ಲಿ ಅವನು ಕಾಠಿಣ್ಯ, ಕೋಪ, ಕ್ರೋಧಗಳಿಂದುಂಟಾಗುವ ಪ್ರಕಾಶ, ವಿಸ್ಮಯ ಹಾಸ ಇವುಗಳ ಪರಿಣಾಮವಾಗಿ ಒದಗಿಸುವ ವಿಷಯಾಂತರಾಸಕ್ತಿಯನ್ನು ತೊರೆಯುವನು. ಆಗ ಸಹೃದಯನಿಗೆ ರತಿ ಮೊದಲಾದ ಭಾವಗಳಿಂದೂಡಗೊಡಿದ ಆನಂದವು

ಅನುಭವ ಗೋಚರವಾಗುವುದು. ಇದರಿಂದ ಸಹೃದಯನ ಚಿತ್ತವು ಸ್ವಾಭಾವಿಕವಾಗಿ ಕರಗುವುದು. ಹೀಗೆ ಕರಗಿಸಲು ಕಾರಣವಾದದ್ದು ರಸವೇ ಹೊರತು ಮಾಧುರ್ಯವೆಂಬ ಗುಣವಲ್ಲ ಮಾಧುರ್ಯವು ರಸದ ಧರ್ಮವೇ ಹೊರತು ರಸವಲ್ಲ. ಆದ್ದರಿಂದ ಕಾವ್ಯಪ್ರಕಾಶಕಾರನು ಹೇಳಿರುವ ಮಾಧುರ್ಯದ ಉಕ್ತಿಯು ಹೊಂದುವುದಿಲ್ಲವೆಂದು ಸಾಹಿತ್ಯದರ್ಪಣಕಾರನು ವಿವರಿಸಿ ಹೇಳಿದ್ದಾನೆ.

ಮಾಧುರ್ಯವು ಸಂಭೋಗಶೃಂಗಾರ, ವಿಪ್ರಲಂಬ ಶೃಂಗಾರದಲ್ಲಿ ಇನ್ನೂ ಹೆಚ್ಚಾಗಿದ್ದು, ಸಂಭೋಗಾಭಾಸ ಮೊದಲಾದ ಕಡೆಗಳಲ್ಲೂ ಈ ಗುಣವು ಇರುತ್ತದೆ ಮತ್ತು ಕರುಣ ಶಾಂತರಸದಲ್ಲಿಯೂ ಸಹ ಮಾಧುರ್ಯಗುಣವು ಹೆಚ್ಚಾಗಿರುತ್ತವೆ. ವರ್ಗೀಯ ಪಂಚಮಾಕ್ಷರಗಳೊಡಗೂಡಿದ ಸಂಯುಕ್ತಾಕ್ಷರಗಳು, ಟ, ಠ, ಡ, ಢಗಳನ್ನು ಬಿಟ್ಟು ಉಳಿದ ವ್ಯಂಜನ ವರ್ಣಗಳು ಹಾಗೆ ಬೇರೆ ವರ್ಣದೊಡಗೂಡದ ವರ್ಣಗಳು ಮತ್ತು ರೇಫಣಕಾರಗಳು ಮಾಧುರ್ಯವನ್ನು ಪ್ರಕಾಶಪಡಿಸಲು ಸಮರ್ಥವಾಗಿವೆ. ಹಾಗೆಯೇ ಸಮಾಸಗಳಿಲ್ಲದೆ, ಮಿತವಾದ ಸಮಾಸಗಳಿಂದ ಕೂಡಿದ ಮಧುರವಾದ ರಚನೆಯು ಮಾಧುರ್ಯವನ್ನು ಪ್ರಕಾಶಪಡಿಸುತ್ತದೆ. ವರ್ಗದ ಕೊನೆಯ ಅಕ್ಷರಗಳೊಡಗೂಡಿದ ಸಂಯುಕ್ತವರ್ಣಗಳು ಮಾಧುರ್ಯವನ್ನು ಪ್ರಕಾಶಪಡಿಸುತ್ತದೆ. ಉದಾಹರಣೆಗೆ

**ಅನಂಗಮಂಗಳ ಭುವಸ್ತದಪಾಂಗಸ್ಯ ಭಂಗಯಃ ।**
**ಜನಯಂತಿ ಮುಹುರ್ಯೂನಾಂ ಅಂತಃ ಸಂತಾಪಸಂತತಿಮ್** [೪೪]॥

"ಮನ್ಮಥನ ವಾಸಸ್ಥಾನವೆನಿಸಿದ ಆ ನಾಯಿಕೆಯ ಓರೆನೋಟಗಳು ಯುವಕರ ಅಂತಃಕರಣದಲ್ಲಿ ಕಾಮಸಂತಾಪವನ್ನು ಬಾರಿ ಬಾರಿಗೂ ಉಂಟು ಮಾಡುತ್ತವೆ". ಇಲ್ಲಿ ಪ್ರಥಮಾರ್ಧದಲ್ಲಿ ಅನಂಗ ಮಂಗಳ, ಅಪಾಂಗ ಭಂಗ ಹೀಗೆ ಙಕಾರದೊಡಗೂಡಿದ ಗಕಾರಗಳೂ, ದ್ವಿತೀಯಾರ್ಧ ಜನಯಂತಿ, ಅಂತಃ ಸಂತಾಪ, ಸಂತತಿ ಹೀಗೆ ನಕಾರದೊಡಗೊಡಿದ ತಕಾರಗಳು ಮಾಧುರ್ಯಾಗುಣವನ್ನು ಪ್ರಕಾಶಪಡಿಸುತ್ತದೆ.

ಇನ್ನು ಒಂದೇ ಕಡೆಯಲ್ಲಿ ಸಮಾಸಗಳು ಇಲ್ಲದೇ ಮಿತವಾಗಿ ಇದ್ದರೆ ವರ್ಣಗಳು ಮಾಧುರ್ಯವನ್ನು ಪ್ರಕಾಶಪಡಿಸುವುದಕ್ಕೆ ಉದಾಹರಣೆ

**ಲತಾಕುಂಜಂ ಗುಂಜನ್ಮದವದಲಿಪುಂಜ ಚಪಲಯನ್ ।**
**ಸಮಾಲಿಂಗನ್ರಂಗ್ರಂ ದ್ರುತತರಮನಂಗಂ ಪ್ರಬಲಯನ್ ॥**
**ಮರುನ್ಮಂದಂ ಮಂದಂ ದಲಿತಮರವಿಂದಂ ತರಲಯನ್ ।**
**ರಜೋವೃದಂ ವಿಂದನ್ ಕಿರತಿ ಮಕರಂದಂ ದಿಶಿ ದಿಶಿ**[೪೫] ॥

"ಶಬ್ದ ಮಾಡುತ್ತಿರುವ ಮದಿಸಿದ ದುಂಬಿಗಳ ಸಮೂಹವುಳ್ಳ ಲತಾಗೃಹವನ್ನು

ಅಳ್ಳಾಡಿಸುತ್ತಲ್ಲೂ, ವಿಹರಿಸುತ್ತಿರುವ ಕಾಮಿಜನರ ಅವಯವಗಳನ್ನು ಮುಟ್ಟುತ್ತಲೂ, ಕಾಮಪೀಡೆಯನ್ನು ಬೇಗನೆ ಹೆಚ್ಚಿಸುತ್ತಲೂ, ವಿಕಸಿತವಾದ ಕಮಲವನ್ನು ಮೆಲ್ಲಗೆ ಅಳ್ಳಾಡಿಸುತ್ತಲೂ, ಹಾಗೆಯೇ ಪುಷ್ಪಗಳ ಪರಾಗವನ್ನು ಗ್ರಹಿಸುತ್ತಲೂ ವಾಯುವು ಎಲ್ಲಾ ದಿಕ್ಕುಗಳಲ್ಲಿಯೂ ಪುಷ್ಪರಸವನ್ನು ಎರಚುತ್ತಿದೆ". ಇಲ್ಲಿ ಪ್ರಥಮ ಪಾದದಲ್ಲಿ ಕುಂಜ, ಗುಂಜ, ಪಂಜು ಎಂದು ಇಕಾರ ಜಕಾರಗಳು, ದ್ವಿತೀಯ ಪಾದದಲ್ಲಿ ಜಕಾರಗಳು, ತೃತೀಯಪಾದ ಹಾಗೂ ಚತುರ್ಥ ಪಾದದಲ್ಲಿ ವೃಂದ, ವಿಂದ, ರಂದ ಎಂದು 'ನ'ಕಾರ'ದ'ಕಾರಗಳು ಮಾಧುರ್ಯಗುಣವನ್ನು ಪ್ರಕಾಶಿಸುತ್ತವೆ. ಪ್ರಥಮ ಚತುರ್ಥಪಾದಗಳಲ್ಲಿ ಸಮಾಸಗಳು ಮಿತವಾಗಿವೆ. ದ್ವಿತಿಯಾ ಚರ್ತುರ್ಥ ಪಾದಗಳಲ್ಲಿ ಸಮಾಸಗಳೇ ಇಲ್ಲ. ಇಂತಹ ರಚನೆಯು ಮಾಧುರ್ಯ ಗುಣಕ್ಕೆ ಅನುಕೂಲವಾಗಿದೆ.

## ೯ ಓಜೋಗುಣ

**ವರ್ಗಸ್ಯಾದ್ಯತೃತೀಯಾಭ್ಯಾಂ ಯುಕ್ತಾ ವರ್ಣೌತದಂತಿಮೌ**
**ಉಪರ್ಯಧೋ ದ್ವಯೋರ್ವಾಸರೇಫಃ ಟಠಡಢ್ಯೈಃ ಸಹ**
**ಶಕಾರಶ್ಚ ಕ್ಷಕಾರಶ್ಚ ತಸ್ಯ ವ್ಯಂಜಕಾತಾಂ ಗತಾಃ**
**ತಥಾ ಸಮಾಸಬಹುಲಾ ಘಟನೌದ್ಧತ್ಯಶಾಲಿನೀ**[೪೬]

ಓಜೋಗುಣವೇಂದರೆ ಚಿತ್ತ ವಿಸ್ತಾರಗೊಳ್ಳುವ ಪ್ರಕಾಶವೇ ಓಜೋಗುಣವಾಗಿದೆ. ಆನಂದವರ್ಧನನು ಓಜೋಗುಣವನ್ನು "ಧೀರ್ಘಸಮಾಸಗಳಿಂದ ಶಬ್ದದಲ್ಲಿ ದೀಪ್ತಿಯ ವ್ಯಂಜಕತ್ವ, ದೀರ್ಘ ಸಮಾಸವಿಲ್ಲದಿದ್ದರೂ ಅರ್ಥ ದೀಪ್ತಿಯ ವ್ಯಂಜಕತ್ವ, ಇದು ರೌದ್ರಾದಿ ರಸಗಳ ಧರ್ಮವಾದನ್ನು ಓಜೋಗುಣವೆಂದಿದ್ದಾನೆ.[೪೭] ಈ ಓಜೋಗುಣವು ವೀರ, ಭೀಭತ್ಸ, ರೌದ್ರ ರಸಗಳಲ್ಲಿ ಕ್ರಮವಾಗಿ ಹೆಚ್ಚುತ್ತದೆ. ವೀರರಸದಲ್ಲಿದ್ದು, ಭೀಭತ್ಸರಸದಲ್ಲಿ ಹೆಚ್ಚಾಗಿದ್ದು, ರೌದ್ರರಸದಲ್ಲಿ ವಿಶೇಷವಾಗಿರುತ್ತದೆ. ಈ ಮೂರು ರಸಗಳಂತೆಯೇ ಇವುಗಳ ಅಭಾಸಗಳಲ್ಲಿಯೂ ಓಜೋಗುಣವಿರುತ್ತದೆ. ವರ್ಗದ ಒಂದು ಮೂರನೆಯ ಅಕ್ಷರಗಳೊಡಗೂಡಿ ಸಂಯುಕ್ತವರ್ಣಗಳು ಅಂದರೆ ಎರಡು ನಾಲ್ಕನೆಯ ಅಕ್ಷರಗಳು, ಒಂದೇ ವರ್ಗದ ಬೇರೆ ವರ್ಗದ ಮೊದಲನೆಯ ವರ್ಣದೊಡನೆ, ನಾಲ್ಕನೆಯ ವರ್ಣವು ಮೂರನೆಯ ವರ್ಣದೊಡಗೂಡಿದ ನಾಲ್ಕನೆ ವರ್ಣವು ಓಜಸ್ಸನ್ನು ಪ್ರಕಾಶ ಪಡಿಸುತ್ತದೆ. ದ್ರಾಕ್ ಖನತಿ, ದ್ರಾಗ್ ಘರ್ಷತಿ, ದ್ರಾಕ್ ಫಲತಿ, ದ್ರಾಗ್ ಧಾವತಿ ಹೀಗೆ ವರ್ಣಗಳು ಸೇರಿರಬೇಕು, ಮೇಲ್ಗಡೆಯೂ, ಕೊನೆಯಲ್ಲೂ ಅಥವಾ ಎರಡು ಕಡೆಯಲ್ಲೂ ರೇಪದೂಡಗೂಡಿದ ವರ್ಣಗಳು ಅಂದರೆ ಸರ್ಪ, ದೀಪ್ರ, ಆರ್ದ್ರ ಹೀಗೆ ಇದ್ದಲ್ಲಿ ಓಜಸ್ಸನ್ನು ಹೊರಪಡಿಸುತ್ತದೆ. ಹಾಗೆಯೇ ಟಠಡಢಗಳೊಡಗೂಡಿದ ಸಂಯುಕ್ತಕ್ಷರಗಳು, ಶಕಾರಕ್ಷಕಾರಗಳೂ ಓಜಸ್ಸನ್ನು ಪ್ರಕಾಶಪಡಿಸುತ್ತವೆ. ಕುಟ್ಟಕ, ವಿಸಂಷ್ಠುಲ, ಗಡ್ಡಲಿಕಾ, ಶಂಢ, ವಿಕಟ, ಕಮಠ, ಡಂಬರ, ಮೂಢ, ಕರ್ಷತೆ, ಶೀರ್ಘಮೇಘ

ಇಂತವೇ ಅದಕ್ಕೆ ಉದಾಹರಣವೆನಿಸಿದೆ. ಹಾಗೆಯೇ ಶೈಲಿಯು ಹೆಚ್ಚು ಸಮಾಸಗಳಿಂದ ಕೂಡಿದ್ದು ಉದ್ಧತವಾಗಿರಬೇಕು. 'ಕರಿಕರನಿಕರಾಣಾಂ ಭೇಧ ಭೇದೌ ವಿಧಾಯ' ಇಲ್ಲಿ ಸಮಾಸಗಳು ಹೆಚ್ಚಾಗಿರುವ ರೀತಿಯನ್ನು ಕಾಣಬಹುದು. 'ಚಂಚದ್ಭುಜ' ಎಂಬ ಶ್ಲೋಕದಲ್ಲಿ ಓಜೋಗುಣವನ್ನು ಪ್ರಕಾಶಿಸುವ ಪದರಚನೆಯನ್ನು ನೋಡಬಹುದು.

ಓಜೋಗುಣದಲ್ಲಿ ಬರುವ ಭೀಭತ್ಸರಸಕ್ಕೆ ಕನ್ನಡದಲ್ಲಿ ಅನೇಕ ಉದಾಹರಣೆಗಳನ್ನ ಪಂಪ, ರನ್ನರು ಕೊಟ್ಟಿದ್ದಾರೆ.

**ಪರಿದತಲೆ ಬಿಟ್ಟ ಬಾಯ್ ನಸು ।**
**ಮುರಿದ ಕೊರಲ್ ಮುಗುಳ್ಚಕಣ್ಗ ಳಾರುಣಜಲದಿಂ**[೪೮] ॥
**ಪೊರೆದ ತನುವೆರಸು ಭೀಭತ್ಸ ।**
**ರಸಮನೆಭಿನಯಿಸುತಿರ್ದರಿಲ್ಲಿ ಭಟರ್ಕಳ್ ॥**

ಯುದ್ಧರಂಗದ ವರ್ಣನೆಯಲ್ಲಿ ಅದರಲ್ಲೂ ಯುದ್ಧದ ಕೊನೆಯಲ್ಲಿ ರಕ್ತದ ಕೆಸರಿನಲ್ಲಿ ಅಸ್ತವ್ಯಸ್ತವಾಗಿ ಚೆದುರಿಬಿದ್ದ ಸೈನಿಕರ ವರ್ಣನೆಯಲ್ಲಿ ಭೀಭತ್ಸರಸವು ತಾನೆ ತಾನಾಗಿ ಮೈವೆತ್ತು ಬರುವುದನ್ನು ಮೇಲಿನ ಉದಾಹರಣೆಯಿಂದ ತಿಳಿದುಬರುತ್ತದೆ. ಇನ್ನು ಓಜೋಗುಣದಲ್ಲಿ ವಿಶೇಷರಸವಾದ ರೌದ್ರರಸಕ್ಕೆ ಉದಾಹರಣೆ.

**ಡೊಕ್ಕನೆ ಸುರಿಗೆಯೊಳ್‌ರಮಂ**
**ಬಿಕ್ಕನೆ ಬಿರಿಯಿರಿದು ಬರಿಯನಗಲೊತ್ತಿ ಮನಂ।**
**ಕೊಕ್ಕರಿಸದೆ ಬಗೆಸಿರೆಯಿನ**
**ಉುರ್ಕ್ಕಯೆ ಮೊಗೆಮೊಗೆದು ನೆತ್ತಂ ಪವನಸುತಂ**[೪೯] ॥

ಭೀಮ ದುರ್ಯೋಧನರ ಮಾತ್ಸರ್ಯ ದ್ವೇಷಗಳು ರೌದ್ರರಸಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಇಲ್ಲಿ "ಭೀಮನು ದುಶ್ಯಾಸನನ ಗಂಟಲುಮೆಟ್ಟಿ ಎದೆಯನ್ನು ಬಗಿದು ರಕ್ತವನ್ನು ಕುಡಿದ ಸನ್ನಿವೇಶ" ಪಂಪಭಾರತದಲ್ಲಿ ಪಂಪನು ಸಮಥ-ರ್ವಾಗಿ ರೌದ್ರರಸವನ್ನು ಬಳಸಿಕೊಂಡಿದ್ದಾನೆ. ಹೀಗೆ ಬೇಕಾದಷ್ಟು ಓಜೋಗುಣಗಳಿಗೆ ಉದಾಹರಣೆಗಳನ್ನು ರನ್ನ ಪಂಪರ ಗ್ರಂಥಗಳಲ್ಲಿ ಕಾಣಬಹುದಾಗಿದೆ.

**೩. ಪ್ರಸಾದ ಗುಣ**

**ಚಿತ್ತಂ ವ್ಯಾಪ್ನೋತಿ ಯಃ ಕ್ಷಿಪ್ರಂ ಶುಷ್ಕೇಂಧ ನಮಿವಾನಲಃ ।**
**ರ ಪ್ರಸಾದಃ ಸಮಸ್ತೇಷು ರಸೇಷು ರಚನಾಸು ಚ** [೫೦]॥

"ಒಣಕಟ್ಟಿಗೆಯಲ್ಲಿ ಬೆಂಕಿಯು ಬೇಗನೆ ಹೊರಬೀಳುವಂತೆ ಯಾವುದು ಚಿತ್ತವನ್ನು ಬೇಗನೆ ವ್ಯಾಪಿಸಬಲ್ಲದೋ ಅದು ಪ್ರಸಾದವೆನಿಸುತ್ತದೆ. ಇದು ಎಲ್ಲಾ ರಸಗಳಲ್ಲೂ

ಎಲ್ಲಾ ರಚನೆಗಳಲ್ಲೂ ನೆಲಸಿರುತ್ತದೆ". ಒಟ್ಟಿನಲ್ಲಿ ಪ್ರಸಾದಗುಣವೆಂದರೆ ಕೇಳಿದೊಡನೆ ಅರ್ಥವನ್ನು ತಿಳಿಸುವಂತ ಶಬ್ದಗಳೆಲ್ಲವೂ ಪ್ರಸಾದಗುಣವಾಗಿದೆ. ಉದಾಹರಣೆಗೆ

**ಸೂಚೀಮುಖೇನ ಸಕೃದೇವ ಕೃತವ್ರಣಸ್ತ್ವಂ ।**
**ಮುಕ್ತಾಕಲಾಪ! ಲುಠನಿಸ್ತನಯೋಃ ಪ್ರಿಯಾಯಾಃ ॥**
**ಬಾಣೈಃ ಸ್ಮರಸ್ಯ ಶತಶೋ ವಿನಿಕೃತ್ತಮರ್ಮಾ ।**
**ಸ್ವಪ್ನೇಽಪಿ ತಾಂ ಕಥಮಹಂ ನ ವಿಲೋಕಯಾಮಿ** [೫೧] ॥

"ಹಾರದೊದಳಗೆ ಸೇರುವ ಮುತ್ತಿನ ಸರವೇ! ಸೂಜಿಯುತುದಿಯಿಂದ ಒಂದು ಸಾರಿ ಚುಚ್ಚಿಸಿಕೊಂಡು ಪ್ರಿಯೆಯ ಸ್ತನಗಳಲ್ಲಿ ಹೊರಳಾಡುತ್ತಿರುವೆ. ನಾನಾದರೊ ಮನ್ಮಥನ ಬಾಣಗಳಿಂದ ನೂರಾರು ಸಾರಿ ಚುಚ್ಚಿಸಿಕೊಂಡಿದ್ದರೂ ಸ್ವಪ್ನದಲ್ಲಾದರೂ ಆ ಪ್ರಿಯೆಯನ್ನು ಹೇಗಾದರೂ ಒಮ್ಮೆಯಾದರೂ ನೋಡಲಿಲ್ಲ. ಚುಚ್ಚಿಸಿಕೊಳ್ಳುವುದೇ ಪ್ರಿಯೆಯ ಸಮಾಗಮಕ್ಕೆ ಕಾರಣವೆನಿಸಿದ್ದರೆ ಬಾಣದಿಂದ ಅನೇಕಸಾರಿ ಚುಚ್ಚಿಸಿಕೊಂಡಿರುವವನು ನಿನ್ನಂತೆ ಪ್ರಿಯೆಯೊಡನೆ ಸೇರಬೇಕಾಗಿತ್ತು. ವಿಧಿಯ ವಿಲಾಸ ಎಷ್ಟು ವಿಷಮವಾಗಿದೆ". ಇಲ್ಲಿ ಶಬ್ದಗಳನ್ನು ಕೇಳಿದೊಡನೆಯೇ ಅರ್ಥವು ಮನಸ್ಸಿಗೆ ಹೊಳೆಯುತ್ತದೆ. ಹೀಗೆ ಬೇಗನೆ ಚಿತ್ತವನ್ನು ವ್ಯಾಪಿಸಿರುವುದರಿಂದ ಇದು ಪ್ರಸಾದ ಗುಣವೆನಿಸಿದೆ. ಅನಂದವರ್ಧನನು ಪ್ರಸಾದಗುಣವನು ಈ ರೀತಿಯಾಗಿ ಹೇಳಿದ್ದಾನೆ. "ಪ್ರಸಾದವೆಂದರೆ ಎಲ್ಲಾ ರಸಗಳ ವಿಷಯದಲ್ಲಿ ಶಬ್ದಾರ್ಥಗಳ ಸಮರ್ಪಕತ್ವ. ಸಹೃದಯರನ್ನು ಹೃದಯ ಸಂವಾದದಿಂದ ತನ್ಮಯರಾಗುವಂತೆ ಮಾಡುವ ಶಕ್ತಿ[೫೨]" ಎಂದು ಹೇಳಿದ್ದಾನೆ.

ಪ್ರಾಚೀನಾಲಂಕಾರಿಕರು ವಿಭಾಗಿಸಿ ತಿಳಿಸಿರುವ ಶ್ಲೇಷ ಸಮಾಧಿ, ಔದಾರ್ಯ, ಇತ್ಯಾದಿ ಗುಣಗಳೆಲ್ಲವೂ ಓಜಸ್ಸಿನಲ್ಲಿಯೇ ಸೇರಿರುವುದರಿಂದ ಇವುಗಳನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕ ಇಲ್ಲವೆಂದಿದ್ದಾನೆ. ಇಲ್ಲಿ ಓಜಸ್ಸೆಂದರೆ ಪ್ರಧಾನವಾಗಿ ಗುಣವೆನಿಸಿದರೂ ಗೌಣವಾಗಿ ಓಜಸ್ಯಬ್ದದಿಂದ ಶಬ್ದಾರ್ಥಗಳಲ್ಲಿರುವ ಒಂದು ಬಗೆಯ ಧರ್ಮವಿಶೇಷವೆಂದು ತಿಳಿಸಿದ್ದಾನೆ. ವಾಮನನಿಗೆ ಸಮ್ಮತವಾದ ಪೃಥಕ್ವದವೆಂಬ ಗುಣವನ್ನು ಸಮಾಸವಿಲ್ಲದ ಮಾಧುರ್ಯ ಗುಣಗಳಿಗೆ ಸೇರಿಸಿ ಹೇಳಬೇಕೆಂದಿದ್ದಾನೆ. ಮತ್ತು ಅರ್ಥವ್ಯಕ್ತಿ ಎಂಬ ಗುಣವನ್ನು ತಾನು ತಿಳಿಸಿರುವ ಪ್ರಸಾದಗುಣವನ್ನು ಓಜಸ್ಸು ಮೊದಲಾದ ಗುಣಗಳಲ್ಲಿ ಸೇರಿಸಿದ್ದಾನೆ. ಹಾಗೆಯೇ ಭೋಜನು ಹೇಳಿರುವ ಹತ್ತು ಅರ್ಥಗಳನ್ನು ಕ್ರಮವಾಗಿ ಓಜಸ್ಸು, ಪ್ರಸಾದ, ಮಾಧುರ್ಯ, ಸೌಕುಮಾರ್ಯ, ಉದಾರತೆ, ಎಂಬ ಗುಣಗಳಾಗಿವೆ ಎಂದೂ ಮತ್ತು ಶ್ಲೇಷಸಮತ ಗುಣಗಳೇ ಅಲ್ಲ, ಶ್ಲೇಷವು ಶಬ್ದವೈಚಿತ್ರ್ಯವೇ ಹೊರತು ವಾಸ್ತವವಾಗಿ ಗುಣವಲ್ಲ. ಹಾಗೆಯೇ ಸಮತೆ

ಎಂಬುದು ದೋಷವಿಲ್ಲದ ಸ್ಥಿತಿಯೇ ಹೊರತು ಗುಣವಲ್ಲ ಎಂದು ತಿಳಿಸಿ ಓಜಸ್ಸು ಮೊದಲಾದ ಅರ್ಥಗುಣಗಳನ್ನು ಬೇರೆಯಾಗಿ ತಿಳಿಸದೇ, ಇವುಗಳಲ್ಲಿ ಕೆಲವು ಗುಣಗಳೆನಿಸದೆಯೋ ಕೆಲವು ದೋಷಗಳೆನಿಸದೇ ಇರುವುದರಿಂದ ತಾನು ತಿಳಿಸಿರುವ ಮಾಧುರ್ಯ, ಓಜಸ್ಸು, ಪ್ರಸಾದ ಈ ಮೂರು ಗುಣಗಳಲ್ಲಿಯೇ ಸೇರಿಸುವುದರಿಂದ ವಿಶ್ವನಾಥನು ಪ್ರತ್ಯೇಕವಾದ ಗುಣಗಳನ್ನು ಹೇಳುವ ಗೋಜಿಗೆ ಹೋಗಿಲ್ಲ ಏಕೆಂದರೆ ಹಿಂದೆ ವಾಮನನು ಹತ್ತು ಶಬ್ದಗುಣಗಳು[೫೩], ಹತ್ತು ಅರ್ಥಗುಣಗಳನ್ನು ವಿವರಿಸಿಹೇಳುವಲ್ಲಿ ಕಷ್ಟ ಪಟ್ಟಿದ್ದಾನೆ. ಉದಾಹರಣೆಗೆ "ಅರ್ಥವ್ಯಕ್ತಿ" ಹೆಸರೇ ಸೂಚಿಸುವಂತೆ ಅರ್ಥಗುಣವು 'ವಸ್ತು ಸ್ವಭಾವ ಸ್ಫುಟವಾಗಿ ತೋರುವುದು' ಎಂಬ ಅರ್ಥಗುಣಲಕ್ಷಣ ಸಹಜವಾಗಿದೆ. ಇದನ್ನು ಶಬ್ದಗುಣ ಲಕ್ಷಣದಲ್ಲಿ ಹೇಳುವಾಗ ತೊಂದರೆಗೆ ಸಿಕ್ಕಿಕೊಂಡಿದ್ದನೆ. 'ಅರ್ಥವ್ಯಕ್ತಿ ಹೇತುತ್ವಂ'[೫೪] ಎಂದು ಸಂದಿಗ್ಧವಾಗಿ ಹೇಳಿ ಪಾರಾಗಿದ್ದಾನೆ. ಹಾಗೇ ಶ್ಲೇಷ, ಸಮತೆ, ಓಜ ಈ ಮೊದಲಾದವುಗಳಲ್ಲಿಯೂ ಸಹ ಗಮನಿಸಬಹುದಾಗಿದೆ. ಆದ್ದರಿಂದಲೇ ಭಾಮಹ, ಆನಂದವರ್ಧನ, ಮಮ್ಮಟ, ವಿಶ್ವನಾಥನೂ ಸೇರಿ ಮೂರೇ ಗುಣಗಳಲ್ಲಿ ಈ ಎಲ್ಲಾ ಗುಣಗಳನ್ನು ಅಡಗಿಸಿ ವಿವರಿಸಿದ್ದಾರೆ. ಇಲ್ಲಿಯವರೆಗೆ ಗುಣಗಳ ಸ್ವರೂಪ, ಅದರ ವಿಧಗಳನ್ನು ಲಾಕ್ಷಣಿಕರ ಹಿನ್ನೆಲೆಯೊಂದಿಗೆ ಇದುವರೆಗೂ ಚರ್ಚಿಸಲಾಯಿತು. ಮುಂದಿನ ಅಧ್ಯಾಯದಲ್ಲಿ ರೀತಿ ಮತ್ತು ಅಲಂಕಾರಗಳ ಸ್ವರೂಪವನ್ನು ಪರಾಮರ್ಶಿಸಲಾಗಿದೆ.

* * * *

# ಅಡಿ ಟಿಪ್ಪಣಿಗಳು

೧ ಭರತ, 'ನಾಟ್ಯಶಾಸ್ತ್ರ', [೧೯ನೆ ಅಧ್ಯಾಯ]

೨. ದಂಡಿ, 'ಕಾವ್ಯದರ್ಶ', [೩ನೆ ಪರಿಚ್ಛೇದ]

೩. ವಾಮನ, 'ಕಾವ್ಯಾಲಂಕಾರ ಸೂತ್ರ ವೃತ್ತಿ', [೪ನೆ ಆಧಿಕರಣ]

೪. ರುದ್ರಟ, 'ಕಾವ್ಯಾಲಂಕಾರ [೧೧ನೆ ಆಧ್ಯಾಯ]

೫. ಮಹಿಮಭಟ್ಟ, 'ವ್ಯಕ್ತಿ ವಿವೇಕ [೧ನೆ ಅಧ್ಯಾಯ]

೬. 'ಮಮ್ಮಟ', 'ಕಾವ್ಯಪ್ರಕಾಶ' [೩ನೆ ಉಲ್ಲಾಸ]

೭. ಸಾಹಿತ್ಯ ದರ್ಪಣ', [೭,೧]

೮. 'ಸಾಹಿತ್ಯ ದರ್ಪಣ' [೭ನೆ ಪರಿಚ್ಛೇದ]

೯. 'ಸಾಹಿತ್ಯದರ್ಪಣ', [೭ನೆ ಪರಿಚ್ಛೇದ]

೧೦. 'ಅಮರಕೋಶ'

೧೧. 'ಸಾಹಿತ್ಯದರ್ಪಣ' ಪದದೋಷದ ಮುಂದಿನ ಕಾರಿಕೆ [೭ನೇ ಪರಿಚ್ಛೇದ]

೧೨. 'ಸಾಹಿತ್ಯದರ್ಪಣ' ಪದದೋಷದ ಮುಂದಿನ ಕಾರಿಕೆ [೭ನೆ ಪರಿಚ್ಛೇದ]

೧೩. 'ಸಾಹಿತ್ಯದರ್ಪಣ' [೭, ೧೦]

೧೪. 'ಸಾಹಿತ್ಯದರ್ಪಣ' [೭ನೆ ಪರಿಚ್ಛೇದ

೧೫. ರಘುವಂಶ, [೧೨ನೆ ಸರ್ಗ]

೧೬. ಸಾಹಿತ್ಯದರ್ಪಣ, [೭, ೧೨]

೧೭. ಸಾಹಿತ್ಯದರ್ಪಣ, [೭, ೩೩]

೧೮. ಸಾಹಿತ್ಯದರ್ಪಣ [೭, ೩೪]

೧೯. ಸಾಹಿತ್ಯದರ್ಪಣ, ಉದಾಹರಿತ ಶ್ಲೋಕ, [೭, ೩೬]

೨೦. ವೇಣಿ ಸಂಹಾರದ, ಯುದ್ಧ ವೃತ್ತಾಂತ.

೨೧. ಸಾಹಿತ್ಯದರ್ಪಣ [೭, ೪೫]

೨೨. ಸಾಹಿತ್ಯದರ್ಪಣ [೭, ೪೬]

೨೩. ಸಾಹಿತ್ಯದರ್ಪಣ [೭, ೪೭]

೨೪. ಸಾಹಿತ್ಯದರ್ಪಣ [೭, ೪೮]

೨೫. ಸಾಹಿತ್ಯದರ್ಪಣ [೭, ೪೯

೨೬. ವೇಣಿಸಂಹಾರ [ದ್ವಿತಿಯಾಂಕ]

೨೭. ಕರ್ಪೂರಮಂಜರಿ

೨೮. ರತ್ನಾವಳಿ, ನಾಲ್ಕನೆಯ ಅಂಕ

೨೯ ಕಾಳಿದಾಸನ, ಕುಮಾರಸಂಭವ

೩೦. ಹಿನೋಪಮ, ಅಧಿಕೋಪಮೆ, ಅಸದೃಶೋಪಮ ಇತ್ಯಾದಿ ಅಲಂಕಾರ ದೋಷಗಳನ್ನು ಆರನೆ ದೋಷವೆಂದು ಪರಿಗಣಿಸಿದ್ದಾರೆ.

೩೧. ಸಾಹಿತ್ಯದರ್ಪಣ [೭, ೬೦]

೩೨. ಸಾಹಿತ್ಯದರ್ಪಣ [೭, ೬೧

೩೩. "ಶಬ್ಧಾರ್ಥಸಂಘಟನಾ ನಿಷ್ಠಂ ರಸಾಭಿ ವ್ಯಂಜಕ ಸಾಮರ್ಥ್ಯ ಕಾವ್ಯೇಗುಣತ್ವಮ್" ಗುಣಗಳೆಂದರೆ ಮಧುರ ಶೃಂಗಾರ ಮುಂತಾದ ಮತ್ತು ದೀಪ್ತ ರೌದ್ರ ಮುಂತಾದವುಗಳನ್ನು ವ್ಯಂಜಿಸುವ ಶಬ್ದಾರ್ಥಗಳಲ್ಲಿ ನೆಲೆಸಿರುವ ಕೆಲವು ಸಾಮರ್ಥ್ಯಗಳು". [ಅಭಿನವಗುಪ್ತ, ಅಭಿನವ ಭಾರತಿ]

೩೪. ನಾಟ್ಯಶಾಸ್ತ್ರ [೧೬ನೆ ಅಧ್ಯಾಯ]

೩೫. ಕಾವ್ಯಾಲಂಕಾರ, [೨ನೆ ಪರಿಚ್ಛೇದ]

೩೬. ಕಾವ್ಯದರ್ಶ [೧ನೆ ಪರಿಚ್ಛೇದ]

೩೭. ಧ್ವನ್ಯಾಲೋಕ [೯, ೮ – ೧೧]

೩೮. ವಕ್ರೋಕ್ತಿ ಜೀವಿತ [೧ನೆ ಉನ್ಮೇಷ]

೩೯. ಕಾವ್ಯಪ್ರಕಾಶ [೭ನೆ ಉಲ್ಲಾಸ]

೪೦. ಸಾಹಿತ್ಯದರ್ಪಣ [೮, ೧]

೪೧. ಸಾಹಿತ್ಯದರ್ಪಣ [೧, ೩]

೪೨. ಮಧುರ ಶೃಂಗಾರರಸಾಭಿವ್ಯಕ್ತಿ ಸಮರ್ಥತಾ ಶಬ್ಧಾರ್ಥಯೋಃ ಮಾಧುರ್ಯೋಮಿತಿ ಹಿ ಲಕ್ಷಣಮ್?

[ಧ್ವನಾಲೋಕಲೋಚನ ೨, ೯ರ ಮೇಲೆ]

೪೩. ಕಾವ್ಯಪ್ರಕಾಶ [೭ನೆ ಉಲ್ಲಾಸ]

೪೪. ಸಾಹಿತ್ಯದರ್ಪಣ [೮, ೪]

೪೫. ಸಾಹಿತ್ಯದರ್ಪಣ [೮, ೫]

೪೬. ಸಾಹಿತ್ಯದರ್ಪಣ [೮. ೭]

೪೭. **ರೌದ್ರಾದೋ ರಸಾದಿತ್ಯಾ ಲಕ್ಷ್ಯಂತೇ ಕಾವ್ಯವಾರ್ತಿನಃ ।**
**ತದ್ ದ್ರವ್ಯವ್ಯಕ್ತಿಹೇತು ಶಬ್ದಾರ್ಥವಾಶ್ರೀರ್ತ್ಯೋ ಜೋ ॥**
[ಧ್ವನ್ಯಾಲೋಕ, ೨, ೧೦]

೪೮. ರನ್ನ, ಗದಾಯುದ್ಧ [೪, ೨೫]

೪೯. ಪಂಪ, ಪಂಪ ಭಾರತ, [೧೨–೧೫೩]

೫೦. ಸಾಹಿತ್ಯದರ್ಪಣ, [೮, ೮]

೫೧. 'ಸಾಹಿತ್ಯ ದರ್ಪಣ', [೮, ೯]

೫೨. ಸಮರ್ಪಕತ್ವಮ್ ಕಾವ್ಯಸ್ಯ ಯತ್ ಸರ್ವರಸನಾ ಪ್ರಾತಿ ।
ರ ಪ್ರಸಾದೋ ಗುಣೋ ಜ್ಞೇಯಃ ಸರ್ವಸಾಧಾರಣಕ್ರಿಯಃ ॥
[ಧ್ವನ್ಯಾಲೋಕ, ೩, ೧೧]

೫೩. ಕಾವ್ಯಲಂಕಾರಸೂತ್ರವೃತ್ತಿ [೩, ೧, ೫]

೫೪. ಕಾವ್ಯಲಂಕಾರಸೂತ್ರವೃತ್ತಿ [೩, ೧, ೨೪]

# ಅಧ್ಯಾಯ – ೬
# ರೀತಿ ಅಲಂಕಾರಗಳ ಸ್ವರೂಪ

# ರೀತಿಯ ಸ್ವರೂಪ

'ರೀತಿ'ಯೆಂದರೆ ಗುಣಸ್ವರೂಪದಿಂದ ಕೂಡಿದ "ವಿಶಿಷ್ಟ ಪದರಚನೆಯೇ ರೀತಿ[೧]" ಅಂತಹ ರೀತಿಯೇ ಕಾವ್ಯದ ಆತ್ಮ ಎಂದು ರೀತಿಯನ್ನು ಒಂದು ಸ್ವತಂತ್ರವಾದ ಕಾವ್ಯಶಾಸ್ತ್ರೀಯ ಸಿದ್ಧಾಂತವನ್ನಾಗಿ ನಿರೂಪಿಸಿ ಅದಕ್ಕೆ ಕಾವ್ಯದಲ್ಲಿ ಆತ್ಮಸ್ಥಾನವನ್ನು ಕೊಟ್ಟವರಲ್ಲಿ ವಾಮನನೇ ಮೊದಲಿಗನಾಗಿದ್ದಾನೆ. ಇದಕ್ಕೂ ಮೊದಲು ದಂಡಿಯು ಮಾರ್ಗಗಳ[೨] ಬಗ್ಗೆ ಹೇಳಿ ಈ ಸಿದ್ಧಾಂತಕ್ಕೆ ಮೂಲಪ್ರೇರಣೆಯಾಗಿದ್ದಾನೆ. ರೀತಿಯ ಜೊತೆಗೆ ನಿಕಟ ಸಂಬಂಧ ಹೊಂದಿದ ಇನ್ನೊಂದು ಪರಿಕಲ್ಪನೆಯೆಂದರೆ 'ಗುಣ' ಮೊಟ್ಟಮೊದಲಿಗೆ ಗುಣಗಳ ವಿಷಯವನ್ನು ನಿರೂಪಿಸಿದ್ದು ಭರತ. ತನ್ನ ನಾಟ್ಯಶಾಸ್ತ್ರದಲ್ಲಿ [೩] ಹತ್ತು ಗುಣಗಳನ್ನು ಹೆಸರಿಸಿರಿ ವಿವರಿಸಿದ್ದಾನೆ. ಆದರೆ ಇವುಗಳನ್ನು ಯಾವುದೇ ರೀತಿ ಅಥವಾ ಮಾರ್ಗಕ್ಕೆ ಸಂಬಂಧಿಸಿದಂತೆ ಹೇಳದಿದ್ದರೂ ವೃತ್ತಿ-ಪ್ರವೃತ್ತಿಗಳ ಬಗ್ಗೆ ಹೇಳುವ ಮೂಲಕ ಮಾರ್ಗ ಅಥವಾ ರೀತಿಯನ್ನು ವಿಷಯವನ್ನು ಸ್ವಲ್ಪ ಮಟ್ಟಿಗೆ ತಿಳಿಸಿದ್ದಾನೆ. ಭರತನ ಪ್ರಕಾರ "ಪ್ರವೃತ್ತಿಯೆಂದರೆ ನಾಟಕದಲ್ಲಿ ವಿವಿಧ ಪ್ರಾಂತಗಳಿಗೆ ಸೇರಿದ ಪಾತ್ರಗಳ ವೇಷ, ಭಾಷೆ, ಆಚರಣೆಗಳ ಬಗ್ಗೆ ಯೋಗ್ಯವಾದ ಮಾಹಿತಿಯನ್ನು ಒದಗಿಸುವುದು[೪]". ಭರತನು ವೃತ್ತಿಗಳನ್ನು ಎಲ್ಲಾ ಕಾವ್ಯಗಳ ಮೂಲಸ್ಫೂರ್ತಿಗಳೆಂದು ಕರೆದಿದ್ದಾನೆ. ವೈಭವೋಪೇತ ಹಾಗೂ ಹೃದಯಾಂಗಮ ಶಬ್ದ ಸಂಪತ್ತುಳ್ಳ ಭಾಷೆಯ ಪ್ರಯೋಗವು ಭಾರತೀವೃತ್ತಿ; ಶಬ್ದ ಸಂಪತ್ತಿನ ವೈಭವ ಮತ್ತು ಭಾವನೆಗಳ ತೀವ್ರತೆಗಳ ಮಿಶ್ರಣವುಳ್ಳದ್ದು ಸಾತ್ವಕೀವೃತ್ತಿ, ವೀರ ಮುಂತಾದ ರಸಗಳ ಅಭಿವ್ಯಕ್ತಿಗೆ ಬೇಕಾದ ಓಜಸ್ವಿಯಾದ ಭಾಷಾಪ್ರಯೋಗ ಆರಭಟೀವೃತ್ತಿ, ಮತ್ತು ಗೀತೆ ನೃತ್ಯಗಳಿಗೆ ಸಂಬಂಧಿಸಿದ ಮನೋಹರವಾದ ಹಾವಭಾವಗಳು ಕೌಶಿಕೀವೃತ್ತಿ ಹೀಗೆ ವಿವರಿಸಿದ್ದಾನೆ. ನಂತರ ಬಂದ ಭಾಮಹ[೫] ಮಾರ್ಗ-ಗುಣಗಳ ಬಗ್ಗೆ ತನಗಿದ್ದ ಪರಿಚಯವನ್ನು ಹೇಳಿದ್ದಾನೆ.

ದಂಡಿಯು ವೈದರ್ಭ ಮತ್ತು ಗೌಡೀಯವೆಂಬ ಎರಡು ಮಾರ್ಗಗಳ ಭೇದವನ್ನು ಗುಣದ ಮೂಲಕ ತಿಳಿಸಿ ಮಾರ್ಗಗಳ ವಿಭಾಗ ಮಾಡುವುದು ಕಷ್ಟ ಅವುಗಳ ಭೇದಗಳು ಸೂಕ್ಷ್ಮವಾದ್ದರಿಂದ ವೈದರ್ಭ, ಗೌಡೀಯ ಮಾರ್ಗಗಳು ಸ್ಫುಟವಾಗಿರುವುದರಿಂದ ಎರಡು ಮಾರ್ಗಗಳನ್ನು ಮಾಡಿದ್ದಾನೆ.

**ಅಸ್ತ್ಯನೇಕೂ ಗಿರಾಂ ಮಾರ್ಗಃ ಸೂಕ್ಷಭೇದಃ ಪರಸ್ಪರಾಮ್।**
**ತತ್ರ ವೈದರ್ಭಗೌಡೀಯೌ ವರ್ಣ್ಯತೇ ಪ್ರಸ್ಫುಟಂತಕೌ[೬] ॥**

ರೀತಿಯ ಬುನಾದಿಯನ್ನು ಹಾಕಿದ ವಾಮನನ್ನು ವೈದರ್ಭೀ, ಗೌಡೀಯಾ ಮತ್ತು ಪಾಂಚಾಲೀ ಎಂದು ಮೂರು ರೀತಿಗಳನ್ನು ವಿವರಿಸಿದ್ದಾನೆ.

**ಸಮಗ್ರಗುಣಾ ವೈದರ್ಭೀ ।**
**ಓಜೋ ಕಾಂತಿಮತೀ ಗೌಡೀಯಾ ॥**
**ಮಾಧುರ್ಯ ಸೌಕುಮಾರ್ಯೋಪಪನ್ನ ಪಾಂಚಾಲೀ**[೭] ॥

ವೈದರ್ಭೀರೀತಿಯು ಸಮಗ್ರ ಗುಣ ಸಂಪತ್ತನ್ನು ಹೊಂದಿದೆ. ಗೌಡೀಯ ರೀತಿಯು ಓಜಸ್ಸು ಮತ್ತು ಕಾಂತಿಯೆಂಬ ಗುಣಗಳಿಂದ ಪಾಂಚಾಲೀ ರೀತಿಯು ಮಾಧುರ್ಯ ಮತ್ತು ಸೌಕುಮಾರ್ಯವೆಂಬ ಗುಣಗಳಿಂದ ವಿಶಿಷ್ಟವಾಗಿದೆ ಎಂದು ಹೇಳಿದ್ದಾನೆ.

**ಆನಂದವರ್ಧನನು**

**ಏತತ್ ಧ್ವನಿವರ್ಣನೇನ ನಿರ್ಣೀತಂ ಕಾವ್ಯತತ್ವಮ್ ಅಸ್ಫುಟಸುಸ್ಫುರಿತಂ**
**ಸದ್ ಅಶಕ್ನುವದ್ಭಃ ಪ್ರತಿಪಾದಯಿತಂ ವೈದರ್ಭೀ ಗೌಡೀ**
**ಪಾಂಚಾಲೀ ಚೇತಿ ರೀತಯಃ ಪ್ರವರ್ತಿತಾಃ** [೮]

ಧ್ವನಿಯ ನಿರೂಪಣೆಯಿಂದ ನಿರ್ಣಯಿಸಲ್ಪಟ್ಟ ಕಾವ್ಯತತ್ತ್ವವು ಸ್ಫುಟವಾಗಿ ತೋರದೆ ಪ್ರತಿಪಾದಿಸಲು ಅಸಮರ್ಥರಾದವರಿಂದ ವೈದರ್ಭೀ, ಗೌಡೀಯ, ಪಾಂಚಾಲೀ ಎಂದು ರೀತಿಗಳು ಪ್ರವರ್ತಿಸಲ್ಪಟ್ಟವು ಎಂದು ಹೇಳಿದ್ದಾನೆ. ರುದ್ರಟನು ರೀತಿಗಳನ್ನು ರಸಸಂಬಂಧಿಗಳನ್ನಾಗಿ ಮಾಡಿ ವಾಮನನು ಹೇಳಿರುವ ಮೂರು ರೀತಿಗಳ ಜೊತೆಗೆ 'ಲಾಟೀಯ'ವನ್ನು ಸೇರಿಸಿ ಹೇಳಿದ್ದಾನೆ.

**ವೈದರ್ಭೀ ಪಾಂಚಾಲ್ಯೇ ಪ್ರೇಯಸಿ ಕರುಣೇ ಭಯಾನಕಾದ್ಭುತಯೋಃ ।**
**ಲಾಟೀಯ ಗೌಡೀಯ ರೌದ್ರೆ ಕುರ್ಯೋದ್ಯಥೌತ್ಯಚಿರ್ಮ್**[೯] ॥

ವೈದರ್ಭೀ ಪಾಂಚಾಲಿಗಳು ಪ್ರೇಯ ಮತ್ತು ಕರುಣ ಭಯಾನಕ ಅದ್ಭುತಾದಿಗಳ ಪ್ರತಿಪಾದನೆಯಲ್ಲಿಯೂ, ಲಾಟೀಯ, ಗೌಡೀಯಗಳು ರೌದ್ರರಸದಲ್ಲೂ ಬರುತ್ತವೆ ಎಂದಿದ್ದಾನೆ. ಹಾಗೆಯೇ ವೃತ್ತಿಗಳನ್ನು ರಸಕ್ಕೂ ರೀತಿಗೂ ಅನ್ವಯಿಸಿ ಹೇಳಲಾಗಿದೆ. ಕೌಶಕೀವೃತ್ತಿ, ಶೃಂಗಾರ ಹಾಸ್ಯ ಮೊದಲಾದ ರಸಗಳಲ್ಲಿ, ವೈದರ್ಭೀ ಪಾಂಚಾಲಿ ರೀತಿಗಳಲ್ಲಿ, ಆರಭಟೀವೃತ್ತಿ, ರೌದ್ರ ಮೊದಲಾದ ರಸಗಳಲ್ಲಿ ಗೌಡಿ ಲಾಟೀಯ ರೀತಿಗಳಲ್ಲಿ ಅಭಿವ್ಯಕ್ತವಾಗಿರುವುದನ್ನು ಹೇಳಲಾಗಿದೆ.

ಭೋಜನು 'ರೀತಿ'ಯನ್ನು ಧೀರ್ಘವಾಗಿ ಪ್ರತಿಪಾದಿಸಿ ವೈದರ್ಭೀ, ಗೌಡೀ, ಪಾಂಚಾಲೀ, ಲಾಟೀರೀತಿಯ ಜೊತೆಗೆ ಅವಂತಿಕಾ, ಮಾಗಧಿ, ಎಂಬ ಇನ್ನೆರಡು ರೀತಿಗಳನ್ನು ಸೇರಿಸಿ ಆರು ರೀತಿಗಳನ್ನು[೧೦] ಹೇಳಿದ್ದಾನೆ. ಈ ರೀತಿಗಳನ್ನು ಸ್ವತಂತ್ರವಾಗಿ ವಿವೇಚಿಸದೇ ಶಬ್ದಾಲಂಕಾರಗಳಲ್ಲಿ ಸೇರಿಸಿರುವುದು ವಿಶಿಷ್ಟವಾಗಿದೆ.

ಇನ್ನು ಕುಂತಕನು ವಾಮನಂತೆ ರೀತಿಯನ್ನೇ ಕಾವ್ಯದ ಆತ್ಮವೆಂದು ಹೇಳುವುದಿಲ್ಲ. ಮಾರ್ಗವು ಮುಖ್ಯವಾದರೂ ಅದೇ ಸರ್ವಸ್ವವಲ್ಲ ಎಂದಿದ್ದಾನೆ. ರೀತಿ, ಮಾರ್ಗವನ್ನು ಭೌಗೋಳಿಕವಾಗಿ ವೈದರ್ಭೀ, ಗೌಡಿ ಇತ್ಯಾದಿಯಾಗಿ ಹೆಸರಿಸುವುದನ್ನು ಒಪ್ಪದೇ ಮೊಟ್ಟಮೊದಲಬಾರಿಗೆ ದೇಶವಾಚಕವನ್ನು ಕಾವ್ಯಮಾರ್ಗಕ್ಕೆ ನಿರಾಕರಿಸಿ, ಅದನ್ನು ಕವಿಮನೋಧರ್ಮದೊಡನೆ ಸಂಗತಗೊಳಿಸಿದ ಹಿರಿಮೆ ಕುಂತಕನದಾಗಿದೆ. ಆದ್ದ–ರಿಂದಲೇ 'ಕವಿ ಸ್ವಭಾವ'ವೇ 'ಕವಿಪ್ರಸ್ಥಾನ ಹೇತು'ವಾಗುತ್ತದೆ ಎಂದು ಹೇಳಿ ಅವರ ಮನೋಧರ್ಮದಂತೆ ಸುಕುಮಾರ ಸ್ವಭಾವಕ್ಕೆ ಸುಕುಮಾರಮಾರ್ಗ, ವಿಚಿತ್ರ ಸ್ವಭಾವಕ್ಕೆ ವಿಚಿತ್ರಮಾರ್ಗ, ಉಭಯಾತ್ಮಕ ಸ್ವಭಾವಕ್ಕೆ ಈ ಎರಡರ ಮಾಧ್ಯಮವಾದ ಮಧ್ಯಮ ಮಾರ್ಗವೆಂದು ಮೂರು ಮಾರ್ಗಗಳಲ್ಲಿ ಯಾವುದೇ ಒಂದು ಮಾರ್ಗಕ್ಕೆ ವಿಶಿಷ್ಟ ಸ್ಥಾನ ಕೊಡದೇ [ಅಂದರೆ ಹಿಂದಿನ ಅಲಂಕಾರಿಕರು ವೈದರ್ಭೀಯನ್ನು ಸರ್ವಗುಣ ಸಂಪನ್ನವೆಂದು ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದಾರೆ] ವ್ಯುತ್ಪತ್ತಿ, ಅಭ್ಯಾಸ ಮತ್ತು ಮುಖ್ಯವಾಗಿ ಪ್ರತಿಭೆಯಿಂದ ಮೂಡಿಬಂದರೆ ಆಗ ಎಲ್ಲಾ ಮಾರ್ಗಗಳು ಶ್ರೇಷ್ಠವಾಗುತ್ತೆಂಬುದೇ ಕುಂತಕನ ದೃಷ್ಟಿಯಾಗಿದೆ. ಈ ದೃಷ್ಟಿಗೆ ಅನುಗುಣವಾಗಿ ಈತನ ಮಾರ್ಗ ಮತ್ತು ಗುಣವಿವೇಚನೆಯು ಬರುತ್ತದೆ. 'ಸುಕುಮಾರಮಾರ್ಗ'ವು ಉದ್ದಕ್ಕೂ ಸಹಜವಾದ ಸೌಂದರ್ಯ ಮತ್ತು ಆಕರ್ಷತೆಯನ್ನು ಹೊಂದಿರುತ್ತದೆ. 'ಸೌಕುಮಾರ್ಯ ಪರಿಸ್ಪಂದ ಸ್ಯಂದಿಯಂತ್ರ ವಿರಾಜತೇ'[೧೧] ಎಂದು ಹೇಳಿ ಈ ಮಾತನ್ನು ಹೇಳಿದ್ದಾನೆ.

**ಸುಕುಮಾರಾಭಿಧಃ ಸೋ?ಯಂಯೇನ ಸತ್ಕವಯೋಗತಾಃ ।**
**ಮಾರ್ಗೇಣೋತ್ಫುಲ್ಲ ಕುಸುಮಕಾನನೇನೇವ ಷಟ್ಪದಾಃ** [೧೨] ॥

ಸತ್ಕವಿ ನಿರ್ಮಿತವಾದ ಈ ಮಾರ್ಗ, ಕುಸುಮಕಾನನದಲ್ಲಿ ದುಂಬಿಗಳು ಝೇಂಕ–ರಿಸಿದಂತೆ ಮನೋಹರವಾಗಿ ಮನಸೆಳೆಯುತ್ತದೆ. ಸುಕುಮಾರಮಾರ್ಗಕ್ಕೆ ಕಾಳಿದಾಸನ ಈ ಪದ್ಯವನ್ನು ಉದಾಹರಿಸಲಾಗಿದೆ.

**ಬಾಲೇಂದು ವಕ್ರಾಣಿ ವಿಕಾಸ ಭಾವಾದ್ ।**
**ಬಭುಃ ಪಲಾಶಾನ್ಯತಿ ಲೋಹಿತಾನಿ ॥**
**ಸದ್ಯೋ ವಸಂತೇನ ಸಮಾಗತಾನಾಂ ।**
**ಸಖಕ್ಷತಾನೀವ ವನಸ್ಥಲೀನಾಂ**[೧೩] ॥

ವಸಂತಕಾಲದ ಪ್ರಕೃತಿ ವರ್ಣನೆಯ ಈ ಪದ್ಯದಲ್ಲಿ 'ನಖಕ್ಷತನೀವ' ಎಂಬ ಮಾನವ ವಿಶೇಷಣದ ಉತ್ಪ್ರೇಕ್ಷೆ ಅಸಂಗತವಾಗದೆ ಸಹಜವಾಗಿ ಹೊಂದಿಕೊಂಡು ಒಳ್ಳೆಯ ಚಿತ್ರವನ್ನು ಕೊಡುತ್ತದೆ.

ವಿಚಿತ್ರಮಾರ್ಗವು ನಿರ್ವಹಿಸಲು ಅತಿಕಷ್ಟಕರವಾಗಿದ್ದು ಪ್ರೌಢವಾದ ಪಾಂಡಿತ್ಯದಿಂದ ಮಾತ್ರ ಸಾಧ್ಯವಾಗುವಂತಹದು.

**ಸೋಽತಿದುಸ್ಸಂಚರೋಯೇನ ವಿದಗ್ಧ ಕವಯೋಗತಾಃ ।**
**ಖಡ್ಗಧಾರಾ ಪಥೇನೇವ ಸುಭಟಾನಾಂ ಮನೋರಥಾಃ[೧೪] ॥**

ತು ಇದರ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಇದು ವಿದಗ್ಧಕವಿಯ ರಚನೆಯಾಗಿದ್ದು ಪಾಂಡಿತ್ಯದ ಪೂರ್ವಸಿದ್ಧತೆಯಿಂದ ನಿರ್ವಹಿಸುವರು ಮಾತ್ರ ಇದನ್ನು ಆರಿಸಿಕೊಳ್ಳುತ್ತಾರೆ. ಇಲ್ಲಿ ಪ್ರತಿಭೆಯ ಜೊತೆಗೆ ಪ್ರಯತ್ನವೂ ಅಷ್ಟೇ ಮುಖ್ಯವಾಗಿರುತ್ತದೆ.

ಮಧ್ಯಮಮಾರ್ಗದಲ್ಲಿ ಸಹಜ ಸೌಂದರ್ಯ ಮತ್ತು ಕಲಾತ್ಮಕ ಕೌಶಲ್ಯಗಳೆರಡೂ ಇಲ್ಲಿ ಸೇರಿರುತ್ತವೆ. 'ಸಹಜಹಾರ್ಯ ಶೋಭಾತಿಶಯ ಶಾಲಿನೌ[೧೫]' ಎಂದು ಎರಡು ಮಾರ್ಗಗಳ ಒಳ್ಳೆಯ ಅಂಶಗಳನ್ನು 'ನಾನಾ ರುಚಿ ಮನೋಹರಃ[೧೬]' ಎಲ್ಲಾ ಮನೋಧರ್ಮ ದವರಿಗೂ ಹಿಡಿಸುವಂತಹ ಮಾರ್ಗವಿದಾಗಿದೆ. ಹಾಗೆಯೇ ಕುಂತಕನು ಈ ಮೂರು ಮಾರ್ಗಗಳಿಗೆ ಅನ್ವಹಿಸುವಂತಹ ಆರುಗುಣಗಳನ್ನು[೧೭] ವಿವೇಚಿಸಿದ್ದಾನೆ. ಈ ಗುಣಗಳ ವಿವೇಚನೆಯು ಇಲ್ಲಿ ಅಪ್ರಸ್ತುತವಾದರಿಂದ ಇದುವರೆಗೂ ವಿವರಿಸುವ ರೀತಿಯ ಹಿನ್ನೆಲೆಯನ್ನು ಇಲ್ಲಿಗೆ ನಿಲ್ಲಿಸಿ ಮುಂದೆ ವಿಶ್ವನಾಥನು  ನಿರೂಪಿಸಿರುವ ರೀತಿಯ ಸ್ವರೂಪವನ್ನು  ವಿವೇಚನೆ ಮಾಡಲಾಗಿದೆ.

**ಪದ ಸಂಘಟನಾ ರೀತಿರಂಗ ಸಂಸ್ಥಾವಿಶೇಷವತ್ ।**
**ಉಪಕರ್ತೀ ರಸಾದೀನಾಂ ಸಾ ಪು ನಃ ಸ್ಯಾಚ್ಚಚುರ್ವಿಧಾ ॥**
**ರಸಾದೀನಾಂ ಅರ್ಥಾತ್ ಶಬ್ದಾರ್ಥಶರೀರಸ್ಯ ಕಾವ್ಯಸ್ಯ ಆತ್ಮಭೂತಾನಾಮ್।**
**ವೈದರ್ಭೀ ಚಾಥ ಗೌಡೀ ಚ ಪಾಂಚಾಲೀ ಲಾಟಿಕಾ ತಥಾ[೧೮] ॥**

'ರೀತಿ' ಎಂದರೆ ಶರೀರದಲ್ಲಿ ಆಯಾಸ್ಥಾನದಲ್ಲಿ ವ್ಯವಸ್ಥಿತವಾಗಿ ಕೈ ಕಾಲು ಮೊದಲಾದ ಅವಯವಗಳು ಸೇರಿರುವಂತೆ ಶಬ್ದಾರ್ಥಗಳೇ ಶರೀರವೆನಿಸಿರುವ ಕಾವ್ಯದಲ್ಲಿ ಪದಗಳನ್ನು ಆಯಾ ಸ್ಥಾನದಲ್ಲಿ ಸಜ್ಜಾಗಿ ಜೋಡಿಸುವುದೇ 'ರೀತಿ' ಎಂದು ಕರೆದಿದ್ದಾನೆ. ಈ ಬಗೆಯ ಜೋಡಣೆಯು ಕಾವ್ಯದ ಆತ್ಮವೆನಿಸಿದ ರಸಭಾವಗಳಿಗೆ ಅನುಕೂಲವಾಗಿರುವುದು. ಈ ರೀತಿಯು ವೈದರ್ಭೀ, ಗೌಡೀ, ಪಾಂಚಲೀ, ಲಾಟಿಕಾ ಎಂದು ನಾಲ್ಕು ಬಗೆಗಳನ್ನು ವಿಶ್ವನಾಥನು ತಿಳಿಸಿದ್ದಾನೆ. ಈಗ ಒಂದೊಂದಾಗಿ ವಿಶದಪಡಿಸಲಾಗಿದೆ.

**೧. ವೈದರ್ಭೀರೀತಿ**

**ಮಾಧುರ್ಯವ್ಯಂಜಕೈರ್ವರ್ಣೈ ರಚನಾ ಲಲಿತಾತ್ಮಿಕಾ ।**
**ಆವೃತ್ತಿರಲ್ಪವೃತ್ತಿರ್ವಾ ವೈದರ್ಭಿ ರೀತಿ ರಿಷ್ಯತೇ[೧೯]॥**

ಮಾಧುರ್ಯ ಗುಣವನ್ನು ಪ್ರಕಾಶಪಡಿಸುವ ವರ್ಣಗಳಿಂದ ಶಬ್ದಾಥ- ರ್ಗಗಳೆರಡರಲ್ಲೂ ಕೋಮಲವಾದ ರೀತಿಯು ಸಮಾಸಗಳಿಲ್ಲದ, ಅಥವಾ ಎರಡು

ಮೂರು ಸಮಾಸಗಳಿರುವ ರೀತಿಯನ್ನು ವೈದರ್ಭೀರೀತಿ ಎಂದು ಕರೆಯಲಾಗಿದೆ. ಉದಾಹರಣೆಗೆ

**ಬಾಲೇಂದು ವಕ್ರಾಣವಿಕಾಸ ಭಾವಾದ್ ।**
**ಬಭುಃ ಪಲಾಶಾನ್ಯತಿ ಲೋಹಿತಾನಿ ॥**
**ಸದ್ಮೋ ವಸಂತೇನ ಸಮಾಗತಾನಾಂ ।**
**ನಖಕ್ಷತಾನಿವ ವನಸ್ಥಲೀನಾಂ**[೨೦] **॥**

ಕಾಳಿದಾಸನ ಈ ಪದ್ಯವು ಮಾಧುರ್ಯ ಗುಣಗಳನ್ನು ಪ್ರಕಾಶಪಡಿಸುವ ಕೋಮಲವಾದ ವರ್ಣಗಳಿಂದ ವಸಂತಕಾಲದ ವರ್ಣನೆಯ 'ನಖಕ್ಷ ತಾನೀವ' ಎಂಬ ಮಾನವ ವಿಶೇಷಣದ ಉತ್ಪ್ರೇಕ್ಷೆ ಅಸಂಗತವಾಗದೆ ಸಹಜವಾಗಿ ಹೊಂದಿಕೊಂಡು ಬಂದು ಒಳ್ಳೆಯ ಚಿತ್ರವನ್ನು ಕೊಡುತ್ತದೆ.

### ೨. ಗೌಡೀ ರೀತಿ

**ಓಜಃ ಪ್ರಕಾಶಕೈ ವರ್ಣೈರ್ಬಂಧ ಆಡಂಬರ ಪುನಃ**
**ಸಮಾಸಬಹುಲಾ ಗೌಡೀ ವರ್ಣ್ಯೈಃ ಶೇಷಃ ಪುನರ್ದ್ವಯೋಃ** [೨೧]

ಓಜೋಗುಣವನ್ನು ಪ್ರಕಾಶಪಡಿಸುವ ವರ್ಣಗಳಿಂದ ಉತ್ಕಟವಾದ ರಚನೆಯೇ ಗೌಡೀರೀತಿ ಎಂದು ಕರೆಯಲಾಗಿದೆ. ಈ ಗೌಡೀರೀತಿಯು ಹೆಚ್ಚು ಸಮಾಸಗಳಿಂದ, ಮಹಾಪ್ರಾಣಾಕ್ಷರಗಳಿಂದ ಅನುಪ್ರಾಸಗಳಿಂದಲೂ, ಅಲ್ಪವಾಕ್ಯಗಳಿಂದಲೂ ಕೂಡಿರುತ್ತವೆಂದು ಕೆಲವರ ಅಭಿಪ್ರಾಯವಾಗಿದೆ. ಕುಂತಕನು ಈ ಗೌಡೀಮಾರ್ಗವನ್ನು ವಿಚಿತ್ರಮಾರ್ಗ ಎಂದು ಕರೆದಿದ್ದಾನೆ. ಈ ಗೌಡೀಮಾರ್ಗಕ್ಕೆ ಒಂದು ಉದಾಹರಣೆ.

**ಸುರ ನದಿಯಲ್ಲಿ ಮಿಂದು ಸುರಮಾರ್ಗ ಕಚೌಘ ಮನೆಯ್ದೆ ಬಿರ್ಚಿವಿ ।**
**ಸ್ಫುರಿತತದುತ್ಪ್ರತಾಪತಪನಾತಪದಾ ಪೆಸಿ ಸೂಡಿ ತಾರಕೋ ॥**
**ತ್ಕರ ಕುಸುಮಂಗಳಂ ತಳೆದು ಚಂದ್ರಿಕೆಯೆಂಬ ವಿಶಾಲ ಚೇಲಮಂ ।**
**ಧರಿಣಿಪ ಕೀರ್ತಿಕಾಂತೆ ವಿಧುದರ್ಪಣ ಮಂ ನರ್ರೈನಿಂದು ನಿಟ್ಟಿಪಳ್** [೨೨]॥

ರಾಜನ ಕೀರ್ತಿಕಾರಿತೆ ಅಲಂಕರಿಸಿಕೊಂಡು ಚಂದ್ರನೆಂಬ ದರ್ಪದಲ್ಲಿ ಮುಖವನ್ನು ನೋಡಿ ಕೊಳ್ಳುವ ಈ ಚಿತ್ರ ಚಮತ್ಕಾರ ಪ್ರಧಾನವಾಗಿದೆ. ಇಲ್ಲಿ ಕಾಲ್ಪನಿಕವಾದರೂ ಒಂದು ರೀತಿಯ ಅನುಭವದ ಪರಿಭಾವನೆ ಇರುವುದರಿಂದ ಪದ್ಯಮನೋಹರವಾಗಿದೆ.

### ೩. ಪಾಂಚಾಲಿ ರೀತಿ

**ಬಹುತರ ಸಮಾಸಯುಕ್ತಾ ಸುಮುಹಾಪ್ರಾಣಕ್ಷರಾ ಚ ಗೌಡೀಯಾ ।**
**ರೀತಿರನುಪ್ರಾಸ ಮಹಿಮಪರತಂತ್ರಾ ಸ್ತೋಕವಾಕ್ಯ ಚ** [೨೩]॥

ವೈದರ್ಭೀ, ಗೌಡೀ ರೀತಿಗಳಲ್ಲಿ ಉಪಯೋಗಿಸುವ ಅಕ್ಷರಗಳನ್ನು ಬಿಟ್ಟು ಉಳಿದ ವರ್ಣಗಳಿಂದ ಮತ್ತು ಐದು ಆರು ಸಮಾಸಗಳಿಂದ ಆಗುವ ರಚನೆಯನ್ನು ಪಾಂಚಾಲೀರೀತಿ ಎಂದು ಕರೆಯಲಾಗಿದೆ. ಉದಾಹರಣೆಗೆ

**ಮಾಧುರಯಾ ಮಧುಭೋಧಿತ ಮಾಧವೀಮಧುಸಮೃದ್ಧಿಸಮೇಧಿತಮೇದಯಾ ।**
**ಮಧುಕರ ರಾಂಗನಯಾ ಮಹುರುನ್ಮದ ಧ್ವನಿಭೃತಾ ನಿಭೃತಾಕ್ಷರಮುಜ್ಜಿಗೆ**[೨೪] **॥**

"ವಸಂತ ಕಾಲದಲ್ಲಿ ಅರಳುವ ಮಾಧವೀಲತೆಯ ಮಧು ಸಮೃದ್ಧಿಯಿಂದ ಪ್ರತಿಭೆಯನ್ನು ಬೆಳೆಸಿಕೊಂಡು ಮದಿಸಿದ ಧ್ವನಿಯನ್ನು ಉಚ್ಚರಿಸುತ್ತ ಮನೋಹರವಾಗಿರುವ ದುಂಬಿಯು ನಿರಂತರವೂ ಅಸ್ಪಷ್ಟವಾದ ರೀತಿಯಲ್ಲಿ ಗಟ್ಟಿಯಾಗಿ ಗಾನವಾಡುತ್ತಿತ್ತು" ಇಲ್ಲಿರುವ ವರ್ಣಗಳು ಮಾಧುರ್ಯವನ್ನಾಗಲೀ ಓಜಸ್ಸಾಗಲೀ ಪ್ರಕಟಸುತ್ತಿಲ್ಲ. ಸಮಾಸವು ಪ್ರಥಮಾರ್ಧಲ್ಲಿ ಸಾಮಾನ್ಯರೀತಿಯಲ್ಲಿದೆ. ಆದ್ದರಿಂದಲೇ ಈ ಪದ್ಯವು ಪಾಂಜಾಲಿರೀತಿಯಿಂದ ಕೂಡಿದೆ. ಭೋಜದೇವನು 'ಐದು ಆರು ಪದಗಳಿಂದ ಆಗಿರುವ ಸಮಾಸಗಳಿಂದ ಕೂಡಿ ಓಜಸ್ಸು ಕಾಂತಿ ಇವುಗಳಿಂದ ಶೋಭಿಸುತ್ತಿರುವ ಮಧುರವೂ ಸುಕುಮಾರವೂ ಆದ ರೀತಿಯೇ ಪಾಂಚಾಲಿ'ಎನಿಸಿದೆ ಎಂದು ಹೇಳಿದ್ದಾನೆ.

**೪. ಲಾಟಿಕಾ ರೀತಿ**

**ಮಧುರಾಂ ಸುಕುಮಾರಂ ಚ ಪಾಂಜಾಲೀಂ ಕವಯೋವಿದುಃ**
**ಲಾಟೀತು ರೀತಿರ್ವೈಧರ್ಭೀ ಪಾಂಚಾಲ್ಯೋರಂತರಾ ಸ್ಥಿತಾ** [೨೫]

ವೈಧರ್ಭೀ ಪಾಂಚಾಲಿಗಳ ಮಧ್ಯದಲ್ಲಿ ಸೇರುವ ರೀತಿಯೇ ಲಾಟಿಕಾರೀತಿ ಎಂದು ಕರೆಯಲಾಗಿದೆ. ಇದು ವೈದರ್ಭಿರೀತಿಗೆ ಅನ್ವಯಿಸುವ ಕೆಲವು ವರ್ಣಗಳು ಮತ್ತು ಪಾಂಜಾಲೀರೀತಿಗೆ ಅನ್ವಯಿಸುವ ಕೆಲವು ವರ್ಣಗಳು ಲಾಟಿಕಾರೀತಿಯಲ್ಲಿ ಸೇರಿರುತ್ತವೆ.

ಉದಾಹರಣೆಗೆ.,
**ಅಯಮುದಯತಿ ಮುದ್ರಾಭರಿಜನಃ ಪದ್ಮಿನೀನಾಂ ।**
**ಉದಯಗಿರಿವನಾಲೀಬಾಲಮಂದಾರ ಪುಷ್ಪ ॥**
**ವಿರಹವಿಧುರಕೋಕ ದ್ವಂದ್ವ ಬಂಧುರ್ವಿಭಿಂದನ್ ॥**
**ಕುಸಿತಕಪಿಕಪೋಲಕ್ರೋಡಘತಾಮ್ರಸ್ತಮಾಂಸಿ** [೨೬]**॥**

"ಕಮಲಗಳ ಸಂಕೋಚ ಸ್ಥಿತಿಯನ್ನು ತೊಲಗಿಸಿ ಉದಯ ಪರ್ವತದಲ್ಲಿರುವ ವನಶ್ರೇಣಿಗೆ ಹೊಸದಾಗಿ ಅರಳಿದ ಮಂದಾರದ ಹೂವಿನಂತೆ ಕೆಂಪಗಿದ್ದು ರಾತ್ರಿವೇಳೆ ವಿರಹದಿಂದ ಗೋಳಾಡುತ್ತಿದ್ದ ಚಕ್ರವಾಕ ಪಕ್ಷಿಗಳೆರಡಕ್ಕೆ ಮತ್ತೆ ಸಮ್ಮೇಳನವನ್ನುಂಟು ಮಾಡಿದ್ದರಿಂದ ಮಿತ್ರನೆನಿಸಿ, ಕೋಪಗೊಂಡ ಕಪಿಯ ಕಪೋಲಸ್ಥಲದ ಮಧ್ಯಭಾಗದಂತೆ

ಕೆಂಪಗಿರುವ ಈ ಸೂರ್ಯನು ಕತ್ತಲೆಯನ್ನು ತೊಲಗಿಸುತ್ತಲೇ ಉದಯಿಸುತ್ತಾನೆ". ಇಲ್ಲಿ ಬಂದಿರುವ ವರ್ಣಗಳ ಮಾಧುರ್ಯವನ್ನು ಪ್ರಕಟಿಸುತ್ತಲಿರುವುದರಿಂದ

ವೈದರ್ಭೀರೀತಿಗೂ ಉಳಿದ ವರ್ಣಗಳು ಪಾಂಚಾಲಿರೀತಿಗೂ ಅನುಕೂಲವಾದ್ದ-ರಿಂದ ಇದು ಲಾಟಿಕಾರೀತಿಗೆ ಉದಾಹರಣೆಯಾಗಿದೆ.

ಲಾಟೀರೀತಿಯನ್ನು ಕೆಲವಿದ್ವಾಂಸರು ಮೃದುವಾದ ಪದಗಳಿರುವ ಸಮಾಸದಿಂದ ಲಾಟೀಶೈಲಿಯು ಮನೋಹರವಾಗಿದ್ದು ಹೆಚ್ಚು ಸಂಯುಕ್ತಾಕ್ಷರಗಳಿರದೇ ಉಪಯುಕ್ತವಾದ ವಿಶೇಷಗಳಿಂದ ನಿರ್ಧಿಷ್ಟವಾದ ಅರ್ಥವನ್ನು ತಿಳಿಸುವುದು ಎಂದು ಹೇಳಿದ್ದಾರೆ. ಹಾಗೆಯೇ ಇತರರು ಉತ್ಕಟವಾದ ರಚನೆವುಳ್ಳದೇ ಗೌಡೀ, ಲಲಿತವಾದ ರಚನೆಯುಳ್ಳದ್ದು ವೈದರ್ಭೀ, ಇವೆರಡು ಸೇರಿದ್ದು ಪಾಂಚಾಲಿ. ಮೃದುವಾದ ಪದಗಳಿಂದ ಕೂಡಿರುವುದು ಲಾಟೀ ಎಂದು ಹೇಳಿದ್ದಾರೆ. ಕೆಲವು ವೇಳೆ ಈ ರೀತಿಯು ವಕ್ತೃ, ವಾಚ್ಯ, ಪ್ರಬಂಧ, ಮೊದಲಾದವುಗಳ ಸ್ವಭಾವಕ್ಕೆ ಅನುಗುಣವಾಗಿ ರಚನೆಯಾಗಿರುವುದು ಉದಾಹರಣೆಗೆ ಈ ಶ್ಲೋಕ

**ಮಂಥಾಯಸ್ತಾರ್ಣವಾಂಭಃಪ್ಲುತಕುಹರಚಲನ್ಮಂದರಧ್ವಾನಧೀರಃ**
**ಕೋಣಾಘಾತೇಷು ಗರ್ಜತ್ಪ್ರಲಯಘಟಾನ್ಯೋನ್ಯಸಂಘಟ್ಟ ಚಂಡಃ ।**
**ಕೃಷ್ಣಾಕ್ರೋಧಾಗ್ರದೂತಃ ಕುರುಕುಲನಿಧನೋತ್ಪಾತನಿರ್ಘಾತವಾತಃ**
**ಕೇನಾಸ್ಮತ್ಸಿಂಹನಾದ ಪ್ರತಿರಸಿತಸಖೊ ದುಂದುಭಿ ಸ್ತಾಡಿತೋಽಯಮ್**[೨೪]**॥**

"ತಡೆಯುವಾಗ ಅಳ್ಳಾಡಿದ ಸಮುದ್ರದ ನೀರಿನಿಂದ ತುಂಬಿಕೊಂಡ ರಂಧ್ರಗಳಿರುವ ಮಂದರ ಪರ್ವತ ಶಬ್ದದಂತೆ ಗಂಭೀರವೂ, ಭೀಕರವೂ ಆಗಿ ಶಬ್ದ ಮಾಡುತ್ತಿರುವ ಪ್ರಳಯ ಕಾಲದ ಮೇಘ ಸಮೂಹದ ಪರಸ್ಪರ ಸಂಘರ್ಷದಿಂದ ಹೊರಟ ಶಬ್ದದಂತೆ ಭಯಂಕರವೂ, ದ್ರೌಪದಿಯ ಕ್ರೋಧವನ್ನು ಮೊದಲು ಪ್ರಕಟಿಸಲು ಸಮರ್ಥವೂ ಕುರುವಂಶದ ವಿನಾಶವನ್ನು ಸೂಚಿಸುವ ಬಿರುಗಾಳಿಯೂ, ಭಯಂಕರವಾದ ಶಬ್ದಗಳನ್ನು ಮೀರಿಸಿ, ನಮ್ಮ ಸಿಂಹನಾದಕ್ಕೆ ಸದೃಶವೂ ಆಗಿರುವ ಈ ದುಂದುಭಿಯನ್ನು ಯಾರು ಬಾರಿಸಿರುವರು". ಈ ಶ್ಲೋಕದಲ್ಲಿ ವಾಚ್ಯಾರ್ಥವು ಕ್ರೋಧ ಉತ್ಸಾಹ ಜುಗುಪ್ಸೆಗಳನ್ನು ಪ್ರಕಟಿಸದೇ ಇದ್ದರೂ ಭೀಮಸೇನನೇ ವಕ್ತೃವೆನಿಸಿದ್ದರಿಂದ ಅವನು ಹೇಳುವ ರೀತಿ ಉದ್ಧತವೆನಿಸಿದೆ. ಹೇಳಬೇಕಾದ ಅರ್ಥದಲ್ಲಿ ವೈಶಿಷ್ಟ್ಯವಿದ್ದರೂ ರೀತಿಯಲ್ಲಿ ಬದಲಾವಣೆಯಾಗಿದೆ.

ವಾಮನನಿಂದ ಪ್ರಸಿದ್ಧವಾದ ಈ ರೀತಿ ಸಿದ್ಧಾಂತಕ್ಕೆ ದಂಡಿಯ ಗುಣಸಿದ್ಧಾಂತವು ಸ್ಫೂರ್ತಿಯಾಯಿತು. ವಾಮನನು ತಿಳಿಸಿದ ಮೂರು ರೀತಿಗಳ ಜೊತೆಗೆ ನಾಲ್ಕು, ಐದು, ಆರು ರೀತಿಗಳನ್ನ ಹೆಚ್ಚಿಸುತ್ತಾ ಹೋಗಿದ್ದಾರೆ. ಆನಂದವರ್ಧನನು ಈ

ರೀತಿಯ ವಿಚಾರದಲ್ಲಿ ಗುಣ ಮತ್ತು ರೀತಿಯನ್ನು ರಸಸಂಬಂಧಿಯನ್ನಾಗಿ ಮಾಡಿ ಧ್ವನಿ ಸಿದ್ಧಾಂತವನ್ನು ನಿರೂಪಿಸಿ ಕಾವ್ಯಶಾಸ್ತ್ರದಲ್ಲಿ ಒಂದು ಹೊಸ ತಿರುವನ್ನು ಕೊಟ್ಟನು. ರೀತಿ ಸಿದ್ಧಾಂತವನ್ನು ಒಂದೆಡೆಯಲ್ಲಿ ಆನಂದವರ್ಧನ ಈ ರೀತಿಯಾಗಿ ಸ್ಪಷ್ಟಪಡಿಸಿ ಹೇಳಿದ್ದಾನೆ.

**ಅಸ್ಪುಟ ಸ್ಫುರಿತಂ ಕಾವ್ಯತತ್ತ್ವ ಮೇತದ್ ಯಥೋಧಿತಮ್ ।**
**ಅಶಕ್ನುವದ್ಭಿರ್ವ್ಯಾ ಕರ್ತುಂ ರೀತಿಯಃ ಸಂಪ್ರವರ್ತಿ ತಾಃ**[೨೮] ॥

ಕಾವ್ಯತತ್ವವು ಅಸ್ಫುಟವಾಗಿ ತಿಳಿದಿದ್ದರೂ ಅದನ್ನು ಬಿಡಿಸಿ ವಿವರಿಸಲಾರದೆ, ಲಕ್ಷಣಕಾರರು 'ರೀತಿ'ಗಳನ್ನು ಪ್ರತಿಪಾದಿಸಿದರೆಂದು ಹೇಳುವ ಮಾತಿನಲ್ಲಿ ಈತನ ದೃಷ್ಟಿ ವ್ಯಕ್ತವಾಗುತ್ತದೆ. ಇದನ್ನು ಅಭಿನವಗುಪ್ತನು[೨೯] ತನ್ನ ವ್ಯಾಖ್ಯಾನದಲ್ಲಿ ಇನ್ನೂ ಸ್ಪಷ್ಟವಾಗಿ ಹೇಳಿದ್ದಾನೆ. ರೀತಿಗಳು ಗುಣಗಳಿಂದ ನಿರ್ಧಾರವಾಗುತ್ತದೆ. ಆದರೆ ಗುಣಗಳು ರಸಗಳಿಗೆ ಅಧೀನವಾದುವು. ಆದರಿಂದ ರೀತಿಗಳು ಗುಣದಲ್ಲಿ ಐಕ್ಯವಾಗಿ, ಗುಣಗಳು ರಸದಲ್ಲಿ ಲೀನವಾಗುತ್ತವೆ. ಅದಕ್ಕಾಗಿ 'ರೀತಿ' ವಿವೇಚನೆಯನ್ನು ಧ್ವನಿಕಾರನು ಪ್ರತ್ಯೇಕವಾಗಿ ಎತ್ತಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ.

ಕುಂತಕನು ಭೌಗೋಳಿಕವಾಗಿ ದೇಶವಾಚಕಪದಗಳಾದ ವೈದರ್ಭೀಗೌಡೀ ಇತ್ಯಾದಿ ರೀತಿಗಳನ್ನು ಪ್ರಥಮವಾಗಿ ನಿರಾಕರಿಸಿ. ತನ್ನದೇ ಆದ ಕವಿಮನೋವಕ್ರತೆಗೆನುಗುಣವಾದ ಮೂರು ಮಾರ್ಗಗಳನ್ನು ಹೇಳಿದನು. ಇನ್ನು ವಿಶ್ವನಾಥನು ರೀತಿಗಳ ಬಗ್ಗೆ ನಾಲ್ಕು ರೀತಿಗಳನ್ನು ಹೇಳಿ ಸ್ಥೂಲವಾದ ವಿಚಾರವನ್ನು ಮಂಡಿಸಿರುವುದನ್ನ ವಿಮರ್ಶಿಸಿ ಮುಂದೆ ಅಲಂಕಾರಗಳ ಸ್ವರೂಪವನ್ನು ಪರಾಮರ್ಶಿಸಲಾಗಿದೆ.

### ಅಲಂಕಾರಗಳ ಸ್ವರೂಪ

**ಶಬ್ದಾರ್ಥಯೋರಸ್ಥಿರಾ ಯೇ ಧರ್ಮಾಃ ಶೋಭಾತಿಶಾಯಿನಃ ।**
**ರಸಾದೀನುಪತುರ್ವಂತೋऽಲಂಕಾರಾಸ್ತೇऽಂಗದಾದಿವತ್**[೩೦] ॥

"ಶಬ್ದಾರ್ಥಗಳಲ್ಲಿ ಯಾವಾಗಲೂ ನೆಲಸದೇ ಇದ್ದು ಅವಶ್ಯಕವಿದ್ದಾಗ ಸೇರಿಕೊಂಡು ಶಬ್ದಾರ್ಥಗಳಿಗೆ ಶೋಭೆಯನ್ನುಂಟು ಮಾಡುತ್ತ ರಸಭಾವಗಳಿಗೆ ಅನುಕೂಲವಾಗಿರುವ ಧರ್ಮಗಳೆ ಅಲಂಕಾರಗಳು". ಹೇಗೆ ಕಡಗ ಕುಂಡಲ ಮೊದಲಾದ ಆಭರಣಗಳು ಶರೀರಕ್ಕೆ ಶೋಭೆಯನ್ನುಂಟು ಮಾಡುತ್ತಾ ರಸಾದಿಗಳಿಗೆ ಪೋಷಕವಾಗಿರುವುದೇ ಅಲಂಕಾರಗಳು ಎಂದು ಕರೆದು ಇವು ಗುಣದಂತೆ ಶಬ್ದಾರ್ಥಗಳಲ್ಲಿ ಅವಶ್ಯಕವಾಗಿ ಇರಲೇಬೇಕೆಂಬ ನಿಯಮವಿಲ್ಲ ಇವು ಅಂದರೆ ಅಲಂಕಾರಗಳು ಇಲ್ಲದಿದ್ದರೂ ಶಬ್ದಾರ್ಥಗಳು ಕಾವ್ಯವೆನಿಸುತ್ತವೆ ಎಂದು ವಿಶ್ವನಾಥನು ಅಲಂಕಾರಗಳ ಸ್ವರೂಪವನ್ನು ಹೇಳಿದ್ದಾನೆ. ಶಬ್ದಾಲಂಕಾರಗಳನ್ನು ಅನುಪ್ರಾಸ, ಉಪಮ ಮೊದಲಾದ ಪ್ರಧಾನವಾದ

ಆರು ಭೇದಗಳನ್ನು, ಅರ್ಥಾಲಂಕಾರಗಳಲ್ಲಿ ಉಪಮಾ ಮೊದಲಾದ ಪ್ರಧಾನವಾಗಿ ಅರವತ್ತಮೂರು ಅಲಂಕಾರ ಭೇದಗಳು ರಸಭಾವಗಳಿಗೆ ಸಂಬಂಧಿಸಿದಂತೆ ರಸವತ್ ಮೊದಲಾದ ನಾಲ್ಕು ಅಲಂಕಾರ ಭೇದಗಳನ್ನು ವಿಶ್ವನಾಥನು ಮಾಡಿದ್ದಾನೆ. ಈ ಅಲಂಕಾರ ಭೇದಗಳನ್ನು ವಿವೇಚಿಸುವುದಕ್ಕಿಂತ ಮೊದಲು ಅಲಂಕಾರ ಹಿನ್ನೆಲೆಯನ್ನು ಕುರಿತು ವಿಚಾರ ಮಾಡಲಾಗಿದೆ.

ಅಲಂಕಾರಕ್ಕೆ ಸಂಬಂಧಿಸಿದಂತೆ ಭರತನು ತನ್ನ ನಾಟ್ಯಶಾಸ್ತ್ರದಲ್ಲಿ [೩೧]ಉಪಮಾ, ರೂಪಕ, ದೀಪಕ, ಯಮಕವೆಂಬ ನಾಲ್ಕು ಅಲಂಕಾರಗಳನ್ನು ಮತ್ತು ಇವುಗಳ ಅಂತರಭೇದಗಳನ್ನು ಹೇಳಿದ್ದಾನೆ. ಉಪಮಾಲಂಕಾರದಲ್ಲಿ ಪ್ರಶ್ನೋಪಮ, ನಿಂದ್ಯೋಪಮ, ಕಲ್ಪಿತೋಪಮ, ಸಾದೃಶೀಉಪಮ ಮತ್ತು ಕಿಂಚಿತ್‌ಸಾದೃಶೀಉಪಮ ಎಂದು ಐದು ಭೇದಗಳನ್ನ ಮಾಡಿದ್ದಾನೆ. ಉಪಮಾನ ಉಪಮೇಯ ದೃಷ್ಟಿಯಿಂದ ಏಕಸ್ಯಏಕೇನ, ಏಕಸ್ಯಾಅನೇಕೇನ, ಅನೇಕಸ್ಯಏಕೇನ, ಬಹುನಾಂಬಹುಭಿಃ ಎಂದು ನಾಲ್ಕು ಭೇದಗಳನ್ನು ರೂಪಕ, ದೀಪಕ ಅಲಂಕಾರಗಳ ಒಳಭೇದವನ್ನು ಹೇಳದೇ ಯಮಕದಲ್ಲಿ ಹತ್ತು ಭೇದಗಳನ್ನು ಹೇಳಿದ್ದಾನೆ. ಇನ್ನು ಭರತನ ನಂತರದ ಭಾಮಮಹನು ತನ್ನ 'ಕಾವ್ಯಾಲಂಕಾರ' ಗ್ರಂಥದಲ್ಲಿ ಮೂವತ್ತೇಳು ಅಲಂಕಾರಗಳನ್ನ ತಿಳಿಸಿದ್ದಾನೆ. ಭಾಮಹನಿಗಿಂತ ಪ್ರಾಚೀನನಾದ ಭಟ್ಟಿ [೩೨] ತನ್ನ ಕಾವ್ಯವನ್ನು ವ್ಯಾಕರಣ ಸೂತ್ರಗಳಿಗೆ ಲಕ್ಷ್ಯರೂಪವಾಗಿ ರಚಿಸಿದ್ದು ಅದರಲ್ಲಿ ಮೂವತ್ತೆಂಟು[೩೩] ಶಬ್ದಾರ್ಥಲಂಕಾರಗಳನ್ನು, ಮಾಧುರ್ಯಗುಣ, ಭಾವಿಕಾಲಂಕಾರ ಇವಿಷ್ಟನ್ನೂ ಕ್ರಮವಾಗಿ ಪ್ರಯೋಗಿಸಿದ್ದಾನೆ. ತನ್ನ ಕಾವ್ಯದ ಕೊನೆಯಲ್ಲಿ ಭಟ್ಟಿ, "ವ್ಯಾಖ್ಯಾನದ ಮೂಲಕ ತಿಳಿಯಭೇಕಾದ ಈ ಕಾವ್ಯದಲ್ಲಿ ಪರ್ಯಾಪ್ತವಾದ ಉಲ್ಲಾಸ ಪಂಡಿತರಿಗೇ ಸರಿ, ಇದರಲ್ಲಿ ನನ್ನ ವಿದ್ವತ್ಪ್ರಿಯತೆಯಿಂದ ಜಡಮತಿಗಳು ಹತರಾದರು[೩೪]" ಎಂದು ದರ್ಪದಿಂದ ಹೇಳಿಕೊಂಡಿದ್ದಾನೆ. ಅಲ್ಲದೆ ಕಾವ್ಯಕ್ಕೂ ಶಾಸ್ತ್ರಕ್ಕೂ ಇರಬೇಕಾದ ವ್ಯತ್ಯಾಸವನ್ನು ಈ ರೀತಿಯಾಗಿ ಹೇಳಿದ್ದಾನೆ. "ಈ ಕಾವ್ಯಗಳನ್ನು ಕೂಡ ಶಾಸ್ತ್ರದಂತೆ, ವ್ಯಾಖ್ಯಾನದ ಮೂಲಕವೇ ತಿಳಿಯಬೇಕಾದಲ್ಲಿ, ಪಂಡಿತರಿಗೆ ಮಾತ್ರ ಉಲ್ಲಾಸ, ಪಾಪ, ಜಡಮತಿಗಳು ಹತರಾದರು". ಇನ್ನು ಪುರಾಣಕ್ಕೆ ಸಂಬಂಧಿಸಿದಂತೆ 'ಅಗ್ನಿಪುರಾಣದಲ್ಲಿ [೩೫]ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಅಂಶಗಳನ್ನು ಸಂಗ್ರಹಿಸುವ ಕೆಲವು ಅಧ್ಯಾಯಗಳು ದೊರೆಯುತ್ತವೆ. ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದಂತೆ 'ಧರ್ಮೋತ್ತರಪುರಾಣ' ಇದರ ಮೂರನೆ ಖಂಡದಲ್ಲಿ ನಾಟ್ಯ, ಶಿಲ್ಪ ಮೊದಲಾದ ಹಲವು ಲಲಿತಕಲೆಗಳ ಜೊತೆಗೆ ಕಾವ್ಯವಿಚಾರವು ಬರುತ್ತದೆ. ಇಲ್ಲಿ ಹದಿನೇಳು ಅಲಂಕಾರವು ಉತ್ತಮವಾಗಿದ್ದು ಅಲಂಕಾರಾಧ್ಯಯನದ ಕೊನೆಯಲ್ಲಿ ಅನನ್ವಯ ಅಲಂಕಾರ ನಿರೂಪಿಸಿದ ಬಳಿಕ "ನಿನಗೆ ಇಷ್ಟನ್ನು ಸ್ವಲ್ಪ ಭಾಗವನ್ನು ಮಾತ್ರ, ಹೇಳಿದ್ದೇನೆ[೩೬]" ಎಂಬ ಮಾತು ಬರುತ್ತದೆ. ಅಗ್ನಿಪುರಾಣ, ವಿಷ್ಣುಧರ್ಮೋತ್ತರ ಪುರಾಣಗಳ ಕಾಲನಿರ್ಣಯದ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಯಾಸ್ಕನ ನಿರುತ್ತದಲ್ಲೂ ಉಪಮೇಯ ವಿಚಾರ ಬರುವುದನ್ನು ಗುರುತಿಸಬಹುದು.

ಇಲ್ಲಿ ಯಾಸ್ಕನು ಗಾರ್ಗ್ಯ ಎಂಬ ಆಚಾರ್ಯನು ಹೇಳಿದ ಉಪಮಾಲಕ್ಷಣವನ್ನು ಉಲ್ಲೇಖಿಸಿ ಉಪಮೆಯ ವಿಚಾರ ತನಗಿಂತಲೂ ಹಿಂದಿನಿಂದ ಬಂದದ್ದೆಂದು ಸೂಚಿಸಿದ್ದಾನೆ. ಯದತತ್ ತಾತ್ಸದೃಶಮಿತಿ ಗಾರ್ಗ್ಯಾಃ । ಅಗ್ನಿರಿವ ಖಾದ್ಯೋತಃ[೩೭] ॥ ಎಂಬುದು ಉದಾಹರಣೆ. ಅಗ್ನಿಯಲ್ಲದ ಬೆಂಕಿಯ ಹುಳವು ಅಗ್ನಿಯ ಹಾಗಿದೆ. ಹೀಗೆ ಯಾವುದು ಅಲ್ಲವೋ ಅದರೊಂದಿಗೆ ಒಂದು ವಸ್ತುವನ್ನು ಹೋಲಿಸುವುದು ಉಪಮೆ[೩೮]. "ಅಧಿಕ ಗುಣವುಳ್ಳ ಅಥವಾ ಪ್ರಖ್ಯಾತಗುಣವುಳ್ಳ ಅಥವಾ ಪ್ರಖ್ಯಾತವಾದ ಗುಣ ಹೋಲಿಸುವುದು ಅಥವಾ ಅಧಿಕ ಗುಣವುಳ್ಳ ಪದಾರ್ಥವನ್ನು ಕಡಿಮೆ ಗುಣವುಳ್ಳ ಪದಾರ್ಥದೊಂದಿಗೆ ಹೋಲಿಸುವುದು ಉಪಮೆ. ಯಥಾ, ನ, ಚಿತ್, ನು ಮತ್ತು ಆ ಇವುಗಳನ್ನು ಉಪಮಾರ್ಥಕಗಳಾಗಿ ಉದಾಹರಣೆಗಳೊಂದಿಗೆ ವಿವರಿಸುತ್ತಾ ಯಾಸ್ಕನು ಕರ್ಮೋಪಮಾ[೩೯], ಭೂತೋಪಮಾ[೪೦], ರೂಪೋಪಮಾ[೪೧], ಸಿದ್ಧೋಪಮಾ[೪೨], ಲುಪ್ತೋಪಮಾ[೪೩] (ಅರ್ಥೋಪಮಾ) ಎಂಬ ಪ್ರಕಾರಗಳನ್ನು ವಿವರಿಸಿದ್ದಾನೆ. ಇನ್ನು ವ್ಯಾಕರಣಕ್ಕೆ ಸಂಬಂಧಿಸಿದಂತೆ ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಉಪಮೆಯ ಬಗ್ಗೆ ನಮಗೆ ಬಹಳ ಮಾಹಿತಿ ದೊರಕುತ್ತದೆ. ಉಪಮೆಯ ಪಾರಿಭಾಷಿಕ ಶಬ್ದಗಳಾದ ಉಪಮಾನ, ಉಪಮಿತಿ, [ಉಪಮೇಯ] ಸಾಮಾನ್ಯ [ಸಾಧಾರಣ ಧರ್ಮ] ಮತ್ತು ವಾಚಕ [ಉಪಮಾದ್ಯೋತಕ] ಅದರಲ್ಲಿ ಬಂದಿವೆ. ಇವಲ್ಲದೆ ಇನ್ನೂ ಅನೇಕ ಸೂತ್ರಗಳಲ್ಲಿ [೪೪] ವ್ಯಾಕರಣ ದೃಷ್ಟಿಯಿಂದ ಭಾಷೆಯ ಮೇಲೆ ಸಾದೃಶ್ಯಕಲ್ಪನೆಯ ಪ್ರಭಾವವು ಪರಿಶೀಲಿಸಲ್ಪಟ್ಟಿದೆ. ಇನ್ನು ಪಾಣಿನಿಯು ಪ್ರತಿಪಾದಿಸಿದ ಉಪಮಾ ವಿಚಾರವನ್ನು ಪತಂಜಲಿಯು ತನ್ನ ಮಹಾಭಾಷ್ಯದಲ್ಲಿ ಉದಾಹರಣೆಗಳೊಂದಿಗೆ ವಿಶದಪಡಿಸಿದ್ದಾನೆ. 'ಮಾನ' ವೆಂದರೆ ಅಜ್ಞಾತ ಪದಾರ್ಥವನ್ನು ತಿಳಿಯುವಂತೆ ಮಾಡುವ ಒಂದು ಅಳತೆ ಅದರಂತೆ ಉಪಮಾನವು ಒಂದು 'ಮಾನ'[೪೫]ದಂತಿ-ದ್ದು ಅಜ್ಞಾತವಾದ ಪದಾರ್ಥವನ್ನು ತಿಳಿಯಲು ಸಾಧನವಾಗುತ್ತದೆ. ಯಾವುದು ಅತ್ಯಂತವಾಗಿ ಅಲ್ಲದಿದ್ದರೂ ಇನ್ನೊಂದಕ್ಕೆ ಸಮೀಪವಾಗಿ ಅಳತೆಯಾಗಿದೆಯೋ ಅದು ಉಪಮಾನ'. ಉದಾಹರಣೆ ಗೌರಿ ವ ಗವಯಃ? ಗೋವಿನಲ್ಲಿ ಜ್ಞಾತ, ಉಪಮಾನ, ಗವರಿರುವು, ಅಜ್ಞಾನತ, ಅದು ಜ್ಞಾತಗೋವಿನ ಹೋಲಿಕೆಯಿಂದ ತಿಳಿಯಲ್ಪಡುತ್ತದೆ. ಇದರಿಂದ ವ್ಯಾಕರಣ, ಭಾಷಾಶಾಸ್ತ್ರದಲ್ಲೂ ಅಲಂಕಾರಶಾಸ್ತ್ರದ ಪ್ರಭಾವವಿತ್ತೆಂದು ಈ ವಿವರಣೆಗಳಿಂದ ತಿಳಿಯುತ್ತದೆ.

ಇನ್ನು ಭಾಮಹನ ವಿಚಾರಕ್ಕೆ ಬಂದರೆ. ಭರತನ ನಾಲ್ಕು ಅಲಂಕಾರಗಳನ್ನು ಭಾಮಹನು ತನ್ನ 'ಕಾವ್ಯಾಲಂಕಾರ'ದಲ್ಲಿ ಮೂವತ್ತೇಳಕ್ಕೆ ಏರಿಸಿದ್ದಾನೆ. ಕಾವ್ಯವನ್ನು ಕುರಿತ ತನ್ನ ನಿಲುವೇನೆಂಬುದನ್ನು ಭಾಮಹ ಪ್ರಾರಂಭದಲ್ಲಿಯೇ ಹೇಳುತ್ತಾನೆ. ಕಾವ್ಯದ ಮಹತ್ವ, ಅದರ ರಚನೆಗೆ ಅಗತ್ಯವಾದ ಪ್ರತಿಭಾಶಕ್ತಿ ಮೊದಲಾದವುಗಳನ್ನು ಹೇಳಿದ ನಂತರ ಅಲಂಕಾರವನ್ನು ಕುರಿತು ಈ ಮಾತನ್ನು ಹೇಳುತ್ತಾನೆ.

**ರೂಪಕಾದಿರಲಂಕಾರ ಸ್ತಸ್ಯಾನ್ಯೈ ರ್ಬಹುದೋದಿತಃ ।**
**ನ ಕಾಂತಮಪಿ ನಿರ್ಭೂಷಂ ವಿಭಾತಿ ವನಿತಾ ಮುಖಂ[೪೬] ॥**

ಕಾವ್ಯಕ್ಕೆ 'ರೂಪಕ'ವೇ ಮೊದಲಾದವು 'ಅಲಂಕಾರ'ಗಳೆಂದು ಅನೇಕರು ಹೇಳಿರುವುದನ್ನು ಪ್ರಸ್ತಾಪಿಸುತ್ತಾ ಎರಡನೆ ಸಾಲಿನಲ್ಲಿ ಆತ ಕೊಡುವ ಸಾದೃಶ್ಯ, ಅಲಂಕಾರಗಳನ್ನು ಕುರಿತ ಆತನ ದೃಷ್ಟಿಯನ್ನು ಸ್ಪಷ್ಟಪಡಿಸುತ್ತದೆ. "ಹೆಣ್ಣಿನ ಮುಖವು ಅಂದವಾಗಿದ್ದರೂ ಒಡವೆಗಳಿಲ್ಲದಿದ್ದರೆ ಶೋಭಿಸುವುದಿಲ್ಲ". ಹಾಗೇ ಕಾವ್ಯಕ್ಕೆ ಅಲಂಕಾರಗಳು, ಅಂದರೆ ಕಾವ್ಯಕ್ಕೆ ಸಹಜ ಸೌಂದರ್ಯವಿದ್ದರೂ ಅದು ಶೋಭಿಸಬೇಕಾದರೆ ಅಲಂಕಾರಗಳು ಬೇಕೇಬೇಕು ಎಂದು ಹೇಳಿ ಶಬ್ದಗಳ ಮತ್ತು ವಾಚ್ಯಾರ್ಥಗಳ ವಿವಿಧ ಪ್ರಕಾರಗಳೇ ಅಲಂಕಾರಗಳೆಂಬುದನ್ನು ಸ್ಪಷ್ಟಪಡಿಸಿ ಮುಂದೆ 'ಶಬ್ದಾಲಂಕಾರ 'ಅರ್ಥಲಂಕಾರಗಳೆಂಬ ವಿಭಾಗಗಳನ್ನು ಮಾಡುತ್ತೇನೆ. ಭಾಮಹನ ಮತದಂತೆ ಎಲ್ಲಿ ಕಾವ್ಯವೂ ಅದು ಮಹಾಕಾವ್ಯವಾಗಿರಲಿ ಮುಕ್ತಕವಾಗಿರಲಿ 'ವಕ್ರೋಕ್ತಿ'ಯಿಂದ ಕೂಡಿರಬೇಕು[೪೭]. ಕಾವ್ಯದ ಶಬ್ದದಲ್ಲಿಯೂ ಆರ್ಥದಲ್ಲಿಯೂ ಲೋಕರೂಢಿಗೆ ಮೀರಿದ ಒಂದು ಅತಿಶಯವಿರುವುದೇ ಅತಿಶಯೋಕ್ತಿ ಅಥವಾ ವಕ್ರೋಕ್ತಿ [೪೮] ವಕ್ರೋಕ್ತಿಯಿಂದಲೇ ಅರ್ಥವು ಸುಂದರವಾಗುವುದು. ವಕ್ರೋಕ್ತಿಯನ್ನು ಭಾಮಹನು 'ಬಾಗಿದ ಉಕ್ತಿ, 'ಕೊಂಕುನುಡಿ' ಎಂಬ ಅರ್ಥದಲ್ಲಿ ರೂಪಕಾದಿ ಅಲಂಕಾರಗಳಿಗೆ ಸಂವಾದಿಯಾಗಿದೆ. ವಕ್ರೋಕ್ತಿ ಎಂದರೆ ಉಪಮಾ ರೂಪಕಾದಿ ಅಲಂಕಾರಗಳಿಂದ ಕೂಡಿದ ಅಭಿಧಾಪ್ರಕಾರವೆಂದು ಹೇಳಿ ಇದನ್ನುಳಿದು ಎಂಥ ಅಲಂಕಾರ?[೪೯] ಎಂದು 'ಸೂರ್ಯ ಮುಳುಗಿದನು, ಚಂದ್ರ ಹೊಳೆಯುತ್ತಾನೆ, ಹಕ್ಕಿಗಳು ಗೂಡಿಗೆ ಹೋಗುತ್ತವೆ". ಈ ಬಗೆಯದೆಲ್ಲ ಕಾವ್ಯವೇ? ಇದನ್ನು ವಾರ್ತೆಯೆಂದು ಕರೆಯುತ್ತಾರೆ.[೫೦] ಹಿನೇಗೆನ್ನುವುದು ಭಾಮಹನ ಮತ. ಹೀಗೆ ಭಾಮಹನ ಕಾವ್ಯತತ್ತ್ವ, ಅಲಂಕಾರಗಳ ಅನಿವಾರ್ಯತೆಯನ್ನು ಎತ್ತಿಹಿಡಿದು ಅಲಂಕಾರಗಳೇ ಕಾವ್ಯದ ಸಾರಸ್ವ. ಅದಿಲ್ಲದಿದ್ದರೆ ಕಾವ್ಯತ್ವ ಸಿದ್ಧಿಸುವುದೇ ಇಲ್ಲ. ವೈಧರ್ಭೀಯಾಗಲೀ, ಗೌಡೀಯಾವಾಗಲೀ, ಅಲಂಕಾರ ಸಮನಿತ್ವವಾಗಿದ್ದರೆ ಶ್ರೇಷ್ಠವೆನ್ನಿಸಿಕೊಳ್ಳುತ್ತದೆ.

**ಅಲಂಕಾರವದ ಗ್ರಾಮ್ಯಮರ್ಥ್ಯ ನ್ಯಾಯ್ಯಮನಾಕುಲಮ್ ।**
**ಗೌಡೀಯಮಪಿ ಸಾಧಿಯೋ ವೈದರ್ಭಮಿತಿ ನಾನ್ಯಥಾ[೫೧] ॥**

'ಅಲಂಕಾರಗಳಿಂದ ಕೂಡಿದ್ದು' ಎಂಬುದೇ ಇಲ್ಲಿ ಮೊದಲ ಮಾತು. ಇದರ ಜೊತೆಗೆ ಅಗ್ರಾಮ್ಯ, ಅರ್ಥಪುಷ್ಟಿ, ಯುಕ್ತಿಯುಕ್ತತೆಗಳನ್ನೂ ಹೇಳುತ್ತಾನೆ. ಆದರೆ ಮೊದಲ ಅವಶ್ಯಕತೆ ಅಲಂಕಾರಗಳು. ಅಲಂಕಾರವೆಂದರೇನೆಂಬುದಕ್ಕೆ ಭಾಮಹನು ಕಿವಿಗಿಂಪಾದ ಪದಗಳಿಷ್ಟರಿಂದಲೇ ಯಾವ ಸೂಗಸೂ ಬರುವುದಿಲ್ಲ. ಅರ್ಥ ಹಾಗೂ ಶಬ್ದಾರ್ಥ ಗಳೆರಡರಲ್ಲಿಯೂ ಅತಿಶಯತೆ ಗೋಚರವಾಗಬೇಕು. ಅಂದರೆ 'ಶಬ್ದ ಮತ್ತು ಅಥ–

’ಗಳೆರಡರಲ್ಲಿಯೂ ಕಂಡುಬರುವ ವಕ್ರೋಕ್ತಿಯನ್ನು ಮಾತ್ರ ಅಲಂಕಾರ’[೫೨]ವೆಂದು ಹೇಳಿದ್ದಾನೆ. ಇಂತಹ ಅಲಂಕಾರಗಳಿಂದ ಕೂಡಿದ್ದು ಕಾವ್ಯವಾಗುತ್ತದೆ. ಶಬ್ದಾರ್ಥ ಸಹಿತವಾದ ಕಾವ್ಯ ಶರೀರದಲ್ಲಿ ಈ ಅಲಂಕಾರಗಳೇ ಅದಕ್ಕೆ ಜೀವನ್ನೀಯುವ ಚೈತನ್ಯ ಶಕ್ತಿಯಾಗುತ್ತದೆ. ಕಾವ್ಯಕ್ಕೆ ಅಲಂಕಾರಗಳೇ ಸಾರಸರ್ವಸ್ವ. ಅದಿಲ್ಲದೇ ಹೋದರೆ ಅದು ಕಾವ್ಯವಾಗುವುದೇ ಇಲ್ಲ ಎಂದು ತನ್ನ ಕಾವ್ಯಲಂಕಾರದಲ್ಲಿ ಅಲಂಕಾರಗಳ ಪ್ರಾಮುಖ್ಯತೆಯನ್ನು ಎತ್ತಿಹಿಡಿದಿದ್ದಾನೆ.

ಭಾಮಹನ ನಂತರ ಬಂದ ದಂಡಿಯು ಅಲಂಕಾರಗಳ ಪ್ರಾಮುಖ್ಯತೆಯನ್ನು ಬಹುಮಟ್ಟಿಗೆ ಒಪ್ಪಿಕೊಂಡು ಕಾವ್ಯಾದರ್ಶದ ಬಹುಭಾಗವನ್ನು ಅವುಗಳ ವಿವೇಚನೆಗೆ ಮೀಸಲಾಗಿಟ್ಟು ಸುಮಾರು ಮೂವತ್ತೈದು ಅಲಂಕಾರಗಳನ್ನು ಅವುಗಳ ಒಳವಿಭೇದಗಳನ್ನು, ಧೀರ್ಘವಾಗಿ ಪ್ರತಿಪಾದಿಸಿ ಅಲಂಕಾರದ ಲಕ್ಷಣವನ್ನು ಪ್ರಾರಂಭದಲ್ಲೇ ಕೊಟ್ಟಿದ್ದಾನೆ. “ಕಾವ್ಯಶೋಭಾಕರಾನ್ ಧರ್ಮನಲಂಕಾರಾನ್ ಪ್ರಚಕ್ಷತೇ”[೫೩] ಅಂದರೆ, ‘ಕಾವ್ಯಕ್ಕೆ ಶೋಭೆಯನ್ನುಂಟುಮಾಡುವ ಧರ್ಮಗಳೆಲ್ಲವನ್ನೂ ಅಲಂಕಾರಗಳೆಂದು ಹೇಳಲಾಗಿದೆ. ಹೀಗೆ ಲಕ್ಷಣದ ಮೂಲಕ ಕೊಟ್ಟ ಅಲಂಕಾರದ ಪರಿಕಲ್ಪನೆಯಲ್ಲಿ ದಂಡಿಯು ತನ್ನ ದೃಷ್ಟಿಯಲ್ಲಿ ಕಾವ್ಯಶೋಭೆಗೆ ಯಾವುದು ಕಾರಣವೋ ಅದೆಲ್ಲವನ್ನೂ ಸೇರಿಸಿದ್ದಾನೆ. ಅಲಂಕಾರದ ಲಕ್ಷಣವನ್ನು ಕೊಡುವ ಶ್ಲೋಕದ ಉತ್ತರಾರ್ಧದಲ್ಲಿ ಗುಣಗಳನ್ನೂ ಅಲಂಕಾರಗಳೆಂದೇ ಕರೆದಿದ್ದಾನೆ.[೫೪] ಮೊದಲನೆ ಪರಿಚ್ಛೇದದಲ್ಲಿ ಮಾರ್ಗಗಳ ಭೇದವನ್ನು ತೋರಿಸಲು ಕೆಲವು ಅಲಂಕಾರಗಳನ್ನು ಅಂದರೆ ವೈದರ್ಭ, ಗೌಡೀಯ ಮಾರ್ಗಗಳ ಭೇದವನ್ನು ಪ್ರದರ್ಶಿಸಲು ಹೇಳಿದ ಶ್ಲೇಷ, ಪ್ರಸಾದ, ಸಮತಾ, ಇತ್ಯಾದಿ ಹತ್ತು ಗುಣಗಳೇ ಆ ಅಲಂಕಾರಗಳೆಂದು ಹೇಳಿ ನಾಟ್ಯಶಾಸ್ತ್ರದಲ್ಲಿ ತಿಳಿಸಿರುವ ಸಂಧ್ಯಂಗ, ವೃತ್ಯಂಗ, ಲಕ್ಷಣ, ಇತ್ಯಾದಿಯಾಗಿ ವರ್ಣಿಸಿರುವುದನ್ನು ಅಲಂಕಾರವೆಂದೇ ಸಮ್ಮತಿಸಿದ್ದಾನೆ. ಹೀಗೆ ಗುಣಗಳು ಸಂಧ್ಯಂಗಗಳು, ವೃತ್ತ್ಯಂಗಗಳು, ಲಕ್ಷಣಗಳು ಇತ್ಯಾದಿಗಳೆಲ್ಲವೂ ಅಲಂಕಾರಗಳೇ[೫೫] ಎಂದು ಹೇಳಿದ ದಂಡಿಯು ರೂಪಕಾದಿ ಅಲಂಕಾರಗಳನ್ನು ‘ಸಾಧಾರಣ ಅಲಂಕಾರ’ಗಳೆಂದು ಹೇಳಿದ್ದಾನೆ. ಭಾಮಹನು ಹೇಳಿದ ವಕ್ರೋಕ್ತಿಯಿಲ್ಲದ ಅಲಂಕಾರವೇ ಇಲ್ಲವೆಂದು ಅವನು ಕೊಟ್ಟ ಉದಾಹರಣೆಯನ್ನ ಹಲವು ಈ ಅಂಶಗಳಲ್ಲಿ ವಿರುದ್ಧವಿದೆ ಎಂದು ಹೇಳಿದ್ದಾನೆ. ‘ಗತೋಽಸ್ತಮರ್ಕೋ ಭಾತೀಂದುಃ ಯಾಂತಿ ವಾಸಾಯ ಪಕ್ಷಿಣಂ”. ಈ ಬಗೆಯ ವಾಕ್ಯಗಳನ್ನ ಭಾಮಹನು ವಾರ್ತೆಯೆಂದು ಕರೆದರೆ, ಈ ಬಗೆಯ ವಾಕ್ಯಗಳಿಗೆ ಕೂಡ ಔಚಿತ್ಯವುಂಟೆಂದು ಅವನ ಮತ[೫೬] ಮತ್ತು ಸ್ವಭಾವೋಕ್ತಿಯನ್ನು ಕೆಲವರು ಮಾತ್ರ ಅಲಂಕಾರವೆಂದು ಕರೆಯುತ್ತಾರೆಂದು ಭಾಮಹನು ಹೇಳಿದರೆ ದಂಡಿ ‘ವಾಙ್ಮಯವು ಸ್ವಭಾವೋಕ್ತಿ ವಕ್ರೋಕ್ತಿ ಎಂದು ಎರಡು ಬಗ್ಗೆ’[೫೭], ಎಂದು ಹೇಳಿದನಲ್ಲದೆ, ತನ್ನ ಅಲಂಕಾರಗಳ ಪಟ್ಟಿಯಲ್ಲಿ ಸ್ವಭಾವೋಕ್ತಿಗೆ ಅಗ್ರಸ್ಥಾನವನ್ನು ಕೊಟ್ಟು ನಿರೂಪಿಸಿದ್ದಾನೆ.

ನಂತರ ಬಂದ ವಾಮನನು ಇನ್ನೂ ಮುಂದುವರೆಸಿ ಅಲಂಕಾರದ ಅರ್ಥ-ವನ್ನು ಪೂರ್ಣ ಗೊಳಿಸಿದ್ದಾನೆ. ವಾಮನನ ಪ್ರಸಿದ್ಧ ಅಲಂಕಾರ ಸೂತ್ರ "ಕಾವ್ಯಂ ಗ್ರಾಹ್ಯಮಲಂಕಾರಾತ್" "ಸೌಂದರ್ಯಮಲಂಕಾರಃ[೫೮]" ಕಾವ್ಯಗ್ರಾಹ್ಯಯವಾಗುವುದು ಅಲಂಕಾರದಿಂದ, ಸೌಂದರ್ಯವೇ ಅಲಂಕಾರ "ಅಲಂಕ್ರೀಯತೆ ಅನೇನ ಇತಿ ಕಾರಣವ್ಯುತ್ಪತ್ಯಾ ಅಲಂಕಾರ ಶಭ್ದೋಽಯಮ್ ಉಪಮಾದಿಷ್ಪು ವರ್ತತೇ!" ಈ ವೃತ್ತಿ ವಾಕ್ಯವು ಕಾವ್ಯಕ್ಕೆ ಶೋಭೆಯನ್ನುಂಟು ಮಾಡುವ ಉಪಮಾದಿ ಅಲಂಕಾರಗಳಿಗೆ ಅನ್ವಯಿಸುತ್ತದೆ ಇದು ಮೇಲುನೋಟಕ್ಕೆ ದಂಡಿಯ ಅಲಂಕಾರಲಕ್ಷಣಕ್ಕೆ ಸಂವಾದಿಯಾಗಿ ಕಂಡರೂ ಅದರ ಅಭಿಪ್ರಾಯವನ್ನು ವಾಮನನು ಗುಣಲಂಕಾರ ಭೇದವನ್ನು ಹೀಗೆ ಹೇಳಿದ್ದಾನೆ.

**ಕಾವ್ಯ ಶೋಭಾಯಾಃ ಕರ್ತಾರೋ ಧರ್ಮಾ ಗುಣಾಃ ।**
**ತದತಿಶಯ ಹೇತವಸ್ತ್ವಲಂಕಾರಾಃ [೫೯]॥**

"ಕಾವ್ಯಶೋಭೆಯನ್ನುಂಟು ಮಾಡುವ ಧರ್ಮಗಳು ಗುಣಗಳು, ಅದರ ಅತಿಶಯಕ್ಕೆ ಕಾರಣಗಳು ಅಲಂಕಾರಗಳು" ಅಂದರೆ ಅಲಂಕಾರಗಳು ನೇರವಾಗಿ ಕಾವ್ಯಶೋಭೆಗೆ ಕಾರಣಗಳಲ್ಲ. ಗುಣಗಳು ಸೃಷ್ಟಿಸಿದ ಕಾವ್ಯಶೋಭೆಯನ್ನು ಮತ್ತಷ್ಟು ಬೆಳಗುವಂತೆ ಮಾಡುವ ಸಾಧನ ಮಾತ್ರವೆಂದು ಹೇಳಿ ರೂಪಕಾದಿ ಅಲಂಕಾರಗಳನ್ನ 'ಗೌಣಲಂಕಾರಗಳು' ಭಾಮಹನಲ್ಲಿ ಸಾರಸರ್ವಸ್ವವಾಗಿದ್ದ ಅಲಂಕಾರಗಳು ವಾಮನನಲ್ಲಿ ಗೌಣಲಂಕಾರಗಳಾದವು. ಹಾಗೆಂದಮಾತ್ರಕ್ಕೆ ಅಲಂಕಾರಗ ಮಹತ್ವ ಕಡಿಮೆಯಾಯಿತೆಂದಲ್ಲ. ಅಲಂಕಾರವಿಲ್ಲದ್ದರೆ ಕಾವ್ಯತ್ವವೇ ಸಿದ್ಧಿಸುವುದಿಲ್ಲವೆಂಬ ಅನಿವಾರ್ಯತೆಯಿಂದ ಕೆಳಗಿಳಿಯಬೇಕಾಯಿತು. ಹೀಗೆ ದಂಡಿವಾಮನರ ಪ್ರತಿಪಾದನೆ ಗುಣ ಮತ್ತು ರೀತಿಗಳ ಮಹತ್ವವನ್ನು ಎತ್ತಿ ಹಿಡಿದರೂ ಅಲಂಕಾರಗಳನ್ನು ಅವರು ನಿರ್ಲಕ್ಷಿಸಲಿಲ್ಲ.

ಉದ್ಭಟನು ತನ್ನ 'ಅಲಂಕಾರಸಂಗ್ರಹ'ದಲ್ಲಿ ನಲವತ್ತೊಂದು ಅಲಂಕಾರಗಳ ವ್ಯವಸ್ಥಿತವಾದ ವಿವೇಚನೆಯನ್ನು ಮಾಡಿದ್ದಾನೆ. ಕೆಲವು ಅಲಂಕಾರಗಳ ಒಳಭೇದಗಳ ನಿರೂಪಣೆಯಲ್ಲಿ ಸ್ವಲ್ಪ ಮಟ್ಟಿಗೆ ಬೇರೆಯಾದ ವ್ಯಾಖ್ಯಾನವನ್ನು ಕೊಟ್ಟಿದ್ದಾನೆ. ಅತಿಶಯೋಕ್ತಿ, ಅನುಪ್ರಾಸ, ಉಪಮ ಮೊದಲಾದ ಅಲಂಕಾರಗಳಲ್ಲಿ ಕಾಣಬಹುದು. ಭಾಮಹನು ಗುರುತಿಸಿದ ರಸವದ್ ಅಲಂಕಾರವನ್ನು ಭಾವ, ಅನುಭಾವ ಮೊದಲಾದ ಪಾರಿಭಾಷಿಕ ಪದಗಳನ್ನಾಗಿ ಬಳಸಿ ರಸದ ವ್ಯಾಪಕತೆಯನ್ನು ಎತ್ತಿ ಹಿಡಿದ್ದಿದಾನೆ. ಶ್ಲೇಷಾಲಂಕಾರಕ್ಕೆ ಉದ್ಧಟನು ವಿಶೇಷ ಸ್ಥಾನವನ್ನು ಕೊಟ್ಟಿದ್ದಾನೆ. ಏಕೆಂದರೆ ಶ್ಲೇಷವಿರುವ ಎಲ್ಲಾ ಸಂದರ್ಭಗಳಲ್ಲಿ ಒಂದಲ್ಲಾ ಒಂದು ಅಲಂಕಾರಗಳ ಹೆಸರಿನಿಂದ ಗುರುತಿಸಿದರೆ ಶ್ಲೇಷಕ್ಕೆ ಅವಕಾಶವೇ ತಪ್ಪಿಹೋಗುತ್ತದೆ. ಆದ್ದರಿಂದ ಎಲ್ಲಿ ಶ್ಲೇಷವಿದೆಯೋ ಅಲ್ಲಿ ಬೇರೆ

ಅಲಂಕಾರವಿದ್ದರೂ ಅದನ್ನು ಶ್ಲೇಷವಿದೆಯೆಂದೇ ಕರೆಯಬೇಕು. ಈ ಅಭಿಪ್ರಾಯವು ಉದ್ಧಟನ "ಅಲಂಕಾರಂತರಗತಾಂ ಪ್ರತಿಭಾಂಜನಯತ್ವದ್ಯೈ:[೬೦]" ಎಂಬ ಮಾತಿನಲ್ಲಿ ವ್ಯಕ್ತವಾಗಿದೆ. ಈ ಅಭಿಪ್ರಾಯವನ್ನು ಆನಂದವರ್ಧನನು "ನವ್ವಲಂಕಾರಾಂತರ ಪ್ರತಿಭಾಯಾಮಿ ಶ್ಲೇಷವ್ಯಪದೇಶೋ ಬಾವತಿತಿ ದರ್ಶಿತಂ ಭಟ್ಟೋಬ್ದೇಟೇನ[೬೧]" ಎಂದು ಉಲ್ಲೇಖಿಸಿದ್ದಾನೆ. ರುದ್ರಟನು ತನ್ನ 'ಕಾವ್ಯಾಲಂಕಾರ'ದ ಹದಿನಾರು ಅಧ್ಯಾಯಗಳಲ್ಲಿ ಹತ್ತು ಅಧ್ಯಾಯಗಳನ್ನ ಅಲಂಕಾರಗಳಿಗೆ ಮೀಸಲಿಟ್ಟಿದ್ದಾನೆ. ಅಲಂಕಾರಗಳನ್ನು ಇಷ್ಟೊಂದು ವಿವರವಾಗಿ ಮತ್ತು ಶಾಸ್ತ್ರೀಯವಾಗಿ ಪ್ರತಿಪಾದಿಸಿದ ಮೊಟ್ಟಮೊದಲನೆಯ ಗ್ರಂಥವಾಗಿದೆ. ಶಬ್ದಾಲಂಕಾರಗಳಲ್ಲಿ ವಕ್ರೋಕ್ತಿ, ಶ್ಲೇಷೆ, ಚಿತ್ರ, ಅನುಪ್ರಾಸ, ಮತ್ತು ಯಮಕ, ರುದ್ರಟನು ವಕ್ರೋಕ್ತಿಯನ್ನು[೬೨] ವಿಶಿಷ್ಟವಾದ ಅರ್ಥದಲ್ಲಿ ಬಳಸಿ ಶಬ್ದಾಲಂಕಾರಗಳಲ್ಲಿ ಒಂದನ್ನಾಗಿ ಮಾಡಿ 'ಗೂಡಾರ್ಥ ಪ್ರತೀತಿ' ಎಂದು ಕರೆದಿದ್ದಾನೆ. ಅಂದರೆ ಒಂದು ರೀತಿಯ ಗೂಢವಾದ ಅಥವಾ ಸಾಂಕೇತಿಕವಾದ ಮಾತುಗಳಿಂದ ಹೇಳುವುದು ಇನ್ನು ಅರ್ಥಾಲಂಕಾರಗಳನ್ನು ನಾಲ್ಕು ಬೇಧಗಳನ್ನಾಗಿ ಮಾಡಿ, ಆಯಾಯ ಭೇದಗಳಲ್ಲಿ ಅವುಗಳನ್ನು ವರ್ಗೀಕರಿಸಿರುವ ರೀತಿಯೂ ಸಹ ಈತನಲ್ಲೇ ಮೊದಲು ಕಾಣಬಹುದಾಗಿದೆ.

**೧. ವಾಸ್ತವಲಂಕಾರಗಳು**

ಇದರಲ್ಲಿ ಸಹೋಕ್ತಿ, ಸಮುಚ್ಚಯ ಜಾತಿ, ಯಥಾಸಂಖ್ಯಾ, ಭಾವ ಇತ್ಯಾದಿ ಇಪ್ಪತ್ತಮೂರು ವಾಸ್ತವಾಲಂಕಾರಗಳು.

**೨. ಔಪಮ್ಯಾಲಂಕಾರಗಳು**

ಉಪಮಾ, ಉತ್ಪ್ರೇಕ್ಷಾ, ರೂಪಕ, ಅಪಹ್ನುತಿ, ಸಂಶಯ, ಇತ್ಯಾದಿ ಇಪ್ಪತ್ತೊಂದು ಔಪಮ್ಯಾಲಂಕಾರಗಳು.

**೩. ಅತಿಶಯಾಲಂಕಾರಗಳು**

ಪೂರ್ವ, ವಿಶೇಷ, ಉತ್ಪೇಕ್ಷಾ, ವಿಭಾವನಾ, ತದ್ಗುಣ, ಇತ್ಯಾದಿ ಹನ್ನೆರಡು ಅತಿಶಯಾಲಂಕಾರಗಳು

**೪. ಶ್ಲೇಷಾಲಂಕಾರಗಳು**

ಶುದ್ಧ ಮತ್ತು ಸಂಕೀರ್ಣ ಎರಡು ಬಗೆ ಇವೆರಡರಲ್ಲಿ ಒಟ್ಟು ಹನ್ನೆರಡು ಶ್ಲೇಷಾಲಂಕಾರಗಳು.

ಇನ್ನು ಆನಂದವರ್ಧನನು ಧ್ವನ್ಯಾಲೋಕದಲ್ಲಿ ಅಲಂಕಾರಗಳು ರಸಾದಿಗಳಿಗೆ ಅಂಗಭೂತವಾಗಿ ಬರಬೇಕೆಂದು ವಿವೇಚಿಸುತ್ತಾ ಹೀಗೆ ಹೇಳಿದ್ದಾನೆ.

**ರಸಾಭಾವಾದಿ ತಾತ್ಪರ್ಯಮಾಶ್ರಿತ್ಯ ವಿನಿವೇಶನಮ್।**
**ಅಲಂಕೃತೀನಾಂ ಸರ್ವಾಸಾಮಲಂಕಾರತ್ವ ಸಾಧನಂ[೬೩] ॥**

ಅಂದರೆ "ರಸಾಭಾವಾದಿಗಳ ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುವಂತಹ ಅಲಂಕಾರಗಳ ಸಂಯೋಜನೆಯೇ ಎಲ್ಲ ಅಲಂಕಾರಗಳಿಗೂ ಅಲಂಕಾರತತ್ವವನ್ನು ಸಾಧಿಸಿಕೊಡುತ್ತದೆ". ಇದನ್ನು ಅಭಿನವಗುಪ್ತನು ತನ್ನ ವ್ಯಾಖ್ಯಾನದಿಂದ ಇನ್ನೂ ಸ್ಪಷ್ಟಪಡಿಸಿದ್ದಾನೆ. ಉಪಮಾದಿಗಳು ಯಾವ ತತ್ವದಿಂದ ಅಲಂಕಾರಗಳೆನಿಸುತ್ತವೆಯೋ ಆ ತತ್ವದಿಂದಲೇ ರಸಾದಿಗಳು ಕೂಡ 'ಅಲಂಕಾರ'ವೆನಿಸಬಹುದು. ಇನ್ನೊಂದೆಡೆಗೆ ಅಲಂಕಾರಗಳನ್ನು ಕುರಿತು ಹೀಗೆ ಹೇಳಿದ್ದಾನೆ.

**ರಸಾಕ್ಷಿಪ್ತತಯಾ ಯಸ್ಯಬಂಧಃ ಶಕ್ಯಕ್ರಿಯೊ ಭವೇತ್ ।**
**ಅಪೃಥಗ್ಯತ್ನ ನಿರ್ವರ್ತ್ಯಃ ಸೋಽಲಂಕಾರೋ ಧ್ವನೌ ಮತಃ [೬೪]॥**

"ರಸಾಕ್ಷಿಪ್ತವಾದ ಮನಸ್ಸಿನಿಂದ, ಅಪ್ರಯತ್ನಪೂರ್ವಕವಾಗಿ ಯಾವುದರ ಬಂಧ ಅಥವಾ ರಚನೆ ಸಾಧ್ಯವೋ ಅದನ್ನು ಮಾತ್ರ 'ಅಲಂಕಾರ'ವೆಂದು ಭಾವಿಸುವುದು. ಧ್ವನಿಸಿಧ್ಧಾಂತದ ಅಭಿಪ್ರಾಯ". ಕವಿ 'ರಸಸಮಾಹಿತ ಚೇತನ'ನಾಗಿದ್ದಾಗ, ರಸದ ಅಭಿವ್ಯಕ್ತಿಯೊಡನೆ ಅವು ಮೂಡಿರಬೇಕು. ಕವಿ ಅವುಗಳನ್ನು ನಿರ್ಮಿಸುವುದಕ್ಕಾಗಿ ವಿಶೇಷ ಪ್ರಯತ್ನಪಟ್ಟಂತೆ ತೋರದೆ ಸಹಜವಾಗಿರಬೇಕು ಮೊದಲಾದ ಅಂಶಗಳು ಸೂಚಿತವಾಗುತ್ತವೆ. ಆನಂದವರ್ಧನನು ಹೇಳುವ ಮುಖ್ಯವಾದ ಅಂಶವೆಂದರೆ ಅಲಂಕಾರಗಳು ತಾವೇ ಪ್ರಧಾನವಾಗಿ ವಿಜೃಂಬಿಸದೇ ರಸಕ್ಕೆ ಅಂಗಭೂತವಾಗಿರಬೇಕು. ರಸಾಭಿನಿವೇಶಕ್ಕಿಂತ ಬೇರೆಯಾದ ಪ್ರಯತ್ನ ಅಲಂಕಾರಗಳಲ್ಲಿ ಎದ್ದು ಕಾಣುವಂತಿ–ರಬಾರದು ಎಂದು ಅಲಂಕಾರಗಳನ್ನು ಉಪಮಾಮೂಲ ಅಥವಾ ಸಾದೃಶ್ಯ ಮೂಲ, ವಿರೋಧ ಮೂಲ, ಮತ್ತು ಸಂಬಂಧ ಮೂಲ ಎಂದು ಮೂರು ಬಗೆಯಾಗಿ ಹೇಳಿದ್ದಾನೆ. ಈ ಮೂರು ಬಗೆಗಳನ್ನು ಭೋಜನು[೬೫] ಬಾಹ್ಯ "ವಸ್ತ್ರಮಾಲ್ಯ ವಿಭೂಷಣಾವಯಃ" ಉಡುಪು ಹಾಕಿಕೊಳ್ಳುವುದು, ಕಟಕಾದಿಗಳನ್ನು ಧರಿಸುವುದು, ಅಭ್ಯಂತರ ಎಂದರೆ ದಂತಪರಿಕರ್ಮ, ನಖಚ್ಛೇದ ಅಲಕ ಕಲ್ಪನಾದಯಃ" ಹಲ್ಲುಜ್ಜುವುದು, ಉಗುರು ತೆಗೆಯುವುದು, ಕೂದಲು ಬಾಚುವುದು. ಇತ್ಯಾದಿ. ಬಾಹ್ಯಾಭ್ಯಂತರ ಎಂದರೆ 'ಸ್ನಾನ ದೂಪವಿಲೇಪನಾಯಃ' ಸ್ನಾನ ಮಾಡುವುದು, ಕುಂಕುಮ ಗಂಧಾದಿವಿಲೇಪನಗಳನ್ನು ಧರಿಸುವುದು ಈ ಮೊದಲಾದ ರೀತಿಯಲ್ಲಿ ಭೋಜನು ವಿವರಿಸಿ ಆನಂದವರ್ಧನನ ಮೂಲಸತ್ವವನ್ನೇ ಕಳೆದಿದ್ದಾನೆ. ಮಮ್ಮಟನು ತನ್ನ ಕಾವ್ಯಪ್ರಕಾಶದಲ್ಲಿ ವಕ್ರೋಕ್ತಿ, ಅನುಪ್ರಾಸ, ಲಾಟಾನುಪ್ರಾಸ, ಶ್ಲೇಷ, ಚಿತ್ರಬಂಧ ಮತ್ತು ಪುನರುಕ್ತಭಾಸ ಏಳು ಶಬ್ದಾಲಂಕಾರಗಳನ್ನು[೬೬] ಅರವತ್ತೊಂದು ಅರ್ಥಾಲಂಕಾರ[೬೭]ಗಳನ್ನು ವಿವರಿಸಿದ್ದಾನೆ.

ಇನ್ನು ಕುಂತಕನು ವಿಚಾರದಲ್ಲಿ ಅಲಂಕಾರಗಳಿಗೆ ಆತ ಕೊಟ್ಟ ವಿನೂತನ ದೃಷ್ಟಿಯೆಂದರೆ ಅಲಂಕಾರಗಳನ್ನು 'ಅಭಿಧಾಪ್ರಕಾರ ವಿಶೇಷ'ಗಳೆಂದು ಹೇಳುವುದು. ಇವನು ಅಲಂಕಾರಗಳನ್ನು ಕವಿ ವ್ಯಾಪಾರವಕ್ರತೆಯಿಂದ ಮೂಡಿ ಬಂದ 'ಉಕಿ–ತ್ವೈಚಿತ್ರ್ಯ' ಅಥವಾ 'ವಕ್ರೋಕ್ತಿ' ಎಂದಿದ್ದಾನೆ. ಆದರೆ ಇವನು ಆನಂದವರ್ಧನ ಹೇಳುವಂತೆ ಎಲ್ಲ ಸಂದರ್ಭ ಗಳಲ್ಲಿಯೂ ರಸಾಕ್ಷಿಪ್ತವಾಗಿ ಧ್ವನಿಸಮನ್ವಿತವಾಗಿಯೇ ಅಲಂಕಾರಗಳು ಇರಬೇಕೆಂದು ಹೇಳುವುದಿಲ್ಲ. ಈ ದೃಷ್ಟಿಯನ್ನಿಟ್ಟುಕೊಂಡು ಕುಂತಕನು ಅನುಪ್ರಾಸ, ಯಮಕ, ಮೊದಲಾದ ಶಬ್ದಾಲಂಕಾರಗಳನ್ನು ಪೂರ್ಣವಿನ್ಯಾಸವಕ್ರತೆ ಒಳಗೊಂಡರೆ, ಪರ್ಯಾಯ, ರೂಢಿ, ಉಪಚಾರ, ಸಂವೃತ್ತಿ, ಸಮಾಸ ಮೊದಲಾದವು ಪದವಕ್ರತೆಯಲ್ಲಿ ಬರುತ್ತದೆ. ವಾಕ್ಯವಕ್ರತೆಯು ಎಲ್ಲಾ ಅಲಂಕಾರಗಳನ್ನು ಒಳಗೊಳ್ಳುತ್ತದೆ ಎಂದು ಅಲಂಕಾರಗಳನ್ನು ತನ್ನ ವಕ್ರೋಕ್ತಿ ಸಿದ್ಧಾಂತದಲ್ಲಿ ಸೇರಿಸಿದ್ದಾನೆ. ಭಾಮಹನು ಪರಿಚಯಿಸಿದ ವಕ್ರೋಕ್ತಿ ಎಂಬ ಮಾತನ್ನು ಕುಂತಕನು ತನ್ನ ಕಾವ್ಯ ಸಿದ್ಧಾಂತವನ್ನೆಲ್ಲಾ ಒಳಗೊಳ್ಳುವಂತೆ ಅದನ್ನು ಪರಿವರ್ತಿಸಿ ವಿಶಿಷ್ಟವಾದ ಅನುಭವದ ನಿಲುವಿನಿಂದ ವ್ಯಾಪಕಗೊಳಿಸಿದ್ದಾನೆ.

ಇಲ್ಲಿಗೆ ಅಲಂಕಾರಗಳ ಸ್ವರೂಪವನ್ನು ಕುರಿತಾದ ವಿವರಣೆಯನ್ನು ಭರತ, ಭಾಮಹ, ದಂಡಿ ವಾಮನ ಮುಂತಾದ ಅಲಂಕಾರಿಕರ ಅಲಂಕಾರಗಳ ಲಕ್ಷಣ, ಅವರು ಮಾಡಿರುವ ಅಲಂಕಾರ ಭೇದೋಪಭೇದಗಳನ್ನು ಹಿನ್ನೆಲೆಯೊಂದಿಗೆ ವಿವೇಚಿಸಿ. ವಿಶ್ವನಾಥನು ತಿಳಿಸಿರುವ ಪ್ರಮುಖ ಅಲಂಕಾರಭೇದಗಳನ್ನು ಈಗ ಪರಾಮರ್ಶಿಸಲಾಗಿದೆ.

ವಿಶ್ವನಾಥನು ಅಲಂಕಾರಗಳನ್ನು ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಈ ರೀತಿಯಾಗಿ ವಿಭಾಗಿಸಿದ್ದಾನೆ.

ಶಬ್ದಾಲಂಕಾರಗಳು ಪ್ರಧಾನವಾಗಿ ಆರು ಪ್ರಕಾರಗಳಾಗಿವೆ.

**೧. ಅನುಪ್ರಾಸ**

[ಛಕಾನುಪ್ರಾಸ, ವೃತ್ತ್ಯಾನುಪ್ರಾಸ, ಶ್ರುತ್ಯನುಪ್ರಾಸ, ಅಂತ್ಯಾನುಪ್ರಾಸ, ೪ ಬಗೆಗಳು]

**೨. ಯಮಕ**

**೩. ವಕ್ರೋಕ್ತಿ**

[ಶ್ಲೇಷ ವಕ್ರೋಕ್ತಿ, ಕಾಕುವಕ್ರೋಕ್ತಿ, ೨ ಬಗೆ]

**೪. ಭಾಷಾಸಮಯ**

**೫. ಶ್ಲೇಷಾಲಂಕಾರ** [ವರ್ಣ, ಪ್ರತ್ಯಯ, ಲಿಂಗ, ಪ್ರಕೃತಿ ಶ್ಲೇಷ ಒಟ್ಟು ೧೭ ಬಗೆಗಳು]

**೬. ಪ್ರಹೇಳಿಕೆ**

ಅರ್ಥಾಲಂಕಾರಗಳು ಪ್ರಧಾನವಾಗಿ ಅರವತ್ತಮೂರು ಪ್ರಕಾರಗಳಾಗಿವೆ.

೧. ಉಪಮಾ [ಪೂರ್ಣೋಪಮ, ಲುಪ್ತೋಮ, ಒಟ್ಟು ೨೭ ಭೇದಗಳು] ೨. ಅನನ್ವಯ ೩. ಉಪಮೇಯೋಪಮ, ೪. ಸ್ಮರಣಾ ೫. ರೂಪಕ ೬. ಪರಿಣಾಮ ೭. ಸಂಶಯಾ, ೮. ಭ್ರಾಂತಿಮದ್ ೯. ಉಲ್ಲೇಖ ೧೦. ಅಪಹ್ನುತಿ ೧೧. ನಿಶ್ಚಯ, ೧೨. ನಿಶ್ಚಯಾಂತ ಸಂದೇಹ ೧೩. ಉತ್ಪ್ರೇಕ್ಷಾಲಂಕಾರ [ದ್ರವ್ಯೋತ್ಪೇಕ್ಷೆ, ವಾಚ್ಯೋತ್ಪ್ರೇಕ್ಷೆ, ಸ್ವರೂಪೋತ್ಪ್ರೇಕ್ಷೆ, ಫಲೋತ್ಪ್ರೇಕ್ಷೆ, ಹೇತ್ವೋಕ್ಷೆ, ವ್ಯಂಗ್ಯೋತ್ಪೇಕ್ಷೆ ಒಟ್ಟು ೪೦ ಭೇದಗಳು] ೧೪. ಅತಿಶಯೊಕ್ತಿ ೧೫. ದೀಪಿಕ, ೧೬. ಪ್ರತಿವಸ್ತೂಪಮೆ, ೧೭. ನಿದರ್ಶನ ೧೮. ದುಷ್ಟಾಂತ, ೧೯. ವ್ಯತಿರೇಕ [ಇದು ಒಟ್ಟು ೮ ಬಗೆಯಾಗಿದೆ] ೨೦. ಸಹೋಕ್ತಿ, ೨೧. ವಿನೂಕ್ತಿ ೨೨, ಸಮಾಸೋಕ್ತಿ [ಒಟ್ಟು ೧೯ ಭೇದ] ೨೩. ಪರಿಕಾರಾಲಂಕಾರ. ೨೪. ಅರ್ಥಶ್ಲೇಷಾಲಂಕಾರ ೨೫. ಅರ್ಥಾಂತರನ್ಯಾಸ ೨೬. ಪರ್ಯಾಯೋಕ್ತ. ೨೭. ಅಪ್ರಸ್ತುತಪ್ರಶಂಸೆ. ೨೮. ಅನುಮಾನ ೨೯. ಹೇತ್ವಾ. ೩೦. ಅನುಕೂಲ. ೩೧. ಆಕ್ಷೇಪ. ೩೨. ವಿಧ್ಯಾಭ್ಯಾಸ. ೩೩. ವಿಭಾವನೆ. ೩೪. ವಿಶೇಷೋಕ್ತಿ, ೩೫. ವಿರೋಧಾಭಾಸ [೧೦ ಭೇದಗಳು] ೩೬. ಅಸಂಗತ್ಯ ೩೭.ವಿಷಮ, ೩೮. ಸಮಾ, ೩೯. ವಿಚಿತ್ರ. ೪೦. ಅಧಿಕಾರ, ೪೧. ಅನ್ಯೋನ್ಯಾ, ೪೨. ವಿಶೇಷ, ೪೩. ವ್ಯಾಘಾತ, ೪೪. ಯಥಾಸಂಖ್ಯ, ೪೫. ಪರ್ಯಾ, ೪೬. ಪರಿವೃತ್ತಿ ೪೭. ಪರಿಸಂಖ್ಯಾ ೪೮. ಉತ್ತರ, ೪೯. ಅರ್ಥಾಪತ್ತಿ ೫೦. ವಿಕಲ್ಪ, ೫೧. ಸಮುಚ್ಚಯ. ೫೨. ಸಮಾಧ್ಯ ೫೩. ಪ್ರತಿಪಾ ೫೪. ಮೀಲಿತ, ೫೫. ಸಮಾನ ೫೬. ತದ್ಗುಣ ೫೭. ಅತದ್ಗುಣ. ೫೮. ಸೂಕ್ಷ್ಮ, ೫೯. ವ್ಯಾಜೋಕ್ತಿ ೬೦. ಸ್ವಭಾವೂಕ್ತಿ. ೬೧. ಭಾವಿಕ. ೬೨. ಉದಾತ್ತ, ೬೩. ಸಂಸ್ಕೃಷ್ಟಿ ಸಂಕರ. ರಸಭಾವಗಳಿಗೆ ಸಂಬಂಧಿಸಿದಂತೆ ರಸವತ್, ಪ್ರೇಯಸ್, ಉರ್ಜಸ್ವಿ, ಸಮಾಹಿತ ಅಲಂಕಾರಗಳನ್ನು ವಿಭಾಗಿಸಿದ್ದಾನೆ.

## ೧. ಅನುಪ್ರಾಸಲಂಕಾರ

ಸ್ವರದಲ್ಲಿ ಸಾಮ್ಯವೈಷಮ್ಯಗಳಿದ್ದರೂ ವ್ಯಂಜನ ವರ್ಣಗಳಲ್ಲಿ ಸಾಮ್ಯವಿದ್ದರೆ ಆ ಸಾಮ್ಯವನ್ನು 'ಅನುಪ್ರಾಸ'ವೆನಿಸುತ್ತದೆ. ತಾಲವ್ಯ ಮೊದಲಾದ ವ್ಯಂಜನ ವರ್ಣಗಳನ್ನು ಮತ್ತೆ ಎಚ್ಚರಿಸುವುದೇ ಅನುಪ್ರಾಸವಾಗಿದೆ. ಇಲ್ಲಿ ಸ್ವರದ ಸಾದೃಶ್ಯವಿರುವುದಕ್ಕೆ ಯಾವ ಬಗೆಯ ಚಮತ್ಕಾರವೂ ಇಲ್ಲದ್ದರಿಂದ ಸ್ವರಗಳ ಸಾಮ್ಯವು ಅವಶ್ಯಕವಾಗಿರುವುದಿಲ್ಲ ಆದರಿಂದ ಇಲ್ಲಿ ರಸಪ್ರಕಾಶಕ್ಕೆ ಅನುಕೂಲವಾಗಿರುವ ಪದಗಳನ್ನು ಪ್ರಯೋಗಿಸುವುದೇ ಅನುಪ್ರಾಸವೆನಿಸಿದೆ. ಉದಾಹರಣೆಗೆ

**ಭಣ ತರುಣಿ ರಮಣ ಮಂದಿರ ಮಾನಂದ ಸ್ಯಂದಿ ಸುಂದರೇಂದುಮುಖಿ ।**
**ಯದಿ ನಲ್ಲೀಲೋಲ್ಲಾಪಿನಿ ಗಚ್ಚಸಿ ತತ್ಕಿಂ ತ್ವದೀಯಂ ಮೇ ॥**
**ಅನುರಣನ್ಮಣಿ ಮೇಖಲಮವಿರತ ಶಿಂಜಾನ ಮಂಜು ಮಂಜೀರಮ್ ।**
**ಪರಿಸರಣಮರುಣಚರಣೇ ರಣರಣಕಮಕಾರಣಂ ಕುರುತೇ [೬೮]॥**

ಪ್ರಿಯನಲ್ಲಿಗೆ ಹೋಗುತ್ತಿರುವ ಪರವನಿತೆಯೊಬ್ಬಳನ್ನು ಕುರಿತು ಕಾಮುಕನಾಡುವ ಮಾತುಗಳು, "ಸುಂದರಳಾದ ಇಂದುಮುಖಿಯೆ, ವಿಲಾಸದಿಂದ ಮಾತನಾಡುವವಳೆ, ಲೋಹಿತ ಚರಣೆ, ನೀನು ರಮಣ ಮಂದಿರಕ್ಕೆ ಹೋಗುತ್ತಿರುವೆಯಾದರೆ, ರತ್ನ ಮೇಖಲ ಮತ್ತು ಚರಣಾಭರಣಗಳ ಶಬ್ದದಿಂದ ಕೂಡಿದ ಆ ನಿನ್ನ ನಡಿಗೆಯು ಆದೇತೆ! ಹೇಳು, ನನ್ನ ಹೃದಯದಲ್ಲಿ ಕಾರಣವಿಲ್ಲದೆ ರಣರಣಕವನ್ನುಂಟು ಮಾಡುತ್ತದೆ'. ಈ ಶ್ಲೋಕದಲ್ಲಿ ವ್ಯಂಜನಗಳ ಆವೃತ್ತಿಯು ವಿಶೇಷವಾಗಿದ್ದು, ಸ್ವರಗಳ ಕಡೆಗೆ ಅಷ್ಟಾಗಿ ಗಮನವಿಲ್ಲ 'ರ', 'ಣ' ಇತ್ಯಾದಿ ವ್ಯಂಜನಗಳ ಸಂಯೋಜನೆಯಿಂದ ಈ ಅನುಪ್ರಾಸಾಲಂಕಾರವು ಮಾಧುರ್ಯವಾಗಿದೆ.

ಅನುಪ್ರಾಸವನ್ನು [೬೯]ಛೇಕಾನುಪ್ರಾಸ, ವೃತ್ತ್ಯನುಪ್ರಾಸ, ಶ್ರುತ್ಯನುಪ್ರಾಸ, ಅಂತ್ಯಾನುಪ್ರಾಸ, ಲಾಟನುಪ್ರಾಸ ಎಂದು ಐದು ಬಗೆಗಳಾಗಿ ವಿಶ್ವನಾಥನು ವಿಭಾಗಿಸಿದ್ದಾನೆ.

## ಛೇಕಾನುಪ್ರಾಸ

ವ್ಯಂಜನಗಳ ಸಮೂಹದಲ್ಲಿ ಒಂದೇ ಬಾರಿಗೆ ಅನೇಕ ಬಗೆಗಳಿಂದ ಸಾದೃಶ್ಯವು ತೋರುವುದೇ ಛೇಕಾನುಪ್ರಾಸವೆನಿಸಿದೆ. ಉದಾಹರಣೆಗೆ

**ಆದಾಯ ವಕುಲಗಂಧಾನಂಧೀಕುರ್ವನ್ ಪದೇ ಪದೇ ಭ್ರಮರಾನ್ ।**
**ಅಯ ಮೇತಿ ಮಂದಮಂದಂ ಕಾವೇರೀವಾರಿಪಾವನಃಪವನಃ [೭೦]॥**

"ಬಕುಲಪುಷ್ಪಗಳ ಸುಗಂಧವನ್ನು ಹೊತ್ತು, ಹೆಜ್ಜೆ ಹೆಜ್ಜೆಗೂ ದುಂಬಿಗಳನ್ನೂ ಮದಿಸುವಂತೆ ಮಾಡುತ್ತಾ ಕಾವೇರಿ ನದಿಯ ನೀರಿನಿಂದ ಶುದ್ಧವಾದ ಈ ಗಾಳಿಯು ಮೆಲ್ಲಮೆಲ್ಲಗೆ ಬೀಸುತ್ತದೆ. ಇಲ್ಲಿ 'ಗಂಧಾನಂದೀ' ಎಂಬಲ್ಲಿ ಸಂಯುಕ್ತವ್ಯಂಜನಗಳಿಗೂ 'ಕಾವೇರಿವಾರಿ' ಎಂಬಲ್ಲಿ ಅಸಂಯುಕ್ತ ವ್ಯಂಜನಗಳಿಗೂ 'ಪಾವನಃ ಪವನಃ' ಎಂಬಲ್ಲಿ ಅನೇಕ ವ್ಯಂಜನಗಳಿಗೂ ಒಮ್ಮೆ ಆವೃತ್ತಿ ಇರುವುದರಿಂದ ಇದು ಛೇಕಾನುಪ್ರಾಸವೆನಿಸಿದೆ.

## ವೃತ್ತ್ಯನುಪ್ರಾಸ

ಅನೇಕ ವ್ಯಂಜನ ವರ್ಣಗಳಿಗೆ ಒಂದೇ ಸಾರಿ ಸ್ವರೂಪದಿಂದ ಸಾಮ್ಯವಿದ್ದರೂ ಅಥವಾ ಬಾರಿಬಾರಿಗೂ ಅನೇಕ ಬಗೆಗಳಲ್ಲಿ ಸಾಮ್ಯವಿದ್ದರೆ ಅದನ್ನು ವೃತ್ತ್ಯನುಪಾಸ ಎನ್ನಲಾಗಿದೆ. ಉದಾಹರಣೆಗೆ

**ಉನ್ಮೀಲನ್ಮಧುಗಂಧಲುಬ್ಧ ಮಧುಪ ವ್ಯಾಧೂತ ಚೂತಾಂಕುರ**
**ಕ್ರೀಡಕ್ಕೋಕಿಲಕಾಕಲೀಕಲಕಲೈರುದ್ಗೀರ್ಣ ಕರ್ಣಜ್ವರಾಃ ।**
**ನೀಯಂತೇ ಪಥಿಕೈಃ ಕಥಮಪಿ ಧ್ಯಾನಾವಧಾನಕ್ಷಣ**
**ಪ್ರಾಪ್ತ ಪ್ರಾಣಸಮಾಗಮರಸೋಲ್ಲಾಸೈರಮೀ ವಾಸರಾಃ** ೭॥

"ಪರದೇಶದಲ್ಲಿ ಸಂಚರಿಸುವ ಪ್ರಣಯಿಗಳು ತಮ್ಮ ಪ್ರಾಣಕ್ಕೆ ಸಮಾನವೆನಿಸಿದ ಪ್ರೇಯಸಿಯರನ್ನು ಮನಸ್ಸಿನಲ್ಲಿ ನೆನಸಿಕೊಂಡ ಕಾಲದಲ್ಲಿ ಆನಂದವನ್ನು ಅನುಭವಿಸುತ್ತಲೂ, ಎಲ್ಲೆಡೆಯಲ್ಲೂ ವ್ಯಾಪಿಸಿದ ಕುಸುಮರಸದ ಸುಗಂಧದಲ್ಲಿ ಆಸಕ್ತವಾಗಿದ್ದ ದುಂಬಿಗಳಿಂದ ಅಳ್ಳಾಡುತ್ತಿರುವ ಮಾವಿನ ಚಿಗುರುಗಳಲ್ಲಿ ವಿವಹ-ರಿಸುತ್ತಿರುವ ಕೋಗಿಲೆಗಳ ಕೋಲಾಹಲಗಳನ್ನು ಕೇಳಿ ಕಿವಿಗಳಲ್ಲಿ ಸಂತಾಪ ಪಡುತ್ತಲೂ ಬಹಳ ಕಷ್ಟದಿಂದ ದಿವಸಗಳನ್ನು ಕಳೆಯುತ್ತಿರುವರು. ಇಲ್ಲಿ 'ರಸೋಲ್ಲಸೈರಮಿ' ಎಂಬಲ್ಲಿ 'ರ'ಕಾರ 'ಸ'ಕಾರಗಳಿಗೆ ಸ್ವರೂಪದಿಂದಲೇ ಒಂದೇ ಸಾರಿ ಆವೃತ್ತಿ ರೂಪವಾದ ಸಾಮ್ಯವಿದೆ. 'ರಸೋ' ಎಂಬಲ್ಲಿ ರೇಫವು ಮೊದಲು ಬಂದಿದ್ದು 'ಸ್ವರಃ' ಎಂಬಲ್ಲಿ ಎರಡನೆಯ ಅಕ್ಷರವೆನಿಸಿದೆ. ಆದ್ದರಿಂದಲೇ ಇದು ವೃತ್ತ್ಯನುಪ್ರಾಸದ ಮೊದಲ ಲಕ್ಷಣವಾಗಿದೆ. ಎರಡನೇಪಾದದಲ್ಲಿ 'ವಾಸರಾಃ' ಎಂಬಲ್ಲಿ 'ಸರಾ' ಎಂಬ ಅಂಶವನ್ನು ತೆಗೆದುಕೊಂಡು 'ರಸೋ' ಎಂಬುದರೊಡನೆ ಒಂದೇ ಸಾರಿ ಅನೇಕ ವೇಳೆ ಸೌಮ್ಯವಿರುವುದರಿಂದ ಇಲ್ಲಿ ಎರಡನೆಯ ಲಕ್ಷಣವು ಅನ್ವಯಿಸುತ್ತದೆ. ಹಾಗೆಯೇ 'ಕ'ಕಾರ'ಲ'ಕಾರಗಳಿಗೂ ಅದೇ ಕ್ರಮದಿಂದ ಸ್ವರೂಪದಿಂದ ಅನೇಕ ವೇಳೆ ಸಾಮ್ಯವಿದೆ. ಇದು ಮೂರನೆಯ ಲಕ್ಷಣವಾಗಿದೆ. ಪ್ರಥಮ ಪಾದದಲ್ಲಿ ಒಂದು ಮಕಾರವನ್ನು ಒಂದು ಸಾರಿ ಆವರ್ತಿಸಿರುವುದರಿಂದ ನಾಲ್ಕನೆಯ ಲಕ್ಷಣವಾಗಿದೆ. ಧಕಾರವನ್ನು ಅನೇಕ ಸಾರಿ ಆವರ್ತಿಸಿರುವುದರಿಂದ ಐದನೆಲಕ್ಷಣವಾಗಿದೆ. 'ಉದ್ಗೀರ್ಣ', 'ಕರ್ಣ' ಎಂಬಲ್ಲಿ ಛೇಕಾನುಪ್ರಾಸವಿದೆ. 'ಸಮಾ ಸಮಾ' ಎಂಬಲ್ಲಿ ಯಮಕಾಲಂಕಾರವಿದೆ. ರಸಪುಷ್ಟಿಗೆ ಬೇಕಾದ ವೈದರ್ಭೀ ಗೌಡೀ, ಪಾಂಚಾಲೀ, ಲಾಟೀ ರೀತಿಗಳಲ್ಲಿ ವರ್ಣಜೋಡಿಸುವುದೇ ವೃತ್ತಿ ಆಗಿದ್ದು ಅದಕ್ಕನುಗುಣವಾಗಿ ವ್ಯಂಜನವನ್ನು ಜೋಡಿಸುವುದನ್ನು ವೃತ್ತ್ಯನುಪ್ರಾಸ ಅಲಂಕಾರ ಎಂದು ಕರೆಯಲಾಗಿದೆ.

## ಶ್ರುತ್ಯನುಪ್ರಾಸ

ವ್ಯಂಜನವರ್ಣವನ್ನು ದವಡೆ, ಹಲ್ಲು, ಮೊದಲಾದ ಸ್ಥಾನಗಳಲ್ಲಿ ಯಾವುದಾದರೊಂದು ಕಡೆ ಉಚ್ಚರಿಸುವುದರಿಂದ ಅದಕ್ಕೆ ಪುನರಾವೃತ್ತಿ ಸಾದೃಶ್ಯವುಂಟಾಗುವುದರಿಂದ ಇದಕ್ಕೆ ಶ್ರುತ್ಯನುಪ್ರಾಸ ಎಂದು ಕರೆಯಲಾಗಿದೆ. ಉದಾಹರಣೆಗೆ.

**ದೃಶಾದಗ್ಧಂ ಮನಸಿಜಂ ಜೀವಯಂತಿ ದೃಶ್ಯವ ಯಾಃ ।**
**ವಿರೂಪಾಕ್ಷಸ್ಯ ಜಯಿನೀಸ್ತಾಃ ಸ್ತುಮೊ ವಾಮಲೋಚನಾಃ**[೭೨] **॥**

ಈ ಪದ್ಯದಲ್ಲಿ ಜೀವಯಂತಿ, ಯಾಃ, ಜಯನೀಃ ಎಂದು 'ಜ'ಕಾರ'ಯ'ಕಾರಗಳನ್ನು ಒಂದೇ ತಾಲುಸ್ಥಾನದಲ್ಲಿ ಉಚ್ಚರಿಸಬೇಕಾಗಿರುವುದರಿಂದ ಅದಕ್ಕೆ ಸಾದೃಶ್ಯವಿದೆ. ಹೀಗೆ ದಂತ್ಯ, ಕಂಠ್ಯ ವರ್ಣಗಳಿಗೂ ಸಾದೃಶ್ಯವಿದ್ದು ಕೇಳಲಿಕ್ಕೂ ಹೆಚ್ಚು ಹಿತವಾಗಿರುವುದರಿಂದ ಇದು ಶ್ರುತ್ಯನುಪ್ರಾಸವೆಂಬ ಅಲಂಕಾರವಾಗಿದೆ.

## ಲಾಟಾನುಪ್ರಾಸ

ತಾತ್ಪರ್ಯವಷ್ಟರಿಂದಲೇ ಶಬ್ದಾರ್ಥಗಳಿಗೆ ವಕ್ತೃವಿನ ಇಚ್ಛೆಯಂತೆ ಭೇದವಿದ್ದರೂ ಅವರೆಡನ್ನು ಪುನಃ ಪ್ರಯೋಗಿಸುವುದೇ ಲಾಟಾನುಪ್ರಾಸವೆನಿಸಿದೆ. ಉದಾಹರಣೆಗೆ,

**ಸ್ಮೇರರಾಜೀವನಯನೇ! ನಯನೇ ಕಿಂ ನಿಮೀಲಿತೇ ।**
**ಪಶ್ಯ ನಿರ್ಜಿತಕಂದರ್ಪಂ ಕಂದರ್ಪವಶಗಂ ಪ್ರಿಯಮ್** [೭೩] **॥**

"ವಿಕಸಿತವಾದ ಕಮಲದಂತೆ ನೇತ್ರವುಳ್ಳವಳೇ! ನೇತ್ರಗಳನ್ನು ಏಕೆ ಮುಚ್ಚಿಕೊಂಡಿರುವೆ. ಕೋಪದಿಂದ ಮನ್ಮಥನನ್ನು ಜಯಿಸಿದ್ದು ಕಾಮಭಾಧೆಯಿಂದ ನರಳುತ್ತಿರುವ ಪ್ರಿಯನನ್ನು ನೋಡು" ಇಲ್ಲಿ 'ನಯನೇ ನಯನೇ' ಎಂಬ ಶಭ್ದಾರ್ಥಗಳನ್ನು ಎರಡು ವೇಳೆ ಉಚ್ಚರಿಸಿದೆ. ಮೊದಲನೆಯ ಉದಾಹರಣದಲ್ಲಿ 'ನಯನೇ' ಎಂಬುದು ಸಂಭೋಧನಕ್ಕೆ ವಿಷಯ ವೆನಿಸಿದೆ. ಮತ್ತೊಂದು 'ನಯನ' ಶಬ್ದವು ಕರ್ಮವೆನಿಸಿದೆ. 'ಕಂದರ್ಪ' ಪದವು ಶಬ್ದಾರ್ಥಗಳಿಗೆ ಪುನರುಕ್ತಿ ಬಂದಿರುವುದರಿಂದ ಲಾಟಾನುಪ್ರಾಸ ಎಂಬ ಶಬ್ದಾಲಂಕಾರದ ಉಪಭೇದವಾಗಿದೆ.

## ಅಂತ್ಯಾನುಪ್ರಾಸ

ತನ್ನ ಹಿಂದಿನ ಅವಸ್ಥೆಯಲ್ಲಿ ಇರುವ ವ್ಯಂಜನ ವರ್ಣವನ್ನು ಮೊದಲೇ ಉಚ್ಚ-ರಿಸಿದ್ದ ಸ್ವರದೊಡನೆ ಮತ್ತೆ ಉಚ್ಚರಿಸುವುದನ್ನು ಅಂತ್ಯಾನುಪ್ರಾಸವೆಂದು ಕರೆಯಲಾಗಿದೆ. ಇದನ್ನು ಪಾದದ ಕೊನೆಯಲ್ಲಿ ಪ್ರಯೋಗಿಸಬೇಕು. ಅನುಸ್ವಾರ, ವಿಸರ್ಗ, ಸ್ವರ, ಸಂಯುಕ್ತಾಕ್ಷರ ಗಳೊಡನೆ ಸೇರಿದ ವ್ಯಂಜನವನ್ನು ಆಯಾ ಪರಿಸ್ಥಿತಿಗನುಗುಣವಾಗಿ ಪರಿಗ್ರಹಿಸ ಬೇಕಾಗುವುದೇ ಅಂತ್ಯಾನುಪ್ರಾಸ ಅಲಂಕಾರವಾಗಿದೆ ಉದಾಹರಣೆಗೆ

**ಕೇಶಃ ಕಾಶಸ್ತವಕವಿಕಾಸಃ ಕಾಯಃ ಪ್ರಕಟಿತಕರಭವಿಲಾಸಃ ।**
**ಚಕ್ಷುರ್ದಗ್ದವರಾಟಕಕಲ್ಪಂ ತ್ಯಜತಿ ನ ಚೇತಃ ಕಾಮಮನಲ್ಪಮ್** [೭೪]**॥**

ಮುದುಕನಾಗಿದ್ದರೂ ಅತ್ಯಂತ ವಿಷಯಾಸಕ್ತನಾಗಿರುವನೊಬ್ಬನನ್ನು ಮತ್ತೊಬ್ಬನು ನಿಂದಿಸುವ ಈ ಪದ್ಯದಲ್ಲಿ "ಕೂದಲು ಕಾಶದೃಷ್ಟದ ಗೊಂಚಲಿನಂತೆ ಪ್ರಕಾಶಿಸುತ್ತಿದೆ.

ದೇಹವು ಒಂಟಿಯ ಮರಿಯ ಮೀನಿನಂತೆ ಕುಗ್ಗಿ ಹೋಗಿದೆ. ಕಣ್ಣುಸುಟ್ಟ ಕೂದಲಿನಂತೆ ಇದೆ. ಆದರೂ ಮನಸ್ಸು ಹೆಚ್ಚಿನ ಕಾಮ ವಿಕಾರವನ್ನು ತೊರೆದಿಲ" ಇಲ್ಲಿ ಪ್ರಥಮ ಪಾದದ ಕೊನೆಯಲ್ಲಿ 'ಅಸಃ' ಎಂಬುದು 'ಕಾಸಃ ಲಾಸಃ' ಎಂದು ಎರಡು ಕಡೆಗಳಲ್ಲಿ ಬಂದಿದೆ. ಮೂರನೆಯ ಪಾದದ ಕೊನೆಯಲ್ಲಿ ಅಲ್ಪಂ ಎಂಬುದು 'ಕಲ್ಪಮ್ ನಲ್ಪಮ್' ಎಂದು ಎರಡು ಕಡೆಗಳಲ್ಲಿ ಬಂದಿದೆ. ಸಕಾರವು 'ಲ್ಪ' ಎಂಬುದೂ ಹಿಂದಿನ ಸ್ವರದೂಡನೆ ಸೇರಿ ಎರಡು ವೇಳೆ ಬಂದಿರುವುದರಿಂದ ಈ ಪದ್ಯವು ಅಂತ್ಯಾನುಪ್ರಾಸ ಅಲಂಕಾರಕ್ಕೆ ಉದಾಹರಣೆಯಾಗಿದೆ.

**೨. ಯಮಕಾಲಂಕಾರ**

ಬೇರೆ ಬೇರೆ ಅರ್ಥವುಳ್ಳ ಸ್ವರ ವ್ಯಂಜನಗಳ ಸಮೂಹರೂಪವಾದ ಪದಗಳನ್ನು ಅದೇ ಕ್ರಮವನ್ನು ಪುನಃ ಪ್ರಯೋಗಿಸುವುದನ್ನು ಯಮಕಾಲಂಕಾರವೆನಿಸಿದೆ. ಅದಕ್ಕೆ ಒಂದೇ ಅರ್ಥವಿದ್ದರೂ ಬೇರೆ ಬೇರೆ ಅರ್ಥವು ಇರಬೇಕು. ಒಂದೊಂದು ಪದವು ಸಾರ್ಥಕವೆನಿಸಿದ್ದರೂ ಅವಕ್ಕೆ ಬೇರೆ ಬೇರೆ ಅರ್ಥಗಳು ಇರಬೇಕು. ವ್ಯಂಜನಗಳನ್ನು ಪುನಃ ಉಚ್ಚರಿಸುವುದು ಅನುಪ್ರಾಸವಾದರೆ ಸ್ವರ ವ್ಯಂಜನಗಳಿಂದ ಕೂಡಿದ ಅರ್ಥವತ್ತಾದ ಪದವನ್ನು ಮತ್ತೆ ಉಚ್ಚರಿಸುವುದು ಯಮಕಾಲಲಂಕಾರವಾಗಿದೆ. ಇದು ಪಾದದ ಅರ್ಥದಲ್ಲೂ, ಶ್ಲೋಕದ ಅರ್ಥದಲ್ಲೂ, ಶ್ಲೋಕದಲ್ಲೂ ಇರುವುದರಿಂದ ಅನೇಕ ಬಗೆಯಾಗಿದೆ ಎಂದು ವಿಶ್ವನಾಥನ ಅಭಿಪ್ರಾಯವಾಗಿದೆ. ಇವುಗಳಲ್ಲಿ ಒಂದನ್ನು ಉದಾಹರಿಸಲಾಗಿದೆ.

**ನವಪಲಾಶಪಲಾಶವನಂ ಪುರಃ ಸ್ಫುಟಪರಾಗಪರಾಗತಪಂಕಜಮ್ ।**
**ಮೃದುಲತಾಂತಲತಾಂತಮಲೀಕಯತ್ಸಸ ಸುರಂಭಿಂ ಸುರಭೀಂ**
**ಸುಮನೋಭರೈಃ**[೭೫] ॥

ವಸಂತವರ್ಣನೆಯ ಈ ಪದ್ಯದಲ್ಲಿ ಯಮಕಾಲಂಕಾರವನ್ನು ಕಾಣಬಹುದು. "ಆ ಹರಿಯು ಹೊಸದಾದ ಎಲೆಗಳಿರುವ ಕಿಂಶುಕ ವೃಕ್ಷಗಳಿಂದಲೂ ಮೃದುವಾಗಿಯೂ ಬಿಸಿಲಿನ ಧಗೆಯಿಂದ ಬಾಡಿಯೂ ಇರುವ ಲತೆಯ ತುದಿಗಳಿಂದಲೂ ಪುಷ್ಪಗಳ ಶ್ರೇಣಿಯ ಸೌರಭ್ಯದಿಂದಲೂ ಕೂಡಿರುವ ವಸಂತಕಾಲವು ತನ್ನ ಎದುರಿಗೆ ಆಗಮಿಸಿದ್ದನ್ನು ಗಮನಿಸಿದನು". ಇಲ್ಲಿ 'ಪಲಾಶ ಪಲಾಶ' ಎಂಬಲ್ಲಿ ಪದಾವೃತ್ತಿ ಇದೆ. 'ಸುರಭಿಂ ಸುರಭಿಂ' ಎಂಬಲ್ಲಿ ಎರಡು ಪದಗಳು ಸಾರ್ಥಕವೆನಿಸಿದೆ. 'ಲತಾಂತ ಲತಾಂತ' ಎಂಬಲ್ಲಿ ಮೊದಲನೆಯ ಪದವು ನಿರರ್ಥಕವೆನಿಸುವುದು. 'ಪರಾಗ ಪರಾಗ' ಎಂಬಲ್ಲಿ ಎರಡನೆಯ ಪದವು ನಿರರ್ಥಕವೆನಿಸಿದೆ.

## ೩. ವಕ್ರೋಕ್ತಿ ಅಲಂಕಾರ

ವಕ್ರೋಕ್ತಿ ಎಂದರೆ  ಮೊದಲು ಹೇಳುವವನು ತನಗೆ ಇಷ್ಟವಾದ ಅರ್ಥವನ್ನಿಟ್ಟು ಒಂದು ವಾಕ್ಯವನ್ನು ಪ್ರಯೋಗಿಸುವನು. ಕೇಳುವನು ಶೇಷ್ಲದಿಂದಾಗಲಿ ವಿಕೃತ ಸ್ವರದಿಂದಾಗಲಿ ಅದನ್ನು ಬೇರೆ ರೀತಿಯಲ್ಲಿ ಅನ್ವಯಿಸಿಕೊಳ್ಳುವನು. ಇಂತಹ ಮಾತನ್ನು ವಕ್ರೋಕ್ತಿ ಎಂದು ಕರೆಯಲಾಗಿದೆ. ಇದು ಶ್ಲೇಷವಕ್ರೋಕ್ತಿ ಮತ್ತು ಕಾಕುವಕ್ರೋಕ್ತಿ ಎಂದು ಎರಡು ಬಗೆಯಾಗಿದೆ. ಶ್ಲೇಷವಕ್ರೋಕ್ತಿ ಉದಾಹರಣೆ

**ಕೇ ಯೂಯಮ್ಽ ಸ್ಥಲಏವ ಸಂಪ್ರತಿ ವಯಂ, ಪ್ರಶೋ**
**ವಿಶ್ಮೇಷಾಶ್ರಯಃ ಕಿಂ ಭ್ರೂತೇ ವಿಹಗಃಽ ಸವಾ ಫಣಿಪತಿ ।**
**ವಿಡಂಬರಸಿಕಃ ಕೀದೃಕ್ಸ್ಮರೋ ವರ್ತತೇಽ ಯೇನಾಸ್ಮಾಸು**
**ವಿವೇಕಶೂನ್ಯಮನಸಃ ಪುಂಸ್ವೇವ ಯೋಷಿದ್ಭ್ರುಮಃ**[೭೮] ॥

"ಪರಸ್ಥಳದಿಂದ ಬಂದವನು ಒಂದು ಕಡೆ ನೆಲೆಸಿರುವವರೊಡನೆ ವ್ಯವಹರಿಸುವಾಗ ಹೀಗೆ ಉಕ್ತಿ ಪ್ರತ್ಯುಕ್ತಿಗಳು ನಡೆಯುತ್ತವೆ. ಆಗಂತುಕರನ್ನು ನೋಡಿ ನೀವು ಯಾರು? ಎಂದು ಪ್ರಶ್ನೆ ಹೊರಡುತ್ತದೆ. ಇಲ್ಲಿ 'ಕೇ' ಎಂಬುದನ್ನು ಪ್ರಶ್ನಾರ್ಥದಲ್ಲಿ ಪೃಚ್ಚಕನು ಪ್ರಯೋಗಿಸುತ್ತಾನೆ. ಆಗಂತುಕನು ಅದನ್ನು ಜಲ ಎಂಬ ಅರ್ಥದಲ್ಲಿ ತಿಳಿದುಕೊಳ್ಳುವನು. ನಾವು ಈಗ ನೀರಿನಲ್ಲಿ ನಿಂತಿಲ್ಲ, ನೆಲದ ಮೇಲೆಯೇ ನಿಂತಿಯೇ ನಿಂತಿರುವೆವು' ಎಂದು ಉತ್ತರ ಬರುತ್ತದೆ. ಅದಕ್ಕೆ ವಿರಕ್ತನಾದ ಪೃಚ್ಚಕನು 'ಕೆ ಯೂಯಮ್' ಎಂಬಲ್ಲಿ 'ಕಿಂ' ಶಬ್ದವು ನನ್ನ ಪ್ರಶ್ನೆಯನ್ನು ತಿಳಿಸುತ್ತದೆ. "ನಿಮ್ಮ ಜಾತಿ ಅಥವಾ ದೇಶ ಇವುಗಳ ಬಗ್ಗೆ ವಿಶೇಷವನ್ನು ತಿಳಿಸಬೇಕು" ಎಂದು ಕೇಳುವನು. ಆಗಂತಕರು 'ವಿಶೇಷಾಶ್ರಯ' ಎಂಬ ಪದಕ್ಕೂ ಬೇರೆ ರೀತಿಯಲ್ಲಿ ಅರ್ಥವನ್ನು ಕಲ್ಪಿಸುವರು 'ವಿ' ಅಂದರೆ ಪಕ್ಷಿ 'ಶೇಷ' ಅಂದರೆ ಅನಂತನೆಂಬ ಸರ್ಪ' ಎಂದು ಸಭಂಗ ಶ್ಲೇಷದಿಂದ ಬೇರೆ ಅರ್ಥವನ್ನು ಭಾವಿಸಿ ಕಿಂ ಬ್ರೂತೇ ಽ ಎಂದು ಕೇಳುವರು.

ನಿಮ್ಮ ಪ್ರಶ್ನೆಯು ಪಕ್ಷಿಗೂ, ವಿಷ್ಣುವಿಗೆ ಮಲಗಲು ಆಶ್ರಯನಾಗಿರುವ ಸರ್ಪರಾಜನಿಗೂ ಸಂಬಂಧಿಸಿದೆಯೋ?' ಎಂದು ಕೇಳುವರು ಅದಕ್ಕೆ ಪೃಚ್ಛಕನು "ನೀವು ನನ್ನ ಪ್ರಶ್ನೆಗೆ ಸಹಜವಾದ ಉತ್ತರವನ್ನು ಕೊಡುತ್ತಿಲ"ವೆಂದು ತಿಳಿಸುವೆನು. ಇಲ್ಲಿ ಅವನು ಪ್ರಯೋಗಿಸುವ 'ವಾಮಾ' ಪದವನ್ನು 'ಸ್ತ್ರೀ' ಎಂಬ ಅರ್ಥದಲ್ಲಿ ಅನ್ವಯಿಸಿ ಆಗಂತಕರು ಹೀಗೆ ಪ್ರತ್ಯುತ್ತರವನ್ನು ತಿಳಿಸುತ್ತಾರೆ. ನೀವು ಸ್ತ್ರೀಯರೊಡನೆ ಸರಸವಾಡುವುದರಲ್ಲಿ ಆಸಕ್ತರಾಗಿರುವಿರಿ. ನಿಮ್ಮ ಕಾಮೋದ್ರೇಕವು ಯಾವ ಸ್ಥಿತಿಯಲ್ಲಿದೆ? ಈ ಕಾಮಬಾಧೆಗೆ ಸಿಲುಕಿ ನೀವು ವಿವೇಕವನ್ನು ಕಳೆದುಕೊಂಡು ಪುರುಷರಾದ ನಮ್ಮಲ್ಲಿ ಸ್ತ್ರೀರೆಂಬ ಭ್ರಾಂತಿಯನ್ನು ತಾಳಿರುವಿರಿ". ಹೀಗೆ ಪ್ರಶ್ನೋತ್ತರಗಳು ಇಲ್ಲಿ ನಡೆದಿವೆ.

ಇಲ್ಲಿ ವಿಶೇಷ ಪದಕ್ಕೆ 'ವಿ' ಎಂದರೆ ಪಕ್ಷಿ, 'ಶೇಷ' ಎಂದರೆ ನಾಗ, ಹೀಗೆ ಇವೆರಡು ಅರ್ಥಗಳಿಗೆ ಸಂಬಂಧವಿರುವುದರಿಂದ ಇಲ್ಲಿ ಸಭಂಗಶ್ಲೇಷವಿದೆ. ಇದಿಷ್ಟನ್ನು ಬಿಟ್ಟು ಉಳಿದ ಕಡೆ ಅಭಂಗ ಶ್ಲೇಷವಿದೆ. ಆದ್ದರಿಂದ ಇದು ಶ್ಲೇಷವಕ್ರೋಕ್ತಿಗೆ ಉದಾಹರಣೆಗೆ

**೧. ಕಾಕುವಕ್ರೋಕ್ತಿಗೆ ಉದಾಹರಣೆ**

**ಕಾಲೇ ಕೋಕಿಲವಾಚಾಲೇ ಸಹಕಾರ ಮನೋಹರೇ ।**
**ಕೃತಾಗಸಃ ಪರಿತ್ಯಾಗಾತ್ ತಸ್ಯಾಶ್ಚೇತೋ ನ ದೂಯತೇ** [೭೭]**॥**

ಸಖಿಗೆ ಬೇರೊಬ್ಬ ಸಖಿಯು ಹೇಳುವ ಮಾತಿದು. "ಕೋಗಿಲೆಗಳಿಂದ ಶಬ್ದಗೈಯುತ್ತಿರುವ ಮಾವಿನ ಮರಗಳ ವಿಕಾಸದಿಂದ ಮನೋಹರವಾಗಿರುವ ವಸಂತ ಸಮಯದಲ್ಲಿ ಅಪರಾದವನ್ನೆಸಗಿದ ಪತಿಯನ್ನು ತೊರೆದದ್ದರಿಂದ ಆ ಚಿತ್ತವು ಸಂತಾಪಗೊಳ್ಳುವುದಿಲ್ಲವೇ?" ಇಲ್ಲಿ ಸಖಿಯೊಬ್ಬಳು 'ಸಂತಾಪಗೊಳ್ಳುವುದಿಲ್ಲ' ಎಂದು ನಿಷೇಧಾರ್ಥದಲ್ಲಿ ನಕಾರವನ್ನು ಪ್ರಯೋಗಿಸುತ್ತಾಳೆ. ಈ ಮಾತನ್ನು ಕೇಳಿದವಳು ಸ್ವರ ವಿಕಾರದಿಂದ ಅದನ್ನು ಬೇರೆ ರೀತಿಯಲ್ಲಿ ಗ್ರಹಿಸುವಳು. "ಚಿತ್ತವು ಸಂತಾಪಗೊಳ್ಳುವುದಿಲ್ಲವೇ? ಅಂದರೆ ಸಂತಾಪಗೊಳ್ಳಲೇಬೇಕು" ಎಂದು ವಿಧ್ಯಥ-ರ್ವನ್ನು ಆಕೆಯು ಗ್ರಹಿಸುವಳು. ನಿಷೇದವು ವಿಧ್ಯರ್ಥದಲ್ಲಿ ಪರಿಣಮಿಸುವುದು. ಕಾಕುವಕ್ರೋಕ್ತಿಯಾಗಿದೆ. ಕಾಕುವೆಂದರೆ ಸ್ವರಗಳ ವಿಕಾರ ಎಂದು ಹೇಳಲಾಗಿದೆ.

'ವಕ್ರೋಕ್ತಿ' ಎಂಬ ಪದವನ್ನು ಪ್ರಥಮವಾಗಿ ತನ್ನ ಗ್ರಂಥವಾದ ಕಾವ್ಯಾಲಂಕಾರದಲ್ಲಿ ಉಪಯೋಗಿಸಿದವನು ಭಾಮಹ ಈ ಪದವನ್ನು ಅವನು ಕಾವ್ಯದ ತಿರುವುನುಡಿ ಎಂಬ ಅರ್ಥದಲ್ಲಿ ಬಳಸಿದನು ಅಲ್ಲದೇ 'ಅಲಂಕಾರ'ಗಳ ಮೂಲಕ ಪರಿಣಮಿಸುವ ಆ ನುಡಿ ಪ್ರತಿಯೊಂದು 'ಅಲಂಕಾರದಲ್ಲಿಯೂ ಇದೆಯೆಂಬುದು ಅವನ ಮತ[೭೮]. ಆದ್ದರಿಂದಲೇ ಕಾವ್ಯವು ಅಲಂಕಾರಮಯವಾಗಿರುವುದರಿಂದ ಆ ನುಡಿಯೇ ವಕ್ರೋಕ್ತಿ ಎಂದಿದ್ದಾನೆ. ಭಾಮಹನು ಸ್ವಭಾವೋಕ್ತಿಯನ್ನು ಅಲಂಕಾರವೆಂದು ಒಪ್ಪದೆ[೭೯], ವಕ್ರೋಕ್ತಿಯಿಂದ ಅದನ್ನು ಬೇರೆ ಮಾಡಿ ವಿವರಿಸಿದ್ದಾನೆ. ಅವನಿಗೆ ವಕ್ರೋಕ್ತಿ ಎಂಬುದು ಕೇವಲ ಅಲಂಕಾರವಲ್ಲ. ಅದೊಂದು ವೈಶಿಷ್ಟ್ಯಪೂರ್ಣ ಮಾತಿನ ಬಗೆ ಎಲ್ಲ ಅಲಂಕಾರಗಳಿಗೂ ಆ ಬಗೆಯ ಮಾತಿನ ಅವಶ್ಯಕತೆಯುಂಟೆಂಬುದು ಅವನ ಅಭಿಪ್ರಾಯ.

ಭಾಮಹನು ವಕ್ರೋಕ್ತಿಯಿಂದ ಸ್ವಭಾವೋಕ್ತಿಯನ್ನು ಬೇರೆ ಮಾಡಿದರೆ ದಂಡಿಂ-ಯು ಸ್ವಭಾವೋಕ್ತಿಯಿಂದ ವಕ್ರೋಕ್ತಿಯನ್ನು ಬೇರೆ ಮಾಡಿದ್ದಾನೆ. ಭಾಮಹನು ಪ್ರತಿಪಾದಿಸಿದಂತೆ ಇವನೂ ಅತಿಶಯೋಕ್ತಿಯನ್ನು ಎಲ್ಲ ಅಲಂಕಾರಗಳ ತತ್ತ್ವವನ್ನಾಗಿ ವಿಧಿಸಿ ಅದರಲ್ಲಿ ಸ್ವಭಾವೋಕ್ತಿಯೂ ಸೇರುವಂತೆ ಮಾಡಿದ್ದಾನೆ[೮೦]. ದಂಡಿಯ ಮತದಲ್ಲಿ 'ಸ್ವಭಾವೋಕ್ತಿ'ಯು 'ಆಧ್ಯಾ ಅಲಂಕೃತಿಃ' ತಿರುವು ನುಡಿಗಳಿಗೆ ಅವಕಾಶವಿಲ್ಲದ ಒಂದು

ಅಲಂಕಾರ. ಆದ್ದರಿಂದ ಅವನು ಸ್ವಭಾವೋಕ್ತಿಯನ್ನು ಅಂತಹ ನುಡಿಗಳಿಂದ ಕೂಡಿದ ವಕ್ರೋಕ್ತಿಯಿಂದ ಬೇರ್ಪಡಿಸಿ ಹೇಳಿದ್ದಾನೆ. ಅಲ್ಲದೇ ಅಲಂಕಾರಗಳ ಪರಿಶೀಲನೆ ಮಾಡುತ್ತಾ ವಾಙ್ಮಯವನ್ನು ಸ್ವಭಾವೋಕ್ತಿ ವಕ್ರೋಕ್ತಿಗಳೆಂದು ವಿಂಗಡಿಸಿ. ಶ್ಲೇಷವೆಂಬ ಅಲಂಕಾರವು ಉಳಿದೆಲ್ಲ ವಕ್ರೋಕ್ತಿಗಳ ಸೊಗಸಿಗೆ ಕಾರಣ ಎಂದು ಹೇಳುವ ಸಂದರ್ಭದಲ್ಲಿ ಮಾತ್ರ ಅವನಲ್ಲಿ ವಕ್ರೋಕ್ತಿಯ ಪ್ರಸಂಗ ಕಂಡು ಬರುತ್ತದೆ. ಅಂದರೆ ಕಾವ್ಯದಲ್ಲಿ ಸ್ವಭಾವೋಕ್ತಿಯೆಂಬ ಅಲಂಕಾರವು ವಕ್ರೋಕ್ತಿಗಳೆನ್ನಿಸಿ ಕೊಳ್ಳುವ ಇತರ ಅಲಂಕಾರಗಳಿಗಿಂತ ಬೇರೆಯಾಗಿದ್ದು, ಇತರ ಅಲಂಕಾರಗಳಲ್ಲೊಂದಾದ ಶ್ಲೇಷವು ಉಳಿದವುಗಳ ಅಂದವನ್ನು ಹೆಚ್ಚಿಸುತ್ತವೆಂಬುದು ಅವನ ಮಾತಿನ ತಾತ್ಪರ್ಯವಾಗಿದೆ.[೮೧] ಅಲಂಕಾರಮಯ ಕಾವ್ಯಕ್ಕೆ ವಕ್ರೋಕ್ತಿಯು ಒಂದು ತತ್ವವಾಗ ಬಹುದೆಂದು ಭಾಮಹನ ಅಭಿಪ್ರಾಯವಾದರೆ ದಂಡಿ ಅದು ತಾನು ಹೇಳುವ ಮುಖ್ಯವಾದ ಸ್ವಭಾವೋಕ್ತಿ ಎಂಬ ಅಲಂಕಾರಕ್ಕೆ ಅನ್ವಯಿಸಬಾರದೆಂದು ಸೂಚಿಸಿ. ಆ ವಕ್ರೋಕ್ತಿಯನ್ನು ಉಪಮಾ ಮುಂತಾದ ಉಳಿದ ಅಲಂಕಾರಗಳ ಸಾಮಾನ್ಯವಾದ ಒಂದು ತತ್ವವಾಗಿ ಕಾಣುತ್ತಾನೆ. ಅವನ ದೃಷ್ಟಿಯಲ್ಲಿ ಕಾವ್ಯತತ್ವ ಈ ವಕ್ರೋಕ್ತಿಗಿಂತ ಭಿನ್ನ, ವಿಶಾಲಕರವಾಗಿದೆ.

ವಾಮನನು ವಕ್ರೋಕ್ತಿಯ ವಿಚಾರದಲ್ಲಿ ಭಾಮಹ ದಂಡಿಗಳ ತಾತ್ವಿಕವಾದ ಪರಿಶೀಲನೆಯನ್ನನುಸರಿಸದೇ ಅದನ್ನು 'ವಕ್ರೋಕ್ತಿ' ಎಂಬ ಅರ್ಥಾಲಂಕಾರವಾಗಿ ಪರಿಗಣಿಸಿದ್ದಾನೆ. ವಸ್ತು ಸಾದೃಶ್ಯದ ಮೂಲಕ ಲಕ್ಷ್ಯಾರ್ಥವೊಂದು ಬರುವಂತಿದ್ದರೆ ಈ ಅಲಂಕಾರ ಉಂಟಾಗುವುದೆಂಬುದು ಅವನ ಮತ[೮೨] ಅಂದರೆ ಅದು ಸಾಮಾನ್ಯವಾಗಿ ಲಕ್ಷಣಾ ಎಂಬ ನಿಯಮವನ್ನನುಸರಿಸಿ ಬರುವ ಒಂದು ವಿಶೇಷಾರ್ಥ. ವಕ್ರೋಕ್ತಿಯನ್ನು ಅಲಂಕಾರವೆಂದು ಮೊದಲು ಕರೆದವನು ವಾಮನ ರುದ್ರಟನು ವಕ್ರೋಕ್ತಿಯನ್ನು ಶಬ್ದಾಲಂಕಾರಗಳಲ್ಲಿ ಸೇರಿಸಿ ಆಡಿದ ಮಾತಿಗೆ ಕಾಕುವಿನ ಅಥವಾ ಶ್ಲೇಷದ ಮೂಲಕ ಬೇರೊಂದು ಅರ್ಥವನ್ನು ಚತುರವಾದ ಉತ್ತರಕೋಸ್ಕರ ಕಲ್ಪಿಸುವ ಅವಕಾಶವಿದ್ದರೆ ಅದು 'ವಕ್ರೋಕ್ತಿ' ಎಂದು ಕರೆದಿದ್ದಾನೆ[೮೩].

ಇನ್ನು ಕುಂತಕ ಗ್ರಂಥರಚನೆಯ ಉದ್ದೇಶ ಅವನೇ ಹೇಳಿರುವಂತೆ ಕಾವ್ಯದಲ್ಲಿ ಅಸಾಧಾರಣವಾದ ಚಮತ್ಕಾರವನ್ನುಂಟುಮಾಡುವ ವೈಚಿತ್ರ್ಯವನ್ನು ವಿಧಿಸುವುದು[೮೪]. ಕಾವ್ಯವಾಗಬೇಕಾದ ಶಬ್ದಾರ್ಥಗಳ ಸಂಯೋಜನೆಯಲ್ಲಿ ವಕ್ರೋಕ್ತಿ ಇರಬೇಕು. ಈ ವಕ್ರೋಕ್ತಿ ಎಂಬುದು ವಿಚಿತ್ರವಾದ ಅಭಿದಾ[೮೫], ಇದರ ವಕ್ರತ್ವ ಅಥವಾ ವಕ್ರಭಾವವು ವೈಚಿತ್ರ್ಯ ಅಥವಾ ವಿಚಿತ್ರಭಾವಕ್ಕೆ ಸಮನಾದುದು ಇಂಥ ವಕ್ರೋಕ್ತಿಯೇ ಕಾವ್ಯ ಎಂಬುದು ಕುಂತಕನ ಮತ. ಅವನು ಈ ವಕ್ರೋಕ್ತಿಯನ್ನು "ವೈದಗ್ಧ್ಯಭಂಗೀ ಭಣಿತೀ" ಎಂದು ಕರೆದಿದ್ದಾನೆ. ಅಂದರೆ ಕವಿಕೌಶಲದ ವೈಖರಿಯಿಂದ ಉಂಟಾದ ವಿಚಿತ್ರಮಾತು. ಇದು ಶಾಸ್ತ್ರಾದಿಗಳಲ್ಲಿ ಕಂಡು ಬರುವ ಪ್ರಸಿದ್ಧವಾದ ಮಾತಿನ ಸರಣಿಗಿಂತ ಭಿನ್ನವಾದದು[೮೬] ಅಷ್ಟು ಮಾತ್ರವಲ್ಲದೇ ವಾಚ್ಯ ಮುಂತಾದವುಗಳ

ಅತಿಶಯಕ್ಕಿಂತಲೂ ಮಿಗಿಲಾಗಿದ್ದು ಸಹೃದಯಾಹ್ಲಾದಕ್ಕೆ ಕಾರಣ ವಾದುದೆಂದು ಅವನ ಮತವಾಗಿದೆ.[೮೭] ಇಂಥ ವಕ್ರೋಕ್ತಿಯು ಶಬ್ದಾರ್ಥ ಸಂಯೋಜನೆಯಲ್ಲಿ ಕವಿವ್ಯಾಪಾರದ ಅಥವಾ ಕವಿ ಪ್ರತಿಭೆಯ ಮಹಿಮೆಯಿಂದ ಹಾಸುಹೊಕ್ಕಾಗಿದ್ದು ಶಬ್ದಾರ್ಥಗಳಿಗೆ ಅಲಂಕಾರಪ್ರಾಯವಾಗಿರುವುದರಿಂದ ಅವುಗಳ ಸಂಯೋಗಕ್ಕೆ ಒಂದೊಂದಲಂಕಾರವನ್ನೂ ಜೋಡಿಸಬೇಕೆಂಬ ಅಭಿಪ್ರಾಯವು ಯುಕ್ತವಲ್ಲವೆಂಬುದು ಕುಂತಕನು ವಾದಿಸುತ್ತಾನೆ[೮೮] ಅವನ ಅಭಿಪ್ರಾಯದಲ್ಲಿ ವಕ್ರೋಕ್ತಿಯು ಅಲಂಕಾರ ವಿಚಿತ್ರ[೮೯] ಭಾವವೂ ಸಕಲಾಲಂಕಾರ ಸಾಮನ್ಯವೂ ಆಗಿರುವ ತತ್ವ, ಆದ್ದರಿಂದಲೇ ವಕ್ರೋಕ್ತಿಯನ್ನು ಸಾಮಾನ್ಯವಾದ ಅಲಂಕಾರದ ಅರ್ಥದಲ್ಲಿ ಪ್ರಯೋಗಿಸುತ್ತಾನೆಯೇ ಹೊರತು ಕೇವಲ ಉಪಮಾ ಮುಂತಾದ ಅಲಂಕಾರಗಳಿಗೆ ಅನ್ವಯಿಸುವಂತಲ್ಲ ಎಂಬುದು ಕುಂತಕನ ವಾದ ವಿಶ್ವನಾಥನು ವಕ್ರೋಕ್ತಿಯನ್ನು ಶ್ಲೇಷ ವಕ್ರೋಕ್ತಿ ಮತ್ತು ಕಾಕು ವಕ್ರೋಕ್ತಿ ಎಂದು ಎರಡು ಬಗೆಯಾಗಿ ಮಾಡಿ ವಕ್ರೋಕ್ತಿಯನ್ನು ಶಬ್ದಾಲಂಕಾರಗಳಲ್ಲೊಂದಾಗಿ ವಿವೇಚಿಸಿದ್ದಾನೆ.

### ೨. ಶ್ಲೇಷಾಲಂಕಾರ

ಶ್ಲೇಷವೆಂದರೆ ಏಕಕಾಲದಲ್ಲಿ ಅನೇಕ ಅರ್ಥಗಳನ್ನು ತಿಳಿಸುವ ಪದಗಳಿಂದ ಅಭಿಧಾವೃತ್ತಿಯ ಮೂಲಕ ಅನೇಕಾರ್ಥಗಳನ್ನು ಒಟ್ಟಿಗೆ ತಿಳಿಸುವುದೇ ಶ್ಲೇಷವೆನಿಸಿದೆ. ಅನೇಕಾರ್ಥ ಕೊಡುವ ಪದಗಳಿಂದ ರಚಿತವಾದ ಒಂದೇ ವಾಕ್ಯವು ತಾನು ಕೊಡಬಲ್ಲ ಅರ್ಥವಲ್ಲದೆ ಇನ್ನೊಂದರ್ಥಕ್ಕೂ ಸೂಚಕವಾಗುವುದೇ ಶ್ಲೇಷಾವೆಂಬ ಅಲಂಕಾರವಾಗಿದೆ. ಉದಾಹರಣೆಗೆ

**ಶರದಿಂದು ಸುಂದರರುಚಂ ಸುಕುಮಾರಂ ಸುರಭಿಪರಿಮಲಾಮನಿಶಮ್।**
**ಸಿದಧಾತಿ ನಾಲ್ಪಪುಣ್ಯಃ ಕಠೇ ನವಮಾಲಿಕಾಂ ಕಾಂತಮ್[೯೦]॥**

"ಶರಚ್ಚಂದ್ರನಂತೆ ಸುಂದರಳಾಗಿರುವ, ನವಮಾಲಿಕೆಯನ್ನು ಧರಿಸಿದ ಮತ್ತು ಸೌಕುಮಾರ್ಯ ಸೌರಭವುಳ್ಳ ಕಾಂತೆಯನ್ನು ಸ್ವಲ್ಪವೇ ಪುಣ್ಯವುಳ್ಳವನು ಆಲಂಗಿಸುವುದಿಲ್ಲ". ಈ ಒಂದು ವಾಕ್ಯದಲ್ಲಿ ಕಾಂತಾ, ನವಮಾಲಿಕ ಎಂಬ ಶಬ್ದಗಳು ಅನುಕ್ರಮಾವಾಗಿ 'ಮನೋಹರ', 'ನವಮಾಲಿಕಾ ಕುಸುಮ' ಎಂಬ ಅರ್ಥವನ್ನು ಕೊಡಬಲ್ಲವಾದ್ದರಿಂದ "ಮನೋಹರವಾದ ನವಮಾಲಿಕಾ ಪುಷ್ಪವನ್ನು ಸ್ವಲ್ಪ ಪುಣ್ಯವುಳ್ಳವನು ಧರಿಸಲಾರ" ಎಂಬುದು ವಾಕ್ಯದ ಅರ್ಥವಾಗುತ್ತದೆ. 'ಶರಚ್ಚಂದ್ರನಂತೆ ಮುಂತಾದ ಪದಗಳು ಎರಡೂ ಸಂದರ್ಭಗಳಲ್ಲೂ ವಿಶೇಷಣಗಳಾಗುತ್ತದೆ. ಆದ್ದರಿಂದ ಇದು ಶ್ಲೇಷಕ್ಕೆ ಉದಾಹರಣೆಯಾಗಿದೆ.

ಶ್ಲೇಷವು, ವರ್ಣಗಳು, ಪ್ರತ್ಯಯಗಳು, ಸ್ತ್ರೀಪುನ್ನಂಸಕಲಿಂಗಗಳು, ಧಾತು,

ಪ್ರಾತಿಪಾದಿಕ ಮೊದಲಾದ ಪ್ರಕೃತಿಗಳು, ಸುಪ್ತಿಙಂತಪದಗಳು, ವಿಭಕ್ತಿಗಳು, ಏಕದ್ವಿಬಹುವಚನಗಳು, ಭಾಷೆಗಳು ಇವು ಒಂದೆಡೆಗೆಸೇರಿ ಅನೇಕ ಅರ್ಥಗಳನ್ನು ತಿಳಿಸುವುದರಿಂದ ವರ್ಣಶ್ಲೇಷ, ಪ್ರತ್ಯಯಶ್ಲೇಷ, ಲಿಂಗಶ್ಲೇಷ, ಪ್ರಕೃತಿಶ್ಲೇಷ, ಪದಶ್ಲೇಷ, ವಿಭಕ್ತಿಶ್ಲೇಷ, ವಚನಶ್ಲೇಷ, ಭಾಷಾಶ್ಲೇಷ, ಎಂದು ಒಟ್ಟು ಎಂಟು ಬಗೆಯ ಶ್ಲೇಷಗಳನ್ನು ವಿಭಾಗಿಸಲಾಗಿದೆ.

**ವರ್ಣಶ್ಲೇಷ**

ಒಂದೇ ಶಬ್ದವು ಎರಡು ಅರ್ಥಗಳನ್ನು ತಿಳಿಸುವಂತಹ ವರ್ಣಗಳನ್ನು ಪ್ರಯೋಗಿಸುವುದೇ ವರ್ಣಶ್ಲೇಷವೆನಿಸಿದೆ. ಉದಾಹರಣೆಗೆ

**ಪ್ರತಿಕೂಲತಾಮುಪಗತೇ ಹಿ ವಿಧೌ ವಿಫಲತ್ವ ಮೇತಿ ಬಹುಸಾಧನತಾ ।**
**ಅವಲಂಬನಾಯ ದಿನಭರ್ತುರಭೂತ್ ನ ಪತಿಷ್ಯತಃ ಕರಸಹಸ್ರಮಪಿ**[೯೧] **॥**

"ಚಂದ್ರನು ವಿರೋಧಿಯಾಗಲು ಅಂದರೆ ವಿರುದ್ಧವಾದ ದಿಕ್ಕಿಗೆ ಹೋಗಲು ಅನೇಕ ಬಗೆಯ ಸಾಧನಗಳಿರುವುದೂ ಸಹ ನಿಜವಾಗಿಯೂ ವ್ಯರ್ಥವೇ ಆಗುತ್ತದೆ. ಮುಳುಗುವುದರಲ್ಲಿರುವ ಸೂರ್ಯನ ಸಾವಿರಕಿರಣಗಳನ್ನು [ಹಸ್ತಗಳನ್ನು] ತಡೆಯುವುದಕ್ಕೆ ಆಕಾಶದಲ್ಲಿ ಉಪಾಯವೇ ದೊರಕಲಿಲ". ಇಲ್ಲಿ 'ವಿಧೌ' ಎಂಬಲ್ಲಿ 'ವಿಧು', 'ವಿಧಿ' ಎಂಬ ಎರಡು ಶಬ್ದಗಳಿಗೂ ಸಪ್ತಮ್ಯೇಕ ವಚನದಲ್ಲಿ 'ಉ' ಕಾರ 'ಇ' ಕಾರಗಳೆರಡರ ಸ್ಥಾನದಲ್ಲಿ 'ಔ'ಕಾರಮನ ವಿಧಿಸಿರುವುದರಿಂದ ವಿಧೌ ಎಂಬಲ್ಲಿ ವಿಧು, ವಿಧಿ ಎಂಬ ಎರಡು ಅರ್ಥಗಳು ಸೇರಿವೆ. ಹೀಗೆ ಒಂದೇ ಶಬ್ದವು ಆ ಎರಡು ಅರ್ಥಗಳನ್ನು ತಿಳಿಸುತ್ತವೆ. ಅಂತಹ ವರ್ಣಗಳನ್ನು ಪ್ರಯೋಗಿಸುವುದರಲ್ಲಿ ವೈಚಿತ್ರ್ಯವಿರುವುದರಿಂದ ವರ್ಣಶ್ಲೇಷಾಲಂಕಾರವೆನಿಸಿದೆ.

**ಪ್ರತ್ಯಯ ಶ್ಲೇಷ**

**ಕಿರಣಾ ಹರಿಣಾಂಕಸ್ಯ ದಕ್ಷಿಣಶ್ಚ ಸಮೀರಣಃ ।**
**ಕಾಂತೋತ್ಸಂಗಜುಷಾಂ ನೂನಂ ಸರ್ವ ಏವ ಸುಧಾಕರಃ** [೯೨]**॥**

"ಚಂದ್ರನ ಕಿರಣಗಳು ದಕ್ಷಿಣದಿಕ್ಕಿನಿಂದ ಬರುವ ಗಾಳಿ ಇವೆಲ್ಲವೂ ಪ್ರೇಯಸಿಯ ಜೋತೆಯಲ್ಲಿ ಇರುವ ಯುವಕರಿಗೆ ಅಮೃತವನ್ನು ಸುರಿಸುತ್ತವೆ". ಇಲ್ಲಿ 'ಕ್ವಿಪ್' ಪ್ರತ್ಯಯ ಮತ್ತು 'ಕ' ಪ್ರತ್ಯಯ ಎವೆರೆಡರಿಂದಲೂ 'ಸುಧಾಕಿರಃ' ಎಂಬುದು ಸುಧಾಂಕಿರಂತಿ ಎಂದು ಕ್ವಿಪ್ ಪ್ರತ್ಯಯದಿಂದ ಪ್ರಥಮಾ ಬಹುವಚನದರೂಪವಾಗುತ್ತದೆ. ಇದನ್ನು ಕಿರಣಪದದೊಡನೆ ಅನ್ವಯಿಸಬಹುದು 'ಸಮೀರಣಃ' ಎಂಬುದರೊಡನೆ ಅನ್ವಯಿಸಲು ಕೃ ಧಾತುವಿಗೆ ಕ ಪ್ರತ್ಯಯವನ್ನು ಹಚ್ಚಿದರೆ 'ಸುಧಾಕಿರಃ' ಎಂದು ಪ್ರಥಮಾ ವಿಭಕ್ತಿಯಲ್ಲಿ ಏಕವಚನರೂಪವಾಗುತ್ತದೆ. ಹೀಗೆ ಇಲ್ಲಿ ಪ್ರತ್ಯಯಶ್ಲೇಷವಿದೆ.

### ಲಿಂಗಶ್ಲೇಷ

**ವಿಕಸನ್ನೇತ್ರನೀಲಾಬ್ಜೇ ತಥಾ ತನ್ವ್ಯಾಃ ಸ್ತನದ್ವಯೀ ।**
**ತವದತ್ತಾಂ ಸದಾಮೋದಂ ಲಸತ್ತರಲಹಾರಿಣೀ [೯೩]॥**

"ನೀಲೋತ್ಪಲಗಳಂತೆ ಪ್ರಕಾಶಿಸುತ್ತಿರುವ ಕೃಶಾಂಗಿಯ ಚಂಚಲವೂ ಸುಂದರವೂ ಆದ ಕಣ್ಣುಗಳು, ಪ್ರಕಾಶಮಾನವಾಗಿ ಅಲುಗಾಡುತ್ತಿರುವ ಕತ್ತಿನ ಸರವುಳ್ಳ ಸ್ತನಗಳು ನಿಮಗೆ ಯಾವಾಗಲೂ ಆನಂದವನ್ನು ಕೊಡುತ್ತಿರಲಿ". ಇಲ್ಲಿ ಲತ್ತರಂಗಹಾ–ರಿಣೀ ಎಂಬುದು 'ಲಸಂತೀ ತರಲೇ' ಎಂದು ಎರಡೆರಡು ಪದಗಳಿಗೆ ಕ್ರಮವಾಗಿ ಕರ್ಮಧಾರೆಯವನ್ನು ಮಾಡಿ ನಂತರ ನಪುಂಸಕ ಲಿಂಗದಲ್ಲಿ ಪ್ರಥಮಾವಿಭಕ್ತಿಯ ದ್ವಿವಚನದಲ್ಲಿ ರೂಪವಾಗಿದೆ. ಹೀಗೆ ಅದು 'ವಿಕಸನ್ನೇತ್ರ' 'ನೀಲಾಬ್ಜೇ' ಎಂಬುದಕ್ಕೆ ವಿಶೇಷಣವಾಗಿದೆ. ಹಾಗೆಯೇ ಅದು 'ಸ್ತನದ್ವಯೀ' ಎಂಬುದಕ್ಕೆ ವಿಶೇಷಣವಾಗಿರುವುದ–ರಿಂದ ಲಸನ್+ತರಲಃ+ಹಾರಃ ಅಸ್ಯಾಃ ಅಸ್ತಿ ಎಂದು ಸಮಾಸದಲ್ಲಿ ಸ್ತ್ರೀಲಿಂಗದ ಪ್ರಥ–ಮಾ ವಿಭಕ್ತಿಯ ಏಕವಚನದಲ್ಲಿ ರೂಪವಾಗಿದೆ. ಹೀಗೆ ನಪುಂಸಕ ಸ್ತ್ರೀಲಿಂಗಗಳೆರಡೂ ಇಲ್ಲಿ ಶ್ಲೇಷದಿಂದ ತೋರುವುದರಿಂದ ಲಿಂಗಶ್ಲೇಷವೆನಿಸಿದೆ.

### ಪ್ರಕೃತಿ ಶ್ಲೇಷ

**ಅಯಂ ಸರ್ವಾಣಿ ಶಾಸ್ತ್ರಾಣಿ ಹೃದಿ ಜ್ಞೇಷು ಚ ವಕ್ಷ್ಯತಿ ।**
**ಸಾಮರ್ಥ್ಯಕೃದಮಿತ್ರಾಣಾಂ ಮಿತ್ರಾಣಾಂ ಚ ನೃಪಾತ್ಮಜಃ[೯೪] ॥**

"ಈ ರಾಜಕುಮಾರರು ತನ್ನ ಹೃದಯದಲ್ಲೂ ಪಂಡಿತರ ಸಮಾಜದಲ್ಲೂ ಎಲ್ಲಾ ಶಾಸ್ತ್ರಗಳನ್ನು ಧರಿಸುವರು ಶತ್ರುಗಳಿಗೂ ಮಿತ್ರರಿಗೂ ಸಾಮರ್ಥ್ಯವನ್ನು ನಾಶಪಡಿಸುವನು ಮತ್ತು ಹೆಚ್ಚಿಸುವನು". ಇಲ್ಲಿ 'ವಕ್ಷ್ಯತಿ' ಎಂಬುದು 'ವಚ್ ವಹ್' ಎರಡು ಧಾತುಗಳಿಗೂ ರೂಪವಾಗುತ್ತದೆ. 'ಹೃದಿ' ಎಂಬುದರೊಡನೆ ಅನ್ವಯವಾಗಲು 'ವಹ್' ಧಾತುವಿಗೆ 'ಲೃಟ್' ಲಕಾರದ ರೂಪವು ಬೇಕಾಗಿದೆ. ಜ್ಞೇಷು ಎಂಬಲ್ಲಿ ಅನ್ವಯವಾಗಲು 'ವಚ್' ಧಾತನಿಗೆ ಲಕಾರದ ರೂಪವು ಬೇಕಾಗಿದೆ. 'ಅಮಿತ್ರಾಣಾಂ' ಎಂಬಲ್ಲಿ ಅನ್ವಯವಾಗಲು 'ಸಾಮರ್ಥ್ಯಂ ಕೃಂತತಿ' ನಾಶಪಡಿಸುತ್ತಾನೆ. 'ಕೃತ್' ಧಾತುವಿನ 'ಕ್ವಿಬಂತ' ರೂಪವನ್ನು ಇಟ್ಟುಕೊಳ್ಳಬೇಕು. 'ಮಿತ್ರಾಣಂ' ಎಂಬಲ್ಲಿ ಅನ್ವಯಿಸಲು 'ಸಾಮರ್ಥ್ಯಂ ಕರೋತಿ' ಎಂಬ ಅರ್ಥದಲ್ಲಿ ಕೃಧಾತುವಿಗೆ ಕ್ವಿಬಂತರೂಪವನ್ನು ಇಟ್ಟುಕೊಳ್ಳಬೇಕು. ಆದ್ದರಿಂದ ಇಲ್ಲಿ ಪದಕ್ಕಿಂತಲೂ ವಚ್ ವಹ್ ಎಂಬ ಪ್ರಕತಿಗಳಿಗೂ ಕೃ ಮತ್ತು ಕೃತ್ ಎಂಬ ಪ್ರಕೃತಿಗಳಿಗೂ ಶ್ಲೇಷವಿರುವುದರಿಂದ ಇದು ಪ್ರಕೃತಿ ಶ್ಲೇಷವೆನಿಸಿದೆ.

**ಪದಶ್ಲೇಷ**

ಪದಶ್ಲೇಷವೆಂದರೆ ಪದಗಳಿಗೂ, ವಿಭಕ್ತಿಗಳಿಗೂ ಸಮಾಸಗಳಿಗೂ ಲಕ್ಷಣವಿರುವ ಕಡೆ ಹೇಳುವುದನ್ನೇ ಪದಶ್ಲೇಷ ಎಂದು ಕರೆಯಲಾಗಿದೆ. 'ಪೃಥುಕಾರ್ತಸ್ವರಪಾತ್ರಂ' ಎಂಬಲ್ಲಿ ಪೃಥುರಾ ರ್ತಸ್ವರ ಎಂಬಲ್ಲಿ 'ಪೃಥು ಪೃಥಕ' ಎಂದು ಪದಗಳನ್ನು ವಿಭಾಗ ಮಾಡಿದರೆ ರಾಜನ ಪಕ್ಷದಲ್ಲಿ 'ಪೃಥೂನಿ ಕಾರ್ತಸ್ವರ ಪಾತ್ರಾಣಿ ಯಸ್ಮಿನ್' ಎಂದೂ, ದರಿದ್ರನ ಪಕ್ಷದಲ್ಲಿ 'ಪೃಥುಕಾನಾಂ ಅರ್ತಸ್ವರಸ್ಯ ಪಾತ್ರಂ' ಎಂದೂ ಸಮಾಸವಾಗುವುದ–ರಿಂದ ಪದಗಳಷ್ಟೇ ಅಲ್ಲದೆ ವಿಭಕ್ತಿ ಸಮಾಸಗಳಲ್ಲೂ ವೈಲಕ್ಷಣ್ಯವಿರುವುದರಿಂದ ಅದು ಪದಶ್ಲೇಷವಾಗಿದೆ.

**ವಿಭಕ್ತಿಶ್ಲೇಷ**

> **ಸರ್ವಸ್ವಂ ಹರ ಸರ್ವಸ್ಯ ತ್ವಂ ಭವಚ್ಛೇದತತ್ಪರಃ ।**
> **ನಯೋಪಕಾರಸಾಮುಖ್ಯಾಮಾಯಾಸಿ ತನುವರ್ತನಮ್**[೬೫] ॥

ವಿಭಕ್ತಿಶ್ಲೇಷವನ್ನು ಉದಾಹರಿಸಲಾಗಿದೆ. ಇಲ್ಲಿ ಭಕ್ತನು ಮಹೇಶ್ವರನಿಗೆ, ಕಳ್ಳನಿಗೆ ತನ್ನ ತಾಯಿಯು ಹೇಳುವ ಮಾತಿದು "ಎಲೈ ಹರನೇ, ನೀನು ಲೋಕದ ಜನರೆಲ್ಲ–ರಿಗೂ ಪ್ರಾಣ ಸ್ವರೂಪನು, ಭಕ್ತರೆಲ್ಲರ ಭವರೋಗವನ್ನು ನೀನು ಪರಿಹರಿಸುವೆ ಹಾಗೆಯೇ ನೀನು ನೀತಿಯ ಸದುಪದೇಶದಿಂದಲೂ ಅನುಗ್ರಹದಿಂದಲ್ಲೂ ಭಕ್ತರನ್ನು ಉದ್ಧರಿಸಲು ಸಿದ್ಧನಾಗಿರುವೆ. ಇದಕ್ಕಾಗಿಯೇ ಮೂರ್ತರೂಪದಿಂದ ದೇಹದಲ್ಲಿ ನೆಲೆಸಿರುವೆ". "ಎಲೈ ಮಗನೇ ನೀನು ಜನರಲ್ಲಿ ಹಣವೆಲ್ಲವನ್ನು ಅಪಹರಿಸು. ಆಗ ನಿನಗೆ ಯಾರಾದರೂ ಪ್ರತಿಬಂಧಕರಾದರೆ ಅವರನ್ನು ಕಡ್ಡಿಯಂತೆ ಕತ್ತರಿಸುವುದರಲ್ಲಿ ಆಸಕ್ತನಾಗಿರು. ಹಾಗೆಯೇ ಆಯಾಸಪಡುತ್ತಾ ಸಂಧಿಯ ಮೂಲಕ ಬೇರೆಯವರ ಮನೆಯನ್ನು ಪ್ರವೇಶಿಸಿ ಅವರ ಹಣವನ್ನು ಅಪಹರಿಸಲು ಅನುಕೂಲವಾಗುವಂತೆ ದೇಹವನ್ನು ಪಳಗಿಸಿಕೋ, ಬೇರೆಯವರ ಹಣವನ್ನು ಅಪಹರಿಸಲು ಗೋಡೆಯಲ್ಲಿ ರಂಧ್ರವನ್ನು ಕೊರೆದು ಅವರ ಮನೆಯಲ್ಲಿ ನಿನ್ನ ಶರೀರವು ಪ್ರವೇಶಿಸುವಂತೆ ಮಾಡು". ಇಲ್ಲಿ ಮೊದಲನೆಯ ಅರ್ಥದ ಪ್ರಕಾರ 'ಹರ' ಎಂಬುದು ಶಿವನನ್ನು ಸಂಬೋಧಿಸುವ ಪದವಾದರಿಂದ 'ಸುಬಂತ'ವೆನಿಸಿದೆ. ಎರಡನೆ ಅರ್ಥದ ಪ್ರಕಾರ ಅದು 'ಹೃ'ಧಾತುವಿಗೆ ಲೋಟ್ ಪರಸ್ಮೈ ಪದದಲ್ಲಿ ತ್ರಿಜಪ್ರತ್ಯಯವನ್ನು ಹಚ್ಚಿ ಆಗಿರುವ ಕ್ರಿಯಾಪದವೆನಿಸಿದೆ. ಹೀಗೆಯೆ 'ಭಾವ' ಎಂಬುದು ಶಿವನ ಪಕ್ಷದಲ್ಲಿ ಸಂಸಾರ ಎಂಬ ಅರ್ಥವನ್ನು ಕೊಡುವ 'ಸುಬಂತ' ಪದವೆನಿಸಿದೆ. ಕಳ್ಳನ ಪಕ್ಷದಲ್ಲಿ ಭೂ ಧಾತುವಿನ ಲೋಟ್ ಲಕಾರದ ತಿಜಂತರೂಪವೆನಿಸಿದೆ. ಈ ವಿಭಕ್ತಿ ಶ್ಲೇಷವನ್ನು ಪ್ರತ್ಯಯ ಶ್ಲೇಷದಲ್ಲಿಯೇ ಸೇರಿಸಬಹುದಾದ್ದರಿಂದ ಸುಪ್ತಿಜಪ್ರತ್ಯಯಗಳಲ್ಲಿ ತೋರುವ ಶ್ಲೇಷವನ್ನು ವಿಭಕ್ತಿ ಶ್ಲೇಷವೆಂದು ಪ್ರತ್ಯೇಕವಾಗಿ ಏಕೆ ಅಂಗೀಕರಿಸಬೇಕು ಎಂದು ಆಕ್ಷೇಪಿಸಿದರೆ ಇದನ್ನು

ಪ್ರತ್ಯಯ ಶ್ಲೇಷದಲ್ಲಿ ಸೇರಿಸಬಹುದಾದರೂ ಬೇರೆ ಪ್ರತ್ಯಯಗಳಿಗೆ ಅನ್ವಹಿಸದಂತೆ ಸುಬಂತ ತಿಜಂತ ಪ್ರತ್ಯಯಗಳಿಗೆ ಮಾತ್ರ ಅನ್ವಯಿಸುವುದರಿಂದ ವಿಭಕ್ತಿ ಪ್ರತ್ಯಯವನ್ನು ಪ್ರತ್ಯೇಕವಾಗಿ ಹೇಳಲಾಗಿದೆ.

**ವಚನಶ್ಲೇಷ**

> **ಮಹದೇ ಸುರಸಂಧಮ್ಮೇ ತಮವ ಸಮಾಸಂಗಮಾಗ ಮಾಹರಣೇ**
> **ಹರ ಬಹುಸರಣಂ ತಂ ಚಿತ್ತ ಮೋಹ ಮವಸರ ಉಮೇಸಹಸಾ** [೯೬]

ಈ ಪದ್ಯದಲ್ಲಿ ಪಾರ್ವತಿಗೆ ಭಕ್ತರಿಬ್ಬರು ಹೇಳುವ ಈ ಮಾತಿನಲ್ಲಿ ವಚನ ಶ್ಲೇಷವನ್ನು ತಿಳಿಯಬಹುದಾಗಿದೆ. "ಸಂತೋಷವನ್ನು ಉಂಟುಮಾಡುವ ಎಲೈ ಪಾರ್ವತಿಯೇ, ದೇವತೆಗಳಿಗೂ ಕರ್ತವ್ಯವೆಂಬ ಪ್ರತಿಜ್ಞೆಯನ್ನು ಹುಟ್ಟಿಸುತ್ತಾ, ಶಾಸ್ತ್ರೀಯ ಜ್ಞಾನವನ್ನು ಸಂಪಾದಿಸಲು ನನಗೆ ಮೊದಲು ಹುಟ್ಟಿದ ಆಸಕ್ತಿಯನ್ನು ಬಹುಕಾಲದವರೆಗೂ ರಕ್ಷಿಸು. ಆ ಕಾಲದಲ್ಲಿ ಬೇಗನೆ ವ್ಯಾಪಿಸುವಂತಹ ನನ್ನ ಮನಸ್ಸಿನ ವ್ಯಾಮೋಹವನ್ನು ಬೇಗನೆ ತೊಲಗಿಸು".

**ಬಾಷಾಶ್ಲೇಷ:**

> **ಮಮ ದೇಹೇ ರಸಂ ಧರ್ಮೋತಮೋವಶಾಮಾಶಾಂ ಗಮಾಗಮಾತ್ ಹರ ನಃ ।**
> **ಹರವಧು ಶರಣಂ ತಂ ಚಿತ್ತ ಮೋಹಂ ಅಪಸರತು ಮೇ ಸಹಸಾ**[೯೭] ॥

"ಎಲೈ ಶಿವನ ಶರೀರವೆನಿಸಿದ ಭವಾನಿಯೇ, ಧರ್ಮದಲ್ಲಿ ನನಗೆ ಅನುರಾಗವನ್ನು ಹುಟ್ಟಿಸು. ಕಂಡು ಅಡಗುವ ಈ ಜಗತ್ತಿನಲ್ಲಿ ನನಗೆ ತಮೋಗುಣದಿಂದ ಉಂಟಾಗಿರುವ ವಿಷಯ ಸುಖಾಭಿಲಾಷವನ್ನು ತೊಲಗಿಸು. ನೀನು ನನ್ನ ರಕ್ಷಕಳಾಗಿದ್ದು ನನ್ನಲ್ಲಿ ಬಹುಕಾಲದಿಂದ ಹುಟ್ಟಿರುವ ಚಿತ್ತ ಮೋಹವನ್ನು ಬೇಗನೆ ಪರಿಹರಿಸು". ಹೀಗೆ ಸಂಸ್ಕೃತದಲ್ಲೂ ಮಹಾರಾಷ್ಟ್ರೀಯ ಭಾಷೆಯಲ್ಲೂ ಹೊಂದಿಕೆ ಇರುವುದರಿಂದ ಈ ಪದ್ಯವು ಭಾಷಾಶ್ಲೇಷಕ್ಕೆ ಉದಾಹರಣೆಯಾಗಿದೆ.

ಮೇಲೆ ವಿವರಿಸಿರುವ ಎಂಟು ಬಗೆಯ ಶ್ಲೇಷದೊಂದಿಗೆ ಸಭಂಗ, ಅಭಂಗ ಉಭಯಾತ್ಮಕ ಶ್ಲೇಷವೆಂದು, ಮೂರು ಭೇದಗಳನ್ನು ತಿಳಿಸಿ ಒಟ್ಟು ಹದಿನಾಲ್ಕು ಬಗೆಯ ಶ್ಲೇಷಭೇದಗಳನ್ನು [೯೮]ವಿಶ್ವನಾಥನು ವಿವೇಚಿಸಿದ್ದಾನೆ.

**೩. ಚಿತ್ರಾಲಂಕಾರ**

ಚಿತ್ರಾಲಂಕಾರವೆಂದರೆ 'ಅ'ಕಾರ ಮೊದಲಾದ ವರ್ಣಗಳನ್ನು ಪತ್ರದಲ್ಲಿ ಬರೆದಾಗ ಪದ್ಮ ಮೊದಲಾದ 'ಆ' ಕಾರಗಳಾಗಿ ಪರಿಣಮಿಸಿದರೆ ಅದು ಚಿತ್ರವೆಂಬ ಅಲಂಕಾರವೆನಿಸಿದೆ. ಇಲ್ಲಿ ಆದಿಪದದಿಂದ ಖಡ್ಗ, ಮುರಜ, ಚಕ್ರ, ಗೋಮೂತ್ರಿಕ

ಮೊದಲಾದ ಆಕಾರಗಳನ್ನು ದೊರಕಿಸುವ ವರ್ಣವಿನ್ಯಾಸವನ್ನ ಚಿತ್ರಾಲಂಕಾರವೆನಿಸಿದರೆ ಅದು ಶಬ್ದವೆನಿಸದೆ ಇರುವುದರಿಂದ ಹೇಗೆ ಶಬ್ದಾಲಂಕಾರವಾಗುತ್ತದೆ ಎಂದರೆ, ಅದು ವರ್ಣಗಳಿಂದ ಪದ್ಮ ಮೊದಲಾದ ಆಕಾರ ವಿಶೇಷಗಳನ್ನು ಕಾಗದದ ಮೇಲೆ ಬರೆದದ್ದರಿಂದ ಚಮತ್ಕಾರ ವುಂಟಾಗುವುದರಿಂದ ಆ ವರ್ಣಗಳಿಗೂ ಅಂತಹ ವರ್ಣಗಳು ಶಬ್ದರೂಪಕವಾಗಿಯೇ ಇರುವುದರಿಂದ 'ಅ'ಕಾರಗಳಿಗೆ ಅಭೇದವನ್ನು ಕಲ್ಪಿಸಿ 'ಆ' ಆಕಾರಗಳನ್ನು ಶಬ್ದಾಲಂಕಾರ ಗಳೆಂದೇ ತಿಳಿಸಲಾಗಿದೆ. ಆ ವರ್ಣಗಳೇ ಕವಿಯ ಮೂಲಕ ಕೇಳಿ ಬಂದು ಸಹೃದಯರಿಗೆ ಚಮತ್ಕಾರವನ್ನು ಹುಟ್ಟಿಸುವುದರಿಂದ ಚಿತ್ರಾಲಂಕಾರವನ್ನು ಶಬ್ದಾಲಂಕಾರಗಳೆನ್ನಲಾಗಿದೆ. ಹೀಗೆ ಚಿತ್ರವೆನಿಸಿದ್ದರೂ ವರ್ಣಗಳ ಉಚ್ಚರಣ ಕಾಲದಲ್ಲಿ ಶಬ್ದರೂಪವಾಗಿಯೇ ಪ್ರಕಟವಾಗುವುದರಿಂದ ಕಾಗದದ ಮೇಲೆ ಬರೆದಿರುವ ವರ್ಣಗಳಿಗೆ, ಪದ್ಮಾದಿಬಂಧಗಳಿಗೆ ಪರಸ್ಪರವಾಗಿ, ಅಭೇದವಿದೆ ಎಂದು ತಿಳಿಸುವುದರಿಂದ ಈ ಚಿತ್ರಾಲಂಕಾರಗಳ ಮಧ್ಯದಲ್ಲಿ ಪದ್ಮಬಂಧವೆಂಬ ವರ್ಣವಿನ್ಯಾಸವನ್ನು ಇಲ್ಲಿ ಉದಾಹರಿಸಲಾಗಿದೆ.

**ಮಾರಮಾ ಸುಷಮಾ ಚಾರುರುಚಾ ಮಾರವಧೂತ್ತಮಾ ।**
**ಮೊರ್ತ್ತದೂರ್ತತಮಾವಾಸಾ ಸಾ ವಾಮಾ ಮೇಽಸ್ತುಮಾರಮಾ[೯೯] ॥**

"ಮನ್ಮಥನ ತಾಯಿಯೂ, ಸುಂದರಿಯೂ ಮನೋಹರವಾದ ರತಿಗಿಂತಲೂ ಉತ್ಕೃಷ್ಟಳೂ ಆಗಿ ಆ ಲಕ್ಷ್ಮಿದೇವಿಯು ನನಗೆ ಯಾವಾಗಲೂ ವಿರುದ್ಧವೆನಿಸದೆ ಅನುಕೂಲ ವಾಗಿರಲಿ" ಇದು ಎಂಟು ದಳಗಳಿಂದ ಆಗಿರುವ ಪದ್ಮವೆಂಬ ವರ್ಣವಿನ್ಯಾಸವೆನಿಸಿದೆ. ಇದನ್ನು ಬರೆಯುವ ಕ್ರಮ ಹೀಗಿದೆ. ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ದಿಕ್ಕುಗಳ ಪದಗಳಲ್ಲಿ ಹೊರಗೆ ಒಳಗೆ ಪ್ರವೇಶಿಸಲಿಕ್ಕೆ ಅನುಕೂಲವಾಗುವಂತೆ ಶ್ಲಿಷ್ಟವರ್ಣವನ್ನು ಎರಡುವೇಳೆ ಪ್ರಯೋಗಿಸಬೇಕು. ಹಾಗೆಯೇ ಆಗ್ನೇಯ, ನೈಋತ್ಯ, ವಾಯುವ್ಯ, ಈಶಾನ್ಯಗಳೆಂಬ ನಾಲ್ಕು ದಿಕ್ಕುಗಳ ವರ್ಣಗಳಲ್ಲಿ ಕೆಲವು ಕಡೆ ಪ್ರವೇಶಿಸಿ ಕೆಲವು ಕಡೆ ಹೊರಗೆ ಬರುವಂತೆ ಅಶ್ಲೀಷ್ಟ ವರ್ಣಗಳನ್ನ ಪ್ರಯೋಗಿಸಬೇಕು. ಹಾಗೇ ಮಧ್ಯದ ಅಕ್ಷರವೂ ಅನೇಕಸಾರಿ ಹೇಳಬೇಕಾದ್ದರಿಂದ ಶ್ಲಿಷ್ಟವೇ ಆಗಿರಬೇಕು. ಹೀಗೆ ಖಡ್ಗಬಂಧ ಮೊದಲಾದವನ್ನು ಪ್ರಯೋಗಿಸಬಹುದು. ಆದರೆ, ಇವು ಕಾವ್ಯದಲ್ಲಿ ಕಠಿಣವೆನಿಸಿ ನೀರಸವಾದ್ದರಿಂದ ಇಲ್ಲಿ ಹೇಳಲಾಗಿಲ್ಲ.[೧೦೦]

### ೭. ಪ್ರಹೇಳಿಕೆ

ಪ್ರಹೇಳಿಕೆ ಎಂದರೆ ಯಾವುದೋ ಒಂದು ಅಭಿಪ್ರಾಯವನ್ನು ಮುಚ್ಚಲಿಕ್ಕಾಗಿ ಹೇಳುವ ಮಾತನ್ನ ಪ್ರಹೇಳಿಕೆ ಎಂದು ಕರೆಯಲಾಗಿದೆ. ಪ್ರಹೇಳಿಕೆಯು ಕೇವಲ ವಾಗ್ವೈಚಿತ್ರ್ಯವೆನಿಸಿದ್ದರಿಂದ ಇದರಲ್ಲಿ ಚ್ಯುತಾಕ್ಷರ, ದತ್ತಾಕ್ಷರ, ಚ್ಯುತದತ್ತಾಕ್ಷರ ಎಂದು ಮೂರು ಬಗೆಗಳಿವೆ. ಉದಾಹರಣೆಗೆ.

**ಕೂಜಂಕಿ ಕೋಕಿಲಾಃ ಸಾಲೇ ಯೌವನೇ ಫುಲ್ಲಮಂಬುಜಮ್ ।**
**ಕಿಂ ಕರೋತು ಕುರುಗಾಕ್ಷೀ ವಿದನೇನ ನಿಪೀಡಿತಾ**[೧೦೧] **॥**

"ಕೋಗಿಲೆಗಳು ರಸಾಲವೃಕ್ಷದಲ್ಲಿ ಅವ್ಯಕ್ತವಾಗಿ ಶಬ್ದ ಮಾಡುತ್ತಿವೆ. ಯೌವನದಲ್ಲಿ [ನೀರಿನಲ್ಲಿ] ಕಮಲವು ವಿಕಸಿತವಾಗಿ ಅರಳಿದೆ. ಕಾಮಬಾಧೆಯಿಂದ ಹಿಂಸೆಗೆ ಗು- ರಿಯಾಗಿರುವ ಪ್ರೇಯಸಿಯು ಪತಿವಿರಹದಿಂದ ಈಗ ಏನು ಮಾಡಬೇಕು ಹೇಳು". ಈ ಪದ್ಯವು ಸಖಿಗೆ ಮತ್ತೊಬ್ಬ ಸಖಿಯು ಹೇಳುವ ಮಾತಿದು. ಇಲ್ಲಿ 'ರಸಾಲೇ' ಎಂದು ಹೇಳಬೇಕಾಗಿರುವಾಗ 'ಸಾಲೆ' ಎಂದು ಹೇಳಿದ್ದರಿಂದ 'ರ' ಎಂಬುದನ್ನು ಬಿಡಲಾಗಿದೆ. ಇದು 'ಚ್ಯುತಾಕ್ಷರ'ವೆನಿಸಿದೆ. 'ಯೌವನ' ಎಂಬ ಅರ್ಥದಲ್ಲಿ 'ವನೇ' ಎಂದು ಹೇಳಿದ್ದ- ರಿಂದ 'ಯೌ' ಎಂಬುದು ಬಿಟ್ಟು ಹೋಗಿದೆ. ಇಲ್ಲಿ 'ಯೌ' ಎಂಬುದನ್ನು ಸೇರಿಸಬೇಕು. ಇದು 'ದತ್ತಾಕ್ಷರ'ವೆನಿಸಿದೆ. 'ವದನೇನ' ಎಂಬಲ್ಲಿ 'ಮದನೇನ' ಎಂಬ ಅರ್ಥವು ತೋರಬೇಕಾದ್ದರಿಂದ 'ಮ' ಎಂಬುದನ್ನು ಬಿಟ್ಟು 'ವ' ಎಂಬುದನ್ನು ಕೊಡಲಾಗಿದೆ. ಇದು 'ಚ್ಯುತದತ್ತಾಕ್ಷರ'ವೆನಿಸಿದೆ. ಮೂಲದಲ್ಲಿ ಆದಿಪದವು ಕ್ರಿಯಾಗುಪ್ತಿ, ಕಾರಕಗುಪ್ತಿ ಮೊದಲಾದವನ್ನು ತಿಳಿಸುತ್ತದೆ. ಕ್ರಿಯಾಪದವನ್ನು ತಿಳಿಸದೇ ಇರುವುದಕ್ಕೆ ಉದಾಹರಣೆ.

**ಪಾಂಡವಾನಾಂ ಸಭಾಮಧ್ಯೇ ದುರ್ಯೋಧನ ಉಪಾಗತಃ ।**
**ತಸ್ಮೈ ಗಾಂ ಚ ಹಿರಣ್ಯಂ ಚ ಸರ್ವಾಣ್ಯಾಭರಣಾನಿಚ**[೧೦೨] **॥**

"ರಾಜಸೂಯಯಜ್ಞವು ಮುಗಿಯುವಾಗ ಮಾಡಿದ ದಾನವನ್ನು ಇಲ್ಲಿ ತಿಳಿಸಲಾಗಿದೆ. "ಪಾಂಡವರ ಸಭೆಯ ನಡುವೆ ಯಾವ ದರಿದ್ರನು ಬಂದನೋ ಅವನಿಗೆ ಗೋಹಿರಣ್ಯಗಳನ್ನೂ, ಎಲ್ಲಾ ಒಡವೆಗಳನ್ನೂ ದಾನವಾಗಿ ಕೊಡಲಿಕ್ಕಾಗಿ ನೇಮಿತರಾಗಿದ್ದ ಕರ್ಣಾದಿಗಳು ಕೊಟ್ಟರು". ಇಲ್ಲಿ 'ದುರ್ಯೋಧನಃ' ಎಂಬಲ್ಲಿ 'ಅದುಃ ಯೋಧನಃ' ಎಂಬುದು ಅರ್ಥವಾಗುತ್ತದೆ. ಅಲ್ಲಿ 'ಅದುಃ' ಎಂಬ ಕ್ರಿಯೆಯು ಗೋಪ್ಯವಾಗಿದ್ದು 'ದುರ್ಯೋಧನ' ಎಂಬ ಪದವು ಧೃತರಾಷ್ಟ್ರನ ಮಗನೆಂಬ ಅರ್ಥವನ್ನೇ ಸಹಜವಾಗಿ ತಿಳಿಸುವುದರಿಂದ ಕ್ರಿಯೆ ಇಲ್ಲಿ ಗೋಪ್ಯವೆನಿಸಿದೆ. ಇಲ್ಲಿಯೇ 'ಉಪಗತಃ' ಎಂಬುದಕ್ಕೆ ಅನ್ವಯಿಸಲು 'ಅಧನಃ' ಎಂಬ ಕರ್ತೃಕಾರಕವು ಗೋಪ್ಯವೆನಿಸಿದೆ.

ಪ್ರಹೇಳಿಕೆ[೧೦೩]ಯನ್ನು ಒಂದು ಶಬ್ದಾಲಂಕಾರವೆಂದು ವಿಶ್ವನಾಥನು ಉದಾಹರಿಸಿ ಹೇಳಿದ್ದಾನೆ. ಆದರೆ ಇದು ರಸಕ್ಕೆ ವಿರೋಧಿಯಾಗಿದ್ದು ರಸಾಸ್ವಾದಕ್ಕೆ ವಿಳಂಬವನ್ನುಂಟು ಮಾಡುವುದರಿಂದ ಇದು ಅಲಂಕಾರವೆನಿಸಲಾರದೆಂದು ಕೆಲವು ಅಲಂಕಾರಿಕರ ಅಭಿಪ್ರಾಯವಾಗಿದೆ. ವಿಶ್ವನಾಥನು ಇದು ವಾಗ್ವೈಚಿತ್ರ್ಯವೆನಿಸಿದ್ದರಿಂದ ಇದರಲ್ಲಿ ಮೂರು ಬಗೆಯಾಗಿ ಮಾಡಿ ಉದಾಹರಣೆ ಸಮೇತವಾಗಿ ವಿವೇಚಿಸಿದ್ದಾನೆ. ಇಲ್ಲಿಗೆ ವಿಶ್ವನಾಥನು ಹೇಳಿರುವ ಅನುಪ್ರಾಸ, ಯಮಕ, ಭಾಷಸಮ, ಶ್ಲೇಷಾ, ಚಿತ್ರ, ಪ್ರಹೇಳಿಕೆ ಎಂಬ ಆರು

ಶಬ್ದಾಲಂಕಾರಗಳನ್ನು ವಿವೇಚಿಸಿ ಮುಂದೆ ಅರ್ಥಾಲಂಕಾರಗಳಲ್ಲಿ ಪ್ರಮುಖವಾದ ಉಪಮಾ ಅಲಂಕಾರವನ್ನು ವಿವೇಚಿಸಲಾಗಿದೆ.

**ಅರ್ಥಾಲಂಕಾರಗಳು**

ಉಪಮೇಯು ಹಲವಾರು ಅಲಂಕಾರಗಳ ತಳಹದಿಯಾಗಿರುವುದರಿಂದ ಅರ್ಥಾಲಂಕಾರಗಳಲ್ಲಿ ಉಪಮೆಗೆ ಪ್ರಥಮ ಸ್ಥಾನವನ್ನು ಕಲ್ಪಿಸಲಾಗಿದೆ. ರುಯ್ಯಕನ ಮಾತಿನಲ್ಲಿ ಹೇಳುವುದಾದರೆ ತನ್ನಲ್ಲಿ ಹಲವು ತೆರನಾದ ವೈಚಿತ್ರ್ಯದಿಂದಾಗಿ ಉಪಮೆ ಅನೇಕ ಅಲಂಕಾರಗಳಿಗೆ ಬೀಜರೂಪವಾಗಿರುವುದರಿಂದ ಉಪಮೆಗೆ ಅರ್ಥಾಲಂಕಾರ ಗಳನ್ನು ವಿವರಿಸುವಲ್ಲಿ ಅಗ್ರಸ್ಥಾನವಾಗಿದೆ.

ಉಪಮೆಯದಲ್ಲಿ ವರ್ಣವಿಷಯವಾದ ಉಪಮೇಯಕೇನೆ ಪ್ರಾಧಾನ್ಯ ಉಪಮೆಯಿಂದ ನಾವು ರೂಪಕದತ್ತ ಸಾಗಿದಾಗ ಉಪಮಾನಕ್ಕೆ ಪ್ರಾಧಾನ್ಯ. ಉಪಮೆಯು ಉಪಮೇಯ ಪ್ರಧಾನವಾದರೆ, ರೂಪಕವು ಉಪಮಾನ ಪ್ರಾಧಾನವಾಗಿದೆ. ಮುಖ ಮತ್ತು ಚಂದ್ರಗಳಲ್ಲಿನ ಸಾಮ್ಯವನ್ನು ಬೇರೆ ಬೇರೆ ವಿಧವಾಗಿ ವರ್ಣಿಸಲು ಸಾಧ್ಯವಿದೆ. ಈ ಭಿನ್ನ ಪ್ರಕಾರಗಳಿಂದಾಗಿ ಬೇರೆ ಬೇರೆ ಅಲಂಕಾರಗಳು ಹುಟ್ಟಿ ಕೊಳ್ಳುವವು. 'ಮುಖಂ ಚಂದ್ರ ಇವ ರಮ್ಯ' ಎಂದರೆ ಉಪಮೆ, 'ಮುಖಂ ಚಂದ್ರ ಇವ ಚಂದ್ರೋ ಮುಖಮಿವ' ಎಂದರೆ ಉಪಮೇಯೋಪಮೆ, 'ಮುಖಂ ಮುಖಮಿವ' ಎಂಬುದು ಅನನ್ವಯ, 'ಮುಖಮೇವ ಚಂದ್ರಃ' ಎಂಬುದು ರೂಪಕ, ಮುಖವನ್ನು ಕಂಡು ಬರಿ 'ಚಂದ್ರಃ' ಎಂದರೆ ಅದು ಅತಿಶಯೋಕ್ತಿ, 'ಮುಖಂ ಚಂದ್ರ ಮಾನ್ಯ' ಎಂಬುದು ಉತ್ಪ್ರೇಕ್ಷೆ, 'ಕಿಮಿದಂ ಮುಖಂ ಉತಾಹೋ ಚಂದ್ರಃ' ಎಂಬುದು ಸಸಂದೇಹ, 'ನಿಶ್ಕಲಂಕಂ ಮುಖಂ ಚಂದ್ರಾದತಿರಿಚ್ಯತೇ' ಎಂದರೆ ಅದು ವ್ಯತಿರೇಕ 'ನೇದಂ ಮುಖಂ ಕಿತು ಚಂದ್ರಃ' ಎಂಬುದು ಅಪಹ್ನುತಿ 'ಮುಖಮಿವ ಚಂದ್ರಃ' ಪ್ರತೀಪ..... ಇತ್ಯಾದಿ ಉಪಮೆಯಿಂದ ಮೊದಲುಗೊಂಡ ಸಾದೃಶ್ಯವು ಮುಂದುವರೆಯುತ್ತದೆ. ಹೀಗೆ ಇಲ್ಲಿ ವರ್ಣಿಸುತ್ತಿರುವುದು ಮುಖವನ್ನು ಎಂಬ ಅರಿವು ಇದ್ದರೂ ಕೊನೆಗೆ 'ಚಂದ್ರ ಇತಿ ಚಕೋರಃ ತ್ವಾಮುಖಮನುಧಾವಂತಿ' ಎಂಬ ಭ್ರಾಂತಿಮಾನ್ ಅಲಂಕಾರದಲ್ಲಿ ಮುಖದ ಅರಿವನ್ನು ಕಳೆದುಕೊಳ್ಳುತ್ತೇವೆ.

ಮೇಲಿನ ವಿವೇಚನೆಯಿಂದ ಉಪಮೆ ಹೇಗೆ ರೂಪಕ ಮೊದಲಾದ ಹಲವಾರು ಅಲಂಕಾರಗಳ ತಳಹದಿಯಾಗಿದೆಯೆಂಬುದು ತಿಳಿದು ಬರುತ್ತದೆ. ಅಲಂಕಾರಿಕನಾದ ಅಪ್ಪಯದೀಕ್ಷಿತನು "ಜನಮನಕ್ಕೆ ರಂಜನೆಯನ್ನುಂಟುಮಾಡುವ ಹಲವು ಚಿತ್ರವಿಚಿತ್ರ ಭೂಮಿಕೆಗಳನ್ನು ವಹಿಸಿ ಕಾವ್ಯರಂಗದಲ್ಲಿ ನರ್ತಿಸುವ ನಟಿಯೆಂದು ಉಪಮೆಯನ್ನು ಬಣ್ಣಿಸಿದ್ದಾನೆ"[೧೦೪].

## ೧. ಉಪಮಾಲಂಕಾರ

ಉಪಮಾ ಎಂದರೆ ಒಂದೇ ವಾಕ್ಯದಲ್ಲಿ ಉಪಮಾನ ಉಪಮೇಯವೆನಿಸಿದ ಎರಡು ವಸ್ತುಗಳಿಗೆ ಪರಸ್ಪರ ಸಾಧರ್ಮ್ಯವನ್ನು 'ಇವ' ಮೊದಲಾದ ಶಬ್ದಗಳಿಂದಲೂ, ಕ್ಯಚ ಮೊದಲಾದ ಪ್ರತ್ಯಯಗಳಿಂದಲೂ, ಉಪಮಿತಾದಿಸಮಸಗಳಿಂದಲೂ ಎಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆಯೋ ಅಲ್ಲಿ ತೋರುವ ಸಾದೃಶ್ಯವೇ ಉಪಮಾಲಂಕಾರವಾಗಿದೆ. ಒಂದು ವಸ್ತುವಿನ ಸ್ವರೂಪವನ್ನು ಸ್ಪಷ್ಟಪಡಿಸಲು ಅದಕ್ಕೆ ಸಮಾನವಾದ ಬೇರೆ ಒಂದು ವಸ್ತುವಿನ ಪ್ರತಿಪಾದನೆಯೂ ಇದ್ದರೆ ಅದು ಹೋಲಿಕೆಯಾಗುತ್ತದೆ. ಪ್ರಸ್ತುತವಸ್ತು, ಅಂದರೆ ಹೋಲಿಸಲ್ಪಡುವುದು ಉಪಮೇಯ ಹೋಲಿಸಲು ಆರಿಸಿಕೊಂಡಿರುವ ಬೇರೆ ವಸ್ತು ಉಪಮಾನ. ಉಪಮಾನ ಉಪಮೇಯಗಳಿಗೆ ಸಾಧಾರಣವು, ಅದ್ವಿತೀಯವು ಆದ ಒಂದು ಗುಣವು ಯಾವ ಪ್ರಕಾರದಲ್ಲಿ ಉಪಮಾನದಲ್ಲಿ ಸಿದ್ಧವಾಗಿದೆಯೋ ಆ ಪ್ರಕಾರದಲ್ಲೇ ಉಪಮೇಯದಲ್ಲೂ ಸಾಧ್ಯವಾಗುತ್ತದೆ. ಅದನ್ನೇ ಉಪಮಾಲಂಕಾರ ಎಂದು ಕರೆಯಲಾಗಿದೆ. ಉದಾಹರಣೆಗೆ

**ಕಮಲಮಿವ ಚಾರುವದನಂ ಮೃಣಾಲಮಿವ ಕೋಮಲಂ ಭುಜಯುಗಲಮ್ ।**
**ಲಿಲಿಮಾಲೇವ ಸುನೀಲಾತವೈವ ಮದಿರೇಕ್ಷಣೇ ಕಬರೀ**[೧೦೫] **॥**

"ಕಮಲದಂತೆ ಸುಂದರ ಮುಖ, ಭುಜಗಳು ಮೃಣಲದಂತೆ ಮದಿರೇಕ್ಷಣೇ ನಿನ್ನ ಕೇಶಪಾಶವು ಅಲಿಮಾಲೆಯಂತೆ ನೀಲವರ್ಣವುಳ್ಳದ್ದು". ಇಲ್ಲಿ ಮುಖಕ್ಕೂ ಕಮಲಕ್ಕೂ ಸಮಾನವಾದ ಚಾರುತ್ವಗುಣವು ಕಮಲದಲ್ಲಿ ಸಿದ್ದವಾಗಿರುವಂತೆ ಮುಖದಲ್ಲಿಯೂ ಇದೆಯೆಂದು ಹೇಳುವುದೇ ಈ ಹೋಲಿಕೆಯ ಕ್ರಮ. 'ಇವ' ಎಂಬುದು ಈ ಪದ್ಯದಲ್ಲಿ ಹೋಲಿಕೆಯ ಪದವಾಗಿದೆ.

ಉಪಮಾನ ಮತ್ತು ಉಪಮೇಯವೆನಿಸಿದ ಪದಾರ್ಥಗಳೆರಡಕ್ಕೂ ಸಾದೃಶ್ಯವನ್ನು ಒದಗಿಸುವ ಸಾಧಾರಣಧರ್ಮವು ಮನೋಹರತ್ವ ಮೊದಲಾದ ಗುಣ ಅಥವಾ ಪ್ರಕಾಶಿಸುತ್ತಿದೆ ಎಂಬ ಕ್ರಿಯೆಯ ರೂಪದಲ್ಲಿ ಇರುವುದು. 'ಕಮಲಮಿವ ಮುಖಂ ಮನೋಜ್ಞಂ ಎಂಬಲ್ಲಿ ತಿಳಿಸಿರುವ ಗುಣವೂ, 'ಮುಖಂ ಚಂದ್ರ ಇವ ಅಭಾತಿ' ಎಂಬಲ್ಲಿ 'ಅಭಾತಿ' ಎಂಬ ಕ್ರಿಯೆಯೂ ಸಾಧಾರಣ ಧರ್ಮವೆನಿಸಿದೆ. 'ಸಕಲಕಲಂ ಪುರಮೇತ ಜ್ಞಾತು ಸಂಪ್ರತಿ ಸುಧಾಂಶುಬಿಂಬಮಿವ' ಎಂಬಲ್ಲಿ 'ಸಕಲಕಲಂ' ಎಂದು ಒಂದೇ ಬಗೆಯ ಶಬ್ದದಿಂದ ತಿಳಿದುಬರುವ ಸಾದೃಶ್ಯ ವಾಚಕಗಳೆನಿಸಿವೆ. 'ಮುಖ' ಮೊದಲಾದವು ಉಪಮೇಯವೆನಿಸಿದೆ. 'ಚಂದ್ರ' ಮೊದಲಾದವು ಉಪಮಾನವೆನಿಸಿವೆ.

**ಉಪಮೆಯ ಪ್ರಭೇದಗಳು**

ಉಪಮೆಯದಲ್ಲಿ ಪೂರ್ಣೋಪಮೆ ಮತ್ತು ಲುಪ್ತೂಪಮೆ ಎಂದು ಎರಡು ಪ್ರಮುಖ

ಭೇದಗಳಿವೆ. ಪೂರ್ಣೋಪಮೆಯಲ್ಲಿ ಉಪಮೇಯ, ಉಪಮಾನ, ಸಾಧಾರಣಧರ್ಮ, ಹಾಗೂ ಉಪಪ್ರಾತಿಪಾದಕ ಶಬ್ದಗಳು ಉಕ್ತವಾಗಿದ್ದಲ್ಲಿ ಪೂರ್ಣೋಪಮೆ ಎಂದು ಕರೆಯಲಾಗಿದೆ. ಇವುಗಳಲ್ಲಿ ಒಂದು ಎರಡು ಅಥವಾ ಮೂರು ಲುಪ್ತವಾಗಿದ್ದರೆ ಅದು ಲುಪ್ತೋಪಮೆ ಎಂದು ಕರೆಯಲಾಗಿದೆ. ಪೂರ್ಣೋಪಮೆಯಲ್ಲಿ ಶ್ರೌರ್ತೀ, ಆರ್ಥಿ ಎಂದು ಎರಡು ಬಗೆಯಾಗಿದ್ದು ಮತ್ತು ಇವೆರಡಲ್ಲಿ ತದ್ದಿತ ಪ್ರತ್ಯಯದಲ್ಲಿ, ಸಮಾಸ, ಮತ್ತು ವಾಕ್ಯದಲ್ಲಿ ಮೂರು ಬಗೆಯಾಗುವುದರಿಂದ ಪೂರ್ಣೋಪಮೆಯು ಒಟ್ಟು ಆರು ಬಗೆಗಳಾಗಿವೆ. ಲುಪ್ತೋಪಮೆಯು ಪೋರ್ಣೋಪಮೆಯಂತೆ ಶ್ರೌತಿಯಲ್ಲಿ ವಾಕ್ಯದಲ್ಲೂ, ಸಮಾಸದಲ್ಲೂ ಎರಡು ಬಗೆಯಾಗಿದ್ದು ಆರ್ಥೀಯಲ್ಲಿ ತದ್ದಿತ, ಸಮಾಸ, ವಾಕ್ಯದಲ್ಲಿ ಮೂರು ಬಗೆಯಾಗಿರುವುದರಿಂದ ಒಟ್ಟು ಐದು ಬಗೆಯಾಗಿವೆ. ಮತ್ತೆ ಇದರಲ್ಲಿ ಉಪಭೇದಗಳಾಗಿ ಲುಪ್ತೋಪಮೆಯು ಇಪ್ಪತ್ತೂಂದುಬಗೆಗಳಾಗುತ್ತವೆ. ಪೂರ್ಣೋಪಮೆಯು ಆರುಬಗೆ ಲುಪ್ತೋಪಮೆಯು ಇಪ್ಪತ್ತೊಂದು ಬಗೆ ಒಟ್ಟು ಉಪಮೇಯು ಇಪ್ಪತ್ತೊಂದುಬಗೆಯಾಗಿ ಒಟ್ಟು ಉಪಮೆಯ[೧೦೬] ಪ್ರಭೇದವು ಇಪ್ಪತ್ತೇಳು ಬಗೆಗಳಾಗಿವೆ.

## ಶ್ರೌತೀಪೂರ್ಣೋಪಮೆ

ಶ್ರೌತೀಪೂರ್ಣೋಪಮೆಯು 'ಯಥಾ', 'ಇವ' ಎಂಬ ಪದಗಳನ್ನು ಪ್ರಯೋಗಿಸಿರುವ ಕಡೆ ಶಬ್ದ ಸಾದೃಶ್ಯವು ತೋರುತ್ತದೆ. 'ಇವ' ಎಂಬ ಅರ್ಥವನ್ನು ತಿಳಿಸುವ ಬೇರೆ ಪದವಾಗಲೀ ವತಿಪ್ರತ್ಯಯವಾಗಲಿ ಇದ್ದರೆ ಅದು ಶೌತ್ರಿಪೂರ್ಣೋಪಮೆ ಎನಿಸುತ್ತದೆ. ಇಲ್ಲಿ ಅರ್ಥಾನುಸಂಧಾನದಿಂದಲೇ ಸಾದೃಶ್ಯವು ತಿಳಿದು ಬರುತ್ತದೆ. 'ಯಥಾ, ಇವ' ಮೊದಲಾದ ಶಬ್ದಗಳು, ಉಪಮಾನವನ್ನು ತಿಳಿಸುವ ಪದದ ಮುಂದೆ ಬಂದಿರುವ 'ತುಲ್ಯ' ಮೊದಲಾದ ಪದಗಳಿಗೆ ಸಮಾನಗಳೆನಿಸಿದ್ದು ಕೇಳಿದ ಮಾತ್ರದಿಂದಲೇ ಉಪಮಾನೋಪಮೇಯಗಳಿಗೆ ಸಾಮ್ಯ ರೂಪವಾದ ಸಂಬಂಧವನ್ನು ಶಬ್ದಶಕ್ತಿಯ ಮಹಿಮೆಯಿಂದ ತಿಳಿಸುತ್ತವೆ. ಆದ್ದರಿಂದ ಅವು ಇರುವಾಗ ಉಪಮೆಯು ಶ್ರೌತಿ ಎನಿಸುವುದು. ಹೀಗೆಯೇ 'ತತ್ರ ತಸ್ಯೇವ' ಎಂಬ ಅರ್ಥದಲ್ಲಿ ವಿಹಿತವಾದ ವತಿ ಪ್ರತ್ಯಯವನ್ನು ಶಬ್ದದಿಂದ ತಿಳಿಸಿದಾಗಲೂ ಪೂರ್ಣೋಪಮೆಯು ಶ್ರೌತಿ ಎಂದು ಕರೆಯಲಾಗಿದೆ. ಶ್ರೌತಿಪೂರ್ಣೋಪಮೆಯು ತದಿತಪ್ರತ್ಯಯ, ಸಮಾಸ ವಾಕ್ಯದಲ್ಲಿ ಸಂಭವಿಸುವುದಕ್ಕೆ ಉದಾಹರಣೆ

**ಸೌರಭಮಂಭೋರುಹವನ್ಮುಖಸ್ಯ ಕುಂಭಾವಿವ ಸ್ತನೀ ಪೀನೀ ।**
**ಹೃದಯಂ  ಮದಯತಿ ತವಶರದಿಂದು ರ್ಯಥಾ ಬಾಲೇ[೧೦೭] ॥**

"ಎಲೈ ಬಾಲೆ, ನಿನ್ನ ಮುಖದ ಸುಗಂಧವು ಕಮಲದಂತೆ ಇದೆ. ಸ್ತನಗಳು ಕುಂಭಗಳಂತೆ ದಪ್ಪಗಿವೆ. ಶರತ್ಕಾಲದ ಚಂದ್ರನು ಹೃದಯವನ್ನು ಅದಂದಗೊಳಿಸುವಂತೆ

ನಿನ್ನ ಮುಖವು ಹೃದಯವನ್ನು ಆನಂದಪಡಿಸುತ್ತದೆ". ಇಲ್ಲಿ ಮೊದಲನೆಯ ವಾಕ್ಯದಲ್ಲಿ ಸೌರಭವೇ ಸಾಮಾನ್ಯಧರ್ಮ, ಕಮಲವೇ ಉಪಮಾನ, ಮುಖವೇ ಉಪಮೇಯ, 'ವತಿ' ಪ್ರತ್ಯಯವು ಔಪಮ್ಯವನ್ನು ತಿಳಿಸುವ ಪದ. ಆದ್ದರಿಂದ ಇದು ಪೂರ್ಣೋಪಮೆ ಎನಿಸಿದೆ. 'ತತ್ರ ತಸ್ಯೈವ' ಎಂಬುದರಿಂದ 'ಇವ' ಎಂಬ ಅರ್ಥದಲ್ಲಿ 'ವತಿ'ಪ್ರತ್ಯಯವನ್ನು ವಿಧಿಸಿರುವುದರಿಂದ ಇದು 'ತದ್ಧಿತಶ್ರೌತಿ' ಎನಿಸಿದ. ಎರಡನೆಯ ವಾಕ್ಯದಲ್ಲಿ 'ಕುಂಭಾವಿವ' ಎಂದು 'ಇವೇನ ಸಮಾಸೋ ವಿಭಕ್ತ್ಯಲೊಪಶ್ಚ' ಎಂಬ ವಾರ್ತಿಕೆಯಿಂದ ಸಮಾಸ ಮಾಡಿರುವುದರಿಂದ ಇದು 'ಸಮಾಸಗತಾ' ಎನಿಸಿದೆ. ದ್ವಿತೀಯಾರ್ಧವು ವಾಕ್ಯವೇ ಆದ್ದರಿಂದ ಯಥಾ ಶಬ್ದವು ಶೌತ್ರವೆನಿಸಿದ್ದರಿಂದ ಅದು ವಾಕ್ಯಗತಾಶ್ರೌತೀ ಎನಿಸಿದೆ. ಈ ಉದಾಹರಣೆಯಲ್ಲಿ ಶೌತ್ರಿಪೂರ್ಣೋಪಮೆಯ ಮೂರು ಬಗೆಯನ್ನು ಕಾಣಬಹುದಾಗಿದೆ.

## ಆರ್ಥೀಪೂರ್ಣೋಪಮೆ

ಎಲ್ಲಿ ತುಲ್ಯ, ಸಮಾಸ, ಸದೃಶ, ಮೊದಲಾದ ಶಬ್ದಾಗಳಾಗಲೀ ತುಲ್ಯ ಎಂಬ ಅರ್ಥವನ್ನು ಕೊಡುವ ವತಿ ಪ್ರತ್ಯಯವಾಗಲಿ ಇರುವುದು ಅದನ್ನು ಆರ್ಥೀಪೂರ್ಣೋಪಮೆ ಎಂದು ಕರೆಯಲಾಗಿದೆ. ಇಲ್ಲಿ ತುಲ್ಯ ಮೊದಲಾದ ಪದಗಳು 'ಕಮಲೇನ ತುಲ್ಯಂ ಮುಖಂ' ಎಂಬಲ್ಲಿ ಉಅಪಮೇಯದಲ್ಲಿಯೂ, 'ಕಮಲಂ ಮುಖಸ್ಯ ತುಲ್ಯಂ' ಎಂಬಲ್ಲಿ ಎರಡು ಕಡೆಗಳಲ್ಲೂ ನೆಲಸಿದ್ದು ಅರ್ಥಾನುಸಂಧಾನದಿಂದಲೇ ಸಾಮ್ಯವನ್ನು ತಿಳಿಸುತ್ತವೆ. ಆದ್ದರಿಂದ ಅವು ಇರುವಾಗ ಉಪಮೆ ಆರ್ಥೀ ಎನಿಸುತ್ತವೆ. ಹೀಗೆ 'ತೇನ ತುಲ್ಯಂ ಕ್ರಿಯಾ ಚೇದ್ವತಿ' ಎಂಬ ಸೂತ್ರದಿಂದ ತುಲ್ಯ ಎಂಬ ಅರ್ಥದಲ್ಲಿ ಹೇಳಿರುವ ವತಿಪ್ರತ್ಯಯವನ್ನು ಸೇರಿಸಿದಾಗಲೂ ಪೂರ್ಣೋಪಮೆಯು ಆರ್ಥೀ ಎನಿಸುವುದು. ಇನ್ನು ಆರ್ಥೀಪೂರ್ಣೋ ಪಮೆಯ ತದ್ಧಿತಪ್ರತ್ಯಯ, ಸಮಾಸ, ವಾಕ್ಯದಲ್ಲಿ ಸಂಭವಿಸುವುದಕ್ಕೆ ಉದಾಹರಣೆ

**ಮಧುರಃ ಸುಧಾವದಧರಃ ಪಲವತ್ತುಲ್ಯೋಽತಿಪೇಲವಃ ಪಾಣಿಃ ।**
**ಚಕ್ತಿತಮೃಗಲೋಚನಾಭ್ಯಾಂ ಸದೃಶೀ ಚ ಚಪಲೇ ಲೋಚನೇ ತಸ್ಯಾಃ ೧೦೮॥**

"ಆ ತರುಣಿಯ ಅಧರವು ಅಮೃತದಂತೆ ಮಧುರವಾಗಿದೆ. ಹಸ್ತವು ಚಿಗುರಿನಂತೆ ಬಹಳ ಕೋಮಲವಾಗಿದೆ. ಹಾಗೆಯೇ ಕಣ್ಣುಗಳು ನಡುಗುತ್ತಿರುವ ಜಿಂಕೆಯ ಕಣ್ಣುಗಳಿಗೆ ಸದೃಶಗಳಾಗಿ ಚಂಚಲವೆನಿಸಿವೆ". ಇಲ್ಲಿ ಮೊದಲನೆಯ ವಾಕ್ಯದಲ್ಲಿ 'ಅಧರವು ಅಮೃತದಂತೆ ಮಧುರವಾಗಿರುವುದರಿಂದ ಅದನ್ನು ಪಾನಮಾಡಲಾಗಿದೆ' ಎಂಬ ಅರ್ಥವು ವಿವಕ್ಷಿತವಾದ್ದರಿಂದ ತುಲ್ಯ ಎಂಬ ಅರ್ಥದಲ್ಲಿ ವತಿಪ್ರತ್ಯಯವು ಬಂದಿರುವುದರಿಂದ ಇದು ತದ್ಧಿತಗತಾಆರ್ಥೀಪೂರ್ಣೋಪಮೆ ಎನಿಸಿದೆ. ಎರಡನೆಯ ವಾಕ್ಯದಲ್ಲಿ 'ಪಲವೇನ ತುಲ್ಯಃ' ಎಂದು ಸಮಾಸವಾಗುವುದರಿಂದ ಸಮಾಸದಲ್ಲಿ ಆರ್ಥೀಉಪಮೆ ಬಂದಿದೆ.

ದ್ವಿತೀಯಾರ್ಥವು ವಾಕ್ಯವೆನಿಸಿದ್ದು 'ಲೋಚನಾಭ್ಯಂ' ಎಂಬುದಕ್ಕೆ 'ಸದೃಶೀ' ಪದದೊಡನೆ ಸಮಾಸವಾಗದೇ ಇರುವುದರಿಂದ ಇದು ವಾಕ್ಯಗತ ಆರ್ಥೀಪೂರ್ಣೋಪಮೆ ಎನಿಸಿದೆ. ಇಲ್ಲಿಯೂ ಶ್ರೌತಿಪೂರ್ಣೋಪಮೆ ಎನಿಸಿದೆ ಇಲ್ಲಿಯೂ ಶ್ರೌತಿಪೂರ್ಣೋಪಮೆ ಎನಿಸಿದೆ. ಇಲ್ಲಿಯೂ ಶ್ರೌತಿಪೂರ್ಣೋಪಮೆಯಂತೆಯೇ ಪೂರ್ವವಾಕ್ಯಗಳಲ್ಲಿ ವಾಕ್ಯಗತಾ ಆರ್ಥೀಉಪಮೆಗೆ ಅವಕಾಶವಿಲ್ಲವೆಂದು ತಿಳಿಯುತ್ತದೆ. ಹೀಗೆ ಪೂರ್ಣೋಪಮೆಯು ಆರುಬಗೆಯಾಗಿದೆ ಲುಪ್ತೋಪಮೆ ಭೇದೊಪಭೇದಗಳು ಒಟ್ಟು ಇಪ್ಪತ್ತೈದುಬಗೆಯಾಗಿದೆ.

## ೨. ಉತ್ಪ್ರೇಕ್ಷಾಲಂಕಾರ

ಉತ್ಪ್ರೇಕ್ಷೆ ಎಂದರೆ ಒಂದು ಪ್ರಕೃತವನ್ನು ಅಂದರೆ ಉಪಮೇಯವನ್ನು ಅದಕ್ಕೆ ಸದೃಶವಾದ ಇನ್ನೊಂದೆಂದು ಕಲ್ಪಿಸುವುದೇ ಉತ್ಪ್ರೇಕ್ಷ. ಉತ್ಪ್ರೇಕ್ಷೆಯು ಸಾದೃಶ್ಯವನ್ನು ಅವಲಂಬಿಸಿದೆ ಯಾವುದಾದರೊಂದು ವಸ್ತುವನ್ನು ಬೇರೆಯಾಗಿ ಕಲ್ಪಿಸುವುದೇ ಉತ್ಪ್ರೇಕ್ಷೆ ಉಪಮೇಯವನ್ನು ಉಪಮಾ ಎಂದು ಭಾವಿಸುವುದೇ ಉತ್ಪ್ರೇಕ್ಷೆ [೧೮] ಎನಿಸಿದೆ. ಉಪಮಾಲಂಕಾರದಲ್ಲಿ ಉಪಮಾನ ಪದಾರ್ಥವು ವಾಸ್ತವವೆನಿಸುವುದ–ರಿಂದ ಸಂಭಾವನೆಗೆ ಅವಕಾವಿಲ್ಲ ಅದರೆ ಉತ್ಪ್ರೇಕ್ಷೆಯಲ್ಲಿ ಉಪಮಾನ ವಸ್ತುವು ವಾಸ್ತವಿಕವಾಗಿಲ್ಲದ್ದರಿಂದ ಸಂಭಾವನೆಗೆ ಅವಕಾಶವಿದೆ ಆದ್ದರಿಂದ ಇದನ್ನು ಅಭೂತೋಪಮೆ ಎಂದು ಕೆಲವು ಅಲಂಕಾರಿಕರು ಕರೆದಿದ್ದಾರೆ. ರೂಪಕದಲ್ಲಿ ಆರೋಪವು ಭ್ರಾಂತಿಮಂದಲಂಕಾರದಲ್ಲಿ ಭ್ರಮವೂ ಅತಿಶಯೋಕ್ತಿಯಲ್ಲಿ ಅದ್ಯವಸಾಯವೂ ನಿಶ್ಚಯುವೆನಿಸರುತ್ತದೆ ಆದರೆ ಇಲ್ಲಿ ಸಂಭಾವನೆಯಲ್ಲಿ ಸಂಶಯುವೆನಿಸುತ್ತದೆ ರೂಪಕವು ಸಾರೋಪ ಲಕ್ಷಣೆಯನ್ನು, ಅತಿಶಯೋಕ್ತಿಯು ಸಾಧ್ಯವಸಾನಲಕ್ಷಣೆಯನ್ನು ಅವಲಂಬಿಸಿವೆ ಆದರೆ ಇದು ಯಾವ ಲಕ್ಷಣವನ್ನೂ ಅವಲಂಬಿಸಿಲ್ಲ. ಸಂದೇಹವು ಕೇವಲ ಎನಿಸಿದರೆ ಇದು ಸಂಭಾನೆ ಎಂಬ ಸಂಶಯವೆನಿಸಿದೆ ಆದ್ದರಿಂದ ಉತ್ಪ್ರೇಕ್ಷೆಯು ರೂಪಕ ಮೊದಲಾದವುಗಳಿಂದ ಬೇರೆ ಎನಿಸಿವೆ.

## ಉತ್ಪ್ರೇಕ್ಷೆಯ ಪ್ರಭೇದಗಳು

ಉತ್ಪ್ರೇಕ್ಷೆಯು ವಾಚ್ಯೋತ್ಪ್ರೇಕ್ಷೆ ಮತ್ತು ವ್ಯಂಗೋತ್ಪ್ರೇಕ್ಷೆಯೆಂದು ಎರಡು ಬಗೆಯಾಗಿದೆ. ಇವೆರಡರಲ್ಲಿ ಜಾತಿವಿಶಿಷ್ಟವಾದ ಯಾವುದಾರೊಂದು ವ್ಯಕ್ತಿಯನ್ನು, ಗುಣವನ್ನು, ಕ್ರಿಯೆಯನ್ನು, ಒಂದು ವಸ್ತುವನ್ನು ಉತ್ಪ್ರೇಕ್ಷಿಸಬಹುದು. ಆದ್ದರಿಂದ ಇದು ಎಂಟುಬಗೆಯಾಗಿದೆ. ಇವು ಎಂಟರಲ್ಲಿ ಒಂದೊಂದು ಭಾವ, ಅಭಾವ ರೂಪವಾದ್ದರಿಂದ ಹದಿನಾರುಬಗೆ ಉತ್ಪ್ರೇಕ್ಷೆಯ ಕಾರಣ ಗುಣಕ್ರಿಯೆ ಆಗುವುದರಿಂದ ಮತ್ತೆ ಎರಡೆರಡುಬಗೆಯಾಗಿ ಮೂವತ್ತೆರಡುಬಗೆಗಳಾಗಿ ಒಟ್ಟು ಐವತ್ತಾರುಬಗೆಗಳಾಗಿ ವಿಶ್ವನಾಥನು ವಿಂಗಡಿಸಿದ್ದಾನೆ. ಇವು ದ್ರವ್ಯೋತ್ಪ್ರೇಕ್ಷೆಯನ್ನು ಬಿಟ್ಟು ಸ್ವರೂಪೋತ್ಪ್ರೇಕ್ಷೆ, ಫಲೋತ್ಪ್ರೇಕ್ಷೆ, ಹೇತೂತ್ಪ್ರೇಕ್ಷೆ ಎಂದು ಮೂರುಬಗೆಯಾಗಿದೆ.

## ವಾಚ್ಯೋತ್ಪ್ರೇಕ್ಷೆ

'ಇವ' ಮೊದಲಾದ ಪದಗಳನ್ನು ಪ್ರಯೋಗಿಸಿದ್ದರೆ ವಾಚ್ಯೋತ್ಪ್ರೇಕ್ಷೆ ಎನ್ನಲಾಗಿದು. ಇದು ಜಾತಿ ವಿಶಿಷ್ಟವಾದ ಯಾವುದಾದರೊಂದು ವ್ಯಕ್ತಿ, ಗುಣ, ಕ್ರಿಯೆಯನ್ನು ಉತ್ಪ್ರೇಕ್ಷಿಸುತ್ತದೆ. ಉದಾಹರಣೆಗೆ,

**ಊರುಃ ಕುರಂಗಕದೃಶಶ್ಚಂಚಲಚೇಲಾಂಚಲೋ ಭಾತಿ।**
**ಸಪಾತಾಕಃ ತನಕಮಯೋ ವಿಜಯಸ್ತಂಭಃ ಸ್ಮರಸ್ಯೇವ** [೧೧೦]॥

"ಅಳ್ಳಾಡುತ್ತಿರುವ ಬಟ್ಟೆಯ ತುದಿಯುಳ್ಳ ಪ್ರೇಯಸಿಯ ತೊಡೆಯ ಬಟ್ಟೆಯೊಡ ಗೂಡಿದ ಮನ್ಮಥನ ವಿಜಯಸ್ತಂಭವೋ ಏನೋ ಎಂಬಂತೆ ಶೋಭಿಸುತ್ತದೆ". ಇಲ್ಲಿ 'ವಿಜಯಸ್ತಂಭ' ಶಬ್ದವು ಎಲ್ಲಾ ಬಗೆಯ ವಿಜಯಸ್ತಂಭಗಳಿಗೂ ಅನ್ವಯಿಸುವುದ- ರಿಂದ ಇದು 'ಜಾತಿ' ವಿಷಯಕವಾದ ಉತ್ಪ್ರೇಕ್ಷೆ ಎನಿಸಿದೆ. ಇಲ್ಲಿ 'ಉರು'ವೇ ಉಪಮೇಯ. ವಿಜಯಸ್ತಂಭವೇ ಉಪಮಾನ. ಆದರೆ ಇದು ಯಥಾರ್ಥವಾಗಿ ಇರುವಂತಹದಲ್ಲವಾದ್ದರಿಂದ ವಾಸ್ತವವೆನಿಸಿಲ್ಲ. 'ಇವ' ಶಬ್ದವನ್ನು ಪ್ರಯೋಗಿಸಿರುವುದ- ರಿಂದ ಇಲ್ಲಿ ವಾಚ್ಯೋತ್ಪ್ರೇಕ್ಷೆ ಎನಿಸಿದೆ. ವಿಜಯಸ್ತಂಭವೆಂಬ ಭಾವಪದಾರ್ಥವನ್ನೂ ಉತ್ಪ್ರೇಕ್ಷಿಸುವುದರಿಂದ ಇದು ಭಾವರೂಪವೆನಿಸಿದೆ. ನಾಯಿಕೆಯ ತೊಡೆಯಲ್ಲಿನ ಮಾರ್ಧುರ್ಯಗುಣವೇ ಇಲ್ಲಿ ಉತ್ಪ್ರೇಕ್ಷೆಗೆ ಕಾರಣವೆನಿಸಿದೆ.

**ಜ್ಞಾನೇ ಮೌನಂ ಕ್ಷಮಾಶಕ್ತಾ ತ್ಯಾಗೇಶ್ಲಾಘಾವಿಪರ್ಯಯಃ ।**
**ಗುಣಾಗುಣಾನುಬಂಧಿ ತ್ವಾತ್ತಸ್ಯಸಪ್ರಸವಾ ಇವ** [೧೧೧] ॥

ಇಲ್ಲಿ "ದಿಲೀಪನಿಗೆ ಎಲ್ಲಾ ವಿಷಯಗಳನ್ನು ಭೋದಿಸುವ ಶಕ್ತಿ ಇದ್ದರೂ ಅನಾವಶ್ಯಕವಾದ ವಿಷಯದಲ್ಲಿ ಮೌನವಿರುತ್ತಿತ್ತು. ಅವನು ಎಲ್ಲರಲ್ಲೂ ವಾಚಾಳನಂತೆ ಹೆಚ್ಚು ಮಾತನಾಡುತ್ತಿರಲಿಲ್ಲ. ಶಕ್ತಿ ಇದ್ದರೂ ಸಹ ಸಹನೆಯಿತ್ತು. ಹಾಗೆಯೇ ದಾನ ಮಾಡುವಾಗಲೂ ಆತ್ಮಪ್ರಶಂಸೆಯನ್ನು ತೊರೆಯುತ್ತಿದ್ದನು. ಹೀಗೆ ಅವನ ಗುಣಗಳು ಲೋಕಪ್ರಿಯತ್ವವೇ ಮೊದಲಾದ ಬೇರೆ ಬೇರೆ ಗುಣಗಳಿಗೆ ಪ್ರಯೋಜಕವಾದ್ದ- ರಿಂದ ಅವನಲ್ಲಿ ಸಹೋದರರಂತೆ ನೆಲೆಸಿದ್ದವು". ಹೀಗೆ ದೀಲಿಪನ ಗುಣಗಳನ್ನು ಪ್ರಸಂಸಿಸುವಾಗ ಬಂಧುತ್ವವೆಂಬ ಗುಣವನ್ನು ಉತ್ಪ್ರೇಕ್ಷಿಸಲಾಗಿದೆ. ವಾಚ್ಯೋತ್ಪ್ರೇಕ್ಷೆಯು ಜಾತಿ, ಗುಣ, ಕ್ರಿಯಾದ್ರವ್ಯಗಳ ಅಭಾವವನ್ನು ಉತ್ಪ್ರೇಕ್ಷಿಸುವುದಕ್ಕೆ ಉದಾಹರಣೆ.

**ಕಪೋಲಿಫಲಕಾವಸ್ಯಃ ಕಷ್ಟಂ ಭೂತ್ವಾ ತಥಾವಿದೌ।**
**ಅಪಶ್ಯಂತಾವಿವಾನ್ಯೋನ್ಯಮಿೊದೃಶಾಂ ಕ್ಷಾಮತಾಂ ಗತಾ** [೧೧೨]॥

ಪತಿಯ ಸಮೀಪದಲ್ಲಿ ವಿರಹಿಣಿಯಾದ ಪ್ರೇಯಸಿಯ ಅವಸ್ಥೆಯನ್ನು ವರ್ಣಿಸುವ ಈ ಪದ್ಯದಲ್ಲಿ "ಇಲ್ಲಿ ಕಾಣುತ್ತಿರುವ ಪ್ರೇಯಸಿಯ ಕಪೋಲಗಳೆರಡೂ

ಅಷ್ಟು ಸುಂದರವಾಗಿದ್ದರೂ ಸಹ ಉದ್ದವಾದ ಮೂಗಿನಿಂದ ತಡೆಯುಂಟಾದರಿಂದ ಪರಸ್ಪರವಾಗಿ ನೋಡಿಕೊಳ್ಳುತ್ತ ಇಷ್ಟೊಂದು ಕ್ಷೀಣ ಸ್ಥಿತಿಗೆ ಬಂದವೋ ಏನೋ! ಒಬ್ಬ ನೆಂಟನನ್ನು ಕಾಣದಿದ್ದರೆ ಮತ್ತೊಬ್ಬ ನೆಂಟನು ಕ್ಷೀಣಸ್ಥಿತಿಗೆ ಬರುವುದು ಸಹಜ". ಇಲ್ಲಿ 'ಅಪಶ್ಯಂತಾ' ಎಂದು ಹೇಳಿದ್ದರಿಂದ ಕಪೋಲಗಳಿಗೆ ನೋಡುವ ಕ್ರಿಯೆ ತಪ್ಪಿತ್ತೆಂಬುದನ್ನು ಉತ್ಪ್ರೇಕ್ಷಿಸಲಾಗಿದೆ.

## ವ್ಯಂಗ್ಯೋತ್ಪ್ರೇಕ್ಷೆ

'ಇವ' ಮೊದಲಾದ ಪದಗಳನ್ನು ಪ್ರಯೋಗಿಸದೇ ಇದ್ದರೆ ಅದು ವ್ಯಂಗ್ಯೋತ್ಪ್ರೇಕ್ಷೆ ಎನಿಸಿಕೊಳ್ಳುವುದು. ಉದಾಹರಣೆಗೆ.

**ತನ್ವಂಗ್ಯಾಃ ಸ್ತನ ಯುಗ್ಮೇನ ಸುಖಂ ನ ಪ್ರಕಟೀಕೃತಮ್।**
**ಹಾರಾಯ ಗುಣಿಸೀ ಸ್ಥಾನಂ ನ ದತ್ತಮಿತಿ ಲಜ್ಜಯಾ**[೧೧೩] ॥

"ಕೃಶಾಂಗೀಯ ಸ್ತನಗಳೆರಡು ದಾರದಿಂದ ಪೋಣಿಸಿದ ಹಾರಕ್ಕೆ [ವಿದ್ಯೆ, ಗೌರವ ಮೊದಲಾದ ಗುಣಗಳನ್ನು ಸಂಪಾದಿಸಿರುವವನಿಗೆ] ಯಥೋಚಿತವಾದ ಸ್ಥಾನವನ್ನು ಕೊಡಲಿಲ್ಲವೆಂಬ ಕಾರಣಕ್ಕಾಗಿ ನಾಚಿಕೆಯಿಂದಲೋ ಏನೋ ಅಗ್ರ ಭಾವವನ್ನು ಪ್ರಕಾಶಿಸಲಿಲ್ಲ". ಇಲ್ಲಿ ಲಜ್ಜೆಯಿಂದಲೋ ಏನೋ ಎಂಬ ಅರ್ಥವನ್ನು ತಿಳಿಸಲು 'ಇವ' ಎಂಬ ಪದವನ್ನು ಉಪಯೋಗಿಸದೇ ಇರುವುದರಿಂದ ಇದು ವ್ಯಂಗ್ಯೋತ್ಪ್ರೇಕ್ಷೆ ಎನಿಸಿದೆ.

ಧ್ವನಿಯನ್ನು ನಿರೂಪಿಸುವ ಸಂದರ್ಭದಲ್ಲಿ ಅಲಂಕಾರಗಳೆಲ್ಲವೂ ವ್ಯಂಗ್ಯವಾಗಿಯೇ ತೋರುತ್ತವೆ ಎಂದು ಹಿಂದೆ ಹೇಳಿಯಾಗಿದೆ ಆದರೂ ಇಲ್ಲಿ ವಿಶೇಷವಾಗಿ ವ್ಯಂಗ್ಯವನ್ನು ಹೇಳಿರುವುದಕ್ಕೆ ಉದಾಹರಣೆಯಿಂದ ಸಮರ್ಥನೆ ಮಾಡಲಾಗಿದೆ.

**ಮಹಿಲಾ ಸಹಸ್ರಭರಿತೇ ತವ ಹೃದಯೇ ಸುಭಗ! ಸಾ ಅಮಾಂತೀ।**
**ಅನುದಿನ ಮನನ್ಯಕಮಾ ಅಂಗಂ ತನುಕಮಪಿ ತನಯತಿ** [೧೧೪]॥

ಅನೇಕ ಸ್ತ್ರೀಯರನ್ನು ಪ್ರೀತಿಸುತ್ತ ಪರದೇಶದಲ್ಲಿ ಇದ್ದು ತನ್ನ ನಾಯಿಕೆಯ ವೃತ್ತಾಂತವನ್ನು ತಿಳಿಯಬಯಸುವ ನಾಯಕನಿಗೆ ನಾಯಿಕೆಯ ದೂತಿಯ ಹೇಳುವ ಮಾತಿದು. "ಎಲೈ ಸ್ತ್ರೀ ವಲ್ಲಭನೆ, ಸಾವಿರಾರು ರಮಣಿಯವರಿಂದ ತುಂಬಿರುವ ನಿನ್ನ ಹೃದಯದಲ್ಲಿ ಅಡಗಲು ಅವಕಾಶವನ್ನು ಪಡೆಯಲ್ಲಿಕ್ಕೆ ಆಗದೆಯೋ ಏನೋ ಎಂಬಂತೆ ಆ ನಾಯಿಕೆಯು ಯಾವಾಗಲೂ ಬೇರೆ ಯಾವ ಕೆಲಸವೂ ಇಲ್ಲದವಳಾಗಿ ಸಹಜವಾಗಿ ಕೃಶವಾಗಿರುವ ದೇಹವನ್ನು ಮತ್ತಷ್ಟು ಕೃಶಪಡಿಸುತ್ತಿರುವಳೊ ಏನೋ ಇಲ್ಲಿ 'ಅಮಾಂತೀವ' ಎಂಬಲ್ಲಿ ಅಭಾವರೂಪವಾದ ಕ್ರಿಯೆಯು ವ್ಯಂಗ್ಯವಾಗಿ ತೋರುವುದೆಂದು ತಿಳಿದು ಬರುತ್ತದೆ. ಈ ಪದ್ಯದಲ್ಲಿ ಅಮಾಂತೀವ ಎಂಬಲ್ಲಿ ಸಂಭಾವನೆಯಿಲ್ಲದಿದ್ದರೂ ವಾಕ್ಯವು ಸಮಾಪ್ತಿಯಾಗುತ್ತದೆ. ಈ ಬಗ್ಗೆ ಯಾವ

ಅನುಪಪತ್ತಿಯೂ ಕಾಣ ಬರುವುದಿಲ್ಲ. ಆದರೆ 'ತನ್ವಂಗ್ಯಾಃ ಸ್ತನಯುಗ್ಮೇನ' ಎಂಬಲ್ಲಿ ಸ್ತನಗಳು ಅಚೇತನವಾದ್ದರಿಂದ ಅದಕ್ಕೆ ಲಜ್ಜೆ ಎಂಬುದು ಸಂಭವಿಸದೇ ಇರುವುದರಿಂದ ಉತ್ಪ್ರೇಕ್ಷೆಯನ್ನು ತಿಳಿಸುವ 'ಇವ' ಶಬ್ದವನ್ನು ಅಧ್ಯಾಹರಮಾಡಿಕೊಳ್ಳುವುದರಿಂದ ವಾಕ್ಯವು ವಿಶ್ರಾಂತವಾಗಬೇಕಾಗಿದೆ. ಎಲ್ಲಿ ಉತ್ಪ್ರೇಕ್ಷೆಇಲ್ಲದಿದ್ದರೆ ಅನ್ವಯವು ಹೊಂದುವುದಿಲ್ಲವೂ ಅಲ್ಲಿ ಪ್ರತೀಯ ಮಾನೋತ್ಪ್ರೇಕ್ಷೆ ಉಂಟೆಂದು ತಿಳಿದು. ಎಲ್ಲಿ ಅನ್ವಯವು ಹೊಂದಿಕೆ ಆಗುವುದೋ ಅಲ್ಲಿ ಸಂಭಾವನಾ ಧ್ವನಿಯುಂಟೆಂದು ತಿಳಿಯಬೇಕಾಗುತ್ತದೆ.

ಮಮ್ಮಟನು ಉತ್ಪ್ರೇಕ್ಷೆಗೆ ಅಷ್ಟೊಂದು ಮಹತ್ವವನ್ನು ಕೊಟ್ಟಿಲ್ಲ. ಅದನ್ನು ಸ್ವರೂಪೋತ್ಪ್ರೇಕ್ಷೆ, ಹೇತೋತ್ಪ್ರೇಕ್ಷೆ ಮತ್ತು ಫಲೋತ್ಪ್ರೇಕ್ಷೆಯು ಕವಿ ಕಲ್ಪಿಸಿದ್ದು ಒಂದು ವಸ್ತುವಿನ ಸ್ವರೂಪವೋ, ಹೇತುವೋ ಇಲ್ಲವೇ ಫಲವೋ ಆಗಿರಬಹುದೆಂದು ಇದನ್ನ ಅವಲಂಬಿಸಿ ಈ ಮೂರು ಪ್ರಭೇದಗಳನ್ನು ಸಿದ್ಧಿಸುತ್ತವೆ ಎಂದು ಹೇಳಿದ್ದಾನೆ. ವಿಶ್ವನಾಥ–ನು ಉತ್ಪ್ರೇಕ್ಷೆಯನ್ನು ವಾಚ್ಯ, ವ್ಯಂಗ್ಯವೆಂದು ಎರಡು ಪ್ರಕಾರಗಳನ್ನಾಗಿ ಮಾಡಿ ಮತ್ತು ಅದರಲ್ಲಿ ಐವತ್ತಾರು ಉಪಭೇದಗಳನ್ನ ದರ್ಪಣಕಾರನು ವಿವೇಚಿಸಿದ್ದಾನೆ.

## ೨. ದೀಪಿಕ ಅಲಂಕಾರ

ದೀಪಕ ಎಂದರೆ ಒಂದು ದೀಪವು ಸುತ್ತಲಿನ ಅನೇಕ ಭಾಗಗಳನ್ನು ಬೆಳಗುವಂತೆ ಇಲ್ಲಿ ಒಂದು ಧರ್ಮವು ಇಲ್ಲವೇ ಒಂದು ಕಾರಕವು ಅನೇಕ ವಸ್ತುಗಳನ್ನು ಇಲ್ಲವೇ ಕ್ರಿಯೆಗಳನ್ನು ಬೆಳಗುವಂತೆ ಕಾಣುವುದರಿಂದ ಇದಕ್ಕೆ ದೀಪಕ ಅಲಂಕಾರ ಎಂದು ಕರೆಯಲಾಗಿದೆ. ಒಂದೇ ಸಲ ಉಕ್ತವಾದ ಒಂದು ಧರ್ಮವು ಉಪಮಾನೋಪಮೇಯಗಳಿಗೆ ಅನ್ವಯಿಸಿದುದ್ದಾಗಿದ್ದರೆ ಎರಡನೆಯದು ಒಂದೇಕಾರಕವು[೧೧೫] ಅನೇಕ ಕ್ರಿಯೆಗಳಿಗೆ ಸಂಬಂಧಿಸಿದ್ದರಿಂದ ಇವೆರಡು ಬಗೆಗಳಲ್ಲಿ ದೀಪವು ಸಂಭವಿಸುತ್ತದೆ.

**ಬಲಾವಲೇಪಾದಧುನಾಪಿ ಪೂರ್ವವತ್ಪ್ರಬಾಧ್ಯತೇ ತೇನ ಜಗಜ್ಜಿಗೀಷುಣಾ ।**
**ಸತೀ ಚ ಯೋಷಿತ್ಪ್ರಕೃತಿಸ್ಸು ನಿಶ್ಚಲಾ ಪ್ರಮಾಂಸಮಭ್ಯೇತಿ ಭವಾಂತರೇಷ್ವಪಿ** [೧೧೬]॥

"ಜಯಸಲಿಚ್ಚಿಸುವ ಆ ಶಿಶುಪಾಲನು ತನ್ನ ಸಾಮರ್ಥ್ಯದ ಗರ್ವದಿಂದ ಹಿಂದಿನಂತೆ ಈಗಿನ ಜನ್ಮದಲೂ ಸಹ ಜಗತ್ತೆಲ್ಲವನ್ನು ಬಹಳವಾಗಿ ಭಾಧಿಸುತ್ತಾನೆ. ಪತಿವ್ರತಾಸ್ತ್ರೀ ಮತ್ತು ನಿಶ್ಚಲವಾದ ಸ್ವಭಾವ ಇವೆರಡು ಬೇರೆ ಜನ್ಮಗಳಲ್ಲೂ ಸಹ ಪುರುಷನಿಗೆ ದೊರಕುತ್ತವೆ". ಇಲ್ಲಿ ನಿಶ್ಚಲಪ್ರಕೃತಿಯೇ ಪ್ರಕೃತವೆನಿಸಿದ್ದು ಪತಿವ್ರತಾಸ್ತ್ರೀಯಳು ಅಪಕೃತಳೆನಿಸಿರುವಳು. ಇವರಿಬ್ಬರೂ ಒಬ್ಬ ವ್ಯಕ್ತಿಯನ್ನು ಅನುಸರಿಸಿಕೊಂಡು ಹೋಗುವರೆಂದು ಇಬ್ಬರಿಗೂ ಒಂದೇ ಕ್ರಿಯೆಯ ಮೂಲಕ ಸಂಬಂಧವನ್ನು ಕಲ್ಪಿಸಲಾಗಿದೆ. ಆದ್ದರಿಂದ ಈ ಪದ್ಯವು ಅಪ್ರಕೃತ, ಪ್ರಕೃತ ಪದಾರ್ಥಗಳಿಗೆ ಸಾಧರ್ಮ್ಯ ವೈಧರ್ಮ್ಯಗಳಿಲ್ಲದಾಗ ಒಂದೇ ಬಗೆಯ ಸಂಬಂಧಕ್ಕೆ ಉದಾಹರಣೆಯಾಗಿದೆ.

**ದೂರಂ ಸಮಾಗತವತಿ ತ್ವಯಿಜೀವನಾಥೇ ಭಿನ್ನಾ**
**ಮನೋಭವಶರೇಣ ತಪಸ್ವಿನೀ ಸಾ ।**
**ಉತ್ತಿಷ್ಠತಿ ಸ್ಪೈಪಿತಿ ವಾಸಗೃಹಂ ತ್ವದೀಯಮಾಯಾತಿ**
**ಯಾತಿ ಹಸತಿ ಶ್ವಸಿತಿ ಕ್ಷಣೇನ** [೧೧೭]**॥**

ಪತಿಯ ಸಮೀಪದಲ್ಲಿ ನಾಯಿಕೆಯ ದೂತಿಯು ಹೇಳುವ ಮಾತಿದು. "ಪ್ರಾಣಪತಿ ಎನಿಸಿದ ನೀನು ದೂರದೇಶಕ್ಕೆ ಹೋಗಲು ದುಃಖದಲ್ಲಿರುವ ನಿನ್ನ ಪತ್ನಿಯು ಮನ್ಮಥನ ಬಾಣಕ್ಕೆ ಸಿಲುಕಿ ಒಂದು ಕ್ಷಣಕಾಲ ದಂಡದಂತೆ ಎದ್ದು ನಿಲ್ಲುವಳು, ಮತ್ತೊಂದು ಕ್ಷಣದಲ್ಲಿ ಮಲಗುವಳು, ಒಂದು ಕ್ಷಣದಲ್ಲಿ ನಿನ್ನ ವಾಸದಮನೆಗೆ ಬರುವಳು, ಮತ್ತೊಂದು ಕ್ಷಣದಲ್ಲಿ ಅಲ್ಲಿಂದ ಹೊರಡುವಳು. ಇಲ್ಲಿ ಒಬ್ಬ ನಾಯಿಕೆಯಲ್ಲಿಯೇ ಮೇಲಕ್ಕೆ ಏಳುವಿಕೆ ಮಲಗುವಿಕೆ ಮೊದಲಾದ ಅನೇಕ ಕ್ರಿಯೆಗಳ ಸಂಬಂಧವನ್ನು ಕಲ್ಪಿಸಿರುವುದರಿಂದ ಈ ಪದ್ಯದಲ್ಲಿ ಅಪ್ರಕೃತವಸ್ತುವಿನೊಡನೆ ಪ್ರಕೃತ ವಸ್ತುವಿಗೆ ಪ್ರಕೃತವಸ್ತುವಿನೊಡನೆ ಅಪ್ರಕೃತವಸ್ತುವನ್ನು ಸಾದರ್ಮ್ಯವನ್ನು ತಿಳಿಸುವ ಪದವಾಗಲೀ ವೈಧರ್ಮ್ಯವಾಗಲೀ ಇಲ್ಲದೇ ಒಂದೇ ಧರ್ಮದಲ್ಲಿ ಅನ್ವಯವನ್ನು ತಿಳಿಸುವ ಎರಡನೆ ಬಗೆಯ ದೀಪಕ ಅಲಂಕಾರಕ್ಕೆ ಉದಾಹರಣೆಯಾಗಿದೆ. ಇಲ್ಲಿ ಗುಣ ಕ್ರಿಯೆಗಳಲ್ಲಿ ಆದಿಮಧ್ಯ ಅವಸಾನಗಳಿರುವುದರಿಂದ ದೀಪಕದಲ್ಲಿ ಮತ್ತೆ ಮೂರು ಬಗೆಯಾಗಿ ಆ ಬಗೆಯ ವೈಚಿತ್ರ್ಯವು ಎಲ್ಲಾ ಕಡೆಗಳಲ್ಲೂ ಸಾವಿರಾರು ರೀತಿಗಳಲ್ಲಿ ಸಂಭವಿಸುವುದರಿಂದ ಇಲ್ಲಿ ಅವನ್ನು ವಿವೇಚಿಸಿಲ್ಲ.

## ೪. ವ್ಯತಿರೇಕಾಲಂಕಾರ

ವ್ಯತಿರೇಕ ಎಂದರೆ ಅಧಿಕ, ಹೆಚ್ಚಳ ಸಾಮಾನ್ಯವಾಗಿ ಉಪಮೇಯಕ್ಕಿಂತ ಉಪಮಾನವೇ ಮಿಗಿಲಾದದೆಂದು ತಿಳುವಳಿಕೆ. ಉಪಮಾನಕ್ಕಿಂತಲೂ ಉಪಮೇಯವು ಯಾವ ರೀತಿಯಿಂದಾದರೂ ಹೆಚ್ಚೆಂದೂ ಅಥವಾ ಕನಿಷ್ಠವೆಂದು ತಿಳಿಸುವುದೇ ವ್ಯತಿರೇಕವೆನಿಸಿದೆ. ಈ ವೈಧರ್ಮ್ಯವು ಉಪಮಾನಕ್ಕಿಂತ ಉಪಮೇಯದಲ್ಲಿ ಉತ್ಕರ್ಷವು, ಆರ್ಕಷಕವೊ ಆಗಿರುವುದಾಗಿದೆ. ಉಪಮಾನದಿಂದ ಉಪಮೇಯವು ಕೊಂಚ ವಿಷಮವಾಗಿ ಕಂಡು ಬರುವುದೇ 'ವ್ಯತಿರೇಕ'[೧೧೮]. ಉಪಮೇಯದ ಅಧಿಕ್ಯವನ್ನು ಎರಡು ರೀತಿಯಿಂದ ಹೇಳಬಹುದಾಗಿದೆ ಉಪಮೇಯದ ಉತ್ಕರ್ಷಕಾರಣ ಉಪಮಾನದ ಅಪಕರ್ಷಕಾರಣ ಈ ಎರಡೂ ಕಾರಣಗಳನ್ನು ಕೂಡದೇ, ಈ ಎರಡು ಕಾರಣಗಳು ಕೊಡುವುದು, ಒಂದನ್ನು ಮಾತ್ರ ಕೊಡುವುದು, ಇನ್ನೊಂದನ್ನು ಮಾತ್ರ ಕೂಡುವುದು, ಇಲ್ಲವೇ ಎರಡನ್ನೂ ಕೂಡವಿರುವುದು ಹೀಗೆ ವ್ಯತಿರೇಕದಲ್ಲಿ ನಾಲ್ಕು ಬಗೆಗಳಿವೆ ಈ ನಾಲ್ಕು ಬಗೆಗಳು ವ್ಯತಿರೇಕದಲ್ಲಿ ಸಾದೃಶ್ಯವನ್ನು ಶಬ್ದದಿಂದಲೂ, ಅರ್ಥದಿಂದಲೂ, ವ್ಯಂಜನೆಯಿಂದಲೂ ತಿಳಿಸುವುದರಿಂದ ಹನ್ನೆರಡು ಬಗೆಗಳಾಗುತ್ತವೆ.

ಈ ಹನ್ನೆರಡುಬಗೆಗೆಳಲ್ಲೂ ಶ್ಲೇಷದಿಂದ ಶ್ಲೇಷವಿಲ್ಲದೇ ವ್ಯತಿರೇಕವು ಇಪ್ಪತ್ತನಾಲ್ಕು ಬಗೆಗಳಾಗುತ್ತವೆ ಉಪಮಾನಕ್ಕಿಂತ ಉಪಮೇಯವು ಕನಿಷ್ಟವೆನಿಸಿದ ಕಡೆಯೂ ಇದೇ ರೀತಿಯಿಂದ ಆಗುವ ಇಪ್ಪತ್ತನಾಲ್ಕು ಬಗೆಗಳೊಡನೆ ವ್ಯತಿರೇಕಗಳಲ್ಲಿ ಒಟ್ಟು ನಲ್ವತ್ತೆಂಟು ಬಗೆಗಳಾಗುತ್ತವೆ. ಉಪಮಾನಕ್ಕಿಂತಲೂ ಉಪಮೇಯವು ಅಧಿಕವೆಂಬುದಕ್ಕೆ ಉದಾಹರಣೆ.

**ಅಕಳಂಕಂ ಮುಖಂ ತಸ್ಯಾ ನ ಕಳಂಕೀ ವಿಧುರ್ಯಥಾ**[೧೯]

"ಆಕೆಯ ನಿಷ್ಕಳಂಕವಾದ ಮುಖವು ಕಳಂಕಿ ಎನಿಸಿದ ಚಂದ್ರನಂತೆ ಇದೆ". ಇಲ್ಲಿ ಉಪಮೇಯವೆನಿಸಿದೆ ಮುಖದಲ್ಲಿ ಕಳಂಕವಿಲ್ಲವೆಂದೂ ಉಪಮಾನವೆನಿಸಿದ ಚಂದ್ರನಲ್ಲಿ ಕಳಂಕವಿದೆ ಎಂದು ಎರಡು ಹೇತುಗಳನ್ನು ಶಬ್ದದಿಂದಲೇ ತಿಳಿಸಿದೆ. 'ಯಥಾ' ಶಬ್ದದಿಂದ ಸಾದೃಶ್ಯವನ್ನು ತಿಳಿಸಿರುವ, ಇದು 'ಶಾಬ್ದ'ವೆನಿಸಿದೆ. ಇಲ್ಲಿ "ಮುಖವು ಕಳಂಕಿಯಾದ ಚಂದ್ರನಂತೆ ಇಲ್ಲ" ಎಂದು ಹೇಳುವುದಾದರೆ ಸಾಮ್ಯವು ಅರ್ಥದಿಂದ ತೋರುವುದರಿಂದ ವ್ಯತಿರೇಕಲಾಂಕಾರವು ಅರ್ಥವೆನಿಸುವುದು. ಇಲ್ಲಿ ಕಳಂಕವುಳ್ಳ ಚಂದ್ರನನ್ನು ಮುಖವು ಜಯಿಸುತ್ತದೆ ಎಂದು ಹೇಳುವುದಾದರೆ 'ಇವ' ಮೊದಲಾದ ಪದಗಳಂತೆ ತುಲ್ಯ ಮೊದಲಾದ ಪದಗಳಿಲ್ಲದ್ದರಿಂದ ವ್ಯತಿರೇಕವು ವ್ಯಂಗ್ಯವಾಗಿ ತೋರುವುದು. ಇಲ್ಲ 'ಅಕಳಂಕ' ಎಂಬ ಪದವನ್ನು ತೊರೆದರೆ ಉಪಮೇಯದಲ್ಲಿರುವ ಉತ್ಕರ್ಷಕ್ಕೆ ಕಾರಣವನ್ನು ತಿಳಿಸದೇ ಇದ್ದಂತಾಗುವುದು. ಇವೆರಡೂ ಪದವನ್ನು ತೊರೆದರೆ ಉಪಮೇಯದಲ್ಲಿರುವ ಉತ್ಕರ್ಷಕ್ಕೆ ತಿಳಿಸಿದಂತಾಗುವುದು. "ಚಿರಸ್ಥಾಯಿ ಎನಿಸಿದ ಸೌಂದರ್ಯ, ವಿನಯ ಮೊದಲಾದ ಗುಣಗಳು ಸೂತ್ರಗಳು ಇರುವ ನಾಯಿಕೆಯ ಗುಣಗಳು ಕಮಲದಂತೆ ಕಿತ್ತು ಹೋಗುವಂತಲ್ಲ' ಇಲ್ಲಿ ಇವ ಎಂಬ ಪದದ ಅರ್ಥದಲ್ಲಿ ವತಿಪ್ರತ್ಯಯವು ಬಂದಿರುವುದರಿಂದ ಔಪಮ್ಯವು ಶಾಬ್ದವೆನಿಸಿದೆ ಉಪಮೇಯವೆನಿಸಿದ ನಾಯಿಕೆಯ ಉತ್ಕರ್ಷಕ್ಕೆ ಕಾರಣವೆನಿಸಿದ ಚಿರಸ್ಥಾಯಿ ಎಂಬುದನ್ನೂ ಉಪಮಾನವೆನಿಸಿದ ಕಮಲದ ನಿಕೃಷ್ಟಕೆಗೆ ಕಾರಣವೆನಿಸಿದ ಚಿರಸ್ಥಾಯಿ ಎಂಬುದನ್ನೂ ಉಪವಮಾನವೆನಿಸಿದ ಕಮಲದ ನಿಕೃಷ್ಟತೆಗೆ ಕಾರಣವೆನಿಸಿದ ಭಂಗುರತ್ವವನ್ನೂ ಶಬ್ದದಿಂದಲೇ ತಿಳಿಸಲಾಗಿದೆ. ಇಲ್ಲಿ ಗುಣಶಬ್ದವನ್ನು ಶ್ಲೇಷದಿಂದ ಪ್ರಯೋಗಿಸಲಾಗಿದೆ. ಉಪಮಾನಕ್ಕಿಂತಲೂ ಉಪಮೇಯವು ಅಧಿಕವೆಂಬುದಕ್ಕೆ ಇವೆಲ್ಲವೂ ಉದಾಹರಣೆಯಾಗಿದೆ. ಇನ್ನು ಉಪಮಾನಕ್ಕಿಂತ ಉಪಮೇಯವು ಕನಿಷ್ಟವೆಂಬುದಕ್ಕೆ ಉದಾಹರಣೆ

**ಕ್ಷೀಣಃ ಕ್ಷೀಣೋ?ಪಿ ಶಶೀ ಭೂಯೋಽಭಿವರ್ಧತೇ ನಿತ್ಯಮ್ ।**
**ವಿರಮ ಪ್ರಸೀದ ಸುಂದರಿ ಯೌವನಮನಿವರ್ತಿ ಯಾತಂತು**[೨೦] ॥

ಪ್ರಿಯಕೋಪದಿಂದ ಪರಾಙ್ಮುಖಿಯಾದ ಪ್ರಿಯೆಗೆ ಪತಿ ಹೇಳುವ ಮಾತಿದು. "ಎಲೈ

ಸುಂದರಿ, ಚಂದ್ರನು ಕೃಷ್ಣಪಕ್ಷದಲ್ಲಿ ಪ್ರತಿದಿನವೂ ಕ್ಷೀಣನಾದರೂ ಶುಕ್ಲಪಕ್ಷದಲ್ಲಿ ಮತ್ತೆ ಮತ್ತೆ ವೃದ್ಧಿ ಹೊಂದುತ್ತಾನೆ. ಆದರೆ ಯೌವನವು ಕಳೆದುಹೋಗಿ ಮತ್ತೆ ಹಿಂತಿರುಗಿ ಬರುವಂತಿಲ್ಲ. ಆದ್ದರಿಂದ ಪ್ರಣಯಕೋಪವನ್ನು ಬಿಟ್ಟು ನನ್ನಗೆ ಪ್ರಸನ್ನಳಾಗು" ಇಲ್ಲಿ ಉಪಮಾನವೆನಿಸಿದ ಚಂದ್ರನು ಮತ್ತೆ ಮತ್ತೆ ವೃದ್ಧಿ ಹೊಂದುವುದನ್ನು ಅಧಿಕ್ಯದ ಹೇತುವೆಂದು, ಉಪಮೇಯ ವೆನಿಸಿದ ಯೌವನವು ತೊಲಗುವುದನ್ನು ನ್ಯೂನತೆಯ ಹೇತುವೆಂದೂ ಎರಡನ್ನೂ ತಿಳಿಸಲಾಗಿದೆ. ಇಲ್ಲಿ ಉಪಮಾನವೆನಿಸಿದ ಚಂದ್ರನ ಅಸ್ಥೈರ್ಯಕ್ಕಿಂತಲೂ ಉಪಮೇಯ ವೆನಿಸಿದ ಯೌವನದ ಅತ್ಮಸ್ಥೈರ್ಯವು ಹೆಚ್ಚುಕಾಲ ಇರುವಂತಹದು. ಆದ್ದರಿಂದ ಉಪಮಾನಕ್ಕಿಂತ ಉಪಮೇಯವು ಅಧಿಕವೆನಿಸಿದರೂ ಅಥವಾ ಅದಕ್ಕೆ ವಿರುದ್ಧವಾಗಿ ನ್ಯೂನವೆನಿಸಿದ್ದರೂ ವ್ಯತಿರೇಕಲಾಂಕರವೇ ಆಗುವುದು[೧೨೧]". 'ವಿಪರ್ಯಮೇವ' ಎಂಬ ಪದವನ್ನು ಲಕ್ಷಣದಲ್ಲಿ ಸೇರಿದು ಅಥ-ರ್ವಿಲ್ಲವೆಂದು ಅಲಂಕಾರಿಕರು ಹೇಳುತ್ತಾರೆ. ಇದು ಸರಿಯಲ್ಲ ಏಕೆಂದರೆ ವ್ಯತಿರೇಕದ ಲಕ್ಷಣದಲ್ಲಿ ಅಧಿಕ್ಯ ನ್ಯೂನತ್ವ ಇವು ಇರಬೇಕೆಂಬುದೇ ಉದ್ಭಟ ಮತ್ತು ವಿಶ್ವನಾಥನಿಗೆ ಸಮ್ಮತವೆನಿಸಿದೆ. ಚಂದ್ರನಿಗಿಂತಲೂ ಯೌವನವು ಮತ್ತೆ ವೃದ್ಧಿಯಾಗದೇ ಕ್ಷೀಣಃ ಕ್ಷೀಣಃ ಎಂಬ ಉದಾಹಾರಣದಲ್ಲಿ ಯೌವನವು ಸ್ಥಿರವಲದ್ದರಿಂದ ಅದನ್ನು ಉತ್ಕೃಷ್ಟವೆಂದು ತಿಳಿಸುವ ಮೂಲಕ ಲಕ್ಷಣವನ್ನು ಹೇಗೋ ಕಷ್ಟದಿಂದ ಅನ್ವಯಿಸಿಕೊಳ್ಳಬಹುದು.

**ಹನೂಮದಾದ್ಯೈರ್ಯಶಸಾ ಮಯಾ ಪುನರ್ದ್ವಿಷಾಂ ಹಸೈರ್ದೂತಪಥಃ**
**ಸಿತೀಕೃತಃ[೧೨೨]॥**

"ಹನುಮಂತನೇ ಮೊದಲಾದವರು ತಮ್ಮ ದೂತ ವೃತ್ತಿಯನ್ನು ನಿರ್ಮಲಗೊಳಿಸಿ ಕೊಂಡರು. ನಾನಾದರೋ ನನ್ನ ದೂತವೃತ್ತಿಯಲ್ಲಿ ಶತ್ರುಗಳಿಗೆ ನಗುವಂತೆ ಮಾಡಿಕೊಂಡೆನು". ಹೀಗೆ ನಳನು ದಮಯಂತಿಯ ಎದುರಿಗೆ ತನನ್ನು ಪ್ರಕಾಶಪಡಿಸುತ್ತ ದೈನ್ಯದಿಂದ ತಿಳಿಸುವನು. ಇಲ್ಲಿ ಉಪಮಾನವೆನಿಸಿದ ಹನುಮಂತನಿಗಿಂತಲೂ ಉಪಮೇಯವೆನಿಸಿದ ನಳನಲ್ಲಿ ಅಪಕರ್ಷವು ತೋರುವುದರಿಂದ ವ್ಯತಿರೇಕವನ್ನೇ ಹೇಳಬೇಕು ಆದರೆ ಅದು 'ವಿಪರ್ಯಯೇವಾ' ಎಂಬುದನ್ನು ಲಕ್ಷಣದಲ್ಲಿ ಸೇರಿಸದೇ ಇದ್ದರೆ ಸಂಭವಿಸುವುದೇಇಲ್ಲ ಅದಕ್ಕಾಗಿಯೇ 'ವಿಪರ್ಯಾಯೇವಾ' ಎಂಬುದನ್ನು ಅಲ್ಲಿ ಸೇರಿಸಿದ್ದು ಯುಕ್ತವೆನಿಸಿದೆ ಎಂಬುದು ದರ್ಪಣಕಾರನ ಮತವಾಗಿದೆ.

### ೫. ಸ್ವಭಾವೋಕ್ತಿ ಅಲಂಕಾರ

ಒಂದು ವಸ್ತುವಿಗೆ ಸಂಬಂಧಿಸಿದ ಸಹಜವಾದ ಕ್ರಿಯೆಗಳನ್ನು ರೂಪವನ್ನು ವರ್ಣಿಸುವುದು. ಸ್ವಭಾವೋಕ್ತಿ [೧೨೩]ಎನಿಸಿದೆ. ಪ್ರತಿಭಾವಂತರಿಗೆ ಮಾತ್ರವೇ ತಿಳಿಯುವಂತಿ-ದ್ದು ಸ್ಥೂಲಮತಿಗಳಿಗೆ ತಿಳಿಯದಕ್ಕೆ ಆಗದೇ ಇರುವ ಪಶುಪಕ್ಷಿ ಮೊದಲಾದ ಪ್ರಾಪಂಚಿಕ ವಸ್ತುಗಳನ್ನು ಮತ್ತು ಅವುಗಳಲ್ಲಿನ ಸಹಜವಾದ ಚೇಷ್ಟೇಗಳನ್ನು ವರ್ಣಿಸುವುದೇ ಸ್ವಭಾವೋಕ್ತಿ ಎಂಬ ಅಲಂಕಾರವಾಗಿದೆ. ಉದಾಹರಣೆಗೆ

**ಗೋರಪತ್ಯಂ ಬಲಿವರ್ದೋ ಘಾಸಮತ್ತಿ ಮುಖೇನ ಸಃ ।**
**ಲಾಂಗೂಲಂ ವಿದ್ಯತೇ ತಸ್ಯ ಶಂಖಂ ಚಾಪಿ ಚ ವಿಧ್ಯತೇ[೧೨೪] ॥**

ಇಲ್ಲಿ ತಿಳಿಸಿರುವ ವೃಷಭದ ಸಹಜವಾದ ಚೇಷ್ಟೆ "ಕೋಪದಿಂದ ಕೂಡಿ ಕಣ್ಣನ್ನು ಕೆಂಪಗೆ ಅರಳಿಸಿಕೊಂಡಿರುವ ಈ ಹುಲಿಯು ಬಾಲದಿಂದ ಭೂಮಿಯನ್ನು ಬಡಿಯುತ್ತಾ ಕಾಲಿನ ತುದಿಯಿಂದ ಬಾರಿಬಾರಿಗೂ ನೆಲವನ್ನೇ ಬಗಿಯುತ್ತ ದೇಹವನ್ನು ಕುಗ್ಗಿಸಿಕೊಂಡು ಆ ಕೂಡಲೇ ಬೇಗನೆ ಸಾಹಸದಿಂದ ಆಕಾಶಕ್ಕೆ ಅಡರುತ್ತ ಗಟ್ಟಿಯಾಗಿ ಹುಂಕರಿಸುತ್ತಾ ಎಲ್ಲಾ ದಿಕ್ಕುಗಳಲ್ಲೂ ಪ್ರಾಣಿಗಳನ್ನು ಭಯಪಡಿಸಿ ಓಡಿಸುತ್ತ ಪ್ರತಿಯೊಂದು ಕಾಡಿಗೂ ಪ್ರವೇಶಿಸಿತು". ಇಲ್ಲಿ ಕೋಪಗೊಂಡ ಹುಲಿಯ ಸ್ವಾಭಾವಿಕವಾದ ಕ್ರಿಯೆ ಮತ್ತು ಆಕಾರ ಗಳನ್ನು ವರ್ಣಿಸಿರುವುದರಿಂದಲೂ, ಅಂತಹ ವರ್ತನೆ ಬೇರೆ ಪ್ರಾಣಿಗಳಲ್ಲಿ ಇಲ್ಲದಿರುವುದ ರಿಂದಲೂ, ಇಂತಹ ಕ್ರಿಯೆ ಸಿಂಹದಲ್ಲಿ ಮಾತ್ರವೇ ಇರುವುದರಿಂದಲೂ, ಹೀಗೆ ವರ್ಣಿಸಿದ್ದು ಸ್ವಭಾವೋಕ್ತಿ ಎನಿಸಿದೆ. ಇಲ್ಲಿ ಒಂದು ಕ್ರೂರಮೃಗದ ಸ್ವಭಾವವನ್ನು ವರ್ಣಿಸಿದೆಯಾದ್ದರಿಂದ ಈ ಪದ್ಯವು ಸ್ವಭಾವೋಕ್ತಿ ಅಲಂಕಾರಕ್ಕೆ ಉದಾಹರಣೆಯಾಗಿದೆ.

ಸ್ವಭಾವೋಕ್ತಿಯನ್ನು ಒಂದು ಅಲಂಕಾರವೆನ್ನಬೇಕೇ ಇಲ್ಲವೇ ಎಂಬ ಚರ್ಚೆಯು ಸಂಸ್ಕೃತ ಅಲಂಕಾರಶಾಸ್ತ್ರದಲ್ಲಿ ಬಹಳ ಪ್ರಾಚೀನವಾಗಿದೆ. ಭಾಮಹನು ಸ್ವಭಾವೋಕ್ತಿಯನ್ನು ಒಂದು ಅಲಂಕಾರವೆಂದು ಒಪ್ಪದೇ[೧೨೫] ಅದನ್ನು ತಾನು ಹೇಳುವ ವಕ್ರೋಕ್ತಿಅಲಂಕಾರದಿಂದ ಬೇರೆ ಮಾಡಿ ವಿವರಿಸಿದ್ದಾನೆ. ಆದರೆ ದಂಡಿಯು ಸ್ವಭಾವೋಕ್ತಿಯನ್ನು ಒಂದು ಅಲಂಕಾರವೆಂದು ಒಪ್ಪಿ ಸ್ವಭಾವೋಕ್ತಿಯಿಂದ ವಕ್ರೋಕ್ತಿಯನ್ನು ಬೇರ್ಪಡಿಸಿ ಹೇಳಿದ್ದಾನೆ[೧೨೬]. ಕಾವ್ಯದಲ್ಲಿ ಸ್ವಭಾವೋಕ್ತಿ ಎಂಬ ಅಲಂಕಾರವು ವಕ್ರೋಕ್ತಿಗಳೆನಿಸಿಕೊಳ್ಳುವ ಇತರ ಅಲಂಕಾರಗಳಲ್ಲೊಂದಾದ ಶ್ಲೇಷವು ಉಳಿದವುಗಳ ಅಂದವನ್ನು ಹೆಚ್ಚಿಸುತ್ತವೆಂಬುದು ದಂಡಿ ಮಾತಿನ ತಾತ್ಪರ್ಯವಾಗಿದೆ[೧೨೭]. ಇನ್ನು ಭಾಮಹನ ಅನುಯಾಯಿಯಾದ ಕುಂತಕನು ಸ್ವಭಾವೋಕ್ತಿಯು ಅಲಂಕಾರ್ಯವೇ ಹೊರತು ಅಲಂಕಾರವಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತಾನೆ[೧೨೮]. ವಸ್ತುಸ್ವಭಾವವನ್ನು ಇದಕ್ಕಿದ್ದಂತೆ ಹೇಳಿದರೆ ಕಾವ್ಯಾಲಂಕಾರವಾಗುವುದು ಸಾಧ್ಯವೇ ಎಂದು ಮಹಿಮಭಟ್ಟನು ಬಹುಸೂಕ್ಷ್ಮವಾಗಿ ವಿವರಿಸಿದ್ದಾನೆ. ಅವನ ಪ್ರಕಾರ ವಸ್ತುಗಳ ಸ್ವರೂಪದಲ್ಲಿ ಎರಡು ಅಂಶಗಳಿರುತ್ತವೆ. ಒಂದು ಎಲ್ಲರಿಗೂ ಅಪಾತತಃ ತೋರುವಂತಹ ಸಾಮಾನ್ಯಾಂಶ, ಇನ್ನೊಂದು ಪ್ರತಿಭಾವಂತರಾದ ಕವಿಗಳಿಗೆ ಮಾತ್ರ ಗೋಚರವಾಗತಕ್ಕ ವಿಶಿಷ್ಟಾಂಶ ಹೀಗೆ ಶಿವನ ಮೂರನೆಯ ಕಣ್ಣಿನಂತೆ ಸಕಲ ವಸ್ತುಗಳ ವಿಶಿಷ್ಟ ಅಂಶವನ್ನು ಗ್ರಹಿಸಬಲ್ಲ ಕವಿಯೇ ಪ್ರತಿಭೆ. ಹೀಗೆ ಪ್ರತಿಭೆಯ ಕಣ್ಣಿಗೆ ಮಾತ್ರ ಕಾಣತಕ್ಕ ವಿಶಿಷ್ಟವಸ್ತುಸ್ವಭಾವವೇ ಸ್ವಭಾವೋಕ್ತಿ ಅಲಂಕಾರದ ವಿಷಯವೆಂದು ಭಾವಿಸಬಹುದು. ಸುಮ್ಮನೆ ವಸ್ತುವನ್ನು ಅನುವಾದ ಮಾಡಿದರೆ ಪಾದಪೂರಣಕ್ಕಿಂತ ಹೆಚ್ಚಿನ ಲಾಭವೇನು ಇಲ್ಲ. ಹೀಗೆ

ಸ್ವಭಾವೋಕ್ತಿಯ ಬಗ್ಗೆ ಅದು ಒಂದು ಅಲಂಕಾರವೇ ಅಲ್ಲವೇ ಎಂಬುದಕ್ಕೆ ಭಾಮಹ ಕುಂತಕ ಮಹಿಮಭಟ್ಟರಂತಹ ಅಲಂಕಾರಿಕರು ಹೇಳಿರುವ ಅಭಿಪ್ರಾಯವನ್ನು ತಿಳಿಸಲಾಗಿದೆ. ಆದರೆ ದಂಡಿಯು ಭಾಮಹನು ಹೇಳುವ ವಕ್ರೋಕ್ತಿ ಅಲಂಕಾರಕ್ಕೆ ಅನ್ವಹಿಸಲಾರದೆಂದು ಹೇಳಿದ್ದಾನೆ. ಆದರೂ ಮಮ್ಮಟ, ವಿಶ್ವನಾಥ ಮುಂತಾದ ಅಲಂಕಾರಿಕರು ಸ್ವಭಾವೋಕ್ತಿ ಅಲಂಕಾರವನ್ನು ಅರ್ಥಾಲಂಕಾರಗಳಲ್ಲಿ ಒಂದನ್ನಾಗಿ ವಿವರಿಸಿದ್ದಾರೆ.

## ೬. ಮೀಲಿತ ಅಲಂಕಾರ

ಅನುರೂಪವಾದ ವಸ್ತುಗಳಲ್ಲಿರುವ ಸಮಾನವೆನಿಸಿದ ಬೇರೊಂದು ವಸ್ತುವನ್ನು ತಿರಸ್ಕರಿಸುವುದೇ ಮೀಲಿತವೆಂಬ ಅಲಂಕಾರವೆನಿಸಿದೆ. ಉತ್ಕೃಷ್ಟಗುಣದಿಂದ ನಿಕೃಷ್ಟಗುಣ ವನ್ನು ಮುಚ್ಚುವುದರಿಂದ ಮೀಲಿತವೆನಿಸಿದ್ದರಿಂದ ಇದು ಸಾಮಾನ್ಯಾಲಂಕಾರಕ್ಕಿಂತ ಬೇರೆ ಎನಿಸಿದೆ. ಸಮಾನವೆನಿಸಿದ ವಸ್ತುವೆ ಕೆಲವುವೇಳೆ ಸ್ವಾಭಾವಿಕವಾಗಿದ್ದು ಕೆಲವುವೇಳೆ ಆಕಸ್ಮಿಕವಾಗಿ ತೋರುವುದು ಮೀಲಿತದ ಲಕ್ಷಣವಾಗಿದೆ. ಸ್ವಾಭಾವಿಕ ವಸ್ತುವಿನಿಂದ ಬೇರೊಂದು ವಸ್ತುವಿನ ತಿರಸ್ಕಾರಕ್ಕೆ ಉದಾಹರಣೆ

**ಲಕ್ಷ್ಮೀ ವಕ್ಷೋಜಕಸ್ತೂರೀಲಕ್ಷ್ಮ ವಕ್ಷಸ್ಥಳೇ ಹರೇಃ ।**
**ಗ್ರಸ್ತಂ ನಾಲಕ್ಷ್ಮಿಭಾರತ್ಯಾ ಭಾಸಾ ನೀಲೋತ್ಪಲಾಭಯಾ** [೧೨೯]॥

"ಲಕ್ಷ್ಮಿಯ ಸ್ತನಗಳನ್ನು ಆಲಂಗಿಸಿದ್ದರಿಂದ ಅಂಟಿಕೊಂಡ ಕಸ್ತೂರಿಯ ಗುರುತು ಕನ್ನೈದಿಲೆಗೆ ಸಮಾನವಾದ ಕೃಷ್ಣನ ದೇಹಕಾಂತಿಯಿಂದ ತಿರಸ್ಕೃತವಾಯಿತೆಂಬುದು ಲಕ್ಷ್ಮಿಯ ಸವತಿ ಎನಿಸಿದ ಸರಸ್ವತಿಯು ಗಮನಿಸಲಿಲ್ಲ. ಆದ್ದರಿಂದಲೇ ಆಕೆಗೆ ಕೋಪವು ಹುಟ್ಟಲಿಲ್ಲ". ಇಲ್ಲಿ ಕೃಷ್ಣನಲ್ಲಿ ಕಪ್ಪುಬಣ್ಣವು ಸ್ವಾಭಾವಿಕವೆನಿಸಿದೆ. ಕಸ್ತೂ-ರಿಯ ಕಪ್ಪುಬಣ್ಣಕ್ಕಿಂತಲೂ ಉತ್ಕೃಷ್ಟವೆನಿಸಿದ ಕೃಷ್ಣನಲ್ಲಿ ಸಹಜವಾಗಿರುವ ಕಪ್ಪುಬಣ್ಣವು ದೇಹಪ್ರಭೆಯಿಂದ ಕಸ್ತೂರಿಯ ಗುರುತನ್ನು ತಿರಸ್ಕರಿಸಿದ್ದರಿಂದ ಇದು. ಮೀಲಿತವೆನಿಸಿದೆ. ಕೃಷ್ಣನು ಲಕ್ಷ್ಮಿಯನ್ನು ಆಲಂಗಿಸಿದಾಗ ಆಕೆಯ ಸ್ತನಗಳಲ್ಲಿ ಹಚ್ಚಿದ ಕಸ್ತೂರಿಯ ಗುರುತು ಅವನ ದೇಹದಲ್ಲಿ ಅಂಟಿತ್ತು. ಆದರೂ ದೇಹಪ್ರಭೆಯು ಆ ಗುರುತನ್ನು ತಿರಸ್ಕರಿಸಿತೆಂದು ಇಲ್ಲಿ ಹೇಳಿದ್ದರಿಂದ ಇದು ಸ್ವಾಭಾವಿಕವಸ್ತುವಿನಿಂದ ಬೇರೊಂದುವಸ್ತುವಿನ ತಿರಸ್ಕಾರಕ್ಕೆ ಉದಾಹರಣೆಯಾಗಿದೆ. ಇನ್ನು ಆಕಸ್ಮಿಕವಾಗಿ ತೋರುವ ಮೀಲಿತಕ್ಕೆ ಉದಾಹರಣೆ

**ಸದೇವ ಶೋಣೋಪಲಕುಂಡಲಸ್ಯ ಯಸ್ಯಾಂ ಮಯೂಖೈರರುಣೀಕೃತಾನಿ ।**
**ಕೋಪೋಪಕ್ಯಾನ್ಯಪಿ ಕಾಮಿನೀನಾಂ ಮುಖಾನಿ ಶಂಕಾಂ**
**ವಿದಧುರ್ನಯೂನಾಮ್**[೧೩೦] ॥

"ಯಾವ ನಗರದಲ್ಲಿ ಕೆಂಪು ಬಣ್ಣದ ಮಣಿಯಿಂದ ನಿರ್ಮಿತವಾದ

ಕರ್ಣಾಭರಣದ ಪ್ರಭೆಯಿಂದ ಯಾವಾಗಲೂ ಕೆಂಪಗಿದ್ದ ಕಾಮಿನಿಯರ ಮುಖಗಳು ಪ್ರಣಯಕೋಪದಿಂದ ಕೆಂಪಾಗಿದ್ದರೂ ಯುವಕರಿಗೆ ಭಯವನ್ನು ಹುಟ್ಟಿಸಲಿಲ್ಲ. ಅಂತಹ ಕರ್ಣಾಭರಣದಿಂದಲೇ ಅವರಲ್ಲಿ ಹೀಗೆ ಕೆಂಪುಬಣ್ಣವಿತ್ತೆಂದು ಯುವಕರು ನಿಶ್ಚಯಿಸಿದರು". ಇಲ್ಲಿ ಮುಖದಲಿ ಕರ್ಣಕುಂಡಲ ಆಕಸ್ಮಿಕವಾಗಿ ಬಂದಿರುವ ಕೆಂಪು ಪ್ರಣಯಕೋಪದಿಂದ ಬರುವ ಕೆಂಪಿಗಿಂತಲೂ ಉತ್ಕೃಷ್ಟವೆನಿಸಿದ್ದರಿಂದ ಅದನು ತಿರಸ್ಕರಿಸಿತೆಂದು ಹೇಳಿರುವುದರಿಂದ ಇದು ಮೀಲಿತವೆಂಬ ಅಲಂಕಾರವಾಗಿದೆ.

**೭. ಸಮಾನ ಅಲಂಕಾರ:**

ಸಮಾನ ಗುಣಗಳಿರುವ ಪ್ರಕೃತ ವಸ್ತು ಒಂದನ್ನು ಬೇರೆಯಲ್ಲವೆಂದು ತಿಳಿಯುವುದ ಸಮಾನ ಅಲಂಕಾರವಾಗಿದೆ. ಸಮಾನಗುಣದಿಂದ ಪ್ರಕೃತಾಪ್ರಕೃತ ವಸ್ತುಗಳಿಗೆ ಅಭೇದವನ್ನು ತಿಳಿಯುವುದನ್ನು ಸಾಮಾನ್ಯವೆಂದು ಹೇಳಲಾಗಿದೆ. ಉದಾಹರಣೆಗೆ

**ಮಲ್ಲಿಕಾಚಿತಧಮ್ಮಿಲ್ಲಾಶ್ಚಾರುಚಂದನ ಚರ್ಚಿತಾಃ ।**
**ಅವಿಭಾವ್ಯ ಸುಖಂ ಯಾಂತಿ ಚಂದ್ರಿಕಾಸ್ವಭಿಸಾರಿಕಾಃ** ೧೩೧॥

"ಮಲ್ಲಿಗೆ ಹೂಗಳನ್ನು ಕೂದಲಿಗೆ ಮುಡಿದುಕೊಂಡು ಶ್ರೀಗಂಧವನ್ನು ಮೈಗೆ ಹಚ್ಚಿಕೊಂಡು ಬೆಳದಿಂಗಳಿನಂತೆ ಇರುವುದರಿಂದ ಜನರಿಗೆ ಗುರುತಿಸಲಿಕ್ಕೆ ಆಗದೆ ಇರುವ ಅಭಿಸಾರಿಕೆಯರು [ಪತಿಯನ್ನು ಹುಡುಕಿಕೊಂಡು ಹೋಗುವ ಸ್ತ್ರೀಯರು] ಬೆಳದಿಂಗಳಿನಲ್ಲಿ ಅನಾಯಾಸವಾಗಿ ಪತಿಯ ಬಳಿಗೆ ಹೋಗುವರು". ಇಲ್ಲಿ ಪ್ರಕೃತರೆನಿಸಿದ ಅಭಿಸಾರಿಕೆ ಯರಿಗೂ ಅಪ್ರಕೃತವಾದ ಬೆಳದಿಂಗಳಿಗೂ ಬಿಳಿಯಬಣ್ಣವು ಸಹಜವಾಗಿರುವುದರಿಂದ ಇವೆರಡಕ್ಕೂ ಅಭೇದವು ತೋರುವುದರಿಂದ ಇದು ಸಾಮಾನಲಂಕಾರವೆನಿಸಿದೆ. ಮೀಲಿತದಲ್ಲಿ ಉತ್ಕೃಷ್ಟವಾದ ಗುಣವು ನಿಕೃಷ್ಟವಾದ ಗುಣವನ್ನು ಮುಚ್ಚುತ್ತದೆ. ಆದರೆ ಇಲ್ಲಿ ಎರಡು ವಸ್ತುಗಳಲ್ಲೂ ಸಮಾನವಾದ ಗುಣವಿರುವುದರಿಂದ ಅವೆರಡಕ್ಕೂ ಬೇದ ಕಂಡುಬರುವುದಿಲ್ಲ.

ಶಬ್ದಕ್ಕೂ ಅರ್ಥಕ್ಕೂ ಸಂಬಂಧಿಸಿದ ಅಲಂಕಾರಗಳನ್ನು ವಿವೇಚಿಸಲಾಯಿತು. ಇನ್ನು ರಸಭಾವ ಮೊದಲಾದವುಗಳಿಗೆ ಸಂಬಂಧಿಸಿದಂತೆ ಅಲಂಕಾರಗಳನ್ನು ವಿವೇಚಿಸಲಾಗಿದೆ.

**ರಸಭಾವೌ ತದಾಭಾಸೌ ಭಾವಸ್ಯ ಪ್ರಶಮಸ್ತಥಾ ।**
**ಗುಣೀಭೂತತ್ವಮಾಯಾಂತಿ ಯದಾಲಂಕೃತಯಸ್ತದಾ ॥**
**ರಸವತ್ ಪ್ರೇಯ ಊರ್ಜಸ್ವಿ ಸಮಾಹಿತಮಿತಿ ಕ್ರಮಾತ್ ।**

"ರಸಭಾವಗಳು, ರಸಾಭಾಸ, ಭಾವಭಾಸ, ಭಾವಶಾಂತಿಯು ಬೇರೊಂದು ರಸದ ದೃಷ್ಟಿಯಿಂದ ಅಪ್ರಧಾನವಾಗಿರುವುದರಿಂದ ರಸವತ್, ಪ್ರೇಯಸ್ಸ, ಊರ್ಜಸ್ವಿ, ಸಮಾಹಿತವೆಂಬ ನಾಲ್ಕು ಅಲಂಕಾರಗಳು ಕ್ರಮವಾಗಿ ಉಂಟಾಗುತ್ತವೆ". ಒಂದು

ರಸವು ಮತ್ತೊಂದು ರಸಕ್ಕೂ ಭಾವಕ್ಕೂ ಅಂಗವಾಗಿರುವುದೇ ಪ್ರೇಯೋಲಂಕಾರ ರಸಭಾಸವಾಗಲಿ ಭಾವಾಭಾಸವಾಗಲಿ ಒಂದು ರಸಕ್ಕೂ ಭಾವಕ್ಕೂ ಅಂಗವಾಗಿರುವುದೇ ಊರ್ಜಸ್ವಿ ಎಂಬ ಅಲಂಕಾರ ಮತ್ತು ಒಂದು ಭಾವದ ಶಮವು ಮತ್ತೊಂದು ಭಾವಕ್ಕಾಗಲೀ ರಸಕ್ಕಾಗಲಿ ಅಂಗವಾಗಿರುವುದೇ ಸಮಹಿತವೆಂಬ ಅಲಂಕಾರವೆನಿಸಿದೆ.

## ೧. ರಸವದ್ ಅಲಂಕಾರ

ಇವುಗಳಲ್ಲಿ ಒಂದು ರಸವು ಮತ್ತೊಂದು ರಸಕ್ಕೆ ಅಂಗವಾಗಿರುವುದು. ಉದಾಹರಣೆಗೆ 'ಅಯಂಸ ರಸನೋತ್ಕರ್ಷೀಃ' ಇಲ್ಲಿ ಶೃಂಗಾರರಸವು ಕರಣರಸಕ್ಕೆ ಅಂಗವಾಗಿರುವುದರಿಂದ ಇದು ರಸವದ್ ಅಲಂಕಾರವೆನಿಸಿದೆ.

## ೨. ಪ್ರೇಯೋಲಂಕಾರ

ಒಂದು ಭಾವವು ಬೇರೊಂದು ಭಾವಕ್ಕೂ ಅಂಗವಾಗಿರುವುದರಿಂದ ಪ್ರೇಯೋ ಅಲಂಕಾರ ಎನಿಸಿದೆ. ಉದಾಹರಣೆಗೆ

> **ಅಮೀಲಿತಾಲಸವಿವರ್ತಿತತಾರಕಾಕ್ಷೀ ಮಕ್ಕೃಂಠಬಂಧನದರಶ್ಲಥ ಬಾಹುವಲ್ಲೀಮ್।**
> **ಪ್ರಸ್ವೇದವಾರಿಕಣಿಕಾಚಿತ ಗಂಡಬಿಂಬಾಂ ಸಂಸ್ಮೃತ್ಯತಾಮನಿಶಮೇತಿನ**
> **ಶಾಂತಿಮಂತ್ರ**[೧೩೨] ॥

ಸಖಿಯ ಸಮೀಪದಲ್ಲಿ ವಿರಹಿಯು ಹೇಳುವ ಮಾತಿದು. "ಕಣ್ಣುಗುಡ್ಡೆಗಳನ್ನು ಕೊಂಚ ಮುಚ್ಚಿಕೊಂಡು ಮೆಲ್ಲಮೆಲ್ಲಗೆ ತೆರೆಯುತ್ತಿದ್ದು ನನ್ನ ಕುತ್ತಿಗೆಯನ್ನು ಆಲಿಂಗಿಸುವುದರಲ್ಲಿ ತೋಳುಗಳು ಕೊಂಚ ಶಿಥಿಲವಾಗಿದ್ದು ಸುರತ ಪರಿಶ್ರಮದಿಂದ ಹುಟ್ಟಿದ ಬೆವ–ರಿನ ಹನಿಗಳಿಂದ ಕೆನ್ನೆಗಳೆರಡೂ ತುಂಬಿಕೊಂಡಿರಲು ಅಂತಹ ಪ್ರಿಯತೆಮಯನ್ನು ಸ್ಮರಿಸುತ್ತಿರುವ ನನ್ನ ಅಂತಃಕರಣವು ಶಾಂತಿಯನ್ನು ಹೊಂದುವುದಿಲ್ಲ". ಇಲ್ಲಿ ಸಂಭೋಗಶೃಂಗಾರವು ಸ್ಮರಣವೆಂಬ ಭಾವಕ್ಕೆ ಅಂಗವೆನಿಸಿದೆ ಆ ಸ್ಮರಣವು ಪ್ರವಾಸವೆಂಬ ವಿಪ್ರಲಂಭಶೃಂಗಾರಕ್ಕೆ ಅಂಗವೆನಿಸಿದೆ. ಹೀಗೆ ಭಾವವು ರಸಕ್ಕೆ ಅಂಗವಾಗಿರುವುದರಿಂದ ಇಲ್ಲಿ ಪ್ರೇಯೋಅಲಂಕಾರವಿದೆ ಸಂಭೋಗಶೃಂಗಾರವು ಕರುಣಭಾವಕ್ಕೆ ಅಂಗವಾಗಿರುವುದರಿಂದ ಇಲ್ಲಿ ರಸವದ್ ಅಲಂಕಾರವೂ ಇದೆ ಮತ್ತು ಇವೆರಡಕ್ಕೂ ಅಂಗಾಂಗಿಭಾವದಿಂದ ಸಾಂಕರ್ಯವೂ ಇದೆ.

## ೩. ಊರ್ಜಸ್ವಿಅಲಂಕಾರ

ರಸಾಭಾಸಭಾವಭಾಸಗಳು ಬೇರೊಂದು ರಸಕ್ಕೂ ಭಾವಕ್ಕೂ ಅಂಗವಾಗಿದ್ದರೆ ಅದು ಊರ್ಜಸ್ವಿ ಅಲಂಕಾರ. ರಸಭಾವಗಳು ಅನುಚಿತ ಪ್ರಸಂಗದಲ್ಲಿ ಪ್ರವರ್ತಿಸಿದಾಗಲೂ ಚಮತ್ಕಾರವಿರುವುದಾದರೆ ಅದರಲ್ಲಿ ಒಂದು ಬಗೆಯ ಒಲವಿರುವುದರಿಂದ ಅದು ಊರ್ಜಸ್ವಿ ಎಂಬ ಅಲಂಕಾರವೆನಿಸಿದೆ. ಉದಾಹರಣೆಗೆ

**ವನೇಽಖಿಲಕಲಾಸಕ್ತಾಃ ಪರಿಹೃತ್ಯ ನಿಜಸ್ತ್ರೀಯಃ ।**
**ತ್ವದ್ವೈರಿವನಿತಾವೃಂದೇ ಪುಲಿಂದಾಃ ಕುರ್ವತೇ ರತಿಮ್**[೧೩೩]**॥**

"ಎಲೈ ರಾಜನೇ, ಕಾಡಿನಲ್ಲಿ ಬೇಡರು ನೃತ್ಯಗೀತಾದಿಕಲೆಗಳಲ್ಲಿ ಆಸಕ್ತರಾಗಿದ್ದರೂ ತಮ್ಮ ಸ್ತ್ರೀಯರನ್ನು ತೊರೆದು ಶತ್ರುಸ್ತ್ರೀಯರಲ್ಲಿ ಸುರತವನ್ನಾಚರಿಸುತ್ತಾರೆ". ಇಲ್ಲಿ ಶೃಂಗಾರ ರಸವು ಪರಸ್ತ್ರೀವಿಷಯಕವಾದ್ದರಿಂದ ಅಭಾಸವೆನಿಸಿದ್ದು ರಾಜ ವಿಷಯಕವಾದ ರತಿಗೆ ಅಂಗವಾಗಿದೆ. ಹೀಗೆಯೇ ಭಾವಾಭಾಸವು ಬೇರೊಂದು ರಸಕ್ಕೆ ಅಂಗವಾಗಿದ್ದ-ರಿಂದ ಊರ್ಜಸ್ವಿ ಎಂಬ ಅಲಂಕಾರವಾಗಿದೆ.

### ೪. ಸಮಾಹಿತ ಅಲಂಕಾರ

ಒಂದು ಭಾವವು ಕೊನೆಗೊಳ್ಳುವುದೇ ಭಾವಪ್ರಶಮ ಎನಿಸಿದೆ. ಅದು ಬೇರೊಂದು ಭಾವಕ್ಕೆ ಅಂಗವಾಗಿದ್ದರೆ ಸಮಾಹಿತವೆನಿಸುವುದು ಸಮಾಹಿತವೆಂದರೆ ಭಾವಸಮಾಪ್ತಿ ಎಂದರ್ಥ. ಉದಾಹರಣೆಗೆ.

**ಅವಿರಳ ಕರಬಾಲ ಕಂಪನೈರ್ಭ್ರುಕುಟಿತರ್ಜನಗರ್ಜನೈರ್ಮುಹುಃ ।**
**ದದೃಶೇ ತವ ವೈರಿಣಾಂ ಮದಃ ನಗತಃ ಕ್ವಾಪಿ ತವೇಕ್ಷಣೇ ಕ್ಷಣಾತ್**[೧೩೪] **॥**

"ಎಲೈ ರಾಜನೇ, ನಿನ್ನ ಶತ್ರುಗಳಿಗೆ ನಿರಂತರವು ಕತ್ತಿಗಳನ್ನು ಅಳ್ಳಾಡಿಸುವುದ-ರಿಂದಲೂ, ಉಬ್ಬುಗಂಟುಗಳಿಂದಲೂ ನಿನ್ನ ಪಕ್ಷವನ್ನು ಉದ್ದೇಶಿಸಿ ಗರ್ಜಿಸುವುದ-ರಿಂದಲೂ ಮದವು ಬಾರಿ ಬಾರಿಗೂ ಕಂಡುಬರುತ್ತದೆ ಆದರೆ ಅವರು ನಿನ್ನ ಎದುರಿಗೆ ನಿಂತಾಗ ಆ ಮದವು ಕ್ಷಣಕಾಲದಲ್ಲಿಯೇ ಕಣ್ಮರೆಯಾಗುತ್ತದೆ". ಇಲ್ಲಿ ಮದವೆಂಬ ಭಾವವು ಕೊನೆಗೊಳ್ಳುವುದರಿಂದ ಈ ಭಾವವು ಶಮವೆನಿಸಿದೆ. ಇದು ರಾಜವಿಷಯಕವಾದ ರತಿಭಾವಕ್ಕೆ ಅಂಗವೆನಿಸಿದೆ. ಆದ್ದರಿಂದಲೇ ಇದು ಸಮಾಹಿತಾಲಂಕಾರವೆನಿಸಿದೆ.

### ೫. ಭಾವಸಂಧ್ಯಾಲಂಕಾರ

ಯಾವುದಾದರೊಂದು ಭಾವವು ಅವಿರ್ಭವಿಸಿ ಬೇರೊಂದು ಭಾವಕ್ಕೆ ಅಂಗವಾಗಿರುವುದೇ ಭಾವೋದಯವೆನಿಸಿದೆ. ಎರಡು ಭಾವಗಳು ಪರಸ್ಪರವಾಗಿ ಸೇರಿ ಬೇರೊಂದು ಭಾವಕ್ಕೆ ಅಂಗವಾಗಿದ್ದರೆ ಅದನ್ನು ಭಾವಸಂಧ್ಯಲಂಕಾರ ಎಂದು ಕರೆಯಲಾಗಿದೆ. ಭಾವೋದಯಕ್ಕೆ ಉದಾಹರಣೆ.

**ಮಧುಪಾನ ಪ್ರವೃತ್ತಿಸ್ತೇ ಸುಹೃದ್ಭಿಃ ಸಹ ವೈರಿಣಃ ।**
**ಶ್ರುತ್ವಾ ಕುತೋಪಿ ತ್ವನ್ನಾಮ ಲೇಭಿರೇ ವಿಷಮಾಂ ದಶಮ್**[೧೩೫] **॥**

"ಎಲೈ ರಾಜನೇ, ಸ್ನೇಹಿತರೊಡನೆ ಮಧುಪಾನದಲ್ಲಿ ಪ್ರವರ್ತಿಸಿದ ನಿನ್ನ

ಶತ್ರುಗಳು ಯಾರಿಂದಲೋ ನಿನ್ನ ಹೆಸರನ್ನು ಕೇಳಿ ಭಯವಿಹ್ವಲವಾದ ಅವಸ್ಥೆಯನ್ನು ಹೊಂದಿದ್ದರು". ಇಲ್ಲಿ ತ್ರಾಸವೆಂಬ ವ್ಯಭಿಚಾರಿಭಾವವು ವೈರಿ ಹೃದಯದಲ್ಲಿ ಅವಿರ್ಭವಿಸಿ ರಾಜವಿಶಯಕವಾದ ರತಿಭಾವಕ್ಕೆ ಅಂಗವೆನಿಸುವುದರಿಂದ ಇದು ಭಾವೋದಯವೆನಿಸಿದೆ.

**ಭಾವಸಂಧಿಗೆ ಉದಾಹರಣೆ**

> **ಜನ್ಮಾಂತರೀಣ ರಮಣ ಸ್ಯಾಂಗಸಂಗ ಸಮುತ್ಸುಕಾ ।**
> **ಸಲಜ್ಜಾ ಚಾಂತಿಕೇ ಸಖ್ಯಾಃ ಪಾತು ನಃ ಪಾರ್ವತೀ ಸದಾ**[೧೩೬] ॥

ಮುಂದಿನ ಜನ್ಮದಲ್ಲಿ ಪಡೆಯುವ ಆಲಿಂಗನದಲ್ಲಿ ಉತ್ಸುಕಿಯಾಗಿದ್ದು, ಸಖಿಯು ಎದುರಿಗೆ ಇದ್ದುದರಿಂದ ಲಜ್ಜೆಗೊಂಡ ಪಾರ್ವತಿಯು ನಮ್ಮನ್ನು ರಕ್ಷಿಸಲಿ". ಇಲ್ಲಿ ಔತ್ಸುಕ್ಯಲಜ್ಜೆಗಳೆರಡೂ ಸೇರಿರುವುದರಿಂದ ಇದು ಭಾವಸಂಧಿ ಎನಿಸಿದೆ. ಇದು ದೇವತಾವಿಷಯವಾದ ರತಿಗೆ ಅಂಗವಾಗಿರುವುದರಿಂದ ಭಾವಸಂಧ್ಯಾಲಂಕಾರ ಎನಿಸಿದೆ.

**೬. ಭಾವಶಬಲಾಲಂಕಾರ**

ಶಂಕೆ, ಅಸೂಯೆ, ದೃತಿ, ಸ್ಮೃತಿ, ಶ್ರಮ, ದೈನ್ಯ, ವಿಭೋಧ, ಔತ್ಸುಕ್ಯ ಎಂಬ ಭಾವಗಳು ಸೇರಿಕೊಂಡು ರತಿಗೆ ಅಂಗವೆನಿಸಿದರೆ ಅದು ಭಾವಶಬಲಾಲಂಕಾರ ಎನಿಸುವುದು ಉದಾಹರಣೆ

> **ಪಶ್ಯೇತ್ಕಶಿಚ್ಚಲ ಚಪಲರೇ! ಕಾತ್ವರಾಹಂ ಕುಮಾರೀ ।**
> **ಹಸ್ತಾಲಂಬಂ ವಿತರ ಹಹಹಾ! ವ್ಯುತ್ಕ್ರಮಃ ಕ್ವಾಸಿಯಾಸಿ ॥**
> **ಇತ್ಥಂ ಪೃಥ್ವೀಪರಿವೃಡ! ಭವದ್ವಿದ್ವಿಪೋऽರಣ್ಯವೃತ್ತ್ರೇಃ ।**
> **ಕನ್ಯಾ ಕಂಚಿತ್ಫಲಕಿಸಲಯಾನ್ಯಾದದಾನಾऽಭಿದತ್ತೇಃ** [೧೩೭]॥

ಯುದ್ಧದಲ್ಲಿ ಸೋತು ಕಾಡಿಗೆ ಹೋಗಿರುವ ಶತ್ರುರಾಜನ ಮಗಳೊಡನೆ ಒಬ್ಬ ವನೇಚರಯುವಕನ ಸಂವಾದವನ್ನು ತೋರಿಸಿ ಒಬ್ಬ ಆತ್ಮೀಯನಾದ ರಾಜನನ್ನು ಇಲ್ಲಿ ಸ್ತುತಿಸಲಾಗಿದೆ.

ಎಲೈ ಚಂಚಲ ಸ್ವಭಾವದವನೇ, ನಾವಿಬ್ಬರೂ ಹೀಗೆ ನಿರ್ಜನಸ್ಥಾನದಲ್ಲಿ ಸೇರಿರುವುದನ್ನು ಯಾರಾದರೂ ಕಾಣಬಹುದು, ಕಂಡರೆ ದುಷ್ಟವೃತ್ತಿಯನ್ನು ಊಹಿಸಲಾರರು. ಹೀಗೆ ಕನ್ಯೆ ಹೇಳುವಳು ಇಲ್ಲಿ ಕನ್ಯೆಯ 'ಶಂಕೆ' ತೋರುವುದು "ಎಲೈ ಚಪಲನೇ, ನನ್ನೊಡನೆ ತಂದೆಯ ಮನೆಗೆ ಹೋಗು" ಹೀಗೆ ಕನ್ಯೆಯು ಹೇಳುವಳು ಇಲ್ಲಿ ಚಪಲ ಎಂದು ನಿಕೃಷ್ಟವಾಗಿ ಸಂಭೋಧಿಸಿರುವುದರಿಂದ ಕನ್ಯೆಯ ಔನತ್ಯವು ತೋರುವುದರಿಂದ ಅವಳ ಮೇಲೆ ವನೇಚರನು 'ಅಸೂಯೆ' ತೋರುವನು. 'ಇಲ್ಲಿಂದ ಹೊರಗೆ ಹೋಗಲು ನಿನಗೆ ಏಕೆ ಇಷ್ಟು ಸಂಭ್ರಮ? ಇಲ್ಲಿ ನೋಡಲು ಯೊರೊಬ್ಬರೊ

ಬರುವಂತಿಲ". ಎಂದು ವನೇಚರು ಹೇಳುವನು ಇಲ್ಲಿ ವನೇಚರನ 'ದೃತಿ' ಭಾವವು ವ್ಯಕ್ತವಾಗುತ್ತದೆ. "ನಿನು ಇನ್ನೂ ಋತುಮತಿಯಾಗದ ಹುಡುಗಿ ಆದ್ದರಿಂದ ಜನರು ನನ್ನ ಬಗ್ಗೆ ಸಂಶಯ ಪಡುವುದು ಸಹಜ", ಇಲ್ಲಿ ಕನ್ಯೆಯು ತಾನು ಕುಮಾರಿ ಎಂಬ 'ಸ್ಮೃತಿ' ತೋರುವಳು "ಹಣ್ಣು ಹೂಗಳನ್ನು ಕೊಯ್ಯಲು ಬಹಳ ಬಳಲಿರುವುದಾದರೆ ನನ್ನ ಶರೀರದಲ್ಲಿ ನಿನ್ನ ಹಸ್ತದ ಹೊರೆಯನ್ನು ಇಳಿಸು" ಎಂದು ವನೇಚರನು ಹೇಳುವನು. ಇಲ್ಲಿ ರಾಜಕನ್ಯೆಯ 'ಶ್ರಮ'ವು ತೋರುವುದು ಹಹಹಾ ಎಂಬಲ್ಲಿ ಕನ್ಯೆಯ 'ದೈನ್ಯ'ವು ತೋರುವುದು. ಹೀಗೆ ಹೇಳಿ ವನೇಚರರು ಗುಪ್ತವಾಗಿ ಹೊರಡಲು ಕನ್ಯೆ "ಎಲೈ ವನೇಚರನೇ ಎಲ್ಲಿರುವೆ ಎಲ್ಲಿಗೆ ಹೋದೆ" ಎಂದು ಹೇಳುತ್ತಾಳೆ. ಇದರಿಂದ ಕನ್ಯೆಯ 'ಔತ್ಸುಕ್ಯ'ವು ತೋರುವುದು. "ಎಲೈ ಮಹಾರಾಜನೇ, ಅರಣ್ಯದಲ್ಲಿ ವಾಸಿಸುವ ನಿನ್ನ ಶತ್ರುವಿನ ಕನ್ಯೆಯು ಹಣ್ಣು ಚಿಗುರುಗಳನ್ನು ತರುತ್ತಾ ಒಬ್ಬ ವನೇಚರ ಯುವಕನಿಗೆ ಹೀಗೆ ಹೇಳುತ್ತಾಳೆ". ಇಲ್ಲಿ ಶಂಕೆ, ಅಸೂಯೆ, ದೃತಿ, ಸ್ಮೃತಿ, ಶ್ರಮ, ದೈನ್ಯ, ವಿಬೋಧ, ಔತ್ಸುಕ್ಯ ಎಂಬ ಭಾವಗಳು ಸೇರಿಕೊಂಡು ರಾಜವಿಷಯಕವಾದ ರತಿಗೆ ಅಂಗವೆನಿಸಿದ್ದರಿಂದ ಇದು ಭಾವ ಶಬಲಾಲಂಕಾರಕ್ಕೆ ಉದಾಹರಣೆಯಾಗಿದೆ.

ಕೆಲವು ಅಲಂಕಾರಿಕರು "ಶಬ್ದವನ್ನು ಅರ್ಥವನ್ನು ಅಲಂಕರಿಸುವಾಗ ರಸಭಾವಾದಿಗಳು ಪೋಷಕವಾಗುತ್ತವೆ ಆದ್ದರಿಂದ ಇವು ಶಬ್ದಗಳಿಗೆ ವೈಚಿತ್ರ್ಯಗಳೇ ಹೊರತು ಅಲಂಕಾರ ಗಳೆನಿಸಲಾರವು" ಎಂದು ಹೇಳಿದ್ದಾರೆ. ಪ್ರಧಾನವೆನಿಸಿದ ರಸಭಾವಗಳಿಗೆ ಹೇಗಾದರೂ ದೃಷ್ಟಿಯನ್ನುಂಟು ಮಾಡುವುದರಿಂದ ರಸವದಲಂಕಾರ ಮೊದಲಾದವುಗಳಿಗೆ ಅಲಂಕಾರವೆಂಬ ಹೆಸರು ಗೌಣವಾಗಿ ಬಂದಿದೆ ಎಂಬುದು ಪ್ರಾಚೀನರ ಸಮ್ಮತಿಯಾಗಿದೆ. ಆಸ್ವಾದರೂಪವಾದ ರಸವು ಬೇರೊಂದು ರಸಕ್ಕೆ ಪೋಷಕವಾಗಿಲ್ಲದ್ದರಿಂದ ಅದು ಅಲಂಕಾರವೆನಿಸಲಾರದು ಆದರೆ ರಸಾದಿಗಳು ಪೊಷಕವೆನಿಸಿದ್ದರಿಂದ ಅವು ಅಲಂಕಾರವೆನಿಸುತ್ತದೆ ಎಂದು ಹೇಳಿದ್ದಾರೆ. ಧ್ವನಿಕಾರನು "ಒಂದು ಕಾವ್ಯದಲ್ಲಿ ರಸವಾಗಲೀ ವಾಕ್ಯಾರ್ಥವಾಗಲೀ ಪ್ರಧಾನವಾಗಿದ್ದರೆ ಅಲ್ಲಿ ರಸವದ್‌ಅಲಂಕಾರಗಳಿರುತ್ತವೆ" ಎಂದು ಹೇಳಿದ್ದಾನೆ. ಆದರೆ ವಿಶ್ವನಾಥನು ರಸಕ್ಕೆ ಆದ್ಯಸ್ಥಾನವನ್ನು ತನ್ನ ಗ್ರಂಥದಲ್ಲಿ ಕೊಟ್ಟಿರುವುದರಿಂದ ಈ ರಸವದ್ ಅಲಂಕಾರಗಳನ್ನು ಸಮ್ಮತಿಸಿ ವಿವರಿಸಿದ್ದಾರೆ.

ಇಲ್ಲಿಯವರೆಗೆ ಅಲಂಕಾರಶಾಸ್ತ್ರದ ಹಿನ್ನಲೆಯನ್ನು ಕುರಿತು ಪ್ರಾಚೀನ ಅಲಂಕಾ–ರಿಕ ಭರತ, ಭಾಮಹ, ದಂಡಿ, ವಾಮನ, ಮುಂತಾದ ಅಲಂಕಾರಿಕರ ಅಲಂಕಾರ ಲಕ್ಷಣವನ್ನು ವಿವೇಚಿಸಿ. ಭರತನ ನಾಲ್ಕರಿಂದ ದಂಡಿ ಭಾಮಹರಲ್ಲಿ ಮೂವತ್ತಕ್ಕೂ ಹೆಚ್ಚಾಗಿ ರುದ್ರಟನು ಈ ಅಲಂಕಾರ ಸಂಖ್ಯೆಯನ್ನು ಎಪ್ಪತ್ತಮೂರಕ್ಕೇರಿಸಿದನು. ನಂತರ ಬಂದ ವಿಶ್ವನಾಥ, ವಿದ್ಯಾಧರ, ವಿಧ್ಯಾನಾಥ ಮೊದಲಾದವರು ಎಂಭತ್ತಕ್ಕೂ ಹೆಚ್ಚಿನ ಅಲಂಕಾರಗಳನ್ನು ವಿಭಾಗಿಸಿ ಸೂಕ್ಷ್ಮವಾದ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಜಯದೇವನ

‘ಚಂದ್ರಲೋಕ’ದಲ್ಲಿ ಈ ಅಲಂಕಾರದ ಸಂಖ್ಯೆ ನೂರನ್ನು ಮುಟ್ಟಿದೆ.

ವಿಶ್ವನಾಥನು ಶಬ್ದಾಲಂಕಾರವನ್ನು ಆರು ವಿಭಾಗಗಳಾಗಿ ಮಾಡಿ ಅರ್ಥಾಲಂಕಾರಗಳನ್ನು ಪ್ರಧಾನವಾಗಿ ಅರವತ್ತಮೂರು ಅಲಂಕಾರಗಳನ್ನು ವಿಭಾಗಿಸಿದ್ದಾನೆ. ರಸಭಾವಕ್ಕೆ ಸಂಬಂಧಿಸಿದಂತೆ ನಾಲ್ಕು ಅಲಂಕಾರಗಳು. ಅಲ್ಲದೇ ರಸದ ವಿಚಾರದಲ್ಲಿ ನಾಯಿಕೆಗೆ ಸಂಬಂಧಿಸಿದಂತೆ ಹಾವ, ಭಾವ, ಹೇಲ, ಶೋಭ, ಕಾಂತಿ ಇತ್ಯಾದಿ ಇಪ್ಪತ್ತೆಂಟು ಅಲಂಕಾರಗಳನ್ನು ಮತ್ತು ನಾಟ್ಯಕ್ಕೆ ಸಂಬಂಧಿಸಿದಂತೆ ಆಶೀರ್ವಾದ, ಆಕ್ರಂದ, ಕಪಟ, ಅಕ್ಷಮ ಇತ್ಯಾದಿ ಮೂವತ್ತಮೂರು ಅಲಂಕಾರಗಳನ್ನು ವಿವೇಚಿಸಿರುವುದನ್ನ ಪರಾಮರ್ಶಿಸಲಾಗಿದೆ.

ಇಲ್ಲಿಯವರೆಗೂ ವಿಶ್ವನಾಥನ ಸಾಹಿತ್ಯದರ್ಪಣದ ಹತ್ತುಪರಿಚ್ಛೇದಗಳ ವಿಮರ್ಶೆಯನ್ನ ಪರಿಸಮಾಪ್ತಿಗೊಳಿಸಿ ಮುಂದಿನ ಉಪಸಂಹಾರದಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ವಿಶ್ವನಾಥನ ಸ್ಥಾನ ಮತ್ತು ಇದುವರೆಗೂ ಪರಾಮರ್ಶಿಸಿದ ಮುಖ್ಯ ಅಂಶಗಳನ್ನು ವಿವೇಚನೆ ಮಾಡಲಾಗಿದೆ.

* * *

## ಅಡಿಟಿಪ್ಪಣಿಗಳು

೧ ಕಾವ್ಯಾಲಂಕಾರಸೂತ್ರವೃತ್ತಿ, [೧, ೨, ೭–೮]

೨ ಶ್ಲೇಷಃ ಪ್ರಸಾದ ಸಮತಾ ಮಾಧುರ್ಯಂ ಸುಕುಮಾರತಾ ।
ಅರ್ಥವ್ಯಕ್ತಿರುದಾರತ್ವ ಮೋಜಃ ಕಾಂತಿ ಸಮಾಧಯಃ ॥

"ಇತಿ ವೈದರ್ಭ ಮಾರ್ಗಸ್ಯ ಪ್ರಾಣಾ ದಶಗುಣ ಸ್ಮೃತಾಃ ಎಂದು ವೈದರ್ಭ ಮಾರ್ಗದಲ್ಲಿ ಈ ಹತ್ತು ಗುಣಗಳಿದ್ದು ಇದಕ್ಕೆ ಬೇರೆಯಾದದ್ದು ಗೌಡೀಮಾರ್ಗ ಎಂದು ಎರಡು ಮಾರ್ಗಗಳನ್ನು ದಂಡಿ ಹೇಳಿದ್ದಾನೆ.

[ಕಾವ್ಯಾದರ್ಶ ೧ – ೪೧]

೩ ನಾಟ್ಯಶಾಸ್ತ್ರ (೧೬ನೆ ಅಧ್ಯಾಯ)

೪ ಪ್ರವೃತ್ತಿ ರೀತಿ ಕಸ್ಮಾತ್ಽ ಉಚ್ಯತೆ – ನಾನಾದೇಶಭೂಷಾಚಾರವಾರ್ತಃ
ಖ್ಯಾಪಯತೀತಿ ವೃತ್ತೀಃ ಪ್ರವೃತ್ತಿಶ್ಚ ಽ

[ನ್ಯಾಟ್ಯಶಾಸ್ತ್ರ, ೯, ಪು, ೨೦೫]

೫. ಕಾವ್ಯಾಲಂಕಾರ, [೧, ೩೨, ೨, ೧, ೩]

೬. ಕಾವ್ಯಾದರ್ಶ [೧, ೪೦]

೭. ಕಾವ್ಯಲಾಂಕಾರಸೂತ್ರವೃತ್ತಿ [೧.೨, ೧೧–೧೩]

೮. ಧ್ವನ್ಯಾಲೋಕ, [೩,೫೨ರ ವೃತ್ತಿ]

೯. ರುದ್ರಟ, ಕಾವ್ಯಲಂಕಾರ, [೨, ೪–೬]

೧೦. ಭೋಜನ, ಸರಸ್ವತೀಕಂಠಾಭರಣ,

೧೧. ವಕ್ರೋಕ್ತಿಜೀವಿತ [೧–೨೮]

೧೨. ವಕ್ರೋಕ್ತಿಜೀವಿತ [೧–೨೯]

೧೩. ಕುಮಾರಸಂಭವ [೩–೧೯]

೧೪. ವಕ್ರೋಕ್ತಿಜೀವಿತ, [೧–೪೩]

೧೫. ವಕ್ರೋಕ್ತಿಜೀವಿತ, [೧–೪೯]

೧೬. ವಕ್ರೋಕ್ತಿಜೀವಿತ, [೧–೫೧]

೧೭. ಮಾಧುರ್ಯಾ, ಪ್ರಸಾದ, ಲಾವಣ್ಯ, ಅಭಿಜಾತ್ಯ, ಔಚಿತ್ಯ, ಸೌಭಾಗ್ಯ, ಆರುಗುಣಗಳು ವಕ್ರೋಕ್ತಿಜೀವಿತ, [೧–೩೦, ೧–೫೫]

೧೮. ಸಾಹಿತ್ಯದರ್ಪಣ, [೯, ೧]

೧೯. ಸಾಹಿತ್ಯದರ್ಪಣ, [೯, ೨]

೨೦. ಕಾಳಿದಾಸ, ಕುಮಾರಸಂಭವ, [೩ – ೧೯]

೨೧. ಸಾಹಿತ್ಯದರ್ಪಣ [೯, ೩]

೨೨. ಷಡಕ್ಷರಿ, ರಾಜಶೇಕರವಿಲಾಸ [೩ – ೫]

೨೩. ಸಾಹಿತ್ಯ ದರ್ಪಣ, [೯, ೪]

೨೪. ಸಾಹಿತ್ಯದರ್ಪಣ, [೯ನೆ ಪರಿಚ್ಛೇದ]

೨೫. ಸಾಹಿತ್ಯದರ್ಪಣ, [೯, ೫]

೨೬. ಸಾಹಿತ್ಯದರ್ಪಣ [೯, ೬]

೨೭. ವೇಣಿಸಂಹಾರ, ಯುದ್ಧವೃತ್ತಾಂತ,

೨೮. ಆನಂದವರ್ಧನ, ಧ್ವನ್ಯಾಲೋಕ, [೩, ೪೬]

೨೯. ಅಭಿನವಗುಪ್ತ, ದ್ವನ್ಯಾಲೋಚನ, ಸಾಹಿತ್ಯದರ್ಪಣ, ಒಂಬತ್ತನೆ ಪರಿಚ್ಛೇದ,

೩೦. ಸಾಹಿತ್ಯದರ್ಪಣ, ೧೦ ೧

೩೧. ನಾಟ್ಯಶಾಸ್ತ್ರ, ೧೬ನೆ ಅಧ್ಯಾಯ

೩೨. ಭಟ್ಟಿ, [ಕ್ರಿ.ಶ. ೫೦೦೦ – ೬೫೦ರೊಳಗೆ]

೩೩. ಭಟ್ಟಿಕಾವ್ಯ [೧೦–೧೩]

೩೪. ವ್ಯಾಖ್ಯಾಗಮ್ಯಮಿದಂ ಕಾವ್ಯಮುತ್ಸವಃ ಸುಧಿಯಾಮಲಂ ।
ಹತಾದುರ್ಮೇಧಸಶ್ಚಾಸ್ಮಿನ್ ವಿದ್ವತ್ಪ್ರಿತಯಾ ಮಯಾ ॥
[ಭಟ್ಟಿಕಾವ್ಯ, ೨೨,೩೪]

೩೫. ಆಗ್ನಿಪುರಾಣ, [೩೩೭, ೩೪]

೩೬. "ಏತಾವದುಕ್ತಂ ತವಲೇಶಮಾತ್ರಂ" [ವಿಷ್ಣುಧರ್ಮಾತ್ತರಪುರಾಣ ೩, ೧೩, ೧೫]

೩೭. ನಿರುಕ್ತ, [೩, ೧೩]

೩೮. "ತದಾನಾಂ ಕರ್ಮಜ್ಯಾಯಸಾ ವಾ ಗುಣೇನ ಪ್ರಖ್ಯಾತ ತಮೇನ ವಾ ಕಾನಿಯಂಸಂ ವಾಽಪ್ರಖ್ಯಾತಂ ವಾ ಉಪಮಿಮಿತೇ?ಥಾಪಿ" ಕನೀಯಸಾ ಜ್ಯಾಯಂಸಮ್" ಽ [ನಿರುಕ್ತ ೩, ೧೩]

೩೯. 'ಯಯೇತಿ ಕರ್ಮೋಪಮ' [ನಿರುಕ್ತ ೩, ೧೫]

೪೦. 'ಮೇಷ ಇತಿ ಭೊತ್ತೋಪಮೆ' [ನಿರುಕ್ತ ೩, ೧೬]

೪೧. 'ಅಗ್ನಿರಿತಿ ರೊಪೋಪಮ' [ನಿರುಕ್ತ ೩, ೧೬]

೪೨. 'ವದಿತಿ ಸಿದ್ಧೋಪಮ' [ನಿರುಕ್ತ ೩, ೧೬]

೪೩. 'ಅಥ ಲುಪ್ತೋಪಮ' [ನಿರುಕ್ತ ೩, ೧೮]

೪೪. ಉಪಮಾನತಿ ಸಾಮಾನ್ಯ ವಚನೈಃ ऽ [ಆಷ್ಟಾಧ್ಯಾಯೀ, ೨, ೧, ೫೫] ಉಪಮಿತ ವ್ಯಾಘ್ರಾದಿಭಿಃ ಸಾಮಾನ್ಯ ಪ್ರಯೋಗೇ [೨, ೧, ೫೬] ಉಪಮಾನಾದಾಜಾರೇ [೩, ೧, ೧೦] ತುಲ್ಯಾರ್ಥೈರತುಲ್ಯ ಲೋಪಮಾಭ್ಯಾಂ ತೃತೀಯಾನ್ಯಂತರಸ್ಯಾಮ್ [ಅಷ್ಟಧ್ಯಾಯೀ ೨, ೩, ೭, ೨] ತೇನತುಲ್ಯಕ್ರೀಯಾಚೇತತಿ: [೫, ೧, ೧೧೫] ತತ್ರತಸ್ಯೈವ [೫, ೧, ೧೧೬]

೪೫. ಮಾನಾಂ ಹೀನಾಮ ಅನಿಜ್ಞಾತಜ್ಞನಾಥಮ್ ಉಪದೀಯತೆ ಅನಿಜ್ಞಾತಜ್ಞತಮರ್ಥ ಜ್ಞಾಸ್ಯಾಮಿತಿ ऽ ತಸ್ಸಮಿಪೇ ಯನ್ನತ್ಯಂತಾಯ ಮಿಮಿತೆ ತದ ಉಪಮಾನಮ್ ಗೌರಿವ ಗಾವಂತು ಇತಿ ऽ ಗೌರ್ನಿರ್ಜ್ಞಾತೋ ಗವಯೋऽನಿಜ್ಞಾತಃऽ [ಮಹಾಭಾಷ್ಯ, ನಿರ್ಣಯಸಾಗರ, ಆವೃತ್ತಿ, ೧೯೩೫, ಭಾಗ ೨, ಪು. ೩೯೪]

೪೬. ಕಾವ್ಯಲಂಕಾರ [೧, ೧೩]

೪೭. "ಯುಕ್ತಂ ವಕ್ರಸ್ವಭಾವೋಕ್ತ್ಯಾ ಸರ್ವಮೆಮೈತದಿಷ್ಯತೇ" "ವಕ್ರ ಸ್ವಭಾವೋಕ್ತ್ಯಾ" ಎಂಬುದಕ್ಕೆ "ವಕ್ರ ಸ್ವಭಾವವನ್ನುಳ್ಳ ಉಕ್ತಿಯಿಂದ" ಎಂದರೆ ವಕ್ರೋಕ್ತಿಯಿಂದ ಎನ್ನುವುದೇ ಸಮಂಜಸವಾದ ಅರ್ಥ 'ಕಾವ್ಯಾಲಂಕಾರ' [೧, ೩೦]

೪೮. ಕಾವ್ಯಾಲಂಕಾರ, [೯, ೮೧-೪]

೪೯. ಸೈಷಾ ಸರ್ವೈವ ವಕ್ರೋಕ್ತಿರನಯಾರ್ಥೋ ವಿಭಾವ್ಯತೇ ।
ಯತ್ನೋऽಸ್ಯಾಂ ಕವಿನಾ ಕಾರ್ಯಃ ಕೋಲಂಕಾರೋ?ನಯಾ ವಿನಾಂ ॥
['ಕಾವ್ಯಾಲಂಕಾರ' ೨, ೫೮]

೫೦. ಗತೋऽಸ್ತಮರ್ಕೋ ಭಾತೀಂದುಃ ಯಾಂತಿ ವಾಸಾಯ ಪಕ್ಷಿಣಃ ।
ಇತ್ಯೇವ ಮಾದಿ ಕಿಂ ಕಾವ್ಯಂ ವಾರ್ತಾಮೇನಾಂ ಪ್ರಚಕ್ಷತೆ ॥
[ಕಾವ್ಯಾಲಂಕಾರ ೨, ೮೭]

೫೧. ಕಾವ್ಯಾಲಂಕಾರ [೧, ೫೫]

೫೨. ವಕ್ರೇಭಿದೇಯ ಶಬ್ದೋಕ್ತಿರಿಷ್ಟಾವಾಚಾಮಲಂಕೃತಿಃ ।
[ಕಾವ್ಯಾಲಂಕಾರ, ೩, ೩೬]

೫೩. ಕಾವ್ಯಾದರ್ಶ [೨, ೧]

೫೪. ಕಾಶ್ಚಿನ್ಮಾರ್ಗ ವಿಭಾಗರ್ಥಮ್ ಉಕ್ತಃ ಪ್ರಾಗಲ್ಪಕ್ರಿಯಾಃ [ಕಾವ್ಯಾದರ್ಶ, ೨, ೩, ೬, ೭]

೫೫. ಯಶ್ಚ ಸಂಧ್ಯಾಂಗ ವೃತ್ಯಂಗ ಲಕ್ಷಣಾದ್ಯಗಮಾಂತರೇ ।
ವ್ಯಾವರ್ಣಿತ ಮಿದಂ ಛೇಷ್ಟಾಮಲಂಕಾರತತೈವ ನಃ ॥ [ಕಾವ್ಯಾದರ್ಶ ೨, ೩, ೬,೭]

೫೬. ಗತೋಽಸ್ತಮರ್ಕೋ ಭಾತೀಂದುಃ ಯಾಂತಿ ವಾಸಾಯ ಪಕ್ಷಿಣಃ
ಇತೀದಮಸಿ ಸಾಧ್ವೇವ ಕಾಲಾವಸ್ಥಾನಿವೇದನೇ ॥ [ಕಾವ್ಯಾದರ್ಶ ೨, ೪೪]

೫೭. ಭಿನ್ನಂ ದ್ವಿದಾ ಸ್ವಭಾವೋಕ್ತಿ ರ್ವಕ್ರೋಕ್ತಿಶ್ಚೇತಿ ವಾಙ್ಮಯಂ । [ಕಾವ್ಯದರ್ಶ, ೨, ೩೬೩]

೫೮. ಕಾವ್ಯಾಲಂಕಾರಸೂತ್ರವೃತ್ತಿ, [೧, ೧, ೨]

೫೯. ಕಾವ್ಯಲಂಕಾರಸೂತ್ರವೃತ್ತಿ, [೧, ೧, ೨]

೬೦. ಕಾವ್ಯಾಲಂಕಾರಸಾರಸಂಗ್ರಹ, [ಪು ೫೫]

೬೧. 'ಧ್ವನ್ಯಾ ಲೋಕ', [೨, ೨೧ರ ವೃತ್ತಿಯಲ್ಲಿ]

೬೨. ಭಾಮಹನು ವಕ್ರೋಕ್ತಿಯನ್ನು ಎಲ್ಲಾ ಅಲಂಕಾರಗಳಿಗೆ ಅನ್ವಯಿಸುವಂತ ವ್ಯಾಪಕವಾದ ಅರ್ಥದಲ್ಲಿ ಬಳಸಿದ್ದಾನೆ.

೬೩. ಧ್ವನ್ಯಾಲೋಕ, [೨, ೫]

೬೪. ಧ್ವನ್ಯಾಲೋಕ, [೨, ೧೬]

೬೫. "ತ್ರಿಧಾಃ ಬಾಹ್ಯಾ ಅಭ್ಯಂತರಾಃ ಬಾಹ್ಯಾಭ್ಯಂತರಶ್ಚ" [ಭೋಜ, ಶೃಂಗಾರ ತಿಲಕ]

೬೬. ಕಾವ್ಯಪ್ರಕಾಶ, [೯ನೆ, ಉಲ್ಲಾಸ]

೬೭. ಕಾವ್ಯಪ್ರಕಾಶ, [೧೦ನೆ, ಉಲ್ಲಾಸ]

೬೮. ರುದ್ರಟ, ಕಾವ್ಯಲಂಕಾರ, [೨, ೧೮, ೨೨, –೨೩] [ನಿರ್ಣಯಸಾಗರ ಪ್ರೆಸ್ ಮುದ್ರಣ ೧೯೨೮]

೬೯. ಉದ್ದಟನು ಕಾವ್ಯಾಲಂಕಾರಸಾರ ಸಂಗ್ರಹದಲ್ಲಿ ಅನುಪ್ರಾಸವನ್ನು ಛೇಕಾನುಪ್ರಾಸ, ಲಾಟಾನುಪ್ರಾಸ ವೃತ್ತ್ಯನುಪ್ರಾಸ, ಎಂದು ಮೂರು ಬಗೆಯಾಗಿ ಹೇಳಿದ್ದಾನೆ.

೭೦. ಸಾಹಿತ್ಯದರ್ಪಣ [೧೦, ೫]

೭೧. ಸಾಹಿತ್ಯದರ್ಪಣ, [೧೦, ೯]

೭೨. ಸಾಹಿತ್ಯದರ್ಪಣ, [೧೦, ೮]

೭೩. ಸಾಹಿತ್ಯದರ್ಪಣ, [೧೦, ೧೨]

೭೪. ಸಾಹಿತ್ಯದರ್ಪಣ, [೧೦, ೧೦]

೭೫. ಮಾಘ, ಶಿಶುಪಾಲವಧ

೭೬. ಸಾಹಿತ್ಯದರ್ಪಣ [೧೦ – ೧೭]

೭೭. ಸಾಹಿತ್ಯದರ್ಪಣ, [೧೦, ೧೮]

೭೮. ಸೈಷಾಸರ್ವೈವ ವಕ್ರೋಕ್ತಿನಯಾರ್ಥೋ ವಿಭಾವ್ಯತೇ

ಯತ್ನೋಽಸ್ಯಾಂ ಕವಿನಾ ಕಾರ್ಯಃ ಕೋಽಲಂಕಾರೋಽನಯಾ ವಿನಾ
[ಕಾವ್ಯಾಲಂಕಾರ ೨.೮೫]

೭೯. "ಸ್ವಭಾವೋಕ್ತಿರಲಂಕಾರ ಇತಿ ಕೆಚಿತ್ ಪ್ರಚಕ್ಷತೇ। ಅರ್ಥಸತ್ಯದ ವಸ್ಥಿತ್ವಂ ಸ್ವಭಾವೋಽಭಿಹಿತೋಯಥಾ" ಈ ವಿಚಾರವಾಗಿ ಭಾಮಹನಿಗೆ ಭಿನ್ನಾಭಿಪ್ರಾಯವಿದೆ.
ಅಲಂಕಾರಾಂತರಾಣಮಪ್ಯಾಹುರೇಕಂ ಪರಾಯಣಮ್ ।

೮೦. ವಾಗೀಶಮಹಿತಾಮುಕ್ತಿಮಿಮಾಮತಿ ಶಯಾಹ್ವಯಮ್ ॥ [ಕಾವ್ಯಾದರ್ಶ, ೨-೨೨೦]

೮೧. ಶ್ಲೇಷ ಸರ್ವಾಸುಪುಷ್ಣಾತಿ ಪ್ರಾಯೋ ವಕ್ರೋಕ್ತಿಷು ಶ್ರೀಯಮ್
ಭಿನ್ನಂ ದ್ವಿಧಾ ಸ್ವಭಾವೋಕ್ತಿರ್ವಕ್ರೋಕ್ತಿಶ್ಲೇತಿ ವಾಙ್ಮಯಮ್ [ಕಾವ್ಯಾದರ್ಶ, ೨, ೩೬೨]

೮೨. ಸಾದೃಶ್ಯಾಲ್ಲಕ್ಷಣಾ ವಕ್ರೋಕ್ತಿ ಉದಾ – ಉನ್ಮಿಮಿಲ ।
ಕಮಲಂ ಸಸೀನಾಂ ಕೈರವಂ ಚ ನಿಮಿಮಿಲ ಮಹೂರ್ತಾತ್ ॥
[ಕಾವ್ಯಲಂಕಾರಸೂತ್ರವೃತ್ತಿ ೪, ೩೮]

೮೩. ರುದ್ರಟ, ಕಾವ್ಯಲಂಕಾರ, [೬ನೆ ಅಧ್ಯಾಯ]

೮೪. ಲೋಕೋತ್ತರಚಮತ್ಕಾರಕಾರಿವೈಚಿತ್ರ್ಯ ಸಿದ್ಧಯೇ ।
ಕಾವ್ಯಸ್ಯಾಯಮಲಂಕಾರಃ ಕೋಽಪ್ಯಪೂರ್ವೋ ವಿಧಿಯತೇ॥ [ವಕ್ರೋಜೀವಿತ] [೧. ೨]

೮೫. ವಕ್ರೋಕ್ತಿಃ ಪ್ರಸಿದ್ಧಾಭಿಧಾನವ್ಯತಿರೇಕಿಣೀ ವಿಚಿತ್ರ್ಯಾಭಿದಾ ? [ವಕ್ರೋಕ್ತಿಜೀವಿತ] [ಪುಟ, ೨೨]

೮೬. 'ಶಾಸ್ತ್ರಾದಿಪ್ರಸಿದ್ಧ ಶಬ್ದಾರ್ಥೋಪನಿಬಂಧವ್ಯತಿರೇಕೀ' 'ಪ್ರಸಿದ್ಧ ಪ್ರಸ್ಥಾನವ್ಯತಿರೇಕೀ' 'ಅತಿಕ್ರಾಂತಪ್ರಸಿದ್ಧವ್ಯವಹಾರ ಸರಣಿ' ವಕ್ರೋಕ್ತಿಜೀವಿತ, [ಪುಟ, ೧೪]

೮೭. ವಾಚ್ಯಾವಾಚಕ ವಕ್ರೋಕ್ತಿ ತ್ರಿತಯಾತಿಶಯೋತ್ತರಮ್
ತದ್ವಿದಾಹ್ಲಾದಕಾರಿತ್ವಂ ಕಿ ಮಪ್ಯಾಮೊದಸುಂದರಮ್

೮೮. ಅಯಮತ್ರ ಪರಮಾರ್ಥಃ ಽ ಸಾಲಂಕಾರ ಸ್ಯಾಲಂಕರಣ
ಸಹಿತಸ್ಯ ಸಕಲಸ್ಯ ನಿರಸ್ತಾವಯ ವಸ್ಯ ಸತಃ ಸಮುದಾಯಸ್ಯ
ಕಾವ್ಯತಾ ಕವಿಕರ್ಮತ್ವಮ್ ಽ ತೇನಾಲಂಕೃತಸ್ಯ
ಕಾವ್ಯತ್ವಮಿತಿ ಸ್ಥಿತಿಃ, ನಪುನಃ ಕಾವ್ಯಸ್ಯಾಲಂಕರಯೋಗ ಇತಿ ?

೮೯. ವಕ್ರೋಕ್ತಿ ವೈಚಿತ್ರ್ಯಂ ಅಲಂಕಾರ ವಿಚಿತ್ರಭಾವಃ "ವಕ್ರೋಕ್ತಿಃ ಸಕಲಾಲಂಕಾರ ಸಮಾನ್ಯಮ್'
[ವಕ್ರೋಕ್ತಿ ಜೀವಿತ ಕ್ರಮವಾಗಿ ೨೯, ೧೨೫, ೭, ೬೫, ೫೩]

೯೦. ರುದ್ರಟ, ಕಾವ್ಯಾಲಂಕಾರ [೧೦, ೧,೧೦ –೪]

೯೧. ಸಾಹಿತ್ಯದರ್ಪಣ, [೧೦, ೨೨]

೯೨. ಸಾಹಿತ್ಯದರ್ಪಣ, [೧೦, ೨೩]

೯೩. ಸಾಹಿತ್ಯದರ್ಪಣ, [೧೦, ೨೪]

೯೪. ಸಾಹಿತ್ಯದರ್ಪಣ, [೧೦, ೨೫]

೯೫. ಸಾಹಿತ್ಯದರ್ಪಣ, [೧೦, ೨೭]

೯೬. ಸಾಹಿತ್ಯದರ್ಪಣ, [೧೦, ೨೮]

೯೭. ಸಾಹಿತ್ಯದರ್ಪಣ, [೧೦, ೩೧]

೯೮. ರುದ್ರಟನು ಶ್ಲೇಷವನ್ನು ಅರ್ಥಾಲಂಕಾರವಾಗಿ ಹೇಳಿದ್ದಾನೆ. ಶ್ಲೇಷಾಲಂಕಾರವನ್ನು ಶುದ್ಧ ಮತ್ತು ಸಂಕೀರ್ಣ ಎರಡು ಬಗೆಯಾಗಿಸಿ, ಶುದ್ದದಲ್ಲಿ ಅವಿಶೇಷ, ವಿರೋಧ, ಅಧಿಕ, ವಕ್ರ, ವ್ಯಾಜ, ಉಕ್ತಿ, ಅಸಂಭವ, ಅವಯವ, ತತ್ವ ರೋಧಾಭಾಸ ಹತ್ತು ಬಗೆಗಳನ್ನು ಸಂಕೀರ್ಣದಲ್ಲಿ ಎರಡು ಅಲಂಕಾರ ಒಟ್ಟು ಹನ್ನೆರಡು ಶ್ಲೇಷಾಲಂಕಾರಗಳನ್ನು ಹೇಳಿದ್ದಾನೆ. ['ಕಾವ್ಯಲಂಕಾರ' ೭ನೆ ಅಧ್ಯಾಯ]

೯೯. ಸಾಹಿತ್ಯದರ್ಪಣ, [೧೦, ೨೫]

೧೦೦. ಭೋಜ, ಶೃಂಗಾರಪ್ರಕಾಶದಲ್ಲಿ ಇದನ್ನು ವಿಸ್ತಾರವಾಗಿ ತಿಳಿಸಿದ್ದಾನೆ.

೧೦೧. ಸಾಹಿತ್ಯದರ್ಪಣ, [೧೦, ೩೭]

೧೦೨ ಸಾಹಿತ್ಯದರ್ಪಣ, [೧೦, ೩೮]

೧೦೩ ಪ್ರಹೇಳಿಕೆ ಎಂಬುದು ಒಗಟು ಮಾತು, ಕನ್ನಡದ ಗ್ರಂಥಗಳಲ್ಲಿ 'ಪೇಳಿಕೆ' 'ಹೇಳಿಕೆ' ಎಂದು ಕರೆದಿದ್ದಾರೆ. ಇದರಲ್ಲಿ ಅನೇಕ ಪ್ರಕಾರಗಳುಂಟು ಕಾವ್ಯಾದರ್ಶ [೨,೯೭ –೧೨೪], ಕವಿರಾಜಮಾರ್ಗ, [೨, ೧೪೪–೧೫೨] ಕಾವ್ಯಾನುಲೋಕನ, [೫೯೩–೬೦೦] ನೋಡಿ.

೧೦೪ ಉಪಮೈಕಾ ಶೈಲೂಷಿ ಸಂಪ್ರಾಪ್ತಾ ಚಿತ್ರಭೂಮಿಕಾಭೇದಾನ್ ।
ರಂಜಯತಿ ಕಾವ್ಯರಂಗಮ್ ನೃತ್ಯಂತಿ ತದ್ವಿದಾಂ ಛೇತಃ ॥

[ಚಿತ್ರಮಿಮಾಂಸಾ – ೫]

೧೦೫ ರುದ್ರಟ, ಕಾವ್ಯಾಲಂಕಾರ, [೮, ೪, ೮, ೬]

೧೦೬. ಮಮ್ಮಟ, ಕಾವ್ಯಪ್ರಕಾಶ ಹತ್ತನೆಉಲ್ಲಾಸದಲ್ಲಿ ಉಪಮಾಲಂಕಾರವನ್ನು ಇಪ್ಪತ್ತೈದು ಬಗೆಗಳಾಗಿ ವಿವರಿಸಿದ್ದಾನೆ.

೧೦೭. ಸಾಹಿತ್ಯದರ್ಪಣ, [೧೦,೪೦]

೧೦೮. ಸಾಹಿತ್ಯದರ್ಪಣ, [೧೦, ೪೧]

೧೦೯. ಮಾನ್ಯೇ ಶಂಕೇ ಧೃವಂ ಪ್ರಾಯಃ ನೂನ ಮಿತ್ಯೇವಮಾದಿಭಿಃ ।
ಉತ್ಪ್ರೇಕ್ಷೆ ವ್ಯಾಜ್ಯತೆ ಶಬ್ದೈರಿವ ಶಬ್ದೋऽಪಿ ತಾದೃಶಃ ॥

[ಕಾವ್ಯಾದರ್ಶ, ೨, ೨೩೪]

ಸರ್ವಲಕಾರ ಸರ್ವಸ್ವಂ ಕವಿಕೀರ್ತಿ ವಿವರ್ಧಿನಿ ॥

ಉತ್ಪ್ರೇಕ್ಷಾ ಹರತಿ ಸ್ವಾತಂಮ ಚಿರೋಢಾ ಸ್ಮಿತಾದಿವ ॥

[ಅಲಂಕಾರಶೇಖರ, ಪು, ೩೪]

೧೧೦. ಸಾಹಿತ್ಯದರ್ಪಣ ಹತ್ತನೆ ಪರಿಚ್ಛೇದ ಕಾರಿಕೆ.

೧೧೧. ಕಾಳಿದಾಸ, ರಾಘುವಂಶ

೧೧೨. ಸಾಹಿತ್ಯದರ್ಪಣ, ಹತ್ತನೆಪರಿಚ್ಛೇದ ಕಾರಿಕೆ.

೧೧೩. ಸಾಹಿತ್ಯದರ್ಪಣ, ಹತ್ತನೆಪರಿಚ್ಛೇದ ಕಾರಿಕೆ.

೧೧೪. ಸಾಹಿತ್ಯದರ್ಪಣ, ಹತ್ತನೆ ಪರಿಚ್ಛೇದ ಕಾರಿಕೆ.

೧೧೫. ಕಾರಕಸ್ಯ – ಕಾರಕ ಎಂಬುದು ವ್ಯಾಕರಣಶಾಸ್ತ್ರದ ಒಂದು ಪಾರಿಭಾಷಿಕ ಶಬ್ದ. ಕಾರಕವೆಂದರೆ ವಾಕ್ಯದಲ್ಲಿನ ನಾಮ ಪದಗಳು ಕ್ರಿಯಾಪದದೊಡನೆ ಹೊಂದಿರುವ ಸಂಬಂಧ. ಈ ಕಾರಕ ಸಂಖ್ಯೆ ಆರು.

**ಕಾರ್ತಕರ್ಮ ಚ ಕಾರಣಂ ಸಂಪ್ರದಾನಂ ತತ್ತೈವ ಚ ।**
**ಅಪಾದಾನ ಮರ್ಧಿಕರಣ ಮಿತ್ಯುಹುಃ ಕಾರಕಾಣಿ ಷಟ್** ॥

ಹೀಗೆ ಪ್ರಥಮಾ ವಿಭಕ್ತಿಯವರೆಗೆ ಷಷ್ಠಿಯನ್ನುಳಿದು ಯಾವುದೊಂದು ಪ್ರತ್ಯವನ್ನು ಹೊಂದಿದ ನಾಮಪದವೇ 'ಕಾರಕ' [ಷಷ್ಠಿಯು ಕೇವಲ ಸಂಬಂಧ ಸಾಮಾನ್ಯವನ್ನು ತೋರಿಸುವುದರಿಂದ ಅದು ಕಾರಕವೆನಿಸಿಲ್ಲ.]

೧೧೬. ಮಾಘ, ಶಿಶುಪಾಲವಧ

೧೧೭. 'ಸಾಹಿತ್ಯದರ್ಪಣ ಹತ್ತನೇ ಪರಿಚ್ಚೇದ ಕಾರಿಕೆ'

೧೧೮. 'ಉಪಮಾನಾದ, ಯದನ್ಯಸ್ಯ ವ್ಯತಿರೇಕಃ ಸ ಏವ ಸಃ' ? [ಮಮ್ಮಟ, ಕಾವ್ಯಪ್ರಕಾಶ]

೧೧೯. ಸಾಹಿತ್ಯದರ್ಪಣ, ಹತ್ತನೆ ಪರಿಚ್ಛೇದ',

೧೨೦. ಸಾಹಿತ್ಯದರ್ಪಣ, ೧೦ನೆ ಪರಿಚ್ಛೇದ

೧೨೧. ಉದ್ಧಟ, ಕಾವ್ಯಾಲಂಕಾರಸಂಗ್ರಹ, [೨ನೆ ಅಧ್ಯಾಯ]

೧೨೨. ಸಾಹಿತ್ಯದರ್ಪಣ 'ಹತ್ತನೇ ಪರಿಚ್ಚೇದ' ವ್ಯತೀರೇಕಾಲಂಕಾರದ ಮುಂದಕ್ಕೆ

೧೨೩. "ಸ್ವಭಾವೋಕ್ತಿಸ್ತು ಡಿಂಬಾದೇಃ ಸ್ವಕ್ರಿಯಾರೂಪ ವರ್ಣನಮ್" [ಮಮ್ಮಟ, ಕಾವ್ಯಪ್ರಕಾಶ]

೧೨೪. 'ಸಾಹಿತ್ಯದರ್ಪಣ' ಹತ್ತನೆ ಪರಿಚ್ಛೇದ

೧೨೫. ಈ ವಿಚಾರವಾಗಿ ಭಿನಾಭಿಪ್ರಾಯವಿದೆ. ಭಾಮಹನು "ಸ್ವಭಾವೋಕ್ತಿರಲಂಕಾರ ಇತಿ ಕೇಚಿತ್ ಪ್ರಚಕ್ಷತೇ? ಅರ್ಥಸ್ಯತಡವಸ್ಥತ್ವವಂ ಸ್ವಭಾವೋಽಭಿಹಿತೋ ಯಥಾ ಽ ಆಕ್ರೋಶನ್ ಅಹ್ವಯನ್ನನ್ಯಾನ್ ಅಧಾವನ್ ಮಂಡಲೈರ್ನುದನ್ ಽ ಗಾ ವಾರಯಂತಿ ದಂಡೇನಬಾಲಃ ಸಸ್ಯಾವತಾರಿಣಿಃ ಽ ["ಸ್ವಭಾವೋಕ್ತಿಯು

ಅಲಂಕಾರವೆಂದು ಕೆಲವರು ಹೇಳುತ್ತಾರೆ. ಅದು ಇದದ್ದು ಇದ್ದಂತೆಯೇ ಹೇಳುವಿಕೆ, ಕೂಗುತ್ತಾ, ಇತರರನ್ನು ಕರೆಯುತ್ತಾ ಸುತ್ತಲೂ ಓಡಿ ಹೊಡೆಯುತ್ತಾ, ಬೆಳೆಯೊಳಗೆ ಬಂದ ದನಗಳನ್ನು ಹುಡುಗನ್ನು ಅಟ್ಟುತ್ತಾನೆ".]

೧೨೬. 'ಆದ್ಯಾಅಲಂಕೃತಿಃ' [ತಿರುವು ನುಡಿಗಳಿಗವಕಾಶವಿಲ್ಲದ ಅಲಂಕಾರ] [ದಂಡಿ, ಕಾವ್ಯಾದರ್ಶ]

೧೨೭. ಶ್ಲೇಷಃ ಸರ್ವಾಸು ಪುಷ್ಣಾತಿ ಪ್ರಾಯೋ ವಕ್ರೋಕ್ತಿಷು ಶ್ರೀಯಮ್।
ಭಿನ್ನಂ ದ್ವಿಧಾ ಸ್ವಭಾವೋಕ್ತಿರ್ವಕ್ರೋಕ್ತಿ ಶ್ಚೇತಿ ವಾಙ್ಮಯಮ್॥ [ಕಾವ್ಯಾದರ್ಶ, ೨, ೨೬೨]

೧೨೮. ಕುಂತಕ, ವಕ್ರೋಕ್ತಿಜೀವಿತ [ನಾಲ್ಕನೆ ಅಧಿಕರಣ]

೧೨೯. ಸಾಹಿತ್ಯದರ್ಪಣ, ಹತ್ತನೆ ಪರಿಚ್ಛೇದ,

೧೩೦. ಸಾಹಿತ್ಯದರ್ಪಣ, ಹತ್ತನೆ ಪರಿಚ್ಛೇದ,

೧೩೧. ಸಾಹಿತ್ಯ ದರ್ಪಣ ಹತ್ತನೆ ಪರಿಚ್ಛೇದ

೧೩೨. ಸಾಹಿತ್ಯ ದರ್ಪಣ [೧೦ನೆ ಪರಿಚ್ಛೇದ]

೧೩೩. ಸಾಹಿತ್ಯದರ್ಪಣ [೧೦ನೆ ಪರಿಚ್ಛೇದ]

೧೩೪. ಸಾಹಿತ್ಯದರ್ಪಣ [೧೦ನೆ ಪರಿಚ್ಛೇದ]

೧೩೫. ಸಾಹಿತ್ಯದರ್ಪಣ [೧೦ನೆ ಪರಿಚ್ಛೇದ]

೧೩೬. 'ಸಾಹಿತ್ಯ ದರ್ಪಣ' [೧೦ನೆ ಪರಿಚ್ಛೇದ]

೧೩೭. ಸಾಹಿತ್ಯದರ್ಪಣ [೧೦ನೆ ಪರಿಚ್ಛೇದ]

೧೩೮. ಪ್ರಧಾನೇನ್ಯತ್ರ ವಾಕ್ಯಾರ್ಥೇಯತ್ರಾಂಗಂ ತು ರಸಾದಯಃ ।
ಕಾವ್ಯೇ ತನ್ಮನ್ನಲಂಕಾರೋ ರಸಾದಿರಿತಿ ಮೇ ಮತಿಃ ॥
[ಆನಂದವರ್ಧನ, 'ಧ್ವನ್ಯಾಲೋಕ']

## ಅಧ್ಯಾಯ – ೭

# ಉಪಸಂಹಾರ

# ಉಪಸಂಹಾರ

ವಿಶ್ವನಾಥನ ಸಾಹಿತ್ಯದರ್ಪಣವು ಸಂಸ್ಕೃತ ಕಾವ್ಯಶಾಸ್ತ್ರ ಗ್ರಂಥಗಳಲ್ಲಿ ಅತ್ಯಂತ ಗಮನಾರ್ಹಕೃತಿಯಾಗಿದ್ದು ಸಾಹಿತ್ಯಶಾಸ್ತ್ರದ ಉತ್ತಮ ಉಪಯುಕ್ತ ಗ್ರಂಥವಾಗಿದೆ. ಕಾವ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಮಸ್ತ ಕಾವ್ಯತತ್ವಗಳ ವಿವೇಚನೆಯನ್ನು ಈ ಕೃತಿಯಲ್ಲಿ ಒಳಪಡಿಸಲಾಗಿದೆ. ಈ ಗ್ರಂಥಕ್ಕಿಂತ ಹಿಂದೆ ರಚಿಸಲ್ಪಟ್ಟ ಭರತ, ಭಾಮಹ, ದಂಡಿ, ವಾಮನ ಮುಂತಾದವರ ಪ್ರಖ್ಯಾತ ಅಲಂಕಾರಿಕರ ಕೃತಿಗಳನ್ನು ಹಿನ್ನೆಲಯಾಗಿಟ್ಟುಕೊಂಡು ಈ ಗ್ರಂಥದ ನಿಜವಾದ ಕೊಡುಗೆ ಏನೆಂಬುದನ್ನ ವಿವೇಚಿಸಲಾಗಿದೆ. ಈ ಕೃತಿಯಲ್ಲಿ ಉಕ್ತವಾದ ಯಾವುದೇ ಕಾವ್ಯತತ್ವವನ್ನು ತೆಗೆದುಕೊಂಡಾಗ ಅದರ ಹಿನ್ನೆಲ್ಲೆಯೊಂದಿಗೆ ಕೃತಿಕಾರ ವಿಶ್ವನಾಥನ ಅಭಿಪ್ರಾಯವನ್ನು ವಿವೇಚಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಕೃತಿಕಾರ ವಿಶ್ವನಾಥನ ಜೀವನಕಾಲ ದೇಶ ಮತ್ತು ಬರಹಗಳ ಬಗ್ಗೆ ವಿವೇಚಿಸಲಾಗಿದೆ. ವಿಶ್ವನಾಥನ ಕುಲ, ಜಾತಿ, ಕಾಲ, ದೇಶ, ಕೃತಿಗಳ ಸಾಕಷ್ಟು ಪ್ರಮಾಣಗಳು ಸಿಕ್ಕಿಲ್ಲವಾದರೂ ತಾನು ರಚಿಸಿದ ಸಾಹಿತ್ಯದರ್ಪಣದ ಹಸ್ತಲಿಖಿತ ಪ್ರತಿಯೊಂದರಲ್ಲಿ ಅನೇಕ ಬಿರುದುಗಳಿಂದ ಪ್ರಸಿದ್ಧಿ ಪಡೆದ ವಿಶ್ವನಾಥನು ಓರ್ವರಾಜನ ಆಸ್ಥಾನದಲ್ಲಿ ಮಂತ್ರಿಸ್ಥಾನವನ್ನು ಅಲಂಕರಿಸಿದ್ದನೆಂದು ತಿಳಿದುಬರುತ್ತದೆ ಮತ್ತು ಗೋವಿಂದಠಾಕುರ [೧]ಎಂಬ ಕವಿಯು ತನ್ನ ಗ್ರಂಥದಲ್ಲಿ ವಿಶ್ವನಾಥನ ವಿಚಾರವನ್ನೇ "ತದ್ ದೋಷೌ ಶಬ್ದಾರ್ಥೌ" ಎಂಬ ಕಾರಿಕೆಯನ್ನು ವ್ಯಾಖ್ಯಾನ ಮಾಡುವಾಗ 'ಅರ್ವಾಚೀನಾಸ್ತು' ಎಂಬಲ್ಲಿ ದರ್ಪಣಕಾರನ ಮತವನ್ನು ಉದ್ಧರಿಸಿದನೆಂದು ಮತ್ತು ಸಾಹಿತ್ಯದರ್ಪಣದಲ್ಲಿ ಅಲ್ಲಾವುದ್ದೀನ ರಾಜನ ಬಗ್ಗೆ ಸ್ಪಷ್ಟವಾದ ಹೇಳಿಕೆ ಬಂದಿರುವುದರಿಂದ ಈತನ ಕಾಲವು ಹದಿಮೂರನೆ ಶತಮಾನದ ಕೊನೆಯಾಗಿರಬೇಕೆನ್ನಲಾಗಿವೆ. ಧ್ವನಿಪ್ರಸ್ಥಾನವನ್ನು ಒಪ್ಪಿ ಆನಂದವರ್ಧನನ ಮತವನ್ನು ಸಂಪೂರ್ಣವಾಗಿ ಗೌರವಿಸಿದ್ದಾನೆ. ಈತನು ಹದಿನೆಂಟು ಭಾಷೆಗಳಲ್ಲಿ ಪರಿಣಿತನಾದರಿಂದ 'ಅಷ್ಟಾದಶಭಾಷಾವಾರ ವಿಲಾಸಿನೀಭುಜಂಗ' ಎಂಬ ಬಿರುದಲ್ಲದೆ, ಸಂಧಿವಿಗ್ರಹಿಕ, ಧ್ವನಿಪ್ರಸ್ಥಾಪನಾಚಾರ್ಯ, ಕವಿರಾಜ ಕವಿಸೂಕ್ತಿರತ್ನಾಕರ ಇತ್ಯಾದಿ ಬಿರುದುಗಳಿಂದ ವಿಶ್ವನಾಥನು ಪ್ರಸಿದ್ಧನಾಗಿದ್ದಾನೆ. ರಾಘವವಿಲಾಸ, ಪ್ರಶಸ್ತಿರತ್ನಾವಳಿ, ಸಾಹಿತ್ಯದರ್ಪಣ, ಕುವಲಯಾಶ್ವಚರಿತ, ಚಂದ್ರಕಲಾನಾಟಿಕೆ ಇವಿಷ್ಟು ಕೃತಿಗಳನ್ನ ರಚಿಸಿದ್ದಾನೆ.[೨] ವಿಶ್ವನಾಥನನ್ನು ಕುರಿತು ಇನ್ನು ಅನೇಕ ವಿಚಾರಗಳನ್ನು ಪೀಠಿಕೆಯಲ್ಲಿ ಸಂಗ್ರಹಿಸಲಾಗಿದೆ.

ವಿಶ್ವನಾಥನು ಸಾಹಿತ್ಯದರ್ಪಣದ ಪ್ರಥಮ ಪರಿಚ್ಛೇದಲ್ಲಿ ಕಾವ್ಯಪ್ರಯೋಜನವನ್ನು ತಿಳಿಸಿದ್ದಾನೆ. ಈ ವಿಚಾರದ ಹಿನ್ನೆಲೆಯಾಗಿ, ಮಮ್ಮಟನ ಮತ್ತು ಇತರ ಕಾವ್ಯಲಂಕಾರಿಕರು ಹೇಳಿರುವ ಕಾವ್ಯಪ್ರಯೋಜನವನ್ನ ಮೊದಲು ಚರ್ಚಿಸಲಾಗಿದೆ. ಕಾವ್ಯವನ್ನು ಒಬ್ಬನು ರಚಿಸುವುದಾಗಲಿ, ಓದುವುದಾಗಲಿ ಇದರಿಂದ ಯಾವ ಪ್ರಯೋಜನವನ್ನು ಪಡೆಯುತ್ತಾರೆ ಎಂಬ ಪ್ರಶ್ನೆಗೆ ಲಾಕ್ಷಣಿಕರು ತಮ್ಮದೇ ಆದ ರೀತಿಯಲ್ಲಿ ಉತ್ತರವನ್ನು ಕೊಟ್ಟು ವಿಮರ್ಶಿಸಿದ್ದಾರೆ. ಈ ವಿಚಾರಕ್ಕೆ ಬಂದರೆ ಮಮ್ಮಟನ ವಾಖ್ಯಾನವು ಪ್ರಸಿದ್ದವಾದ್ದರಿಂದ ಮೊದಲು ಈ ವಿಷಯಕ್ಕೆ ಇದನ್ನೇ ತಳಹದಿಯಾಗಿಟ್ಟುಕೊಳ್ಳಲಾಗಿದೆ. ಕಾವ್ಯಪ್ರಯೋಜನದ ಪ್ರತಿಪಾದನೆಯಲ್ಲಿ ಪ್ರಾಚೀನ ಅಲಂಕಾರಿಕನಾದ ಭಾಮಹನ ವಿಚಾರವು ಗಮನೀಯವಾಗಿದೆ.

**ಧರ್ಮಾರ್ಥ ಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸುಚ ।**
**ಪ್ರೀತಿಂ ಕರೋತಿ ಕೀರ್ತಿಂ ಚ ಸಾಧುಕಾವ್ಯನಿಬಂಧನಮ್**[೩] ॥

"ಸತ್ಕಾವ್ಯವು ಪುರುಷಾರ್ಥ ಸಾಧನೆಯಲ್ಲಿ ಮತ್ತು ನೃತ್ಯಗೀತಾದಿಗಳಲ್ಲಿ ನೈಪುಣ್ಯವನ್ನೂ, ಪ್ರೀತಿ ಕೀರ್ತಿಗಳನ್ನೂ, ಉಂಟು ಮಾಡುತ್ತದೆ". ಪ್ರೀತಿ ಕೀರ್ತಿಗಳ ಲಾಭ ಕಲೆಗಳಲ್ಲಿ ನೈಪುಣ್ಯ ಪಡೆಯುವುದು ಉಪದೇಶ ಇತ್ಯಾದಿಗಳು ಕಾವ್ಯಪ್ರಯೋಜನದ ವಿವಿಧ ಅಂಶಗಳೆಂದು ಈ ಶ್ಲೋಕದಿಂದ ತಿಳಿದುಬರುತ್ತದೆ. ಇಲ್ಲಿ ಕಾವ್ಯಕ್ಕೆ ಪ್ರೀತಿ, ಕೀರ್ತಿಗಳೆಂಬ ಪ್ರಯೋಜನವನ್ನು ಹೇಳಿರುವುದರಿಂದ, ಕೀರ್ತಿಯಿಂದ ಲಭಿಸುವುದು ಸಂತೋಷವೇ, ಆದ್ದರಿಂದ ಅದನ್ನು ಸಂತೋಷದಲ್ಲೇ ಸೇರಿಸಬಹುದಾದರಿಂದ ಅನಂದವೊಂದೆ ಕಾವ್ಯಪ್ರಯೋಜನವೆಂದು ಭಾಮಹನು ಹೇಳಿದ್ದಾನೆ. ಆದರೆ ಆನಂದವೆ ಪ್ರಯೋಜನವೆಂದು ಹೇಳುವುದು ಲೌಕಿಕವಾಗಿ, ಶಾಸ್ತ್ರೀಯವಾಗಿ ಸಮರ್ಪಕವಾಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಮಮ್ಮಟನಿಂದ ಪ್ರತಿಪಾದಿತವಾಗಿರುವ ಕಾವ್ಯಪ್ರಯೋಜನವು ಗಮನಾರ್ಹವಾಗಿದೆ.

**ಕಾವ್ಯಂ ಯನಸೇರ್ಥಽಕೃತೇ ವ್ಯವಹಾರವಿದೇಶಿವೇತರಕ್ಷತಯೇ ।**
**ಸದ್ಯಃಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ**[೪] ॥

ಕಾವ್ಯವು ಯಶಸ್ಸಿಗಾಗಿ, ಧನಾರ್ಜನೆಗಾಗಿ, ವ್ಯವಹಾರಜ್ಞಾನಕ್ಕಾಗಿ, ಅಶುಭನಿವಾರಣೆಗಾಗಿ ತಕ್ಷಣವೇ ಆನಂದವನ್ನು ಅನುಭವಿಸುವುದಕ್ಕಾಗಿ ತಕ್ಷಣವೇ ಆನಂದವನ್ನು ಅನುಭವಿಸುವುದ ಕ್ಕಾಗಿ ಕಾಂತೆಯಂತೆ ಉಪದೇಶದ ಸಲುವಾಗಿ"

**"ಸಕಲಪ್ರಯೋಜನಮೌಲಿಭೂತಂ ಸಮನಂತರವಮೇವ ।**
**ರಸಾಸ್ವಾದನ ಸಮುದ್ಭೂತಂ ವಿಗಲೀತ ವೇದ್ಯಾಂತರಮಾನಂದಮ್** ॥

ಮಮ್ಮಟನು ಕವಿಯ ಮತ್ತು ಸಹೃದಯರ ದೃಷ್ಟಿಯಿಂದ ಕಾವ್ಯಪ್ರಯೋಜನವನ್ನು ನಿರೂಪಿಸಿದ್ದಾನೆ. ಯಶಸ್ಸನ್ನು ಮೊದಲು ಹೇಳಿ, ಉದ್ದಾತ್ತವಾದ ಧ್ಯೇಯಸಾಧನೆಯ ಅವಶ್ಯಕತೆಯನ್ನು ಸೂಚಿಸಿದ್ದಾನೆ. ಜನರ ಪ್ರೀತಿ, ಮೆಚ್ಚುಗೆಗಳೆ ಕವಿಯ ಯಶಸ್ಸಿನ ಸಾರ, ಅದರಿಂದ ಕವಿಯು ಜನತೆಯ ಹೃದಯದಲ್ಲಿ ಅಮರವಾಗುತ್ತಾನೆ. ಈ ಬಗೆಯ ಯಶಸ್ಸಿನ ವಿಚಾರವಾಗಿ ಕಾಳಿದಾಸನನ್ನು ದೃಷ್ಟಾಂತವಾಗಿ ಕೊಟ್ಟಿರುವುದು ಸೂಕ್ತವಾಗಿದೆ. ಮಮ್ಮಟನು ಆರ್ಥೀಯ ಪ್ರಯೋಜನದಿಂದ ಕಾವ್ಯವನ್ನು ದೂರಮಾಡದೇ ಅದರ ಅವಶ್ಯಕತೆಯನ್ನು ಸೂಚಿಸಿ, ಹರ್ಷಚಕ್ರವರ್ತಿಯಿಂದ ಹೇರಳವಾಗಿ ಧನವನ್ನು ಪಡೆದ 'ಧಾವಕ'ನೆಂಬ ಕವಿಯ ವಿಚಾರವನ್ನು ಹೇಳಿದ್ದಾನೆ. ಅಲ್ಲದೇ ರಾಜಾದಿ ವಿಷಯಕವಾದ ವ್ಯವಹಾರ ಜ್ಞಾನವೂ ಕಾವ್ಯದಿಂದ ಲಭಿಸುತ್ತದೆ ಎಂಬುದು ಮಮ್ಮಟನ ಮತ. ಅವನು ಪ್ರತಿಪಾದಿಸಿರುವ ಕಾವ್ಯಪ್ರಯೋಜನಗಳಲ್ಲಿ 'ಅಶುಭನಿವಾರಣೆ' ಎಂಬುದು ವಿಶೇಷವಾಗಿದೆ. ವ್ಯಾದಿಯನ್ನು ಕಾವ್ಯದ ಮೂಲಕ ಪರಿಹರಿಸಿಕೊಂಡ ಮಯೂರ ಕವಿಯು ನೂರುಶ್ಲೋಕವುಳ್ಳ ಸೂರ್ಯಶತಕದಿಂದ ಆ ದೇವತೆಯನ್ನು ಭಕ್ತಿಯಿಂದ ಪೂಜಿಸಿದ ನಂತರ ರೋಗನಿವಾರಣೆ ಆಯಿತೆಂಬ ವಿಚಾರವನ್ನೂ ಮಮ್ಮಟನು ಹೇಳಿ ಕಾವ್ಯದಲ್ಲಿ ಇಂತಹ ಒಂದು ಪ್ರಯೋಜನದಲ್ಲಿರಬಹುದಾದ ಆಸಕ್ತಿಯನ್ನು ಸೂಚಿಸಿದ್ದಾನೆ. ಕಾಂತಾಸಮಿತಾ[೫] ಕಾಂತೆಯ ಮಧುರವಾದ ಮಾತುಗಳಿಗೆ ಸಮನಾದ ಕಾವ್ಯವು ಅಕ್ಷರಶಃ ಪಾಲಿಸಲ್ಪಡಬೇಕಾದ ವೇದಾದಿಗಳಿಂದ ಅಂದರೆ ಪ್ರಭು ಸಮಿತದಿಂದಲೂ, ತಾತ್ಪರ್ಯ ಗ್ರಹಣವೇ ಪ್ರಧಾನ ವಾಗಿರುವ ಇತಿಹಾಸ ಪುರಾಣಗಳಿಂದ ಅಂದರೆ ಸುಹೃತ್ಸಮಿತದಿಂದಲೂ ಭಿನ್ನವೆಂದು ಸೂಚಿಸಿ, ಕಾಂತೆಯಂತೆ ಸರಸತೆಯ ಮೂಲಕ ಗಮನ ಸೆಳೆದು 'ರಾಮನಂತೆ ವರ್ತಿಸಬೇಕು ರಾವಣನಂತಲ್ಲ' ಎಂದು ಹೇಳಿ ಕಾವ್ಯಕ್ಕೆ ಆನಂದವೆ ಕಿರೀಟಪ್ರಾಯವಾದ ಪ್ರಯೋಜನವೆಂದು[೬] ಮಮ್ಮಟನು ಪ್ರತಿಪಾದಿಸಿರುವುದು ಉಚಿತವಾಗಿದೆ. ಹೇಮಚಂದ್ರನು ಮಮ್ಮಟನ ಈ ಉಕ್ತಿಕ್ರಮವನ್ನು ಟೀಕಿಸಿದ್ದಾನೆ. ಭಟ್ಟನಾಯಕನು ಕವಿಗಳಿಗಿಂತ ಕಾವ್ಯಪ್ರಯೋಜನವು ರಸಿಕರಿಗೆ ಹೆಚ್ಚು ಪ್ರಯೋಜನವೆಂದು ಹೇಳಿದ್ದಾನೆ. ವಿಶ್ವನಾಥನು ಕಾವ್ಯದ ಆಸ್ವಾಧವು ದರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಅರವತ್ತನಾಲ್ಕು ಕಲೆಗಳಲ್ಲಿ ಪೂರ್ಣ ಪರಿಚಯವನ್ನುಂಟು ಮಾಡಿ ಯಶಸ್ಸನ್ನು ಸಂತೋಷವನ್ನು ಕೊಡುತ್ತದೆ ಎಂಬುದನ್ನಷ್ಟೆ ತಿಳಿಸಿದ್ದಾನೆ ಆದರೆ ಮಮ್ಮಟನಂತೆ ಸಮಗ್ರವಾಗಿ ಹೇಳದೆ ಮುಖ್ಯವಾದ ಅಂಶಗಳನಷ್ಟೇ ನಿರೂಪಿಸಿದ್ದಾನೆ.

ವಿಶ್ವನಾಥನು ಕಾವ್ಯಲಕ್ಷಣದ ವಿಚಾರದಲ್ಲಿ ವಿಶೇಷವಾದ ಗಮನವನ್ನು ಕೊಟ್ಟು ಹಿಂದಿನ ಅಲಂಕಾರಿಕರ ಕಾವ್ಯಲಕ್ಷಣವನ್ನು ಖಂಡಿಸಿದ್ದಾನೆ. ಭಾಮಹನ 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದು ಪ್ರಾರಂಭವಾದ ಕಾವ್ಯಲಕ್ಷಣ ಅನೇಕ ಅಲಂಕಾರಿಕರ ಮೇಲೆ ಪ್ರಭಾವವುಂಟಾಗಿ ನಂತರ ಬಂದ ದಂಡಿಯು "ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ[೭]" ಇಷ್ಟವಾದ ಪದಸಮೂಹವನ್ನು ಕಾವ್ಯಶರೀರವೆಂದು ಹೇಳಿದ್ದಾನೆ.

ರುದ್ರಟನ "ನನು ಶಬ್ದಾರ್ಥೌ ಕಾವ್ಯಂ[೮]" ಎಂಬುದು ಭಾಮಹನ ಪ್ರತಿಪಾದನೆಯೇ ಆಗಿದೆ. ವಾಮನನ "ರೀತಿರಾತ್ಮಕಾವ್ಯಸ್ಯ", ಆನಂದವರ್ಧನನ "ಕಾವ್ಯಸ್ಯತ್ಮಾಧ್ವನಿಃ" ಹೀಗೆ ಪ್ರಾಚೀನ ಅಲಂಕಾರಿಕರೆಲ್ಲರೂ ತಮ್ಮದೇ ಆದ ರೀತಿಯಲ್ಲಿ ಕಾವ್ಯಲಕ್ಷ್ಯಣವನ್ನು ಪ್ರತಿಪಾದಿಸಿದ್ದಾರೆ. ಇದರಲ್ಲಿ ಮಮ್ಮಟನು ಕೊಟ್ಟಿರುವ ಕಾವ್ಯಲಕ್ಷಣವು ಗಮನಾರ್ಹವಾಗಿದೆ. "ತದ ದೋಷೌ ಶಬ್ದಾರ್ಥೌಸಗುಣಾನಲಂಕೃತಿ ಪುನಃ ಕ್ವಾಪಿ[೯]" [ದೋಷ ರಹಿತವಾದ ಮತ್ತು ಗುಣವುಳ್ಳ ಹಾಗೂ ಕೆಲವು ವೇಳೆ ಅಲಂಕಾರಗಳಿಲ್ಲದ ಶಬ್ದಾರ್ಥಗಳೇ ಕಾವ್ಯ"] ಎಂದು ಅವನು ಮಾಡಿರುವ ಕಾವ್ಯ ಸ್ವರೂಪ ನಿರೂಪಣೆಯಲ್ಲಿ ಒಂದು ವೈಶಿಷ್ಟವಿದೆ. ಹಿಂದಿನಿಂದಲೂ ರೂಢಿಯಲ್ಲಿದ್ದ ಶಬ್ದಾರ್ಥದ ವಿಚಾರ, ಅಲಂಕಾರ, ಗುಣ ಮುಂತಾದವುಗಳನ್ನು ಬಿಡದೆ ಹೊಸ ಸಿದ್ಧಾಂತಗಳೊಂದಿಗೆ ಸೇರಿಸುವ ಪ್ರಯತ್ನವನ್ನು ಮಾಡಿದ್ದಾನೆ. ಆದರೆ ಇವನ ಈ ಕಾವ್ಯಲಕ್ಷಣದ ವಾಕ್ಯದಲ್ಲಿ ಪದಪದದಲ್ಲಿಯೂ ದೋಷವನ್ನು ಕಂಡು ಹಿಡಿದು ವಿಶ್ವನಾಥನು ಮಮ್ಮಟನ ಕಾವ್ಯಲಕ್ಷಣವನ್ನು ಉಗ್ರವಾಗಿ ಟೀಕಿಸಿದ್ದಾನೆ. 'ಅದೋಷೌ' ಎಂಬ ಪದದ ದೋಷವನ್ನು ಈ ರೀತಿ ವರ್ಣಿಸಿದ್ದಾನೆ. ದೋಷವಿಲ್ಲದ್ದು ಕಾವ್ಯ ಎಂದು ಹೇಳುವುದಾದರೆ ದೋಷವಿರುವ ಕಾವ್ಯವು ಕಾವ್ಯವೇ ಅಲ್ಲ ಎಂದು ಹೇಳಬೇಕಾಗುತ್ತದೆ. ಕಾವ್ಯದಲ್ಲಿ ಒಂದು ದೋಷವಿಲ್ಲದಂತೆ ಯಾರು ಗ್ರಂಥ ರಚನೆ ಮಾಡಲಾರರು. ಅಲ್ಲೊಂದು ಇಲ್ಲೊಂದು ದೋಷವಿದ್ದು ಧ್ವನಿಪೂರ್ಣವಾಗಿದ್ದರೆ ಅದನ್ನು ಕಾವ್ಯವೆಂದೇ ಕರೆಯಲಾಗಿದೆ ಎಂದು ಧ್ವನಿಕಾರನೆ ಹೇಳಿದ್ದಾನೆ. 'ಅದೋಷೌ' ಬದಲು 'ಈಷದೋಷೌ' ಎಂದು ಹೇಳಿದರೆ ನಿರ್ದೋಷ ಕಾವ್ಯಕ್ಕೆ ಕಾವ್ಯತ್ವ ತಪ್ಪುತ್ತದೆ ಎಂದು ಹೇಳಿ.

**ಕೀಟಾನುವಿದ್ಧರತ್ನಾದಿಸಾಧಾರಣ್ಯೇನ ಕಾವ್ಯತಾ ।**
**ದುಷ್ಟೇ ಷ್ವಪಿ ಮತಾ ಯತ್ರ ರಸಾದ್ಯನುಗಮಃ ಸ್ಫುಟಃ[೧೦] ॥**

ರತ್ನದ ಲಕ್ಷಣವನ್ನು ಹೇಳುವಾಗ ಅದನ್ನು ಒಂದು ಕಡೆ ಹುಳವು ಕೊರೆದಿದ್ದರೂ ಅಷ್ಟರಿಂದಲೇ ನಾವು ರತ್ನವೆಂದು ಭಾವಿಸದೇ ಅದನ್ನು ರತ್ನವೆಂದೇ ಕರೆಯುತ್ತೇವೆ. ಹಾಗೇ ಕಾವ್ಯವು ಸ್ವಲ್ಪದೋಷವುಳ್ಳದ್ದು ಎಂದ ಮಾತ್ರಕ್ಕೆ ಅದರ ಕಾವ್ಯತ್ವವೇ ಕುಂದುವುದಿಲ್ಲ. ಹೇಗೆ ರತ್ನದಲ್ಲಿರುವ ದೋಷವು ಬೇರೆ ರತ್ನಕ್ಕೆ ಹೋಲಿಸಿದರೆ ಕಡಿಮೆ ಮಟ್ಟದ ರತ್ನವೆಂದು ಭಾವಿಸುತ್ತವೂ. ಹಾಗೆ ಕಾವ್ಯದಲ್ಲಿನ ಸ್ವಲ್ಪ ದೋಷತ್ವವು ಬೇರೆ ಕಾವ್ಯಕ್ಕೆ ಹೋಲಿಸಿದರೆ, ಕನಿಷ್ಠವೆಂಬ ತಾರತಮ್ಯವನ್ನು ಮಾತ್ರ ತಿಳಿಸುತ್ತದೆ ಎಂದು 'ಅದೋಷೌ' ಎಂಬ ಮಮ್ಮಟನ ಕಾವ್ಯಲಕ್ಷಣದ ಪದವನ್ನು ಈಷದೋಷೌ ಎಂಬುದರಿಂದ ಉದಾಹರಿಸಿ ಟೀಕಿಸಿದ್ದಾನೆ. ಅಂದರೆ ಕಾವ್ಯವು ಸಂಪೂರ್ಣವಾಗಿ ದೋಷವಿರದೆಯೂ ಹಾಗೆ ಸಂಪೂರ್ಣವಾಗಿ ದೋಷವುಳ್ಳದ್ದು ಇರುವುದಿಲ್ಲವಾದ್ದರಿಂದ ಮಮ್ಮಟನು ಕಾವ್ಯದಲ್ಲಿ ಅದೋಷೌ ಎಂದು ಹೇಳಿರುವುದು ಸರಿಯಲ್ಲ ಎಂಬ ಟೀಕೆಗೆ

ಗುರಿಯಾಗಿದೆ. ಹೀಗೆ ಮಮ್ಮಟನು ಹೇಳಿರುವ 'ಸಗುಣ' ಎಂಬ ಪದವನ್ನು 'ಸರಸೌ' ಎಂಬ ವಿಶೇಷಣ ಕೊಟ್ಟು ವಿಮರ್ಶಿಸಿದ್ದಾನೆ. ಆದರೆ, ವಿಶ್ವನಾಥನ ಈ ವಿಮರ್ಶಾ ಟೀಕೆಯು ಸರಿಯಲ್ಲ. ಏಕೆಂದರೆ ಮಮ್ಮಟನ ಕಾವ್ಯಲಕ್ಷಣವು  ಅಲಂಕಾರ, ಗುಣ, ರೀತಿ, ಧ್ವನಿ, ರಸ, ಈ ಯಾವುದೇ ಒಂದು ಅಂಶಕ್ಕೆ ತನ್ನ ಕಾವ್ಯಲಕ್ಷಣವನ್ನು ಸೀಮಿತಗೊಳಿಸದೆ ಈ ಎಲ್ಲಾ ಅಂಶಗಳನ್ನು ಸಮನ್ವಯವಾಗಿ ಒಪ್ಪಿಕೊಂಡು ಕಾವ್ಯಲಕ್ಷಣವನ್ನು ಕೊಟ್ಟಿದ್ದಾನೆ. 'ಅದೋಷೌ' ಎಂದು ಹೇಳಿರುವುದು 'ಸ್ಫುಟದೋಷರಹಿತವಾದವು' ಸ್ಫುಟವೆಂದರೆ ರಸಪ್ರತೀತಿಗೆ ತಡೆಯಾಗತಕ್ಕದ್ದು ನಾವು ಸಾಮಾನ್ಯವಾಗಿ ದೋಷವೆಂದು ಕರೆಯುವುದು ಸಂದರ್ಭವಶದಿಂದ ಗುಣವಾಗಬಹುದೆಂಬ ಅಂಶವು ಮಮ್ಮಟನಿಗೂ ತಿಳಿದಿದೆ. 'ಸಗುಣೌ' ಎಂಬುದಕ್ಕೆ ಮಮ್ಮಟನು ವಾಮನನ ಇಪ್ಪತ್ತು ಶಬ್ದಗುಣ, ಅರ್ಥಗುಣಗಳನ್ನು ಮೂರೇ [ಮಾಧುರ್ಯ, ಪ್ರಸಾದ, ಓಜಸ್ಸು] ಗುಣಗಳಿಗೆ ಇಳಿಸಿ ಅವೆಲವೂ ಮುಖ್ಯವಾಗಿ ರಸಧರ್ಮಗಳೆಂದು ಶಬ್ದಾರ್ಥಗಳಲ್ಲಿದೆ ಎಂದು ಔಪಚಾರಿಕವಾಗಿ ಮಮ್ಮಟನೇ ನಿರ್ಣಯಿಸಿದ್ದಾನೆ. ಇನ್ನು ಅಲಂಕಾರದ ವಿಷಯಕ್ಕೆ ಬಂದರೆ, "ಸರ್ವತ್ರ ಸಾಲಂಕಾರೌ ಕ್ವಚಿತ್ತು ಸ್ಫುಟಾಲಂಕಾರ ವಿರಹೇಽಪಿನ ಕಾವ್ಯತ್ವ ಹಾನಿಃ" ಎಲ್ಲಾ ಕಡೆಯಲ್ಲೂ ಶಭಾರ್ಥಗಳು ಅಲಂಕಾರ ಸಹಿತವಾಗಿಯೇ ಇರುತ್ತದೆ. ಕೆಲವು ಕಡೆ ಸ್ಫುಟವಾದ ಅಲಂಕಾರವಿಲ್ಲದಿದ್ದರೂ ಕಾವ್ಯತ್ವಕ್ಕೆ ಹಾನಿಯಿಲ್ಲವೆಂದಿದ್ದಾನೆ. ಉದಾಹರಣೆಗೆ ಈ ಶ್ಲೋಕ

**ಯಃ ಕೌಮಾರಹರಃ ಸ ಏವ ಹಿ ವರಸ್ತಾ ಏವ ಚೈತ್ರಕ್ಷಪಾಃ ।**
**ತೇ ಚೋನ್ಮೀಲಿತ ಮಾಲತೀಸುರಭಯಃ ಪ್ರೌಢಾಃ ಕದಂಬಾನಿಲಾಃ ॥**
**ಸಾ ಚೈವಾಸ್ಮಿ ತಥಾಪಿ ತತ್ವಸುರತವ್ಯಾಪಾರಲೀಲಾವಿಧೌ ।**
**ರೇವಾರೋಧಸಿ ವೇತಸೀತ ತರುತಲೇ ಚೇತಃ ಸಮುತ್ಕಂಠತೇ ೧೧॥**

"ನನ್ನ ಕೌಮಾರವನ್ನು ಹರಣ ಮಾಡಿದ ಅವನೇ ಈ ವರನು ಅವೇ ವಸಂತಮಾಸದ ರಾತ್ರಿಗಳು, ಅರಳಿದ ಮಾಲತೀಕುಸುಮಗಳ ಗಂಧವುಳ್ಳ ಪ್ರೌಢವಾದ ಕದಂಬವೃಕ್ಷದ ಮೇಲೆ ಬೀಸುತ್ತಿರುವ ಗಾಳಿಗಳು ಅವೇ ಅವಳೇ ನಾನಿರುವನು ಆದರೂ ನನ್ನ ಮನಸ್ಸು ನರ್ಮದೆಯ ದಡದಲ್ಲಿ ಬಿದಿರು ಮೇಳೆಯ ಕೆಳಗೆ ಸುರತ ಕ್ರೀಡೆಯ ಲೀಲೆಗಾಗಿ ಹಾತೊರೆಯುತ್ತಿದ". ಇಲ್ಲಿ ಸ್ಫುಟವಾದ ಅಲಂಕಾರಯಾವುದೂ ಇಲ್ಲ ಆದರೆ ರಸಕ್ಕೆ ಪ್ರಾಧಾನ್ಯವಿರುವುದರಿಂದ ಇಲ್ಲಿ ಅಲಂಕಾರಕ್ಕೆ ಪ್ರಾಧಾನ್ಯವಿಲ್ಲ. ಆದರಿಂದ ಮಮ್ಮಟನು ಪರೋಕ್ಷವಾಗಿ ರಸ ಅಲಂಕಾರಗಳನ್ನು ಒಪ್ಪಿಕೊಂಡಿದ್ದಾನೆ. ಉದಾಹರಣೆಗೆ ಕಾವ್ಯಪ್ರಕಾಶದ ಒಂಬತ್ತು ಹತ್ತನೆ ಉಲ್ಲಾಸದಲ್ಲಿ ಶಬ್ದಾರ್ಥಗಳಿಗೆ ಅನ್ವಯಿಸಿದಂತೆ ಸುಮಾರು ಅರವತ್ತಕ್ಕೂ ಹೆಚ್ಚು ಅಲಂಕಾರಗಳನ್ನು ವಿವರಿಸಿದ್ದಾನೆ. ಆದ್ದರಿಂದ ಮಮ್ಮಟನಂತ ಪ್ರಖ್ಯಾತ ಅಲಂಕಾರಿಕನನ್ನು ವಿಶ್ವನಾಥನು ಟೀಕಿಸಿರುವುದು ಸಮ್ಮತವಾಗಿಲ್ಲ.

"ರೀತಿ ರಾತ್ಮ ಕಾವ್ಯಸ್ಯ[೧೨]" ರೀತಿಯೇ ಕಾವ್ಯದ ಆತ್ಮ ಎಂದು ಕಾವ್ಯಲಕ್ಷಣವನ್ನು ಕೊಟ್ಟ ವಾಮನ ಉಕ್ತಿಯನ್ನೂ ಟೀಕಿಸಿದ್ದಾನೆ. ರೀತಿ ಎಂಬುದು ಪದಗಳ ಜೋಡಣೆ ಯಾದ್ದರಿಂದ ಕಾವ್ಯದ ಆತ್ಮವಾಗಲಾರದು. ಸಂಘಟನೆ ಎಂಬುದು ಪದಗಳ ಜೋಡಣೆ ಆದ್ದರಿಂದ ಆತ್ಮವು ಇದಕ್ಕಿಂತ ಬೇರೆಯೇ ಆಗಿದೆ ಎಂದಿದ್ದಾನೆ. ಆದರೆ, ವಾಮನನ ಪ್ರಕಾರ ವಿಶಿಷ್ಟಪದರಚನಾವಿನ್ಯಾಸವೇ ಕಾವ್ಯದ ಸರ್ವಸ್ವ ಆದ್ದರಿಂದ ಗುಣಸ್ವರೂಪದಿಂದ ಕೂಡಿದ ವಿಶಿಷ್ಟಪದರಚನೆಯೇ ರೀತಿ ಎಂದು ಹೇಳಿ ರೀತಿ ಗುಣಗಳಿಗೆ ಅವಿನಾಭಾವ ಸಂಬಂಧವನ್ನು ಕಲ್ಪಿಸಿದ್ದಾನೆ ಮತ್ತು 'ಆತ್ಮ' ಶಬ್ದವನ್ನು ಮೊಟ್ಟಮೊದಲಿಗೆ ಪ್ರತಿಪಾದಿಸಿ ಧ್ವನಿಕಾರ ಮತ್ತು ದರ್ಪಣಕಾರನಿಗೆ ಪ್ರೇರಕನಾಗಿದ್ದಾನೆ. ಇನ್ನು ಕುಂತಕನ ಕಾವ್ಯಲಕ್ಷಣವನ್ನು

**ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ ।**
**ಬಂದೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣೆ[೧೩] ॥**

"ವಕ್ರಕವಿ ವ್ಯಾಪಾರದಿಂದ ಕೂಡಿದ್ದು, ಬಲ್ಲವರಿಗೆ ಆಹ್ಲಾದ ಉಂಟುಮಾಡುವ ಆದ ಬಂಧದಲ್ಲಿ ವ್ಯವಸ್ಥೆಗೊಂಡ ಶಬ್ದಾರ್ಥಗಳು ಒಟ್ಟಿಗೆ ಕಾವ್ಯ". ವಿಶ್ವನಾಥನ ಪ್ರಕಾರ ಅಲಂಕಾರವುಳ್ಳದ್ದು ಶಬ್ದಾರ್ಥಗಳೂ ಕಾವ್ಯದಲ್ಲಿ ಉತ್ಕರ್ಷವನ್ನು ದೊರಕಿಸುತ್ತವೆಯೋ ಹೊರತು ಕಾವ್ಯದ ಸ್ವರೂಪವನ್ನು ನಿರ್ಧರಿಸಲಾರವು. ಆದ್ದರಿಂದ ವಕ್ರೋಕ್ತಿಯನ್ನು ಒಂದು ಅಲಂಕಾರವೆಂದು ತಿಳಿಸಿ ಖಂಡಿಸಿದ್ದಾನೆ. ಕುಂತಕನು ಆನಂದವರ್ಧನನ ಧ್ವನಿ, ಅಭಿನಯಗುಪ್ತನ ರಸ ಈ ಮೂಲತತ್ವಗಳಿಗೆ ಭಂಗಬಾರದಂತೆ ಭಾಮಹನು ಮೊಟ್ಟಮೊದಲಿಗೆ ತಿಳಿಸಿದ ವಕ್ರೋಕ್ತಿ ಪದವನ್ನು ತನ್ನ ಕಾವ್ಯಶಾಸ್ತ್ರ ಗ್ರಂಥದಲ್ಲಿ ವಿಶಾಲವಾದ ಅರ್ಥದಲ್ಲಿ ಬಳಸಿ ಅಲಂಕಾರ ರೀತಿಗಳೆರಡೂ ಒಳಗೊಳ್ಳುವಂತಹ ವ್ಯವಸ್ಥಿತವಾದ ಕಾವ್ಯಲಕ್ಷಣವನ್ನು ಕೊಟ್ಟಿದ್ದಾನೆ. ಇನ್ನು ಆನಂದವರ್ಧನ ವಿಚಾರದಲ್ಲಿ ವಿಶ್ವನಾಥನು ಅವನ ಧ್ವನಿ ಸಿದ್ಧಾಂತದಲ್ಲಿರುವ ರಸವನ್ನು ನಿರ್ದೇಶಿಸಿ. ಅವನ ಕಾವ್ಯಲಕ್ಷಣವನ್ನು ಗೌರವಿಸಿ. ಧ್ವನಿ ಸಿದ್ಧಾಂತವನ್ನು ಎತ್ತಿ ಹಿಡಿದ್ದಾನೆ.

ಇನ್ನು ವಾಕ್ಯ ಸ್ವರೂಪವನ್ನು ವಿಶ್ವನಾಥನು ಈ ರೀತಿಯಾಗಿ ನಿರೂಪಿಸಿದ್ದಾನೆ. "ವ್ಯಾಕಂಸ್ಯಾತ್ ಯೋಗ್ಯತಾಕಾಂಕ್ಷಾಸಕ್ತಿಯುಕ್ತಃ ಪದೋಚ್ಚಯಃ[೧೪]" ವಾಕ್ಯವೆಂದರೆ, "ಯೋಗ್ಯತೆ, ಆಕಾಂಕ್ಷೆ, ಆಸಕ್ತಿಗಳಿಂದ ಕೂಡಿರುವ ಪದಗಳ ಸಮುಚ್ಚಯ" ಎಂದು ಹೇಳಿ, ಯೋಗ್ಯತೆಯ ಪದಗಳ ಅರ್ಥಗಳು ಒಂದಕ್ಕೊಂದು ಸಂಬಂಧಿಸಲಿಕ್ಕೆ ಯಾವ ಅಡಚಣೆ ಆಗದಿರುವುದಾಗಿದೆ. ಆಕಾಂಕ್ಷೆಯ ವಾಕ್ಯದ ಪದಗಳು ಅರ್ಥದ ಹೊಂದಿಕೆಗಾಗಿ ಒಂದನ್ನೊಂದು ಕೋರುವು ದಾಗಿದೆ. ಆಸಕ್ತಿಯು ಕೇಳುವವರಿಗೆ ಪದಾರ್ಥಗಳ ಜ್ಞಾನವು ಯಾವ ಅಡಚಣೆಯಿಲ್ಲದೇ ಆಗುವುದು ವಾಕ್ಯದ ಸ್ವರೂಪವಾಗಿದೆ. ಸಾಮಾನ್ಯವಾಕ್ಯ ಮತ್ತು ಮಾಹಾವಾಕ್ಯವೆಂದು ಎರಡು ವಿಧಗಳನ್ನು

ವಿಶ್ವನಾಥನು ವಾಕ್ಯದಲ್ಲಿ ಭೇದವನ್ನು ತಿಳಿಸಿದ್ದಾನೆ. 'ಶೂನ್ಯಂ ವಾಸಾಗೃಹಂ' ಎಂಬುದು ಸಾಮಾನ್ಯವಾಕ್ಯದ ಉದಾಹರಣೆಯಾಗಿದೆ. ರಘುವಂಶ, ಮಹಾಭಾರತ ಇತ್ಯಾದಿಗಳು ಮಹಾವಾಕ್ಯದ ಉದಾಹರಣೆಯಾಗಿದೆ. ವಾಕ್ಯದಲ್ಲಿ ಸ್ವರೂಪವನ್ನು ತಿಳಿಯುವ ಮೊದಲು ವಾಕ್ಯದಲ್ಲಿ ಬರುವ ಪದಗಳ ಸ್ವರೂಪವನ್ನು ಚರ್ಚಿಸಲಾಗಿದೆ. ಅಭಿಹಿತಾನ್ವಯವಾದಿಗಳು, ಅನ್ವಿತಾಭಿಧಾನವಾದಿಗಳು ತಮ್ಮದೇ ಆದ ವಾದವನ್ನು ಉದಾಹರಣೆಯೊಂದಿಗೆ ಮಂಡಿಸಿದ್ದಾರೆ. ಈ ವಿಚಾರವು ತಾರ್ಕಿಕವಾದ್ದರಿಂದ ವಿಶ್ವನಾಥನು ಇದರ ಆಳಕ್ಕೂಗದೆ ಪ್ರಮುಖ ವಿಷಯವನ್ನಷ್ಟೆ ಪ್ರತಿಪಾದಿಸಿದ್ದಾನೆ ಇತ್ಯಾದಿ ಅಂಶಗಳನ್ನು ವಾಕ್ಯಸ್ವರೂಪದಲ್ಲಿ ಪರಾಮರ್ಶಿಸಲಾಗಿದೆ. ವಿಶ್ವನಾಥನು ಶಬ್ದಾರ್ಥದ ಚಿಂತನೆಯಲ್ಲಿ

**ವಾಚ್ಯೋೇರ್ಥೋಽಭಿಧಯಾ ಭೋಧ್ಯೋಲಕ್ಷ್ಯೋಲಕ್ಷಣಾಯ ಮತಃ ।**
**ವ್ಯಂಗ್ಯೋವ್ಯಂಜನಯಾ ತಾಃ ಸ್ಯುಸ್ತಿಸ್ರಃ ಶಬ್ದಸ್ಯ ಶಕ್ತಯಃ [೧೫]॥**

ಅರ್ಥವು ವಾಚ್ಯ, ಲಕ್ಷ್ಯ, ವ್ಯಂಗ್ಯ, ಎಂದು ಮೂರು ಬಗೆಯಾಗಿದ್ದು, ಇವುಗಳಲ್ಲಿ ವಾಚ್ಯಾರ್ಥವು ಶಬ್ದದ ಮುಖ್ಯವೃತ್ತಿ ಎನಿಸಿದ ಅಭಿದಯಿಂದಲೂ ಲಕ್ಷ್ಯಾರ್ಥವು ಲಕ್ಷಣಾವೃತ್ತಿಯಿಂದ, ವ್ಯಂಗ್ಯಾರ್ಥವು ವ್ಯಂಜನಾವೃತ್ತಿಯಿಂದ ತಿಳಿದು ಬರುವ ಮೂರು ಶಬ್ದ ಶಕ್ತಿಗಳಾಗಿವೆ. ಇವುಗಳಲ್ಲಿ ಅಭಿದಾವೃತ್ತಿಯು ಯಾವ ಅರ್ಥದಲ್ಲಿ ಸಂಕೇತವಿದೆಯೊ ಅಂತಹ ಅರ್ಥವನ್ನು ತಿಳಿಸುತ್ತದೆ. ಜಾತಿ, ಗುಣ, ದ್ರವ್ಯ, ಕ್ರಿಯೆಗಳಲಿ ಮತ್ತು ಯಥಾರ್ಥವನ್ನು ತಿಳಿಸುವ ಮೂಲಕವು ಅಭಿದಾವೃತ್ತಿಯು ವ್ಯಕ್ತವಾಗುವುದು. ವಾಚ್ಯಾರ್ಥಕ್ಕೆ ಭಾದೆ ಬಂದು, ಅದಕ್ಕೆ ಸಂಬಂಧಪಟ್ಟ ಬೇರೊಂದು ಅರ್ಥವು ತೋರಿ ಸಮಂಜಸವಾಗುವ ಕಡೆ ಹೊರಡುವ ಅರ್ಥಕ್ಕೆ ಲಕ್ಷ್ಯಾರ್ಥವೆಂದು ಅದನ್ನು ತಿಳಿಸುವ ಶಬ್ದವ್ಯಾಪಾರಕ್ಕೆ ಲಕ್ಷಣಾವೃತ್ತಿಯೆಂದು ವಾಚ್ಯಾರ್ಥಕ್ಕೆ ಭಾದೆ ತಟ್ಟಿದ್ದಾಗ ಮಾತ್ರ ಲಕ್ಷಣಾವೃತ್ತಿಯು ಪ್ರವರ್ತಿಸುತ್ತದೆ. ಇದು ಅಭಿಧಾವೃತ್ತಿಯ ಬೆನ್ನಹಿಂದೆ ಬಂದು ಅದು ಅಸಮರ್ಥವಾದಾಗ ಮಾತ್ರ ನಿಯತವಾದಷ್ಟೇ ದೂರ ಪ್ರವರ್ತಿಸುವುದರಿಂದ ಇದನ್ನು ಅಭಿದಾವೃತಿಯ ಬಾಲ ಎಂದು ಕರೆಯುತ್ತಾರೆ.[೧೬] ಅಭಿನವಗುಪ್ತನು ಲಕ್ಷಣಾ ವ್ಯಾಪಾರವನ್ನು "ಅನಯಾ ಲಕ್ಷಣಯಾ ವಿಶ್ವಮೇವ ವ್ಯಾಪ್ತಂ[೧೭]" "ಈ ಲಕ್ಷಣ ವ್ಯಾಪಾರ ವಿಶ್ವವನ್ನೇ ವ್ಯಾಪಿಸಿದೆ". ಲಕ್ಷಣೆಯು ವ್ಯಾಗ್ವ್ಯವಹಾರದ ನಿತ್ಯಧರ್ಮ, ಕವಿಗಳ ಕಾಮಧೇನು ಅನೇಕ ಅಲಂಕಾರಗಳ ಜೀವದ್ರವ್ಯ ಇದಕ್ಕೆ ಈ ಕೀರ್ತಿ ಬರಲು ಇದರಿಂದ ಸ್ಫುರಿಸುವ ಪ್ರಯೋಜನಾಂಶವೆ ಮುಖ್ಯ ಕಾರಣ.

ಲಕ್ಷಣಾವೃತ್ತಿಯು ಸಂಬಂಧಮೂಲಲಕ್ಷಣ, ಸಾದೃಶ್ಯಮೂಲಲಕ್ಷಣ, ಮತ್ತೆ ಸಂಬಂಧ ಮೂಲದಲ್ಲಿ ಅಜಹಲ್ಲಕ್ಷಣಾ, ಜಹಲ್ಲಕ್ಷಣ ಎಂದು ವಿಭಾಗಿಸಲಾಗಿ ಇದರಲ್ಲಿ ಇನ್ನೂ ಅನೇಕ ಭೇದಗಳನ್ನು ತಾರ್ಕಿಕರು ಕಲ್ಪಿಸುತ್ತಾ ಹೋಗಿದ್ದಾರೆ. ಮುಖ್ಯಾರ್ಥವು ವಾಚ್ಯಾರ್ಥದಲ್ಲಿ ಅನ್ವಯಿಸುವುದಕ್ಕಾಗಿ ಬೇರೊಂದು ಅರ್ಥವನ್ನು

ಆಕ್ಷೇಪಿಸಿ ಅದರೊಡನೆ ತಾನು ಸೇರಿಕೊಂಡಿರುವುದಾಗಿ ಯಾವುದರಿಂದ ತಿಳಿದು ಬರುತ್ತದೊ ಅಂತಹ ವೃತ್ತಿಯೇ ಉಪದಾನಲಕ್ಷಣೆ ಎನಿಸಿದೆ. ಉದಾಹರಣೆಗೆ 'ಶ್ವೇತೋಧಾವತಿ' ಇಲ್ಲಿ ಶ್ವೇತವರ್ಣವು ಧಾವನ ಕರ್ತೃವೆನಿಸಲಾಗದ್ದರಿಂದ ಅಲ್ಲಿ ಅನ್ವಯಿಸುವುದಕ್ಕೆ ಕುದುರೆ ಎಂಬ ಅರ್ಥವನ್ನು ಆಕ್ಷೇಪಿಸಿ ಅದರೊಡನೆ ತಾನು ಸೇರಿಕೊಂಡಿದೆ. 'ಕುಂತಾಃ ಪ್ರವಿಶಂತಿ' ಪ್ರಯೋಜನ ಮೂಲವಾದ ಉಪದಾನಲಕ್ಷಣೆಗೆ ಉದಾಹರಣೆಯಾಗಿದೆ. ಮೊದಲನೆಯದಲ್ಲಿ ಪ್ರಯೋಜನವಿಲ್ಲದ್ದರಿಂದ ರೋಢ್ಯರ್ಥವೇ ಲಕ್ಷಣೆಯ ಬೀಜವೆನಿಸಿದೆ. ಈ ಎರಡೂ ಕಡೆಯಲ್ಲೂ ಆಕ್ಷಿಪ್ತವಾದ ಅರ್ಥದೊಡನೆ ಮುಖ್ಯಾರ್ಥವನ್ನು ತೊರೆಯದೇ ಇರುವುದರಿಂದ ಈ ಲಕ್ಷಣೆಯು ಅಜಹತ್ಸ್ವಾರ್ಥ ಲಕ್ಷಣ ಎನಿಸಿದೆ. ಮುಖ್ಯಾರ್ಥವನ್ನೂ ತೊರೆಯುವುದು ಜಹತ್ಸ್ವಾರ್ಥ ಎನಿಸಿದೆ.

ಒಂದು ಶಬ್ದವನ್ನು ಲಕ್ಷಣಾ ಮಾರ್ಗದಲ್ಲಿ ಮತ್ತೆ ಮತ್ತೆ ಉಪಯೋಗಿಸದ ಹಾಗೆಲ್ಲ ಅದರ ಪ್ರಯೋಜನದ ಹೊಳಪು ಗುಂದುತ್ತದೆ. ಅನೇಕ ತಲೆಮಾರುಗಳಲ್ಲಿ ಹೀಗೆ ಬಳಸುತ್ತಾ ಬಂದ ಮೇಲೆ, ಮೊದಲು ಲಕ್ಷ್ಯಾರ್ಥವಾಗಿದ್ದು ವಾಚ್ಯತತ್ವಕ್ಕೆ ಹೆಚ್ಚು ಹತ್ತಿರ ಬಂದು ಕಡೆಗೆ ತಾನೂ ವಾಚ್ಯಾರ್ತವೇ ಆಗಿ ಬಿಡುತ್ತದೆ. ಹಾಗಾಗಿ ಲಕ್ಷಣಾವೃತ್ತಿಯಿಂದ ಹೊರಡುವ ಪ್ರಯೋಜನವು ಹ್ರಾಸವಾಗುತ್ತಾ ಬಂದು ಕಡೆಗೆ ಶೂನ್ಯವಾಗುತ್ತದೆ. ಪ್ರಯೋಜನ ವಿರಹಿತವಾಗಿ ಪರಿಣಮಿಸಿದ ಇಂಥ ವ್ಯಾಪಾರವನ್ನು 'ರೂಢಿಲಕ್ಷಣಾ' ಎಂದು ಕರೆಯಲಾಗಿದೆ. ಈ ರೂಡಿಮೂಲಲಕ್ಷಣೆಯನ್ನು ರೂಢಿಮೂಲವಾದ ಉಪದಾನಲಕ್ಷಣೆ ಮತ್ತು ಲಕ್ಷಣ (ಲಕ್ಷಣೆ ಮತ್ತು ಪ್ರಯೋಜನ ಮೂಲವಾದ ಉಪಧಾನ ಲಕ್ಷಣೆ ಮತ್ತು ಲಕ್ಷಣಾಲಕ್ಷಣೆ) ಆರೋಪ, ಅದ್ಯವಸಾನ ಎಂಬ ಮತ್ತೆ ಎರಡೆರಡು ಬಗೆಗಳಾಗಿ ಮತ್ತೆ ನಾಲ್ಕು ಬಗೆಗಳಾಗುತ್ತವೆ. ಒಟ್ಟಾಗಿ ಎಂಬತ್ತು ಪ್ರಭೇದಗಳನ್ನು ಲಕ್ಷಣೆಯಲ್ಲಿ ವಿಶ್ವನಾಥನು ವಿವರಿಸುವುದನ್ನು ವಿಶದಪಡಿಸಲಾಗಿದೆ ಮತ್ತು ವ್ಯಂಜನಾವೃತ್ತಿ ಎಂದರೆ ಅಭಿದೆ ಲಕ್ಷಣೆ, ತಾತ್ಪರ್ಯ ಈ ಮೂರು ವೃತ್ತಿಗಳು ಒಂದು ಶಬ್ದವನ್ನು ತಿಳಿಸಿದ ಮೇಲೆ ಬೇರೊಂದು ಅರ್ಥವನ್ನು ಆ ಶಬ್ದದಿಂದ ತಿಳಿಸಿಕೊಡುವ ವೃತ್ತಿಯೇ ವ್ಯಂಜನಾವೃತ್ತಿ. ಇದು ಅಭಿದೆ ಲಕ್ಷಣೆಯನ್ನು ಅವಲಂಬಿಸಿರುವುದರಿಂದ ಎರಡು ಬಗೆಯಾಗಿದೆ. ಇದನ್ನ ಉದಾಹರಣೆ ಸಹಿತವಾಗಿ ವಿವರಿಸಲಾಗಿದೆ. 'ತಾತ್ಪರ್ಯವೃತ್ತಿ' ಎಂಬ ಇನ್ನೊಂದು ವೃತ್ತಿಯನ್ನು ಸಂಪ್ರದಾಯವಾದಿಗಳು ತಿಳಿಸಿದ್ದಾರೆ. ಪ್ರತಿಯೊಂದು ಪದದಿಂದಲೂ ತೋರುವ ಅರ್ಥಗಳಿಗೆ ಇರುವ ಸಂಬಂಧವನ್ನು ಕಲ್ಪಿಸಲು ಅನುಕೂಲವಾದ ವೃತ್ತಿಯೇ 'ತಾತ್ಪರ್ಯವೃತ್ತಿ' ಎಂಬುದು ನಯಾಯಿಕರು ತಿಳಿಸಿದ್ದಾರೆ. ಇನ್ನು ಅಭಿಹಿತಾನ್ವಯವಾದಿಗಳು ತಾತ್ಪರ್ಯವೃತ್ತಿ ಎಂದರೆ ಒಂದೊಂದು ಪದದ ಅರ್ಥವನ್ನು ತಿಳಿಸಿ ವಿಶ್ರಾಂತಿ ಹೊಂದಿದ ಮೇಲೆ ಆ ಪದಾರ್ಥಗಳಿಗೆ ಅನ್ವಯವಾಗುವ ವಾಕ್ಯಾರ್ಥವನ್ನು ತಾತ್ಪರ್ಯವೃತ್ತಿ ಎಂದಿದ್ದಾರೆ.

ಅರ್ಥಗಳು ಮೂರು ಬಗೆಯಾಗಿದ್ದು, ಅರ್ಥಕ್ಕೆ ಸಂಬಂಧಿಸಿದ ವ್ಯಂಜನೆಗಳು ಸಹ ಮೂರು ಬಗೆಯಾಗಿದೆ. ವಾಚ್ಯದಿಂದ ಬರುವ ಅರ್ಥಕ್ಕೆ ವಾಚ್ಯಾರ್ಥ, ಲಕ್ಷ್ಯದಿಂದ ತಿಳಿದುಬರುವ ವ್ಯಂಜನೆಗೆ ಲಕ್ಷ್ಯಾರ್ಥ, ವ್ಯಂಗದಿಂದ ವ್ಯಂಗ್ಯಾರ್ಥ ಇವುಗಳನ್ನ ಉದಾಹರಣೆ ಸಹಿತವಾಗಿ ಪರಾಮರ್ಶಿಸಲಾಗಿದೆ. ರೂಢಿಮೂಲ ಮತ್ತು ಪ್ರಯೋಜನಮೂಲವಾದ ಎಂಬತ್ತು ಬಗೆಯ ಭೇದ ಪ್ರಭೇದಗಳನ್ನು ವಿಶ್ವನಾಥನು ಹೇಳಿದ್ದಾನೆ. ಮಮ್ಮಟನಂತಹ ಪ್ರಖ್ಯಾತ ಅಲಂಕಾರಿಕರು ಶಬ್ದಾರ್ಥದ ಚಿಂತನೆಯಲ್ಲಿ ಮುಖ್ಯವಾದ ವಿಚಾರವನ್ನು ಮಾತ್ರ ತಿಳಿಸಿದ್ದಾರೆ. ಆದರೆ ವಿಶ್ವನಾಥನು ಅದರ ಆಳವನ್ನು ಹೊಕ್ಕಿ ಶಬ್ದಾರ್ಥದ ಚಿಂತನೆಯನ್ನು ಮಾಡಿದ್ದಾನೆ. ಇತ್ಯಾದಿ ವಿಷಯಗಳನ್ನು ಮೊದಲನೆಯ ಅಧ್ಯಾಯದಲ್ಲಿ ವಿಶದವಾಗಿ ಪರಾಮರ್ಶಿಸಲಾಗಿದೆ.

ರಸದ ವಿಚಾರದಲ್ಲಿ ಮೊದಲು ರಸದ ಹಿನ್ನೆಲೆಯೊಂದಿಗೆ, ವಿಶ್ವನಾಥನು ನಿರೂಪಿಸಿರುವ ರಸದ ಸ್ವರೂಪ ಮತ್ತು ಪ್ರಮುಖ ವಿಚಾರಗಳನ್ನು ತಿಳಿಸಲಾಗಿದೆ. ರಸದ ಮಾತು ಬಹಳ ಪ್ರಾಚೀನವಾಗಿದ್ದು ವೇದ ಉಪನಿಷತ್ತುಗಳಲ್ಲಿ ರಸವೆಂಬ ಪದಕ್ಕೆ ಸೋಮ, ಹಾಲು, ನೀರು, ಮುಂತಾದ ಅರ್ಥವಿದ್ದು ಅದು ಆಸ್ವಾದವಾಗಿ ಬ್ರಹ್ಮಸಾಕ್ಷತ್ಕಾರವೆಂದಾದ ವಿಚಾರವನ್ನು ಸೂಚಿಸಲಾಗಿದೆ. ಋಗ್ವೇದ ಸಂಹಿತೆಯಲ್ಲಿ ರಸದ ಅನೇಕ ಪ್ರಯೋಗಗಳನ್ನು ಕಾಣಬಹುದು. ಅಲ್ಲಿ ಸನ್ನಿವೇಶಕ್ಕನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು ಆ ಮಾತು ಕೊಡುತ್ತದೆ. "ರಸೇನ ತೃಪ್ತೋ ನ ಕುತಶ್ಚನೋನಃ", ಎಂಬ ಮಾತು ಅಥರ್ವವೇದದಲ್ಲಿ ಬರುತ್ತದೆ. ಅಲ್ಲಿ ಇದಕ್ಕೆ ಮಾಧುರ್ಯವೆಂಬ ಅರ್ಥವಿದೆ[೧೮]. ಅಥರ್ವ ವೇದದ ಆಧ್ಯಾತ್ಮಿಕ ವಿಚಾರಗಳು, ಉಪನಿಷತ್‌ಗಳಲ್ಲಿ ವಿಕಾಸಗೊಂಡು ರಸಶಬ್ದವು ಅತ್ಯಂತ ವ್ಯಾಪಕವಾದ ಅರ್ಥವನ್ನು ಪಡೆಯಿತು. "ರಸವನ್ನು ಸಂಪಾದಿಸಿದವನು ಆನಂದವನ್ನು ಪಡೆಯುತ್ತಾನೆ. ಇವೆಲ್ಲಾವೂ ರಸವೇ[೧೯]" ಎನ್ನುವಲ್ಲಿ ಸೃಷ್ಟಿಯ ಸಮಸ್ತ ಸ್ವರೂಪವನ್ನು ಈ ಮಾತು ಒಳಗೊಂಡಿದೆ. ಉಪನಿಷತ್ತುಗಳ ಸಾರದಲ್ಲಿ ನಾವು ಪ್ರಧಾನವಾಗಿ ಕಾಣುವ ಅರ್ಥವು 'ವಿಷಯಸುಖದ ಬಯಕೆ' ಎಂಬ ಅರ್ಥವನ್ನು ಪರಿಗಣಿಸುತ್ತದೆ.

ರಸದ ಬಗ್ಗೆ ಮೊದಲ ನಿರೂಪಣೆ ಬಂದಿರುವುದು ಭರತನ ನಾಟ್ಯಶಾಸ್ತ್ರದಲ್ಲಿ, ನಾಟಕಕ್ಕೆ ಸಂಬಂಧಪಟ್ಟಂತೆ ಭರತನ ನಿರೂಪಣೆಯಲ್ಲಿ ರಸಕ್ಕೆ ಪ್ರಥಮ ಸ್ಥಾನ. ಆದರೆ ಭರತನಿಗಿಂತ ಹಿಂದಿನವರೆನ್ನಲ್ಲಾದ ವಾಸುಕಿ, ಕೊಹಿಲಾ 'ರಸ'ದ ಪ್ರತಿಪಾದನೆ ಮಾಡಿದ್ದರೂ ಅದನ್ನು ಸಮರ್ಥಿಸಿಕೊಳ್ಳಲು ಯಾವುದೇ ಆಧಾರವಿಲ್ಲ. ಆದ್ದರಿಂದ ಭರತನೇ ರಸ ನಿರೂಪಣೆಯಲ್ಲಿ ಪ್ರಥಮಾಚಾರ್ಯ ಎನ್ನಲಾಗಿದೆ. ಭರತನು ನಾಟಕದ ಅಂಗವಾಗಿ ಬರುವ ಎಲ್ಲಾ ವಿಷಯಗಳು ರಸವನ್ನೇ ಅವಲಂಬಿಸಿ ಬರುತ್ತವೆ. ಲೋಕದಲ್ಲಿ ಕಾರಣ, ಕಾರ್ಯ, ಸಹಕಾರಿಗಳೆಂದು ಕರೆಸಿಕೊಳ್ಳುವ ಎಲ್ಲಾವೂ ಕಾವ್ಯದಲ್ಲಿ ವಿಭಾವ,

ಅನುಭಾವ, ವ್ಯಭಿಚಾರಿಭಾವಗಳೆಂಬ ಪಾರಿಭಾಷಿಕ ನೆಲೆಯನ್ನು ಹೊಂದುವುದು ರಸಗಳ ದೃಷ್ಟಿಯಿಂದ, ರಸವಿಲ್ಲದೇ ಸಾಮಾಜಿಕರಿಗೆ, ಸಹೃದಯರಿಗೆ ಕಾವ್ಯದ ಬಗ್ಗೆ ಪ್ರವೃತ್ತಿಯೇ ಇರಲಾರದು. ಅದಿಲ್ಲದೇ ಜ್ಞಾನರೂಪ ಪ್ರಯೋಜನವೂ ಸಿದ್ಧಿಸದು. ಅದಿಲ್ಲದೇ ನಟನಿಗೆ ಅಭಿನಯದಲ್ಲಿ ಪ್ರವೃತ್ತಿಯೂ ಆಗದು. ಹೀಗೆ ರಸವನ್ನು ಬಿಟ್ಟು ನಾಟಕ ಅಥವಾ ಕಾವ್ಯದ ಅಂಗರೂಪ ಅರ್ಥಗಳಲ್ಲಿ ಪ್ರವೃತ್ತಿಯುಂಟಾಗದು. 'ನಹಿ ರಸಾದೃತೆ ಕಶ್ಚಿದರ್ಥಃ ಪ್ರವರ್ತತೇ[೨೦]! ಭರತನು ಮುಖ್ಯವಾಗಿ 'ರಸವು ಒಂದು ಚಿತ್ತವೃತ್ತಿ ವಿಶೇಷ' ಎಂದು ಪ್ರತಿಪಾದಿಸಿ ನಾಟ್ಯಶಾಸ್ತ್ರದ ಮೂಲಕ ನಾಟ್ಯರಸಗಳಾಗಿ ಸ್ಥಾಯಿಭಾವಗಳ ಆಸ್ವಾದನೆಗಷ್ಟೇ ಸೀಮಿತವಾಗಿದೆ ಎಂದಿದ್ದಾನೆ. ಪ್ರಾಚೀನ ಅಲಂಕಾರಿಕರಿಗೆ ರಸವನ್ನು 'ಕಾವ್ಯದ ಆತ್ಮ'ವೆಂದು ಹೇಳಲು ಸಾಧ್ಯವಾಗಲಿಲ್ಲ ಆದರೆ ಭರತನ ನಂತರ ಬಂದ ಭಾಮಹನು ಕಾವ್ಯದಲ್ಲಿ ಅಲಂಕಾರಕ್ಕೆ ಸಾರ್ವಭೌಮ ಸ್ಥಾನವನ್ನು ಕೊಟ್ಟು ಕಾವ್ಯಲಕ್ಷಣವನ್ನು ಹೇಳುವಾಗ "ಮಹಾಕಾವ್ಯವು ಲೋಕ ಸ್ವಭಾವವನ್ನು ಚಿತ್ರಿಸುವುದಲ್ಲದೆ ಬೇರೆ ಬೇರೆ ರಸಗಳಲ್ಲವನ್ನೂ ಒಳಗೊಂಡಿದೆ[೨೧]" ಎಂದು ಸ್ಪಷ್ಟಪಡಿಸಿ ಮುಂದೆ "ಶೃಂಗಾರಾದಿ ರಸಗಳು ಎಲ್ಲಿ ಕಂಗೊಸುವುದೋ ಅಲ್ಲಿ ರಸವದಲಂಕಾರ' ಎಂದು ಹೇಳಿ ಅಲಂಕಾರವನ್ನು ಎತ್ತಿ ಹಿಡಿದಿದ್ದಾನೆ. ದಂಡಿಯು ರಸವು ಕಾವ್ಯದ ಸರ್ವಸ್ವವಲ್ಲ ಗುಣಗಳಲ್ಲಿ ಒಂದು ಎಂದು ಗುಣವನ್ನು ಪ್ರತಿಪಾದಿಸಿದ್ದಾನೆ. ರಸವು ವಾಚ್ಯವಲ್ಲ ವ್ಯಂಗ್ಯವೆಂದು ಧ್ವನಿಗೆ ಆತ್ಮಸ್ಥಾನವನ್ನು ಆನಂದವರ್ಧನು ಕೊಟ್ಟು ಧ್ವನಿಮಾರ್ಗವನ್ನು ಸೃಷ್ಟಿಸಿ ರಸವನ್ನು 'ರಸಾದಿ' ಎಂದು ನಿರ್ದೇಶಿಸಿದ್ದಾನೆ. ಇದನ್ನು ಅಭಿನವಗುಪ್ತನು ರಸಾದಿ ಎನ್ನುವುದು ಕೇವಲ ಸ್ಥಾಯಿಭಾವಗಳ ಆಸ್ವಾದನೆಗಷ್ಟೇ ಸೀಮಿತವಾಗದೇ ಪ್ರಕೃತಿ ಸೌಂದರ್ಯವನ್ನು ಕಂಡು ತನ್ಮಯವಾಗುವ ರಮಣೀಯತೆಯ ಅನುಭವನ್ನು ಒಳಗೊಂಡಿದೆ ಎಂದು ಸ್ಪಷ್ಟಪಡಿಸಿದ್ದಾನೆ. ರಸಾನುಭವವೇ ಕಾವ್ಯದ ಜೀವಾಳ ಅದಿಲ್ಲದೇ ಕಾವ್ಯವೇ ಇಲ್ಲ ಎನ್ನುವವರೆಗೂ ರಸದ ವ್ಯಾಪಕತೆಯನ್ನು ಆನಂದವರ್ಧನನು ಬೆಳೆಸಿದ್ದಾನೆ. ಅಭಿನವಗುಪ್ತನು ರಸವನ್ನು ಸಹೃದಯದ 'ಅಖಂಡಾನಂದ'ವೆಂದು ಆತನಲ್ಲಿಯೇ ಸಹಜವಾಗಿರುವ ಆತ್ಮನಂದದ ವ್ಯಕ್ತರೂಪವೆಂದು ವಿವೇಚನೆ ಮಾಡಿದ್ದಾನೆ. ನಂತರ ಬಂದ ವಿಶ್ವನಾಥನು ಕಾವ್ಯದಲ್ಲಿ ರಸಕ್ಕೆ ಆತ್ಮಸ್ಥಾನವನ್ನು ಕೊಟ್ಟು 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದು ರಸವನ್ನು ಎತ್ತಿ ಹಿಡಿದು ರಸತತ್ವವನ್ನು ನಿರೂಪಿಸಿದ್ದಾನೆ.

**ವಾಕ್ಯಂ ರಸಾತ್ಮಂ ಕಾವ್ಯಂ ದೋಷಾಸ್ತಸ್ತಾಪಕರ್ಷಕಾಃ।**
**ಉತ್ಕರ್ಷಹೇತವಃ ಪ್ರೋಕ್ತಾ ಗುಣಾಲಂಕಾರ ರೀತಯಃ [೨೨] ॥**

"ರಸಾತ್ಮಕವಾದ ವಾಕ್ಯವು ಕಾವ್ಯ, ದೋಷಗಳು ಅದಕ್ಕೆ ಕುಂದುಂಟು ಮಾಡತಕ್ಕವು. ಅದಕ್ಕೆ ಉತ್ಕರ್ಷವನ್ನು ಕೊಡತಕ್ಕವು ಗುಣಾಲಂಕರ ರೀತಿಗಳು" ಎಂದು ಕಾವ್ಯದಲ್ಲಿ ರಸಕ್ಕೆ ಆತ್ಮಸ್ಥಾನವನ್ನು ಕೊಟ್ಟು ಕಾವ್ಯಲಕ್ಷಣವನ್ನು ಹೇಳಿದ ವಿಶ್ವನಾಥನು ರಸದ ಸ್ವರೂಪವನ್ನು

ಮಾನವರ ಹೃದಯದಲ್ಲಿ ರತಿ ಮೊದಲಾದ ಭಾವಗಳು ಕಾವ್ಯನಾಟಕಗಳಲ್ಲಿರುವ ನಾಯಕ ನಾಯಿಕೆಯರ ಆಶ್ರಯದಿಂದ, ಚಂದ್ರಿಕೆ ಶ್ರೀಗಂಧ ಮೊದಲಾದ ಉದ್ದೀಪಕ ಸಾಮಾಗ್ರಿಗಳಿಂದ, ಭಾವವನ್ನು ಪ್ರಕಾಶಗೊಳಿಸುವ ಅನುಭಾವಗಳಿಂದ ನಿರ್ವೇದ ಮೊದಲಾದ ವ್ಯಭಿಚಾರಿ ಭಾವಗಳಿಂದ ಹೊರಹೊಮ್ಮಿ ಸಹೃದಯರ ಹೃದಯದಲ್ಲಿ ರಸವಾಗಿ ಪರಿಣಮಿಸುತ್ತದೆ. ರತಿ ಮೊದಲಾದ ಭಾವಗಳು ಹೃದಯದಲ್ಲಿ ಸಂಸ್ಕಾರ ರೂಪದಿಂದ ಸ್ಥಿರವಾಗಿ ನೆಲೆಸಿರುವುದರಿಂದ ಸ್ಥಾಯಿ ಎನಿಸಿ ರಸವಾಗಿ ಪರಿಣಮಿಸುತ್ತದೆ ಎಂದು ರಸದ ಸ್ವರೂಪವನ್ನು ವಿಶ್ವನಾಥನು ಈ ರೀತಿಯಾಗಿ ಪ್ರತಿಪಾದಿಸಿದ್ದಾನೆ.

ಇನ್ನೂ ರಸನಿಷ್ಪತ್ತಿಯ ವಿಚಾರದಲ್ಲಿ ಭರತನ ಪ್ರಖ್ಯಾತ ರಸನಿಷ್ಪತ್ತಿ ಸೂತ್ರವಾದ "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್ ರಸನಿಷತ್ತಿಃ" (ವಿಭಾವ ಅನುಭಾವ ವ್ಯಭಿಚಾರಿ ಭಾವಗಳ ಸಂಯೋಗದಿಂದ ರಸ ನಿಷ್ಪತ್ತಿಯಾಗುತ್ತದೆ.) ಎಂಬುದು ನಮ್ಮ ಎಲ್ಲಾ ರಸವಿವೇಚನೆಗೆ ರಸದ ಸ್ವರೂಪಕ್ಕೆ ಕಾರಣವಾದ ಮೂಲ ಸೂತ್ರವಾಗಿದೆ. ಯಾವುದನ್ನು ಲೋಕದಲ್ಲಿ ಕಾರಣ, ನಿಮಿತ್ತ ಅಥವಾ ಹೇತುವೆಂದು ಕರೆಯುವರೊ ಅದನ್ನೇ ಕಾವ್ಯದಲ್ಲಿ ವಿಭಾವ ಎನ್ನುವರು. ಈ ವಿಭಾವವು ಆಲಂಬನ ಮತ್ತು ಉದ್ದೀಪನ ವಿಭಾವವೆಂದು ಎರಡು ಬಗೆಯಾಗಿದೆ. ರತಿಯ ಜಾಗೃತಿಗೆ ನಾಯಕ ಮತ್ತು ನಾಯಿಕೆಯರು ಆವಂಬನ ವಿಭಾವವಾದರೆ, ಮಂದಮಾರುತ, ಬೆಳದಿಂಗಳು ಇತ್ಯಾದಿಗಳು ಉದ್ದೀಪನ ವಿಭಾವವಾಗಿದೆ. ಕಣ್ಣುಗಳ ಚಲನೆ ಹುಬ್ಬುಗಳ ಏರಿಳಿತವು, ಓರೆನೋಟ, ನಗುಮುಖ, ಮುಂತಾದ ಒಳಗಿನ ಭಾವನೆಗಳ ಬಾಹ್ಯ ಅಭಿವ್ಯಕ್ತಿಗಳಿಗೆ ಅನುಭಾವಗಳೆಂದು ಹೆಸರು. ಅನೇಕ ಸ್ಥಾಯಿಭಾವಗಳಿಗೆ ಸಮಾನವಾಗಿದ್ದು, ವಾಚಿಕ ಆಂಗಿಕ ಅಭಿನಯಗಳ ಮೂಲಕ ವ್ಯಂಜಿತವಾಗುವ ಮತ್ತು ಸ್ಥಾಯಿಭಾವವನ್ನು ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸುವ ಭಾವಗಳು ವ್ಯಭಿಚಾರಿ ಅಥವಾ ಸಂಚಾರಿಭಾವಗಳಾಗಿವೆ. ಇವುಗಳ ಸಂಯೋಗದಿಂದ ಸಹೃದಯನ ಸ್ಥಾಯಿಭಾವವು ಜಾಗೃತವಾಗಿ ಪ್ರತೀತಿಯೋಗ್ಯವಾಗಿ, ಪೋಷಿತವಾಗಿ ಅವನಲ್ಲಿ ಆನಂದರೂಪ ರಸಾನುಭವವಾಗಿ ಪರಿಣಮಿಸುತ್ತದೆ. ಇದೇ ರಸನಿಷ್ಪತ್ತಿ.

ಸ್ಥಾಯಿಭಾವವು ನಾಟಕವಾದರೆ ರಂಗಭೂಮಿಯ ಮೇಲೆ ವಿಭಾವ, ಅನುಭಾವ, ವ್ಯಭಿಚಾರಿಭಾವಗಳು ಪ್ರಭಾವಿಯಾಗಿ ಪ್ರದರ್ಶಿಸಲ್ಪಟ್ಟಾಗ, ಶ್ರವ್ಯಕಾವ್ಯವಾದರೆ ವರ್ಣನೆಗಳಲ್ಲಿ ಅವು ಹಾಗೆ ಮೂಡಿ ಬಂದಾಗ, ಸಹೃದಯ ಪ್ರೇಕ್ಷಕರು ಅವುಗಳೊಂದಿಗೆ ಮಾನಸಿಕ ತನ್ಮಯತೆಯನ್ನು ಹೊಂದಿದಾಗ ಅವರಲ್ಲಿನ ಸ್ಥಾಯಿಭಾವವು ಸಹಜವಾಗಿಯೇ ಆನಂದರೂಪ ರಸವಾಗಿ ಪರಿಣಮಿಸುತ್ತದೆ. ಆ ಅನುಭವಕ್ಕೆ 'ಸಂಯೋಗ' ಮತ್ತು 'ನಿಷ್ಪತ್ತಿ'ಗಳ ಸ್ವರೂಪವೇನೆಂದು ತಿಳಿಯುವ ಅಗತ್ಯವಿಲ್ಲ. ಕೇವಲ ಶಾಸ್ತ್ರೀಯವಾದ ವಿವೇಚನೆಯ ದೃಷಿಯಿಂದ ಭರತನ ರಸಸೂತ್ರವನ್ನು ವ್ಯಾಖ್ಯಾನಿಸಿದ ವಿದ್ವಾಂಸರು 'ಸಂಯೋಗ' ಮತ್ತು 'ನಿಷ್ಪತ್ತಿ'ಗಳ ಸ್ವರೂಪವೇನೆಂದು ತಿಳಿಯುವ ಅಗತ್ಯವಿಲ್ಲ. ಕೇವಲ ಶಾಸ್ತ್ರೀಯವಾದ ವಿವೇಚನೆಯ ದೃಷ್ಟಿಯಿಂದ ಭರತನ ರಸಸೂತ್ರವನ್ನು

ವ್ಯಾಖ್ಯಾನಿಸಿದ ವಿದ್ವಾಂಸರು 'ಸಂಯೋಗ' ಮತ್ತು ನಿಷ್ಪತ್ತಿಗಳ ಸ್ವರೂಪವನ್ನು ತಮ್ಮ ಸೈದ್ಧಾಂತಿಕ ಹಿನ್ನೆಲೆಯಲ್ಲಿ ವಿಚಾರ ಮಾಡಿ ನಾಲ್ಕುವಾದಗಳನ್ನು ಮುಂದಿಟ್ಟಿದ್ದಾರೆ. ಲೋಲ್ಲಟನ ಉತ್ಪತ್ತಿವಾದ, ಶ್ರೀಶಂಕುಕನ ಅನುಮಿತವಾದ, ಭಟ್ಟನಾಯಕನ ಭುಕ್ತಿವಾದ ಮತ್ತು ಅಭಿನವಗುಪ್ತನ ವ್ಯಕ್ತಿವಾದ. ಉತ್ಪತ್ತಿವಾದವನ್ನು ಮಂಡಿಸಿದ ಲೋಲ್ಲಟನು ಕಥಾಪುರುಷರಲ್ಲಿ ಸ್ಥಾಯಿಭಾವವು ಹೇಗೆ ಹುಟ್ಟಿ ಬೆಳೆದು ಪುಷ್ಟಿಗೊಳ್ಳುವುದೆಂಬ ವಿಷಯ ಅದನ್ನೇ ಅವನು ರಸ ನಿಷ್ಪತ್ತಿಯೆಂದು ಭ್ರಮಿಸಿದನು. ಸ್ಥಾಯಿಭಾವದ ಪುಷ್ಟಿಯ ವಿಚಾರ ಅಭಿನವಗುಪ್ತನಿಗೆ ಸಮ್ಮತವೇ ಆಗಿದೆ. ಇನ್ನೂ ಶಂಕುಕನು ವಿಭಾನುಭಾವಾದಿಗಳಿಂದ ರಸವು ಅನುಮಿತವಾಗುವುದೆಂದು ಹೇಳಿದನು. ಆದರೆ ಅಭಿನವಗುಪ್ತನು ಅನುಮಿತವಾಗತಕ್ಕದ್ದು ರಸವಲ್ಲ, ಅದು ಕಥಾಪುರುಷನ ಸ್ಥಾಯಿಭಾವವೆಂದು ವ್ಯವಸ್ಥೆ ಮಾಡಿದನು. ನಂತರ ಭಟ್ಟನಾಯಕನ 'ಸಾಧಾರಣೀಕರಣ' ತತ್ವವನ್ನು ಅಭಿನವಗುಪ್ತನು ಸಮ್ಮತಿಸಿದ್ದಾನೆ. 'ತಸ್ಮಾತ್ ಸತಾಮತ್ರ ನದೂಷಿತಾನಿ ಮತಾನಿ ತಾನ್ಯೇವ ತು ಶೋಧಿತಾನಿ" ಹೀಗೆ ಭಾವವಾದ ಸಾಧಾರಣೀಕರಣ ಮತ್ತು ಭೋಗದ ಭುಕ್ತಿ ಎಂಬ ಎರಡೂ ಪ್ರಕ್ರಿಯೆಗಳು ವ್ಯಂಜನಾದಿಂದಲೇ ಸಿದ್ಧಿಸುತ್ತವೆಯೆಂದು ಸಾಧಿಸಿ ವ್ಯಂಜನಾ ವ್ಯಾಪಾರದ ಬಲದಿಂದ ವಿಭಾವಾದಿಗಳ ಮೂಲಕ ವ್ಯಂಜಿತವಾದ ಸ್ಥಾಯಿಭಾವದ ಪ್ರತೀತಿಯೆ ರಸವೆಂದು ಹೇಳಿ, ತನ್ನ ವ್ಯಕ್ತಿವಾದವನ್ನು ಸಮರ್ಥಿಸಿಕೊಂಡಿದ್ದಾನೆ. ಆದ್ದರಿಂದಲೇ ಅಭಿನವಗುಪ್ತನು ರಸವನ್ನು "ವಿಭಾವಾದಿಜೀವಿತಾವಾಧಿಃ" ಎಂದು ಕರೆದಿದ್ದಾನೆ. ತನಗಿಂತ ಹಿಂದಿನವರ ಮತಗಳ ನ್ಯೂನತೆಗಳನ್ನು ನಿವಾರಿಸಿ ಅಲ್ಲಿನ ಗಟ್ಟಿಯಾದ ಅಂಶವನ್ನು ಶೋಧಿಸಿ ಸಮನ್ವಯಗೊಳಿಸಿ ಸಮರ್ಪಕವಾದ ರಸತತ್ವವನ್ನು ರೂಪಿಸಿದ್ದಾನೆ. ಇದನ್ನು ಮಮ್ಮಟ ವಿಶ್ವನಾಥ ಮುಂತಾದವರು ಸಮರ್ಥಿಸಿಕೊಂಡು ಈ ವಾದವನ್ನು ಅಂಗೀಕರಿಸಿದ್ದಾರೆ. ಅವರ ರಸಲಕ್ಷಣದಲ್ಲಿ ಅದು ಸ್ಪಷ್ಟವಾಗಿದೆ.

**ಕಾರಣಾನ್ಯತೆ ಕಾರ್ಯಾಣಿ ಸಹಕಾರೀಣಿ ಯಾನಿ ಚ ।**
**ರತ್ಯಾದೇ ಸ್ಥಾಯಿನೋ ಲೋಕೇತಾನಿ ಚನಾಟ್ಯಕಾವ್ಯಯೋಃ ॥**
**ವಿಭಾವಾನುಭಾವಾಶ್ಚ ಕಥ್ಯೆಂತೇ ವ್ಯಭಿಚಾರಿಣಃ ।**
**ವ್ಯಕ್ತಃ ಸ ತೈರ್ವಿಭಾವಾದ್ಯೈಃ ಸ್ಥಾಯಿಭಾವೋ ರಸಃ ಸ್ಮೃತಃ**[೨೨] ॥

"ಲೋಕದಲ್ಲಿ ರತಿ ಮುಂತಾದ ಸ್ಥಾಯಿಭಾವಗಳ ಕಾರಣಗಳು, ಕಾರ್ಯಗಳು ಮತ್ತು ಸಹಕಾರಿಗಳು ಎಂಬ ಯಾವ ಸಾಮಾಗ್ರಿಗಳಿವೆಯೋ ಅವುಗಳೇ ನಾಟಕ ಮತ್ತು ಕಾವ್ಯಗಳಲ್ಲಿ ವಿಭಾವ, ಅನುಭಾವ, ಮತ್ತು ವ್ಯಭಿಚಾರಿಭಾವಗಳೆಂದು ಕರೆಯಲ್ಪಡುತ್ತವೆ. ಆ ವಿಭಾವಾದಿಗಳಿಂದ ವ್ಯಕ್ತವಾದ ಸ್ಥಾಯಿಭಾವವೇ ರಸವೆಂದು ತಿಳಿಯಲ್ಪಡುತ್ತದೆ" ಎಂದು ಮಮ್ಮಟನು ರಸಲಕ್ಷಣವನ್ನು ಕೊಟ್ಟಿದ್ದಾನೆ.

**ವಿಭಾವೇನಾನುಭಾವೇನ ವ್ಯಕ್ತಃ ಸಂಚಾರಿಣಾ ತಥಾ ।**
**ರಸತಾಮೇತಿ ರತ್ಯಾದಿಃ ಸ್ಥಾಯಿಭಾವಃ ಸಚೇತಸಾಮ್**[೨೪] ॥

"ವಿಭಾವದಿಂದ ಅನುಭಾವದಿಂದ ಹಾಗೂ ಸಂಚಾರಿ [ವ್ಯಭಿಚಾರಿ] ಭಾವದಿಂದ ವ್ಯಕ್ತವಾದ ಸಹೃದಯನ ರತ್ಯಾದಿ ಸ್ಥಾಯಿಭಾವವು ರಸತ್ವವನ್ನು ಹೊಂದುತ್ತದೆ". ಎಂದು ವಿಶ್ವನಾಥನು ರಸಲಕ್ಷಣವನ್ನು ಕೊಟ್ಟಿದ್ದಾನೆ.

ಇನ್ನು ವಿಶ್ವನಾಥನ ಪ್ರಕಾರ ವಿಭಾವ ಅನುಭಾವ ವ್ಯಭಿಚಾರಿಭಾವಗಳ ಸ್ವರೂಪವೇನೆಂಬುದನ್ನ ವಿಮರ್ಶಿಸಲಾಗಿದೆ. ಇದಕ್ಕೂ ಮೊದಲು ಭಾವೇನೆಂಬುದನ್ನ ವಿವೇಚಿಸಲಾಗಿದೆ. 'ಭಾವ' ಎಂದರೆ 'ಇರುವಿಕೆ' ಎಂದರ್ಥ ಇದರ ನಿಷ್ಪತ್ತಿಗನುಗುಣವಾಗಿ ಸಂಸ್ಕೃತದಲ್ಲಿ ಈ ಪದಕ್ಕೆ ಅನೇಕ ಅರ್ಥಗಳಿವೆ[೨೫]. ಸ್ಥಿತಿ, ಆಶಯ, ಇಂಗಿತ, ತಾತ್ಪರ್ಯ, ಭಾವ, ಚಿತ್ತವೃತ್ತಿ ಇತ್ಯಾದಿ ಪದಗಳನ್ನು ನಮ್ಮ ರೂಢಿ ಮಾತಿನಲ್ಲಿ ಬಳಸಲಾಗಿದೆ. 'ಭಾವ' ಶಬ್ದವನ್ನು ಚಿತ್ತವೃತ್ತಿವಿಶೇಷ ಎಂಬ ಸಂಜ್ಞೆಯಾಗಿ ನಿಯಮನ ಮಾಡಿಕೊಳ್ಳಲಾಗಿದೆ. ನಂತರ ಸ್ಥಾಯಿಭಾವವೆಂದರೆ ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳು ಅನುಕೂಲವಾಗಿರಲಿ, ಪ್ರತಿಕೂಲವಾಗಿರಲಿ ಯಾವ ಭಾವವು ಸ್ಥಿರವಾಗಿ ನಿಂತು ಮನಸ್ಸಿಗೆ ಗೋಚರವಾಗಬಲ್ಲದೋ ಅದನ್ನ 'ಸ್ಥಾಯಿಭಾವ' ಎನ್ನಲಾಗಿದೆ. ಇವು ಮನಸ್ಸಿನ ಸುಪ್ತಾವಸ್ಥೆಯಾಗಿದ್ದು ಕಾರಣ ತಲೆದೋರಿದೊಡನೆ ವ್ಯಕ್ತವಾಗುವ ಚಿತ್ತವೃತ್ತಿಗಳಾಗಿವೆ. ಭರತನು ಇಂತಹ ಮನಸ್ಸಿನಲ್ಲಿ ಹುಟ್ಟುವ ಎಂಟು ಸ್ಥಾಯಿಭಾವಗಳನ್ನು [೨೬] ಮೊಟ್ಟಮೊದಲಿಗೆ ಹೇಳಿದ್ದಾನೆ. ಅಭಿನವಗುಪ್ತನು ಸ್ಥಾಯಿಭಾವವನ್ನು ಒಂದೂಸೂತ್ರಕ್ಕೂ ಮತ್ತು ಸಮುದ್ರಕ್ಕೂ ಹೋಲಿಕೆಯನ್ನು ಕೊಟ್ಟಿದ್ದಾನೆ.

'ವಿಭಾವ'ವೆಂದರೆ ಲೋಕದಲ್ಲಿ ಹರಡಿರುವ ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ, ವಿಸ್ಮಯ, ಶ್ರಮ ಎಂಬ ಸ್ಥಾಯಿಭಾವಗಳನ್ನು ಹೊರಹೊಮ್ಮಿಸುವ ಕಾರಣ ಸಾಮಾಗ್ರಿಗಳನ್ನು ಕಾವ್ಯನಾಟ್ಯಗಳಲ್ಲಿ ಪ್ರಯೋಗಿಸುವುದನ್ನು ವಿಭಾವವೆನ್ನಲಾಗಿದೆ. ವಿಶ್ವನಾಥನು ವಿಭಾವವನ್ನು ಆಲಂಬನ, ಉದ್ದೀಪನವಿಭಾವವೆಂದು ಎರಡು ಬಗೆಯಾಗಿ ವಿಂಗಡಿಸಿದ್ದಾನೆ. ಭಾವವು ಅವಿರ್ಭವಿಸುವುದಕ್ಕೆ ಮೂಲಾಶ್ರಯವಾದ ಕಾರಣಗಳನ್ನ ಆಲಂಬನವಿಭಾವವೆಂದು ಉದಿಸಿದ ಭಾವವನ್ನು ಪ್ರಬಲಪಡಿಸುವ ಸಾಮಾಗ್ರಿಯನ ಉದ್ದೀಪನವಿಭಾವವಾಗಿದೆ. ಉದಾಹರಣೆಗೆ ರಾಮನಿಗೆ ಸೀತೆಯು ಆಲಂಬನವಿಭಾವ, ಹಾಗೆಯೇ ಸೀತೆಗೆ ರಾಮನು ಆಲಂಬನ ವಿಭಾವವಾಗಿದ್ದಾರೆ. ಇವರಿಬ್ಬರ ಹೃದಯದಲ್ಲಿನ ಪ್ರೇಮಸಂಚಾರ, ಸುತ್ತಲಿನ ಪರಿಸರ, ಸಖಿಯರ ಪ್ರೋತ್ಸಾಹ, ಅಗಲಿಕೆ ಇತ್ಯಾದಿ ಅಂಶಗಳು ಉದ್ದೀಪನವಿಭಾವವಾಗಿದೆ. [ವಿಭಾವವನ್ನು ಆಲಂಬನ, ಉದ್ದೀಪನ ಎಂದು ಭೇದಿಸಿರುವುದು ಕಾಲ್ಪನಿಕವಾಗಿದೆ. ವಿಭಾವ ಸಮುದಾಯ ಒಟ್ಟುಗೂಡಿಯೇ ಭಾವವನ್ನು ಕೆರಳಿಸುತ್ತದೆ ಎಂದು ಅಭಿನವಗುಪ್ತನು ಹೇಳಿದ್ದಾನೆ. ಆದ್ದರಿಂದಲೇ

ಭರತಮುನಿಯು ಈ ವಿಭಾಗವನ್ನು ಎಲ್ಲಿಯೂ ಹೇಳಿಲ್ಲ. [ಅಭಿನವಭಾರತೀ, ಪು, ೩೦೪] ವಿಶ್ವನಾಥನು ಆಲಂಬನವಿಭಾವದಲ್ಲಿ ಬರುವ ನಾಯಕ, ನಾಯಿಕೆ, ಪ್ರತಿನಾಯಕರ ಭೇದ ಪ್ರಭೇದಗಳನ್ನ ತಿಳಿಸಿರುವುದನ್ನ ಪರಾಮರ್ಶಿಸಿಸಲಾಗಿದೆ.

ನಾಯಕನನ್ನು ಧೀರೋದಾತ್ತ, ದೀರೋದ್ದತ, ಧೀರಲಲಿತ, ಧೀರಪ್ರಶಾಂತ ಎಂದು ನಾಲ್ಕು ಬಗೆಯಾಗಿ ವಿಂಗಡಿಸಿದ್ದಾನೆ. ಧೀರೋದಾತ್ತ ನಾಯಕನು ದಯಾಮಾಯಿ, ಗಂಭೀರ ಸ್ವಭಾವವುಳ್ಳವನಾಗಿದ್ದು ಕರ್ತವ್ಯಪಾಲಕನಾಗಿರುತ್ತಾನೆ ರಾಮ, ಯುಧಿಷ್ಠಿರ ಈ ನಾಯಕರಿಗೆ ಉದಾಹರಣೆ ಆಗಿದ್ದಾರೆ. ಉಗ್ರಸ್ವಭಾವ, ಚಂಚಲ ಪ್ರವೃತ್ತಿ, ಅಹಂಕಾರಿ ಯಾಗಿರುವುದು. ದೀರೋದ್ಧತ ನಾಯಕನ ಲಕ್ಷಣವಾಗಿದೆ. ಭೀಮಸೇನ ಮೊದಲಾದವರು ಈ ನಾಯಕರಿಗೆ ಉದಾಹರಣೆಯಾಗಿದ್ದಾರೆ. ಕೋಮಲಸ್ವಭಾವ, ನೃತ್ಯ, ಗಾನಗಳಲ್ಲಿ ಆಸಕ್ತಿಯುಳ್ಳವನು ಇತ್ಯಾದಿ ಸ್ವಭಾವವುಳ್ಳವನು ದೀರಲಲಿತನಾಯಕನೆನಿಸಿದ್ದಾನೆ. ರತ್ನಾವಳಿಯಲ್ಲಿ ಬರುವ ನಾಯಕ ವತ್ಸರಾಜನು ಉದಾಹರಣೆಯಾಗಿದ್ದಾನೆ. ನಾಯಕರಲ್ಲಿನ ಸಾಮಾನ್ಯ ಗುಣವುಳ್ಳವನು ಧೀರ ಪ್ರಶಾಂತನಾಯಕನೆನಿಸಿದ್ದಾನೆ. ಮಾಲತಿಮಾಧವದಲ್ಲಿ ಬರುವ ನಾಯಕ ಮಾಧವ ಇದಕ್ಕೆ ಉದಾಹರಣೆ ಆಗಿದ್ದಾನೆ. ಇವರಲ್ಲಿ ಒಬ್ಬಬ್ಬರೂ ದಕ್ಷಿಣ, ಧೃಷ್ಟ, ಅನುಕೂಲ, ಸಠರೆಂಬ ಮತ್ತೆ ನಾಲ್ಕು ಬಗೆಯಾಗಿ ಒಟ್ಟು ನಲವತ್ತೆಂಟು ನಾಯಕರನ್ನು ವಿಶ್ವನಾಥನು ಭೇದಿಸಿರುವುದನ್ನ, ಉದಾಹರಣೆಯೊಂದಿಗೆ ಪರಾಮರ್ಶಿಸಲಾಗಿದೆ. ನಾಯಕನ ಸತ್ವಗುಣಗಳನ್ನು ನಾಯಕನ ಸಹಚರರನ್ನೂ ಸಹ ಪರಾಮರ್ಶಿಸಲಾಗಿದೆ.

ನಾಯಿಕೆಯನ್ನೂ ಸ್ವಸ್ತ್ರಿ, ಅನ್ಯಸ್ತ್ರೀ, ಸಾಧಾರಣಸ್ತ್ರೀ, ಎಂದು ಮೂರು ಬಗೆಯಾಗಿ ಹೇಳಿದ್ದಾನೆ. ಅದರಲ್ಲಿ ಸ್ವಸ್ತ್ರೀನಾಯಿಕೆಯು ನಾಚಿಕೆಯೇ ವಿಶೇಷವಾದ ಆಭರಣವೆನಿಸಿ ಪರಪುರುಷರಲ್ಲಿ ಆಸಕ್ತಿಯಿಲ್ಲದ ನಮ್ರತೆಯುಳ್ಳವಳಾಗಿರುತ್ತಾಳೆ. ಮುಗ್ಧೆ, ಮಧ್ಯೆ ಪ್ರಗಲ್ಭೆ, ಎಂದು ಸ್ವಸ್ತ್ರಿನಾಯಿಕೆಯಲ್ಲಿ ಮೂರು ಬಗೆಯಾಗಿರುವರು. ಮತ್ತೆ ಇವರಲ್ಲಿ ಧೀರೆ, ಅದೀರೆ ಮತ್ತು ಧೀರಾಧೀರೆ ಎಂದು ಮಧ್ಯೆ, ಪ್ರಗಲ್ಭೆಯಲ್ಲಿ ಒಟ್ಟು ಆರು ಬಗೆಯಾಗಿರುವರು. ಒಟ್ಟು ನಾಯಿಕೆಯರಲ್ಲಿ ಭೇದೋಪಭೇದಗಳೆಲ್ಲಾ ಸೇರಿ ಮೂನ್ನೂರಎಂಬತ್ತನಾಲ್ಕು ಬಗೆಯಾಗಿ ವಿಶ್ವನಾಥನು ನಾಯಿಕೆಯರನ್ನು ವಿಭಾಗಿಸಿದ್ದಾನೆ ಮತ್ತು ಭಾವ, ಹಾವ, ಹೇಲ, ಶೋಭಾ, ಕಾಂತಿ, ದೀಪ್ತಿ, ಇತ್ಯಾದಿ ಇಪ್ಪತ್ತೆಂಟು ಅಲಂಕಾರಗಳನ್ನು ನಾಯಿಕೆಯರಿಗೆ ಅನ್ವಹಿಸಿ ಹೇಳಿದ್ದಾನೆ. ಇವೆಲ್ಲವನ್ನು ಉದಾಹರಣೆ ಸಹಿತವಾಗಿ ಪರಾವರ್ಶಿಸಲಾಗಿದೆ. ಇನ್ನು ಪ್ರತಿನಾಯಕನು ನಾಯಕನಲ್ಲಿರುವ ಗುಣಗಳೆಲ್ಲವೂ ತದ್ ವಿರುದ್ಧವಾದ ಲಕ್ಷಣವನ್ನು ಹೊಂದಿರುತ್ತಾನೆ. ಅವನು ಬೇಟೆ, ಹಗಲುನಿದ್ರೆ, ಅಪವಾದ, ಸ್ತ್ರೀಚಿಂತೆ ಇತ್ಯಾದಿ ಗುಣವುಳ್ಳವನಾಗಿರುತ್ತಾನೆ. ಉದಾಹರಣೆಗೆ ರಾಮಯಾಣದಲ್ಲಿ ಬರುವ ನಾಯಕ ರಾಮನಿಗೆ ರಾವಣನೇ ಪ್ರತಿನಾಯಕನಾಗಿದ್ದಾನೆ. ಇವಿಷ್ಟು

ಆಲಂಬನವಿಭಾವದಲ್ಲಿ ಬರುವ ನಾಯಕ, ನಾಯಿಕೆ, ಪ್ರತಿನಾಯಕರ ಲಕ್ಷಣಬೇಧ ಉಪಭೇದಗಳನ್ನ ವಿಶ್ವನಾಥನು ತಿಳಿಸಿರುವುದನ್ನು ವಿವೇಚಿಸಲಾಗಿದೆ.

ಚಿತ್ತದಲ್ಲಿ ಭಾವವು ಉದ್ರೇಕಗೊಂಡಾಗ ವ್ಯಕ್ತಿಯ ನಡೆ ನುಡಿಗಳಲ್ಲಿ ಗೋಚರವಾಗುವ ವಿಕ್ರಿಯೆಗಳೇ 'ಅನುಭಾವ'ವಾಗಿದೆ. ಬೇರೆಯವರ ಹೃದಯದಲ್ಲಿ ಸ್ಥಾಯಿಭಾವವನ್ನು ಹುಟ್ಟಿಸುವ ಕಾರ್ಯವೇ ಅನುಭಾವ, ಆಯಾಯ ಕಾರಣಗಳಿಂದ ಹುಟ್ಟಿದ ರತಿ ಮೊದಲಾದ ಸ್ಥಾಯಿಭಾವವನ್ನು ಹೊರಗೆ ಸಭ್ಯರಲ್ಲಿ ಪ್ರಕಾಶಗೊಳಿಸುವ ಕ್ರಿಯೆಯು ಕಾವ್ಯ ನಾಟಕಗಳಲ್ಲಿ ಅನುಭಾವವಾಗಿದೆ. ಕಾವ್ಯನಾಟಕಗಳಲ್ಲಿ 'ಭಾವ'ದ ಕಾರಣಗಳನ್ನು 'ವಿಭಾವ'ವೆಂದರೆ ಕಾರ್ಯಗಳನ್ನು 'ಅನುಭಾವ'ಗಳೆಂದು[೨೭] ಕರೆಯುವುದು ಸಂಪ್ರದಾಯವಾಗಿದೆ.[೨೮] ಚಿತ್ತದಲ್ಲಿ ಭಾವವು ಉದ್ರೇಕಗೊಂಡಾಗ ವ್ಯಕ್ತಿಯ ನಡೆನುಡಿಗಳಲ್ಲಿ ಗೋಚರವಾಗುವ ವಿಕ್ರಿಯೆಗಳೇ ಅನುಭಾವವಾಗಿದೆ. ಅಂಗಾಗಗಳ ಚಲನೆ, ಹೋಗುವುದು, ಬರುವುದು, ನಿಲ್ಲುವುದು, ಮಾತನಾಡುವುದು, ಮಾತುಮರೆಸುವುದು, ಮೈನಡುಕ, ಪುಳಕ, ಕಂಬನಿ ಮೊದಲಾದವುಗಳೆಲ್ಲವೂ ಅನುಭಾವವಾಗಿದೆ. "ಮೈಮರವಾಗುವುದು, ಬೆವರು, ರೋಮಾಂಚ, ಧ್ವನಿವಿಕಾರ, ನಡುಕ, ಬಣ್ಣವ್ಯತ್ಯಾಸವಾಗುವುದು, ಕಂಬನಿ, ಮೂರ್ಛೆ[೨೯]" ಈ ಎಂಟನ್ನು ಪ್ರತ್ಯೇಕಿಸಿ ಭರತನು ಇದಕ್ಕೆ ಸಾತ್ತ್ವಿಕಭಾವಗಳೆಂದು ಹೆಸರು ಕೊಟ್ಟಿದ್ದಾನೆ. ಸ್ಥಾಯಿಭಾವಕ್ಕೆ ಪೋಷಕವಾಗಿ ಅನೇಕಭಾವಗಳು ಬಂದು ಹೋಗುತ್ತಿರುತ್ತವೆ. ಇಂತಹ ಭಾವಗಳನ್ನ ವ್ಯಭಿಚಾರಿಭಾವಗಳೆನ್ನಲಾಗಿದೆ. ಅವು ಮಾನವನ ಮನಸ್ಸಿನಲ್ಲಿ ಸಹಜವಾಗಿ ಸುಪ್ತವಾಗಿರುವ ಪ್ರಧಾನ ಭಾವವಾಗಿದ್ದು ಸ್ಥಿರವಾಗಿ ನಿಲ್ಲದ ಸ್ಥಾಯಿಭಾವಕ್ಕೆ ಪೋಷಕವಾಗಿ ಮೈದೂರಿ ಮರೆಯಾಗುತ್ತಿರುತ್ತದೆ. ಆದ್ದರಿಂದಲೇ ಅಭಿನವಗುಪ್ತನು ಸೂತ್ರದಲ್ಲಿ ಪೂಣಿಸಿರುವ ಬಣ್ಣದ ಮಣಿಗಳಿಗೂ ಮತ್ತು ಸಮುದ್ರದ ತರಂಗಗಳಿಗೆ ಹೋಲಿಸಿದ್ದಾನೆ. ಈ ವ್ಯಭಿಚಾರಿಭಾವಗಳು ಮನಸ್ಸಿನ ಕ್ರಿಯೆಯಾದ್ದರಿಂದ ಇದನ್ನು ಲೆಕ್ಕ ಹಾಕುವುದು ಕಷ್ಟವಾದರೂ ಭರತನು ನಿರ್ವೇದ, ಆವೇಗ, ದೃಶ್ಯ, ಶಮ, ಮದ, ಜಡತೆ, ಉಗ್ರತೆ, ಮೋಹ, ಇತ್ಯಾದಿ ಮೂವತ್ತಮೂರು ಸಂಚಾರಿಭಾವಗಳನ್ನು ಹೇಳಿದ್ದಾನೆ. [ನಾಟ್ಯಶಾಸ್ತ್ರ ೬, ೧೮, ೨೦] ಇವನ್ನು ಉದಾಹರಣೆ ಸಹಿತವಾಗಿ ಪರಾಮರ್ಶಿಸಲಾಗಿದೆ.

ರಸಪ್ರಕಾರಗಳಿಗೆ ಸಂಬಂಧಿಸಿದಂತೆ ವಿಶ್ವನಾಥನು ಭರತನ ಎಂಟು ರಸಗಳನ್ನು ಸಮ್ಮತಿಸಿದ್ದಾನೆ. ಈ ರಸಗಳ ಜೊತೆಗೆ ಶಾಂತರಸವನ್ನು ಸೇರಿಸಿ ವಾತ್ಸಲ್ಯ ಎಂಬ ಹತ್ತನೆಯ ರಸವನ್ನು ತಿಳಿಸಿ ಅದು ಭರತಮುನಿಗೆ ಸಮ್ಮತವಾಗಿದೆ ಎಂದು ನಿರೂಪಿಸಿದ್ದಾನೆ. ರಸಗಳ ಸಂಖ್ಯೆಯನ್ನು ಭರತನು ಪ್ರಥಮ ಬಾರಿಗೆ ನಾಟ್ಯರಸಗಳೆಂದು ಕರೆಯಲಾದ ಎಂಟು ರಸಗಳನ್ನು ಅವುಗಳ ಸ್ಥಾಯಿಯಭಾವಗಳನು ಹೆಸರಿಸಿ ವಿವರಿಸಿದ್ದಾನೆ.

**ಶೃಂಗಾರಹಾಸ್ಯಕರುಣ ರೌದ್ರವೀರಭಯಾನಕಾಃ ।**
**ಬೀಭತ್ಸಾದ್ಭುತ ಸಂಜ್ಞಾ ಚೇತ್ಯಷ್ಟೌ ನಾಟ್ಯೇ ರಸಾಃ ಸ್ಮೃತಾಃ ॥**
**ರತಿಹಾಸಶ್ಚ ಶೋಕಶ್ಚ ಕ್ರೋದೋತ್ಸಾಹೌ ಭಯಂ ತಥಾ ।**
**ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ ॥**

[ನಾಟ್ಯಶಾಸ್ತ್ರ, ೬, ೧೮, ೧೯]

ಕಾಳಿದಾಸನ ವಿಕ್ರಮೋರ್ವಶೀಯದಲ್ಲಿ [೨, ೧೮] ಮತ್ತು ದಂಡಿಯ ಕಾವ್ಯಾದರ್ಶದಲ್ಲಿ [೨, ೩೯೨] ಎಂಟುರಸಗಳ ಉಲ್ಲೇಖವಿದೆ. ಉದ್ಭಟನು ಕಾವ್ಯಾಲಂಕಾರಸಾರಸಂಗ್ರಹದಲ್ಲಿ [೪.೫] ಶಾಂತರಸವನ್ನು ಪ್ರಥಮ ಬಾರಿಗೆ ಒಂಬತ್ತನೆ ರಸವಾಗಿ ಪರಿಗಣಿಸಿದ್ದನು. ರುದ್ರಟನು 'ಪ್ರೇಯಸ್' ಎಂಬುದನ್ನು ಹತ್ತನೆಯ ರಸವಾಗಿ ಹೇಳಿದ್ದಾನೆ. ಕೆಲವು ಅಲಂಕಾರಿಕರು ಸ್ನೇಹ, ಲೌಲ್ಯ, ಮತ್ತು ಭಕ್ತಿ, ಎಂಬ ರಸಗಳನ್ನು ವಿವರಿಸಿದ್ದಾರೆ. ಆದರೆ ಹೆಚ್ಚಿನ ಅಲಂಕಾರಿಕರು ರಸಗಳು ಒಂಬತ್ತು ಎಂಬ ಏಕಾಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ಮಿಕ್ಕ ರಸಗಳೆಲ್ಲವೂ ನವರಸಗಳಲ್ಲಿಯೇ ಸೇರುತ್ತದೆ ಎಂಬ ಅಭಿಪ್ರಾಯವನ್ನು ಅಭಿನವಗುಪ್ತನು ವ್ಯಕ್ತಪಡಿಸಿದ್ದಾನೆ. ಶಾಂತರಸವನ್ನು ಒಂಬತ್ತನೆ ರಸವನ್ನಾಗಿ ಪರಿಗಣಿಸಬೇಕೇ ಇಲ್ಲವೇ ಎಂಬ ಚರ್ಚೆಯೂ ನಡೆದಿದೆ. ಕೆಲವರ ಅಭಿಪ್ರಾಯದಂತೆ ಶಾಂತವು ಶ್ರವ್ಯಕಾವ್ಯದಲ್ಲಿ ಬರಬಹುದು. ಆದರೆ ದೃಶ್ಯಕಾವ್ಯವಾದ ನಾಟಕದಲ್ಲಿ ಅದನ್ನು ತರುವುದು ಆಸಾಧ್ಯ [೩೦] ಶಾಂತವನ್ನು ನಾಟಕದಲ್ಲಿ ಅಂಗೀಕರಿಸದಿರುವುದಕ್ಕೆ ಅನೇಕ ಕಾರಣಗಳಿವೆ. ಪ್ರೇಕ್ಷಕರಲ್ಲಿ ಅಧಿಕ ಸಂಖ್ಯೆಯವರು ಶಾಂತವನ್ನು ಆಸ್ವಾದಿಸಲಾರರು. ಹಾಡು, ಸಂಗೀತ, ವೇಷ, ಭೂಷಣಾಧಿಗಳೊಂದಿಗೆ ಕೂಡಿದ ನಾಟಕ ಪ್ರದರ್ಶನದ ಇಡೀ ವಾತಾವರಣವೇ ಶಮಸ್ಥಾಯಿಭಾವದ ಪೋಷಣೆಗೆ ವಿರುದ್ಧವಾಗಿದೆ. ಶ್ರವ್ಯಕಾವ್ಯದಲ್ಲಾದರೆ ಅದರ ಪೋಷಣೆ ಸಾಧ್ಯವೆಂದು ಧನಂಜಯ ಮುಂತಾದವರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವನ್ನು ಆನಂದವರ್ಧನ, ಅಭಿನವಗುಪ್ತ, ಮಮ್ಮಟ ಮುಂತಾದವರು ಒಪ್ಪುವುದಿಲ್ಲ. ಪ್ರಬೋಧ ಚಂದ್ರೋದಯದಂತಹ ಶಾಂತರಸಪ್ರಧಾನ ನಾಟಕವನ್ನು ಅಭಿನಯಿಸುವುದು ಸಾಧ್ಯವಿಲ್ಲ ಎಂದು ಹೇಳಲು ಬರುವುದಿಲ್ಲ. ಅಂತಹ ನಾಟಕಕ್ಕೆ ಪ್ರೇಕ್ಷಕರು ಕಡಿಮೆ ಎನ್ನಬಹುದಷ್ಟೆ ಎಂದು ಶಾಂತರಸದ ಪ್ರತಿಪಾದನೆಯನ್ನು ಅಭಿನವಗುಪ್ತ ಮುಂತಾದವರು ವಿವರಿಸಿದ್ದಾರೆ.

ರಸಪ್ರಕಾರಗಳಲ್ಲಿ ಶೃಂಗಾರರಸವೊಂದನ್ನು ಉದಾಹರಣೆಯಾಗಿ ವಿವರಿಸಲಾಗಿದೆ. ಶೃಂಗಾರರಸಕ್ಕೆ ರತಿಯೇ ಸ್ಥಾಯಿಭಾವವಾಗಿದೆ. ಶ್ಯಾಮವರ್ಣವಿದ್ದು ವಿಷ್ಣು ಇದಕ್ಕೆ ಅಧಿದೇವತೆಯಾಗಿದ್ದಾನೆ. ಉತ್ತಮ ಪ್ರಕೃತಿವುಳ್ಳವರಲ್ಲಿ ಹುಟ್ಟುವ ಕಾಮವಿಕಾರವು ಶೃಂಗಾರವೆನಿಸಿದ್ದರಿಂದ ಶೃಂಗಾರಕ್ಕೆ ಗಾಂಭೀರ್ಯವೇ ಜೀವಾಳ. ಅನುರಾಗವಿಲ್ಲದವರನ್ನು

ಬಿಟ್ಟು ಉಳಿದ ನಾಯಿಕೆಯರು ದಕ್ಷಿಣ ಮೊದಲಾದ ನಾಯಕರು ಆಲಂಬನರೆನಿಸಿದ್ದಾರೆ. ಶೃಂಗಾರರಸವು ವಿಪ್ರಲಂಬ, ಸಂಭೋಗ ಶೃಂಗಾರವೆಂದು ಎರಡು ಬಗೆಯಾಗಿದೆ. ಶೃಂಗಾರರಸಕ್ಕೆ ಉದಾಹರಣೆ

**ಪ್ರಸ್ಥಾನಂ ವಲಯೈಃ ಕೃತಂ ಪ್ರಿಯಸಖೈರಸ್ರೈರಜಸ್ರಂ ಗತಂ ।**
**ಧೃತ್ಯಾನ ಕ್ಷಣಮಾಸಿತಂ ವ್ಯವಸಿತಂ ಚಿತ್ತೇನ ಗಂತುಂ ಪುರಃ ॥**
**ಯಾತುಂ ನಿಶ್ಚಿತಚೇತಸಿ ಪ್ರಿಯತಮೇ ಸರ್ವೇ ಸಮಂ ಪ್ರಸ್ಥಿತಾ ।**
**ಗಂತವ್ಯೇ ಸತಿ ಜೀವಿತ ಪ್ರಿಯಸುಹೃತ್ಸಾರ್ಥಂ ಕಿಮು ತ್ಯಜ್ಯತೇ[೩೧]॥**

"ಬಳೆಗಳು ಹೊರಬಂದವು. ಕಣ್ಣೀರು ಹನಿಗಳು ಸತತವಾಗಿ ಹೊರಟವು. ಧೈರ್ಯ ಕ್ಷಣ ಮಾತ್ರ ನಿಲ್ಲಲಿಲ್ಲ. ಮನಸ್ಸು ಎಲ್ಲಕ್ಕೂ ಮುಂಚೆ ಹೋಗಲು ಯತ್ನಿಸಿದೆ. ಪ್ರಿಯತಮನು ಹೊರಡಲು ನಿಶ್ಚಯಿಸಿದ ಕೊಡಲೆ ಇವೆಲ್ಲ ಜೊತೆಯಲ್ಲಿ ಹೊರಟಿವೆ. ಜೀವವೇ ನೀನೂ ಹೋಗುವಂತಿರುವಾಗ ಈ ಪ್ರಿಯಸಖರ ಗುಂಪನ್ನೂ ದೂರ ಮಾಡುವೆಯೇಕೆ?" ಪ್ರಿಯತಮನು ಪ್ರವಾಸ ಹೊರಟ ಸಮಯದಲ್ಲಿ ಪ್ರೇಯಸಿ ಆಡುವ ಮಾತುಗಳಿವು. ವಿರಹದ ಸನ್ನಿವೇಶವಾದ್ದರಿಂದ ಈ ಶೃಂಗಾರ ಸಂದರ್ಭವನ್ನು ವಿಪ್ರಲಂಭ ಶೃಂಗಾರವೆಂದಿದ್ದಾರೆ. ಮೇಲಿನ ಶ್ಲೋಕದಲ್ಲಿ 'ರಸ'ಕ್ಕೆ ಕಾರಣವಾದ ಪ್ರಿಯತಮನು ಆಲಂಬನವಿಭಾವ, ಅವನ ಪ್ರಯಾಣ ಉದ್ದೀಪನವಿಭಾವ. ಬಳೆಗಳ ಹೊರಬರುವಿಕೆಯಿಂದ ಸೂಚಿತವಾದ ಕೃಶತ್ವ ಮುಂತಾದವು ಅನುಭಾವ ದೈನ್ಯ, ಚಿಂತಾ ಇವು ವ್ಯಭಿಚಾರಿಭಾವಗಳು.

ರಸಕ್ಕೆ ಸಂಬಂಧಿಸಿದ ಸಂಪೂರ್ಣ ವಿಚಾರವನ್ನು ಕೂಲಂಕುಷವಾಗಿ ಪರಿಶೀಲಿಸಿ ಪರಾವಿಮರ್ಶಿಸಲಾಗಿದೆ. ರಸವೇ ಕಾವ್ಯದ ಸಾರಸರ್ವಸ್ವವಾದರೂ, ಸಮಗ್ರವಾದ ಒಂದು ಕಾವ್ಯಮಿಮಾಂಸೆಯಲ್ಲಿ ಅಲಂಕಾರ ಮುಂತಾದ ಅಂಶಗಳನ್ನು ಸೇರಿಸುವ ಅವಶ್ಯಕತೆ ಇದ್ದುದರಿಂದ ರಸಪಂಥ ಸ್ವತಂತ್ರವಾಗಿ ಬೆಳೆಯುವ ಬದಲು, ಕಾವ್ಯದ ಇತರ ಅಂಶಗಳನ್ನೊಳಗೊಳ್ಳುವುದರ ಮೂಲಕ ವ್ಯಾಪ್ತಿಯನ್ನು ವಿಸ್ತರಿಸಿಕೊಂಡ 'ಧ್ವನಿ' ಮತದೊಡನೆ ನಿಕಟ ಸಂಬಂಧವನ್ನು ಹೊಂದಿ ಪ್ರಸಿದ್ಧವಾಗಿರುವುದನ್ನು ಗಮನಿಸಬಹುದು. "ರಸವಿಲ್ಲದೇ ಕಾವ್ಯಾರ್ಥವಿಲ್ಲ[೩೨]", "ರಸಾತ್ಮಕ ವಾಕ್ಯವೇ ಕಾವ್ಯ[೩೩]" ಎಂಬ ಭರತ, ವಿಶ್ವನಾಥರ ಮಾತು ಹೃದ್ಯವೊ, ರಸದ ಔನ್ನತ್ಯಸೂಚಕವೂ ಆಗಿದೆ.

**ಕಾವ್ಯಂ ಧ್ವನಿರ್ಗುಣೀಭೂತವ್ಯಂಗ್ಯಶ್ಚೇತಿ ದ್ವಿಧಾ ಮತಮ್[೩೪]** ।

ವಿಶ್ವನಾಥನು ಕಾವ್ಯವು ಧ್ವನಿ, ಗುಣಿಭೂತವ್ಯಂಗ್ಯವೆಂದು ಎರಡು ಬಗೆಯಾಗಿದೆ" ಎಂದು ಹೇಳಿ, ನಂತರ, ಶ್ರವ್ಯ, ದೃಶ್ಯಕಾವ್ಯವನ್ನು ಇನ್ನೆರಡು ಬಗೆಗಳಾಗಿ ಒಟ್ಟು ನಾಲ್ಕುಬಗೆಯ ಕಾವ್ಯಗಳನ್ನು ವಿವರಿಸಿದ್ದಾನೆ. ಧ್ವನಿಕಾವ್ಯವನ್ನು ವಿವರಿಸುವ ಮೊದಲು

'ಧ್ವನಿ'ಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಧ್ವನಿ ಎಂಬ ಪದಕ್ಕೆ ಕಾವ್ಯದಲ್ಲಿ ಸ್ವತಂತ್ರ ಸ್ಥಾನವನ್ನು ಕೊಟ್ಟು ಮೊದಲ ಬಾರಿಗೆ ಪ್ರತಿಪಾದಿಸಿದವನು ಆನಂದವರ್ಧನ, ಧ್ವನಿಯು ಆನಂದವರ್ಧನನಿಗಿಂತಲೂ ಹಿಂದಿನದೆಂದು ಹೇಳಲು ಆಧಾರಗಳಿವೆ. ವ್ಯಾಕರಣಶಾಸ್ತ್ರದಿಂದ ಧ್ವನಿಯ ಕಲ್ಪನೆ ಬಂದಿದೆಯೆಂಬುದು ವಿದ್ವಾಂಸರ ಮತವಾಗಿದೆ. ಅರ್ಥಸೂಚಕವಾದ ಪದದ ಒಟ್ಟು 'ಸ್ಫೋಟ'ವನ್ನಭಿವ್ಯಕ್ತಿಗೊಳಿಸುವ ಪದದ ಅಥವಾ ಶಬ್ದದ ವಿವಿಧ ಸ್ವರಗಳ ಒಂದೊಂದು ಉಚ್ಚಾರಣೆಯು 'ಧ್ವನಿ' ಎಂದಿದ್ದಾರೆ. ವ್ಯಾಕರಣ ಶಾಸ್ತ್ರದಲ್ಲಿ ಸ್ಫೋಟಕ್ಕೆ ಸ್ವರದ ಉಚ್ಚಾರಣೆಯು ವ್ಯಂಜಕ ಈ ವ್ಯಂಜಕವೇ ಧ್ವನಿ ಅಲಂಕಾರಶಾಸ್ತ್ರದಲ್ಲಿ ವಿಶೇಷಾರ್ಥವನ್ನೂ [೩೫] ಧ್ವನಿ ಎಂದೇ ಕರೆದಿದ್ದಾನೆ. ಅವರ ಪ್ರಕಾರ ವಿಶೇಷಾರ್ಥವು 'ವ್ಯಂಜನಾ' ಎಂಬ ವ್ಯಾಪಾರದ ಮೂಲಕ ಬಂದ ವ್ಯಂಗ್ಯಾಂರ್ಥವಾಗಿದೆ. ಆದ್ದರಿಂದ ವ್ಯಂಜಕವಾದ ಶಬ್ದ, ವ್ಯಂಗ್ಯಾರ್ಥ ಇವೆರಡನ್ನೂ ಧ್ವನಿ ಎಂದಿದ್ದಾರೆ. ಈ ಧ್ವನಿಯೇ ಕಾವ್ಯದ ಆತ್ಮವೆಂದು ಆನಂದವರ್ಧನ ಪ್ರತಿಪಾದಿಸಿದ್ದಾನೆ[೩೬]. ವಾಚ್ಯಲಕ್ಷ್ಯಗಳಿಗಿಂತ ಭಿನ್ನವಾದ ಅರ್ಥದ ಪರಿಚಯ ಭಾಮಹ, ದಂಡಿ, ಉದ್ಭಟ, ಮುಂತಾದ ಅಲಂಕಾರಿಕ ರೆಲ್ಲರಿಗೂ ಇದ್ದರೂ. ಅದನ್ನು ಆಕ್ಷೇಪ, ಸಮಾಸೋಕ್ತಿ, ಪರ್ಯಾಯೋಕ್ತ, ಅಪ್ರಸ್ತುತ ಪ್ರಶಂಸಾ ಮುಂತಾದ ಅಲಂಕರಗಳಲ್ಲಿ ವ್ಯಂಗ್ಯಾರ್ಥವನ್ನು ಗುರುತಿಸಿದ್ದಾರೆ. "ಎಲ್ಲಿ ಅರ್ಥ ಮತ್ತು ಶಬ್ದವು ತನ್ನನ್ನು ತಾನು ಅಧೀನಗೊಳಿಸಿಕೊಂಡು ಇನ್ನೊಂದು ಅರ್ಥವನ್ನು ವ್ಯಂಗ್ಯವಾಗಿ ಕೊಡುತ್ತವೆಯೋ ಆಕಾವ್ಯವನ್ನು 'ಧ್ವನಿ' ಎನ್ನಲಾಗಿದೆ". ಧ್ವನಿಯನ್ನು ವಸ್ತು, ಅಲಂಕಾರ, ರಸಧ್ವನಿಯೆಂದು ಮೂರು ಬಗೆಯಾಗಿ ಆನಂದವರ್ಧನನು ಹೇಳಿ ರಸಧ್ವನಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಆದರೆ ಅಭಿನವಗುಪ್ತನು ವಸ್ತು, ಅಲಂಕಾರಧ್ವನಿಯು ರಸಧ್ವನಿಯಲ್ಲಿಯೇ ಪರ್ಯಾವಸನಗೊಳಿಸಿದ್ದಾನೆ.

ಧ್ವನಿಕಾವ್ಯ ಮತ್ತು ಗುಣಿಭೂತವ್ಯಂಗ್ಯ ಕಾವ್ಯವೆಂದು ವಿಶ್ವನಾಥನು ಎರಡು ಬಗೆಯಾಗಿ ಹೇಳಿದ್ದಾನೆ. ಆನಂದವರ್ಧನನು ಧ್ವನಿ, ಗುಣೀಭೂತವ್ಯಂಗ್ಯ, ಚಿತ್ರಕಾವ್ಯವೆಂದು [ಇದರಲ್ಲಿ ಶಬ್ದಚಿತ್ರ, ಅರ್ಥಚಿತ್ರಕಾವ್ಯವೆಂದು] ಮೂರು ಬಗೆಯಾಗಿ ಮಾಡಿದ್ದಾನೆ. ಮಮ್ಮಟನು ಉತ್ತಮ, ಮಧ್ಯಮ ಅಧಮಕಾವ್ಯವೆಂದು ಮೂರುಬಗೆಯಾಗಿ ಹೇಳಿದ್ದಾನೆ. ವಿಶ್ವನಾಥನು ಧ್ವನಿಯನ್ನು 'ಅವಿವಕ್ಷಿತವಾಚ್ಯ' 'ವಿವಕ್ಷಿತಅನ್ಯಪರವಾಚ್ಯ' ಎಂದು ಎರಡುಬಗೆ. ಇವುಗಳಲ್ಲಿ ಮೊದಲನೆಯದು ಎರಡುವಿಧ 'ಅರ್ಥಾಂತರಸಂಕ್ರಮಿತ', 'ಅತ್ಯಂತತಿರಸ್ಕೃತವಾಚ್ಯ' ಎರಡನೆಯದು ಎರಡು ವಿಧ 'ಅಸಂಲಕ್ಷ್ಯಕ್ರಮ' [ರಸ, ಭಾವ ಮುಂತಾದವನ್ನೊಳ ಗೊಂಡಿರುವುದು] 'ಸಂಲಕ್ಷ್ಯಕ್ರಮ' [ಶಬ್ದಶಕ್ತಿಮೂಲ, ಅರ್ಥಶಕ್ತಿಮೂಲ, ಉಭಯಶಕ್ತಿಮೂಲ, ಇವುಗಳನ್ನೊಳಗೊಂಡಿದೆ. ಪುನಃ ಇಲ್ಲಿ ಶಬ್ದಶಕ್ತಿಮೂಲವು ವಸ್ತು, ಅಲಂಕಾರ ಎಂದೂ ಅರ್ಥಶಕ್ತಿಮೂಲವು ಸ್ವತಃಸಂಭವಿಕವಿಪ್ರೌಢೋಕ್ತಿಸಿದ್ದ, ಕವಿ ನಿಬದ್ಧವಕ್ತೃಪ್ರೌಢೋಕ್ತಿಸಿದ್ದ ಭೇದಗಳನ್ನು

ಹೊಂದಿದೆ. ಉಭಯಶಕ್ತಿಮೂಲ ಒಂದೇ ಭೇದವಾಗಿದೆ]. ಒಟ್ಟು ಹನ್ನೆರಡು ಬಗೆಯ ಧ್ವನಿಯ ಪ್ರಧಾನ ಭೇದವನ್ನು ಮಾಡಿ. ಇದರ ಭೇದೋಪಭೇದಗಳೆಲ್ಲಾ ಸೇರಿ ಸಾವಿರಾರು ಬಗೆಯ ಧ್ವನಿ ಭೇದಗಳನ್ನು ವಿಶ್ವನಾಥನು ಮಾಡಿದ್ದಾನೆ. ಅವಿವಕ್ಷಿತವಾಚ್ಯ ಧ್ವನಿಯಲ್ಲಿನ ಭೇದವಾದ ಅರ್ಥಾಂತರಸಂಕ್ರಮಿತವಾಚ್ಯ – ಇಲ್ಲಿನ ವಾಚ್ಯಾರ್ಥವು ಮತ್ತೊಂದರ್ಥದಲ್ಲಿ ಸೇರಿ ಹೋಗುತ್ತದೆ. ಉದಾಹರಣೆಗೆ

**ತ್ವಾಮಸ್ಮಿ ವಚ್ಮಿ ವಿದುಷಾಂ ಸಮವಾಯೋಽತ್ರ ತಿಷ್ಠತಿ ।**
**ಆತ್ಮೀಯಾಂ ಮತಿಮಾಸ್ಥಾಯ ಸ್ಥಿತಿಮತ್ರ ವಿಧೇಹಿ ತತ್** [೩೭]॥

ನಾನು ಹೇಳುತ್ತೇನೆ – ವಿದ್ವಾಂಸರ ಸಮುದಾಯ ಇಲ್ಲಿದೆ. ಆದ್ದರಿಂದ ಸ್ವಬುದ್ಧಿಯನ್ನವಲಂಬಿಸಿಕೊಂಡು ಅಲ್ಲಿ ನಿನ್ನ ಸ್ಥಿತಿಯನ್ನು ನಿರ್ಧಾರಮಾಡಿಕೋ', ಹಿತಚಿಂತಕನಾದ ಒಬ್ಬನು ಮಿತ್ರನನ್ನು ಕುರಿತು ಮಾಡುವ ಮಾತುಗಳಿವು. ಇಲ್ಲಿ 'ನಾನು ಹೇಳುತ್ತೇನೆ' ಎಂಬ ಮಾತುಗಳಿಗೆ 'ಹೇಳುವುದು' ಎಂಬ ಒಂದೇ ಅರ್ಥವಲ್ಲ. ಈ ವಾಚ್ಯಾರ್ಥವು 'ಉಪದೇಶ ಮಾಡುತ್ತೇನೆ' ಎಂಬ ಬೇರೆ ಅರ್ಥದಲ್ಲಿ ಪರ್ಯಾವಸಾನವಾಗುತ್ತದೆ.

ಅವಿವಕ್ಷಿತವಾಚ್ಯ ಇನ್ನೊಂದು ಬಗೆಯಾದ ಅತ್ಯಂತತಿರಸ್ಕೃತವಾಚ್ಯದ ವಾಚ್ಯಾರ್ಥವು ತನಗಿಂತಲೂ ಬೇರೆಯಾವ ಅರ್ಥಕೊಡುವ ಸಂದರ್ಭ ಉದಾಹರಣೆಗೆ.

**ಉಪಕೃತಂ ಬಹು ತತ್ರ ಕಿಮುಚ್ಯತೇ**
**ಸುಜನತಾ ಪ್ರಥಿತಾ ಭವತಾ ಪರಮ್ ।**
**ವಿದಧದೀದೃಶಮೇವ ಸದಾ ಸಖೇ**
**ಸುಖೀ ತಮಾಸ್ಸ್ವ ತತಃ ಪರದಾಂ ಶತಮ್** [೩೮] ॥

"ಮಿತ್ರನೇ, ನಿನ್ನಿಂದ ಬಹು ಉಪಕಾರವಾಗಿದೆ. ಕೇವಲ ಸೌಜನ್ಯವನ್ನೇ ಪ್ರಕಟಪಡಿಸಿದ್ದೀಯೇ, ಸದಾ ಹೀಗೆಯೇ ಮಾಡುತ್ತಾ ನೂರುವರ್ಷಕಾಲ ಬಾಳು". ತುಂಬ ಅಪಕಾರಕ್ಕೆ ಗುರಿಯಾದ ಒಬ್ಬನು ಹೇಳುವ ಮಾತಿದು ಅಂದರೆ "ಶತ್ರುವೇ, ಎಷ್ಟು ಅಪಕಾರ ಮಾಡಿರುವೆ, ಕೇವಲ ನಿನ್ನ ದೌರ್ಜನ್ಯ ಪ್ರಕಟವಾಗಿದೆ. ನೀನು ನಾಶವಾಗು". ಎಂಬುದು ಅತಿಶಯವಾದ ಅಪಕಾರ ಈ ಶ್ಲೋಕದಲ್ಲಿನ ವ್ಯಂಗ್ಯಾರ್ಥ ಇಲ್ಲಿ ಉಪಕಾರವೆಂಬ ಮುಖ್ಯಾರ್ಥಕ್ಕೆ ಭಾದೆಯುಂಟಾಗಿ ಅದು ಬೇರೆ ಒಂದು ಅರ್ಥದಲ್ಲಿ ಪರಿಣಮಿಸಿದೆ. ಅವಿವಕ್ಷಿತವಾಚ್ಯವೆನಿಸಿಕೊಂಡಿರುವ ಈ ಬಗೆಯ ಧ್ವನಿಯಲ್ಲಿ ವಾಚ್ಯಾರ್ಥಕ್ಕೆ ಭಾದೆಯುಂಟಾಗುವುದೆಂಬುದು ಗಮನಿಸಬೇಕಾದ ವಿಚಾರ. ಹೀಗೆ ವಾಚ್ಯಾರ್ಥ್ಯಬಾಧೆಯ ಕ್ರಮ ಅಥವಾ ವ್ಯಾಪಾರವನ್ನು 'ಲಕ್ಷಣಾ' ಎಂದು ಕರೆದಿದ್ದಾರೆ. ಮೇಲ್ಕಂಡ ಶ್ಲೋಕದ 'ಧ್ವನಿ'ಗೆ ಈ 'ಲಕ್ಷಣಾ' ಆಧಾರವಾಗಿರುವುದರಿಂದ

ಇಂಥ ಸಂದರ್ಭಗಳು 'ಅತ್ಯಂತ್ಯ ತಿರಸ್ಕೃತವಾಚ್ಯ' ಅಥವಾ 'ಲಕ್ಷಣಾಮೂಲಧ್ವನಿ' ಎಂದಾಗಿದೆ. ಉದಾಹರಣೆಗಷ್ಟೆ ಧ್ವನಿಯ ಇವೆರಡು ಭೇದಗಳನ್ನು ವಿವರಿಸಲಾಗಿದೆ. ಉಳಿದ ಭೇದಗಳನ್ನ ಮೂರನೆಯ ಅಧ್ಯಾಯದಲ್ಲಿ ಕೂಲಂಕುಷವಾಗಿ ಅಧ್ಯಯನ ಮಾಡಲಾಗಿದೆ.

ಧ್ವನಿಯ ಇನ್ನೊಂದು ಭೇದವಾದ ಗುಣೀಭೂತವ್ಯಂಗ್ಯದಲ್ಲಿ, ವ್ಯಂಗ್ಯವು ಗೌಣವಾಗಿದ್ದು ವ್ಯಾಚ್ಯಾರ್ಥವೇ ಪ್ರಧಾನವಾಗಿರುವುದನ್ನ ಗುಣೀಭೂತವ್ಯಂಗ್ಯ ಎನ್ನಲಾಗಿದೆ. ಇದನ್ನು ವಿಶ್ವನಾಥನು ಇತಾರಾಂಗ, ಕಾಕ್ವಕ್ಷಿಪ್ತ, ವಾಚ್ಯಸಿಧ್ಯಂಗ, ಸಂದಿಗ್ಧ ಪ್ರಾಧಾನ್ಯ, ತುಲ್ಯಪ್ರಾಧಾನ್ಯ, ಅಸ್ಫುಟ, ಅಗೂಢ, ಅಸುಂದರ ಎಂಬ ಎಂಟು ಪ್ರಕಾರಗಳನ್ನು ಬಗೆಯ ಗುಣೀಭೂತ ವ್ಯಂಗ್ಯದಲ್ಲಿ ವಿವೇಚಿಸಿದ್ದಾನೆ. ಇತರಾಂಗವು ರಸಕ್ಕೆ ಪೋಷಕವಾಗಿದ್ದು, ಒಂದು ರಸ ಇನ್ನೊಂದು ರಸಕ್ಕೆ ಅಂಗವಾಗಿ ಪರಿಣಮಿಸುತ್ತದೆ. ಉದಾಹರಣೆಗೆ.,

**ಕಳಹಂಸಾಲಸಯಾನಯಂ ಮೃಗಮದಾಮೋದಾನ್ಯನಿಶ್ವಾಸೆಯು**
**ತಳಿರೇ ತಾವರೆಯೇ ಮದಾಳಿಕುಳಮೇ ಕನ್ನೈದಿಲೇ ಮತ್ತಕೋ ।**
**ತಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಸೆಯಂ ಭೃಂಗ**
**ಕುಂತಳೆಯಂ ಕರವನೇತ್ರೆಯಂ ಪಿಕನಿನಾದಖ್ಯಾತಿಯಂ ಸೀತೆಯು ॥**

[ಪಂಪರಾಮಾಯಣ, ೯-೧೧೮]

ಇಲ್ಲಿ ಸೀತೆಯ ಅಗುಲುವಿಕೆಯಿಂದ ರಾಮಗೋಳಾಡುತ್ತಿರುವ ಸನ್ನಿವೇಶ, ಇಲ್ಲಿರುವ ಶೃಂಗಾರರಸ ಕರುಣರಸದಲ್ಲಿ ಪರ್ಯಾವಸಾನಗೊಂಡು ಅದರ ಒಂದು ಅಂಗವಾಗಿ ಪರಿಣಮಿಸುತ್ತದೆ. ಇನ್ನು ಕಾಕ್ವಾಕ್ಷಿಪ್ತದಲ್ಲಿ ಸ್ವರವಿಕಾರದಿಂದ ವ್ಯಂಗ್ಯವು ವಾಚ್ಯದೊಡನೆ ತೋರುತ್ತದೆ. ಕಾಕು ಉದ್ಗಾರಗಳು ಧ್ವನಿಸುವ ವ್ಯಂಗ್ಯಾಂಶವೇ ವಾಚ್ಯಕ್ಕಿಂತ ಪ್ರಧಾನವಾದಾಗ ಅವು ಧ್ವನಿಯೂ ಆಗುತ್ತದೆ. ಆದರೆ ವಾಚ್ಯ ಪ್ರಧಾನವಾದರೆ ಅದು ಗುಣೀಭೂತ ವ್ಯಂಗ್ಯವಾಗುತ್ತದೆ. ಉದಾಹರಣೆಗೆ

**ಎಲೆ ಮರುಳೆ ಭೂಪಾಲ ಕೌರವ**
**ಕುಲಪಿತಮಹನಹನು ಧರ್ಮಂ**
**ಗಳಲಿ ಪರಿಣತನಹನು ಕಾಳೆಗವೆತ್ತಲಿವರೆತ್ತ**
**ಗಳದ ಗರಳನ ದೊರೆಯ ಭಟಮಂ**
**ಡಳಿಯೊಳಗೆ ಮನ್ನಣೆಯ ಹೇಳ್ವೆ**
**ಕಳೆದ ಹರೆಯಂಗೆಂದು ಗಹಗಹಿಸಿದನು ಕಲಿಕರ್ಣ**

[ಭೀಷ್ಮಪರ್ವ, ೧.೩೪]

ಈ ಪದ್ಯದಲ್ಲಿ ಭೀಷ್ಮನಿಗೆ ಸೇನಾದಿಪತಿಯ ಪಟ್ಟವನ್ನು ಕಟ್ಟಬೇಕೆಂದು ಕೌರವ ನಿರ್ಧರಿಸಿದಾಗ ಕರ್ಣ ಹೇಳುವ ಈ ಮಾತಿನಲ್ಲಿ ವ್ಯಂಗ್ಯವಾದ 'ಕಾಕು' ಇದೆ. 'ಎಲೆಮರುಳೆ' ಎಂದು ಕೌರವನನ್ನು ಆತ ಕರೆಯುವಲ್ಲಿರುವ ಮತ್ತು ಹರೆಯ ಕಳೆದ ಈತನಿಗೆ 'ಭಟಮಂಡಲಿಯೊಳಗೆ ಮನ್ನಣೆಯ ಹೇಳ್ವೆ' ಎಂದು ಕೇಳುವಲ್ಲಿರುವ 'ಕಾಕು' ಕರ್ಣನ ಅಭಿಪ್ರಾಯವನ್ನು ಧ್ವನಿಸುತ್ತದೆ. ಆದರೆ, ಆ ಧ್ವನಿಗಿಂತ ವಾಚ್ಯದ ರೀತಿಯ ಚಮತ್ಕಾರವೇ ಎದ್ದು ತೋರುತ್ತದೆ. ಹೀಗೆ ಉಳಿದ ಗುಣೀಭೂತವ್ಯಂಗ್ಯ ಪ್ರಕಾರಗಳನ್ನು ಉದಾಹರಿಸಿ ವಿವರಿಸಲಾಗಿದೆ. ಆನಂದವರ್ಧನನು ಹೇಳಿರುವ ಧ್ವನಿಪ್ರಕಾರಗಳ ಜೊತೆಗೆ ಇನ್ನು ಹಲವು ಪ್ರಕಾರಗಳನ್ನು ವಿಶ್ವನಾಥನು ಸೇರಿಸಿ ವಿವೇಚಿಸಿದ್ದಾನೆ. ಗುಣೀಭೂತವ್ಯಂಗ್ಯದಲ್ಲಿ ವಾಚ್ಯ ಪ್ರಧಾನವಾಗಿದ್ದು ವ್ಯಂಗ್ಯವು ಸ್ವಲ್ಪ ಹಿಂದಕ್ಕೆ ಸರಿದಿರುತ್ತದೆ. ಇದರಿಂದ ಕಾವ್ಯದ ಮನೋಹರಕತೆಗೇನು ಕುಂದು ಬರುವುದಿಲ್ಲ. ಇದು ರಸಾದಿಗಳಲ್ಲೇ ತಾತ್ಪರ್ಯ ವಾಗುವುದರಿಂದ ಇದು ಸಹ ಧ್ವನಿಯೇ ಆಗುತ್ತದೆ. ಅನೇಕ ವೇಳೆ ಅಲಂಕಾರಗಳು ವಾಚ್ಯಾರ್ಥದಲ್ಲೇ ಚಮತ್ಕಾರವನ್ನು ಒಳಗೊಂಡು ಧ್ವನಿ ಎದ್ದು ಕಾಣುವಂತಿರುವುದಿಲ್ಲ ಅಥವಾ ಕವಿಯು ಒಮ್ಮೊಮ್ಮೆ ಧ್ವನಿತವಾಗಿರುವುದನ್ನು ವಾಚ್ಯವಾಗಿ ಹೇಳಿ ಬಿಟ್ಟಿರುತ್ತಾನೆ. ಇದರಿಂದ ಕಾವ್ಯತ್ವದ ಉತ್ತಮಿಕೆಯನ್ನು ನಿರಾಕರಿಸಲಾಗುವುದಿಲ್ಲ. ಅಲ್ಲಿ ಧ್ವನಿಯು ಗೌಣವಾಗಿದ್ದರೂ ಉತ್ತಮಕಾವ್ಯವೆಂದೇ ತಿಳಿಯ ಬೇಕಾಗುತ್ತದೆ. ಇಂತಹ ಸಂದರ್ಭಗಳನ್ನೇ ಗುಣೀಭೂತವ್ಯಂಗ್ಯವೆಂದು ಕರೆದು ಧ್ವನಿಯಂತೆಯೇ ಅದನ್ನು ಸಹ ಒಪ್ಪಬೇಕೆಂಬುದು ಆನಂದವರ್ಧನನ ಆಶಯವಾಗಿದೆ. ಇದರಿಂದ ಧ್ವನಿಯವ್ಯಾಪಕತೆಯು ಇನ್ನೂ ವಿಸ್ತಾರವಾಗುತ್ತದೆ.

ಕೇವಲ ಚಮತ್ಕಾರದಿಂದ ಕೂಡಿದ್ದು ಧ್ವನಿ ಮತ್ತು ಗುಣೀಭೂತವ್ಯಂಗ್ಯವಲ್ಲದ ಕಾವ್ಯವು ಚಿತ್ರಕಾವ್ಯವಾಗಿದೆ. ರಸಭಾವಾದಿ ಪ್ರಾಸ, ಅನುಪ್ರಾಸಾದಿ ಶಬ್ದಾಲಂಕಾರಗಳು ಕೇವಲ ಪಾಂಡಿತ್ಯ ಪ್ರಧಾನವಾದ ಅನುಭವರಹಿತವಾದ ಅಲಂಕಾರಗಳು ಈ ಚಿತ್ರಕಾವ್ಯದಲ್ಲಿರುತ್ತವೆ. ವಿಶ್ವನಾಥನು ಇದನ್ನು ಕಾವ್ಯ ಪ್ರಕಾರವೊಂದನ್ನಾಗಿ ಹೇಳುವ ಅಗತ್ಯವೇ ಇಲ್ಲವೆಂದು ಈ ವಿಚಾರವನ್ನು ಸ್ಥೂಲವಾಗಿ ಹೇಳಿದ್ದಾನೆ. ಧ್ವನಿತತ್ವವನ್ನು ಸಮ್ಮತಿಸಿ ಇಷ್ಟೊಂದು ಆಳವಾದ ಅಧ್ಯಯನವನ್ನು ಕೈಗೊಂಡ ವಿಶ್ವನಾಥನು ಆನಂದವರ್ಧನನ 'ಧ್ವನಿಯೇ ಕಾವ್ಯದ ಆತ್ಮ' ಎಂಬ ಕಾವ್ಯಲಕ್ಷಣವನ್ನು ಒಪ್ಪಿ ಧ್ವನಿತತ್ವವನ್ನು ಎತ್ತಿ ಹಿಡಿದಿರುವುದನ್ನ ಪರಾಮರ್ಶಿಸಲಾಗಿದೆ. ಇನ್ನು ವ್ಯಂಜಾವೃತ್ತಿಯನ್ನು

**ವೃತ್ತೀನಾಂ ವಿಶ್ರಾಂತೇರಭಿಧಾತಾ ತ್ಪರ್ಯಲಕ್ಷ ಣಾಖ್ಯಾನಾಮ್ ।**
**ಅಂಗೀಕಾರ್ಯಾತುರ್ಯೋವೃತ್ತಿ ರ್ಬೋದೇ ರಸಾದೀನಾಮ್॥**

[ಸಾಹಿತ್ಯದರ್ಪಣ, ೪.೧]

ಅಭಿಧೇ, ತಾತ್ಪರ್ಯ, ಲಕ್ಷಣಾವೃತ್ತಿಗಳು ತಮ್ಮ ಕೆಲಸವನ್ನು ಮಾಡಿ ಮುಗಿಸಿದ ಮೇಲೆ ರಸ, ಭಾವ, ರಸಾಭಾಸ, ಭಾವಾಭಾಸ, ಭಾವಸಂಧಿ, ಭಾವಪ್ರಶಮ, ಭಾವಶ ಬಲತೆಗಳನ್ನು ವಸ್ತು ಅಲಂಕಾರವನ್ನು ಭೋಧಿಸಲು ಕಾವ್ಯದಲ್ಲಿ ನಾಲ್ಕನೆಯವೃತ್ತಿಯನ್ನು ಹೇಳಲಾಗಿದೆ ಇದೇ ವ್ಯಂಜನಾವೃತ್ತಿಆಗಿದೆ. ಅಭಿಧಾವೃತ್ತಿಯು ಒಂದು ಶಬ್ದಕ್ಕೆ ಯಾವ ಅರ್ಥದಲ್ಲಿ ಸಂಕೇತವಿದೆಯೋ ಅಷ್ಟನ್ನೂ ಮಾತ್ರ ತಿಳಿಸುತ್ತದೆ. ಆದರೆ ವಸ್ತು, ಅಲಂಕಾರ, ರಸ, ಮೊದಲಾದ ವ್ಯಂಗ್ಯಾರ್ಥಗಳನ್ನು ತಿಳಿಸಲು ಅಭಿಧೆಗೆ ಶಕ್ತಿಯಿಲ್ಲ. ಆದರಿಂದ ಈ ಎಲ್ಲಾ ವಿಷಯಗಳನ್ನು ತಿಳಿಸಲು ನವೀನ ಅಲಂಕಾರಿಕರು ವ್ಯಂಜನಾವೃತ್ತಿಯನ್ನು ಆಶ್ರಯಿಸಿದ್ದಾರೆ. ಆದರೆ ನೈಯಾಯಿಕರು ವೈಯಾಕರಣರು. ವ್ಯಂಜನಾವೃತ್ತಿಯನ್ನು ನಿರಾಕರಿಸಿದ್ದಾರೆ. ಈ ವೃತ್ತಿಯ ಬಗ್ಗೆ, ಅಭಿಹಿತಾನ್ವಯವಾದಿಗಳು ವ್ಯಕ್ತಿವಿವೇಕಾರನಾದ ಮಹಿಮಭಟ್ಟನು ಈ ವಿಚಾರದಲ್ಲಿ ಅನೇಕ ವಾದಗಳನ್ನು ಮಂಡಿಸಿದ್ದಾರೆ. ವಿಶ್ವನಾಥನು ಈ ವ್ಯಂಜನಾವೃತ್ತಿಯ ಬಗ್ಗೆ ತನ್ನದೇ ಆದ ವಾದವನ್ನು ವಿಮರ್ಶಿಸಿ ಮಂಡಿಸಿದ್ದಾನೆ. ಈ ವಿಸ್ತಾರವಾದ ಚರ್ಚೆಯನ್ನು ದಾರ್ಶನಿಕರ ಹಿನ್ನೆಲೆಯೊಂದಿಗೆ ಮೂರನೆಯ ಆಧ್ಯಾಯದಲ್ಲಿ ಚರ್ಚಿಸಿ ವಿಮರ್ಶಿಸಲಾಗಿದೆ.

ದೃಶ್ಯಶ್ರವ್ಯ ಕಾವ್ಯದ ವಿಚಾರಕ್ಕೆ ಸಂಬಂಧಿಸಿದಂತೆ ನಾಲ್ಕನೆಪರಿಚ್ಛೇದದಲ್ಲಿ ಮೊದಲು ದೃಶ್ಯಕಾವ್ಯದ ಹಿನ್ನೆಲೆಯೊಂದಿಗೆ ವಿಶ್ವನಾಥನು ನಿರೂಪಿಸಿರುವ ದೃಶ್ಯಕಾವ್ಯದ ಬಗ್ಗೆ ವಿಮರ್ಶಿಸಲಾಗಿದೆ. ನಾಟಕ ಲಕ್ಷಣವನ್ನು ಪ್ರತಿಪಾದಿಸುವ ಉಪಲಬ್ದಗ್ರಂಥಗಳಲ್ಲಿ 'ನಾಟ್ಯಶಾಸ್ತ್ರ'ವೇ ಮೊದಲನೆಯದಾಗಿದೆ. ಹೀಗಿದ್ದರೂ ನಾಟ್ಯಲಕ್ಷಣವು ಕ್ರಮವಾಗಿಯೂ ಸಂಕ್ಷೇಪವಾಗಿಯೂ ತನ್ನಿಂದ ಪ್ರತಿಪಾದಿತವಾಗಿದೆಯೆಂಬ ವಿಚಾರವನ್ನು ಧನಂಜಯನು ಅವನ ದಶರೂಪಕದ ಪ್ರಾರಂಭದಲ್ಲಿ ಹೇಳಿದ್ದಾನೆ. ಈ ಗ್ರಂಥವು ಸಂಸ್ಕೃತ ನಾಟಕ ಲಕ್ಷಣವನ್ನು ವಿವರಿಸುವ ಮುಖ್ಯಗ್ರಂಥಗಳಲ್ಲೊಂದಾಗಿದೆ. ಇತಿಹಾಸಾದಿಗಳಿಂದ ಹೇಗೋ ಹಾಗೆಯೇ ಆನಂದನಿಸ್ಯಂದಿಗಳಾದ ನಾಟಕಗಳಿಂದ ಕೇವಲ ವ್ಯುತ್ಪತ್ತಿಯ ನಿರೀಕ್ಷಣೆ ಮಾಡುವವರನ್ನು ಧನಂಜಯ ಸ್ವಾದುಪರಾಙ್ಮುಖರೆಂದು ಹಾಸ್ಯ ಮಾಡುತ್ತಾನೆ. ಒಟ್ಟಿನಲ್ಲಿ ಅವನ ಈ ಕೆಲವು ಮಾತುಗಳಿಂದ ನಾಟಕಕ್ಕಿರುವ ಉಚ್ಚವಾದ ಸ್ಥಾನವೂ, ಅದು ಆಸ್ವಾದಾತ್ಮಕವಾಗಿರುವ ವಿಚಾರವೂ ಸೂಚಿತವಾಗುತ್ತದೆ[೩೯]. ಸಂಸ್ಕೃತಸಾಹಿತ್ಯದಲ್ಲಿ ನಾಟಕವು ಹೇಗೆ ಮತ್ತು ಯಾವಾಗ ಪ್ರಾರಂಭವಾಯಿತೆಂಬ ವಿಚಾರದಲ್ಲಿ ಸಾಕಷ್ಟು ಆಧಾರಗಳಿಲ್ಲದೇ ಊಹಾಪೋಹಾವೇ ಹೆಚ್ಚಾಗಿದೆ. ಭರತನ ನಾಟ್ಯಶಾಸ್ತ್ರದಲ್ಲಿ ಕಂಡು ಬರುವ ಒಂದು ಕಥೆಯ ಪ್ರಕಾರ ನಾಟ್ಯವು ಚತುರ್ವೇದಗಳ ಮೂಲಕ ರಚಿತವಾದ ಐದನೆಯವೇದನಿಸಿ ಕೊಂಡು ನಾನಾಭಾವಗಳನ್ನೂ ಅವಸ್ಥೆಗಳನ್ನೂ ಒಳಗೊಂಡ ಲೋಕವೃತ್ತಾಂತದ ಅನುಕರಣವಾಗಿ, ಸುಖ ವಿನೋಧಗಳನ್ನು ತಂದು ಕೊಡುವ ಒಂದು ಸಾಧನ, ತ್ರೇತಾಯುಗದಲ್ಲಿ ಬ್ರಹ್ಮನು ದೇವತೆಗಳ ಕ್ರೀಡೆಗೋಸ್ಕರ ಋಗ್ವೇದದಿಂದ

'ಪಾಠ್ಯ'ವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಸಮಾವೇದದಿಂದ ಗಾನವನ್ನೂ, ಅಥರ್ವವೇದದಿಂದ ರಸಗಳನ್ನೂ ತೆಗೆದುಕೊಂಡು ಐದನೆಯದಾದ ನಾಟ್ಯವೇದವನ್ನೂ ಭರತಮುನಿಯು ಸೃಷ್ಟಿಸಿದನೆನ್ನಲಾಗಿದೆ. ಋಗ್ವೇದದಲ್ಲಿ ಕಂಡು ಬರುವ ಸಂವಾದರೂಪದ ಕೆಲವು ಸೂಕ್ತಗಳು[೮೦] ನಾಟಕಕ್ಕೆ ಮೂಲಭೂತವಾಗಿದೆಯೆಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ರಾಮಾಯಾಣ, ಮಹಾಭಾರತಗಳಲ್ಲಿ ಅಲ್ಲಲ್ಲಿ ನಟಶಬ್ದದ ಪ್ರಯೋಗವೂ ನಟರ, ನಾಟ್ಯದ ಪ್ರಸ್ತಾಪವೂ ಕಂಡು ಬಂದಿದೆ. ಭರತನಿಗಿಂತ ಹಿಂದಕ್ಕೆ ಶಿಲಾಲಿ ಕೃಶಾಶ್ವ ಎಂಬುವರ ನಟಸೂತ್ರಗಳಿದ್ದವೂ ಇವ್ಯಾವುದಕ್ಕೂ ನಿರ್ದಿಷ್ಟವಾದ ಆಧಾರವಿಲ್ಲವಾದರಿಂದ ನಾಟ್ಯಕ್ಕೆ ಸಂಬಂಧಿಸಿದಂತೆ ಭರತನ ನಾಟ್ಯಶಾಸ್ತ್ರವೇ ನಮ್ಮಗೆ ಉಪಲಬ್ದ ಪ್ರಾಚೀನ ಗ್ರಂಥವಾಗಿದೆ. 'ನಾಟ್ಯ'ವೆಂಬುದು ಅವಸ್ಥೆಯ ಅನುಕರಣ, ಅವಸ್ಥೆಯೆಂದರೆ ವ್ಯಕ್ತಿಯ ಸ್ಥಿತಿಗತಿಗಳು, ನಡೆ ನುಡಿಗಳು, ವೇಷಭೂಷಣಗಳು ಹಾಗೂ ಕೆಲವು ಪ್ರಸಂಗಗಳು, ಇವುಗಳ ಅನುಕರಣದ ದೃಷ್ಟಿಯಿಂದ ನಾಟ್ಯವು ಲೋಕವೃತ್ತದ ಅನುಕರಣವೆನಿಸಿಕೊಂಡಿದೆ. ಅದು ನಾನಾ ಭಾವಗಳಿಂದ ತುಂಬಿ ಅವಸ್ಥಾಂತರಗಳನ್ನೊಳ ಗೊಂಡಿರುವ ವಿಷಯ[೮೨]. ನಾಟ್ಯವು ದೃಶ್ಯಮಾನವಾಗಿ ನಟ ಮುಂತಾದವರಲ್ಲಿ ಆರೋಪಿಸಲ್ಪಟ್ಟು 'ರೂಪಕ'ವೆಂಬ ಹೆಸರನ್ನು ತಾಳಿದೆ.

ದೃಶ್ಯ, ಶ್ರವ್ಯಕಾವ್ಯಗಳಲ್ಲಿ ದೃಶ್ಯಕಾವ್ಯವನ್ನು ಮೊದಲು ವಿಮರ್ಶಿಸಿ ನಂತರ ಶ್ರವ್ಯಕಾವ್ಯದ ಬಗ್ಗೆ ವಿವೇಚಿಸಲಾಗಿದೆ ಅಭಿನಯಕ್ಕೆ ಯೋಗ್ಯವಾಗಿದ್ದು, ಕಣ್ಣಿನಿಂದ ನೋಡುವಂತಹದ್ದು ದೃಶ್ಯಕಾವ್ಯವಾಗಿದೆ. ದೃಶ್ಯಕಾವ್ಯವನ್ನು ಅಭಿನೇಯ ಮತ್ತು ರೂಪಕಗಳೆಂದು ಕರೆಯಲಾಗಿದೆ. ಅಭಿನೇಯವೆಂದರೆ ರಾಮ ಮೊದಲಾದ ನಾಯಕರ ಸ್ವರೂಪಗಳನ್ನು ಅನುಕರಣ ಮಾಡುವುದೇ ಅಭಿನೇಯವಾಗಿದೆ.

**ಭವೇದಭಿನವೋಽವಸ್ಥಾನುಕಾರಃ ಸ ಚತುರ್ವಿಧಃ ।**
**ಆಂಗಿಕೋ ವಾಚಿಕಶ್ಚೈ ವಮಾಹಾರ್ಯಃ ಸಾತ್ವಿಕ ಸ್ತಥಾ ॥**

[ಸಾಹಿತ್ಯದರ್ಪಣ, ೬, ೨]

ಅಭಿನಯವು ನಾಲ್ಕು ವಿಧಗಳನ್ನೊಳಗೊಳಗೊಂಡಿದೆ. ಅದು ಸಾತ್ತ್ವಿಕ, ವಾಚಿಕ, ಆಂಗಿಕ, ಆಹಾರ್ಯ, ಸಾತ್ತ್ವಿಕವೆಂದರೆ ಸ್ತಂಭ, ಸ್ವೇದ ರೋಮಾಂಚ ಮುಂತಾದ ಭಾವಗಳ ಪ್ರದರ್ಶನವಾಗಿದೆ. ಆಂಗಿಕವು ನಾಟಕಗಳಲ್ಲಿ ಆಡುವ ಭಾಷೆ, ಅದರ ದಾಟಿ, ಛಂದಸ್ಸು, ಗುಣ, ದೋಷ, ಅಲಂಕಾರ ಮುಂತಾದ ವಿಷಯವನ್ನು ಒಳಗೊಂಡಿದೆ. ಆಹಾರ್ಯವು ವೇಷಭೂಷಣಗಳಿಂದ ಕೂಡಿದ 'ನೇಪಥ್ಯ'ಕ್ಕೆ ಸಂಬಂಧಪಟ್ಟಿದೆ.

ರೂಪಕವು ನಾಯಕ ನಟರಾದ ರಾಮ, ಯುಧಿಷ್ಠಿರ ಮೊದಲಾದವರ ಸ್ವರೂಪವನ್ನು ಆರೋಪಿಸುವುದೇ ರೂಪಕವಾಗಿದೆ.

**ನಾಟಿಕ ಮಥ ಪ್ರಕರಣಂ ಭಾಣವ್ಯಾಯೋಗ ಸಮವಕಾರಡಿಮಾಃ ।**
**ಈಹಾಮೃಗಾಂಕವೀಥ್ಯಃ ಪ್ರಹಸನಮಿತಿ ರೂಪಕಾಣಿ ದಶ ॥**

[ಸಾಹಿತ್ಯದರ್ಪಣ, ೬.೩]

ನಾಟಕ, ಪ್ರಕರಣ, ಭಾಣ, ವ್ಯಾಯೋಗ, ಸಮಕಾರ, ಡಿಮ, ಈಹಾಮೃಗ, ಅಂಕ, ವೀಥಿ, ಪ್ರಹಸನ ಎಂದು ರೂಪಕವು ಹತ್ತು ಬಗೆಯಾಗಿವೆ.

**ನಾಟಕಂ ಖ್ಯಾತವೃತ್ತಂ ಸ್ಯಾತ್ ಪಂಚಸಂಧಿಸಮನ್ವಿತಮ್ ॥**
**ವಿಲಾಸರ್ದ್ಧ್ಯಾ ದಿಗುಣವತ್ ಯುಕ್ತಂ ನನಾವಿಭೂತಿಭಿಃ ॥**
**ಚತ್ವಾರಃ ಪಂಚವಾ ಮುಖ್ಯಾಃ ಕಾರ್ಯಾವ್ಯಾಪೃತಪೂರುಷಾಃ ।**
**ಗೋಪುಚ್ಚ ಸಮಾಗ್ರಂ ತು ಬಂಧನಂ ತಸ್ಯ ಕೀರ್ತೀತಮ್**[೪೪] **॥**

[ಸಾಹಿತ್ಯದರ್ಪಣ ೬. ೫]

ನಾಟಕದಲ್ಲಿ ಲೋಕವಿಖ್ಯಾತವಾದ ವೃತ್ತಾಂತವಿರಬೇಕು. ಕವಿಕಲ್ಪಿತವಾಗಿರಬಾರದು. ಇಂತಹ ವೃತ್ತಾಂತನ್ನೊಳಗೊಂಡ ದೃಶ್ಯಕಾವ್ಯವೇ ನಾಟಕವಾಗಿದೆ. ಇದರಲ್ಲಿ ನಾಯಕನು ಧೀರೊ ದಾತ್ತನಾಗಿರುತ್ತಾನೆ. ಪ್ರತಾಪಶಾಲಿಯೂ, ಗುಣವಂತನೂ, ಪ್ರಖ್ಯಾತವಂಶನೂ ಆಗಿರುತ್ತಾನೆ. ಇದರಲ್ಲಿ ಶೃಂಗಾರ, ವೀರ ರಸಗಳು ಪ್ರಧಾನವಾಗಿದ್ದು ಉಳಿದ ರಸಗಳು ಪೋಷಕವಾಗಿರುತ್ತವೆ. ಇದರಲ್ಲಿ ಐದರಿಂದ ಹತ್ತು ಅಂಕಗಳಿರುತ್ತವೆ. ಗೋವಿನ ಬಾಲಗಳಲ್ಲಿ ಕೆಲವು ಚಿಕ್ಕದ್ದಾಗಿಯೂ ಕೆಲವು ದೊಡ್ಡದಾಗಿಯೂ ಇರುವಂತೆ ಕೆಲವು ಕಾರ್ಯಗಳನ್ನು ಮುಖಸಂಧಿಯಲ್ಲಿ ಕೆಲವು ಪ್ರಮುಖಸಂಧಿಯಲ್ಲಿ ಉಳಿದವನ್ನು ಇತರ ಸಂಧಿಗಳಲ್ಲಿ ಏರ್ಪಡಿಸಬೇಕು ಇವೆಲ್ಲಾ ನಾಟಕದ ಲಕ್ಷಣವಾಗಿದೆ.

ನಾಟಕದಲ್ಲಿ ಬರುವ ಅಂಕ – ಇದರಲ್ಲಿ ನಾಯಕನ ಚರಿತ್ರೆಯನ್ನು ಪ್ರತ್ಯಕ್ಷವಾಗಿ ತಿಳಿಸುವಂತಿದ್ದು ಅಂಕವು ಚಿಕ್ಕ ಸಮಾಸಗಳಿಂದ ಕೂಡಿದ ಸಣ್ಣ ಸಣ್ಣ ವಾಕ್ಯದಿಂದ ಕೂಡಿರುತ್ತದೆ. ಪಾತ್ರಗಳಿಗೆ ಪರಸ್ಪರವಾಗಿ ಹೊಂದುವಂತಹ ಕಥೆಗಳಿರುತ್ತವೆ. ಸಮಾಚಾರಗಳೆಲ್ಲವೂ ಭಾವ, ರಸವನ್ನೂ ಪ್ರಕಾಶಿಸುವಂತಿರಬೇಕು. ಅಂಕದೊಳಗೆ ಪ್ರವೇಶಿಸುವ ಚಿಕ್ಕದೊಂದು ಅಂಕವನ್ನು ಗರ್ಭಾಂಕವೆಂದು ಕರೆಯಲಾಗಿದೆ. ಈ ಗರ್ಭಾಂಕವು ಮೊದಲು ಬರುವ ಮಂಗಳಾಚರಣಾ, ಪ್ರಸ್ತಾವನೆ, ಸಭಾಪೂಜೆ, ಕಥೆಯ ಮೂಲವೆನಿಸಿದ ಬೀಜ ಇವಿಷ್ಟನ್ನು ತಿಳಿಸುತ್ತದೆ. ಉದಾಹರಣೆಗೆ ಬಾಲರಾಮಯಣದಲ್ಲಿ ಬರುವ ಸೀತಸ್ವಯವರ.

ಪೂರ್ವರಂಗದಲ್ಲಿ ನಟರು ಅಭಿನಯುವನ್ನು ಆರಂಭಿಸಲು ಮೊದಲು ರಂಗಸ್ಥಳದಲ್ಲಿ ಸಂಭವಿಸಬಹುದಾದ ವಿಘ್ನವನ್ನು ತಡೆಯುದಕ್ಕಾಗಿ ಮಾಡಬೇಕಾದ್ದನ್ನ ಪೂರ್ವರಂಗವೆನ್ನಿಸಿದೆ. ಇದಕ್ಕೆ ಇಪ್ಪತ್ತೆರಡು ಅಂಗಗಳಿವೆ ರಂಗಸ್ಥಳಕ್ಕೆ ಬಂದು ನಾಟಕದ

ಕಥಾವಸ್ತುವನ್ನು ಸೂಚಿಸುವನು ಸೂತ್ರಧಾರನಾಗಿದ್ದಾನೆ ಅವನಂತೆ ನಟನು ಅಲ್ಲಿಗೆ ಬಂದು ಕಥೆಯ ವಿಷಯವನ್ನು ಸೂಚಿಸುವನು ಸ್ಥಾಪಕನೆನಿಸಿದ್ದಾನೆ. "ನಟಿಯಾಗಲೀ ವಿದೂಷಕನಾಗಲೀ ಪಾರಿಪಾರ್ಶ್ವಿಕನಾಗಲೀ ಸೂತ್ರದಾರನೊಡನೆ ಸಂಲಾಪವನ್ನು ನಡೆಸುತ್ತಾ ತಮ್ಮ ಕಾರ್ಯಕ್ಕೆ ಸಂಬಂಧಿಸಿದಂತೆಯೂ ಪ್ರಕೃತ ವಸ್ತುವನ್ನು ತಿಳಿಸುವಂತಹ ಚಮತ್ಕಾರ ಹುಟ್ಟಿಸುವ ಮಾತುಗಳನ್ನು ಪ್ರಯೋಗಿಸುವುದೇ ಪ್ರಸ್ತಾವನೆ ಎನ್ನಲಾಗಿದೆ. ಉದ್ಧಾತ್ಯಕ, ಕಥೋದ್ಧಾತ, ಪ್ರಯೋಗತಿಶಯ, ಪ್ರರ್ವತಕ, ಅವಲಗಿತ ಎಂದು ಐದು ವಿಧಗಳಿವೆ[೪೫]".

ವಿಷಯವನ್ನು ಪ್ರಕೃತವೆಂದು ತಿಳಿದಾಗ ಬೇರೊಂದು ಅನಿರೀಕ್ಷಿತ ರೀತಿಯಲ್ಲಿ ತಿಳಿಸುವ ಮತ್ತೊಂದು ವಿಷಯವನ್ನು ಪ್ರಯೋಗಿಸುವುದೇ 'ಪತಾಕಸ್ಥಾನ'ವಾಗಿದೆ. ಇದು ಧ್ವಜದಂತೆ ನಾಟ್ಯದ ಪ್ರಸಿದ್ಧಿಯನ್ನು ಪಡೆಯುವುದರಿಂದ 'ಪತಾಕೆ' ಎಂದು ಕರೆಯಲಾಗಿದೆ. ಇವು ನಾಲ್ಕು ಬಗೆಯಾಗಿವೆ. ಸರಸವಾದ ವೃತ್ತಾಂತಗಳನ್ನು ಸಭ್ಯರಿಗೆ ತಿಳಿಯಪಡಿಸುವಂತಹ ಸಂದರ್ಭಗಳನ್ನು 'ಅರ್ಥೋಪಕ್ಷೇಪ'ವಾಗಿದೆ. ಇವು ವಿಷ್ಕಂಭಕ, ಪ್ರವೇಶಕ, ಚೋಲಿಕೆ, ಅಂಕಾವತಾರ, ಅಂಕಮುಖ ಎಂದು ಐದು ಬಗೆಗಳಿವೆ.

**ನ ಚಾತಿ ರಸತೋ ವಸ್ತು ದೂರಂ ವಿಚ್ಛಿನ್ನಾತಾಂ ನಯೇತ್ ।**
**ರಸಂ ವಾ ನ ತಿರೋದಧ್ಯಾತ್ ವಸ್ತ್ವಲಂಕಾರ ಲಕ್ಷಣೈಃ ॥**
**ಬೀಜಂ ಬಿಂದುಃ ಪತಾಕಾ ಚ ಪ್ರಕರೀ ಕಾರ್ಯಮೇವ ಚ ।**
**ಅರ್ಥಪ್ರಕೃತಯಃ ಪಂಚ ಜ್ಞಾತ್ವಾ ಯೋಜ್ಯಾ ಯಥಾವಿದಿ ॥**
**[ಸಾಹಿತ್ಯದರ್ಪಣ, ೬, ೫೬]**

ಮೂಲ ಪ್ರಯೋಜನವು ಸಿದ್ಧಿಸುವುದಕ್ಕೆ ಕಾರಣವೆನಿಸಿದ ಅಂಶಗಳನ್ನು ಅರ್ಥಪ್ರಕೃತಿಗಳೆಂದು ಕರೆಯಲಾಗಿದೆ. ಬೀಜ, ಬಿಂದು, ಪತಾಕೆ, ಪ್ರಕರೀ, ಕಾರ್ಯ ಎಂದು ಐದು ಅರ್ಥಪ್ರಕೃತಿಗಳಿವೆ.

**ಅವಸ್ಥಾಃ ಪಂಚ ಕಾರ್ಯಸ್ಯ ಪ್ರಾರಬ್ಧ ಸ್ಯ ಫಲಾರ್ಥಿಭಿಃ**
**ಆರಂಭಯತ್ನ ಪ್ರಾಪ್ತ್ಯಾಶಾನಿಯತಾಪ್ತಿ ಫಲಾಗಮಾಃ**
**[ಸಾಹಿತ್ಯದರ್ಪಣ, ೬, ೬೩]**

ಫಲವನ್ನು ಇಚ್ಛಿಸುವರು ಪ್ರಾರಂಭಿಸುವ ಕಾರ್ಯಕ್ಕೆ 'ಅವಸ್ಥೆ' ಎನ್ನಲಾಗಿದೆ. ಆರಂಭ, ಪ್ರಯತ್ನ, ಪ್ರಾಪ್ತ್ಯಾಶೆ, ನಿಯತಾಪ್ತಿ ಎಂದು ಐದು ಬಗೆಗಳಿವೆ. ಮತ್ತು ಐದು ಸಂಧಿಗಳು ಮುಖ, ಪ್ರತಿಮುಖ, ಗರ್ಭ ವಿಮರ್ಷ, ಉಪಸಂಹೃತಿಗಳಾಗಿವೆ[೪೬].

ವೃತ್ತಿಯು ನಾಟಕದಲ್ಲಿ ಅಭಿನಯಿಸಲ್ಪಡುವ ವಿಷಯಗಳಿಗೆ ಪ್ರೇರಕವಾದ ಒಂದು ಚಿತ್ತವೃತ್ತಿ ಇದನ್ನುಸರಿಸುವ ಅಭಿನಯದ ವಿಷಯಗಳ ದೃಷ್ಟಿಯಿಂದ ಕೈಶಿಕೀ,

ಸ್ವಾತ್ತ್ವತೀ, ಆರಭಟೀ, ಭಾರತೀ, ಎಂದು ವೃತ್ತಿಯ ನಾಲ್ಕು ವಿಧಗಳನ್ನು ಹೇಳಲಾಗಿದೆ. ಈ ವೃತ್ತಿಗಳು ಕಾವ್ಯದ ಮಾತೃಕೆಗಳೆಂದು ಪ್ರಸಿದ್ಧವಾಗಿವೆ[೪೭]. ಕೈಶಿಕಿಯು ನೃತ್ಯಗೀತೆ ಮುಂತಾದವುಗಳುಳ್ಳದ್ದಾಗಿ ಮೃದುವಾಗಿರುವಂತಹುದು. ಸಾತ್ತ್ವತಿಯು ತ್ಯಾಗ, ಶೌರ್ಯ, ದಯೆ ಇವುಗಳಿಂದ ಕೂಡಿರುವ ವೃತ್ತಿ. ಆರಭಟಿಯಲ್ಲಿ ಕೋಪ, ಕುತೂಹಲ, ಜಗಳ ಇವು ಮುಖ್ಯವಾಗಿರುತ್ತವೆ. ಮಾತಿನ ಒಂದು ವೈಖರಿಯೇ ಭಾರತೀ ಎಂಬ ನಾಲ್ಕನೆಯ ವೃತ್ತಿಯಾಗಿದೆ.

ನಾಟಕದ ಸ್ವರೂಪವನ್ನು ತಿಳಿಯಲು ಅನುಕೂಲವಾಗುವ ಲಕ್ಷಣಗಳನ್ನು ವಿಶ್ವನಾಥನು ಮೂವತ್ತಾರು[೪೮] ಎಂದು ಹೇಳಿದ್ದಾನೆ. ಅವು ಭೂಷಣ, ಅಕ್ಷರ ಸಮೂಹ, ಶೋಭೆ, ಉದಾಹರಣ, ಹೇತು, ಸಂಶಯ, ದೃಷ್ಟಾಂತ, ಅನುಕೂಲ ತರ್ಕ, ಪದಸಮೂಹ, ನಿದರ್ಶನ, ಅಭಿಪ್ರಾಯ, ಜ್ಞಪ್ತಿ, ವಿಚಾರ, ದಿಷ್ಟ, ಉಪದಿಷ್ಟ, ಗುಣತಿಪಾತ, ಗುಣಾತಿಶಯ, ವಿಶೇಷಣ, ನಿರುಕ್ತಿ, ಸಿದ್ಧಿ ಇತ್ಯಾದಿ ಲಕ್ಷಣಗಳು. ಹಾಗೆಯೇ ನಾಟ್ಯದಲ್ಲಿ ಬರುವ ಮೂವತ್ತಮೂರು ನಾಟ್ಯಲಂಕಾರಗಳನ್ನು ತಿಳಿಸಲಾಗಿದೆ. ಅವು ಆಶೀರ್ವಾದ, ಆಕ್ರಂದ, ಕಪಟ, ಅಕ್ಷಮೆ, ಗರ್ವ, ಉದ್ಯಮ, ಆಶ್ರಯ, ಉತ್ಪ್ರಾಸನ, ಸ್ಪೃಹೆ, ಕ್ಷೋಭ, ಪಶ್ಚಾತ್ತಾಪ, ಉಪಪತ್ತಿ, ಅಶಂಸೆ, ಅಧ್ಯವಸಾಯ, ವಿಸರ್ಪ, ಇತ್ಯಾದಿ ಅಲಂಕಾರಗಳನ್ನು ಉದಾಹರಣೆಯೊಂದಿಗೆ ವಿವರಿಸಲಾಗಿದೆ[೪೯]. ನಂತರ ನಾಟಕದಲ್ಲಿ ಬರುವ ಪಾತ್ರಗಳು ಆಡಬೇಕಾದ ಭಾಷೆಗಳ ವಿಚಾರದಲ್ಲಿ ಸಾಹಿತ್ಯದರ್ಪಣದಲ್ಲಿ ಕೆಲವು ನಿಯಮಗಳು ಪ್ರತಿಪಾದಿತವಾಗಿವೆ. ರಾಜರು, ಅಮತ್ಯರು, ವಿಪ್ರರು, ವಿದ್ವಾಂಸರು, ಇವರಾಡುವ ಭಾಷೆ ಸಂಸ್ಕೃತ, ಸ್ತ್ರೀಯರ ಮತ್ತು ನೀಚ ಪಾತ್ರಗಳ ಭಾಷೆ ಪ್ರಾಕೃತ ಶೌರಸೇನಿ ಅವಂತಿಯು ದೂರ್ತರ ಮತ್ತು ದೂರ್ತ್ಯಕಾರರ ಭಾಷೆ, ವಿದೂಷಕ ಮುಂತಾದವರು ಪ್ರಾಚ್ಯಾ, ಚೇಟರೂ, ಶ್ರೇಷ್ಠಿಗಳು, ಅರ್ಧಮಾಗದೀ, ಅಂತಪುರನಿವಾಸಿಗಳು ಮಾಗದಿ, ಅಲ್ಲದೇ ಶಬರ, ಅಭೀರ ಮೊದಲಾದ ಭಾಷೆಗಳನ್ನ ನಾಟಕದಲ್ಲಿ ಬಳಸುತ್ತಾರೆ. ಇನ್ನು ಹತ್ತು ಬಗೆಯ ಲಾಸ್ಯವನ್ನು ತಿಳಿಸಲಾಗಿದೆ. ಅವು ಗೇಯಪದ, ಸ್ಥಿತಪಾಠ್ಯ, ಆಸೀನ, ಪುಷ್ಪಗಂಡಿಕಾ, ಪ್ರಚ್ಛೇದಕ, ತ್ರಿಗೂಢ, ಸೈಂದವ, ದ್ವಿಗೂಡಕ, ಉತ್ತಮೊತ್ತಮಕ, ಉತ್ತಪ್ರತ್ಯುಕ್ತವಾಗಿದೆ.

ರೂಪಕದಲ್ಲಿ ಬರುವ ಹತ್ತು ವಿಧಗಳಲ್ಲಿ ನಾಟಕದಲ್ಲಿ ಬರುವ ಪ್ರಸ್ಥಾವನೆ, ಸೂತ್ರದಾರ, ಮೂವತ್ತಮೂರು ನಾಟ್ಯಲಂಕಾರಗಳು, ಮೂವತ್ತಾರು ಲಕ್ಷಣ ಪಂಚ ಸಂಧಿ, ಅವಸ್ಥೆಗಳು ಐದು, ಅರವತ್ತನಾಲ್ಕು ಅಂಗಗಳು, ಲಾಸ್ಯ ಭಾಷೆ ಇವೆಲ್ಲವುಗಳ ಮುಖ್ಯ ಲಕ್ಷಣಗಳನ್ನ ವಿವರಿಸಿ. ಉಳಿದ ಒಂಬತ್ತು ರೂಪಕಗಳಾದ ಪ್ರಕರಣ ಇದರ ವಸ್ತು ಲೌಕಿಕವೂ ಕವಿಕಲ್ಪಿತವು ಆಗಿದ್ದು, ಮಂತ್ರಿ, ವಿಪ್ರ, ವರ್ತಕನೋ ನಾಯಕ ದೀರಪ್ರಶಾಂತನಾಗಿ, ಧರ್ಮಾದಿ ಪುರುಷಾರ್ಥಗಳಲ್ಲಿ ಆಸಕ್ತಿವುಳ್ಳವನು. ನಾಯಿಕೆಯು ಕುಲಸ್ತ್ರೀ, ಅಥವಾ ವೇಶ್ಯೆ ಶೃಂಗಾರವು ಪ್ರಧಾನರಸವಾಗಿರುತ್ತದೆ. ಉದಾಹರಣೆಗೆ

'ಮೃಚ್ಛಕಟಿಕ' ಇವಿಷ್ಟು ಪಕ್ರರಣದ ಲಕ್ಷಣವಾಗಿದೆ. ಬಾಣ ಒಂದೇ ಅಂಕವಿದ್ದು, ಚೋರ, ದ್ಯೂತಕಾರಾದಿ ದೂರ್ತರಿಗೆ ಸಂಬಂಧಪಟ್ಟ ವಸ್ತು, ಒಬ್ಬ ವಿಟ ಆಕಾಶ ಭಾಷಿತಗಳ ಮೂಲಕ ಸ್ವೀಕೃತ ಪರಕೃತಗಳನ್ನು ವರ್ಣಿಸುತ್ತಾನೆ. ಶೃಂಗಾರ, ವೀರರಸ ಪ್ರಧಾನವಾಗಿರುತ್ತದೆ. ಉದಾಹರಣೆಗೆ 'ಲೀಲಾಮಧುಕ' ಇನ್ನು 'ಪ್ರಹಸನ' ಕಲ್ಪಿತವಸ್ತು, ಅಧಮ ಪ್ರಕೃತಿಯ ಜನರಿಗೆ ಸಂಬಂಧಪಟ್ಟಿದ್ದು ಹಾಸ್ಯ ಪ್ರಧಾನರಸವಾಗಿರುತ್ತದೆ. ಅಂಕ ಬಾಣದಂತೆ ಶುದ್ಧ, ಸಂಕೀರ್ಣ, ವಿಕೃತ ಎಂದು ಮೂರು ವಿಧವಾಗಿದೆ ಉದಾಹರಣೆಗೆ – 'ಕಂದರ್ಪಕೇಳಿ' 'ಡಿಮ' ಪ್ರಸಿದ್ಧವಾದ ವಸ್ತು, ಮಾಯೆ, ಇಂದ್ರಜಾಲ, ಯುದ್ಧ, ಗ್ರಹಣ ಇತ್ಯಾದಿಗಳಿರುತ್ತದೆ. ರೌದ್ರರಸಪ್ರಧಾನವಾಗಿದ್ದು, ನಾಲ್ಕು ಅಂಕಗಳಿಂದ ಕೂಡಿರುತ್ತದೆ. ಉದಾಹರಣೆಗೆ – 'ತ್ರಿಪುರದಾಹ', 'ವ್ಯಾಯೋಗ' – ಇತಿವೃತ್ತ ಪ್ರಸಿದ್ಧವಾಗಿದ್ದು ಸ್ತ್ರೀ ಜನರು ಕಡಿಮೆ, ಒಂದೇ ಅಂಕ ಧೀರೋದ್ದತ ನಾಯಕ ಇದರಲ್ಲಿ ಹಾಸ್ಯ, ಶೃಂಗಾರ, ಶಾಂತರಸ ಒಟ್ಟು ಉಳಿದವು ಪ್ರಧಾನ ರಸವಾಗಿರುತ್ತವೆ. ಉದಾಹರಣೆಗೆ – 'ಸೌಗಂಧಿಕಾಹರಣ' 'ಸಮವಕಾರ' ದೇವಾಸುರರಿಗೆ ಸಂಬಂಧಪಟ್ಟ ವಸ್ತು, ವೀರರಸಪ್ರಧಾನ ಮೂರುಅಂಕಗಳು, ಛಂದಸ್ಸಿನ ವೈವಿಧ್ಯದಿಂದ ಕೂಡಿರುತ್ತದೆ. ಅನೇಕ ವಿಚಾರಗಳಿರುವುದರಿಂದ 'ಸಮವಕಾರ' ಎನ್ನಲಾಗಿದೆ. ಉದಾಹರಣೆಗೆ – 'ಸಮುದ್ರಮಥನ' 'ವಿಥೀ' – ಕಲ್ಪಿತ ವಸ್ತು, ಒಂದೇ ಅಂಕ, ಒಬ್ಬ ನಾಯಕ, ಅವನು ಆಕಾಶ ಭಾಷಿತಗಳ ಮೂಲಕ ಉಕ್ತಿಪ್ರತ್ಯಕ್ತಿಗಳನ್ನು ವಿಶೇಷವಾಗಿ ಶೃಂಗಾರ ರಸಸೂಚಕವಾಗಿರುವಂತೆ ಹೇಳುತ್ತಾನೆ. ಉದಾಹರಣೆಗೆ 'ಮಾಲವಿಕಾ' 'ಅಂಕ' ಸಾಮಾನ್ಯ ಮನುಷ್ಯರು ನಾಯಕರು, ಒಂದೇ ಅಂಕ ಕರುಣ ಪ್ರಧಾನ ರಸ ಕವಿಯಿಂದ ವಿಸ್ತರಿಸಲ್ಪಟ್ಟ ಪ್ರಸಿದ್ಧವಾದ ಕಥೆ ಇಲ್ಲಿ ವಸ್ತು ಯುದ್ಧದ ಮತ್ತು ಸೋಲು, ಗೆಲವುಗಳ ವರ್ಣನೆ ಬರುತ್ತದೆ. ನಾಟಕದ ಇತರ ಭಾಗಗಳಾದ 'ಅಂಕ'ದಿಂದ ಬೇರೆಯೆಂದು ಹೇಳಲು ಇದನ್ನು 'ಉತ್ ಸೃಷ್ಟಿಕಾಂಕ' ಎಂದು ಕರೆಯಲಾಗಿದೆ. ಉದಾ. ಶರ್ಮಿಷ್ಠೆ–ಯಯಾತಿ, 'ಈಹಾಮೃಗಾ' ನರರೂ ದಿವ್ಯರೂ ಆದ ನಾಯಕ ಪ್ರತಿನಾಯಕರಿರುತ್ತಾರೆ, ಪ್ರತಿನಾಯಕನು ಗೂಢವಾಗಿ ಆಯುಕ್ತವನ್ನಾಚರಿಸುತ್ತಾನೆ ಅವನಲ್ಲಿ ಶೃಂಗಾರಭಾಸವಿರುತ್ತದೆ ನಾಲ್ಕು ಅಂಕಗಳುಳ್ಳದ್ದು, ಉದಾಹರಣೆಗೆ – 'ಕುಸುಮಶೇಖರ ವಿಜಯಾ' ಇವಿಷ್ಟು ರೂಪಕದಲ್ಲಿ ಬರುವ ಹತ್ತು ಬಗೆಯ ವಿವಿಧ ರೂಪಕಗಳಾಗಿವೆ[೫೦].

ಮೇಲ್ಕಂಡ ಹತ್ತು ರೂಪಕಗಳಲ್ಲದೇ ವಿಶ್ವನಾಥನ ಹದಿನೆಂಟು ಉಪರೂಪಕಗಳನ್ನು ಕೂಲಂಕುಶವಾಗಿ ಪರಾಮರ್ಶಿಸಲಾಗಿದೆ.

**ನಾಟಿಕ ತ್ರೋಟಕಂ ಗೋಷ್ಠೀ ಸಟ್ಟಕಂ ನಾಟ್ಯರಾಸಕಮ್ ।**
**ಪ್ರಸ್ಥಾನೋಲ್ಲಾಪ್ಯಕಾವ್ಯಾನಿ ಪ್ರೇಂಖಣಂ ರಾಸಕಂ, ತಥಾ ॥**

**ಸಂಲಾಪಕಂ ಶ್ರೀಗದಿತಂ ಶಿಲ್ಪಕಂ ಚ ವಿಲಾಸಿಕಾ ।**
**ದುರ್ಮಲ್ಲಿಕಾ ಪ್ರಕರಣಿ ಹಲ್ಲೀಶೋ ಭಾಣಿಕೇತಿ ಚ ॥**
**ಅಷ್ಟಾದಶ ಪ್ರಾಹುರುಪರೂಪಕಾಣಿ ಮನೀಷಿಣಃ ।**
**ವಿನಾ ವಿಶೇಷಂ ಸರ್ವೇಷಾಂ ಲಕ್ಷ್ಮ ನಾಟಕವನ್ಮತಂ ॥**

[ಸಾಹಿತ್ಯದರ್ಪಣ, ೬, ೪೬]

ನಾಟಿಕ, ತ್ರೋಟಕ, ಗೋಷ್ಠೀ, ಸಟ್ಟಕ, ನಾಟ್ಯರಾಸಕ, ಪ್ರಸ್ಥಾನ, ಉಲ್ಲಾಪ್ಯ, ಕಾವ್ಯ, ಪ್ರೇಂಖಣ, ರಾಸಕ, ಸಂಲಾಪಕ, ಶ್ರೀಗಧಿತ, ಶಿಲ್ಪಕ, ವಿಲಾಸಿಕಾ, ದುರ್ಮಲ್ಲಿಕಾ, ಪ್ರಕರಣೀ, ಹಲ್ಲೀಶಾ, ಭಾಣಿಕಾ ಇವು ಹದಿನೆಂಟು ಉಪರೂಪಕಗಳಾಗಿವೆ. ಈ ರೂಪಕದ ಲಕ್ಷಣಗಳನ್ನು ಕೆಲವು ಗ್ರಂಥಗಳಲ್ಲಿ ಮಾತ್ರ ಪ್ರತಿಪಾದಿತವಾಗಿದೆ. ವಿಶ್ವನಾಥನು ಈ ಉಪರೂಪಕಗಳ ಲಕ್ಷಣಗಳು ಸಾಹಿತ್ಯದರ್ಪಣದಲ್ಲಿ ವಿವೇಚಿಸಿದ್ದಾನೆ. ಇವು ನಾಟಕದ ಸ್ವಭಾವವನ್ನು ಹೊಂದಿದ್ದರೂ ಅವಶ್ಯಕತೆಯಿದ್ದಾಗ ಮಾತ್ರ ಸಂದರ್ಭೋಚಿತವಾಗಿ ಬೇರೆ ಬೇರೆ ಬಗೆಯ ಉಪರೂಪಕಗಳಾಗಿ ಪ್ರಯೋಗಿಸಲಾಗುವುದು.

ಶ್ರವ್ಯ ಕಾವ್ಯವು ಕೇಳುವುದಕ್ಕೆ ಮಾತ್ರ ಯೋಗ್ಯವಾದ ಕಾವ್ಯವಾಗಿದ್ದು, ಇದರಲ್ಲಿ ಪದ್ಯಮಯ ಕಾವ್ಯವು ಗಾಯಿತ್ರಿ ಮೊದಲಾದ ವೃತ್ತಗಳಲ್ಲಿ ನಾಲ್ಕು ಪದಗಳನ್ನು ಜೋಡಿಸಿರುವಂತದಾಗಿರುತ್ತದೆ. ಇಂಥ ಒಂದು ರಚನೆ ಸ್ವತಂತ್ರವಾಗಿರಬಲ್ಲದ್ದಾಗಿದ್ದರೆ ಅದಕ್ಕೆ 'ಮುಕ್ತಕ'ವೆಂದು, ಅಂತವು ಎರಡು ಸಾರಿ 'ಯುಗ್ಮಕ' ವೆನಿಸಿಕೊಳ್ಳುತ್ತದೆ. ಮೂರಾದರೆ 'ಸಾಂದಾನಿಕ' ನಾಲ್ಕು 'ಕಲಾಪಕ', ಐದು 'ಕುಲಕ[೫೧]'ವೆನ್ನಲಾಗಿದೆ. ಮಹಾಕಾವ್ಯದಲ್ಲಿ ರಸವತ್ತಾದ ಪದ್ಯಗಳ ಸಮೂಹವಿದ್ದು ಧೀರೊದಾತ್ತನಾಯಕನಿರುವನು. ಒಂದೇ ವಂಶ, ಅಥವಾ ಕ್ಷತ್ರಿಯಾ ವಂಶದಲ್ಲಿ ಹುಟ್ಟಿದ ನಾಯಕರ ಚರಿತೆಯನ್ನು ತಿಳಿಸುತ್ತದೆ. ವೀರ, ಶಾಂತ, ಶೃಂಗಾರ ರಸಗಳಲ್ಲಿ ಒಂದು ಪ್ರಧಾನ ರಸವಾಗಿರುತ್ತದೆ. ನಾಟಕದಲ್ಲಿರುವ ಸಂಧಿಗಳೆಲ್ಲವೂ 'ಮಹಾಕಾವ್ಯದ' ಲಕ್ಷಣವಾಗಿದೆ[೫೨]. 'ಗದ್ಯ'ದಲ್ಲಿ ಛಂದಸ್ಸಿನ ನಿರ್ಭಂಧವಿರುವುದಿಲ್ಲ ಇದರಲ್ಲಿ ಮುಕ್ತಕ, ವೃತ್ತಗಂಧಿ, ಉತ್ಕಲಿಕಪ್ರಾಯ, ಚೂರ್ಣಕ, ಎಂದು ನಾಲ್ಕು ಬಗೆಯಾಗಿವೆ. ಇನ್ನು ಗದ್ಯಪದ್ಯಮಯವಾದದ್ದು ಚಂಪೂಕಾವ್ಯವೆಂದು ಕರೆಯಲಾಗಿದೆ. ವಿಶ್ವನಾಥನು ತಿಳಿಸಿರುವ ನಾಟಕಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳನ್ನು ಕುರಿತು ಉದಾಹರಣೆ ಯೊಂದಿಗೆ ನಾಲ್ಕನೆಯ ಅಧ್ಯಾಯದಲ್ಲಿ ವಿಮರ್ಶಿಸಿಸಲಾಗಿದೆ.

"ಕಾವ್ಯದಲ್ಲಿ ದೋಷಗಳು ತ್ಯಾಜ್ಯವೆಂದು ಅಲಂಕಾರಿಕರೆಲ್ಲರ ಮತವಾಗಿದೆ. ಸ್ವಲ್ಪ ದೋಷ ಕಂಡು ಬಂದರೂ ಅದನ್ನು ಉಪೇಕ್ಷೆ ಮಾಡಬಾರದೆಂದು ದಂಡಿ ಹೇಳುತ್ತಾನೆ[೫೩]". ಕಾವ್ಯದಲ್ಲಿ ಗುಣವಿರಬೇಕು ದೋಷವಿಲ್ಲದಿರುವುದೂ ಅಷ್ಟೇ ಮುಖ್ಯ. ದೋಷಗಳ ಸ್ವರೂಪ ಸ್ವಭಾವಗಳ ವಿಚಾರವಾಗಿ ಅಲಂಕಾರಿಕರಲ್ಲಿ ಭಿನ್ನಾಭಿಪ್ರಾಯವಿದೆ.

ಕಾವ್ಯತತ್ವ ಜಿಜ್ಞಾಸೆಯಲ್ಲಿ ಹೊಸ ವಿಷಯಗಳು ಮೂಡಿಬಂತೆಲ್ಲಾ ದೋಷಗಳ ಬಗ್ಗೆ ಕಲ್ಪನೆಯ ವ್ಯತ್ಯಾಸಗೊಂಡಿದೆ. ಕೆಲವು ದೋಷಗಳು ಸಂದರ್ಭೋಚಿತವಾಗಿ ಗುಣಗಳೆನಿಸಿಕೊಂಡಿವೆ. ಆದ್ದರಿಂದ ಅಲಂಕಾರಿಕರು ವಿಶೇಷವಾಗಿ 'ಗುಣ'ವನ್ನು ದೃಷ್ಟಿಯಲ್ಲಿಟ್ಟುಕೊಂಡು ದೋಷಗಳ ನಿರೂಪಣೆ ಶಾಸ್ತ್ರೀಯವಾಗಿ ಮಾಡಲು ಯತ್ನಿಸಿದ್ದಾರೆ. ಶಬ್ದಾರ್ಥಗಳಿಗೆ ಮತ್ತು ಕ್ರಮೇಣ ರಸಕ್ಕೆ ಸಂಬಂಧಪಟ್ಟಂತೆ ಅವುಗಳ ವಿವರಣೆಯನ್ನು ಕೊಟ್ಟಿದ್ದಾರೆ. ಭರತನು ನಾಟ್ಯಶಾಸ್ತ್ರದಲ್ಲಿ ಗೂಢಾರ್ಥ, ಅರ್ಥಾಂತರ, ಅರ್ಥಹೀನ, ಭಿನ್ನಾರ್ಥ, ಏಕಾರ್ಥ, ವಿಸಂಧಿ, ಶಬ್ದಚ್ಯುತ, ಎಂಬ ಹತ್ತು ಕಾವ್ಯದೋಷಗಳನ್ನು ಹೇಳಿದ್ದಾನೆ. "ಏತ ಏವ ವಿಪರ್ಯಸ್ತಾಃ ಗುಣಾಃ ಕಾವ್ಯೇಷು ಕೀರ್ತಿತಾಃ[೨೪]" ಎಂದು ಹೇಳಿ, ವಿಪರ್ಯಸ್ತವಾದ ದೋಷಗಳು ಗುಣಗಳೆಂಬ ಅಭಿಪ್ರಾಯವನ್ನು ಈ ಮಾತುಗಳ ಮೂಲಕ ಕೊಡುವುದಲ್ಲದೇ ಅವನು ಶ್ಲೇಷಾದಿ ಹತ್ತುಗುಣಗಳನ್ನು ಪ್ರತಿಪಾದಿಸಿದ್ದಾನೆ. ಇಲ್ಲಿರುವ 'ವಿಪರ್ಯಸ್ತಾಃ' ದೋಷದ ಅಭಾವವೇ ಗುಣವೆಂದು "ಏತ ಏವ ವಿಪರ್ಯಸ್ತಾಃ" ಮುಂತಾದ ಮಾತುಗಳು ಅರ್ಥವಾಗುತ್ತದೆ. ಒಂದೊಂದು ಗುಣವೂ ದೋಷಕ್ಕೆ ಪ್ರತಿಯಾಗಿರುವುದೆಂಬುದಲ್ಲ, ಕೆಲವು ಸಂದರ್ಭಗಳಲ್ಲಿ ಗುಣವೂ ದೋಷಕ್ಕೆ ಪ್ರತಿಯಾಗಿರುವುದೆಂಬ ಸೂಚನೆ ಮಾತ್ರ ಭರತನಲ್ಲಿ ಕಂಡುಬರುತ್ತದೆ.

ವಾಮನನು ಗುಣಗಳನ್ನು ಹೇಳಿ, ಇವುಗಳ ವಿಪರ್ಯಾಸವೇ ದೋಷವೆಂದು ಪ್ರತಿಪಾದಿಸುತ್ತಾನೆ[೨೫]. ದೋಷವಿಚಾರದ ಸೂಚಕವಾಗಿ ವಾಮನನ ಅಭಿಪ್ರಾಯವನ್ನು ಅವನು ಹೇಳಿರುವ ಕೆಲವು ದೋಷಗಳನ್ನು ಸಂಗ್ರಹಿಸಿ ದೃಷ್ಟಾಂತವಾಗಿ ಇಲ್ಲಿ ಪರಿಶೀಲಿಸಲಾಗಿದೆ. ಅವನ ಮತದಲ್ಲಿ "ದೋಷಗಳು ಗುಣಗಳ ವಿಪರೀತ ಸ್ವರೂಪಗಳು[೨೬]". ಹಾಗಾದರೆ 'ಗುಣ'ಗಳನ್ನು ತಿಳಿದರೆ ದೋಷಗಳ ಅರಿವು ತಾನಾಗಿಯೇ ಆಗಬಹುದಲ್ಲವೇ ಎಂಬ ಸಂಶಯವನ್ನೆತ್ತಿ ವಾಮನ, ಸೌಕರ್ಯಕೊಸ್ಕರ ದೋಷಗಳ ಪ್ರತಿಪಾದನೆಯನ್ನೂ ತಾನು ಮಾಡುವುದಾಗಿ ಹೇಳುತ್ತಾನೆ. ಅಲ್ಲದೇ ಪದ, ಪದಾರ್ಥ, ವಾಕ್ಯ, ವಾಕ್ಯಾರ್ಥ, ಇವುಗಳ ದೋಷಗಳನ್ನು ಬೇರೆ ಬೇರೆಯಾಗಿ ಹೇಳಿದ್ದಾನೆ. ಒಟ್ಟಿನಲ್ಲಿ ದೋಷಗಳು ಗುಣಗಳ ಪ್ರತಿ ಸ್ವರೂಪಗಳೆಂದು ವಾಮನನ ಮತ, ಅವು ಗುಣಗಳ ಅಭಾವವಲ್ಲ. ಅವನು ನಿರೂಪಿಸಿರುವ ಕೆಲವು ಪದದೋಷಗಳು, 'ಅಸಾಧು' – 'ಶಬ್ದಸ್ಮೃತಿ ವಿರುದ್ಧ ಸಾಧು' ವ್ಯಾಕರಣ ವಿರುದ್ಧವಾದ ಪ್ರಯೋಗ. 'ಕಷ್ಟ' – 'ಶ್ರುತಿವಿರಸಂ ಕಷ್ಟಂ' ಕಿವಿಗೆ ಕಟುವಾಗಿರುವ ಪದಪ್ರಯೋಗ. 'ಅಪ್ರತೀತ' – 'ಶಾಸ್ತ್ರ ಮಾತ್ರ ಪ್ರಯುಕ್ತ ಮಪ್ರತೀತಂ' ಶಾಸ್ತ್ರದಲ್ಲಿ ಮಾತ್ರ ಉಪಯೋಗದಲ್ಲಿರುವ ಪದವನ್ನು ಕಾವ್ಯದಲ್ಲಿ ಬಳಸುವುದರಿಂದ ಉಂಟಾಗುವ ದೋಷ.

**ರಸಾಪಕರ್ಷಕಾ ದೋಷಾಃ ತೇ ಪುನಃ ಪಂಚಧಾ ಮತಃ ।**
**ಪದೇ ಪದಾಂಶೇ ವಾಕ್ಯೇಽರ್ಥೇ ಸಂಭವಂತಿ ರಸೇಪಿಯತ್॥**

[ಸಾಹಿತ್ಯದರ್ಪಣ, ೭.೧]

ವಿಶ್ವನಾಥನು ಸಾಹಿತ್ಯದರ್ಪಣದಲ್ಲಿ ದೋಷಗಳನ್ನು ಪದ, ಪದಾಂಶ, ವಾಕ್ಯ, ಅರ್ಥ, ರಸ, ಈ ಐದು ವಿಧಗಳಲ್ಲಿ ದೋಷವನ್ನು ಪ್ರತಿಪಾದಿಸಿದ್ದಾನೆ.

**ದುಃಶ್ರವತ್ರಿವಿಧಾಶ್ಲೀಲಾನುಚಿತಾರ್ಥಪ್ರಯುಕ್ತತಾಃ ।**
**ಗ್ರಾಮ್ಯಾಪ್ರತೀತಸಂದಿಗ್ಧನೇಯಾರ್ಥನಿಹತಾರ್ಥತಾಃ ॥**
**ಅವಾಚಕತ್ವಂ ಕ್ಲಿಷ್ಟತ್ವಂ ವಿರುದ್ಧಮತಿಕಾರಿತಾ ।**
**ಅವಿಮೃಷ್ಟ ವಿಧೇಯಾಂಶಭಾವಶ್ಚಪದವಾಕ್ಯಯೋಃ ॥**
**ದೋಷಾಃ ಕೇಚಿದ್ಭವಂತ್ಯೇಷು ಪದಾಂಶೇಽಪಿ ಪದೇಪರೆ ।**
**ನಿರರ್ಥಕಾಸಾಮರ್ಥತ್ವೇ ಚುತ್ಯ ಸಂಸ್ಕಾರತಾ ತಥಾ ॥**

[ಸಾಹಿತ್ಯದರ್ಪಣ, ೭.೨]

ಐದು ಬಗೆಯ ದೋಷಗಳಲ್ಲಿ ದುಃಶ್ರವೃತ್ವ, ಅಶ್ಲೀಲತೆ, ಅನುಚಿತಾರ್ಥತ್ವ, ಅಪ್ರಯುಕ್ತತೆ, ಗ್ರಾಮ್ಯತೆ, ಅಪ್ರತೀತತ್ವ, ಸಂದಿಗ್ಧತೆ, ನೇಯಾರ್ಥತ್ವ, ಅವಾಚಕತ್ವ, ಕ್ಲಿಷ್ಟತ್ವ, ವಿರುದ್ಧಮತಿಕಾರತ್ವ, ಅವಿಮೃಷ್ಟ್ಯ ವಿದೇಯಾಂಶತ್ವ. ಈ ಹದಿಮೂರು ಬಗೆಯ ದೋಷಗಳು ಪದದಲ್ಲೂ, ವಾಕ್ಯದಲ್ಲೂ ಸಂಭವಿಸುತ್ತದೆ.

'ದುಃಶ್ರವತ್ವ' – ಶಬ್ದದಲ್ಲಿ ಕರ್ಕಶವಾದ ಅಕ್ಷರಗಳಿರುವುದರಿಂದ ಕೇಳುವಾಗ ದುಃಖವನ್ನುಂಟು ಮಾಡುವ ದೋಷವು 'ದುಃಶ್ರವತ್ವ'ವಾಗಿದೆ. 'ಅಶ್ಲೀಲ' ಕೇಳುವವರಿಗೆ ರಸಾನುಭವಕ್ಕೆ ಅಡಚಣೆಯುಂಟಾಗುವುದೇ 'ಅಶ್ಲೀಲ', 'ಅನುಚಿತಾರ್ಥತ್ವ' ಪದದಲ್ಲಿ ವೈಮನಸ್ಸು ಹುಟ್ಟುವುದರಿಂದ ರಸಪ್ರಕರ್ಷಕ್ಕೆ ಅಡಚಣೆಯಾಗುವುದೇ ಅನುಚಿತಾರ್ಥತ್ವ, 'ಅಪ್ರಯುಕ್ತಕೆ' ಕೋಶ ಮೊದಲಾದ ಕಡೆಗಳಾಲ್ಲಿ ಒಂದು ಪದವು ಪ್ರಸಿದ್ಧವೆನಿಸಿದ್ದರೂ ಅದನ್ನು ವಾಕ್ಯದಲ್ಲಿ ಉಪಯೋಗಿಸದೇ ಇರುವುದೇ ಅಪ್ರಯುಕ್ತತೆಯಾಗಿದೆ. 'ಗ್ರಾಮ್ಯತ್ವ' – 'ಕಟಿಸ್ತೆ ಹರತೇ ಮನಃ' ಇಲ್ಲಿ 'ಕಟಿ' ಶಬ್ದವು ಗ್ರಾಮ್ಯವೆನಿಸಿದೆ. 'ಅಪ್ರತೀತತ್ವ' – ಎಲ್ಲೋ ಒಂದು ಕಡೆ ಮಾತ್ರ ಪ್ರಸಿದ್ಧವೆನಿಸಿ ಬೇರೆ ಎಲ್ಲೂ ರೂಢಿಯಲಿಲ್ಲದ ಪದವನ್ನು ಪ್ರಯೋಗಿಸುವುದೇ ಅಪ್ರತೀತತ್ವ, ಯಾವ ಅರ್ಥವನ್ನು ಗ್ರಹಿಸಬೇಕೆಂಬ ಸಂದೇಹವಿರುವುದೇ 'ಸಂದಿಗ್ಧತೆ' ರೂಢಿಯಾಗಲಿ ಪ್ರಯೋಜನವಾಗಲೀ, ಇಲ್ಲದಿರುವಾಗ ಒಂದು ಪದದಲ್ಲಿ ಲಕ್ಷ್ಯಾರ್ಥ್ಯವನ್ನು ಗ್ರಹಿಸುವುದೇ 'ನೇಯಾರ್ಥ'ವಾಗಿದೆ. ಎರಡು ಅರ್ಥಗಳನ್ನು ತಿಳಿಸುವ ಪದಕ್ಕೆ ಪ್ರಸಿದ್ಧಾರ್ಥವನ್ನು ಬಿಟ್ಟು ಅಪ್ರಸಿದ್ಧವಾದ ಅರ್ಥದಲ್ಲಿ ಪ್ರಯೋಗಿಸುವುದೇ 'ನಿಹತಾರ್ಥ', 'ಅವಾಚಕತ್ವ', – ಗೀತೇಷು ಕರ್ಣಮಾದತ್ತೇ'

ಇಲ್ಲಿ ಅಜ ಪೂರ್ವಕವಾದ ದಾಧಾತು 'ಅರ್ಪಿಸು' ಎಂಬ ಅರ್ಥವನ್ನು ತಿಳಿಸುತ್ತದೆ. ಇಂತಹ ಪ್ರಯೋಗವು ಅವಾಚವಾಗಿದೆ. ಒಂದು ಪದವನ್ನು ಕೇಳಿದಾಗ ವಿವಕ್ಷಿತವಾದ ಅರ್ಥವು ತಡವಾಗಿ ತೋರಿದರೆ ಅಲ್ಲಿ 'ಕ್ಲಿಷ್ಟ'ವೆಂಬ ದೋಷವುಂಟಾಗುತ್ತದೆ. ಕೇಳುವವರಿಗೆ ವಿರುದ್ಧ ಭಾವನೆಯನ್ನು ಹುಟ್ಟಿಸುವುದೇ 'ವಿರುದ್ಧ ಮತಿಕಾರಿತ್ವ' ದೋಷವು ವಿಧೇಯಾಂಶವನ್ನೂ ಪ್ರಧಾನವಾಗಿ ತಿಳಿಸದೇ ಮತ್ತೊಂದಕ್ಕೆ ವಿಶೇಷಣವಾಗಿ ತಿಳಿಸುವುದೇ ಅವಿಮೃಷ್ಟಾವಿದೇಯಾಂಶತ್ವವಾಗಿದೆ. ಈ ಹದಿಮೂರು ಬಗೆಯ ದೋಷಗಳನ್ನು ಪದ, ಪದಾಂಶ, ವಾಕ್ಯಗಳಲ್ಲಿ ಸಂಭವಿಸುವುದನ್ನು ವಿಮರ್ಶಿಸಲಾಗಿದೆ.

ಅರ್ಥದೋಷಗಳಲ್ಲಿ "ಅಪುಷ್ಟತ, ದುಷ್ಕ್ರಮತ್ವ, ಗ್ರಾಮ್ಯತ್ವ, ವ್ಯಾಹತತ್ವ ಅಶ್ಲೀಲತೆ, ಕಷ್ಟಸ್ಥಿತಿ, ಅನವಿಕೃತತ್ವ, ನಿರ್ಹೇತುತ್ವ, ವಿರೋಧಪ್ರಕಾಶಕತ್ವ, ಸಂಧಿಗ್ಧತೆ, ಪುನರುಕ್ತತೆ, ಖ್ಯಾತಿ ವಿರೋಧ, ವಿದ್ಯಾವಿರೋಧ, ಸಾಕಾಂಕ್ಷತ್ವ, ಸಹಚರ ಭಿನ್ನತೆ, ಆಸ್ಥಾನಯುಕ್ತತೆ, ವಿಶೇಷವಿಲ್ಲದ ಕಡೆ ವಿಶೇಷ ತಿಳಿಸುವುದು, ನಿಯಮವಿಲ್ಲದ ಕಡೆ ನಿಯಮವನ್ನು ತಿಳಿಸುವುದು, ವಿಪರೀತವಾದ್ದನ್ನು ತಿಳಿಸುವುದು, ಅನರ್ಹವಾದ ಕಡೆಗಳಲ್ಲಿ ವಿಧಿಯನ್ನೂ ಅನುವಾದವನ್ನೂ ತಿಳಿಸುವುದು, ನಿರ್ಮುಕ್ತ ಪುನರುಕ್ತತೆ[೫೭]", ಒಟ್ಟು ಇಪ್ಪತ್ತಮೂರು ಅರ್ಥದೋಷಗಳನ್ನ ವಿಶ್ವನಾಥನು ತಿಳಿಸಿರುವುದನ್ನ ವಿಮರ್ಶಿಸಲಾಗಿದೆ. ಅದರಲ್ಲಿ 'ಅಪುಷ್ಟತ್ವ'ವೆಂದರೆ ಮುಖ್ಯಾರ್ಥಕ್ಕೆ ಉಪಯೋಗವಾಗಿರುವುದು. 'ದುಷ್ಕ್ರಮತ್ವ' ಕ್ರಮದಲ್ಲಿ ವೈಪರೀತ್ಯವಿರು ವುದರಿಂದ ಉಂಟಾಗುವ ದೋಷ. ಅಸಂಸ್ಕೃತರಾದ ಜನರು ಆಡುವ ಮಾತು 'ಗ್ರಾಮ್ಯತ್ವ'. ಒಬ್ಬನ ಉತ್ಕರ್ಷವಾಗಲೀ ಆಕರ್ಷವಾಗಲೀ ತಿಳಿಸಿ ನಂತರ ಅದಕ್ಕಿಂತ ಬೇರೆಯಾದ್ದನ್ನು ತಿಳಿಸುವುದನ್ನು 'ವ್ಯಾಹತ್ವ'ವೆಂಬ ಅರ್ಥದೋಷವಾಗಿದೆ.

"ರಸದೋಷಗಳನ್ನು ರಸಶಬ್ದದಿಂದಾಗಲೀ ಶೃಂಗಾರಾದಿ ಶಬ್ದಗಲಿಂದಾಗಲೀ ರಸವನ್ನು ತಿಳಿಸುವುದು. ಸ್ಥಾಯಿಭಾವ ಸಂಚಾರಿಭಾವಗಳನ್ನು ಆಯಾಶಬ್ದಗಳಿಂದ ತಿಳಿಸುವುದು, ವಿರುದ್ಧವಾದ ರಸಕ್ಕೆ ಅಂಗವೆನಿಸಿದ ವಿಭಾವಾದಿಗಳನ್ನು ಶಬ್ದದಿಂದ ತಿಳಿಸುವುದು. ಕಷ್ಟದಿಂದ ಅನುಭಾವ ವಿಭಾವಗಳನ್ನು ಕಲ್ಪಿಸಿಕೊಳ್ಳುವುದು, ಅವಕಾಶವಿಲ್ಲದ ಕಡೆ ರಸವು ವಿಸ್ತಾರಗೊಳ್ಳುವುದು. ಹಾಗೆಯೇ ಅದಕ್ಕೆ ಭಂಗವುಂಟಾಗುವುದು, ಅದನ್ನು ಮತ್ತೆ ಪ್ರಕಾಶಗೋಳಿಸುವುದು, ಪ್ರಧಾನರಸವನ್ನು ಪ್ರಕಾಶಪಡಿಸುವುದು ಮತ್ತು ಅಪ್ರಾಧಾನ ರಸವನ್ನು ವಾತಿನಿಂದ ಸ್ಪಷ್ಟಪಡಿಸುವುದು, ಅಂಗವೆನಿಸಿದ ರಸವನ್ನು ವಿಸ್ತಾರಗೊಳಿಸುವುದು, ನಾಯಕ ಮೊದಲಾದವರನ್ನೂ ಅವರ ಸ್ವಭಾವಗಳನ್ನು ಬೇರೆ ರೀತಿಯಲ್ಲಿ ಬದಲಾಯಿಸು ವುದು, ಅಲ್ಲದೇ ಬೇರೆ ಬಗೆಯ ಅನೌಚಿತ್ಯ[೫೮]" ಇವಿಷ್ಟು ವಿಶ್ವನಾಥನು ತಿಳಿಸಿರುವ ರಸದೋಷಗಳಾಗಿವೆ. ಶೃಂಗಾರ, ವೀರ, ರೌದ್ರರಸಗಳು ಪರಸ್ಪರ ಒಂದೆಡೆ ಹೇಗೆ ಇರಬಹುದೆಂಬುದನ್ನೂ ಸಹ ಪರಿಶೀಲಿಸಲಾಗಿದೆ.

ಅಲಂಕಾರಿಕರೆಲ್ಲರೂ ದೋಷಗಳ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ. ದೋಷವಿಲ್ಲದ ಮಾತ್ರಕ್ಕೆ ಕಾವ್ಯ ಸೌಂದರ್ಯವುಂಟಾಗುವುದೆಂಬುದು ಅವರಿಗೆ ಸಮ್ಮತವಲ್ಲ. ಸಂದರ್ಭಾನುಸಾರ ಆಯಾದೋಷವಿಲ್ಲದೆಹೋದರೆ ಸೌಂದರ್ಯಕ್ಕೆ ಚ್ಯುತಿಬಾರದೆಂಬುದು ಅಲಂಕಾರಿಕರ ಮತ. ಆದ್ದರಿಂದ ದೋಷವನ್ನು ವರ್ಜಿಸಬೇಕೆಂದು ಒತ್ತಿ ಹೇಳಿದ್ದಾರೆ. ಅಲ್ಲದೇ ಮಮ್ಮಟನು ಕಾವ್ಯಲಕ್ಷಣವನ್ನು ತಿಳಿಸುವಾಗ "ಅದೋಷೌ ಶಬ್ದಾರ್ಥೌ" [ಕಾವ್ಯಪ್ರಕಾಶ ೧.೪] ಎಂಬ ಮಾತುಗಳ ಮೂಲಕ ಕಾವ್ಯವು ದೋಷರಹಿತವಾಗಿರಬೇಕೆಂದು ತಿಳಿಸಿದ್ದಾನೆ. ವಾಮನನ ಮತದಲ್ಲಿ ದೋಷಗಳು ಕಾವ್ಯಸೌಂದರ್ಯಕ್ಕೆ ದಕ್ಕೆಯನ್ನುಂಟು ಮಾಡುವುದರಿಂದ ತ್ಯಾಜ್ಯವಾಗಿದೆ[೫೯] ಗುಣಾಲಂಕಾರ ಗಳಿಂದ ಕೂಡಿಯೂ, ನಿರ್ದುಷ್ಟವೂ, ರಸಾನ್ವಿತವೂ ಆಗಿರುವ ಕಾವ್ಯರಚನೆಯಿಂದ ಕವಿಯು ಕೀರ್ತಿ ಪ್ರೀತಿಗಳನ್ನು ಉಂಟು ಮಾಡುತ್ತದೆ ಎಂದು ಭೋಜನು ಹೇಳಿದ್ದಾನೆ[೬೦]. ರಸ ಹಾನಿಕರವಾದ ದೋಷವು ಸರ್ವಥಾ ತ್ಯಾಜ್ಯವೆಂದೂ, ಇತರ ಗುಣಗಳಿರಲಿ, ಇಲ್ಲದಿರಲಿ ನಿರ್ದೋಷತ್ವವೇ ಗುಣವೆಂದೂ 'ಕೇಶಮಿಶ್ರ' ಇವನು ಉದ್ಧರಿಸಿ ಹೇಳುವ ದೋಷಗಳು ಸರ್ವಾತ್ಮನಾ ತ್ಯಾಜ್ಯವೆಂಬ ತಾತ್ಪರ್ಯವುಳ್ಳ ಶ್ಲೋಕವೊಂದನ್ನು[೬೧] ಗಮನಿಸಿದರೆ ಅವು ಕಾವ್ಯತ್ವಕ್ಕೆ ಎಷ್ಟೊಂದು ಹಾನಿಯನ್ನುಂಟುಮಾಡುತ್ತೆಂಬ ವಿಚಾರವು ಸ್ಪಷ್ಟಪಡುತ್ತದೆ. ವಿಶ್ವನಾಥನು ದೋಷಗಳನ್ನು ಯುಕ್ತಿ, ಔಚಿತ್ಯದಿಂದ ನಿರ್ಧರಿಸಬೇಕೆಂದಿದ್ದಾನೆ. ತಾನು ತಿಳಿಸಿರುವ ದೋಷಗಳಲ್ಲಿ ದುಃಶ್ರವತ್ವ ಇತ್ಯಾದಿ ದೋಷಗಳು ಕೆಲವು ಸಲ ಗುಣ ಸಮನ್ವಿತವಾಗಿಯೂ ತೋರಬಹುದೆಂದು ಉದಾಹರಿಸಿ ವಿವರಿಸುವುದನ್ನು ವಿವೇಚಿಸಲಾಗಿದೆ.

ಗುಣಗಳ ಸಂಖ್ಯೆ ಮತ್ತು ಅವುಗಳ ವಿಚಾರದಲ್ಲಿ ಅಲಂಕಾರಿಕರಿಗೆ ಭಿನ್ನಾಭಿಪ್ರಾಯವಿದೆ. ಗುಣದ ಹಿನ್ನೆಲೆಗೆ ಹೋದರೆ ಅಲಂಕಾರಶಾಸ್ತ್ರ ವಿಷಯವನ್ನೊಳಗೊಂಡಿರುವ 'ಅಗ್ನಿಪುರಾಣ'ವೆಂಬ ಗ್ರಂಥದಲ್ಲಿ 'ಗುಣ'ಗಳು ಕಾವ್ಯಕ್ಕೆ ಮನೋಹರತೆಯನ್ನುಂಟು ಮಾಡುತ್ತವೆಯೆಂದು ಹೇಳಲಾಗಿದೆ. ಆದರೆ ಅಲ್ಲಿ 'ಗುಣ' 'ಅಲಂಕಾರ'ಗಳಿಗೆ ವ್ಯತ್ಯಾಸವನ್ನು ಸ್ಪಷ್ಟಪಡಿಸಿಲ್ಲ. ಆರುಶಬ್ದಗುಣಗಳು ಆರುಅರ್ಥಗುಣಗಳು. ಆರುಉಭಯಗುಣಗಳು ಪ್ರತಿಪಾದಿತವಾಗಿಯೇ ಹೊರತು ಅವುಗಳ ಕ್ರಮಬದ್ಧವಾದ ಪರಿಶೀಲನೆ ನಡೆದಿಲ್ಲ. ಆದರೆ ವಾಮನನಿಗಿಂತ ಮುಂಚಿನ ಅಲಂಕಾರಿಕರು 'ಗುಣ'ಗಳಿಗೆ ಕ್ರಮವಾದ ಲಕ್ಷಣವನ್ನು ಹೇಳದೆ ಅವುಗಳ ಬಗೆಗಳನ್ನು ಮಾತ್ರ ತಿಳಿಸಿ ವರ್ಣಿಸಿದ್ದಾರೆ. ಈ ವಿಚಾರದಲ್ಲಿ ಭರತನನ್ನು ದೃಷ್ಟಾಂತವಾಗಿ ತೆಗೆದುಕೊಂಡರೆ ಅವನು ಮೊದಲು ಕಾವ್ಯದೋಷಗಳನ್ನು ಸೂಚಿಸಿ ನಂತರ ಗುಣಗಳ ಬಗೆಯನ್ನು ಪ್ರತಿಪಾದಿಸಿದ್ದಾನೆ. ಅವನ ಪ್ರಕಾರ ಒಂದೊಂದು ದೋಷಕ್ಕೂ ಒಂದೊಂದು ಗುಣ ವಿಪರ್ಯಯವಾಗಿ ತೋರಿದರೂ, ಗುಣದೋಷಗಳು ಸ್ವತಂತ್ರವಾಗಿವೆ ಯೆಂಬ ಅಭಿಪ್ರಾಯಕ್ಕೆ ಅವನ ಗ್ರಂಥದಲ್ಲಿ ಆಧಾರವಿದೆ. ಭರತನು ''ಶ್ಲೇಷ, ಪ್ರಸಾದ, ಸಮತಾ, ಸಮಾಧಿ,

ಮಾಧುರ್ಯ, ಓಜಸ್, ಸೌಕುಮಾರ್ಯ, ಅರ್ಥವ್ಯಕ್ತಿ, ಉದಾರತಾ, ಕಾಂತಿ[೬೨]” ಎಂಬ ಹತ್ತು ಗುಣಗಳನ್ನು ಪ್ರತಿಪಾದಿಸಿದ್ದಾನೆ. ಇಷ್ಟವಾದ ಅರ್ಥಕ್ಕೋಸ್ಕರ ಪದಗಳ ಸಂಯೋಜನೆಯಿದ್ದು, ಇಂಥ ಪದಸಮೂಹವು ಸ್ಪಷ್ಟವಾಗಿ ತೋರಿದರೂ ಅರ್ಥಮಾತ್ರ ಗಹನವಾದ ಪರಿಶೀಲನೆಯಿಂದ ತಿಳಿಯುವಂತಿದ್ದರೆ, ಅಲ್ಲಿ ‘ಶ್ಲೇಷವೆಂಬ ಗುಣ[೬೩]’. ಸುಖವಾದ ಶಬ್ದಾರ್ಥ ಸಂಯೋಗದಿಂದ ಬರುವ ಸ್ಪಷ್ಟತೆ ‘ಪ್ರಸಾದ’, ಕ್ಲಿಷ್ಟವಾದ ಅಥವಾ ಬೇಕಿಲ್ಲದ ಪದಗಳ ಪ್ರಯೋಗವಿಲ್ಲದಿರುವುದು ‘ಸಮತಾ’, ಸಹೃದಯವೇದ್ಯವಾಗುವ ವಿಶಿಷ್ಟಾರ್ಥ ಸಂಪನ್ನತೆಯೇ ‘ಸಮಾಧಿ’, ಪುನಃ ಪುನಃ ಕಿವಿಯಿಂದ ಕೇಳಿದರೂ ಬೇಸರವುಂಟಾಗದಿರುವ ಮಾತಿನ ಒಂದು ಸ್ಥಿತಿ ‘ಮಾಧುರ್ಯ’, ಗಂಭೀರವೂ ಚಿತ್ತಾಕರ್ಷಕವೂ ಆಗಿರುವ ಸಮಾಸಗಳ ಪ್ರಯೋಗದಲ್ಲಿ ‘ಓಜಸ್’ ಎಂಬ ಗುಣವಿದೆ. ಸುಶ್ಲಿಷ್ಟ ಸಂಧಿಗಳಿಂದ ಕೂಡಿ ಸುಖ ಪ್ರಯೋಜ್ಯಗಳಾದ ಶಬ್ದಗಳಲ್ಲಿ ಕಾಣುವ ಅರ್ಥಸ್ಪಷ್ಟತೆ ‘ಸೌಕುಮಾರ್ಯ[೬೪]’ ಕೂಡಲೇ ಅರ್ಥವನ್ನು ವಿಶದಪಡಿಸಿ ವಸ್ತು ಧರ್ಮವನ್ನು ಸುಪ್ರಸಿದ್ಧ ಕ್ರಿಯೆಗಳಿಂದ ಹೇಳುವುದು ‘ಅರ್ಥವ್ಯಕ್ತಿ’ ಶೃಂಗಾರ ಮತ್ತು ಅದ್ಭುತರಸಗಳಿಂದ ಯೋಜಿತವಾಗಿ ದಿವ್ಯಭಾವದಿಂದ ತುಂಬಿರುವುದು ‘ಉದಾರತ’ ಕೊನೆಯಾದಾಗಿ, ಮನಸ್ಸಿಗೂ ಕರ್ಣಕ್ಕೂ ಆಹ್ಲಾದವುಂಟುಮಾಡುವ ಗುಣವಾದ ‘ಕಾಂತಿ’, ಆದರೆ ಭರತನು  ಈ ಗುಣಗಳ ಸ್ವಭಾವವೇನೆಂಬುದು ಸ್ಪಷ್ಟಪಡಿಸಿಲ್ಲ. ಒಂದರ ಅರ್ಥ ಕೆಲವು ವೇಳೆ ಇನ್ನೊಂದಕ್ಕನ್ವಯಿಸುವಂತಿದೆ. ನಾಟ್ಯಶಾಸ್ತ್ರವು ಅಲಂಕಾರಶಾಸ್ತ್ರವನ್ನು ಕುರಿತಾದ ಗ್ರಂಥಗಳಲ್ಲಿ ಪ್ರಾಚೀನವಾದ್ದರಿಂದ ವಿಷಯ ನಿರೂಪಣೆಯಲ್ಲಿ ಇಂಥ ವ್ಯತ್ಯಾಸಗಳಿವೆ.

ಭಾಮಹನು ಗುಣಗಳಿಗೆ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಭಾವಿಕವೆಂಬ ಅಲಂಕಾರದ ಪರಿಶೀಲನೆಯ ಸಂದರ್ಭದಲ್ಲಿ ಮಾತ್ರ ಗುಣ ಎಂಬ ಪದವನ್ನು ಕಾವ್ಯಸೌಂದರ್ಯದ ಅರ್ಥದಲ್ಲಿ ಪ್ರಯೋಗಿಸಿದ್ದಾನೆಯೇ ಹೊರತು ತನ್ನ ಗ್ರಂಥದಲ್ಲಿ ಬೇರೆ ಎಲ್ಲೂ ಅದನ್ನು ಪಾರಿಭಾಷಿಕವಾಗಿ ಕಾವ್ಯಗುಣವೆಂಬ ಅರ್ಥ ಬರುವಂತೆ ಬಳಸಿಲ್ಲ. ಅವನು ಹೇಳಿರುವ ಮಾಧುರ್ಯ, ಓಜಸ್ಸು, ಪ್ರಸಾದ ಗುಣಗಳನ್ನು[೬೫]ತಾನು ಹೇಳುವ ವೈದರ್ಭ, ಗೌಡೀಯ ಕಾವ್ಯಗಳಿಗೆ ಅನ್ವಯಿಸಿ ವಿವರಿಸದೆ ಸತ್ಕಾವ್ಯದಲ್ಲಿರಬೇಕೆಂದು ಮಾತ್ರ ಹೇಳಿದ್ದಾನೆ.  ಭಾಮಹನ ಮತದಲ್ಲಿ ಈ ಮೂರು ಗುಣಗಳು ಬೇರೆ ಯಾವ ಅಂಶವನ್ನು ಅವಲಂಬಿಸದ ಸ್ವತಂತ್ರ ವಿಷಯಗಳಾಗಿವೆ.

ಗುಣದ ಪ್ರಸ್ತಾಪವನ್ನು ಮೊದಲು ವಿಶೇಷವಾಗಿ ಮಾಡಿದವನು ದಂಡಿ. ಇವನು ಭರತನು ಹೇಳಿರುವ ಹತ್ತು ಗುಣಗಳನ್ನೇ[೬೬] ಪ್ರತಿಪಾದಿಸಿದರೂ ಇವರಿಬ್ಬರ ವಿವೇಚನೆಯಲ್ಲಿ ಪರಸ್ಪರ ವ್ಯತ್ಯಾಸವಿದೆ. ಉದಾಹರಣೆಗೆ ‘ಶ್ಲೇಷ’ ಬಂಧದಲ್ಲಿ ಅಥವಾ ರಚನೆಯಲ್ಲಿ ಅಲ್ಪಪ್ರಾಣಾಕ್ಷರಗಳೇ ಹೆಚ್ಚಾಗಿದ್ದರೆ ಅದಕ್ಕೆ ಶೈಥಿಲ್ಯ ಬರುವುದರಿಂದ ಹಾಗಿಲ್ಲದಿರುವುದು ಶ್ಲೇಷಗುಣ[೬೭] ಆದರೆ ಭರತನಲ್ಲಿ ‘ಶ್ಲೇಷ’ವು ಗಹನವಾದ ಪರಿಶೀಲನೆಯಿಂದ ಅರ್ಥ

ತಿಳಿಯುವಂತಿರುವ ಗುಣ. ಆದರೆ ದಂಡಿ ಕೊಟ್ಟಿರುವ ಗುಣ ವಿವರಣೆಯಲ್ಲಿ ಪರಸ್ಪರ ವಿರೋಧವು ಒಂದರ ಲಕ್ಷಣವೇ ಇನ್ನೊಂದಕ್ಕೂ ಅನ್ವಯಿಸುವುದು ಇತ್ಯಾದಿ ವಿಶೇಷ ವಿಚಾರಗಳು ಗೋಚರವಾಗುತ್ತದೆ. ನಂತರ ಬಂದ ವಾಮನನು 'ಕಾವ್ಯಕ್ಕೆ ಸೊಗಸನ್ನುಂಟು ಮಾಡುವ ಧರ್ಮಗಳೇ ಗುಣಗಳು' ["ಕಾವ್ಯಶೋಬಾಯಾಃ ಕರ್ತಾರೋ ಧರ್ಮಾ ಗುಣಾಃ", ೩, ೧, ೧] ಎಂಬ ಲಕ್ಷಣವನ್ನು ನಿರೂಪಿಸಿದ್ದಾನೆ. ಶಬ್ದಗುಣಗಳು ಹತ್ತೆಂದು ಅಷ್ಟೇ ಅರ್ಥಗುಣಗಳೆಂದೂ[೬೮] ಶಬ್ದ, ಅರ್ಥಗುಣಗಳಿಗೆ ಅದೇ ಹೆಸರನ್ನು ಕೊಟ್ಟಿದ್ದಾನೆ. ಈ ಎಲ್ಲಾ ಗುಣಗಳನ್ನೂ ಪದರಚನೆಯ ಆತ್ಮವೆಂದು ಹೇಳಿ[೬೯], ಗುಣಾತ್ಮಕವಾದ ಅಂಥ ಪದರಚನೆಯೇ 'ರೀತಿ' ಎಂಬ ತನ್ನ ಸಿದ್ಧಾಂತವನ್ನು ವ್ಯಕ್ತಪಡಿಸುತ್ತಾನೆ. ಗುಣಗಳು ರಸಾಶ್ರೀತವೆಂದೂ, ಅಲಂಕಾರಗಳು ಶಬ್ದಾವಲಂಬಿಗಳೆಂದೂ ತಿಳಿಸಿ ಧ್ವನಿಮತ ಸ್ಥಾಪಕನಾದ ಆನಂದವರ್ಧನನು 'ಗುಣ'ಗಳನ್ನು ಶೌರ್ಯ ಮುಂತಾದವುಗಳಿಗೂ, 'ಅಲಂಕಾರ'ಗಳನೂ ಕಟಕಾದಿ ಆಭರಣಗಳಿಗೂ ಹೋಲಿಸುತ್ತಾನೆ. ತಾನು ಪ್ರತಿಪಾದಿಸುವ ಓಜಸ್ಸು, ಪ್ರಸಾದ, ಮಾಧುರ್ಯ ಎಂಬ ಮೂರು ಗುಣಗಳು ಸಂದರ್ಭೋಚಿತವಾಗಿ ಆಯಾ ರಸಕ್ಕೆ ಹೊಂದಿಕೊಳ್ಳುವಂತೆ ಸೂಚಿಸಿದ್ದಾನೆ.

ನಂತರದಲ್ಲಿ ಕುಂತಕನು ತನ್ನ ವಕ್ರೋಕ್ತಿಜೀವಿತದಲ್ಲಿ ಮಾಧುರ್ಯ, ಪ್ರಸಾದ, ಲಾವಣ್ಯ, ಅಭಿಜಾತ್ಯ, ಔಚಿತ್ಯ, ಸೌಭಾಗ್ಯ, ಎಂಬ ಗುಣಗಳನ್ನು ಸೂಚಿಸಿ ಅದನ್ನು ತಾನು ಹೇಳುವ ಸುಕುಮಾರ, ವಿಚಿತ್ರ, ಮಧ್ಯಮಮಾರ್ಗಗಳಿಗೆ ಹೊಂದಿಕೊಳ್ಳುವಂತೆ ಪ್ರತಿಪಾದಿಸಿದ್ದಾನೆ. 'ಸರಸ್ವತಿಕಂಠಾಭರಣ' ಮತ್ತು 'ಶೃಂಗಾರಪ್ರಕಾಶ' ಎಂಬ ಗ್ರಂಥಕರ್ತೃವಾದ ಭೋಜನು ಕಾವ್ಯದಲ್ಲಿ ಗುಣಯೋಗವು ರಸಾದಿಯೋಗದಂತೆ ನಿತ್ಯ ಅಲ್ಲದೇ ಗುಣಗಳು ಅಲಂಕಾರಗಳಿಗಿಂತ ಮುಖ್ಯ. ಬಾಹ್ಯ, ಅಭ್ಯಂತರ, ವೈಶೇಷಿಕವೆಂದು ಮೂರು ಬಗೆಯಾಗಿ ಗುಣಗಳನ್ನು ವಿಂಗಡಿಸಿ ಅನುಕ್ರಮವಾಗಿ ಅವುಗಳಲ್ಲಿ ಶಬ್ದಗುಣ, ಅರ್ಥಗುಣ ಹಾಗೂ ದೋಷತ್ವದಲ್ಲಿ ಕಾಣುವ ಗುಣಗಳನ್ನೂ ಸೇರಿಸಿ, ತರುಣಿಯ ವಂಶ ವಯಸ್ಸು ರೂಪಲಾವಣ್ಯಾದಿಗಳು 'ಬಾಹ್ಯ'ವೆಂದೂ, ಶೀಲವೈದಗ್ಧ್ಯಮಹಾಸೌಭಾಗ್ಯಾದಿಗಳು ಅಂತರವೆಂದೂ, ಸಾಮಾನ್ಯ ಸುಂದರಿಯ ಅಭಿನಯವೇ ಗುಣವಾಗುವ ಸಂದರ್ಭವನ್ನು ವೈಶೇಷಿಕವೆಂದೂ ದೃಷ್ಟಾಂತದ ಮೂಲಕ ಅದನ್ನು ಸ್ಪಷ್ಟಪಡಿಸಿದ್ದಾನೆ. ದೋಷವೇ ಗುಣವಾಗುವುದನ್ನು ಅವನಿಗಿಂತ ಹಿಂದಿದ್ದ ಅಲಂಕಾರಿಕರು ಗಮನಿಸಿದರೂ ಅವನ್ನೇ ಬೇರೆ ಒಂದು ಗುಂಪು ಮಾಡಿ ಅವನ್ನು ಮೊದಲ ಬಾರಿಗೆ 'ವೈಶೇಷಿಕ' ಎಂಬ ಹೆಸರನ್ನು ಭೋಜನು ಕೊಟ್ಟಿರುವುದು ಇಲ್ಲಿ ವಿಶೇಷವಾಗಿದೆ. ಒಟ್ಟು ಇಪ್ಪತ್ತನಾಲ್ಕುಶಬ್ದ, ಅರ್ಥ, ವೈಶೇಷಿಕಗುಣಗಳನ್ನು ಭೋಜನು ಹೇಳಿದ್ದಾನೆ. ನಂತರ ಬಂದ ಮಮ್ಮಟನು ಆನಂದವರ್ಧ ನನ್ನೇ ಅನುಸರಿಸುತ್ತಾ ಓಜಸ್ಸು, ಪ್ರಸಾದ, ಮಾಧುರ್ಯ ಎಂಬ ಮೂರು ಗುಣಗಳನ್ನು ಮಾತ್ರ ಹೇಳಿದ್ದಾನೆ. ನಂತರ ಬಂದ ವಿಶ್ವನಾಥ ತನ್ನ ಸಾಹಿತ್ಯದರ್ಪಣ ದಲ್ಲಿ "ಉತ್ಕರ್ಷ ಹೇತವಃ ಪ್ರೋಕ್ತಾ

ಗುಣಾಲಂಕಾರರೀತಯಃ" [ಸಾಹಿತ್ಯದರ್ಪಣ, ೧. ೩] ಕಾವ್ಯಕ್ಕೆ ಉತ್ಕರ್ಷವನ್ನು ಕೊಡತಕ್ಕವು ಗುಣಾಲಂಕಾರರೀತಿಗಳು ಎಂದು ಹೇಳಿ

**ರಸಸ್ಯಾಂಗಿತ್ವಮಾಪ್ತಸ್ಯ ಧರ್ಮಾಃ ಶೌರ್ಯದಯೋ ಯಥಾ ।**
**ಗುಣಾಃ ಮಾಧುರ್ಯಮೋಜೋಽಥ ಪ್ರಸಾದ ಇತಿ ತೇ ತ್ರಿಧಾ ॥**

[ಸಾಹಿತ್ಯದರ್ಪಣ, ೮. ೧]

ಮಾಧುರ್ಯ, ಓಜಸ್ಸು, ಪ್ರಸಾದ, ಎಂಬ ಮೂರು ಗುಣಗಳನ್ನು ರಸಗಳಿಗೆ ಅನ್ವಯವಾಗುವಂತೆ, ಆತ್ಮನಲ್ಲಿ ಶೌರ್ಯ ಮೊದಲಾದ ಗುಣಗಳಿರುವಂತೆ ಕಾವ್ಯದಲ್ಲಿ ಪ್ರಧಾನವಾದ ರಸಕ್ಕೆ ಗುಣಗಳು ಸಂಬಂಧಿಸಿವೆ ಎಂದು ಮೂರು ಗುಣಗಳನ್ನು ಪ್ರತಿಪಾದಿಸಿದ್ದಾನೆ.

**ಚಿತ್ತದ್ರವೀಭಾವಮಯೋ ಹ್ಲಾದೋ ಮಾಧುರ್ಯಮುಚ್ಯತೇ ।**
**ಸಂಭೋಗೇ ಕರುಣೇ ವಿಪ್ರಲಂಭೇ ಶಾಂತೇಽಧಿಕಂ ಕ್ರಮಾತ್ ॥**

[ಸಾಹಿತ್ಯದರ್ಪಣ ೮. ೨]

ಚಿತ್ತವನ್ನು ಕರಗಿಸುವ ಆನಂದ ವಿಶೇಷವೇ ಮಾಧುರ್ಯ ಗುಣವಾಗಿದೆ. ಮಾಧುರ್ಯವು ಸಂಭೋಗಶೃಂಗಾರ, ವಿಪಲಂಭಶೃಂಗಾರದಲ್ಲಿ ಇನ್ನೂ ಹೆಚ್ಚಾಗಿದ್ದು, ಕರುಣ, ಶಾಂತ ರಸಗಳಲ್ಲಿಯೂ ಈ ಗುಣವಿರುತ್ತದೆ. ವರ್ಗೀಯ ಪಂಚಮಾಕ್ಷರ ಗಳೂಡಗೂಡಿದ ಸಂಯುಕ್ತಾಕ್ಷರಗಳು ಟ, ಠ, ಡ, ಢ, ಒಟ್ಟು ಉಳಿದ ವ್ಯಂಜನ ವರ್ಣಗಳು ಮಾಧುರ್ಯವನ್ನು ಪ್ರಕಾಶಪಡಿಸುತ್ತದೆ.

**ಓಜಶ್ಚಿತ್ತಸ್ಯ ವಿಸ್ತಾರರೂಪಂ ದೀಪ್ತತ್ವ ಮುಚ್ಯತೆ ।**
**ವೀರಭೀಭತ್ಸ ರೌದ್ರೇಷು ಕ್ರಮೇಣಾಧಿಕ್ಯಮಸ್ಯ ತು ॥**

[ಸಾಹಿತ್ಯದರ್ಪಣ, ೮,೬]

ಚಿತ್ತವಿಸ್ತಾರಗೊಳ್ಳುವ ಪ್ರಕಾಶವೇ ಓಜೋಗುಣವಾಗಿದೆ. ವೀರ, ಭೀಭತ್ಸ, ರೌದ್ರ ರಸಗಳಲ್ಲಿ ಈ ಓಜೋ ಗುಣವಿರುತ್ತದೆ. ವರ್ಗದ ಒಂದು, ಮೂರನೆಯ ಅಕ್ಷರಗಳೊಡ ಗೂಡಿದ ಸಂಯುಕ್ತವರ್ಣಗಳು ಓಜೋಗುಣವನ್ನು ಪ್ರಕಾಶಪಡಿಸುತ್ತದೆ.

**ಚಿತ್ತಂ ವ್ಯಾಪ್ನೋತಿ ಯಃ ಕ್ಷಿಪ್ರಂ ಶುಷ್ಕೇಂಧನಮಿವಾನಲಃ ।**
**ಸ ಪ್ರಸಾದಃ ಸಮಸ್ತೇಷು ರಸೇಷು ರಚನಾಸು ಚ ॥**

[ಸಾಹಿತ್ಯದರ್ಪಣ, ೮. ೮]

ಚಿತ್ತವನ್ನು ಬೇಗನೆ ವ್ಯಾಪಿಸುವುದು ಪ್ರಸಾದಗುಣದ ಲಕ್ಷಣವಾಗಿದ್ದು, ಕೇಳಿದೊಡನೆ ಅರ್ಥವನ್ನು ತಿಳಿಸುವಂತಹ ಶಬ್ದಗುಣವಾಗಿದೆ. ಇದು ಎಲ್ಲಾ ರಸಗಳಲ್ಲೂ ಎಲ್ಲಾ

ರಚನೆಗಳಲ್ಲೂ ನೆಲಸಿರುತ್ತದೆ. ಈ ಮೂರು ಗುಣಗಳಲ್ಲಿಯೇ ವಿಶ್ವನಾಥನು ಹಿಂದಿನ ಅಲಂಕಾರಿಕರ ಗುಣಗಳೆಲ್ಲವನ್ನು ಸಮನ್ವಯಗೊಳಿಸಿ ವಿವರಿಸುವುದನ್ನು ಪರಿಶೀಲಿಸಿ ವಿವರಣೆಗಳೊಂದಿಗೆ ಈ ಅಧ್ಯಾಯದಲ್ಲಿ ವಿಮರ್ಶೆಮಾಡಲಾಗಿದೆ. ಕಾವ್ಯಸ್ವರೂಪದ ಪ್ರತಿಪಾದನೆಯಲ್ಲಿ ಅಲಂಕಾರಗಳಿಗೆ ದೂರೆತ ಒಂದು ಸ್ಥಾನ ಗುಣಗಳಿಗೆ ಲಭಿಸಿಲ್ಲ ಅವು ಪ್ರಾರಂಭದಿಂದಲೂ ರೀತಿ ಮುಂತಾದ ಕಾವ್ಯತತ್ವಕ್ಕೆಧೀನವಾಗಿರುವ ಬಗೆಯಲ್ಲಿ ಪರಿಶೀಲನೆಗೊಳಗಾಗಿವೆ. ಆದರೂ ಕಾವ್ಯಕ್ಕೆ ಸಂಬಂಧಪಟ್ಟಂತೆ ಶಬ್ದಾರ್ಥಗಳ ರಚನೆಯ ರಸದ ವಿವೇಚನೆಯಲ್ಲಿ ಅವುಗಳ ಪಾತ್ರ ಪ್ರಮುಖವಾಗಿದೆ. ಗುಣಗಳ ಪ್ರತಿಪಾದನೆ ಒಂದು ಪಂಥವಾಗಿ ಪರಿಣಮಿಸುವಷ್ಟು ವಿಸ್ತಾರವೂ ಕ್ರಮಯುಕ್ತ ಆಗದಿದ್ದರೂ, ದಂಡಿಯಿಂದ ವಿಶ್ವನಾಥನವರೆಗಿನ ಅನೇಕ ಅಲಂಕಾರಿಕರ ಮನಸ್ಸನ್ನು ಸೆಳೆದ 'ಅಲಂಕಾರ'ಗಳಿಗಿಂತಲೂ ಹೆಚ್ಚು ಸಾರಭೂತವಾದ ಕಾವ್ಯಾಂಶ 'ಗುಣ'ವಾಗಿದೆ.

ಆರನೆಯ ಅಧ್ಯಾಯದಲ್ಲಿ ರೀತಿ ಮತ್ತು ಅಲಂಕಾರಗಳ ಸ್ವರೂಪವನ್ನು ಚರ್ಚಿಸಲಾಗಿದೆ. ರೀತಿ ಸಿದ್ಧಾಂತವನ್ನು ಪ್ರಥಮವಾಗಿ ಪ್ರತಿಪಾದಿಸಿದ ವಾಮನನು 'ರೀತಿರಾತ್ಮಕಾವ್ಯಸ್ಯ' 'ರೀತಿಯೇ ಕಾವ್ಯದ ಆತ್ಮ'[೬೦]ವೆಂದು ಕಾವ್ಯಲಕ್ಷಣವನ್ನು ಕೊಟ್ಟಿದ್ದಾನೆ. "ಗುಣ ಸ್ವರೂಪದಿಂದ ಕೂಡಿದ ವಿಶಿಷ್ಟ ಪದ ರಚನೆಯೇ[೬೧] ರೀತಿ" ಎಂದು ಹೇಳಿ ಒಂದು ಸ್ವತಂತ್ರವಾದ ಕಾವ್ಯಶಾಸ್ತ್ರೀಯ ಸಿದ್ಧಾಂತವನ್ನಾಗಿ ಮಾಡಿದನು. ಈ 'ರೀತಿ[೬೨]' ಪ್ರತಿಪಾದನೆಗೆ ವಾಮನನಿಗೆ ದಂಡಿಯ 'ಮಾರ್ಗ' ಪರಿಕಲ್ಪನೆಯೇ ಸ್ಫೂರ್ತಿಯಾಗಿದೆ ದಂಡಿಯು ಗುಣಲಂಕಾರಗಳನ್ನು ಮಾರ್ಗಕ್ಕೆ ಅಧೀನ ಮಾಡಿ ಈ 'ಮಾರ್ಗ'ದ ಅಭಿವ್ಯಕ್ತಿಯಲ್ಲಿ ಕಾವ್ಯದ ಸಾರವಿದೆಯೆಂಬ ಸೂಚನೆಯನ್ನು ಕೊಟ್ಟಿದ್ದಾನೆ. ದಂಡಿಯು ಮಾರ್ಗವನ್ನು "ಕಾವ್ಯದ ಶರೀರವು ಇಷ್ಟವಾದ ಅರ್ಥವನ್ನಳ್ಳ ಪದಸಮೂಹ[೬೩]" ಎನಿಸಿಕೊಂಡು ಕಾವ್ಯದ ಶರೀರವಾಗುತ್ತದೆ ಎಂಬುದು ಅವನ ಮತವಾಗಿದೆ.

ರೀತಿಯ ಜೊತೆಗೆ ಗುಣವು ನಿಕಟ ಸಂಬಂಧವನ್ನು ಹೊಂದಿದ್ದರಿಂದ ಗುಣದ ಪರಿಕಲ್ಪನೆಯನ್ನು ಮೊಟ್ಟಮೊದಲಿಗೆ ಭರತನ ನಾಟ್ಯಶಾಸ್ತ್ರದಲ್ಲಿ [೬೪]ಕಾಣಬಹುದು. ಆದರೆ ಭರತನು ರೀತಿ, ಮಾರ್ಗಕ್ಕೆ ಸಂಬಂಧಿಸಿದಂತೆ ಹೇಳದಿದ್ದರೂ ವೃತ್ತಿ, ಪ್ರವೃತ್ತಿಗಳ ಬಗ್ಗೆ ಹೇಳುವ ಮೂಲಕ ರೀತಿ ಮಾರ್ಗಕ್ಕೆ ಸಂಬಂಧಿಸಿದಂತೆ ಸ್ವಲ್ಪಮಟ್ಟಿಗೆ ವಿಚಾರವನ್ನು ತಿಳಿಸಿದ್ದಾನೆ. ವೃತ್ತಿಯ ಬಗ್ಗೆ ನಾಲ್ಕು ವೃತ್ತಿ [ಭಾರತಿವೃತ್ತಿ, ಸಾತ್ತ್ವಕೀ, ಆರಭಟೀವೃತ್ತಿ ಮತ್ತು ಕೌಶಿಕೀವೃತ್ತಿ]ಗಳನ್ನು ಮತ್ತು ಪ್ರವೃತ್ತಿಗೆ ಸಂಬಂಧಿಸಿದಂತೆ ನಾಟಕದಲ್ಲಿ ಬರುವ ವಿವಿಧ ಪಾತ್ರಗಳಿಗೆ ಸೇರಿದ ಪಾತ್ರ, ವೇಷ, ಭಾಷೆ ಇತ್ಯಾದಿಗಳನ್ನು ತಿಳಿಸಿದ್ದಾನೆ. ಆನಂದವರ್ಧನನು ರೀತಿಯ ಪ್ರತಿಪಾದನೆಯ ಕ್ರಮದಲ್ಲಿ ರೀತಿಯು ಅದರ ಲಕ್ಷಣವುಳ್ಳ 'ಉಪನಾಗರಿಕಾವೃತ್ತಿ'ಗಳಲ್ಲಿ ಆರೋಪಿತವಾಗಿ ರಸಕ್ಕನುಗುಣವಾಗಿರುವಂತೆ 'ವೃತ್ತಿ' ಎಂಬುದು ಅವನಿಂದ ಪ್ರತಿಪಾದಿಸಲ್ಪಟ್ಟ ರೀತಿಗೆ ಅವಕಾಶವಿಲ್ಲದಂತಾಯಿತು.

ಅವನು ಹೇಳುವ ವೃತ್ತಿಗಳಲ್ಲಿ ಅರ್ಥಕ್ಕೆ ಸಂಬಂಧಪಟ್ಟವು ಕೈಶಿಕೀ ಮುಂತಾದವು ಶಬ್ದಕ್ಕೆ ಅನ್ವಯಿಸತಕ್ಕವು ಉಪನಾಗರಿಕಾದಿ ವೃತ್ತಿಗಳು, ಹೀಗೆ ಆನಂದವರ್ಧನನು ಪ್ರತಿಪಾದಿಸುವ ಈ ಎರಡೇ ಬಗೆಯ ವೃತ್ತಿಗಳಲ್ಲಿ ಮಾತ್ರ ರೀತಿಯ ಸ್ವರೂಪವಿದೆ ಎಂದು ಹೇಳಬಹುದು. ನಂತರ ಬಂದ ಕುಂತಕನು ರೀತಿಯ ಪರ್ಯಾಯವಾಗಿ 'ಮಾರ್ಗ' ಎಂಬ ಪದವನ್ನು ಪ್ರಯೋಗಿಸಿದ್ದಾನೆ. ವಾಮನನಂತೆ ರೀತಿಯೇ ಕಾವ್ಯದ ಆತ್ಮವೆಂದು ಹೇಳದೆ ಮಾರ್ಗಗಳು ಕವಿಪ್ರಸ್ಥಾನಹೇತುಗಳು ಎಂದು ಹೇಳಿ, ತನ್ನದೇ ಆದ ವೈಶಿಷ್ಟ್ಯವನ್ನು ತೋರಿಸುತ್ತಾನೆ. ಮತ್ತು ಅವನು ನಿರೂಪಿಸುವ ಮಾರ್ಗವು ಕವಿಸ್ವಭಾವವನ್ನವಲಂಬಿಸಿಕೊಂಡಿದೆಯೇ ವರೆತು ದೇಶವನ್ನಲ್ಲ ಎಂದು ಹೇಳಿ ವೈದರ್ಭೀ, ಗೌಡೀ, ಲಾಟೀ, ರೀತಿಗಳು ದೇಶವಾಚಕ ಪದಗಳಾಗಿರುವುದನ್ನ ನಿರಾಕರಿಸಿ ಕವಿಸ್ವಭಾವಕ್ಕೆ ಅನ್ವಯಿಸುವಂತೆ ಸುಕುಮಾರ, ವಿಚಿತ್ರ, ಮಧ್ಯಮ ಮಾರ್ಗಗಳೆಂಬ ಹೊಸ ಪರಿಭಾಷೆಯನ್ನ ಕುಂತಕನು ಕೊಡುತ್ತಾನೆ. ಮತ್ತು ಯಾವುದೇ ಮಾರ್ಗಕ್ಕೆ ಪ್ರಾಮುಖ್ಯತೆ ಕೊಡದೇ ಎಲ್ಲಾ ಮಾರ್ಗಗಳು ಕವಿವ್ಯಾಪಾರಮನೋವಕ್ರತೆಗುನುಣವಾದ ಸಮಾನ ಪ್ರಾಮುಖ್ಯತೆಯನ್ನು ಕುಂತಕನು ಕೊಟ್ಟಿದ್ದಾನೆ.

ವಿಶ್ವನಾಥನು 'ರೀತಿ' ಎಂದರೆ "ಶರೀರದಲ್ಲಿ ಆಯಾಸ್ಥಾನದಲ್ಲಿ ವ್ಯವಸ್ಥಿತವಾಗಿ ಕೈಕಾಲು ಮೊದಲಾದ ಅವಯವಗಳು ಸೇರಿರುವಂತೆ ಶಬ್ದಾರ್ಥಗಳೇ ಕಾವ್ಯ ಶರೀರವೆನಿಸಿರುವ ಕಾವ್ಯದಲ್ಲಿ ಪದಗಳನ್ನು ಆಯಾಸ್ಥಾನದಲ್ಲಿ ಸಜ್ಜಾಗಿ ಜೋಡಿಸುವುದೇ[೭೫] 'ರೀತಿ' ಎಂದು ಹೇಳಿ ವೈದರ್ಭೀರೀತಿ, ಗೌಡೀರೀತಿ, ಪಾಂಚಾಲಿರೀತಿ, ಮತ್ತು ಲಾಟಿಕಾರೀತಿ ಎಂದು ನಾಲ್ಕು ರೀತಿಗಳನ್ನು ಈ ರೀತಿಯಾಗಿ ವಿವರಿಸಿದ್ದಾನೆ. ವೈದರ್ಭೀರೀತಿಯು ಮಾಧುರ್ಯಗುಣವನ್ನು ಪ್ರಕಾಶಪಡಿಸುವ ಕೋಮಲವಾದ ವರ್ಣಗಳಿಂದ ಕಡಿಮೆ ಸಮಾಸವುಳ್ಳದಾಗಿರುವುದೇ ವೈದರ್ಭೀರೀತಿ ಎಂದು ಕರೆದಿದ್ದಾನೆ. ಗೌಡೀ ರೀತಿಯು ಓಜೋಗುಣ ಪ್ರಕಾಶ ಪಡಿಸುವಂತೆ ಉತ್ಕಟವಾದ ವರ್ಣರಚನೆ ಕೂಡಿರುವುದನ್ನ ಗೌಡೀ ರೀತಿ ಎಂದು ಕರೆಯಲಾಗಿದೆ. ಪಾಂಚಾಲಿರೀತಿಯೆಂದರೆ ವೈದರ್ಭೀ, ಗೌಡೀರೀತಿಗಳಲ್ಲಿ ಉಪಯೋಗಿಸುವ ವರ್ಣಗಳನ್ನು ಬಿಟ್ಟು ಧೀರ್ಘವಾದ ಸಮಾಸಗಳಿಂದ ಕೂಡಿದ ರಚನೆಯನ್ನು ಪಾಂಚಾಲಿ ರೀತಿ ಎನ್ನಲಾಗಿದೆ. ಇನ್ನು ಲಾಟಿಕಾರೀತಿ ಎಂದರೆ ವೈದರ್ಭೀ, ಪಾಂಚಾಲಿಗಳ ಮಧ್ಯದಲ್ಲಿ ಸೇರುವ ರೀತಿ, ಎಂದು ನಾಲ್ಕು ರೀತಿಗಳನ್ನ ಉದಾಹರಣೆ ಸಹಿತವಾಗಿ ಪರಾಮರ್ಶಿಸಲಾಗಿದೆ.

ದಂಡಿಯು ವೈದರ್ಭೀಮಾರ್ಗ, ಗೌಡೀಮಾರ್ಗವೆಂದು ಎರಡು ಮಾರ್ಗಗಳನ್ನು ವಾಮನನು ವೈದರ್ಭೀ, ಗೌಡಿ ಪಾಂಚಾಲೀ ಎಂಬ ಮೂರು ರೀತಿಗಳನ್ನು [೭೬]ರುದ್ರಟನು ಈ ಮೂರು ರೀತಿಗಳ ಜೊತೆಯಲ್ಲಿ ಲಾಟಿಯಾವನ್ನು ಸೇರಿಸಿ ನಾಲ್ಕು ರೀತಿಗಳನ್ನು ಹೇಳಿದ್ದಾನೆ. ಭೋಜನು ಈ ನಾಲ್ಕು ರೀತಿಯ ಜೊತೆಗೆ ಅವಂತಿಕಾ, ಮಾಗಧಿ, ಎಂಬ

ಇನ್ನೆರಡು ರೀತಿಗಳನ್ನ ಒಟ್ಟು ಆರು ರೀತಿಗಳನ್ನು[೭೭] ಹೇಳಿದ್ದಾನೆ. ಕುಂತಕನು ರೀತಿಯ ಬದಲಾಗಿ ಮಾರ್ಗವೆಂದು ಕರೆದು ಸುಕುಮಾರ, ವಿಚಿತ್ರ, ಮತ್ತು ಮಧ್ಯಮಮಾರ್ಗವೆಂದು ಮೂರು ಮಾರ್ಗಗಳನ್ನ ತಿಳಿಸಿ ವಿವರಿಸಿದ್ದಾನೆ. ವಾಮನನ ರೀತಿಯ ಕಲ್ಪನೆಯಲ್ಲಿ ಗುಣಗಳ ಪಾತ್ರ ಪ್ರಮುಖವಾದದು. ಅವು ತಾವೇ ತಾವಾಗಿರದೆ ಪದನಿಷ್ಠವಾದ ಸ್ಥಿತಿಯಲ್ಲಿ ರೀತಿಯಾಗಿ, ಕಾವ್ಯ ಸೌಂದರ್ಯವಾಗಿ ಪರಿಣಮಿಸುವುದೆಂಬ ವಿಚಾರ ಗಮನಾರ್ಹ ವಾಗಿದೆ. ಶಬ್ದಾರ್ಥಗಳ ಸಾಹಿತ್ಯದಲ್ಲಿ ಅಲಂಕಾರಕ್ಕಿಂತಲೂ ಮಿಗಿಲಾದ ಒಂದು ಕಾವ್ಯಾಂಶವಿದ್ದು ಅದು ಗುಣನಿಷ್ಟವಾದ ಪದರಚನೆಯಲ್ಲಿ ಕಂಡು ಬರುವುದು 'ರೀತಿ'ಯೇ ಎಂದು ಸೂಚಿಸಿ, ಅದೇ ಕಾವ್ಯಸಾರವೆಂಬ ಮತ್ತು ಕಾವ್ಯತತ್ತ್ವವೆಂಬ ವಿಚಾರವನ್ನು ಪ್ರತಿಪಾದಿಸಲು ವಾಮನ ಬಳಸುವ 'ಆತ್ಮಾ' ಎಂಬ ಮಾತು ಅಲಂಕಾರಶಾಸ್ತ್ರದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದು, ಮುಂದೆ ಆನಂದವರ್ಧನನು "ಕಾವ್ಯಸ್ಯ ಆತ್ಮ ಧ್ವನಿ" ಎಂದು ವಿಶ್ವನಾಥನು 'ವಾಕ್ಯಂ ರಸಾತ್ಮಕಮ್ ಕಾವ್ಯಮ್' ಎಂದು ಆತ್ಮ ಪ್ರಧಾನವಾದ ಸಿದ್ಧಾಂತವು ಆನಂದವರ್ಧನನ ಧ್ವನಿಸಿದ್ಧಾಂತಕ್ಕೂ ವಿಶ್ವನಾಥನ ರಸಸಿದ್ಧಾಂತಕ್ಕೂ ಪ್ರೇರಣೆಯಾಯಿತು. ರೀತಿಸ್ವರೂಪಕ್ಕೆ ಸಂಬಂಧಿಸಿದಂತೆ ವಿಶ್ವನಾಥನು ನಿರೂಪಿಸಿರುವ ನಾಲ್ಕು ರೀತಿಗಳ ಜೊತೆಗೆ ರೀತಿಸ್ವರೂಪದ ಹಿನ್ನೆಲೆಯೊಂದಿಗೆ ರೀತಿ ಸಿದ್ಧಾಂತ ಸ್ಥಾಪಕ ವಾಮನ, ದಂಡಿ, ರುದ್ರಟ, ಆನಂದವರ್ಧನ, ಕುಂತಕನ ಮಾರ್ಗ ವಿಚಾರವನ್ನು ಇಲ್ಲಿ ವಿಶದವಾಗಿ ಚರ್ಚಿಸಲಾಗಿದೆ.

ಇನ್ನು ಅಲಂಕಾರಕ್ಕೆ ಸಂಬಂಧಿಸಿದಂತೆ ವಿಶ್ವನಾಥನು ಅಲಂಕಾರವನ್ನು "ಶಬ್ದಾರ್ಥದಲ್ಲಿ ಯಾವಾಗಲೂ ನೆಲಸದೇ ಇದ್ದು ಅವಶ್ಯಕವಿದ್ದಾಗ ಸೇರಿಕೊಂಡು ಶಬ್ದಾರ್ಥಗಳಿಗೆ ಶೋಭೆಯನ್ನುಂಟುಮಾಡುತ್ತ ರಸಭಾವಗಳಿಗೆ ಅನುಕೂಲವಾಗಿರುವ ಧರ್ಮಗಳೇ ಅಲಂಕಾರಗಳು[೭೮]" ಹೇಗೆ ಶರೀರದಲ್ಲಿ ಕಡಗ ಕುಂಡಲ ಮೊದಲಾದ ಆಭರಣಗಳು ಶೋಭೆಯನ್ನುಂಟುಮಾಡುತ್ತ ಆತ್ಮನಿಗೆ ಸಂತೋಷವನ್ನುಂಟುಮಾಡುತ್ತಿದೆಯೋ ಹಾಗೆಯೇ ಅಲಂಕಾರಗಳು ಶಬ್ದಾರ್ಥಗಳಿಗೆ ಶೋಭೆಯನ್ನುಂಟುಮಾಡುತ್ತ ರಸಾದಿಗಳಿಗೆ ಪೋಷಕವಾಗಿರುವುದೆ ಅಲಂಕಾರಗಳು ಇವು ಗುಣದಂತೆ ಶಬ್ದಾರ್ಥಗಳಲ್ಲಿ ಇರಲೇಬೇಕೆಂಬ ನಿಯಮವಿಲ್ಲ. ಅಂದರೆ ಅಲಂಕಾರಗಳು ಇಲ್ಲದಿದ್ದರೂ ಶಬ್ದಾರ್ಥಗಳು ಕಾವ್ಯವೆನಿಸುತ್ತದೆ ಎಂದು ಅಲಂಕಾರಗಳ ಸ್ವರೂಪವನ್ನು ಹೇಳಿರುವುದನ್ನು ಮತ್ತು ಅವನು ನಿರೂಪಿಸುವ ಶಬ್ದಾರ್ಥಲಂಕಾರಗಳನ್ನು ನಿರೂಪಿಸಿರುವುದಕ್ಕೆ ಮೊದಲು ಅಲಂಕಾರದ ಹಿನ್ನೆಲೆಯನ್ನು ವಿಶದವಾಗಿ ಚರ್ಚಿಸಲಾಗಿದೆ. ಭರತನು ನಾಟ್ಯಶಾಸ್ತ್ರದಲ್ಲಿ ಪ್ರಥಮವಾಗಿ ಉಪಮಾ, ರೂಪಕ ದೀಪಕ, ಯಮಕಗಳೆಂಬ ನಾಲ್ಕು ಅಲಂಕಾರಗಳನ್ನು ಹೇಳಿದನು. ಆದರೆ ಇದಕ್ಕಿಂತ ಪೂರ್ವದಲ್ಲಿ ಸಂಸ್ಕೃತದಲ್ಲಿ ಅಲಂಕಾರ ಎಂಬ ಪದ ನಾನಾಸ್ಥಿತಿಗಳಲ್ಲಿ ಪ್ರಯೋಗಿಸಲ್ಪಟ್ಟಿದೆ. ಕ್ರಿ.ಶ. ಎರಡನೆಯಶತಮಾನದ ಶಾಸನ ಒಂದರಲ್ಲಿ ಗದ್ಯಪದ್ಯಗಳೂ ಅಲಂಕೃತವಾಗಿರಬೇಕು ಎಂದು ಹೇಳಿದೆ. ಭರತನ

ನಂತರ ಬಂದ ಭಾಮಹನು ತನ್ನ ಗ್ರಂಥವಾದ ಕಾವ್ಯಲಂಕಾರದಲ್ಲಿ ಮೂವತ್ತೇಳು ಅಲಂಕಾರಗಳನ್ನು ತಿಳಿಸಿದ್ದಾನೆ. ಆದರೆ ಭರತ, ಭಾಮಹರ ನಡುವೆ ಇದ್ದನ್ನೆನಲ್ಲಾದ ಭಟ್ಟಿಯು ತನ್ನ ಕಾವ್ಯವನ್ನು ವ್ಯಾಕರಣಸೂತ್ರಗಳಿಗೆ ಲಕ್ಷ್ಯರೂಪವಾಗಿ ರಚಿಸಿದ್ದು ಅದರಲ್ಲಿ ಮೂವತ್ತೆಂಟು ಶಬ್ದಾರ್ಥಲಂಕಾರಗಳನ್ನು ತಿಳಿಸಿದ್ದಾನೆ. ಇನ್ನು ಅಗ್ನಿಪುರಾಣ. ಧರ್ಮೋತ್ತರಪುರಾಣ[೭೯]ಗಳಲ್ಲಿ ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಅಧ್ಯಾಯಗಳು ದೊರೆಯುತ್ತವೆ. ಇನ್ನು ಯಾಸ್ಕನ ನಿರುಕ್ತದಲ್ಲಿ ಉಪಮೆಯ ವಿಚಾರವಿರುವುದನ್ನು ಗುರುತಿಸಲಾಗಿದೆ. ಆದರೆ ಯಾಸ್ಕನು ಗಾರ್ಗ್ಯಾನೆಂಬ ಆಚಾರ್ಯನು ಹೇಳಿರುವ ಉಪಮಾಲಕ್ಷಣವನ್ನು ತನಗಿಂತಲೂ ಹಿಂದಿನಿಂದ ಬಂದಿತ್ತೆಂಬುದನ್ನು ಸೂಚಿಸಿದ್ದಾನೆ.

ಯಾಸ್ಕನು ತಿಳಿಸಿರುವ ಕರ್ಮೋಪಮ, ಭೋತೋಪಮ, ರೊಪೋಪಮ, ಲುಪ್ತೋಪಮ ಎಂಬ ಪ್ರಕಾರಗಳನ್ನು ನಿರುಕ್ತದಲ್ಲಿ[೮೦] ತಿಳಿಸಿದ್ದಾನೆ. ಪಾಣಿನಿಯ ಅಷ್ಟಧ್ಯಾಯಿಯಲ್ಲೂ ಉಪಮೆಯನ್ನು ಉಪಮಾನ, ಉಪಮಿತಿ, ಸಾಮಾನ್ಯ, ವಾಚಕ, ಎಂಬ ಪಾರಿಭಾಷಿಕ ಶಬ್ದಗಳನ್ನು ಬಳಸಲಾಗಿದೆ ಮತ್ತು ಅನೇಕ ವ್ಯಾಕರಣಸೂತ್ರಗಳಲ್ಲಿ [೮೧] ಸಾದೃಶ್ಯದ ಕಲ್ಪನೆಯ ಪ್ರಭಾವವು ಪರಿಶೀಲಿಸಲ್ಪಟ್ಟಿದೆ. ಪಾಣಿನಿಯು ಪ್ರತಿಪಾದಿಸಿದ ಉಪಮಾ ವಿಚಾರವನ್ನು ಪತಂಜಲಿಯು ತನ್ನ ಮಹಾಭಾಷ್ಯದಲ್ಲಿ ಉದಾಹರಣೆಗಳೊಂದಿಗೆ ವಿಶದಪಡಿಸಿದ್ದಾನೆ. ಪ್ರಾಚೀನವಾದ ಪ್ರಾಚೀನತಮವಾದ ಋಗ್ವೇದದಲ್ಲಿ ಉಪಮಾ ಎಂಬ ಪದದ ಪ್ರಯೋಗವಿದೆ[೮೨-೮೩] ಈ ಉಪಮಾ ಶಬ್ದಕ್ಕೆ ಅಲ್ಲಿ 'ಹೋಲಿಕೆ' ಎಂಬ ಅರ್ಥವಿದೆ. ಕೆಲವು ಅಲಂಕಾರಿಕರು ತಮ್ಮ ಗ್ರಂಥಗಳಲ್ಲಿ ವ್ಯಾಕರಣ ವಿಷಯವನ್ನು ಪ್ರಸ್ತಾಪಿಸಿದುದ್ದಲ್ಲದೆ ವ್ಯಾಕರಣ ವಿದ್ವಾಂಸರನ್ನೂ ಸಹ ಪ್ರಶಂಶಿಸಿದಿದ್ದಾರೆ. ಧ್ವನಿಕಾರನಾದ ಆನಂದವರ್ಧನನು ವ್ಯಾಕರಣ ಶಾಸ್ತ್ರವನ್ನೂ ವೈಯಾಕರಣರನ್ನೂ ವಿಶೇಷವಾಗಿ ಗೌರವಿಸುವ ಮಾತುಗಳನ್ನು ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಅಲಂಕಾರಶಾಸ್ತ್ರಕ್ಕೆ ವ್ಯಾಕರಣದಿಂದ ಮಾತ್ರವಲ್ಲದೇ ನ್ಯಾಯ ಮಿಮಾಂಸಾ, ಸಾಂಖ್ಯ, ವೇದಾಂತ ಮುಂತಾದವುಗಳಿಂದ ಆಗಿರುವ ಉಪಕಾರ ವಿಶೇಷವಾಗಿದೆ. ಹೀಗೆ ಅಲಂಕಾರದ ಹಿನ್ನೆಲೆಯನ್ನು ಕುರಿತು ವಿಶದವಾಗಿ ಚರ್ಚಿಸಲಾಗಿದೆ.

ಭಾಮಹನು "ನ ಕಾಂತಮಪಿ ನಿರ್ಭೋಷಂ ವಿಭಾತಿ ವನಿತಾಮುಖಂ[೮೪]" ["ಮನೋಹರವಾಗಿದ್ದರೂ ವನಿತಾಮುಖವು ಭೂಷಣವಿಲ್ಲದೆ ಶೋಭಿಸದು"] ಎಂದು ಹೇಳಿ ಅಲಂಕಾರದ ಪ್ರಾಮುಖ್ಯತೆಯನ್ನು ಭಾಮಹನು ಎತ್ತಿಹಿಡಿದನು, ಭರತನು ಹೇಳಿದ ನಾಲ್ಕು ಅಲಂಕಾರಗಳ ಜೊತೆ ಮೂವತ್ತೇಳು ಅಲಂಕಾರಗಳನ್ನು ವಿವರಿಸಿರುವುದನ್ನು ವಿವೇಚಿಸಲಾಗಿದೆ. ನಂತರ ದಂಡಿಯು "ಕಾವ್ಯಶೋಭಾಕಾರಾನ್ ಧರ್ಮಾನಲಂ ಕಾರನ್ಪ್ರಚಕ್ಷತೆ" ["ಅಲಂಕಾರಗಳು ಕಾವ್ಯಶೋಭಾಲಂಕರವಾದ ಧರ್ಮಗಳು[೮೫]"] ಮುಂತಾದ ಮಾತುಗಳಲ್ಲಿ ಅಲಂಕಾರವನ್ನು ಕಾವ್ಯ ಸೌಂದರ್ಯವುಂಟು ಮಾಡುವ

ಧರ್ಮವೆಂದು ವಿವರಿಸಿ ಗುಣಗಳನ್ನು ಉಪಮಾ ಮುಂತಾದವುಗಳನ್ನು ಒಟ್ಟಾಗಿ ಅಲಂಕಾರಗಳೆಂದೇ ಕರೆದಿದ್ದಾನೆ. ಇನ್ನು ವಾಮನನು ಅಲಂಕಾರವನ್ನು

**ಕಾವ್ಯಶೋಭಾಯಾಃ ಕರ್ತರೋ ಧರ್ಮ ಗುಣಾಃ ।**
**ತದತಿಶಯಹೇತವಸ್ತಲಂಕಾರಾಃ [೮೬]॥**

"ಕಾವ್ಯಶೋಭೆಯನ್ನುಂಟು ಮಾಡುವ ಧರ್ಮಗಳು ಗುಣಗಳು ಅದರ [ಅಂದರೆ ಗುಣಗಳಿಂದ ಉಂಟು ಮಾಡಲ್ಪಟ್ಟ ಕಾವ್ಯಶೋಭೆಯ] ಅತಿಶಯಕ್ಕೆ ಕಾರಣಗಳು ಅಲಂಕಾರಗಳು" ಈ ದೃಷ್ಟಿಯಲ್ಲಿ ಅಲಂಕಾರಗಳು ನೇರವಾಗಿ ಕಾವ್ಯಶೋಭೆಗೆ ಕಾರಣವಲ್ಲ ಗುಣಗಳು ಸೃಷ್ಟಿಸಿದ ಕಾವ್ಯಶೋಭೆಯನ್ನು ಮತ್ತಷ್ಟು ಬೆಳಗುವಂತೆ ಮಾಡುವ ಸಾಧನಗಳು ಮಾತ್ರ ಎಂದು ವಾಮನನು ಅಲಂಕಾರದ ಲಕ್ಷಣವನ್ನು ಕೊಟ್ಟಿದ್ದಾರೆ. ನಂತರ ಉದ್ಭಟನು ತನ್ನ 'ಅಲಂಕಾರ ಸಾರಸಂಗ್ರಹ'ದಲ್ಲಿ ನಲವತ್ತೊಂದು ಅಲಂಕಾರಗಳ ವ್ಯವಸ್ಥಿತವಾದ ವಿವೇಚನೆಯನ್ನು ಮಾಡಿದ್ದಾನೆ. ಕೆಲವು ಅಲಂಕಾರಗಳ ಒಳಬೇಧಗಳ ನಿರೂಪಣೆಯಲ್ಲಿ ಸ್ವಲ್ಪ ಮಟ್ಟಿಗೆ ಬೇರೆಯಾದ ವ್ಯಾಖ್ಯಾನವನ್ನು ಕೊಟ್ಟಿದ್ದಾನೆ. ಉದ್ಭಟನು ಶ್ಲೇಷಾಲಂಕಾರಕ್ಕೆ ವಿಶೇಶ ಸ್ಥಾನವನ್ನು ಕೊಟ್ಟು ಶ್ಲೇಷವಿರುವ ಎಲ್ಲಾ ಸಂದರ್ಭಗಳಲ್ಲಿ ಒಂದಲ್ಲ ಒಂದು ಅಲಂಕಾರವಿದ್ದೇ ಇರುತ್ತದೆ ಎಂಬುದು ಅವನ ಮತವಾಗಿದೆ ಎಂಬುದನ್ನು ಇನ್ನೂ ವಿಷದವಾಗಿ ಇಲ್ಲಿ ವಿವರಿಸಲಾಗಿದೆ. ನಂತರ ಬಂದ ರುದ್ರಟನು ತನ್ನ 'ಕಾವ್ಯಾಲಂಕಾರ'ದ ಹದಿನಾರು ಅಧ್ಯಾಯಗಳಲ್ಲಿ ಹತ್ತು ಅಧ್ಯಾಯಗಳನ್ನು ಅಲಂಕಾರಗಳಿಗೆ ಮೀಸಲಿಟ್ಟಿದ್ದಾನೆ. ಭಾಮಹನು ಎಲ್ಲಾ ಅಲಂಕಾರಗಳಿಗೂ ಅನ್ವಹಿಸಿ ಹೇಳಿರುವ 'ವಕ್ರೋಕ್ತಿ'ಯನ್ನು ರುದ್ರಟನು ಅದನ್ನು ಶಬ್ದಾಲಂಕಾರರಗಳಲ್ಲಿ ಒಂದನಾಗಿ ಮಾಡಿ ಅದನ್ನು ಗೊಡಾರ್ಥ ಪ್ರತೀತಿ ಎಂದು ಕರೆದಿದ್ದಾನೆ. ಅಲಂಕಾರವನ್ನು ವರ್ಗೀಕರಿಸುವ ರೀತಿಯು ಈತನಲ್ಲೇ ಮೊದಲು ಕಾಣಬಹುದಾಗಿದೆ.

ಧ್ವನಿಕಾರ ಆನಂದವರ್ಧನನು ಅಲಂಕಾರಗಳು ರಸಾದಿಗಳಿಗೆ ಅಂಗಭೂತವಾಗಿ ಬರಬೇಕೆಂದು ವಿವೇಚಿಸಿ. "ರಸಭಾವದಿಗಳ ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುವಂತಹ ಅಲಂಕಾರಗಳ ಸಂಯೋಜನೆಯೇ ಎಲ್ಲಾ ಅಲಂಕಾರಗಳಿಗೂ ಅಲಂಕಾರ ತತ್ವವನ್ನು ಸಾಧಿಸಿ ಕೊಡುತ್ತಿದೆ'. 'ಉಪಮಾದಿಗಳು ಯಾವ ತತ್ವದಿಂದ ಅಲಂಕಾರ ಗಳೆನಿಸುತ್ತವೆಯೊ 'ಆ ತತ್ವದಿಂದಲೇ ರಸಾದಿಗಳು ಕೂಡ 'ಅಲಂಕಾರ'ವೆನಿಸಬಹುದು' ಎಂದು ಅಭಿನವಗುಪ್ತನು ಆನಂದವರ್ಧನನ ವ್ಯಾಖ್ಯಾನವನ್ನು ಸ್ಪಷ್ಟಪಡಿಸಿದ್ದಾನೆ. ಉಪಮಾವನ್ನು ಸಾದೃಶ್ಯ, ವಿರೋಧ, ಸಂಬಂಧಮೂಲವೆಂದು ಮೂರು ವಿಧವಾಗಿ

ಹೇಳಿರುವುದನ್ನ ಭೋಜನು ಬಾಹ್ಯ ಅಭ್ಯಂತರ ಮತ್ತು ಬಾಹ್ಯಾಭ್ಯಂತರ ಎಂದು ಹೇಳಿ ವಿವರಣೆಯನ್ನು ನೀಡಿದ್ದಾನೆ. ಮಮ್ಮಟನು ವಕ್ರೋಕ್ತಿ, ಅನುಪ್ರಾಸ ಇತ್ಯಾದಿ ಏಳು ಶಬ್ದಲಂಕಾರವನ್ನು, ಅರವತ್ತ ಮೂರು ಅರ್ಥಾಲಂಕಾರಗಳನ್ನು ಕಾವ್ಯಪ್ರಕಾಶದಲ್ಲಿ ಹೇಳಿದ್ದಾನೆ. ಕುಂತಕನು ಅಲಂಕಾರಗಳನ್ನು ಅಭಿಧಾಪ್ರಕಾರಗಳೆಂದು ಅಲಂಕಾರಗಳನ್ನು ಕವಿ ವ್ಯಾಪಾರ ಪಕ್ರತೆಯಿಂದ ಮೂಡಿಬಂದ ಉಕ್ತಿವೈಚಿತ್ರ್ಯ, ಅಥವಾ ವಕ್ರೋಕ್ತಿ ಎಂದಿದ್ದಾನೆ. ಕುಂತಕನು ಆನಂದವರ್ಧನನು ಹೇಳುವಂತೆ ರಸಕ್ಷಿಪ್ತವಾಗಿ ಧ್ವನಿ ಸಮನ್ವಿತವಾಗಿಯೇ ಅಲಂಕಾರಗಳು ಬರಬೇಕೆಂದು ಹೇಳದೆ ಅಲಂಕಾರಗಳು ಕವಿವ್ಯಾಪಾರವಕ್ರತೆಯಿಂದ ಮಾಡಿದ್ದಾಗಿರ ಬೇಕೆಂದಿದ್ದಾನೆ. ಈ ವಿಷಯಗಳನ್ನೆಲ್ಲಾ ಕೂಲಂಕುಷವಾಗಿ ವಿಮರ್ಶಿಸಿ ವಿವೇಚಿಸಲಾಗಿದೆ.

ವಿಶ್ವನಾಥನು ಹೇಳಿರುವ ಆರುಶಬ್ದಾಲಂಕಾರಗಳಾದ ಅನುಪ್ರಾಸ, ಇದರಲ್ಲಿ ಛೇಕಾನುಪ್ರಾಸ, ವೃತ್ತ್ಯಾನುಪ್ರಾಸ, ಶ್ರುತ್ಯಾನುಪ್ರಾನ, ಅಂತ್ಯಾನುಪ್ರಾಸವೆಂಬ ಐದುಪ್ರಕಾರಗಳನ್ನು ಉದಾಹರಣೆಯ ಸಹಿತವಾಗಿ ವಿವರಿಸಲಾಗಿದೆ. ಯಮಕಅಲಂಕಾರ, ವಕ್ರೋಕ್ತಿ ಅಲಂಕಾರದಲ್ಲಿ ಶ್ಲೇಷ, ಕಾಕುವಕ್ರೋಕ್ತಿ ಎಂಬ ಎರಡುಭೇದಗಳನ್ನು ಅದರ ಹಿನ್ನೆಲೆಯನ್ನು ಕುರಿತು ವಿವರಿಸಲಾಗಿದೆ. ಭಾಷಾಸಮಯ, ಶ್ಲೇಷಾಲಂಕಾರದಲ್ಲಿ ಬರುವ ವರ್ಣ, ಪ್ರತ್ಯಯ ಲಿಂಗ, ಪ್ರಕೃತಿ ಒಟ್ಟು ಹದಿನಾರುಬಗೆಗಳನ್ನು, ಚಿತ್ರಅಲಂಕಾರ, ಪ್ರಹೇಳಿಕೆ, ಇವಿಷ್ಟನ್ನೂ ಕುರಿತು ವಿವೇಚಿಸಿ, ವಿಶ್ವನಾಥ ಹೇಳಿರುವ ಸುಮಾರು ಎಪ್ಪತ್ತಮೂರು ಅಲಂಕಾರಗಳಲ್ಲಿ ಪ್ರಮುಖವಾದ ಉಪಮಾ ಅಲಂಕಾರವನ್ನು ಅದರಲ್ಲಿ ಬರುವ ಇಪ್ಪತ್ತೇಳು ಭೇದಗಳಲ್ಲಿ ಪ್ರಮುಖ ಭೇದವಾದ ಪೂರ್ಣೋಪಮೇ, ಲುಪ್ತೋಪಮೆ ಮತ್ತು ಇದರಲ್ಲಿ ಬರುವ ಶ್ರೌತೀ, ಆರ್ಥೀ ಎಂಬ ಮುಖ್ಯ ಭೇದಗಳನ್ನ ವಿವೇಚಿಸಲಾಗಿದೆ. ಉತ್ಪ್ರೇಕ್ಷಾಲಂಕಾರ, ಇದರ ಭೇದಗಳಾದ ವಾಚ್ಯ ಮತ್ತು ವ್ಯಂಗ್ಯೋತ್ಪ್ರೇಕ್ಷೆ, ದೀಪಕ, ಅಲಂಕಾರ, ವ್ಯತಿರೇಕಾಲಂಕಾರ, ಸ್ವಭಾವೋಕ್ತಿ, ಅದರ ಹಿನ್ನೆಲೆ, ಮೀಲಿತ, ಸಮಾನಅಲಂಕಾರಗಳನ್ನ ಅದರ ಹಿನೆಯನ್ನು ಕುರಿತು ಪ್ರಮುಖವಾಗಿ ವಿವೇಚಿಸಲಾಗಿದೆ. ಅರ್ಥಾಲಂಕಾರಗಳ ಸಂಖ್ಯೆಯು ಅಪರಿಮಿತವಾದ್ದರಿಂದ ಪ್ರಮುಖ ಅಲಂಕಾರಗಳನ್ನಷ್ಟೇ ವಿಮರ್ಶೆಗೆ ಒಳಪಡಿಸಲಾಗಿದೆ. ಇನ್ನು ರಸಭಾವಗಳಿಗೆ ಸಂಬಂಧಿಸಿದಂತೆ ರಸವದ್‌ಅಲಂಕಾರ, ಪ್ರೇಯಸ್ಸು, ಊರ್ಜಸ್ವಿ, ಸಮಾಹಿತ, ಭಾವಸಂಧ್ಯ, ಭಾವೋಧಯ, ಭಾವಶಬಲ ಅಲಂಕಾರಗಳು ಈ ರಸವದ್ ಅಲಂಕಾರಗಳನ್ನು ಕುರಿತು ಪ್ರಾಚೀನ ಅಲಂಕಾರಿಕರು ಈ ಅಲಂಕಾರವನ್ನು "ಶಬ್ದವನ್ನು ಅರ್ಥವನ್ನು ಅಲಂಕಾರಿಸುವಾಗ ರಸಭಾವಾದಿಗಳು ಪೂಷಕವಾಗುತ್ತವೆ. ಆದ್ದರಿಂದ ಇವು ಶಬ್ದಗಳಿಗೆ ವೈಚಿತ್ರ್ಯಗಳೆ ಹೊರತು ಅಲಂಕಾರಗಳೆನಿಸಲಾರವು". ಆಸ್ವಾದರೂಪವಾದ ರಸವು ಬೇರೊಂದು ರಸಕ್ಕೆ ಪೂಷಕವಾಗಿಲ್ಲದ್ದರಿಂದ ಅದು ಅಲಂಕಾರವೆನಿಸಲಾರದು. ಆದರೆ

ರಸಾದಿಗಳು ಬೇರೊಂದು ರಸಕ್ಕೆ ಪೋಷಕವಾದ್ದರಿಂದ ಅವು ಅಲಂಕಾರವೆನಿಸುತ್ತದೆ ಎಂಬುದು ಪ್ರಾಚೀನರ ಸಮ್ಮತಿಯಾಗಿದೆ ಇತ್ಯಾದಿ ವಿಷಯಗಳನ್ನು ಈ ಪರಿಚ್ಛೇದದಲ್ಲಿ ರೀತಿ ಅಲಂಕಾರಗಳಿಗೆ ಸಂಬಂಧಿಸಿದಂತೆ ಭರತ, ಭಾಮಹ, ದಂಡಿ, ವಾಮನ, ಮುಂತಾದ ಪ್ರಖ್ಯಾತ ಅಲಂಕಾರಿಕರ ಹಿನ್ನೆಲೆಯೊಂದಿಗೆ ವಿಶ್ವನಾಥನು ಚಿಂತಿಸಿರುವ ರೀತಿ, ಅಲಂಕಾರಗಳನ್ನು ಕೂಲಂಕೂಷವಾಗಿ ವಿವೇಚಿಸಿ ವಿಮರ್ಶಿಸಲಾಗಿದೆ.

ವಿಶ್ವನಾಥನ ಸಾಹಿತ್ಯ ದರ್ಪಣವು ಅಲಂಕಾರ ಗ್ರಂಥಗಳಲ್ಲಿಯೇ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ ಎಂದೇಹೇಳಬೇಕು. ಕಾವ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಮಸ್ತ ತತ್ವಗಳ ವಿವೇಚನೆಯನ್ನು ಒಳಗೊಂಡಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ವಿಶ್ವನಾಥನು ರಸಕ್ಕೆ ಕಾವ್ಯಶಾಸ್ತ್ರದಲ್ಲಿ ಆತ್ಮಸ್ಥಾನವನ್ನು ಕೊಟ್ಟು ನಿರೂಪಿಸಿ ರಸದ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದಿದ್ದಾನೆ. ವಿಶ್ವನಾಥನ ಇನ್ನೊಂದು ಮುಖ್ಯ ಕೊಡುಗೆಯೆಂದರೆ, ನಾಟಕ ಲಕ್ಷಣವನ್ನು ತನ್ನ ಗ್ರಂಥದಲ್ಲಿ ವಿವೇಚಿಸಿರುವುದು. ನಾಟಕದ ಪ್ರತಿಪಾದನೆಯ ವಿಷಯದಲ್ಲಿ ಭರತನ 'ನಾಟ್ಯಶಾಸ್ತ್ರ' ಧನಂಜಯನ 'ದಶರೂಪಕ' ಶಾರದತನಯನ 'ಭಾವಪ್ರಕಾಶ' ವಿದ್ಯಾನಾಥನ 'ಪ್ರತಾಪರುದ್ರೀಯ' ಗ್ರಂಥಗಳಂತೆ ವಿಶ್ವನಾಥನ 'ಸಾಹಿತ್ಯದರ್ಪಣವು ಸಹ ನಾಟಕಲಕ್ಷಣ ಪ್ರತಿಪಾದನೆಯಲ್ಲಿ ಪ್ರಮುಖ ಗ್ರಂಥವಾಗಿದೆ. ಭರತನ ನಾಟ್ಯಶಾಸ್ತ್ರ, ಧನಂಜಯನ ದಶರೂಪಕ ಇವೆರಡರ ಪ್ರಭಾವವೂ ಸಾಹಿತ್ಯದರ್ಪಣದಲ್ಲಿ ಅಡಕವಾಗಿದೆ. ಮಮ್ಮಟನಂತಹ ಪ್ರಖ್ಯಾತ ಅಲಂಕಾರಿಕನು ನಾಟಕವಿಚಾರವನ್ನು ಕಾವ್ಯಪ್ರಕಾಶದಲ್ಲಿ ಮಂಡಿಸದೇ ಇರುವುದು ಗಮನಿಸಬೇಕಾದ ಅಂಶವಾಗಿದೆ. ಕಾವ್ಯಶಾಸ್ತ್ರಾಭ್ಯಾಸಿಗಳಿಗೆ ಇದರಲ್ಲಿನ ವಿಷಯ ಸುಲಲಿತವಾಗಿರುವುದರಿಂದ ತುಂಬಾ ಉಪಾದೇಯ ಗ್ರಂಥವಾಗಿದೆ. ಒಟ್ಟಿನಲ್ಲಿ ಸಾಹಿತ್ಯ ದರ್ಪಣವು ಸಮಸ್ತ ಕಾವ್ಯತತ್ವವನ್ನೊಳಗೊಂಡ ಒಂದು ಪರಿಪೂರ್ಣ ಅಲಂಕಾರ ಗ್ರಂಥವಾಗಿದೆ. ಇಂತ ವಿಶಿಷ್ಟ ಸಾಹಿತ್ಯ ಕೃತಿಯಾದ ವಿಶ್ವನಾಥನ 'ಸಾಹಿತ್ಯದರ್ಪಣ'ವನ್ನು ಐತಿಹಾಸಿಕ ತೌಲಿನಿಕ ದೃಷ್ಟಿಗಳಿಂದ ಇಡೀ ಗ್ರಂಥವನ್ನು ವಿಮರ್ಶಾತ್ಮಕ ಅಧ್ಯಯನಕ್ಕೆ ಒಳಪಡಿಸಿರುವುದು ನನಗೆ ಹೆಮ್ಮೆಯ ವಿಚಾರವಾಗಿದೆ. ವಿಶ್ವನಾಥನು ಅಲಂಕಾರ, ಗುಣ, ರೀತಿ, ಧ್ವನಿ, ಕಾವ್ಯ ದೋಷಗಳ ವಿವೇಚನೆಯಲ್ಲಿ ಅಂತಹ ಸೋಪಜತೆಯನ್ನು ತೋರಿಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ, ರಸಪ್ರಸ್ಥಾನಕ್ಕೆ ಇವನ ಕೊಡುಗೆ ಅಪಾರ. ಇವನ ನಾಟಕ ಲಕ್ಷಣಗಳ ವಿವೇಚನೆ ತುಂಬ ಗಮನಾರ್ಹವಾಗಿದೆ.

* * *

## ಅಡಿ ಟಿಪ್ಪಣಿಗಳು

೧. ಗೋವಿಂದ ಠಾಕೂರ, ಕಾವ್ಯ ಪ್ರದೀಪ
೨. ಎಂ. ಎಸ್. ಶ್ರೀನಿವಾಸ್ ಅಯ್ಯಂಗಾರ್, 'ಸಂಸ್ಕೃತಕವಿಚರಿತ್ರೆ'
೩. ಕಾವ್ಯಾಲಂಕಾರ, ೧. ೨
೪. ಯದೇವ ರೋಚತೆ ಮಹ್ಯಂ ತದೇವ ಕುರುತೇ ಪ್ರಿಯಾ ।
ಇತಿವೇತ್ತಿ ನ ಜಾನಾತಿ ತತ್ ಪ್ರಿಯಂ ಯತ್ ಕರೋತಿ ಸಾ ॥
[ಭೋಜ, ಸರಸ್ವತಿ ಕಂಠಾಭರಣ, ಪು ೯೮]
೫. ಕಾವ್ಯಾಲಂಕಾರ ೧, ೧೬
೬. ಕಾವ್ಯದರ್ಶ ೧, ೧೦
೭. ರುದ್ರಟ, ಕಾವ್ಯಲಂಕಾರ, ೩, ೧,
೮. ಕಾವ್ಯಪ್ರಕಾಶ, ೧, ೧ [ಪುಟ ೧೩]
೯. ಭಟ್ಟನಾಯಕ 'ಹೃದಯದರ್ಪಣ'
೧೦. ಕಾವ್ಯಪ್ರಕಾಶ, ೧, ೩
೧೧. ಕಾವ್ಯಾಲಂಕಾರಸೂತ್ರವೃತ್ತಿ, ೧. ೧. ೧ ವೃತ್ತಿ
೧೨. ವಕ್ರೋಕ್ತಿಜೀವಿತ ೧, ೭,
೧೩. ಸಾಹಿತ್ಯದರ್ಪಣ, ೨. ೧,
೧೪. ಸಾಹಿತ್ಯದರ್ಪಣ ೩.
೧೫. ಅಭಿದಾಪುಚ್ಛಭೂತೈವ ಲಕ್ಷಣಾ [ಧ್ವನ್ಯಾಲೋಚನ, ಪು ೫೫]
೧೬. ಧ್ವನ್ಯಾಲೂಕ, ಲೋಚನ, ಪು ೫೭,
೧೭. ಡಾ. ಕೆ. ಕೃಷ್ಣಮೂರ್ತಿ, 'ರಸೋಲ್ಲಾಸ'
೧೮. 'ರಸೋ ವೈಸಃ ರಸಂ ಹ್ಯೇವಾಯಂ ಲಬ್ಧ್ವಾನಂದ ಭವತಿ'
[ಛಾಂದೋಗ್ಯೋಪನಿಷತ್ತ, ೧, ೧, ೨, ೩]
೧೯. ನಾಟ್ಯಶಾಸ್ತ್ರ, ೬, ೩೨ರ ಅನಂತರದ ಗದ್ಯ
೨೦. 'ಯುಕ್ತಂ ಲೋಕಸ್ವಭಾವೇನ ರಸೈಶ್ಚ ಸಕಲೈಃ ಪೃಥಕ್' [ಕಾವ್ಯಾಲಂಕಾರ, ೧, ೨೧]
೨೧. ಸಾಹಿತ್ಯದರ್ಪಣ [೧, ೩]
೨೨. ದಿ. ಕಾವ್ಯಪ್ರಕಾಶ, ೪, ೨೭, ೨೮,
೨೩. ಸಾಹಿತ್ಯದರ್ಪಣ, ೩,೧
೨೪. ಆಪ್ಟೆಯವರು ನಿಘಂಟಿನಲ್ಲಿ ೩೧ ಅರ್ಥಗಳನ್ನು ಸಂಗ್ರಹಿಸಿದ್ದಾರೆ.

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂತಥಾ ।
ಜುಗುಪ್ಸಾ ವಿಸ್ಮಯ ಶ್ಚೇತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ ॥ [ನಾಟ್ಯಶಾಸ್ತ್ರ ೬, ೧೭]

೨೫. ಭಾವದ ಕಾರ್ಯಕ್ಕೆ 'ಅನುಭಾವ'ವೆಂದು ಹೆಸರು, ರಸಾನುಭವ ಮಾಡಿದಾಗ ರಸಿಕನಲ್ಲಿ ಉಂಟಾಗುವ ರೋಮಾಂಚ, ಕಣ್ಣೀರು, ಮುಖವಿಕಾಸ, ಇತ್ಯಾದಿಗಳನ್ನು ಅನುಭಾವಗಳೆಂದು ಕರೆಯಲಾಗಿದೆ. ಉದಾಹರಣೆಗೆ ಭಾವದೆ ಪುಟ್ಟಿದ ರಸಮಂ ಭಾವುಕರದನವೆಂದು ಸವಿವುದೇ ಅನುಭಾವಂ [ರಸರತ್ನಾಕರ, ೧, ೪] ಇದನ್ನು ಸಂಸ್ಕೃತ ಲಕ್ಷಣಕಾರರು ಖಂಡಿಸಿದ್ದಾರೆ. ಅನುಭಾವಶ್ಚನ ರಸಜನ್ಯಾ ಆತ್ರ ವಿವಕ್ಷಿತಾಃ ತೇಷಾಂ ರಸಕಾರಣತ್ವೇನ ಗಣನಾನರ್ಹತ್ವಾತ್, ಅಪಿ ತು ಭಾವನಾಮೇವ ಎಂದು ಲೊಲ್ಲಟನು ಖಂಡಿಸಿದ್ದಾನೆ. [ಅಭಿನವಭಾರತಿ ೧, ಪುಟ ೨೮೨]

೨೬. ಕಾರಾಣಾನ್ಯಥ ಕಾರ್ಯಾಣಿ ಸಹಕಾರಿಣಿ ಯಾನಿಚ ।
ರತ್ಯಾದೇಃ ಸ್ಥಾಯಿನೋ ಲೋಕೇ ತಾನಿ ಚೇನ್ನಾಟ್ಯಕಾವ್ಯಯೋಃ ॥
ವಿಭಾವಾ ಅನುಭಾವಶ್ಚ ಕಥ್ಯಂತೇ ವ್ಯಭೀಚಾರಿಣಃ ।
ವ್ಯಕ್ತಃ ಸ ತೈರ್ವಿಭಾವಾರ್ದ್ಯೈಃ ಸ್ಥಾಯಿ ಭಾವೋ ರಸಃ ಸ್ಮೃತಃ ॥
[ಕಾವ್ಯಪ್ರಕಾಶ, ೪, ೨೭, ೮]

೨೭. ಸ್ಥಂಭಃ ಸ್ವೇದೋ?ಥ ರೋಮಾಂಚಃ ಸ್ವರಭೇದೋऽಥ ವೇಪಥುಃ ।
ವೈವರ್ಣ್ಯಮಶ್ರುಃಪ್ರಲಯ ಇತ್ಯಾಷ್ಟೌ ಸಾತ್ತ್ವಿಕಾ ಮತಾಃ ॥
[ನಾಟ್ಯಶಾಸ್ತ್ರ ೬, ೨೨]

೨೮. ಶಾಮಮಪಿ ಕೇಚಿತ್ ಪ್ರಾಹುಃ ಪುಷ್ಠಿನ್ಯಾಟ್ಯೇಷು ನೈತಸ್ಯ [ದಶರೂಪಕ ೪, ೩೫]

೨೯. ಮಮ್ಮಟ, ಕಾವ್ಯಪ್ರಕಾಶ, ೪, ೩೫ [ಅಮರುಕವಿಯಿಂದ]

೩೦. ನಹಿ ರಸಾದೃತೇ ಕಶ್ಚಿದರ್ಥಃ ಪ್ರವರ್ತತೇ [ನಾಟ್ಯಶಾಸ್ತ್ರ, ೬ ಪುಟ ೬೨]

೩೧. ವಾಕ್ಯಂ ರಸಾತ್ಮಕಂ ಕಾವ್ಯಮ್ [ಸಾಹಿತ್ಯದರ್ಪಣ, ಪು. ೬೩]

೩೨. ಸಾಹಿತ್ಯದರ್ಪಣ, [೪, ೧]

೩೩. ಪ್ರತಿಯಮಾನಂ ಪುನರನ್ಯದೇವ ವಸ್ತ್ವಸ್ತಿ ವಾಣೀಷು ಮಹಾಕವಿ ನಾಮ್ ।
ಯತ್ತತ್ಪ್ರಸಿದ್ಧಾವಯವಾತಿರಿಕ್ತಂ ವಿಭಾತಿ ಲಾವಣ್ಯಮಿವಾಂಗನಾಸು ॥
[ಧ್ವನ್ಯಾಲೋಕ, ೧,೪, ಪು ೪೮, ೪೯]

೩೪. ಕಾವ್ಯಸ್ಯಾತ್ಮಾ ಧ್ವನಿರೀತಿ ಬುಧೈರ್ಯಃ ಸಮಾಮ್ನಾತ ಪೂರ್ವಃ ।
ತೇನ ಬ್ರೂಮಃ ಸಹೃದಯಮನಃ ಪ್ರೀತಯೇ ತತ್ಸ್ವರೂಪಮ್ ॥
[ಧ್ವನ್ಯಾಲೋಕ, ೧, ೧, ಪು ೯]

೩೫. ಕಾವ್ಯಪ್ರಕಾಶ, [೪, ೨೪, ಪು ೮೨, ೮೩]

೩೬. ಕಾವ್ಯಪ್ರಕಾಶ, [೪, ೨೪, ಪು ೮೩]

೩೭. ಉದ್ದೃತ್ಯೋದ್ಧೃತ್ಯ ಸಾರಂ ಯಮಖಿಲನಿಗಮಾನ್ನಾಟ್ಯವೇದಂ ವಿರಂಚಿ
ಶ್ಚಕ್ರೇ ಯಸ್ಯ ಪ್ರಯೋಗಂ ಮುನಿರಪಿ ಭರತ ಸ್ತಾಂಡವಂ ನೀಲಕಂಠ
ಶರ್ವಾಣೀ ಲಾಸ್ಯಮಸ್ಯ ಪ್ರತಿಪದಮಪರಂ ಲಕ್ಷ್ಮಕಃ ಕತುಮಿಷ್ಟೇ

ನಾಟ್ಯಾನಾಂ ಕಿಂತು ಕಿಂಚಿತ್ಪ್ರಗುಣ ರಚನಯಾ ಲಕ್ಷಣಂ ಸಂಕ್ಷಿಪಾಮಿ
ಆನಂದನಿಸ್ಯಂದಿಷು ರೂಪಕೇಷು ವ್ಯುತ್ಪತ್ತಿ ಮಾತ್ರಂ ಫಲಮಲ್ಪಿ ಬುದ್ಧಿಃ
ಯೋಽಪೀತಿ ಹಾಸಾದಿವದಾಹ ಸಾಧುಸ್ತಸ್ಯೈ ನಮಃ ಸ್ವಾದುಪರಾಖಾಯಾ
[ಧನಂಜಯ, ರೂಪಕ, ೧, ೪, ೬,]

೪೦. ಯಮ – ಯಮ [೧೦, ೧೦]

ಉರ್ವಶೀ – ಪುರೂರವ [೧೦, ೯೫, ಋಗ್ವೇದ]

೪೧. 'ಅವಸ್ಥಾನುಕೃತಿರ್ನಾಟ್ಯಮ್' [ದಶರೂಪಕ, ೧, ಪು ೨]

೪೨. ನಾನಾಭಾವೋಪಸಂಪನ್ನಂ ನಾನಾವಸ್ಥಾಂತರಾತ್ಮಕಮ್ ।
ಲೋಕವೃತ್ತಾನುಕರಣಮ್ ನಾಟ್ಯಮ್ ॥ [ನಾಟ್ಯಶಾಸ್ತ್ರ, ೧, ೧೦೮, ೧೦೯]

೪೩. ಅವಸ್ಥಾನುಕೃತಿರ್ನಾಟ್ಯಂ ರೂಪಂ ದೃಶ್ಯತಯೊಚ್ಯತೇ ।
ರೂಪಕಂ ತತ್ಸಮಾರೋಪಾದ್ ದಶಧೈವ ರಸಾಶ್ರಯಮ್ ॥
ಕಾವ್ಯೋಪನಿಬದ್ಧಧೀರೋದಾತ್ತಾ ವ್ಯವಸ್ಥಾನುಕಾರಶ್ಚತುರ್ವಿದಾಭಿನಯೇನ ತಾದಾತ್ಮ್ಯ ಪತ್ತಿರ್ನ್ಯಾಟ್ಯಮ್ । ತದೇವ ನಾಟ್ಯಂ ದೃಶ್ಯ ಮಾನತಯಾ ರೂಪಮಿತ್ಯಚ್ಯತೇ, ನೀಲಾಧಿ ರೂಪವತ್ । ನಟೇ ರಾಮಾದ್ಯ ವಸ್ಥಾರೋಪೇಣ ವರ್ತಮಾನತ್ವಾ ದ್ರೋಪಕಮ್ ॥ [ದಶರೂಪಕ, ೧, ೭]

೪೪. ನಾಟಕಂ ಸಪುರಕರಣಂ ಭಾಣಃ ಪ್ರಹಸನಂ ಡಿಮಃ ।
ವ್ಯಾಯೋಗ ಸಮಕಾರೌ ವೀಥ್ಯಂಕೇಹಾಮೃಗಾ ಇತಿ ॥
[ದಶರೂಪಕ, ೧.೮]

೪೫. ನಟೀದೂಷಕೋ ವಾಪಿ ಪಾರಿಪಾರ್ಶ್ವಿಕ ಏವವಾಸೂ ।
ಆಮುಖಂ ತತ್ತು ವಿಜ್ಞೇಯಂ ನಾಮ್ನಾ ಪ್ರಸ್ತಾವನಾಪಿ ಸಾ ॥
[ಸಾಹಿತ್ಯದರ್ಪಣ, ೬, ೨೩]

೪೬. ಮುಖಂ ಪ್ರತಿಮುಖಂ ಗರ್ಭೋ ವಿಮರ್ಷ ಉಪಸಂಹೃತಿಃ ।
ಇತಿ ಪಂಚಾನ್ಯ ಭೇಧಾಃ ಸ್ಯುಃಕ್ರಮಾಲ್ಲ ಕ್ಷಣ ಮುಚ್ಯತೇ॥
[ಸಾಹಿತ್ಯದರ್ಪಣ ೬, ೭೦]

೪೭. ಶೃಂಗಾರೇ ಕೌಶಿಕೀ ವೀರೇ ಸಾತ್ತ್ವತ್ಯಾರಭಟೀ ಪುನಃ ।
ರಸೇರೌದ್ರೇಚ ಬೀಭತ್ಸೇ ವೃತ್ತಿಃ ಸರ್ವತ್ರ ಭಾರತೀ ॥
ಚತಸ್ರೋ ವೃತ್ತಯೋ ಹ್ಯೇತಾಃ ಸರ್ವನಾಟ್ಯಸ್ಯ ಮಾತೃಕಾಃ ।
ಸ್ಯೂರ್ನಾಯಿಕಾದಿವ್ಯಾವಾರವಿಶೇಷಾ ನಾಟಕಾದಿಷು ॥
[ಸಾಹಿತ್ಯದರ್ಪಣ, ೬, ೧೫೫]

೪೮. ಭೂಷಣಾಕ್ಷರ ಸಂಘಾತೌ ಶೋಭೋದಾಹರಣಂ ತಥಾ ।
ಹೇತು ಸಂಶಯದೃಷ್ಟಾಂತಾಂಸ್ತು ಲ್ಯತರ್ಕಃ ಪದೋಚ್ಚಯಃ ॥
ನಿದರ್ಶನಾಭಿಪ್ರಾಯೌ ಚ ಜ್ಞಪ್ತಿ ರ್ವಿಚಾರ ಏವ ಚ ।
ದಿಷ್ಟೋಪದಿಷ್ಟೇ ಚ ಗುಣಾತಿಪಾತಾತಿಶಯೌ ತಥಾ ॥
ದಾಕ್ಷಿಣ್ಯಾನುನ ಯೌಮಾಲಾರ್ಥಾಪತಿರ್ಗರ್ಹಣಂ ತಥಾ ।
ಪೃಚ್ಛಾ ಪ್ರಸಿದ್ಧಿಃ ಸಾರೋಪ್ಯಂ ಸಂಕ್ಷೇಪೋ ಗುಣಕೀರ್ತನಮ್ ॥

ಲೇಶೋಮನೋರಥೋऽನುಕ್ತ ಸಿದ್ಧಃ ಪ್ರಿಯವಚಸ್ತಥಾ ।
[ಸಾಹಿತ್ಯದರ್ಪಣ ೬, ೧೭೬]
ಪುರುಷಾಣಾಮನೀಚಾನಾಂ ಸಂಸ್ಕೃತಂ ಸ್ಯಾತ್ ಕೃತಾತ್ಮನಾಮ್ ।
ವೈದಗ್ಧ್ಯಾರ್ಥಂ ಪ್ರದಾತವ್ಯಂ ಸಂಸ್ಕೃತಂ ಜಾಂತರಾಂತರಾ ॥
[ಸಾಹಿತ್ಯದರ್ಪಣ, ೬, ೧೭೪]

೫೦. ನಾಟಕಂ ಸಪ್ರಕರಣಂ ಭಾಣಃ ಪ್ರಹಸನಂ ಡಿಮಃ ।
ವ್ಯಾಯೋಗಸಮವಕಾರೌ ವೀಥ್ಯಂಕೇಹಾಮೃಗಾ ಇತಿ ॥
[ದಶರೂಪಕ, ೧, ೮]

೫೧. ಛಂದೋ ಬದ್ಧ ಪದಂ ಪದ್ಯಂ ತೇನ ಮುಕ್ತೇನ ಮುಕ್ತಕಮ್ ।
ದ್ವಾಭ್ಯಾಂ ತು ಯುಗ್ಮಕಂ ಸಾಂದಾನಿತಕಂ ತ್ರಿಭಿರಿಷ್ಯತೇ ॥
ಕಲಾಪಕಂ ಮತಂ ಚತುರ್ಭಿಶ್ಚ ಪಂಚಭಿಃ ಕುಲಕಂ ಮತಮ್ ।
[ಸಾಹಿತ್ಯದರ್ಪಣ ೬,೩೧೪,೩೧೫]

೫೨. ಸರ್ಗಬಂದೋ ಮಹಾಕಾವ್ಯಂ ತತ್ರೈಕೊ ನಾಯಕಃ ಸುರಃ ।
ಸದ್ವಂಶಃ ಕ್ಷತ್ರಿಯೋ ವಾಪಿ ಧೀರೋದಾತ್ತ ಗುಣಾನ್ವಿತಃ ॥
ಕವೇರ್ವೃತ್ತಸ್ಯ ವಾ ನಾಮ್ನಾ ನಾಯಕಸ್ಯೇತರಸ್ಯ ವಾ ।
ನಾಮಸ್ಯ ಸರ್ಗೋऽಪಾದೇಯಕಥಯಾ ಸರ್ಗನಾಮ ತು ॥ [ಸಾಹಿತ್ಯದರ್ಪಣ ೬, ೩೧೫, ೩೨೫]

೫೩. ತದಲ್ಲಲ್ಪಪಿ ನೋಪೇಕ್ಷ್ಯಂ ಕಾವ್ಯೇ ದುಷ್ಟಂ ಕಥಂಚನ ।
ಸ್ಯಾದ್ವಪುಃ ಸುಂದರ ಮಪಿ ಶ್ವಿತ್ರೇಣೈಕೇನ ದುರ್ಭಗಂ ॥
[ಕಾವ್ಯದರ್ಶ , ೧, ೭]

೫೪. ನಾಟ್ಯಶಾಸ್ತ್ರ, [೧೫, ೯೫]

೫೫. ಕಾವ್ಯಾಲಂಕಾರಸೂತ್ರ, [೨, ೧, ೧, ೫, ೮]

೫೬. ಕಾವ್ಯಾಲಂಕಾರಸೂತ್ರ, [೨, ೧, ೧೩, ೪]

೫೭ ಅಪುಷ್ಟದುಷ್ಕ್ರಮಗ್ರಾಮ್ಯವ್ಯಾಹತಾಶ್ಲೀಲಕಷ್ಟತಾಃ ।
ಅನವೀಕೃತನಿರ್ಹೇತು ಪ್ರಕಾಶಿತವಿರುದ್ಧತಾ ॥
ಸಂದಿಗ್ಧ ಪುನರುಕ್ತತ್ವೇಖ್ಯಾತಿ ವಿದ್ಯಾವಿರುದ್ಧತೇ ।
ಸಾಕಾಂಕ್ಷತಾ ಸಹಚರಭಿನ್ನತಾऽಸ್ಥಾನಯುಕ್ತ ತಾ ॥
ಅವಿಶೇಷೇ ವಿಶೇಷಶ್ಚಾನಿಯಮೇ ನಿಯಮಸ್ತಥಾ ॥
ಕಯೋರ್ವಿಪರ್ಯಯೋ ವಿಧ್ಯನುವಾದಾಯುಕತೇ ತಥಾ ॥
[ಸಾಹಿತ್ಯ ದರ್ಪಣ ೭. ೩೩]

೫೮. ರಸಸ್ಯೋಕ್ತಿಃ ಸ್ವಶಬ್ದೇನ ಸ್ಥಾಯಿಸಂಚಾರಿಣೋರಪಿ
ಪರಿಪಂಥಿ ರಸಾಂಗಸ್ಯ ವಿಭಾವಾದೇಃ ಪರಿಗ್ರಹಃ
ಆಕ್ಷೇಪಃ ಕಲ್ಪಿತಃ ಕೃಚ್ಛ್ರಾದನು ಭಾವವಿಭಾವಯೋ

ಅಕಾಂಡೇ ಪ್ರಥನಚ್ಛೇದೌ ತಥಾ ದೀಪ್ತಿಃ ಪುನಃ ಪುನಃ
ಅಂಗಿನೋ?ನನು ಸಂಧಾನಂ ಅನಂಗಸ್ಯ ಚ ಕೀರ್ತನಂ
ಅತಿವಿಸ್ತೃತಿರಂಗಸ್ಯ ಪ್ರಕೃತೀನಾಂ ವಿಪರ್ಯಯಃ
ಅಥಾನೌಚಿತ್ಯಮನ್ಯಚ್ಚ ದೋಷಾ ರಸಗತಾ ಮತಾಃ

[ಸಾಹಿತ್ಯದರ್ಪಣ, ೭, ೪೭]

೫೯. ಕಾವ್ಯಸೌಂದರ್ಯಾಕ್ಷೇಪಹೇತವಃ ತ್ಯಾಗಯ ದೋಷಾ ವಿಜ್ಞಾತವ್ಯಾಃ

[ಕಾವ್ಯಲಂಕಾರಸೂತ್ರ, ೨. ೧ ಪು ೧೨]

೬೦. ನಿರ್ದೋಷಂ ಗುಣವತ್ಕಾವ್ಯಂ ಅಲಂಕಾರ್ಯೈರಲಂ ಕೃತಮ್ ।
ರಸಾನ್ವಿತಂ ಕವಿಃ ಕುರ್ವನ್ ಕೀರ್ತಿಂ ಪ್ರೀತಿಂ ಚ ವಿಂದತಿ ॥

[ಸರಸ್ವತೀಕಂಠಾಭರಣ, ೧.೨]

೬೧. ದೋಷಾಸ್ಸರ್ವಾತ್ಮನಾ ತ್ಯಾಜ್ಯಃ ರಸಹಾನಿಕರೋ ಹಿ ಸಃ ।
ಅನ್ಯೋ ಗುಣೋಽಸ್ತುಮಾವಾಸ್ತು ಮಹಾನ್ನಿರ್ದೋಷತಾ ಗುಣಃ ॥

[ಅಲಂಕಾರಶೇಖರ, ೨. ೧]

೬೨. ಶ್ಲೇಷಃ ಪ್ರಸಾದಃ ಸಮತಾ ಸಮಾದಿ ಮಾರ್ಧುರ್ಯಮೋಜಃ
ಪದಸೌಕುಮಾರ್ಯಮ್ ।
ಅರ್ಥಸ್ಯ ಚ ವ್ಯಕ್ತಿರುದಾರತಾ ಚ ಕಾಂತಿಶ್ಚ ಕಾವ್ಯಸ್ಯ ಗುಣಾ ದಶೈತೇ ॥

[ನಾಟ್ಯಶಾಸ್ತ್ರ, ೧೭, ೯೬]

೬೩. ಈಸ್ಸಿತಾರ್ಥಜಾತೇನ ಸಂಬದ್ಧಾನುಪರಂಪರಾಮ್ ।
ಶ್ಲಿಷ್ಟತಾ ಯಾ ಪದನಾಂ ಹಿ ಶ್ಲೇಷಃ ಇತ್ಯಭಿದೇಯತೇ ।

[ನಾಟ್ಯಶಾಸ್ತ್ರ, ೧೬, ೯೩ ೯ಕಾವ್ಯಮಾಲಾಸೀರಿಸ್]

೬೪. ಸುಖಪ್ರಯೋಜ್ಯೈರ್ಯಚ್ಛಬ್ದೈರ್ಯುಕ್ತಂ ಸುಶ್ಲಿಷ್ಟಸಂಧಿಭಿಃ ।
ಸುಕುಮಾರಾರ್ಥ ಸಂಯುಕ್ತಂ ಸೌಕುಮಾರ್ಯಂ ತದುಚ್ಯತೇ ॥

[ನಾಟ್ಯಶಾಸ್ತ್ರ, ೧೭, ೧೦೪]

೬೫. ಕಾವ್ಯಾಲಂಕಾರ, ೨, ೧–೨

೬೬. ಶ್ಲೇಷಃ ಪ್ರಸಾದಃ ಸಮತಾ ಮಾಧುರ್ಯಂ ಸುಕುಮಾರತಾ ।
ಅರ್ಥವ್ಯಕ್ತಿ ರುದಾರತ್ವ ಮೋಜಃ ಕಾಂತಿಸಮಾಧಯಃ ॥

[ಕಾವ್ಯದರ್ಶ, ೧–೪೧]

೬೭. ಶ್ಲಿಷ್ಟಮಸ್ಪೃಷ್ಟಶೈಥಿಲ್ಯಮಲ್ಪಪ್ರಾಣಕ್ಷರೋತ್ತಮ್ ಶಿಥಿಲಮ್ ।

[ಕಾವ್ಯಾದರ್ಶ, ೧–೪೩]

೬೮. ಓಜಃ ಪ್ರಸಾದ ಶ್ಲೇಷ ಸಮತಾಸ ಮಾದಿ ಮಾಧುರ್ಯ
ಸೌಕುಮಾರ್ಯೋಧಾರತಾರ್ಥ ವ್ಯಕ್ತಿ ಕಾಂತಯೋ
ಬಂಧಗುಣಾಃ ತಏವಾರ್ಥಗುಣಾಃ ॥ [ಕಾವ್ಯಾಲಂಕಾರಸೂತ್ರ, ೩, ೧, ೪]

೭೯. ವಿಶಿಷ್ಟ ಪದರಚನಾ ರೀತಿಃ । ವಿಶೇಷೋ ಗುಣಾತ್ಮಾ ॥
[ಕಾವ್ಯಾಲಂಕಾರಸೂತ್ರ ೧, ೨, ೭,]

೭೦. ವಾಮನ, ಕಾವ್ಯಲಂಕಾರಸೂತ್ರವೃತ್ತಿ, [೧, ೨, ೬]

೭೧. ವಾಮನ, ಕಾವ್ಯಲಂಕಾರ ಸೂತ್ರವೃತ್ತಿ, [೧, ೧, ೧, ವೃತ್ತಿ]

೭೨. ದಂಡಿ, ಕಾವ್ಯದರ್ಶ [೧, ೧೦]

೭೩. ಭರತ, ನಾಟ್ಯಶಾಸ್ತ್ರ [೧೬ನೆ ಅಧ್ಯಾಯ]

೭೪. ನಾಟ್ಯಶಾಸ್ತ್ರ, [೨, ಪು ೨೦೫]

೭೫. ಪದ ಸಂಘಟನಾ ರೀತಿರಂಗಸಂಸ್ಥಾವಿಶೇಷವತ್ ।
ಉಪಕೀರ್ತೀ ರಸಾದಿನಾಂ ಸಾಪುನಃ ಸ್ಯಾಚ್ಚತುರ್ವಿದಾ ॥
ರಸಾದೀನಾಂ ಅರ್ಥಾತ್ ಶಬ್ದಾರ್ಥಶರೀರಸ್ಯ ಕಾವ್ಯಸ್ಯ ಆತ್ಮಭೂತಾನಾಮ್ ।
[ಸಾಹಿತ್ಯದರ್ಪಣ, ೧೦, ೧]

೭೬. ಕಾವ್ಯಾಲಂಕಾರ, [೨. ೪, ೬]

೭೭. ಸರಸ್ವತಿಕಂಠಾಭರಣ

೭೮. ಶಬ್ದಾರ್ಥಯೋರಸ್ಥಿರಾ ಯೇ ಧರ್ಮಾಃ ಶೋಭಾತಿಶಾಯಿನಃ ।
ರಸಾದೀನುಪಕುರ್ವತೋಽಲಂಕಾರಾಸ್ತೇ?ಂಗದಾದಿವತ್ ॥
[ಸಾಹಿತ್ಯದರ್ಪಣ ೧೦, ೧]

೭೯. ನಾಟ್ಯ ಶಿಲ್ಪ, ಮೊದಲಾದ ಹಲವು ಲಲಿತ ಕಲೆಗಳ ಜೊತೆಗೆ ಹದಿನೇಳು ಅಲಂಕಾರಗಳು ಉತ್ತಮವಾಗಿದ್ದು, ಅಲಂಕಾರ ಆಧ್ಯಯದ ಕೊನೆಯಲ್ಲಿ ಅನನ್ವಯ ಅಲಂಕಾರವನ್ನು ನಿರೂಪಿಸಿದ್ದಾನೆ. [ಧರ್ಮೋತ್ತರಪುರಾಣ, ಮೂರನೆಖಂಡ]

೮೦. ಯಾಸ್ಕ, ನಿರುಕ್ತ, [೩, ೧೫ – ೩, ೧೮]

೮೧. ಪಾಣಿನಿ, ಅಷ್ಟಾಧ್ಯಾಯಿ [೩, ೧, ೧೦]

೮೨. ಋಗ್ವೇದ, [೧. ೩೧. ೧೫ ೩೪. ೯]

೮೩. 'ಸೂರಿಭಿಃ ಕಥಿತಃ ಇತಿ ವಿಧ್ವದುಪ್ರಜ್ಞೋಯಮುಕ್ತೀಃ, ನತು ಯಥಾಕಥಂಚಿತ್ಪ್ರವೃತ್ತೇತಿ ಪ್ರತಿಪಾದ್ಯತೇ ಪ್ರಥಮೇ ಹಿ ವಿದ್ವಾಂಸೋ ವೈಯಾಕರಣಾಃ, ವ್ಯಾಕರಣ ಮೂಲತ್ವಾತರ್ವವಿದ್ಯಾನಾಮ್, [ಧ್ವನ್ಯಾಲೋಕ, ಪು, ೧೩೨–೧೩೩ ಚೌಖಂಬ ಮುದ್ರಣ]

೮೪. ಕಾವ್ಯಾಲಂಕಾರ, ೧, ೧೩ [ಚೌಖಾಂಬ ಸಂಸ್ಕೃತ ಮಾಲೆ, ೧೯೨೮]

೮೫. ಕಾವ್ಯಾದರ್ಶ, ೨, ೧ [ಭಂಡಾರ್ಕರ್ ಇನ್‌ಸ್ಟಿಟ್ಯೂಟ್ ಮುದ್ರಣ]

೮೬. ಕಾವ್ಯಾಲಂಕಾರಸೂತ್ರವೃತ್ತಿ, ೨, ೧, ೧,